UNIVERSAL
LIBRARY
OU_198449

UNIVERSAL
LIBRARY

# ಅಪೂರ್ವ ಪಶ್ಚಿಮ

ಶಿವರಾಮ ಕಾರಂತ

1953

# ಅಪೂರ್ವ ಪಶ್ಚಿಮ

ಶಿವರಾಮ ಕಾರಂತ

1953

ಬೆಲೆ: ನಾಲ್ಕು ರೂಪಾಯಿ.

ಪ್ರಕಾಶಕರು:
ಹರ್ಷ ಮುದ್ರಣ, ಪ್ರಕಟಣಾಲಯ, ಪುತ್ತೂರು, ದ. ಕ.

ಪೂಜ್ಯರೂ ಕಲಾಪ್ರಿಯರೂ ಆದ

**ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರಿಗೆ.**

# ವಿಷಯ ಸೂಚಿ.


| | | ಪುಟ |
|---|---|---|
| ೧. | ತೇಲುವ ಅಮರಾವತಿ | ೧ |
| ೨. | ಇಂಗ್ಲೆಂಡಿನ ಪ್ರಥಮ ಪರಿಚಯ | ೨೮ |
| ೩. | ಲಂಡನ್ ನಗರ | ೪೨ |
| ೪. | ಬ್ರಿಟಿಷ್ ಉದ್ಯಮ | ೬೬ |
| ೫. | ಕಲೆಗಳ ಪರಿಚಯ | ೭೯ |
| ೬. | ಬ್ರಿಟನಿನಲ್ಲಿ ಸ್ನೇಹಿತರು | ೯೮ |
| ೭. | ನಾರ್ವೆಗೆ ಪಯಣ | ೧೦೯ |
| ೮. | ಒಸ್ಲೋ ನಗರದಲ್ಲಿ | ೧೨೨ |
| ೯. | ಸ್ವೀಡನಿನ ರಾಜಧಾನಿಯಲ್ಲಿ | ೧೪೦ |
| ೧೦. | ಕಿರಿಯ ದೇಶವೆನಿಸಿದರೂ | ೧೫೨ |
| ೧೧. | ಹೆಂಬರ್ಗ್ ನಗರದಲ್ಲಿ | ೧೬೭ |
| ೧೨. | ಹಾಲಿನ ನಾಡು, ಹಾಲೆಂಡ್ | ೧೯೦ |
| ೧೩. | ಹಾಲೆಂಡಿನಲ್ಲಿ ಇನ್ನೆರಡು ದಿನ | ೨೦೮ |
| ೧೪. | ಬೆಲ್ಜಿಯಮಿನಲ್ಲಿ | ೨೧೬ |
| ೧೫. | ಉನ್ಮತ್ತ ನೀಸಿನಲ್ಲಿ | ೨೨೫ |
| ೧೬. | ವೈಭವಶಾಲಿ ಪೇರಿಸ್ | ೨೪೦ |
| ೧೭. | ಕಲಾ ವೈಭವ | ೨೫೬ |
| ೧೮. | ಯುರೋಪಿನ ನಂದನವನದಲ್ಲಿ | ೨೭೧ |
| ೧೯. | ಇಟೆಲಿಯ ವಿಹಂಗಮ ನೋಟ | ೨೯೨ |
| ೨೦. | ಮಿಲಾನ್ ಮತ್ತು ವೇನಿಸ್ | ೨೯೮ |
| ೨೧. | ಫ್ಲಾರೆನ್ಸ್ ನಗರ | ೩೦೬ |
| ೨೨. | ರೋಮ್ ನಗರದಲ್ಲಿ | ೩೧೫ |
| ೨೩. | ಮರಳಿ ಊರಿಗೆ | ೩೩೨ |

## ಚಿತ್ರ ಸೂಚಿಕೆ.


ರಕ್ಷಾಪತ್ರ — ಕೊಳಲೂದುತ್ತಿರುವ ಕನ್ಯೆ (ವೆಟಿಕನ್ ಮ್ಯೂಸಿಯಮಿನಲ್ಲಿ
ರುವ ಪ್ರಾಚೀನ ಗ್ರೀಕ್ ಶಿಲ್ಪದಿಂದ)

೧. ಬ್ರಿಟಿಷ್ ಪಾರ್ಲಿಮೆಂಟ್ ಮಂದಿರ. (ಲಂಡನ್)

೨. ಫಿನ್ಸೆ ನಿಲ್ದಾಣದಿಂದ ಕಾಣುವ ಪರ್ವತಗಳು. (ನಾರ್ವೆ)

೩. ಗಸ್ಟಾವ್ ವೀಗಲೆಂಡನ 'ಶಿಲಾಬಾಲಿಕೆ'ಯರು. (ಒಸ್ಲೋ)

೪. ಗಸ್ಟಾವ್ ವೀಗಲೆಂಡನ ಶಿಲ್ಪಗಳು (ಕಂಚಿನಲ್ಲಿ). (ಒಸ್ಲೋ)

೫. ಸ್ಟಾಕ್‌ಹಾಮು ನಗರದ ಒಂದು ನೋಟ.

೬. ಪಾರ್ಲಿಮೆಂಟ ಮಂದಿರ. ಕೊಪನ್‌ಹೇಗನ್.

೭. ಹೇಂಬರ್ಗ್ ನಗರದ ಬೀದಿಯೊಂದು.

೮. ಪೇರಿಸಿನ ಎಫಿಲ್ ಕೊತ್ತಳದಿಂದ.

೯. ಚಿತ್ರಕಾರ ಟೊಸಿಪಿಯ 'ರತಿ ಮನ್ಮಥ'ರು. (ಲೂವ್ರ್)

೧೦. ಪ್ರಾಚೀನ ಗ್ರೀಕ್ ದೇವತೆ–ವೀನಸ್. (ಲೂವ್ರ್)

೧೧. ಪಿಯೋ ಫೆಡಿಯ ಶಿಲ್ಪ–ಪೊಲಿಕ್ಸೀನಾ ಅಪಹರಣ. (ಫ್ಲಾರೆನ್ಸ್)

೧೨. ಯಂಗ್ ಫ್ರೊ ಶಿಖರದಿಂದ ಹಿಮನದಿಯೊಂದರ ನೋಟ.

೧೩. ಪ್ರಾಚೀನ ರೋಮನ್ ಸಭಾಂಗಣಗಳು; ದೂರದಲ್ಲಿ
ಕೊಲೀಸಿಯಮ್ (ರೋಮ್)

೧೪. ಮೈಕೆಲ್ ಎಂಜೆಲೋ ಕೆತ್ತಿದ ಮೃತ ಯೇಸುವಿನ ಮುಖ ಭಾಗ.
(ರೋಮ್)

೧೫. ಪ್ರಾಚೀನ ಈಜಿಪ್ಟಿನ ಶಿಲ್ಪ. (ಬ್ರಿಟಿಷ್ ಮ್ಯೂಸಿಯಮ್)

೧೬. ಸೈಂಟ್ ಪೀಟರ್ಸ್ ಬೆಸಿಲಿಕಾ. (ರೋಮ್)


— — — — — —

# ಅಪೂರ್ವ ಪಶ್ಚಿಮ

## ೧. ತೇಲುವ ಅಮರಾವತಿ

ಹಲವು ವರ್ಷಗಳಿಂದ ವಿದೇಶಯಾತ್ರೆಗೆ ಹೋಗಬೇಕೆಂಬ ಕನಸು ನನ್ನನ್ನು ಬಹುವಾಗಿ ಕಾಡುತ್ತ ಬಂದಿತ್ತು. ಆ ಯಾತ್ರೆ ಏಕೆ? ಏನು?-ಎಂಬ ಸ್ಪಷ್ಟವಾದ ಉದ್ದೇಶವಾಗಲಿ, ಚಿತ್ರವಾಗಲಿ ಕಣ್ಣಿನ ಮುಂದೆ ಹೊಳೆಯ ದಾದರೂ, ನಮ್ಮ ದೇಶದಲ್ಲಿ ಕಾಣಲಾರದ ಯಾವುದೋ ಒಂದು ಬಗೆಯ ಚೆಲುವು ಅಲ್ಲಿ ಕಾಣಲು ಸಿಕ್ಕೀತು ಎಂಬ ಆಸೆ ಉಂಟಾಗಿತ್ತು. ಇದೊಂದೇ ಅಲ್ಲ-ಪಾಶ್ಚಾತ್ಯರ ಚಿತ್ರ, ಶಿಲ್ಪಕಲೆಗಳನ್ನು ಕುರಿತು ನಾನು ಓದಿಕೊಂಡ ಬರಹ ಗಳೂ ಇದಕ್ಕೆ ಕಾರಣವಾಗಿದ್ದುವು. ಇಟಲಿಯ ಶಿಲ್ಪಿಯೂ ಚಿತ್ರಕಾರನೂ ಆದ ಮೈಕೆಲ್ ಎಂಜೆಲೊ, ಚಿತ್ರಕಾರನೂ ವಿಜ್ಞಾನಿಯೂ ಆದ ಲಿಯನಾರ್ಡೊ-ಡ- ವಿನ್ಸಿ, ಬ್ರಿಟಿಷ್ ಚಿತ್ರಕಾರರಾದ ವಿಸ್ಲರ್, ಟರ್ನರರು; ಡಚ್ ಚಿತ್ರ ಕಾರನಾದ ರೆಂಬ್ರಾಂಡ್; ಫ್ರೆಂಚ್ ಚಿತ್ರಕಾರ ಪಾಲ್‌ಗಾಗಿನ್, ಸಿಸಾನ್- ಇವರೇ ಮೊದಲಾದ ಹಲವು ಪ್ರಸಿದ್ಧ ಕಲಾವಿದರ ಹೆಸರುಗಳು, ಅವರ ಕೃತಿಗಳನ್ನು ಕುರಿತು ನಾನು ಓದಿದ ಬರಹಗಳು, ಕಂಡ, ಮೂಲಚಿತ್ರ ಗಳಲ್ಲದಿದ್ದರೂ, ಚಿತ್ರಪ್ರತಿಗಳು ನನ್ನ ಈ ಆಸೆಗೆ ರೂಪು ಕೊಟ್ಟಿದ್ದುವು. ಇಂಥವುಗಳ ಜತೆಗೆ ಪವ್ಲೊವಾ, ಡಂಕನ್ ಮೊದಲಾದ ನರ್ತಕಿಯರ ವಿಚಾ ರದಲ್ಲಿ ಓದಿದವನಾದುದರಿಂದ ಆ ದೇಶದ ಜನಗಳ ನೃತ್ಯ ಹೇಗಿದೆ, ಬಾಲೆ (Ballet) ಹೇಗಿದೆ, ನಾಟಕ ಹೇಗಿದೆ-ಎಂದೆಲ್ಲಾ ತಿಳಿದುಕೊಳ್ಳುವ ಹಂಬಲ ವಾಗಿತ್ತು. ಈ ಕ್ಷೇತ್ರಗಳು ನಾನು ದುಡುಕಿ ಪ್ರಯೋಗ ನಡೆಯಿಸಿದುವು ಗಳಾದುದರಿಂದ ನನಗೆ ಪ್ರಿಯವಾಗಿದ್ದುವು. ಅದರಂತೆಯೇ ಕಲಾ ಕೇಂದ್ರ ಗಳಾದ ಪೇರಿಸ್, ರೋಮ್, ಫ್ಲಾರೆನ್ಸ್, ಲಂಡನ್‌ನಂಥ ನಗರಗಳು ನನಗೆ ಆಕರ್ಷಕವಾಗಿದ್ದುವು. ಇವೆಲ್ಲವುಗಳ ಜತೆಗೆ ಆ ದೇಶಗಳಲ್ಲಿ ಉದ್ಯಮ ಹೇಗಿದೆ? ಸಂಸ್ಕೃತಿ ಯಾವ ಬಗೆಯದು? ಎಂಥವು ನಮ್ಮ ಪಾಲಿಗೆ ಅನು ಕರಣೀಯ?-ಎಂದು ತಿಳಿಯುವ ಚಪಲವೂ ಸೇರಿತ್ತು. ಆದರೆ....?

ಈ ಹಂಬಲ ಹಂಬಲವಾಗಿಯೇ ಉಳಿಯಬೇಕಿತ್ತು. ಸ್ವತಂತ್ರನಾದ ನನಗೆ ಸಮಯದ ತೊಡಕಿರಲಿಲ್ಲ. ಆದರೆ ಇಂತಹ ಒಂದು ಪ್ರವಾಸ ಕೈಕೊಳ್ಳಲು ಬೇಕಾದ ದ್ರವ್ಯಾನುಕೂಲತೆ ಇಲ್ಲದಿತ್ತು. ಆರೆಂಟು ಸಾವಿರ ರೂಪಾಯಿಗಳನ್ನು ಒಂದು ಗಂಟಾಗಿ ಕೂಡಿರಿಸಿ, ವಿದೇಶಗಳನ್ನು ಕಾಣುವ ಕನಸು ನನಗೆ ಸುಲಭವಾಗಿರಲಿಲ್ಲ. ಹೀಗಾಗಿ ಹಂಬಲ ಮುಂದುವರಿಯಿತು; ಆಸೆ ನಿರಾಸೆಯಾಗುವುದರಲ್ಲಿತ್ತು. ಇದು ಮುಂದೆಂದೂ ಕೈಗೂಡದು ಎಂಬ ಭೀತಿ ನನ್ನಲ್ಲಿ ಮೂಡಿದುದರಿಂದ ಅವಸರ ಮಾಡಿದೆ. ಆ ಭೀತಿ ಮೂರನೆಯ ಮಹಾಯುದ್ಧದ ಭೀತಿ.

ಕಳೆದ ಯುದ್ಧದ ಮೊದಲು ಮೂಡಿದ ಆಸೆ, ಇನ್ನೊಂದು ಯುದ್ಧ ಬಂದರೆ ನಿರ್ನಾಮವಾದೀತು; ಆಗ ಯುರೋಪಿನಲ್ಲಿ ನೋಡುವುದಕ್ಕೆ ಏನೂ ಉಳಿಯಲಾರದು-ಎಂಬ ಭೀತಿ ನನಗಿತ್ತು. ಸಾಮ್ರಾಜ್ಯಗಳ ವಿಚಿತ್ರ ಅಧಿಕಾರ ದಾಹ ಥಕ್ಕನೆ ಶಾಂತವಾಗುವುದಿಲ್ಲ. ರಷ್ಯ ಮತ್ತು ಪಾಶ್ಚಾತ್ಯ ರಾಜ್ಯಗಳೊಳಗಿನ ಸಂಶಯ, ಭೀತಿಗಳು ನಿವಾರಣೆಯಾದಾವೆಂದು ನನಗನಿಸಲಿಲ್ಲ; ಅನಿಸುವುದೂ ಇಲ್ಲ. ಹೀಗಾಗಿ-ಜನ ಬೇಕೆನಲಿ, ಬೇಡನಲಿ ಮೂರನೆಯ ಮಹಾಯುದ್ಧ ಕಟ್ಟಿಟ್ಟದ್ದು-ಎಂಬುದು ನನ್ನ ಮನಸ್ಸು. ಅಂತಹ ದುರ್ದಿನ ಬಂದರೆ ತಿರುಗಿ ಯುರೋಪು ಇನ್ನೊಂದು ಸುಡುಗಾಡು. ಈಗಾಗಲೇ ಆರ್ಥಿಕ, ಆಹಾರ ವಿಪ್ಲವಗಳಿಂದ ತೊಳಲಾಡುವ ನಮ್ಮ ದೇಶ ಇನ್ನಷ್ಟು ತಳಮಳಗೊಂಡೀತು. ಆಗ ಕನ್ನಡನಾಡಿನ ಬರವಣಿಗನೊಬ್ಬ ತನ್ನ ಹುಚ್ಚು ಕನಸಿಗಾಗಿ ವಿದೇಶಯಾತ್ರೆ ಮಾಡುವ ದಿನವು ತೀರ, ತೀರ ದೂರ. ಅಲ್ಲದೆ ಈಗಾಗಲೇ ಜೀವನದಲ್ಲಿ ಬಹುದೂರ ಸಾಗಿದ ನಾನು, ಹತ್ತು ವರ್ಷಗಳ ಬಳಿಕ ಎಲ್ಲಿಗೆ ಹೋದರೇನು? ಏನು ಕಂಡರೇನು? ಊರುಗೋಲು ಹಿಡಿದು ಊರಿನ ದಾರಿ ತುಳಿದಷ್ಟೇ ಲಾಭ ಆ ಪಯಣದಿಂದ. ಇಂಥೆಲ್ಲ ವಿಚಾರಗಳ ಸುಳಿವುಗಳು ನನ್ನ ಅವಸರಕ್ಕೆ ಕಾರಣವಾದುವು.

ಹಣದ ಅನುಕೂಲತೆ ಕಣ್ಣೆದುರಿಗೆ ಕಾಣಿಸದಿದ್ದರೂ ಹೋಗುವ ಹಡಗನ್ನೂ ದಿನವನ್ನೂ ನಿಶ್ಚಯಮಾಡಿದೆ. ಪ್ರವಾಸದ ವಿಚಾರದಲ್ಲಿ ಮನೆಯಾಕೆಯ ಪ್ರೋತ್ಸಾಹವಂತು ಇದ್ದೇ ಇತ್ತು. ಮಿತ್ರರ ಪ್ರೋತ್ಸಾಹವೂ ಇತ್ತು. ಹೀಗೆ ಹೊರಡುವ ದಿನ ನಿಶ್ಚಯವಾಗಿದ್ದರೂ, ನಾಡಿನಲ್ಲಿ ನಡೆದ ಚುನಾವಣೆಯ ಗದ್ದಲಕ್ಕೂ ದುಮುಕಿ ಕೈಸುಟ್ಟುಕೊಂಡುದಾಯಿತು. ಇದರಿಂದ ಆದ

ಒಂದು ಲಾಭವೆಂದರೆ ಜನ ಸಮುದ್ರದ ತಾತ್ಕಾಲಿಕ ಮನಃಪ್ರಲಯದ ದರ್ಶನ. ನೆರೆನೀರು ತರುವ ಹೊಳೆಯುಬ್ಬರದ ರಾಡಿಯಲ್ಲಿ ಈಸುವಂಥ ಪ್ರಮೇಯ. ಅನಾಸಕ್ತಿಯಿಂದ ಈ ಆಟದಲ್ಲಿ ಭಾಗಿಯಾದವನಿಗೆ ಬರುವ, ಅದಕ್ಕಿಂತಲೂ ಬಂದ ಎನ್ನುವುದೇ ಲೇಸು, ಒಂದು ಅನುಭವವೆಂದರೆ–ರಾಜ ಕೀಯದಲ್ಲಿ ಜನರು–ದೊಡ್ಡವರು, ಸಣ್ಣವರು, ಬಡವರು, ಬಲ್ಲಿದರು ಎಂಬ ವ್ಯತ್ಯಾಸವಿಲ್ಲದೆ—ತತ್ಕಾಲದ ಗೆಲುವಿಗಾಗಿ ನೀತಿಯನ್ನು ಹೇಗೆ ಕಡೆಗಣಿಸ ಬಲ್ಲರು ಎಂಬೊಂದು ಕಟು ಅನುಭವ, ಈ ಪ್ರವಾಸಕ್ಕೆ ಇನ್ನಷ್ಟು ಅನುಕೂಲ ಮಾಡಿತು. ಇದರಿಂದ ಮನಃಶಾಂತಿ ಗಳಿಸುವುದಕ್ಕೊಂದು ಪ್ರೋತ್ಸಾಹ ವಾಯಿತು. ಹೊರಡುವುದಕ್ಕೆ ದೊರೆಯುವ ಬೆಂಬಲ ಹಣದ್ದೊಂದೇ. ನನ್ನ ಬಹುಮಟ್ಟಿನ ಕಾರ್ಯಸಾಧನೆ ಸಾಲವನ್ನು ಹೊಂದಿತ್ತು. ಈಗೇನು ಹೊಸತು? ಆದರೆ ಕೊಡುವವರು ಮುಂದೆ ಬರಬೇಕಲ್ಲ! ದೇಶದಲ್ಲಿ ಆರ್ಥಿಕ ಮುಗ್ಗಟ್ಟು ನನ್ನ ಮನದ ಮುಗ್ಗಟ್ಟನ್ನು ಮೀರಿಸಿ ಕವಿಯಿತು. ಸಾಹುಕಾರರು ಉರುಳ ತೊಡಗಿದ್ದರು; ಆಗ ಸಾಮಾಜಿಕ ಪ್ರಜೆಯಾದ ನಾನೂ ಅದುರಬೇಕಾಗ ಬಹುದು. ಒಂದು ಬೇಂಕನ್ನು ಪ್ರಾರ್ಥಿಸಿದೆ. 'ಮೊದಲು ಕೊಟ್ಟದ್ದನ್ನೇ ಕೊಡು' ಎಂದರು. ಇನ್ನೊಂದು ಬೇಂಕಿನವರು–ಇವನಿನ್ನೂ ತೀರ ದಿವಾಳಿ ಯಾಗಿಲ್ಲ–ಎಂದು ತಿಳಿದು ನಿಡುವಾಯಿದೆಯ ಸಾಲವೊದಗಿಸಿದರು. ಸಾಲ ತೀರಿಸುವ ಹೊಣೆ ಸುಲಭವಲ್ಲದಿದ್ದರೂ, ಅದನ್ನು ಮಾಡದೆ ಉದ್ದೇಶ ಸಾಧಿ ಸುವುದು ಅಸಾಧ್ಯವಾಗಿತ್ತು.

ಹೋಗಿ ಬರುವ ಹಡಗಿನ ಹಾಸಲನ್ನು ಕೊಟ್ಟಾಗಿತ್ತು. ಇನ್ನು ದಾ ರಿಯ ವೆಚ್ಚಕ್ಕೆಂದು ಐದು ಸಾವಿರದಷ್ಟು ಮೊಬಲಗನ್ನು ಹಿಡಿದುಕೊಂಡು ಹೊರಟೆ. ಹೊರಡುವ ದಿನ ನೆರೆಕರೆಯ ಗೆಳೆಯರು ಬಂದು ಹರಸಿದರು. ಹಾಗೆಯೇ ನನಗೆ ಪ್ರಿಯರಾದ ಅನೇಕ ಮಿತ್ರರು ಸುಖ ಪಯಣ ಬಯಸಿ ದ್ದರು. ಹೊರಡುವ ದಿನ, ತುಸು ದೂರದ ತನಕ, ಪುತ್ತೂರಿಂದ ಧರ್ಮ ಸ್ಥಳದ ತನಕ, ನನ್ನ ಮಡದಿಯೂ ಜತೆಯಲ್ಲಿದ್ದಳು. ಆ ದಿನ ನೆನೆವ ದಿನ ವಾಗಿತ್ತು. ಅಂದು ಚಿತ್ರಾ ಪೂರ್ಣಿಮೆ. ನಾನೂ ನನ್ನ ಲೀಲೆಯೂ ಸಂಸಾರ ನೌಕೆಯಲ್ಲಿ ಕುಳಿತ ದಿನ. ಅದಕ್ಕಿಂತ ಹೆಚ್ಚಾಗಿ–ಗೌತಮ ಬುದ್ಧನಾನ ದಿನ. ಮೊದಲು ನನಗೆ ಹಿರಿಯರೂ ಪ್ರಿಯರೂ ಆದ ಶ್ರೀ. ಮಂಜಯ್ಯ ಹೆಗ್ಗಡೆ ಯವರನ್ನು ಸಂದರ್ಶಿಸಿ, ಅನಂತರ ಉಜ್ರೆಗೆ ಬಂದು ಆ ರಾತ್ರಿ ನಿಂತೆ; ಮಡದಿ

ಯನ್ನು ಬೀಳ್ಕೊಟ್ಟೆ. ಹೊರಡುವ ಕಾಲದಲ್ಲಿ ಆಕೆ ನಗುತ್ತಿದ್ದರೂ ಕಣ್ಣು ಹನಿಯುತಿತ್ತು. ಬಹುದೂರದ ಪ್ರಯಾಣ, ನಮ್ಮದಲ್ಲದ ನಾಡಿಗೆ, ದೀರ್ಘ ಕಾಲದ ಪ್ರವಾಸ—ಎಂದಾಗ ಅಗಲಿಕೆ ವ್ಯಥೆಯನ್ನು ತಂದೊಡ್ಡುವುದು ಸಹಜ.

ಊರು ಬಿಡುವಾಗಲೇ ನನ್ನ ಕಿರಿಯ ಹುಡುಗ, ಮೂರು ವರ್ಷದ ಉಲ್ಲಾಸ, ನನ್ನೊಂದು ನಾಟಕದ ಹಾಡನ್ನು ತಿದ್ದಿ "ಯುರೋಪಿಗೆ ಹೊರಟ ಕಳ್ಳರಿವರು ಗೊತ್ತಿಲ್ಲೇನು?" ಅನ್ನುತ್ತಿದ್ದ. ನನಗೂ ಅನಿಸುತ್ತಿತ್ತು—ಸಂಸಾರ ದಲ್ಲಿ ಕೂಡಿದವಳನ್ನು, ಜತೆಗೆ ಆಡಿದವರನ್ನು ಬಿಟ್ಟು, ಒಬ್ಬನೇ ಸುಖದ ಹಂಬಲದಿಂದ ಹೊರಟಿದ್ದೇನೆಂದು. ಅದು ಸ್ವಾರ್ಥವೇ. ಈ ಸ್ವಾರ್ಥಕ್ಕಾಗಿ ಮಾಡಿದ ಸಾಲ ತೀರಿಸಲು ಏಳು ವರ್ಷಗಳಾದರೂ ದುಡಿಯಬೇಕು. ಗಂಡ ಹೆಂಡಿರಿಬ್ಬರೂ ಹೊರಟರೆ ಹದಿನಾಲ್ಕು ವರ್ಷಗಳ ಅಜ್ಞಾತ ವಾಸವೇ ಗತಿ—ಎಂಬುದೇ ನನ್ನ ಭಯ.

ಇನ್ನು ಪಯಣದ ವಿಚಾರವನ್ನು ಬರೆಯುತ್ತೇನೆ. ಉಚ್ರಿಯಿಂದ ಕಡೂರಿನ ತನಕ ಬಸ್ಸು; ಅಲ್ಲಿಂದ ಮುಂಬಯಿ ತನಕ ರೈಲು. ಮುಂಬಯಿಯಲ್ಲಿ 3-4 ದಿನಗಳ ಓಡಾಟ. ಪಾಸ್‌ಪೋರ್ಟಿನ ಮೇಲೆ ವೀಸಾ ಬರೆಸಿಕೊಳ್ಳುವ ಕೆಲಸ. ಈ ಅಲ್ಪಾವಧಿಯಲ್ಲೇ ಮುಂಬಯಿಯ ಕನ್ನಡಿಗರು ನನ್ನನ್ನು ಬೀಳ್ಕೊಡಲು ಒಂದು ಸತ್ಕಾರ ಕೂಟವನ್ನು ಜರುಗಿಸಿದರು. "ಯಾರಪ್ಪನ ದುಡ್ಡಿನಲ್ಲಿ ಇವನು ವಿಲಾಯತಿಗೆ ಹೊರಟ?" ಎಂದವರೂ ಇದ್ದರು. ಅಂತೂ ಸಮಾರಂಭಕ್ಕೆ ನೂರು ಮಂದಿಯಷ್ಟು ಅಭಿಮಾನಿಗಳು ಬಂದಿದ್ದರು. "ಕಾರಂತರು ಯುರೋಪಿಗೆ ಹೋಗುವುದು ಕನ್ನಡಿಗರಿಗೆ ಒಂದು 'ಎಮ್ಮೆಯ' ವಿಚಾರ"ಎಂದರು. ಅವರಲ್ಲಿ ಅವಮಾನದ ವಿಷಯವೇನಿಲ್ಲ. ಕಾಫಿ, ತಿಂಡಿ, ಹಾರಗಳನ್ನೆಲ್ಲಾ ಕೊಡುತ್ತ ಹರಸುವಾಗ, ಹೆ(ಎ)ಮ್ಮೆಯ ನಾಡು ಕನ್ನಡ ನಾಡು, ಎಂದರೆ ನನಗೂ ಸಂತೋಷವೇ. ಈ ಸಮಾರಂಭ ಹೊರಗಿನ ಕಣ್ಣಿಗೆ ಕೇವಲ ಔಪಚಾರಿಕವಾಗಿತ್ತು—ಎಂದು ನನಗೆ ತಿಳಿದಿದ್ದರೂ ಅದನ್ನು ಏರ್ಪಡಿಸಲು ಹೊರಟ ನಾಲ್ಕಾರು ಮಂದಿ ನನ್ನ ಆಪ್ತರ ಪ್ರೀತಿಪುರಸ್ಸರ ವಾದ ಕಾಣಿಕೆಯದು ಎಂದು ನನಗೆ ತಿಳಿದಿತ್ತು. ಅವರಿಗೆಲ್ಲ ನಾನು ಋಣಿ.

ಎಪ್ರಿಲ್ ಹದಿನೆಂಟರ ದಿನ ಮಧ್ಯಾಹ್ನ 12 ಗಂಟೆಯ ವೇಳೆಗೆ ನನ್ನ ಸೋದರನೊಡನೆಯೂ, ಸ್ನೇಹಿತರೊಡನೆಯೂ ಹಡಗಿನ ಧಕ್ಕೆಗೆ ಬಂದುದಾ

ಯಿತು. ಮುಂಬಯಿಂದ ಹೊರಡುವ ಸುಮಾರು 600 ಮಂದಿ ಪ್ರವಾಸಿಗಳ ಜತೆಯಲ್ಲಿ ಸಾಲಾಗಿ ನಿಂತು, ನಿಂತು, ಕಾದು, ಕಾದು ೯ಅಕ್ಷರಕ್ಕಿಂತಲೂ ಕೈಕಾಲು ಸೊಟ್ಟಾಗುವಷ್ಟು ದಣಿವು, ಬೇಸರ. ಸುಂಕದವರು, ಆರೋಗ್ಯದವರು ಇದಕ್ಕಾಗಿ ತೋರಿದ ಚುರುಕು, ಪಟ್ಟ ಕಳವಳ ಹೇಳಲಸಾಧ್ಯ. ಸುಮಾರು ಮೂರು ತಾಸುಗಳ ಪೀಡೆ. ನಾನು ಸಂದರ್ಶಿಸಿದ ಯಾವೊಂದು ಪಡುವಣ ದೇಶದಲ್ಲೂ ಈ ತೆರನ ಮೆಲುಗತಿ, ಹಿಂಸೆ ಕಾಣಿಸಲಿಲ್ಲ. ಅಂತೂ ಐದು ಗಂಟೆಯ ಹೊತ್ತಿಗೆ ಹಡಗನ್ನೇರಿದೆ.

ನಮ್ಮ ಹಡಗು 14,000 ಟನ್ ತೂಕದ ಬೆಟೋರಿ ಎಂಬುದು. ಅದು ಪೋಲೆಂಡ್ ಅಮೇರಿಕಾ ಲೈನ್ಸ್ ಎಂಬುದಕ್ಕೆ ಸೇರಿದ್ದು. ಕಳೆದ ವರ್ಷ ಒಬ್ಬ ಕಮ್ಯುನಿಸ್ಟ ಪ್ರಜೆಯನ್ನು ಅಮೇರಿಕದಿಂದ ಯುರೋಪಿಗೆ ಕದ್ದು ಸಾಗಿಸಿದ ಕೀರ್ತಿ ಅದಕ್ಕಂಟಿತ್ತು. ಹಡಗು ಹೆಸರಾದ ಲಕ್ಸುರಿ ಲೈನರ್. ಒಟ್ಟಿಗೆ 800ಮಂದಿ ಪಯಣಿಗರಿದ್ದರು. ಹಡಗಿನಲ್ಲಿ ವಾಸದ ಕೆಬಿನ್‌ಗಳೂ, ಕುಳಿತಿರಲು ಲೌಂಜುಗಳೂ, ವಿನೋದವಿಹಾರಗಳಿಗೆ ಸ್ಥಳಗಳೂ ಸೊಗಸಾಗಿದ್ದವು. ಸಿನೆಮಾ, ವಾಚನಾಲಯ, ಈಜಾಡುವ ಕೆರೆ ಮೊದಲಾದ ಸೌಕರ್ಯಗಳೂ ಇದ್ದುವು. ಭೋಜನ ಗೃಹ ವಿಶಾಲವಾಗಿದ್ದಂತೆ ಉಣ್ಣ ಬಲ್ಲವನಿಗೆ ಆಹಾರಕ್ಕೂ ಕೊರತೆ ಇರಲಿಲ್ಲ. ಹೊರಡುವಾಗ ನಾನು ಪುಸ್ತಕಗಳನ್ನು ಕೊಂಡುಹೋಗಿರಲಿಲ್ಲ. ಆದರೆ ಹಡಗಿನ ವಾಚನಾಲಯವಾಗಲಿ ಪುಸ್ತಕಾಲಯವಾಗಲೀ ಎರಡೂ ನಿರಾಶೆಗೊಳಿಸಿದುವು. ಬಹುಮಟ್ಟಿನ ಪತ್ರಿಕೆಗಳು ಪೋಲಿಷ್ ಭಾಷೆಯವು. ಅವುಗಳಲ್ಲಿ ಯಂತ್ರಸಾಮಗ್ರಿಗಳ ಚಿತ್ರ, ಸ್ಟೆಲಿನನ ಚಿತ್ರಗಳಲ್ಲದೆ ಮತ್ತೇನೂ ನೋಡುವುದಕ್ಕಿರಲಿಲ್ಲ. ಪುಸ್ತಕಗಳ ಸಂಗ್ರಹ ಇನ್ನಷ್ಟು ದುರ್ಬಲ. ಹಡಗು ಸೌತಾಮ್ಟನ್ ಮಾರ್ಗವಾಗಿ ಪೋಲೆಂಡಿನ ಬಂದರಾದ ಗಿಡ್ನಿಯಕ್ಕೆ ಹೋಗುವಂತಹುದು. ಅಷ್ಟು ದೂರದ ಪಯಣವಾದರೂ, ಬಡಕಲು ವಾಚನಾಲಯದಿಂದ, ಏನೂ ಉತ್ಸಾಹ ಬರುವಂತಿರಲಿಲ್ಲ.

ಅಂತು ಹದಿನೆಂಟು ದಿನಗಳ ಈ ಯಾನವನ್ನು ಬೇಸರವಿಲ್ಲದೆ ಹೇಗೆ ಕಳೆಯಲಿ ಎಂಬ ಯೋಚನೆ ನನಗೆ ಬಲವಾಯಿತು. ಆಟವೇ? ಟೇಬಲ್ ಟೆನ್ನಿಸ್, ಚದುರಂಗ ಮೊದಲಾದುವಕ್ಕೆ ನುರಿತವನಲ್ಲ. ಬಿಂಗೊ, ಬಿಯರ್ ಬೆರೆಸಿದ ಬಿಂಗೊ, ಅದೂ ರುಚಿಸದು. ಒಂದೆರಡು ರಾತ್ರಿ ಆರ್ಕೆಸ್ಟ್ರದ

ಮುಂದೆ ನಡೆಯುವ ನೃತ್ಯಗಳನ್ನು ನೋಡಹೋಗಿದ್ದೆ. ಅದೂ, ತಮ್ಮ ಸಾಮಾಜಿಕ ಜೀವನದಲ್ಲಿ ಕುಣಿಯದ ಜನ ಕುಣಿಯತೊಡಗಿದರೆ ಕುಣಿದವರಿಗಷ್ಟೇ ಸಂತೋಷ; ನೋಡುವವರಿಗಲ್ಲ. ಹಡಗಿನಲ್ಲಿ ಅನೇಕ ಮುದುಕಿಯರು ಉಣ್ಣೆಯ ನೂಲನ್ನು ಹೆಣೆದು ವಸ್ತ್ರವನ್ನಾದರೂ ಮಾಡುತ್ತಿದ್ದರು. ನನಗೆ ಅದೂ ಬಾರದು. ಒಂದೆರಡು ಪುಸ್ತಕಗಳನ್ನು ತಿರುವಿದೆ. ಪುಣ್ಯಕ್ಕೆ ಜತೆಯಲ್ಲಿ ಕೊಂಡೊಯ್ದು ಡ್ರಾಯಿಂಗ್ ಪುಸ್ತಕದ ಮೇಲೆ ಬಣ್ಣದ ಕಡ್ಡಿಗಳಿಂದ ಚಿತ್ರ ಬರೆದೆ. ಉಳಿದ ವೇಳೆ ಹೇಗೆ ಸರಿಯಿತೋ, ಕಳೆದೆನೋ? ಪೆನ್‌ಶನ್ ಪಡೆದವರ ಪಾಲಿನ ನಿವೃತ್ತ ಸ್ವರ್ಗ . . . ಅಂದರೆ ಕಡಲಿಗೆ ಮುಖ ಮಾಡಿಕೊಂಡು ಅಲ್ಲಿ ಉದ್ಭವಿಸುವ ಅಲೆಗಳನ್ನೆಣಿಸುವ ಅನಂತ ಕೆಲಸ.

ನಮ್ಮ ಹಡಗು ಮೊದಲಿನ ಐದು ದಿನಗಳಕಾಲ ಹಿಂದೂ ಸಾಗರವನ್ನು ದಾಟುವುದರಲ್ಲಿ ಕಳೆಯಿತು. ಸುಮಾರು 1,600 ಮೈಲು ದೂರ; ಮುಗಿಲಿಲ್ಲದ ಬಾನು; ಕಡು ನೀಲವೂ, ಪ್ರಶಾಂತವೂ ಆದ ಸಾಗರ. ನಮ್ಮ ದಾರಿಗೆ ಇದಿರಾಗಿ ಸರಿದ ಹಡಗುಗಳ ಸಂಖ್ಯೆ ಒಂದೋ ಎರಡೋ. ಒಮ್ಮೊಮ್ಮೆ ಕಡಲು ಚೇತನಗೊಳ್ಳುತ್ತಿತ್ತು-ಜಲಚರಗಳ ಓಡಾಟದಿಂದ. ಶಾಂತ ಕಡಲಲ್ಲಿ ಒಮ್ಮಿಂದೊಮ್ಮೆ ಡಾಲ್ಫಿನ್ ಮೀನುಗಳು ಹಿಂಡುಹಿಂಡಾಗಿ ಕಾಣಿಸುತ್ತವೆ. ತಮ್ಮ ಮೈಯನ್ನು ಬಿಲ್ಲಂತೆ ಬಗ್ಗಿಸಿ, ಉರುಳಿ ಉರುಳಿ ಹೋಗುವ ನೋಟ ಮೋಹಕವಾಗುತ್ತದೆ. ಇನ್ನೆಷ್ಟೋ ಬಾರಿ ಹಡಗಿನ ಗತಿಗೆ ಚಕಿತಗೊಂಡು ಹಾರುವ ಮೀನುಗಳು, ನೀರಿಂದ ಚಿಮ್ಮಿ ನೂರಿನ್ನೂರು ಗಜ ಅಂತರಿಕ್ಷದಲ್ಲಿ ಹಾರಿ, ಅಂಬಿನಂತೆ ನೀರನ್ನು ಹೊಗುವ ನೋಟ ಅಷ್ಟೇ ವಿಸ್ಮಯಕಾರಕವಾಗಿತ್ತು.

ಮಿತ್ರರೋ? ಹಡಗಿನಲ್ಲಿ ಇಂತಹ ವೇಳೆ ಸ್ನೇಹಿತರಿಗಾಗಿ ಎಂಥಹರೂ ಹಂಬಲಿಸಬೇಕು. ಮೊದಲ ದಿನ ಭೋಜನ ಗೃಹದಲ್ಲಿ ಚಾ ಕುಡಿಯಲು ಕುಳಿತಾಗಲೇ, ವೃದ್ಧರಾಗಿ ಕಾಣಿಸಿದ ಒಬ್ಬರು ನನ್ನ ಬಳಿಗೆ ಬಂದು "ಕಾರಂತರಲ್ಲವೇ?" ಎಂದು ಕೇಳಿದರು. ನಾನು ಹಿಗ್ಗಿ ಅಹುದೆಂದೆ. ಅಲ್ಲಿಂದ ನಮ್ಮ ಪರಿಚಯ ಬೆಳೆಯಿತು. ಅವರು ಗದುಗಿನವರು. ಹೆಸರು 'ಪಿಳ್ಳೆ' ಎಂದು. ಇಂಗ್ಲಿಷ್, ಕನ್ನಡ ಎರಡೂ ಬರುತ್ತಿತ್ತು. ನನಗಿಂತ ಹತ್ತು ವರ್ಷ ಕಿರಿಯರಾದರೂ ನೋಟಕ್ಕೆ ಹತ್ತು ವರ್ಷ ಹಿರಿಯರಾಗಿಯೇ ಕಾಣಿಸುತ್ತಿದ್ದರು. ನನ್ನ ಪಯಣದ ಉದ್ದಕ್ಕೂ ಸ್ನೇಹ ಮಾತುಕತೆಗಳಿಗೆ ದೊರಕಿ

ದವರೆಂದರೆ ಅವರೊಬ್ಬರೇ ಅನ್ನಬೇಕು. ಬರಿಯ ಪರಿಚಯವನ್ನು ಮೀರಿದ ಮಿತ್ರತ್ವ ಅವರಲ್ಲಿ ನನಗೆ ದೊರೆಯಿತು. ಮುಂದೆ ಲಂಡನಿನಲ್ಲೂ ಅನೇಕ ಬಾರಿ ಭೇಟಿಯಾದರು. ಅವರು ಅಲ್ಲಿನ ಒಂದು ವ್ಯಾಪಾರಿ ಸಂಸ್ಥೆಯಲ್ಲಿ ಕೆಲಸಕ್ಕೆ ನೇಮಕಗೊಂಡು ಹೊರಟಿದ್ದರು.

ಇನ್ನು ನಮ್ಮ ಊಟದ ಮೇಜಿನ ಪಾಲುಗಾರರಲ್ಲಿ ಇಬ್ಬರು ಎಂಗ್ಲೋ ಇಂಡಿಯನ್ ತರುಣರು ಇದ್ದರು. ಕೇವಲ ಮುಖ ನೋಡಿ ನಗುವುದಕ್ಕೆ-ಅಸ್ಸಾಮಿನ ಭಟ್ಟಾಚಾರ್ಯರು, ಮಹಾರಾಷ್ಟ್ರದ ತಾವಡೆಯವರು, ಇನ್ನು ಬೇರೆ ಒಬ್ಬಿಬ್ಬರೂ ಇದ್ದರು. ನಾನು ಮನಬಿಚ್ಚಿ ಮಾತಾಡಿದ್ದರೆ ಅದು ಶ್ರೀ "ಪಿಳ್ಳೈ"ಯವರೊಡನೆ ಮಾತ್ರ. ಆ ಹದಿನೆಂಟು ದಿನಗಳ ಪಯಣದಲ್ಲಿ ನನಗೆ ಪ್ರಿಯವಾಗಿ ಕಂಡುದು ಹಡಗಿನೊಳಗಿನ ಜನ ಜಂಗುಳಿಯಲ್ಲ; ಹಡಗಿನ ಸುತ್ತಲಿನ ವಿಶಾಲವಾದ ಕಡಲು. ಇದಕ್ಕೆ ನನ್ನ ವಿಚಿತ್ರ ಮನೋವೃತ್ತಿ ಕಾರಣವೇ ಹೊರತು ಅವರಲ್ಲ.

ಈಗ ನಮ್ಮ ನೌಕಾ ಸಮಾಜದ ಸ್ಥೂಲ ಚಿತ್ರ ಕೊಡಲು ಪ್ರಯತ್ನಿಸುತ್ತೇನೆ. ನಮ್ಮ ಸಹವಾಸಿಗಳಾದವರು—ಪಾಕಿಸ್ಥಾನಿಗಳೂ, ಹಿಂದೀಯರೂ, ಯುರೋಪಿಯನರೂ. ಬಹುಸಂಖ್ಯಾಕರಾದವರು, ಬಿಳಿಜನರು, ಎಂಗ್ಲೋ ಇಂಡಿಯನರು ಎಂದರೆ ಸಲ್ಲುತ್ತದೆ. ಆದರೆ ಹಡಗಿನಲ್ಲಿ ಕಲೆತ ನಮ್ಮ ಜನಕ್ಕೆ, ನಡವಳಿಕೆಯಲ್ಲಿ ಬಿಳಿಯರನ್ನು ಮೀರಿಸುವ ಹಟವಿದ್ದಂತೆ ಕಾಣುತಿತ್ತು. ತರುಣರೂ ತರುಣಿಯರೂ, ಎಳೆಯರೂ ಮುದುಕರೂ ಎಲ್ಲರೂ ಸ್ಪರ್ಧಿಗಳೇ. ಉಡುಗೆತೊಡುಗೆಗಳಲ್ಲಿ, ಅದಿಲ್ಲದಿರುವಿಕೆಯಲ್ಲಿ, ಅದನ್ನು ಮೂದಲಿಸುವಲ್ಲಿ ಹೇಗೆಂದರೆ ಹಾಗೆ ಸ್ಪರ್ಧಿಸುವ ಹಂಬಲ. ಎಷ್ಟೆಂದರೂ ಯುರೋಪಿಗೆ ಹೋಗುವ ಹಿಂದೀಯರಲ್ಲವೇ? ಅಲ್ಲಿನ ಜೀವನ ಕ್ರಮವನ್ನು ಹಡಗಿನಲ್ಲೇ ತೊಡಗುವ ಉತ್ಸಾಹ. ಹಡಗು ಅದಕ್ಕಾಗಿದ್ದ ಪಾಠಶಾಲೆ. ಭಾರತದಲ್ಲಿ ಹುಟ್ಟಿ ಬೆಳೆದು, ಸಾಂಪ್ರದಾಯಿಕ ಕಟ್ಟುನಿಟ್ಟುಗಳನ್ನು ಹೊತ್ತು ಈ ತನಕ ಬಾಳಿದವರಿಗೆ, ಹಡಗನ್ನೇರಿದಾಗ ತಾವೆಷ್ಟು ನಿಃಶೃಂಖಲರು ಎಂಬ ಭಾವನೆಯಾಗುತ್ತಿರಬೇಕು. ಅದರಿಂದುಂಟಾಗುವ ಸ್ವಚ್ಛಂದವೃತ್ತಿ ಆಗಲೇ ಕಾಣ ತೊಡಗುತ್ತದೆ. ಹಡಗಿನ ಪ್ರವಾಸಿಗಳಲ್ಲಿ ಎಲ್ಲ ತೆರನ ಜನಗಳಿದ್ದರು. ಮದುವೆಯಾಗಿ ಹೊರಟ ಮದುವಣಿಗರಿದ್ದರು; ಗಂಡನನ್ನು ಅರಸಿ ಹೊರಟ ಹೆಂಡಿರಿದ್ದರು. ಹೆಂಡಿರನ್ನು ಕಾಣಲು ಹೊರಟ ಗಂಡಂದಿರಿದ್ದರು; ವಿದ್ಯೆಗಾಗಿ

ಹೊಗಟವರಿದ್ದರು, ವ್ಯವಹಾರಕ್ಕಾಗಿ ಹೊರಟವರಿದ್ದರು. ವಿಲಾಸಕ್ಕಾಗಿ ಹೋಗುವವರೂ ಇದ್ದರು. ಇಂಗ್ಲೆಂಡ್ ಅಮೇರಿಕಾಗಳಿಗೆ ವಿದ್ಯಾಭ್ಯಾಸಕ್ಕಾಗಿ ಹೊರಟ ತರುಣ ತರುಣಿಯರು ಸಾಕಷ್ಟು ಮಂದಿ. ಆರಾಮ ಕುರ್ಚಿಯೊಂದನ್ನು ಹಿಡಿದು ಕಣ್ದೆರೆದು ಕುಳಿತುಬಿಟ್ಟರೆ, ಕಣ್ಣಿನ ಮುಂದೆ ಈ ಭ್ರಾಮಕ ಲೋಕದ ಚಿತ್ರಪಟ ತನ್ನಂತೆಯೇ ಸರಿಯುತ್ತದೆ.

ಹಡಗಿನ ಭೋಜನಗೃಹದಲ್ಲಿ ಬಂದು ಕುಳಿತ ಜನಕ್ಕೆ—ಸಸ್ಯಾಹಾರದಿಂದ ಜೀವ ಬೆಳೆಯದು ಎಂದು ಅನಿಸುತ್ತದೆ. ಒಂದೆರಡು ದಿನಗಳೊಳಗಾಗಿ ಇಲ್ಲಿನ ಊಟ, ಕಾಫಿ ಮೊದಲಾದ ಪಾನೀಯಗಳೂ ಸಾಲದೆಹೋಗಿ ಹಡಗಿನ "ಬಾರ್"ನಲ್ಲಿ ಕುಳಿತುಕೊಳ್ಳುವ ಚಟತೊಡಗುತ್ತದೆ. ಬಿಂಗೋ ಆಡತೊಡಗುತ್ತಾರೆ. ಬಿಯರಿನ ಪರಿಚಯವಾಗುತ್ತದೆ. ಸುಂಕವಿಲ್ಲದೆ ದೊರೆಯುವ ಹಲವಾರು ತೆರನ ಮಾದಕ ದ್ರವ್ಯಗಳ ಪರಿಚಯವಾಗಿ, ನೀರಲ್ಲಿ ಮೀನು ಈಸಿದಷ್ಟು ಸುಲಭದಲ್ಲಿ ಪಾಶ್ಚಾತ್ಯತನದಲ್ಲಿ ಈಸುವುದೂ ಕಾಣುತ್ತದೆ. ತರುಣ ತರುಣಿಯರು, ಪ್ರಾಯಸ್ಥರು, ಪ್ರಾಯ ಕಳೆದವರು ಸಹ ಪಾಶ್ಚಾತ್ಯರ ಗಂಡು ಹೆಣ್ಣಿನ ಸಲುಗೆಯ ಪಾಠವನ್ನು ನಿಮಿಷದಲ್ಲಿ ಕಲಿಯುತ್ತಾರೆ. ಇವೆಲ್ಲಾ ಇಷ್ಟು ಸುಲಭದಲ್ಲಿ ಸಾಧ್ಯವಾಗಲು ಏನು ಕಾರಣ? ಭಾರತದಲ್ಲಿರುವಾಗ ಮನಸ್ಸು ನಿರ್ಬಂಧದಲ್ಲಿರುತ್ತದೆ. ತಮ್ಮವರ ಕಾಣುವ ಕಣ್ಣುಗಳ ಭಯ ತಮ್ಮ ನಡತೆಯ ವಿಚಾರದಲ್ಲಿ ಬಂದೇ ಬರುತ್ತದೆ. ಹಡಗಿನಲ್ಲಿ ಆ ಭೀತಿ ಕಳಚಿಬಿಡುತ್ತದೆ. ತಮ್ಮ ಜನಗಳೂ ಬಳಿಯಲ್ಲಿ ಇರುವುದಿಲ್ಲ. ತಮ್ಮ ಗುರುತಿನವರೂ ಅಲ್ಲಿರುವುದಿಲ್ಲ. ಅದೇ ಈ ನಿಃಶೃಂಖಲವೃತ್ತಿಗೆ ಬೆಂಬಲ. ಮುಪ್ಪು ಸರಿದ ಹೊಟ್ಟೆವಿನಾಯಕರು ಸಹ ಒಬ್ಬೊಬ್ಬ ಎಳೆ ಮುದುಕಿಯನ್ನು ಕಟ್ಟಿಕೊಂಡು "ಡಾನ್ಸಿ"ಸುವಾಗ, ಕುಣಿತ ಹೇಗಿದ್ದರೂ, ವೈಗಾವಿನ ಸುಖ ಅನುಭವಿಸುವಾಗ, ತರುಣತರುಣಿಯರು ವಿರಕ್ತರಾಗಿರಲು ಬಯಸುವುದು ಸಾಧ್ಯವಿಲ್ಲ. ಹಡಗಿನಲ್ಲಿ ಒಳ್ಳೆಯ ಆರ್ಕೆಸ್ಟ್ರ ಇದ್ದಿತು. ಅವರು ಕಣ್ಮುಚ್ಚಿ ತಾಸುತಾಸಿನ ತನಕ ಬಾರಿಸುತ್ತಾರೆ. ಆಗ ಉಳಿದವರ ಪಾಲಿಗೆ, ತಾವೇ ರತಿಮನ್ಮಥರೆಂದು ಊಹಿಸಿಕೊಂಡು ಕುಣಿಯುವ ಕೆಲಸ ಮಾತ್ರ.

ನಮ್ಮ ಸಹಪ್ರವಾಸಿಗಳಲ್ಲಿ ಅನೇಕ ವಿಚಿತ್ರ ವ್ಯಕ್ತಿಗಳೂ ಕಾಣ ಸಿಕ್ಕಿದರು. ಮುಂಬಯಿಯಿಂದ ಲಂಡನಿಗೆ ಸುಮಾರು 800 ರೂಪಾಯಿಗಳ ಹಾಸಲು ತೆರಬೇಕು. ಅಷ್ಟು ವೆಚ್ಚಮಾಡಿ ಬರುವಾಗ, ಆ ವೆಚ್ಚದ ಅರ್ಧ

ವಷ್ಟಾದರೂ ಹಡಗಿನಲ್ಲಿ ಸಂಪಾದಿಸಲು ಬರಲಾರದೇ?–ಎಂದು ಯೋಚಿಸುವ ಜನಗಳೂ ಇದ್ದಾರೆ. ನಮ್ಮ ಕೆಂಟೋನ್‌ಮೆಂಟುಗಳಲ್ಲಿ ಕಾಣಸಿಗುವಂಥ ಅನೇಕ ಮಹಿಳೆಯರು ಇಲ್ಲಿಗೆ ಸಂಪಾದನೆಗಾಗಿ ಬಂದವರೆಂದು ಸ್ಪಷ್ಟವಾಗಿತ್ತು. ಅವರಂತೆ ವರ್ತಿಸಿದವರಲ್ಲಿ ಹಿಂದೂದೇಶದ ಸಂಸ್ಕೃತಿಯನ್ನುಂಡು ಬೆಳೆದ, ಸೀರೆ ಕುಪ್ಪಸಗಳ ನಮ್ಮ ನಾರಿಯರೂ ಇದ್ದಾರೆಂದು ಅನುಭವವಾದುದು ಈ ಬಹಿರಂಗ ಇಂದ್ರಲೋಕ ನೋಡಿದ ಬಳಿಕ. ಇಂಥ ಸಮಾಜದ ಒಟ್ಟು ಪರಿಣಾಮ ಹಡಗಿನಲ್ಲಿರುವ ನಮ್ಮ ಹಸಿ ತರುಣರ ಮೇಲೆ ಆಗದಿರುತ್ತದೆಯೇ? ವಿದ್ಯಾರ್ಜನೆಗೆ ಹೊರಟ ಅನೇಕ ಎಳೆಯರು, ಮಧ್ಯರಾತ್ರಿ ಕಳೆದ ಮೇಲೆಯೂ ಹೆಣ್ಣಿನ ಗುಂಗಿನಲ್ಲಿ ಅಲೆದಾಡುತ್ತಿದ್ದು, ರಾತ್ರಿ ಕಳೆಯುತ್ತದಲ್ಲಾ ಎಂಬ ಚಿಂತೆಯಲ್ಲಿರುವುದು ಕಾಣುತ್ತಿತ್ತು.

ಮನಃಶಾಸ್ತ್ರ ಅಭ್ಯಾಸಿಯಾದವನಿಗೆ–ಶೃಂಗಾರ ಒಲುಮೆಗಳು ಮಾನವನ ಜೀವನದಲ್ಲಿ ಎಂತಹ ಸೆಳೆತಗಳೆಂದು ತಿಳಿದೇ ಇದೆ. ಒಲುಮೆಯ ಜೀವನದಲ್ಲಿ, ಚೆಲುವು ಎಂಬುದು ಮುಖ್ಯವಾದ ಪರಿಕರ. ಅದೆಷ್ಟು ತೆಳ್ಳಗಿನ ಪರೆ ಇರಬಹುದು ಎಂಬುದನ್ನು ಇಂತಹ ಹಡಗುಗಳಲ್ಲಿ ಕಾಣಬಹುದು. ಚೆಲುವೆಂಬುದು ತೀರ ತೆಳ್ಳಗಿನ ಪರೆ. ಜೇಡರ ಬಲೆಗಿಂತ ತೆಳ್ಳಗಿನ ಪರೆ. ನಿಜಕ್ಕೂ ಸಂಸಾರ ವ್ಯಾಮೋಹಕ್ಕೆ ಅದೊಂದು ಪದಾರ್ಥ ಇದ್ದೇ ಇರಬೇಕೇ-ಎಂಬ ಅನುಮಾನವೂ ಬರುತ್ತದೆ. ಎಲುಬಿನ ಹಂದರಕ್ಕೂ, ಕೊಬ್ಬಿನ ಚೀಲಕ್ಕೂ "ಹೆಣ್ಣು" "ಗಂಡು"ಎಂದು ಚೀಟಿ ಬರೆದು ಅಂಟಿಸಿದರೂ-ಲೋಕ ಸಾಗೀತು. ಇವೇ ನಾಮಾಂಕಿತದ ಹೆಣ್ಣು ಗಂಡುಗಳು, ತಮ್ಮನ್ನು ಚೆಲುವುಗೊಳಿಸಲು ಬಳಸುವ ಉಡುಗೆ ತೊಡುಗೆಗಳಾದರೂ ಚೆನ್ನಾಗಿವೆಯೇ? ಅವುಗಳಲ್ಲಿ ಸೌಂದರ್ಯ ದೃಷ್ಟಿ(Aesthetic sense) ಎಂಬುದಿದೆಯೇ! ಅದೂ ಅನುಮಾನವೇ. ವ್ಯಕ್ತಿಗೆ ನಿಸರ್ಗಸಹಜ ಸೌಂದರ್ಯವಿದ್ದಾಗ ಎಲ್ಲರೂ "ಮಿಸ್ ಯುನಿವರ್ಸ್" ಆಗುತ್ತಾರೆ. ನಮ್ಮ ದೇಶದ ಮುಂಬಯಿ ಮೊದಲಾದ ನಗರಗಳಲ್ಲಿ ಈ ಬಗೆಯ ನಾಟಕದ ಪಾತ್ರಗಳನ್ನು ನಿತ್ಯ ಕಾಣುತ್ತೇವೆ. ನಾಟಕ ಪಾತ್ರಗಳ ಸಂಖ್ಯೆ ಸಣ್ಣದು, ಪ್ರೇಕ್ಷಕ ವರ್ಗ ಬಹು ದೊಡ್ಡದು. ಹಡಗಿನಲ್ಲಿ ಹಾಗಲ್ಲ–ಪ್ರೇಕ್ಷಕರೇ ವಿರಳ; ಪಾತ್ರಧಾರಿಗಳೇ ಧಾರಾಳ.

ಈ ಕಾಮಲೋಕದ ಜೀವನದಲ್ಲಿ ಉಡುಗೆ ಎಂಬುದು ಕೇವಲ ಪ್ರದರ್ಶನದ ವಸ್ತುವಾಗಿದೆ. ಕಣ್ಣುಮುಚ್ಚಾಲೆ ಆಟಕ್ಕೊಂದು ಮರೆ. ಶೃಂಗಾರಕ್ಕೂ

ಅದಕ್ಕೂ ಸಂಬಂಧವಿಲ್ಲದಷ್ಟೇ, ಹವೆಗೂ ಅದಕ್ಕೂ ಸಂಬಂಧವಿಲ್ಲ. ಹಿಂದೂ ಸಾಗರ ದಾಟುವ ಮೊದಲಿನ ಐದು ದಿನಗಳಲ್ಲಿ ಸೆಕೆ ಇತ್ತೆಂದು ತಿಳಿದು ಎಲ್ಲರೂ ಇದ್ದ ಬಟ್ಟೆ ಎಸೆಯುವವರೇ. ಹಾಗೆಂದು ಕೆಂಪು ಕಡಲಿನ ಸಮ ಶೀತೋಷ್ಣ ಹವೆಯಲ್ಲಿ ದಪ್ಪನಾದ ಉಣ್ಣೆಯ ಬಟ್ಟೆ, ತೊಗಲಿನ ಅಂಗಿಯನ್ನು ತೊಡುವವರುಂಟು. ಹವೆಗೆ ಇವರ ಮೈ ಸೂಕ್ಷ್ಮಸೂಚಿಯಾಗಿರಬೇಕು. ಆದರೆ ಭೂಮಧ್ಯ ಸಮುದ್ರದಲ್ಲಿ ಉಷ್ಣಮಾನ 20°Cಗೆ ಇಳಿದಾಗ ಇವರೇ ಜನರು, ಸೊಳ್ಳೆಪರದೆಯಂತಹ ಬಟ್ಟೆಗಳನ್ನೂ ಪ್ಲೇಸ್ಟಿಕ್ ಹಾಳೆಗಳನ್ನೂ ಧರಿಸಿ ತಿರುಗಿದ್ದೂ ಉಂಟು. ಅಂತೂ ಪಯಣದ ಹದಿನೆಂಟು ದಿನಗಳಲ್ಲಿ ನಮ್ಮ ಮುಂದೆ ಮೆರೆಯಿಸದ ಅಲಂಕಾರವಿರಲಿಲ್ಲ. ನಮ್ಮ ಹಡಗಿನ ಪ್ರೊಮನೇಡುಗಳು, ಲೌಂಜುಗಳು, ಆಟದ ನೆಲಗಳು—ಗಿಡವಿಲ್ಲದ ಒಂದು ಉದ್ಯಾನ. ಇಲ್ಲಿ ನಲಿಯುತ್ತಿದ್ದ ಪತಂಗಗಳಿಂದಾಗಿ ಉದ್ಯಾನವನ್ನು ಊಹಿಸಬೇಕು. ಎಲ್ಲವೂ ಪತಂಗಗಳಲ್ಲ; ಹಲವು ಭ್ರಮರಗಳೂ, ಗುಗ್ಗುರುಗಳೂ ಇದ್ದುವು.

ಒಬ್ಬ ಹಿಂದೀಯ ಪೃಥಕಾಯ, ಮಧ್ಯವಯಸ್ಕ, ನೋಟಕ್ಕೂ ಚೆಲುವನೇ ಆಗಿದ್ದ. ಆತನ ಪಯಣದ ಹಾದಿಯಲ್ಲಿ ಈ ಒಂದೆರಡು ದಿನಗಳೊಳಗಾಗಿ ವಿಚಿತ್ರ ರೂಪಿ ಪ್ರೇಯಸಿ ದೊರಕಿದಳು. ನಮ್ಮ ಹಡಗಿನಲ್ಲಿ ನೀಗ್ರೋ ದಂಪತಿಗಳಿಬ್ಬರಿದ್ದರು. ಅವರನ್ನು ಮೀರಿಸುವ ಕಾಳಿಕಾದೇವಿ ಅವಳು. ದುಂಡೂ, ಗಂಡೂ ಆಗಿ ಕಾಣಿಸುವ ಆಕಾರ; ಉರುಟು ಮುಖ. ಬಲು ಕ್ರೂರವಾದ ಕಣ್ಣುಗಳು. ವಿಮುಖ ಧ್ರುವಗಳು ಆಕರ್ಷಿಸುವಂತೆ ಆಕೆ ಈ ಬಿಳಿಯನನ್ನು ಸೆಳೆದು ತನ್ನ ಭಕ್ತನನ್ನಾಗಿ ಮಾಡಿಕೊಂಡಳು. ಮುಂದಿನ ಹದಿನೈದು ದಿನಗಳ ಕಾಲ ಅವರಿಬ್ಬರೂ, ಪ್ರಜ್ಞೆಯಿರುವ ವೇಳೆಯಲ್ಲೆಲ್ಲ ಒಬ್ಬರಿಗೊಬ್ಬರು ಅಕ್ಷರಶ: ಅಂಟಿಕೊಂಡಿದ್ದರು. ಮನೋ ದೌರ್ಬಲ್ಯಕ್ಕೂ ಒಂದು ಮಿತಿಯಿರಬೇಡವೇ—ಎಂದನಿಸುತ್ತದೆ.

ಹಡಗಿನಲ್ಲಿ ಆಟ ವಿನೋದಗಳಿದ್ದುವೆಂದೆ. ದಿನಬಿಟ್ಟು ದಿನ ನೃತ್ಯ ಇರುತ್ತಿತ್ತು, ಸಿನೆಮ ಇರುತಿತ್ತು. ಅವೆಲ್ಲ ತೀರ ಸಾಮಾನ್ಯ. ನಮ್ಮ ಹಡಗಿನಲ್ಲೇ, ಸಹಪ್ರವಾಸಿಗಳಾಗಿ ಮುಂಬಯಿಯ ವಜೀಫದಾರ್ ಸೋದರಿಯರಿದ್ದರು. ಈ ಲೋಕದಲ್ಲಿ ಅವರನ್ನು ಕಾಣದಿರುವುದು ಅಸಾಧ್ಯ. ಲಂಡನಿಗೆ ನೃತ್ಯ ಪ್ರದರ್ಶನಕ್ಕೆ ಹೊರಟ ಅವರು, ಹಡಗಿನಲ್ಲೂ ತಮ್ಮ ಪ್ರದರ್ಶನದ ಏರ್ಪಾಟು ಮಾಡಿದ್ದರು. ಅವರ ಅಭಿಮಾನಿಗಳು ಟಿಕೇಟು ವಿಕ್ರಯವನೂ

ತೊಡಗಿದರು. ಅದನ್ನು ಕಂಡಾಗ ಕೆಲವು ಪ್ರವಾಸಿಗಳಿಗೆ ಕೋಪವುಂಟಾ ಯಿತು. "ಏನು? ಇವರು ಹಡಗಿನಲ್ಲಿ ಹಣಮಾಡುವುದಕ್ಕೆ ಹೊರಟಿದ್ದಾರೆ ಯೇ? ಟಿಕೇಟು ತೆಗೆದುಕೊಳ್ಳಬೇಡಿ" ಎಂದು ಪ್ರಚಾರ ಮಾಡತೊಡಗಿದರು. ಕೊಳ್ಳಪವರಲ್ಲಿ ನಾನೊಬ್ಬ. ಕೊಳ್ಳಬಾರದೆಂದಿರಲಿಲ್ಲ. ಹೇಗೂ ಲಂಡನಿನಲ್ಲಿ ಕುಣಿಯುವರು. ಆಗಲೇ ನೋಡಿದ್ದರಾಯಿತು–ಎಂದು ಸುಮ್ಮನಿದ್ದೆ. ಇತ್ತ ಅವರ ಪ್ರಚಾರ ಬಲವಾದಂತೆ, ಪ್ರತೀಕಾರ ಬಲವಾಯಿತು. ನೃತ್ಯ ನಡೆಯು ಲಿರುವ ದಿನ, ಸ್ಥಳ, ತಾಸಿನಲ್ಲಿ ಬೇರೊಂದು ಪ್ರದರ್ಶನದ ಏರ್ಪಾಡಾಯಿತು. ಅದು ಧರ್ಮಾರ್ಥಕ್ಕೆ, "ಹಡಗಿನ ಸಹಪ್ರವಾಸಿಗಳ ಸಂತೋಷಕ್ಕೆ". ಇದ ರಿಂದಾಗಿ ವಜಿಫದಾರ್ ಸಹೋದರಿಯರ ಭಾರತೀಯ ನೃತ್ಯ ಪ್ರದರ್ಶನ ನಡೆಯಲೇ ಇಲ್ಲ. ಬದಲು "ಕೊಲರಾಡೊ ತ್ರಯರು" ಎಂಬ ಮೂವರು ಯಾಂಕಿಗಳ ನೃತ್ಯವಾಯಿತು. ಇಷ್ಟು ದಿನ ಯಾವೊಂದೂ ಬಣ್ಣ ಬೆಡಗಿಲ್ಲದೆ ಹಡಗಿನಲ್ಲಿ ಚಲಿಸುತ್ತಿದ್ದ ಒಬ್ಬ ಯೌವನಸ್ಥನೂ ಅವನ ಇಬ್ಬರು ಗೆಳತಿ ಯರೂ ಈ ಪ್ರದರ್ಶನಪಲ್ಲಿ ಭಾಗಿಗಳಾದರು. ಮೂವರೂ ಬಿಳಿಯ ಉಡುಗೆ ಯುಲ್ಲಿದ್ದರು. ಮೈ ಬಿಗಿವ ಬಿಳಿ ಚಲ್ಲಣ, ಅಂಗಿ ಆತನಿಗೆ; ಅಂಥ ಉಡು ಗೆಯ ಮೇಲೆ ಬಾಲೆ ನರ್ತಕಿಯರಂತೆ ನಿರಿಗೆಯುಳ್ಳ ಸ್ಕರ್ಟ್ ಉಳಿದ ಇಬ್ಬ ರಿಗೆ. ಅವರಿಬ್ಬರಲ್ಲಿ ಒಬ್ಬಳು ಕಬ್ಬಿಣದ ಮೈಯವಳು. ನೀಳವಾದ ಶರೀರ. ಇನ್ನೊಬ್ಬಳು ಕುಳ್ಳಗಿನವಳು. ಈ ಮೂವರೂ ತಮ್ಮ ಕಾಲುಗಳಿಗೆ ರೋಲರ್ ಸ್ಕೇಟ್ಸ್ ಕಟ್ಟಿಕೊಂಡು ಸುಮಾರು 15 ಅಡಿ ವ್ಯಾಸದ ಒಂದು ವೃತ್ತದೊಳಗೆ ನಿಂತು, ಬೊಗರಿಯಂತೆ ವಿಚಿತ್ರ ಗತಿಯಿಂದ ನಲಿದು ತೋರಿಸಿದರು. ಆ ಗಂಡಸೊಬ್ಬನೇ ತನ್ನ ಹಲ್ಲಿಂದ ಈ ಇಬ್ಬಿಬ್ಬರು ಕನ್ಯೆ ಯರನ್ನು ಕಚ್ಚಿ, ತೂಗಿಸಿ, ತಾನೂ ಬೊಗರಿಯಂತೆ ತಿರುಗುತ್ತ, ಅವರನ್ನೂ ತಿರುಗಿಸುತ್ತ, ಎಷ್ಟೆಷ್ಟೋ ಸೋಜಿಗದ ಕಸರತ್ತು ಮಾಡಿ ತೋರಿಸಿದ. ಆ ವೇಗ, ಗತಿ, ತಿರುಗಾಟದ ಚೆಲುವು, ಉಡುಗೆಯ ಸಮ್ಮೇಳ–ಎಲ್ಲವೂ ಸೇರಿ ಒಂದು ಅದ್ಭುತದ ನೋಟವಾಗಿ ಕಾಣುತ್ತಿತ್ತು.

ಅವನ ಆಟದ ಬಳಿಕ, ಲಂಡನಿನಲ್ಲಿ ಈಗ ನೆಲೆಸಿರುವ ಅಲ್ಲಾಬಕ್ಷ ನೆಂಬ ಭಾರತೀಯ ಮುದುಕನೊಬ್ಬ, ನಮ್ಮಮುಂದೆ ಬಂದು ಕೆಲವು ಜಾದೂ ಆಟಗಳನ್ನಾಡಿ ತೋರಿಸಿದ. ಅಲ್ಲಾಬಕ್ಷ ಹೆಸರಾದ ಜಾದುಗಾರನಂತೆ. ಅಂತೂ ಒಂದು ದಿನ ನಮ್ಮ ಬೇಸರ ಮರೆಯುವುದಕ್ಕೆ ಇಂತಹ ಸುಂದರ

ಸನ್ನಿವೇಶ ದೊರೆಯಿತು. ಇನ್ನೂ ಒಂದು ಮಾತು. ಹಡಗಿನಲ್ಲಿ ಈ ಕೊಲ ರಾಡೋತ್ರಯರು ತೀರ ಜನಸಾಮಾನ್ಯರಂತೆ ವರ್ತಿಸಿದ್ದರೂ ಅವರ ಮೇಲೆ ಉಳಿದವರ ಗೌರವ ಹೆಚ್ಚಿತು. ಅವರ ನಡತೆಗೂ ನಮ್ಮ ಕಲಾವಿದರ ನಡತೆಗೂ ಎಷ್ಟೆಷ್ಟೋ ಅಂತರ. ಮುಂದೆ ಲಂಡನಿನಲ್ಲಿ ವಜೀಫ್‌ದಾರ್ ಸೋದರಿಯರ ನೃತ್ಯ ನಡೆಯಿತು. ನನ್ನ ಮಿತ್ರರೊಬ್ಬರು, ಹೊಲೆಂಡಿನ ಕಲಾಭಿಜ್ಞರು, ಅದಕ್ಕೆ ಹೋಗಿದ್ದರು. ಅವರು ನಮ್ಮ ದೇಶದಲ್ಲಿ ಹದಿನೆಂಟು ವರ್ಷಗಳ ಕಾಲ ಸಂಗೀತ, ನೃತ್ಯ ಮೊದಲಾದವುಗಳ ಅಭ್ಯಾಸಮಾಡಿದವರು. ಅವರ ಅಭಿಪ್ರಾಯವನ್ನು ನಾನು ಕೇಳಿದಾಗ "ಅದು ಕಲೆ ಎನಿಸಲೂ ಇಲ್ಲ, ಭಾರತೀಯವೂ ಅಲ್ಲ"ಎಂದಂದರು. ಅವರ ಕಟುವಾದ ವಿಮರ್ಶೆಯನ್ನು ನಾನು ಮಾತಿನಲ್ಲಿ ಇನ್ನಷ್ಟು ಮಿದುವಾಗಿ ಹೇಳಿದ್ದೇನೆ.

ಐದು ದಿನಗಳ ಕಡಲ ಪಯಣ ಕಳೆದು, ಅರೇಬಿಯದ ಒಂದು ಕುಡಿಯಲ್ಲಿರುವ ಏಡನ್‌ಬಂದರನ್ನು ನಾವು ರಾತ್ರಿ ವೇಳೆಗೆ ಸಮೀಪಿಸಿದೆವು. ಬೆಟ್ಟವೊಂದರ ಮೇಲಿನ ವಿದ್ಯುದ್ದೀಪಗಳು ಕಣ್ಣಿಗೆ ಕಾಣಿಸುತ್ತಿದ್ದುವು. ಏಡನ್‌ನಲ್ಲಿ ಹಡಗು ಕಡಲ ದಂಡೆಗೆ ತಾಗದೆಯೇ ದೂರ ನಿಂತಿದ್ದು, ಮೂರು ತಾಸುಗಳ ಬಳಿಕ ಪಯಣ ಮುಂದುವರಿಸಿತು. ಅಲ್ಲಿಂದ ಮೆಲ್ಲಗೆ ಹಿಂದೂ ಸಾಗರವನ್ನು ಬಿಟ್ಟು ಕೆಂಪು ಸಮುದ್ರವನ್ನು ಅದು ಹೊಕ್ಕಿತು. ಹೆಸರಿಗಷ್ಟೇ ಅದು ಕೆಂಪು ಸಮುದ್ರ. ಅಲ್ಲಿನ ನೀರು ಕಡು ನೀಲವಾಗಿತ್ತು. ಈ ಸಮುದ್ರದ ಹಾದಿ ನಾಲ್ಕು ದಿನಗಳದು. ಕೆಲವೇ ಬಾರಿ ನಮಗೆ ಎಡಬಲದ ಕಡಲ ತೀರ ಕಾಣಿಸಿತೇ ಹೊರತು, ಉಳಿದ ವೇಳೆ ನೆಲವೂ ಕಾಣುವುದಕ್ಕಿರಲಿಲ್ಲ. ಎಣ್ಣೆ ಸಾಗಿಸಿಕೊಂಡು ಹೋಗುತಿದ್ದ ನೂರಾರು ಹಡಗುಗಳು ಆಗಾಗ ಸಂಧಿಸುತ್ತಿದ್ದುವು. ಹವೆ ಉಷ್ಣವಾಗಿತ್ತು. ಬಾನು ಬರಿದಾಗಿತ್ತು. ಪಯಣ ಈಗಾಗಲೇ ಬೇಸರ ತರತೊಡಗಿತ್ತು. ದಿನ ಸರಿದಂತೆ ಹಗಲಿನ ಮಾನ ದೊಡ್ಡದಾಗುತಿತ್ತು; ರಾತ್ರಿ ಕಡಿಮೆಯಾಗುತಿತ್ತು. 6½ ಘಂಟೆಗೆ ಕಂತುತಿದ್ದ ಸೂರ್ಯ ಈಗ 8 ಕ್ಕೆ ಮುಳುಗುತ್ತಿದ್ದಾನೆ. ನಮ್ಮ ಬೇಸರ ಹೆಚ್ಚಿ, ಎಂದು ನೆಲ ಕಂಡೇವು ಎಂಬ ಆತುರ ಉಂಟಾಗಿತ್ತು. 'ನಾಳೆಯ ಬೆಳಿಗ್ಗೆ ಸುಯೆಜ್ ಸೇರುತ್ತೇವೆ' ಎಂದಾಗ ನಮಗಾದ ಸಂತೋಷ ಅಷ್ಟಿಷ್ಟಲ್ಲ. ಆದರೆ ಅನುಮಾನ; ಹಡಗಿಂದ ಇಳಿಯಲು ಬಿಡದಿದ್ದರೆ—ಎಂಬ ಸಂದೇಹ.

ಮರುದಿನ ಬೆಳಿಗ್ಗೆ ನಮ್ಮ ಎಡಕ್ಕೆ ಆಫ್ರಿಕಾಖಂಡದ ಭೂಮಿಯ ಸೆರಗು

ಕಾಣಿಸಿತು. ಭವ್ಯವಾದ ಬೆಟ್ಟದ ಸೆರಗು. ಎಲೆ ಗಿಡಗಳ ಹಸುರಿರಲಿಲ್ಲ. ಆದರೂ ಅಲ್ಲಿ ಹರಡಿದ ವಿಶಾಲವಾದೊಂದು ಎಣ್ಣೆ ಶುದ್ಧಿಯ ಕಾರ್ಖಾನೆಯ ನೋಟವು ನಮಗೆ ಹರ್ಷ ಉಂಟು ಮಾಡಿತು. ಆ ದಿನ ಹವೆ ಬದಲಾಗಿತ್ತು. ಬಾನಿನಲ್ಲಿ ಮುಗಿಲು ಕವಿದಿತ್ತು. ಶೀತ ಗಾಳಿ ಬೀಸುತಿತ್ತು. ಮೂಡಣ ಬಾನಿನಲ್ಲಿ ಮುಗಿಲಿಲ್ಲದಿದ್ದುದರಿಂದ, ಸೂರ್ಯ ರಶ್ಮಿ ತನ್ನ ಅರಸಿನ ಬಣ್ಣವನ್ನು ನೀಲ ನೀರಿನ ಮೇಲೆ ಚೆಲ್ಲಿ, ಅದನ್ನು ಹೊಳೆವ ಎಳೆ ಹಸುರಾಗಿ ಮಾಡಿತ್ತು. ಆ ವೇಳೆಗೆ ಸರಿಯಾಗಿ ಹಡಗಿನವರು "ಸುಯೆಜ್‌ನಿಂದ ಇಳಿದು ಕೈರೋ ನಗರಕ್ಕೆ ಹೋಗಿ, ಅಲ್ಲಿಂದ ಪೋರ್ಟ್‌ಸಯ್ಯದ್ ರೇವಿಗೆ ಹೋಗಲು ಇಚ್ಛೆಯಿದ್ದವರಿಗೆ ಸೌಕರ್ಯ ಕಲ್ಪಿಸುತ್ತೇವೆ" ಎಂದರು. ಅದಕ್ಕೆ ತೆರ 7 ಪೌಂಡು. ಈಜಿಪ್ಟ ಸರಕಾರದ ಅಧಿಕಾರಿಗಳು ಹಡಗಿಗೇನೆ ಬಂದು 'ವೀಸಾ' ಕೊಡುತ್ತಾರೆ. ವೀಸಾ ಧರ್ಮಾರ್ಥ ದೊರೆತರೂ 7 ಪೌಂಡು ಅಂದರೆ ಹೆಚ್ಚಿಗೆಯೇ ಎನಿಸಿತು. ಅನಾಯಾಸವಾಗಿ ಆಫ್ರಿಕದ ಚೂರೊಂದನ್ನು ಕಾಣುವ ಈ ಸಂದರ್ಭವನ್ನು ಬಿಡಬಾರದೆಂದು ಅಷ್ಟು ಹಣ ಕೊಟ್ಟು ಟಿಕೇಟ್ ಪಡೆದೆ. ನನ್ನಂತೆ ಆತುರರಾದವರ ಸಂಖ್ಯೆ ನೂರರಷ್ಟಿತ್ತು. ಹಡಗಿಗೇನೆ ಈಜಿಪ್ಟ ಸರಕಾರದ ಅಧಿಕಾರಿಗಳು ಬಂದು, ನಮ್ಮ ಪಾಸ್‌ಪೋರ್ಟುಗಳಿಗೆ ಮೊಹರು ಒತ್ತಿದರು. ಸುಯೆಜ್ ಕಾಲುವೆಯ ಸಮ್ಮುಖದಲ್ಲಿ ಹಡಗನ್ನು ಇಳಿದೆವು; ನಮ್ಮನ್ನು ಒಯ್ಯಲು ಬಂದಿದ್ದ ಲಾಂಚನ್ನು ಸೇರಿದೆವು. ನಾಲ್ಕು ಲಾಂಚ್‌ಗಳು ಬಂದಿದ್ದುವು. ಹವೆ ತುಂಬ ಶೀತವಾಗಿದ್ದುದರಿಂದ ಮೇಲಂಗಿ ತೊಟ್ಟೇ ಹೊರಟಿದ್ದೆವು.

ಅರೆ ತಾಸಿನಲ್ಲಿ ಲಾಂಚ್‌ಗಳು ಸುಯೆಜ್ ಬಂದರದ ದಂಡೆಯನ್ನು ಸೇರಿ, ನಿಂತೂ ಆಯಿತು. ಫೆಜ್ ಧರಿಸಿದ ಈಜಿಪ್ಟಿನ ಕೆಲವರು ನಮ್ಮನ್ನು ಸ್ವಾಗತಿಸಿದರು. ನಾವೀಗ ಒಂದು ಪ್ರವಾಸಿಮಂಡಲದ ಅತಿಥಿಗಳಾದೆವು. ಪೋರ್ಟ್‌ಸಯ್ಯದಿನ ತನಕ ಅವರೇ ನಮ್ಮ ಮಾರ್ಗದರ್ಶಕರು. ನಮ್ಮನ್ನು ಒಂದು ಕಟ್ಟಡದ ಬಳಿ ಕರೆದೊಯ್ದರು. ಅಲ್ಲಿಗೆ ಸುಮಾರು ಇಪ್ಪತ್ತು ಮೋಟರ್ ಗಾಡಿಗಳು ಬಂದುವು. ಐವರಿಗೆ ಒಂದೊಂದು ಬಂಡಿಯಿತ್ತು. ನಮ್ಮ ಬಂಡಿಯಲ್ಲಿ ನಾಲ್ವರೇ ಇದ್ದರು. ಹೀಗೆ ಸುಮಾರು ಇಪ್ಪತ್ತು ಮೋಟರ್‌ಗಳ ಕೆರವಾನ್ ೧೭೦ ಮೈಲ್ ದೂರದ ಕೈರೊ ನಗರಕ್ಕೆ ಹೊರಟಿತು. ಡಾಮರು ಬಳಿದ ದಾರಿ; ಆಚೀಚೆ ಹೊಲಮನೆಗಳ, ಅಂಗಡಿಗಳ, ಖರ್ಜೂರದ ತೋಟ

ಗಳ, ಎಣ್ಣೆ ಕಾರ್ಖಾನೆಯ ದೃಶ್ಯಗಳು. ನಮ್ಮ ಡ್ರೈವರ್ ಮಹಾಶಯ ಫ್ರೆಂಚ್ ಮತ್ತು ಇಂಗ್ಲಿಷುಗಳನ್ನು ಆಡಬಲ್ಲ. ಆತ ಆಚೀಚಿನ ಸ್ಥಳಗಳ ಪರಿಚಯ ಹೇಳಿದ. ಬರಿಯ ಎರಡು ತಿಂಗಳ ಹಿಂದೆ ಈಜಿಪ್ಟಿನವರಿಗೂ ಬ್ರಿಟಿಷರಿಗೂ ಆದ ಸ್ಥಳಿಕ ಘರ್ಷಣೆಯನ್ನು ಕುರಿತು ಬಣ್ಣಿಸಿದ. ತಮ್ಮ ಜನ ಹಾಳು ಮಾಡಿದ ಬ್ರಿಟಿಷ್ ಮಿಲಿಟರಿ ವಾಹನಗಳನ್ನು ತೋರಿಸಿದ. ಅವನ ಮಾತುಗಳನ್ನು ಕೇಳುತ್ತ ಮುಂದುವರಿದೆವು. ಬಹು ದೂರದ ತನಕ ದಾರಿಯ ಇಕ್ಕಡೆಗಳಲ್ಲಿ ಮಿಲಿಟರಿ ತಡೆಗಳು, ಶಿಬಿರಗಳು, ವಾಹನಗಳು ಕಾಣಿಸುತ್ತಿದ್ದುವು. ದಾರಿಯುದ್ದಕ್ಕೂ ಎಣ್ಣೆ ಸಾಗಿಸುವ ಮೋಟರುಗಳ ಸಂಚಾರವಿತ್ತು. ದಾರಿಯ ನೋಟದಲ್ಲಿ ರಮಣೀಯತೆಯೇನೂ ಇದ್ದಿರಲಿಲ್ಲ.

ನನ್ನ ಬಂಡಿಯಲ್ಲಿ ಕುಳಿತವರೆಂದರೆ-ಮಹಾರಾಷ್ಟ್ರದ ಒಬ್ಬ ಮಿಲಿಟರಿ ಎಂಜಿನಿಯರ್; ಕಲಿಯುವುದಕ್ಕೂ ಲಂಡನಿನಲ್ಲಿ ಉಪಾಧ್ಯಾಯಿ ಆಗಿರುವ ತಮ್ಮ ಹೆಂಡತಿಯನ್ನು ಭೇಟಿಯಾಗುವುದಕ್ಕೂ ಹೊರಟವರು. ಮತ್ತಿಬ್ಬರು ಪಾರಸಿ ತರುಣರು. ಓದಲು ಲಂಡನಿಗೆ ಹೋಗುವವರು; ಪಾಕಿಸ್ಥಾನದ ಪ್ರಜೆಗಳು. ಹೊರಟ ಸ್ವಲ್ಪದರಲ್ಲೇ ನಮ್ಮದು ತಾಳಮೇಳವಿಲ್ಲದ ಬಳಗ ಎಂದೆನಿಸಿತು. ವಯಸ್ಸಾದ ನಾವಿಬ್ಬರು ಕೈರೊ ಮ್ಯೂಸಿಯಂ, ಪಿರಮಿಡ್ಡುಗಳನ್ನು ನೋಡಲು ಆತುರಗೊಂಡವರು. ಜತೆಗೆ ಬ್ರಿಟಿಷರನ್ನು ಕುರಿತು ಅಲ್ಲಿನ ಜನರ ಅಭಿಪ್ರಾಯ ಹೇಗಿದೆ–ಎಂದು ತಿಳಿಯಲು ಕುತೂಹಲಿಗಳು. ನಮ್ಮ ತರುಣ ಮಿತ್ರರ ಸ್ವಭಾವ ಬೇರೆಯಾಗಿಯೇ ಕಾಣಿಸಿತು. ಹಡಗಿನ ಶಿಕ್ಷಣದಿಂದಲೋ, ಅದಕ್ಕೂ ಮೊದಲಿನ ತರಬೇತಿಯಿಂದಲೋ ಏನೋ, ಅವರ ಕನಸು ಬೇರೆಯಾಗಿಯೇ ಇತ್ತು. ಅವರ ಸಂಭಾಷಣೆ ಕೈರೋ ನಗರದ ಸುರಸುಂದರಿಯರನ್ನು ಕುರಿತಾಗಿತ್ತು. ನಮ್ಮ ರಸಿಕನಾದ ಡ್ರೈವರ್, ಈ ಶೃಂಗಾರ ಭಕ್ತರ ಮುಂದೆ, ಮಾತಿಗೆ ಅಡಚಣೆ ಇಲ್ಲದೆ, ಶ್ಲೀಲ ಅಶ್ಲೀಲಗಳ ಸೀಮೆಯನ್ನು ದಾಟಿ ಬಣ್ಣಿಸುತ್ತಿದ್ದ. ಅಷ್ಟೇ ಉತ್ಸಾಹ ಅವನಿಗೆ ಬ್ರಿಟಿಷರನ್ನು, ಫರೋಕ್ ದೊರೆಯನ್ನು ಬಯ್ಯುವುದರಲ್ಲಿ. "ಫರೋಕ್ ಬೀದಿಗೆ ಬರಲಾರ, ಜನ ಕೊಂದಾರೆಂದು ತಿಳಿಯದೇ!" ಎನ್ನುತ್ತಿದ್ದ. ಅವನ ಅಭಿಪ್ರಾಯದಲ್ಲಿ ಫರೋಕ್ ದೊರೆ ಬ್ರಿಟಿಷರ ಪರ. ಹೀಗೆ ಹಾದಿಯಲ್ಲಿ ನಮ್ಮ ಮಾತಿನ ಸರಸವಿರಸಗಳು ಎಷ್ಟರ ತನಕ ಸರಿಯುತ್ತಿದ್ದುವೊ ಏನೋ! ಅವನೊಮ್ಮಿಂದೊಮ್ಮೆಗೆ ಹವೆ ಬದಲಿಸಿತು.

ನಮ್ಮದು ನೂಲು ಹಿಡಿದಷ್ಟು ನೇರಾದ ಮಾರ್ಗ. ಅದರ ಒಂದು ಕಡೆ ಉನ್ನತ ಬೆಟ್ಟಗಳ ಸಾಲು. ಇನ್ನೊಂದು ಕಡೆ ಸಾಮಾನ್ಯ ಎತ್ತರದ ಗುಡ್ಡಗಳು. ಗಿಡಮರಗಳಿರಲಿಲ್ಲ. ಎಲ್ಲೆಲ್ಲೂ ಮರಳು ಹರಳುಗಳು ಹಾಸಿದ್ದವು. ಕೆಲವೇ ಮುಳ್ಳುಗಿಡಗಳು ಕಾಣಿಸುತ್ತಿದ್ದವು. ದೂರದ ಬಾನು ಮಸುಕಾಗಿತ್ತು. ಈ ಮಸುಕು ನಾವು ಹೊರಟ ಅರಿಮುಕ್ಕಾಲು ತಾಸಿನೊಳಗೆ ದಟ್ಟಿಸಾಗುತ್ತ ಬಂದು, ನಮ್ಮ ನೋಟ ಬರಿಯ ಅರ್ಧಮೈಲು ದೂರವನ್ನು ಇಣಕದಂತೆ ಮಾಡಿತು. ಹವೆ ಉಷ್ಣಗೊಂಡಿತು. ನಾವು ಮೇಲಂಗಿ ಕಳಚುವಂತಾಯಿತು. ಗಾಳಿ ಬೀಸತೊಡಗಿತು. ಗಾಳಿಯ ಜತೆಗೆ ಧೂಳೂ, ಉಸುಬೂ ಬರತೊಡಗಿದುವು. ನಾನು ಇಂತಹ ಗಾಳಿಯನ್ನು ರಜಪುತಾನದಲ್ಲಿ ಕಂಡಿದ್ದೆ. ಸೆಕೆಯಷ್ಟೇ ಹೆಚ್ಚಿಗೆ–ಎಂದು ಮಾತು ಮುಂದುವರಿಸಿದೆ. ಮಾತಿನ ಗಮನ ಗಾಳಿಯನ್ನೇ ಕುರಿತು ಸಾಗಬೇಕಾಯಿತು. ಈ ಮರಳ್ಗಾಳಿ ಹೆಚ್ಚಿನ ಆರ್ಭಟಿಯಿಂದ ಬರತೊಡಗಿ, ಮೋಟರಿನ ಗಾಜಿನ ಕಿಟಿಕಿಗಳ ಎಡೆಗಳಿಂದಲೂ ನುಸುಳಿ, ನಮ್ಮನ್ನು ಅಭಿಷೇಕ ಮಾಡತೊಡಗಿತು. ಒಮ್ಮೆಗೇ ಸೆಕೆ ಉಲ್ಬಣಿಸಿತು. ಮುಂದೆ, ಮುಂದೆ–ಎನ್ನುವಾಗ ಮುಂದಿಲ್ಲವಾಯಿತು. ನಾಲ್ಕು ಸುತ್ತಲೂ ಮರಳಿನ ತೆರೆಯು ಕವಿದು, ಬಂಡಿಯ ಮುಂದೆ ಹತ್ತಡಿ ದೂರವೂ ಕಾಣಿಸದಷ್ಟು ಧೂಳಿನ ದಟ್ಟಣಿ ಬೆಳೆಯಿತು. ಮರಳು ಜಡಿಮಳೆ ಬಡಿದಂತೆ ಬಂಡಿಯನ್ನು ಬಡಿಯುವ ಅಬ್ಬರ ಕೇಳಿಸುತ್ತಿತ್ತು. ಹಿಂದಿಂದ, ಮುಂದಿಂದ ಬರುವ ಬಂಡಿಗಳ ಕೂಗು, ನಮ್ಮ ಬಂಡಿಯ ಹಾರ್ನಿನ ಕೂಗು, ಗಾಳಿಯ ಮೊರೆತ ಏಕನಾದವಾಯಿತು. ಕಾರುಗಳು ನಡುಹಗಲಲ್ಲಿ ದೀಪ ಬೆಳಗಿದವು. ಬಂಡಿಗಳ ವೇಗ ತಾಸಿಗೆ 50 ಮೈಲಿದ್ದುದು ಹೋಗಿ 5ಕ್ಕೆ ಇಳಿಯಿತು. ಮುಂದೆ ಅದೂ ಸಾಗದೆ, ನಮ್ಮ ಬಂಡಿ ನಿಲ್ಲಬೇಕಾಯಿತು. ನಿಂತುದೇ ತಡ; ಹಿಂದಿನ ಬಂಡಿಯೊಂದು ಕುರುಡಾಗಿ ಬಂದು ನಮ್ಮ ಬಂಡಿಗೆ ಢಿಕ್ಕಿ ಹೊಡೆಯಿತು. ಎರಡರ ಬಂಪರುಗಳು ಸಿಲುಕಿ ಕೊಂಡುವು. ಅಪಘಾತದ ಸದ್ದು ಕೇಳಿ ಎದ್ದೆವು. ಕದವನ್ನು ತೆರೆದೆವು. ಮುರಿದ ದೋಣಿಯನ್ನು ನೀರು ನುಗ್ಗುವಂತೆ ಬಿರುಗಾಳಿ, ಧೂಳು ನುಗ್ಗಿತು–ನಾಲ್ಕು ಸುತ್ತಲಿಂದ. ಹೊರಗೆ ಬಾರದೆ ಗತಿಯಿಲ್ಲ. ಸಿಕ್ಕಿಕೊಂಡ ಗಾಡಿಗಳನ್ನು ಎತ್ತಿ ಬಿಡಿಸಬೇಕಿತ್ತು.

ಕದ ತೆರೆದು ಹೊರಕ್ಕೆ ಬಂದರೋ! ಕಣ್ಣು, ಬಾಯಿ, ಕಿವಿ, ಮೂಗುಗಳಿಗೆಲ್ಲ ಮರಳು ಹರಳುಗಳ ಏಟು. ಕಣ್ಣು ಮುಚ್ಚಿ, ಕಿವಿಗೆ ಅಂಗಿ ಅಡ್ಡ

ಹಿಡಿದುಕೊಂಡು, ತಳ್ಳುವ ಗಾಳಿಗೆ ತೆವಳುತ್ತ ಕುರುಡರಂತೆ ಬಂಡಿಯನ್ನೆ ತ್ತಲು ಕೈ ಹಾಕಿದರೆ ಮೈ ಜುಮ್ಮೆನಿಸಿತು. ಬಿರುಗಾಳಿಯಿಂದ ವಿದ್ಯುತ್ತು ಹುಟ್ಟಿ ಬಂಡಿಯು ಲೋಹದ ಕವಚವನ್ನು ಆವರಿಸಿತ್ತು. ಅದೂ ಒಂದು ಅನುಭವ! ಹಾಗೂ ಹೀಗೂ ನರಕಸುಖ ಅನುಭವಿಸಿ, ಬಂಡಿಯನ್ನು ಬಿಡಿಸಿಕೊಂಡೆವು. ಗಾಳಿಯು ತುಸು ಮೆಲ್ಲಗಾಯಿತೆಂಬ ಭ್ರಮೆಯಿಂದ ಹೊರಟೆವು. ಅದು ಭ್ರಮೆಯೋ. ಡಾಮರು ಬಳಿದ ರಸ್ತೆಗೂ ಆಚೀಚಿನ ಮರಳಿನ ದಿನ್ನೆಗೂ ಅಂತರ ಕಾಣದೆ ಮರಳನ್ನು ಹೊಕ್ಕೆವು. ಚಕ್ರಗಳು ಹೂತುಕೊಂಡುವು. ಇನ್ನೊಮ್ಮೆ ಹೊರಗೆ ಬಂದು, ಉಸುಬಿನಲ್ಲಿ ಮಿಂದುದಾಯಿತು. ಆಗ ನಮ್ಮ ಚೆಲುವನ್ನು ನೋಡಬೇಕಾಗಿತ್ತು. ಮೈಮೇಲೆ ಅಂಗುಲ ದಪ್ಪದ ಧೂಳು; ತಲೆಗೂದಲು ಪರಶಿವನ ಜಟೆ. ಈ ರೂಪವನ್ನು ಹೊತ್ತು ಕೈರೋ ನಗರ ವನ್ನು ಸೇರುವುದು ಹೇಗೆಂಬ ಚಿಂತೆ. ಅತ್ತ ಸೆಕೆ; ಇತ್ತ ನೀರಡಿಕೆ, ಕೈರೋ ಸೇರಲು ಸಾಧ್ಯವೇ-ಎಂಬ ಭೀತಿ. ಇಂಥ ಆವಾಂತರದಲ್ಲಿ ಎರಡು ತಾಸಿನ ಕಾಲ ಸಿಲುಕಿಕೊಂಡು ನರಳಿದೆವು. ಇಂಥ ಅಪೂರ್ವದ ಗಾಳಿ ಈಜಿಪ್ಟಿ ನಲ್ಲಿ ವರ್ಷಕ್ಕೊಮ್ಮೆ ಬಂದೀತಂತೆ. ಅದು ನಾವು ಬಂದ ದಿನವೇ ನಮ್ಮನ್ನು ಹುಡುಕಿಬರಬೇಕೆ? ಇದು ಅಪೂರ್ವದ್ದಾದಷ್ಟೇ ಅದ್ಭುತ. ನಮ್ಮ ಊರಲ್ಲಿ ತಪಸ್ಸುಮಾಡಿದರೂ ಅಂತಹ ಅನುಭವ ದೊರೆಯಲಾರದು.

ಹದಿನೆರಡು ಗಂಟೆಗೆ ಕೈರೋ ಸೇರಬೇಕಾದ ನಾವು, ಒಂದು ಗಂಟೆಗೆ ಸೇರಿದೆವು. ಅನಂತರ ಎಲ್ಲಿಗೆ ಹೋಗಬೇಕು? ಏನು ಮಾಡಬೇಕು?–ಎಂ ಬುದು ನಮಗೆ ತಿಳಿದಿರಲಿಲ್ಲ. ನಮ್ಮ ಮಾರ್ಗದರ್ಶಕರೆಲ್ಲೊ! ನಾವೆಲ್ಲೊ! ಉಳಿದ ಮಂದಿಗಳೆಲ್ಲೊ! ಎಲ್ಲರೂ ಇದೇ ಅನುಭವದಿಂದ ಹಣ್ಣಾಗಿ ಕೈರೋ ಮ್ಯೂಸಿಯಮಿನ ಮುಂದೆ ಕಲೆಯುವಾಗ, ಮತ್ತಷ್ಟು ಹೊತ್ತು ಸರಿದಿತ್ತು. 'ಮ್ಯೂಸಿಯಮ್ ನೋಡುವ' ಎಂದು ನನ್ನಂತಹರು ಹೇಳಿದರೆ, 'ಮುಖ ತೊಳೆ ಯುವ' ಎಂದು ಮತ್ತೊಬ್ಬರು; 'ಹಸಿವೆ, ನೀರಡಿಕೆ' ಎಂದು-ಇನ್ನು ಹಲವರು. ತುಟಿಯ ಬಣ್ಣ, ಮುಖದ ಪೌಡರು ಮಾಸಿತಲ್ಲ ಎಂದು ಜತೆಗಿರುವ ತರುಣ ವೃದ್ಧ ಕನ್ನೆಯರು ಹಲುಬುವಾಗ–ಯಾವ ತೀರ್ಮಾನವೂ ಇಲ್ಲದೆ ಅರ್ಧ ತಾಸು ಕಳೆದವು. ಅನಂತರ ಎಲ್ಲರೂ ಕೈರೋವಿನ ದೊಡ್ಡ ಹೊಟೇಲೊಂ ದನ್ನು ಸೇರಿದೆವು. ಒಂಟೆಯ ಬಣ್ಣ ತಾಳಿದ ನಾವು ಸ್ನಾನದ ಮನೆ ಹೊಕ್ಕೆವು. ಅಲ್ಲಿರುವ ಎರಡು ನಲ್ಲಿಗಳ ಮುಂದೆ ನಲವತ್ತು ಐವತ್ತು ಜನ ಕಾದಾಡಿ,

ಮೈಯ ಧೂಳಿಗೆ ನೈಲ್ ನದಿಯ ನೀರನ್ನು ಸೇರಿಸಿ, ಕೆಸರಿನ ಲೇಪ ಮಾಡಿ ಮೈ ಉಜ್ಜಿಕೊಂಡೆವು. ಹಾಗೆ ಉಜ್ಜಿಕೊಂಡ ಟವೆಲೇ ನಮ್ಮ ಶುಚಿಗೆ ಸಾಕ್ಷಿ. ಅಲ್ಲಿಂದ ಊಟದ ಚಿಂತೆ. ನಮ್ಮ ಮಾತ್ರೆಲ್ಲ ದಾರಿಯ ಅನುಭವವನ್ನು ಕುರಿತು ಸಾಗಿತ್ತು. ಹೊಟೇಲಿನ ಸೇವಕರು, ದಾಂಡಿಗರಾದ ಕರಿಯ, ಬಿಳಿಯ ಅರಬರು ನಮ್ಮೆಲ್ಲರಿಗೆ ತರಕಾರಿ, ಚದುರಂಗ ಮಿಶ್ರಿತವಾದ ಆಹಾರ ತಂದರು. ಸೇವಿಗೆಯಂತಹ ಸ್ಪ್ರಗಟಿ, ಬೇಯಿಸಿದ ಬೀನ್ಸ್, ಬಟಾಟಿ, ಜತೆಗೆ ಮಾಂಸದ ಪಾಳಿ. ನಾನೂ ನನ್ನ ಮಿತ್ರರೂ 'ಊಹೂಂ' ಎಂದೆವು. ಅರಬ ಸೇವಕ 'ನಿಮಗೆ ಮಾಂಸ ಬೇಡವಾಗಿದ್ದರೆ ತೆಗೆದಿರಿಸಿ' ಅನ್ನುತ್ತಾನೆ. ನಮ್ಮ ಮಡಿ ಬಿಡಲಿಲ್ಲ. ಇನ್ನಷ್ಟು ಸಮಯ ಸರಿದ ಮೇಲೆ, ಬೇರೆಯಾಗಿ ಬೇಯಿಸಿದ ಬಟಾಣಿ, ಸ್ಪ್ರಗಟಿಗಳನ್ನು ತರಿಸಿ ತಿಂದೆವು.

ಎಲ್ಲರೂ ಕಲೆತು ಹೊಟೇಲನ್ನು ಬಿಡುವಾಗ ಮಧ್ಯಾಹ್ನದ ಮೂರೂವರೆ ತಾಸು ಕಳೆದಿತ್ತು. ಮೋಟರುಗಳು ಕಾದಿದ್ದುವು. ಅಲ್ಲಿಂದ ಕೈರೋ ನಗರದ ಇನ್ನೊಂದು ತುದಿಯಲ್ಲಿರುವ 'ಗಿಜೀ' ಎಂಬಲ್ಲಿಗೆ ಹೊರಟೆವು. ಅಲ್ಲಿವೆ — ಪ್ರಾಚೀನ ಯುಗದ ಪಿರಿಮಿಡ್ಡುಗಳು. ಕೈರೋ ಚೆಲುವಿನ ಊರು; ಶುಚಿಯಾದ ನಗರ. ಹತ್ತು ಹದಿನೆರಡು ಮಹಡಿಗಳುಳ್ಳ ಮನೆಗಳು ತೀರ ಸಾಮಾನ್ಯ. ಮೊಟಾರುಕಾರುಗಳ ಓಡಾಟ ಅತ್ಯಧಿಕ. ಅಂಕೆಯಿಲ್ಲದ ವೇಗ ಅವಕ್ಕೆ. ಹಾದಿಯಲ್ಲಿ ಕರಿಯರ, ಬಿಳಿಯರ ಸಮಾಗಮ; ಗರೀಬರ ಶ್ರೀಮಂತರ ಸಮಾಗಮ. ಈ ನಗರದ ನಡುವೆ ಈಜಿಪ್ಟಿನ ಭಾಗ್ಯವಾದ ನೈಲ್ ನದಿಯು ಹರಿಯುತ್ತಿದೆ. ಅದನ್ನು ನೋಡಿ 'ನೈಲೇ!' ಎಂದನಿಸಿತು. ಇದ್ದ ಗೌರವ ಮಾಯವಾಯಿತು. ಬಡಪಾಯಿ ನದಿ; ನಮ್ಮ ಊರಿನ ಸಾಮಾನ್ಯ ನದಿಯ ಹರಹೂ ಅದಕ್ಕಿಲ್ಲ. ಗಂಗೆ, ತುಂಗೆ, ಗೋದಾವರಿಯರಿಗೆ ಅದನ್ನು ಹೋಲಿಸುವುದಕ್ಕಂತು ಇಲ್ಲವೇ ಇಲ್ಲ.

ನಮ್ಮ ಮೋಟರು ನಮ್ಮನ್ನು ವಾಯುವೇಗದಿಂದ ನಗರದ ಕೊನೆಗೆ ತಂದು ಮುಟ್ಟಿಸಿತು. ಅನತಿದೂರದಲ್ಲಿ ಬೆಟ್ಟದಾಕೃತಿಯ ಪಿರಿಮಿಡ್ಡುಗಳು ಕಾಣಿಸುತಿದ್ದುವು. ಪ್ರವಾಸಿಗಳಾದ ನಮ್ಮ ಸ್ವಾಗತಕ್ಕೆ ಕತ್ತೆ, ಕುದುರೆ, ಒಂಟೆಗಳು ಸಾಲುಗಟ್ಟಿ ನಿಂತಿದ್ದುವು. ನಮ್ಮ ಮುಂದಿನ ಪ್ರವಾಸ ಅವುಗಳ ಮೇಲಂತೆ. ಅಮೇರಿಕನರೂ, ಬಿಳಿಯರೂ ಮೊದಲು ಒಂಟೆಯನ್ನೇರಿದರು. ರಸಿಕರು ಕತ್ತೆಯ ಮೇಲೆ ಕುಳಿತರು. ನನ್ನ ಪಾಲಿಗೆ ದೊರಕಿದುದು ಅರಬೀ

ಕುದುರೆಯೊಂದು. ನಾನೇ ಅದನ್ನು ಏರಿದೆ ಎನ್ನುವ ಬದಲು, ನನ್ನನ್ನು ರಾಹುತನನ್ನಾಗಿಸಿದರು ಎಂದರೆ ಚೆನ್ನ. ಕುದುರೆಯ ಲಗಾಮನ್ನು ಹಿಡಿದು ಕೊಂಡೆ. ಅರಬೀ ಹುಡುಗ ಅದನ್ನು ನಡೆಸಿಕೊಂಡು ಹೊರಟ. ಅಲ್ಲದೆ ಕುದುರೆ ಓಡುವುದಾಗಿದ್ದರೆ, ಬೆಂಗಳೂರಿನ ಪೇಟೆಯ ರಂಗಸೆಟ್ಟಿ ಕುದುರೆ ಹತ್ತಿದ ಕಥೆಯಾಗುತಿತ್ತು. ಕುದುರೆ ಒದಗಿಸಿದುದರಿಂದ ದೂರ ಬಹಳವಿದೆ ಯೆಂದು ಊಹಿಸಿದ್ದೆ. ಆದರೆ, ಇನ್ನೂರು ಗಜ ದೂರ ಹೋಗುವುದರಲ್ಲಿ ಪಿರಮಿಡ್ಡುಗಳು ಕಾಣಿಸಿದುವು ಸಮೀಪಕ್ಕೆ. ಫೋಟೋ ತೆಗೆಯುವುದಕ್ಕೆ ಈ ಕುದುರೆ ಸವಾರಿ ಆತಂಕವೆಂದು ನಾನು ತಿಳಿದರೆ, ತನ್ನ ಇನಾಮು ಹೋದೀ ತಲ್ಲಾ ಎಂದು ಕಾಸ್ತಾರನ ಚಿಂತೆ. ಅವನಿಗೆ ಕೊಡುವ ಇನಾಮು ಕೊಟ್ಟೆ; ಅವನಿಂದ 'ಅಲ್ಲಾ ಸ್ವರ್ಗದಲ್ಲಿ ನನಗೆ ಜಾಗ ಕಾದಿರಿಸುತ್ತಾನೆ' ಎಂಬ ಭರವಸೆ ಯನ್ನು ಪಡೆದೆ. ಅಲ್ಲಿಂದ ಮುಂದೆ ಕಾಲ್ನಡೆಯಿಂದ ಅಲೆದಾಡಿದೆ. ಆಗಲೂ ಗಾಳಿ, ಉಸುಬುಗಳ ಸಾಮಾನ್ಯ ಬೀಸಾಟ ನಡೆದೇ ಇತ್ತು.

ನಾನು ಹೋಗಿ ನಿಂತುದು ಸುಮಾರು ಮುನ್ನೂರು ಅಡಿ ಎತ್ತರವಾ ದೊಂದು ಗುಡ್ಡದ ಮೇಲೆ. ನನ್ನ ಎಡಕ್ಕೆ ತಗ್ಗಾದ ಫಲವತ್ತಾದ ಬಯಲು ಭೂಮಿ; ಉತ್ತು ಬಿತ್ತಿದ ಹೊಲಗಳು; ಸಾಲುಸಾಲಾಗಿ ನಟ್ಟ ಖರ್ಜೂರದ ಮರಗಳು. ಬಲದ ಮಗ್ಗುಲಲ್ಲಿ ಮಾನವ ನಿರ್ಮಿತ ಬೆಟ್ಟಗಳಿದ್ದುವು; ಒಂದಲ್ಲ —ಮೂರು; ಅವೇ ಪಿರಮಿಡ್ಡುಗಳು. ನನ್ನ ಎದುರಿನ ನೆಲವು ಇಳಿದು ತಗ್ಗಾ ಗಿತ್ತು. ಮುಂದೊಂದು ಕಣಿವೆ. ಅಲ್ಲಿಗೆ ನೂರು ಗಜವೂ ಇಲ್ಲ. ಇಳಿಯುವ ವನ ಎದುರಿಗೇನೇ ದೊಡ್ಡದಾದೊಂದು ಕುಣಿ. ಅದರ ದಂಡೆಯ ಮೇಲೆ ಭವ್ಯವಾಗಿ ಕಾಣಿಸುವ ಶಿಲಾವಿಗ್ರಹ–ಸ್ಫಿಂಕ್ಸ್; ಪ್ರಾಚೀನ ಐಗುಪ್ತರ ನಾರ ಸಿಂಹ. ನಮ್ಮ ನಾರಸಿಂಹ-ಸಿಂಹಮುಖಿ, ನರ ಶರೀರಿ. ಅವರ ನಾರಸಿಂಹ- ನರಮುಖಿ, ಸಿಂಹಶರೀರಿ. ನೆಲದಿಂದೆದ್ದ ಶಿಲೆಯ ಪದರೊಂದನ್ನು ಕೊರೆದು ಮಾಡಿದ ಸ್ಫಿಂಕ್ಸ್ ಸುಮಾರು ಮೂವತ್ತು ಅಡಿ ನೀಳವಾಗಿದೆ. ಅದರ ಅರ್ಧ ದಷ್ಟು ಎತ್ತರವಾಗಿದೆ. ಆ ಪ್ರತಿಮೆಗೆ ಎದುರಾಗಿ ನಿಂತರೆ ಅದರ ಮುಖದ ಗಂಭೀರ ಮೌನ ಒಡೆದು ಕಾಣುತ್ತದೆ. ಆ ಬಗೆಯ ಮೌನ ಮುಖವನ್ನು ಬಣ್ಣಿಸುವಾಗ "ಸ್ಫಿಂಕ್ಸ್‌ನ ಮೌನದಂತೆ" ಎನ್ನುವ ನಾಣ್ಣುಡಿಯುಂಟಾ ಯಿತು. ಪ್ರಾಚೀನ ಯುಗದ ದೊರೆಯೊಬ್ಬನ ಮುಖವದು. ಆ ಮುಖದ ಹಿಂದೆ ಆಳವರಿಯಲಾರದ ಯಾವುದೋ ಒಂದು ಗೂಢ, ವಿಚಾರಸರಣಿ

ತುಂಬಿದ್ದಂತೆ ಕಾಣುತ್ತದೆ. ಇಲ್ಲಿಂದ ತುಸು ಕೆಳಗೆ ಸರಿದು ಇಳಿದಲ್ಲಿ ಪರೋ
ವರ ಯುಗದ ಹಳೆಯ ದೇವಾಲಯವೊಂದು ಕಾಣಸಿಗುತ್ತದೆ. ನಾಲ್ಕೈದು
ಸಾವಿರ ವರುಷಗಳ ಹಿಂದಿನ ರಚನೆ. ಮೂವತ್ತು ಅಡಿ ಎತ್ತರದ ಸರಳ
ವಾದ ದೆವ್ವದಂಥ ಸ್ತಂಭರಾಜಿಗಳು. ನಾನು ತುಸುವೇ ಕಾಲ ಆ ಗುಡಿಯ
ಒಳ ಹೊರಗಳನ್ನೆಲ್ಲಾ ಹೊಕ್ಕು ನೋಡಿ, ಪಿರಮಿಡ್ ನೋಡುವ ಚಾಪಲ್ಯ
ದಿಂದ ಧಾವಿಸಿ ಮೇಲಕ್ಕೆ ಬಂದೆ.

ಪಿರಮಿಡ್ಡಿನ ನಾಲ್ಕು ಮೈಗಳೂ ತ್ರಿಕೋಣಾಕೃತಿಯವು. ಮೈಯ್ಯ
ಒಂದೊಂದು ತಳವು 600 ಅಡಿಗಳಿಗಿಂತಲೂ ಉದ್ದವಾಗಿದ್ದಿರಬೇಕು. ಈ
ಕೃತಿಯ ಎತ್ತರ 500 ಅಡಿಗಳಷ್ಟಿರಬಹುದು. ಅದನ್ನು ಕಟ್ಟಲು ಬಳಸಿದ
ಒಂದೊಂದು ಕಲ್ಲಿನ ಪ್ರಮಾಣವೇ $5 \times 5 \times 8$ ಅಡಿಗಳಷ್ಟು ದೊಡ್ಡದು.
ಇಂತಹ ಕಲ್ಲುಗಳನ್ನು ಇನ್ನೂರು ಮೈಲು ದೂರದಿಂದ ಸಾಗಿಸಿ ತಂದರಂತೆ.
ಗಾರೆ ಇಲ್ಲದೆ ಒಂದಕ್ಕೊಂದು ಜೋಡಿಸಿ ಈ ಪರ್ವತ ಶಿಖರ ನಿರ್ಮಿಸಿದರು.
ಇವನ್ನು ಕಟ್ಟಲು ಲಕ್ಷಾವಧಿ ಜನ ಹಲವು ವರ್ಷಗಳ ಕಾಲ ದುಡಿದಿದ್ದರಂತೆ.
ನನಗೆ ಸಮೀಪವಾದ ಒಂದು ಪಿರಮಿಡ್ಡಿನ ಮುಂಗಡೆ ಹೋಗಿ ನಿಂತೆ. ತುಸು
ಎತ್ತರದಲ್ಲಿ ಬಾಗಿಲಿನಂತಹ ಒಂದು ರಂಧ್ರ ಕಾಣಿಸಿತು. ಒಬ್ಬಿಬ್ಬರು ಕಾವಲಿ
ನವರೂ ನಿಂತಿದ್ದರು. ಅಲ್ಲಿಗೆ ಹೋದೆ; ಇಣಕಿದೆ. 'ಒಳಗೆ ಬನ್ನಿ' ಎಂದರು.
ಒಬ್ಬನು ಅರಬ ನನ್ನನ್ನು ಒಳಗಿನ ಕತ್ತಲು ದಾರಿಯಲ್ಲಿ ಕರೆದೊಯ್ದ. ನಾನು
ಒಬ್ಬನೇ ಇದ್ದೆ. ಸ್ವಲ್ಪ ದೂರ ಹಾದಿ ಸಮತಟ್ಟಾಗಿತ್ತು. ಮುಂದೆ ದಾರಿ
ಕಿರಿದಾಯಿತು, ಮಾತ್ರವಲ್ಲ ಮೈಬಗ್ಗಿಸಿ ಬೆಟ್ಟದ ಮೈಯನ್ನೇರುವ ಬಿಲದಂತಿ
ರುವ ಸುರಂಗವಾಯಿತು. ಮೈ ನಿಡಿಯುವಂತಿಲ್ಲ; ತಲೆ ಎತ್ತುವಂತಿಲ್ಲ.
ಎಷ್ಟು ನಡೆದರೂ ದಾರಿ ಏರುತ್ತಲೇ ಹೋಗುತ್ತಿತ್ತು. ದಾರಿಗೆ ಸ್ವಲ್ಪ ಬೆಳಕು
ಕೊಡಲು ವಿದ್ಯುಕ್ತಿನ ದೀಪ ಹಾಕಿದ್ದರು. ಕೊನೆಯಿಲ್ಲದಷ್ಟು ಎಂಬಂತಿರುವ
ದಾರಿ. ಮೇಲೇರಿದಂತೆ 'ನಮ್ಮ ಮಾರ್ಗದರ್ಶಕ ಕತ್ತು ಹಿಸುಕಿದರೆ ಕೇಳು
ವವರಾರು?' ಎಂಬ ಭೀತಿಯೂ ಆಗುತ್ತದೆ. ಶ್ರಮಿಸಿ ಸ್ವಲ್ಪ ಹೊತ್ತು ಮುಂದೆ
ಸಾಗಿದ ಮೇಲೆ, ದಾರಿ ಅಡ್ಡ ತಿರುಗುತ್ತದೆ. ಸಮತಟ್ಟಾಗುತ್ತದೆ. ತುಸು
ದೂರ ಹೋದೊಡನೆ ವಿಶಾಲವಾದೊಂದು ಕೊಟಡಿಯನ್ನು ಸೇರುತ್ತದೆ.
ಭವ್ಯವಾದೊಂದು ಕೋಣೆ. ಗಂಭೀರವಾದ ಆವರಣ. ಅಲ್ಲಿಯೇ ಪರೋವ
ನೊಬ್ಬನ ಕಳೇಬರವನ್ನು ಇರಿಸಿದ ಬಹುದೊಡ್ಡ ಮೃತ್ಯು ಸಂಪುಟವೂ ಇದೆ.

ಸೋಜಿಗದ ಮಾತೆಂದರೆ-ಹೊರಗಿನ ಹವೆ ಉರಿಬಿಸಿಲಿಂದ ಕುದಿಯುತ್ತಿದ್ದರೆ ಇಲ್ಲಿನ ಹವೆ ಸುಖ, ಶೀತಲ. ಈ ಕೊಟಡಿಗೆ ಯಾವುದೋ ಒಂದು ಕಿರಿಯ ರಂಧ್ರದಿಂದ ಶೀತಗಾಳಿ ಬರುತ್ತದೆ.

ಬಂದಂತೆಯೇ ಹಿಂಗಾಲು ಹಾಕಿ, ಮುನ್ನಡೆವ ಬದಲು ಹಿನ್ನಡೆದು, ಕೆಳಗೆ ಇಳಿದು, ಪಿರಿಮಿಡ್ಡಿಂದ ಹೊರಗೆ ಬಂದೆ. ನಮ್ಮ ಮೋಟರುಗಳು ಅಲ್ಲಿಗೆ ಬಂದಿದ್ದವು. ನಾವು ಮುಂದಿನ ಪಯಣಕ್ಕೆ ಅಣಿಯಾದೆವು. ಇನ್ನು ಮುಂದೆಲ್ಲಿಗೆ? ನಮ್ಮ ಕಾರಿನ ನಾಲ್ಕು ಮಂದಿಗೆ ನಾಲ್ಕು ಬುದ್ಧಿ. ಅದರಂತೆ ಉಳಿದ ಪ್ರವಾಸಿಗಳ ಮನೋವೃತ್ತಿ. ಮಹಿಳೆಯರಿಗೆ, ತರುಣರಿಗೆ ಅಂಗಡಿ ಬೀದಿ ಅಲೆಯುವ ಹುಚ್ಚು. ನನ್ನಂತಹ ಕೆಲವರಿಗೆ–ಏಳು ಪೌಂಡುಗಳಷ್ಟು ದಂಡ ತೆತ್ತು, ಅಂಗಡಿ ಬೀದಿ ತಿರುಗಬೇಕೆ?–ಎಂಬ ಚಿಂತೆ. ಸಂಜೆಯ ಆರು ಘಂಟೆ ಸಮೀಪಿಸಿತ್ತು; ಮ್ಯೂಸಿಯುಮ್ ಮುಚ್ಚುವ ಕಾಲವಾಗಿತ್ತು. ಈಜಿಪ್ಟಿನ ವೈಭವದ ಈಸಂಗ್ರಹಾಲಯ ನೋಡುವ ಅದೃಷ್ಟವಿರಲಿಲ್ಲ. ಹಾಗೆಂದು ನಮ್ಮ ಪಯಣವನ್ನು ಈ ನಗರದ ಪ್ರಸಿದ್ಧ ಮಸೀದಿಯೊಂದಕ್ಕೆ ಸಾಗಿಸಿದೆವು. ಸಾವಿರ ವರ್ಷಗಳ ಹಿಂದಿನ ಈ ಅಗಾಧ ಮಸೀದಿಗೆ 'ಎಲೆಬಾಸ್ಟರ್ ಮಸೀದಿ' ಎನ್ನುತ್ತಾರೆ. ಅದರ ಆಕಾರ ರಚನೆಗಳೆಲ್ಲಾ ಬಿಜಾಪುರದ ಗೋಲಗುಮ್ಮಟವನ್ನು ಹೋಲುವಂಥವು. ಆದರೆ ಒಳಗಿನ ಚೆಲುವು ಬೇರೆ. ನೆಲ, ಗೋಡೆ, ಮುಚ್ಚಿಗೆಗಳೆಲ್ಲಾ ನೂರಾರು ಬಗೆಯ ಚಂದ್ರಕಾಂತ ಶಿಲೆಗಳಿಂದ ಹೊದೆಸಲ್ಪಟ್ಟವು. ಎಲೆಬಾಸ್ಟರ್ ಎಂಬುದು ಈ ಜಾತಿಯ ಶಿಲೆಗಳಿಗಿರುವ ಹೆಸರು. ಶಿಲೆಯ ಬಣ್ಣವನ್ನೂ ಅವುಗಳಲ್ಲಿ ಹರಿಯುವ ರೇಖೆಗಳನ್ನೂ ಹೊಂದಿಕೆಯಿಂದ ಜೋಡಿಸಿ ವಾಸ್ತುಶೃಂಗಾರ ಮಾಡಿದ್ದರು. ಮೇಲಿನ ಮುಚ್ಚಿಗೆ ಬಾನಿನ ಗೋಲದಂತಿತ್ತು. ಸಂಜೆಯಾಗಿತ್ತು. ಒಳಗಿನ ಕತ್ತಲನ್ನು ಬೆಳಗಲು ವಿದ್ಯುತ್ತಿನ ಗುಂಡಿ ಒತ್ತಿದರು. ಮುಚ್ಚಿಗೆಯಿಂದ ತೂಗುತ್ತಿದ್ದ 3000 ವಿದ್ಯುದ್ದೀಪಗಳು ಒಮ್ಮೆಗೇ ಬೆಳಗಿದಾಗ ಅದೊಂದು ನಭೋಮಂಡಲವಾಯಿತು. ಆ ಬೆಳಕಿನ ಕೆಳಗೆ, ಅಲ್ಲಾನ ಭಕ್ತರು ಮೊಣಕಾಲೂರಿ, ಮೂಡಣದ ಮಕ್ಕಾ ನೋಡಿ ಪ್ರಾರ್ಥಿಸುವ ವೇಳೆ ಬಂತೆಂದು, ನಾವು ಹೊರಕ್ಕೆ ಬಂದೆವು. ನಮ್ಮ ಮೋಟರನ್ನೇರಿದೆವು.

ನಮ್ಮ ಜತೆಗಾರರಾಗಿದ್ದ ತರುಣ ಮಿತ್ರರಿಬ್ಬರ ನೆನವರಿಕೆ ಕೈರೋವಿನ ಗುಲಾಬಿ ಹೂಗಳನ್ನು ಕುರಿತು ತುಂಬಿದ್ದಿರಬೇಕು. ಹೆಣ್ಣಿನ ಮಾತು ಬರು

ತ್ತಲೇ ನಮ್ಮ ಬಂಡಿಯಲ್ಲಿ ಸೇರಿಕೊಂಡ ಅರಬ್ಬಿ ಮಾರ್ಗದರ್ಶಕ, ದಾರಿಯಲ್ಲಿ ಸರಿಯುತ್ತಿದ್ದ ಗುಲಾಬಿ ಬಣ್ಣದ ಹುಡುಗಿಯೊಬ್ಬಳಿಗೆ ಚಿಟಿಕೆ ಮುರಿದು ಸಂಜ್ಞೆ ಮಾಡಿದ. ಕೇಳುವಂತೆಯೇ ಅಶ್ಲೀಲ ಮಾತಾಡಿದ. ಬಹು ನೇರಾದ ಶೃಂಗಾರ ಮಾರ್ಗ! ಇದೆಲ್ಲದರಿಂದ ನಮ್ಮ ಗೆಳೆಯರ ಸ್ವಪ್ನಲೋಕ ಎಷ್ಟೆಲ್ಲ ಕೆದಕಿತೋ? ಆದರೆ ನಮ್ಮ ಬಂಡಿ ಆಗಲೇ ಸಯ್ಯೆಬ್ ಬಂದರಕ್ಕೆ ಹೊರಡಬೇಕು. ಐವತ್ತು ಹರದಾರಿಯ ಹಾದಿಯನ್ನು ತುಳಿಯಬೇಕು. ಇನ್ನೊಂದು ತಾಸಿನ ವಿರಾಮವೂ ಇಲ್ಲ.

ಮಸೀದಿಯಿಂದ ಹೊರಟು ನಗರ ಮಧ್ಯಕ್ಕೆ ಬಂದೆವು. ಅಲ್ಲೊಂದು ಕಡೆ ನಿಂತೆವು. ಬೀದಿಯ ಮಾರಾಟಗಾರರೊಡನೆ ಕಸಿವಿಸಿ ಮಾಡಿ ಏನೇನೊ ಕೊಂಡೆವು. ಅಲ್ಲಿನ ವ್ಯಾಪಾರಿ ವರ್ಗ ಒಂದಕ್ಕೆ ಹತ್ತು ಬೆಲೆ ಹೇಳುವವರು. ಹೆಚ್ಚು ಕಡಮೆ ನಮ್ಮೂರ ಜನಗಳಂತೆಯೇ; ಠಕ್ಕು ವಂಚನೆಗಳ ವಿಷಯದಲ್ಲಿ ದಾಕ್ಷಿಣ್ಯಪರರಲ್ಲ.

ರಾತ್ರಿ ಎಂಟು ಘಂಟೆಗೆ ನಮ್ಮ ಬಂಡಿ ಹೊರಟಿತು. ದೂರದ ದಾರಿ; ನೇರಾದ ದಾರಿ. ಬಂದ ದಾರಿಯಂತಿರಲಿಲ್ಲ. ಒಂದು ಕಡೆ ಕೃಷಿಮಾಡಿದ ಸಮೃದ್ಧವಾದ ಬಯಲು ಭೂಮಿ. ಇನ್ನೊಂದು ಮಗ್ಗುಲಿಗೆ, ದಾರಿಯನ್ನೇ ಹಿಂಬಾಲಿಸಿ ಹೊರಟ ನೈಲ್ ನದಿಯ ಸುಂದರ ಕಾಲುವೆ. ದಾರಿಯ ಇಕ್ಕಡೆಗಳಲ್ಲೂ ಸಾಲುಮರಗಳು. ಬಲು ಲಲಿತವಾದ ನೋಟ. ಬಂದ ದಾರಿಗೂ ಇದಕ್ಕೂ ಎಷ್ಟು ಅಂತರ! ಸುಮಾರು ಮೂರು ತಾಸಿನ ಪಯಣ ಕಳೆಯುತ್ತಲೆ ಸುಯೆಜ್ ಕಾಲುವೆಯ ದಂಡೆಯ ಮೇಲಿರುವ ಇಸ್ಮಾಲಿಯಾ ನಗರ ಬಂದಿತು. ಈ ನಗರವು ನಿರ್ಮಲವೂ, ಸುಂದರವೂ ಆಗಿ ಕಾಣಿಸುತಿತ್ತು. ಅಲ್ಲಿ ಕಾಲು ತಾಸು ತಂಗಿ, ಉಪಹಾರ ಮುಗಿಸಿ, ಮೋಟರನ್ನೇರಿ ಹೊರಟೆವು. ಅಲ್ಲಿಂದ ಮುಂದಿರುವ ಹಾದಿ ಸುಯೆಜ್ ಹಡಗು ಕಾಲುವೆಯ ಮಗ್ಗುಲಿಂದಲೇ ಸರಿಯುತ್ತದೆ. ಕಾಲುವೆಯು ನೂರು ಗಜ ಅಗಲ ಕೂಡಾ ಇರಲಿಲ್ಲ. ಯಾವತ್ತು ಹಡಗು ಸಂಚಾರ ಅದರ ಮೂಲಕ ಸಾಗಬೇಕು. ಬರುವ ಹಡಗುಗಳ ಸರದಿ ಕಳೆದ ಮೇಲೆಯೇ ಹೋಗುವ ಹಡಗುಗಳ ಸರದಿ ತೊಡಗಬೇಕು. ಕತ್ತಲಲ್ಲಿ ಸರ್ಚ್‌ಲೈಟ್ ಹಾಯಿಸಿ ಮೆಲುಗತಿಯಿಂದ ಸಾಗಬೇಕು. ದಾರಿಯಲ್ಲೇ ನಮಗೆ ನಮ್ಮ ಬೆಟ್ಟೋರಿ ಹಡಗು ಕಾಣಿಸಿತು. ಅದನ್ನು ಹಿಂದಕ್ಕೆ ಬಿಟ್ಟು ನಾವು ಸಯ್ಯದ್ ರೇವನ್ನು ಸೇರಿದೆವು. ರಾತ್ರಿಯ

ಹನ್ನೊಂದು ಘಂಟೆ ಕಳೆದಿರಬೇಕು. ಈ ಬಂದರದ ಅಂಗಡಿಗಳು ನಮ್ಮಂತಹ ಪ್ರವಾಸಿಗಳಿಗಾಗಿ ಬೆಳಗಿನ ತನಕ ತೆರೆದಿರುತ್ತವೆ. ಅಲ್ಲಿನ ಹೊಟೇಲ್ ಒಂದರಲ್ಲಿ ಊಟ ಏರ್ಪಡಿಸಿದ್ದರೂ, ಮಾಂಸಾಹಾರ ಮಾಡದ ನನ್ನ ಮತ್ತು ನನ್ನ ಗೆಳೆಯರ ಪಾಲಿಗೆ ಉಪವಾಸವಾಯಿತು. ಅನಂತರ ಕಾಫಿ ಕುಡಿದು, ಆ ಹೊಟೇಲಿನ ಎದುರಿನ ಕುರ್ಚಿಗಳಲ್ಲಿ ತೂಕಡಿಸುತ್ತ ಕುಳಿತೆವು. ನಮ್ಮ ಜನಗಳಿಗೆ ಹಡಗಿಂದ ಕರೆ ಬರುವ ತನಕ ಊರು ಸುತ್ತುವ ಕೆಲಸ; ಹೂ ಕೊಳ್ಳುವುದು, ವಾಚು ಕೊಳ್ಳುವುದು, ಚೀಲ ಕೊಳ್ಳುವುದು. ರಾತ್ರಿಯ ಎರಡೂವರೆ ಘಂಟೆಗೆ ಕರೆ ಬಂತು. ನಮ್ಮ ಹಡಗು ರೇವನ್ನು ಸೇರಿತ್ತು. ನಾವು ಅದನ್ನೇರಿ ಹೋಗಿ ಮಲಗಿಕೊಂಡೆವು. ಅದು ಹೊರಟುದು ಮಾತ್ರ ಮರು ದಿನ ಬೆಳಿಗ್ಗೆ. ಬೆಳಗಾಗುವಾಗ ಕಾಲುವೆಯು ಮುಖ ಕಾಣಿಸುತಿತ್ತು; ದೂರದಲ್ಲಿ ಭೂಮಧ್ಯ ಸಮುದ್ರ ಹಾಸಿತ್ತು. ಆಚೀಚೆ ಬಂದರದ ಭವ್ಯ ಕಟ್ಟಡಗಳೂ, ನೂರಾರು ಹಡಗುಗಳೂ ಕಾಣಿಸುತ್ತಿದ್ದುವು. ಹಡಗು ಬೆಳಗಿನ ಮಂಜನ್ನು ಸೀಳಿ ಮುಂದುವರಿಯಿತು. ಕಾಲುವೆಯ ಕೊನೆಗೆ, ನಮ್ಮ ಎಡ ಮಗ್ಗುಲಿಗೆ, ಈ ಕಾಲುವೆಯ ಕನಸನ್ನು ಕಂಡ ಫ್ರೆಂಚ್ ಎಂಜಿನಿಯರ್ ಫರ್ಡಿನಾಂಡ್ ಡಿ ಲೆಸಪ್ಸನ ಪ್ರತಿಮೆ ಕಾಣಿಸುತ್ತಿತ್ತು.

ಭೂಮಧ್ಯ ಸಮುದ್ರವನ್ನು ಹೊಗುತ್ತಲೇ ಹಡಗು ಪಡುವಣಕ್ಕೆ ಮುಖಮಾಡಿ ಅಂಬಿನಂತೆ ಸಾಗತೊಡಗಿತು. ನಮ್ಮ ಮುಂದಿನ ರೇವು 1900 ಮೈಲು ದೂರದಲ್ಲಿರುವ ಜಿಬ್ರಾಲ್ಟರ್. ಆರು ದಿನಗಳ ಕಾಲ ನೆಲ ಕಾಣದೆ ಮುಂದೆ ಸರಿದೆವು. ಹವೆ ಬದಲಿಸಿ ಶೀತವಾಗಿತ್ತು. ಮೊದಲಿನ ಎರಡು ದಿನ, ಕಡಲಿನ ಉಕ್ಕುಸೊಕ್ಕುಗಳನ್ನು ಬಣ್ಣಿಸುವುದಕ್ಕಿದ್ದಿಲ್ಲ. ಹಡಗಿನ ವಿಲಾಸಿ ಪ್ರಯಾಣಿಕರು ವಿಲಾಸ ಮರೆತು ಒರಗಿಕೊಂಡರು. ಊಟದ ಮನೆ ಬರಿದಾಯಿತು; ನರ್ತನ ಶಾಲೆ ಬರಿದಾಯಿತು, 'ಡೆಕ್'ನ ಮೇಲೆ ತಿರುಗಾಡುವವರೂ ಇಲ್ಲವಾದರು. ಎಳೆಯ ಮಕ್ಕಳು ಮಾತ್ರ, ತೊಟ್ಟಿಲ ತೂಗುವಿಕೆಗೆ ನುರಿತವರಾದುದರಿಂದಲೋ ಏನೋ, ನಿಶ್ಚಿಂತೆಯಿಂದ ಕುಣಿದಾಡುತ್ತಿದ್ದರು.

ನಮ್ಮ ಪಯಣದ ಹದಿನೈದನೆಯ ದಿನದ ಬೆಳಗು ಅತ್ಯಂತ ಸುಂದರವಾಗಿತ್ತು. ಬಾನೆಲ್ಲ ಮುಗಿಲಿಂದ ತುಂಬಿ ದೂರದ ಉತ್ತರದಲ್ಲಿ ನಡು ಗಡ್ಡೆಯೊಂದು ಸೂರ್ಯರಶ್ಮಿಗೆ ಸುವರ್ಣನಗರದಂತೆ ಕಾಣಿಸುತಿತ್ತು. ಈ ನಗರದ

ಹಿಂದಿನ ಬೆಟ್ಟದ ಗೋಡೆ ಹಸುರು ಗಿಡಗಳ ಗರಿಗಳನ್ನು ಹೊತ್ತು ಭವ್ಯ ವಾಗಿ ಕಾಣಿಸುತಿತ್ತು. ಅಷ್ಟೇ ಜಾಗಕ್ಕೆ ಬೆಳಕು ಬಿದ್ದಿತ್ತು. ಅದನ್ನು ಕಂಡ ಜನ 'ಜಿಬ್ರಾಲ್ಟರ್ ಬಂಡೆ' (Rock of Gibralter) ಎಂದು ಹಿಗ್ಗಿ ಕೂಗಿ ದರು. ಮೊದಲ ಬಾರಿಗೆ ನನಗೆ ಯುರೋಪಿನ ನೆಲದ ದರ್ಶನವಾಯಿತು. ಮಳೆ ತುಸುತುಸುವಾಗಿ ಹನಿಯುತಿತ್ತು. ನಮ್ಮ ಹಡಗು ಇನ್ನೂ ಸ್ವಲ್ಪ ವೇಳೆ ಮುಂದುವರಿದು, ಬೆಟ್ಟದ ಮುಂಗಡೆ ಕಡಲ ದಂಡೆಗೆ ತುಸುದೂರದಲ್ಲಿ ಹೋಗಿ ನಿಂತು, ಲಂಗರು ಬಿಟ್ಟಿತು. ಎದುರಿಗೆ ದೆವ್ವದಂತಹ ಬೆಟ್ಟ! ಸುಂದರ ವಾದ ಬೀದಿ, ಮನೆಗಳು, ಎಡಕ್ಕೆ ಹಸುರಾಗಿ ಕಡಲಲ್ಲಿ ತೋಳಿನಂತೆ ಚಾಚಿ ರುವ ಬೆಟ್ಟದ ಸಾಲುಗಳು; ಅಲ್ಲಲ್ಲಿ ಮನೆಮಠಗಳು. ಅವನ್ನೆಲ್ಲ ಕಾಣಲು ಎಂದು ಇಳಿದೇವು ಎಂಬ ಹಂಬಲ ನಮಗೆ. ನಮ್ಮ ಪೋಲಿಷ್ ಹಡಗಿನ ವರು ಅದಕ್ಕೂ ತೆರಿಗೆ ಹೊರಿಸಿದರು. ಇಳಿಯಲು ಮೂರು ಶಿಲಿಂಗ್ ತಲೆ ತೆರಿಗೆ! ಹಡಗಿನ ಜೀವನವು ಬೇಸರ ಹುಟ್ಟಿಸಿದ್ದರಿಂದ ಆ ದಂಡವನ್ನು ತೆತ್ತಾದರೂ ಇಳಿದೆವು. 'ಲಾಂಚ್'ನಲ್ಲಿ ಕುಳಿತು ಕಾಲು ಮೈಲು ದೂರ ಸರಿದು ಯುರೋಪಿನ ನೆಲವನ್ನು ತುಳಿದೆವು.

ಜಿಬ್ರಾಲ್ಟರ್ ಸುಂದರವಾದ ಪೇಟೆ. ಉದ್ದಕ್ಕೂ ಹಾಯುವ ಒಂದೇ ಮುಖ್ಯ ಬೀದಿ. ಅದರಿಂದ ಕವಲೊಡೆವ ಕಿರಿ ಓಣಿಗಳನೇಕ. ಬೀದಿ ತುಂಬ ಶ್ರೀಮಂತ ಅಂಗಡಿಗಳು. ಅವುಗಳಲ್ಲಿ ಅರ್ಧದಷ್ಟು ಸಿಂಧಿಯರ ಅಂಗಡಿ ಗಳು. ಅಂಗಡಿಯ ಕೆಲಸಗಾರರೂ ವಿಕ್ರಯಗಾರರೂ ಹೆಚ್ಚಾಗಿ ಸ್ಪೆನಿಷ್ ಚೆಲುವೆಯರು. ಹಡಗಿನ ಜನ ನೆಲಕ್ಕೆ ಬಂದರೆ ಒಂದೇ ಕೆಲಸ–ಶಾಪಿಂಗ್. ಕುರಿ ಹಿಂಡಿನಂತೆ ಚದರಿದರು. ಪ್ರತಿಯೊಂದು ಅಂಗಡಿಯನ್ನೂ ಹೊಕ್ಕರು. 'ಇಂಗ್ಲೆಂಡಿನಲ್ಲಿ ಎಲ್ಲವೂ ತುಟ್ಟಿ. ಇಲ್ಲಿ ಅಗ್ಗ' ಎಂಬ ಭಾವನೆ. ನನ್ನ ಮಿತ್ರ ರೊಬ್ಬರು ವಾಚಿನ ಒಂದು ತೊಗಲ ಪಟ್ಟಿಗೇನೇ 21 ಶಿಲಿಂಗಿನ ಅಗ್ಗದ ಬೆಲೆ ಕೊಟ್ಟರು. ಮಾರಿದವನು ನಮ್ಮ ದೇಶದವನೇ. ಮಗ್ಗುಲ ಅಂಗಡಿ ಯವನಲ್ಲಿ ಬೆಲೆ ಕೇಳಿದಾಗ ಅದಕ್ಕೇನೇ ಐದು ಶಿಲಿಂಗಿನ ಕ್ರಯ ಹೇಳಿದ. ಈ ಬಗೆಯಲ್ಲಿ ಜನ ಎರಡು ತಾಸು ಕಳೆದರು. ಬೇಕಾದುದನ್ನು, ಬೇಡವಾದು ದನ್ನು ಕೊಂಡರು. ಹೊತ್ತು ನೆತ್ತಿಗೇರಿದಾಗ ಹಡಗನ್ನು ಸೇರಿದರು. ಇನ್ನೂ ಮೂರು ದಿನ ಕಳೆಯಬೇಕು–ಇಂಗ್ಲೆಂಡಿನ ದಡ ಕಾಣುವುದಕ್ಕೆ.

ಆ ಮೂರು ದಿವಸಗಳಲ್ಲಿ ನನ್ನ ಪಾಲಿಗೆ ಎರಡು ಚಿರಸ್ಮರಣೀಯ

ಘಟನೆಗಳಾದವು. ಒಂದು ನೈಸರ್ಗಿಕ; ಇನ್ನೊಂದು ಮಾನಸಿಕ.

ನಾವೀಗ ಹೊಕ್ಕುದು ಅಟ್ಲಾಂಟಿಕ್ ಸಾಗರವನ್ನು; ಪೋರ್ಚುಗಲ್ಲಿನ ಪಡುವಣ ಸೆರಗನ್ನು ಅಂಟಿಕೊಂಡು ತುಂಬ ದೂರ ಸರಿದು ಮುಂದೆ ಬಿಸ್ಕೇ ಆಖಾತ ಹೊಗ್ಗಬೇಕು. ಬಿಸ್ಕೇ ಆಖಾತ ಸದಾ ಅಶಾಂತ ಸಮುದ್ರವೆಂದು ಕೇಳಿದ್ದೆವು. ಆದರೆ ನಮ್ಮ ಪಾಲಿಗೆ ಸಮುದ್ರರಾಯನ ರೌದ್ರಸ್ವರೂಪ, ಭೂಮಧ್ಯಸಮುದ್ರದಲ್ಲಿ ಕಂಡುದಕ್ಕಿಂತಲೂ ಹೆಚ್ಚಿನ ಉಗ್ರರೂಪ, ಜಿಬ್ರಾಲ್ಟರನ್ನು ಬಿಟ್ಟ ಎರಡು ತಾಸಿನೊಳಗೆ ಕಾಣಸಿಕ್ಕಿತು. ಸುಮಾರು ಒಂದೂವರೆ ದಿನದ ಅನುಭವವದು. ನಮ್ಮ ಹದಿನಾಲ್ಕು ಟನ್ ತೂಕದ ಬೆಟ್ಟೋರಿ ಹಡಗು ಕಾಗದದ ದೋಣಿಯಾಯಿತು. ಹಿಂದೆ, ಮುಂದೆ, ಎಡ, ಬಲಕ್ಕೆ ತೊಳಲಾಡ ತೊಡಗಿತು. ಒಳಗೆ ಕುಳಿತು ಕಿಟಿಕಿಯಿಂದ ಕಡಲಂಚನ್ನು ಕಾಣುವಾಗ ನಮ್ಮ ದೃಷ್ಟಿ ಮೂವತ್ತು ನಲವತ್ತು ಅಡಿಗಳನ್ನು ಅಳೆಯುತ್ತಿತ್ತು. ಕುಂತಿದವರು, ಕುಡಿಯದವರು ಎಲ್ಲರೂ ಅಮಲುಗೊಂಡರು. ನಡೆಯುವುದು ಅಸಾಧ್ಯವಾಗಿ ಹಾಸುಗೆಯನ್ನು ಹಿಡಿದರು. ಊಟದ ಮನೆಗೆ ಬಂದರೆ, ಸರದಿಗೆ ಇನ್ನೂರು ಮಂದಿ ಕುಳಿತಿರುವ ಆ ಭೋಜನ ಗೃಹದಲ್ಲಿ ಹತ್ತು ಮಂದಿಯೂ ಕಾಣಸದಾದರು. ಬಿಂಗೊ ಬಜಾರ, ನೃತ್ಯರಂಗ, ವಿಹಾರದ ಡೆಕ್, ಬೇಂದ್ರೆಯವರ ಕವನದಲ್ಲಿ ಹೇಳುವಂತೆ “ಬರಿದೋ ಬರಿದು, ತೆರವೋ ತೆರವು” ಆದುವು.

ಮಾನವ ಸಿಂಗಾರಿಗಳ ನಡತೆಯನ್ನು ನೋಡಿ ಬೇಸರಿಸಿದಂತೆ ನಿಸರ್ಗದ ಸಿಂಗಾರಿ ರೋಸಿದಳು, ರೊಚ್ಚಿಗೆದ್ದಳು. ನಾನು ಹತ್ತೆಂಟು ಬಾರಿ ಕಡಲಿನ ಈ ರೌದ್ರವನ್ನು ನೋಡುವುದಕ್ಕಾಗಿ ಹೊರಕ್ಕೆ ಬಂದಿದ್ದೆ. ಢಕ್ಕೆಯ ಮೇಲೆ ನೆಟ್ಟಗೆ ನಿಲ್ಲುವುದೇ ಕಷ್ಟವಾಗಿತ್ತು. ಜನರು ಹಡಗಿನ ತೀರ ಹೊರಗಣ ಬೇಲಿಯನ್ನು ಸಮೀಪಿಸದಂತೆ, ಈಚಿಗೆ ಹಗ್ಗ ಬಿಗಿದಿದ್ದರು. ಅದನ್ನಾದರೂ ಹಿಡಿದುಕೊಂಡು ಕೆಮರಾದಿಂದ ಕಡಲಿನ ಉಕ್ಕಿನ ಫೋಟೊ ತೆಗೆಯುವ ಚಪಲ ನನಗೆ. ನೀರಿನ ಅಲೆಗಳು ಉನ್ನತೋನ್ನತ ಬೆಟ್ಟಗಳಂತೆ ಏಳುತ್ತಿದ್ದುವು; ಬೀಳುತ್ತಿದ್ದುವು. ಒಂದೊಂದು ಜಲಪರ್ವತ ಉಪಪರ್ವತವಾಗಿ, ಕಿರಿಯ ಶ್ರೇಣಿಗಳಾಗಿ ಮುರಿದೊಡೆದು, ಇಳಿದಿಳಿದು, ತಗ್ಗಿನ ಕಣಿವೆಯಂತಾಗುತ್ತಿತ್ತು. ಉಕ್ಕಿ ಉರುಳುವ ಆ ಅಲೆಗಳ ಹೊರಮೈಯೂ ಅಷ್ಟು ಉಗ್ರ. ಇಷ್ಟು ದಿನ ಕಡಲು ಶಾಂತವಾಗಿದ್ದಾಗ ಹಡಗು ಅದನ್ನು ಸೀಳಿ

ಸಾಗುವಾಗ ಹಿಂದೊಂದು ಹಸುರು ದಾರಿ ಉಳಿಯುತಿತ್ತು. ಬಹು ದೂರದ ತನಕ ಈ ಜಲಪಥ ಕಾಣಿಸುತಿತ್ತು. ಈಗ ಅದಾವುದೂ ಇರಲಿಲ್ಲ. ಹಿಂದೆ ಮುಂದೆ, ಎಡ, ಬಲ, ಎಲ್ಲೆಲ್ಲೂ ಪ್ರಲಯಮಯ. ಬಾನು ಕರಿದು. ಬೀಸುವ ಗಾಳಿ ಅತಿ ಶೀತಳ. ಎಲ್ಲಾದರೊಂದು ಕ್ಷಣ ಮುಗಿಲಿನ ತೂತಿನೊಳಗಿಂದ ಬಿಸಿಲು ಬಿದ್ದಾಗ ಮೈ ಬೆಚ್ಚಗೆನಿಸುತಿತ್ತು. ಹೀಗಾಗಿ ಬೀಸುವ ಗಾಳಿಯ ದಾರಿಯನ್ನು ತಪ್ಪಿಸಿ, ಎಲ್ಲಾದರೊಂದು ಮರೆಯಲ್ಲಿ ನಿಂತು ವರುಣದೇವನ ಈ ಉನ್ಮತ್ತರೂಪವನ್ನು ಕಾಣಬೇಕಿತ್ತು. ನಾವು ಈಜಿಪ್ಟಿನ ಮರುಭೂಮಿಯಲ್ಲಿ ಕಂಡ ರೌದ್ರಕ್ಕೆ ಸಮನಾದ ರೌದ್ರ ಇದೆನಿಸಿತು. ನಮ್ಮ ದೊಡ್ಡ ಹಡಗೇ ತಟ್ಟೆಯ ಹಾಗೆ ತೇಲುತ್ತಿರುವಾಗ ನಮಗಿದಿರಾಗುತ್ತಿದ್ದ, ಚಿಕ್ಕ ಪುಟ್ಟ ಹಡಗುಗಳನೇಕ ತೊಳಲಾಡುವುದನ್ನು ಕಂಡರೆ ಭೀತಿಯಾಗುತಿತ್ತು. ಇಷ್ಟೆಲ್ಲ ಕಳೆದು, ನಾವು ಬಿಸ್ಕೇ ಅಖಾತವನ್ನು ಹೊಕ್ಕಾಗ ಕಡಲು ಶಾಂತವಾಗಿತ್ತು. ಆದರೆ ಎರಡು ದಿನಗಳ ರೌದ್ರದಿಂದಾಗಿ ನಮ್ಮ ಪ್ರವಾಸಿಗಳ ಥಳಕು, ಬೆಡಗುಗಳು ಬರಿದಾಗಿದ್ದುವು. ಹಡಗನ್ನಿಳಿಯುವಾಗ ಕೊಳೆಯಿಲ್ಲದ, ನಿರಿಗೆ ಇಲ್ಲದ ಯಾವ ಉಡುಗೆ ಉಳಿದಿದೆ--ಎಂಬ ಯೋಚನೆಗೆ ಮೀಸಲಾಗಿದ್ದಿರಬೇಕು.

ಈ ಪಯಣದಲ್ಲಾದ ಇನ್ನೊಂದು ಅನುಭವ ಚಿಕ್ಕದಾಗಿದ್ದರೂ ಅರ್ಥ ಪೂರ್ಣವಾಗಿತ್ತು. ನಾವು ನಾಲ್ಕು ಮಂದಿ ಕುಳಿತುಕೊಳ್ಳುತ್ತಿದ್ದ ಭೋಜನಗೃಹದ ಮೇಜಿಗೆ ಒಬ್ಬ ಸ್ಟ್ಯೂವರ್ಡ್ ಇದ್ದ. ಆತ ಮಧ್ಯವಯಸ್ಕ. ನಮ್ಮನ್ನು ಆದರದಿಂದ ಸ್ವಾಗತಿಸಿ ಬೇಕಷ್ಟು ಬಡಿಸುವವ. ಊಟದ ಮನೆಯಲ್ಲಿ ನಿಯತ ವೇಳೆಗೆ ಬರುವವರಲ್ಲಿ ಅವನ ಮೇಜಿಗೊಪ್ಪಿದ ನಾವು ಕೆಲವರೇ ಎಂದು ಅಭಿಮಾನ. ನಾನೂ ಪಿಳ್ಳೆಯವರನ್ನುಳಿದು ಇನ್ನಿಬ್ಬರು ತರುಣರಿದ್ದರು ಎಂದಿದ್ದೆ. ಅವರನ್ನು ಕಂಡರೆ ಅವನಿಗೆ ಇಷ್ಟ. ಒಂದು ಬಟ್ಟಲು ಐಸ್‌ಕ್ರೀಮ್ ಬಡಿಸುವಲ್ಲಿ ಎರಡೆರಡು ಬಟ್ಟಲು ಬಡಿಸುತ್ತಿದ್ದ. ಅವನೊಡನೆ ಏನಾದರೂ ಹರಟೆ ನಮಗೆ. ಶಾಕಾಹಾರಿಗಳಾದ ನನಗೂ ಪಿಳ್ಳೆಯವರಿಗೂ ಮಾಂಸದ ಪದಾರ್ಥ ತೋರಿಸಿ ಕಾಡುವ ಚೇಷ್ಟೆ ಅವನಿಗೆ. ಅವನ ಉಚ್ಚಾರ ಅನುಕರಿಸಿ ಅಣಕಿಸುವ ಕೆಲಸ ನಮಗೆ. ಒಂದು ದಿನ ಕ್ಷೇಮಸಮಾಚಾರ ಮಾತನಾಡುತ್ತಾ ನಾನು ಅವನೊಡನೆ "ನಿಮ್ಮ ಪೋಲೆಂಡಿನಲ್ಲಿ ಸ್ಥಿತಿ ಹೇಗೆ" ಎಂದೆ. ಏನೆನ್ನುತ್ತಾನೆ ಎಂದು ಕೇಳುವ ಚಪಲ ನಮಗೆ.

ಉಕ್ಕಿನ ಘರದೆಯೊಳಗಿನ ಪ್ರಜೆಯಲ್ಲವೇ ಅವನು? ಆದರೆ ಪಾಪ, ನನ್ನ ಪ್ರಶ್ನೆಗೆ ತುಟಿ ಬಿಗಿದ ಅವನು ತೆರೆಯಲೇ ಇಲ್ಲ. ಅದೇ ಹಡಗಿನ ವಾಚನಾಲಯದಲ್ಲಿ ರಸ್ಯವನ್ನು ಸ್ವರ್ಗವಾಗಿ ಚಿತ್ರಿಸಿದ್ದ ಪತ್ರಿಕೆಗಳು ತುಂಬಿದ್ದರೂ ಈ ಬಡಪಾಯಿಯ ತುಟಿ "ಸ್ಫಿಂಕ್ಸ್"ನ ಮೌನ ತಾಳಿತೇಕೆಂದು ನಾವೇ ಯೋಚಿಸಬೇಕು. ಆ ಮೌನ ಅವನ ಸ್ವದೇಶವನ್ನು ಕುರಿತಾಗಿ ಅವನಿಗಿದ್ದ ಭೀತಿ ಯಾತನೆಗಳ ಗ್ರಂಥ ಸಂಪುಟದಂತೆ ನನಗೆ ಅರ್ಥಕೊಟ್ಟಿತು. ಮನದಲ್ಲಿದ್ದುದನ್ನು ಆತ ಮಾತನಾಡಲಾರ. ಆಚೀಚೆ ನಿಂತ ಇತರ ಸ್ಟ್ಯೂವರ್ಡ್ಸ್ ಅವನ ತುಟಿಯನ್ನು ಬಿಗಿದಿರಬೇಕು.

ಹದಿನೆಂಟನೆಯ ದಿನ ಬಂದಿದೆ. ಮೇ ಐದನೆಯ ದಿನವದು. ಬೆಳಕು ಹರಿಯುವುದಕ್ಕೆ ಮೊದಲೇ ನಮಗೆಲ್ಲ ಎಚ್ಚರವಾಗಿತ್ತು. ಹಿಂದಣ ರಾತ್ರಿಯೇ ನಮ್ಮ ಪೆಟ್ಟಿಗೆಗಳನ್ನು ಭದ್ರಗೊಳಿಸಿದ್ದೆವು. ಆ ಮೊದಲೇ ನಮ್ಮ ಕೆಬಿನ್ ಶುಚಿಮಾಡುವಾಕೆಗೆ, ಸ್ಟ್ಯೂವರ್ಡ್‌ನಿಗೆ, ಊಟದ ಮನೆಯ ಸ್ಟ್ಯೂವರ್ಡನಿಗೆ ಇನಾಮು ಕೊಟ್ಟಾಗಿತ್ತು. ಇಂಗ್ಲೆಂಡಿನಲ್ಲಿ ಸಿಗರೇಟ್ ತುಟ್ಟಿಯೆಂದು ಹಡಗಿನಲ್ಲಿ ನಾನೂರಷ್ಟು ಸಿಗರೇಟುಗಳನ್ನು ಕೊಂಡು ಪೆಟ್ಟಿಗೆಯಲ್ಲಿ ತುಂಬಿಸಿಯಾಗಿತ್ತು. ಮುಂಬಯಿಯಲ್ಲಿ ಪಂಚೆ ಧೋತ್ರಗಳನ್ನು ಬಿಟ್ಟು, ಹತ್ತಿಯ ಇಜಾರ ಬುಶ್‌ಕೋಟ್ ಧರಿಸತೊಡಗಿದ ನಾನು ಜಿಬ್ರಾಲ್ಟರಿನಲ್ಲಿ ಉಣ್ಣೆ ಬಟ್ಟೆಗಳನ್ನು ಧರಿಸಿದ್ದಾಯಿತು. ಈ ಉಡುಗೆಗೂ ಈಗ ಬಡತಿ ಬಂದಿತು. ಹೊರಗಿನ ಶೀತ ಹವೆಯನ್ನು ತಡೆಯಲು ಮೇಲಂಗಿ ತೊಡಬೇಕಾಯಿತು. ನಾವು ನೆಲ ಸಮೀಪಿಸುತಿದ್ದೇವೆಂದು, ನಮ್ಮ ಹಡಗನ್ನು ಹಿಂಬಾಲಿಸುತ್ತಿದ್ದ ಕಡಲು ಕಾಗೆಗಳು ಹೇಳುತ್ತಿದ್ದುವು. ಹಡಗಿಂದ ಎಸೆಯುತ್ತಿದ್ದ ತಿಂಡಿ ತೀರ್ಥಗಳ ಅವಶೇಷಗಳ ಮೇಲೆ ಅವುಗಳು ಹಿಂಡಾಗಿ ಬಂದೆರಗುತ್ತಿದ್ದ ನೋಟ ವಿಚಿತ್ರವಾಗಿತ್ತು.

ಸರಿ, ಸೂರ್ಯೋದಯವಾದ ಸ್ವಲ್ಪ ಹೊತ್ತಿನಲ್ಲಿ ನಡುಗಡ್ಡೆಯೊಂದು ಕಾಣಿಸಿತು. ಅದರ ಮಗ್ಗುಲು ಕಡಿದಾಗಿಯೂ ಬಿಳಿದಾಗಿಯೂ ಇತ್ತು. ಐಲ್ ಆಫ್ ವೈಟ್ ಎಂಬ ದ್ವೀಪವದು; ಸೌತಾಮ್ಟನ್ ರೇವಿಗೆ ಎದುರಾಗಿದ್ದುದು. ನಮ್ಮ ಹಡಗು ಅದನ್ನು ಸಮೀಪಿಸುವಾಗ ಬೆಳಗಿನ ಹತ್ತು ಘಂಟೆಯಾಗಿತ್ತು. ನಾನು ದ್ವೀಪದ ಮಗ್ಗುಲನ್ನು ದಾಟಿ ಮುಂದುವರಿಯಲು ಇಂಗ್ಲೆಂಡಿನ ನಾಗರಿಕ ಕರಾವಳಿ ಕಾಣತೊಡಗಿತು. ಹಸುರು ಗುಡ್ಡಗಳು,

ಕಡಲು ತೀರದ ಮನೆಗಳು, ಬೀದಿಗಳು, ಸಾಲುಮರಗಳು, ಕಾರ್ಖಾನೆಗಳು. ಗುಡ್ಡಗಳ ಮೇಲೆ ಬರೆದ ಹೊಲದೋಟಗಳ ಹಸುರು ಪ್ರತಿರೂಪ. ಇವೆಲ್ಲ ಪ್ರವಾಸಿಗಳ ಹುಮ್ಮಸ ಹೆಚ್ಚಿಸಿದುವು. ಹಚ್ಚ ಹೊಸವೇಷಗಳು ಹೊರಬರ ತೊಡಗಿದುವು. ಆದರೂ ಹಲವಾರು ಹೃದಯಗಳಲ್ಲಿ ಬೇಸರಿಕೆ ನಿರುತ್ಸಾಹ ಗಳು ತುಂಬಿರಬೇಕು. ಒಬ್ಬರು ಇನ್ನೊಬ್ಬರನ್ನು ಮಾತನಾಡಿಸುತ್ತಾರೆ; ಬೀಳ್ಕೊಡುತ್ತಾರೆ. ತೇಲುವ ಈ ಅಮರಾವತಿಯ ಗಂಧರ್ವಲೋಕವನ್ನು ಮರೆತು ಇಳಿಯುವಾಗ ಅನೇಕರ ಎದೆಮನಗಳಿಗೆ ಭಾರವಾಗಿ ಕಂಡಿರ ಬೇಕು. ಕಾಣದ ನಾಡಿಗೆ ಬಂದಿಳಿಯುವ ಆತುರ ಒಂದು ಕಡೆ, ಕಂಡು ಉಂಡ ಸಂತಸ ಮರೆತು, ಅಲ್ಪಕಾಲದ ಪ್ರಣಯ ಭಂಗಿತರಾಗಿ ಒಬ್ಬರು ಇನ್ನೊಬ್ಬರನ್ನು ಬಿಟ್ಟೋಡಬೇಕಲ್ಲ ಎಂಬ ನಿರಾಶೆ ಇನ್ನೊಂದು ಕಡೆ.

ಮಧ್ಯಾಹ್ನ ಒಂದು ಘಂಟೆಗೆ ನಮ್ಮ ಹಡಗು ರೇವಿಗೆ ಬರುವುದಾಗಿ ಸೂಚನೆ ಕೊಟ್ಟಿತ್ತು. ಬಂದುದು ಮಾತ್ರ ಬಹು ಮೊದಲು. ಆದುದರಿಂದ ಬಹು ಹೊತ್ತು ಕಾಯಬೇಕಾಯಿತು. ಹಡಗಿನ ಬಹುಮಟ್ಟಿನ ಜನ ಅಲ್ಲೇ ಇಳಿಯುವರಾದುದರಿಂದ ಸಾಮಾನುಗಳನ್ನು ಇಳಿಸಿ ನಾವು ಇಳಿಯುವುದಕ್ಕೆ ವಿಶೇಷ ಸಮಯ ಹಿಡಿಯಿತು. ನಾವು ಅಲ್ಲಿನ ಸುಂಕದ ಮನೆಯನ್ನು ಹೊಗ್ಗುವಾಗ ಸಂಜೆಯ ಘಂಟೆ ಆರು ಸರಿದಿತ್ತು.

# ೨. ಇಂಗ್ಲೆಂಡಿನ ಪ್ರಥಮ ಪರಿಚಯ

ಮೊದಲ ನೋಟಕ್ಕೇ ಇಂಗ್ಲೆಂಡು ನನಗೆ ಮೆಚ್ಚುಗೆಯಾಯಿತೆಂದರೆ ಅದರಲ್ಲಿ ಅತಿಶಯೋಕ್ತಿಯೇನಿಲ್ಲ. ಐಲ್ ಆಫ್ ವೈಟ್ ದ್ವೀಪವನ್ನು, ಅನಂತರ ಸೌತಾಮ್ಟನಿನ ಎಡಬಲದ ಭೂಕರಾವಳಿಯನ್ನೂ ಎವೆ ಬಿಡದೆ ನೋಡುತ್ತ ನಿಂತವ ನಾನು. ಅಲ್ಲಿನ ಗುಡ್ಡಗಳು ಹಸುರು ಹಚ್ಚೆಯಿಂದ ತುಂಬಿ ಮನ ಸೆಳೆಯುತ್ತಿದ್ದುವು. ಈ ಗುಡ್ಡಗಳು ನಮ್ಮೂರಲ್ಲಿ ಕಾಣುವಷ್ಟೇ ಸಾಮಾನ್ಯ ಎತ್ತರದವು. ಹಸುರು ನನಗೆ ಇಷ್ಟವಾದ ಬಣ್ಣ. ಊರಿನಲ್ಲಿ ಹಸುರು ಬಣ್ಣವನ್ನು ಮೆಚ್ಚಿ ಮೋಹಿಸಿ ಬೆಳೆದ ನನ್ನ ಕಣ್ಣಿಗೆ, ಈ ಹಸುರು ತುಸು ಹೊಸತಾಗಿ ಕಾಣಿಸಿತು. ಅದಕ್ಕೆ ಕಾರಣ—ಆ ಹಸುರು ಹಂಚಿ ಬಿದ್ದ ಬಗೆ. ಗುಡ್ಡಗಳನ್ನು ನೋಡುವಾಗ ಅವುಗಳ ಮೈಯಲ್ಲಿ ಅಂಕಣ ಅಂಕಣವಾಗಿ ವಿಂಗಡಿಸಿದ್ದ ಹೊಲಗಳ ಹಸುರು ಸೇರಿತ್ತು. ನಡುನಡುವೆ ಅಂಕಣವಾಗಿ ಕಾಣುವ ಉತ್ತ ನೆಲವಿತ್ತು. ಹೊಲ ಹೊಲಗಳ ಮೇರೆಯನ್ನು ವಿಂಗಡಿಸಿ ತೋರಿಸುವ ಹಸುರಿನ ಬೇಲಿ. ದಾರಿಗಳ ಮಗ್ಗುಲಲ್ಲಿ ಸಮದೂರ ನಟ್ಟ ಸಾಲುಮರಗಳ ಹಸುರು. ಗುಡ್ಡಗಳ ತುದಿಯಲ್ಲಿ ಕಾಣುವ ಕಾಡಿನಲ್ಲಿ ನಟ್ಟ ಮರಗಳಲ್ಲೂ ಸಮ ದೂರದಲ್ಲಿ ನಿಲ್ಲಿಸಿದ ಮರಗಳ ಹಸುರು. ಈ ವಿಧದ ಹಸುರುಗಳು ಕಲಾವಿದನೊಬ್ಬನು ಕುಂಚಿನಿಂದ ಉದ್ದೇಶಪೂರ್ವಕವಾಗಿ ಬಳೆದ ಬಣ್ಣದಂತೇ ಹೊರತು, ನಮ್ಮ ನಾಡಿನಲ್ಲಿ ಕಾಣುವಂತೆ, ನಿಸರ್ಗ ಸೊಕ್ಕಿ ಅಂಕೆ ಅಂಕುಶವಿಲ್ಲದೆ ಚೆಲ್ಲಿದ ಹಸುರಿನಂತಿರಲಿಲ್ಲ. ಇಂಗ್ಲೆಂಡಿನ ಹಸುರು ನಿಸರ್ಗದ ಶೋಭೆಯನ್ನು ತೋರಿಸುವುದರ ಜತೆಗೆ ಮಾನವನ ಕೈವಾಡ ತೋರಿಸುತ್ತಿತ್ತು. ಅದೆಲ್ಲ ಕೃಷಿಕನ ಕೈಯಲ್ಲಿ ಬೆಳೆದು ಪಳಗಿದ ಹಸುರಾಗಿತ್ತು. ಮುಂದೆ ಇದೇ ಬಗೆಯ ನೋಟ ನನಗೆ ಇಂಗ್ಲೆಂಡಿನ ಎಲ್ಲೆಲ್ಲೂ ಕಾಣಸಿಕ್ಕಿತು.

ಸೌತಾಮ್ಟನಿನಿಂದ ಲಂಡನಿಗೆ, ಅಲ್ಲಿಂದ ಬರ್ಮಿಂಗ್ಹಾಮಿಗೆ; ಲಂಡನಿನಿಂದ ಬ್ರಿಸ್ಟಲ್, ಚೆಡ್ಡರ್‌ಗಳಿಗೆ, ಲಂಡನಿನಿಂದ ಆಕ್ಸಫರ್ಡ್, ಸ್ಟ್ರೆಫರ್ಡ್ ಆನ್ ಏವನಿಗೆ, ಲಂಡನಿನಿಂದ ನ್ಯೂಕಾಸಲಿಗೆ—ಇಷ್ಟೇ ಹಾದಿಗಳನ್ನು ನಾನು ಸುತ್ತಿ ಸುಳಿದದ್ದು; ಟ್ರೈನಿನಲ್ಲಿ, ಮೋಟರಿನಲ್ಲಿ. ಪಯಣದ ವೇಳೆ ಬಂಡಿಯ ಕಿಟಿಕಿಗಳಿಂದ ಕಣ್ಣು ಚಾಚಿ ಹೊರಕ್ಕೆ ನೋಡುತ್ತಲೇ ಇದ್ದೆ. ನಾಡು ಸಮತಟ್ಟಾದ ನೆಲವಲ್ಲ. ತುಂಬ ಗುಡ್ಡಗಾಡುಗಳೂ, ಅಲ್ಲಲ್ಲಿ ತಗ್ಗುಗಳಲ್ಲಿ

ಜವುಗೂ, ಹುಲ್ಲುಗಾವಲೂ, ಹರಿಯುವ ಹಳ್ಳಗಳೂ ಕಾಣಿಸುತ್ತಿದ್ದುವು. ಇಂಥವುಗಳಿಗೂ ಹಸುರು ಬೇಲಿಯಿತ್ತು. ಆ ಬೇಲಿಗಳನ್ನು ಆಕಾರಕ್ಕೆ ಕತ್ತರಿಸಿದ್ದೂ ಕಾಣಿಸುತ್ತಿತ್ತು. ಗುಡ್ಡ ಬಯಲುಗಳ ಎಡೆ ಎಡೆಗಳಲ್ಲಿ ನಟ್ಟು ಬೆಳೆಸಿದ ಮರಗಳ ಕಾಡಿದೆ. ಏರುತಗ್ಗಿನ ಪ್ರದೇಶವನ್ನು ಪಾಲುಮಾಡಿ ಬೇಲಿ ಹಾಕಿ, ಒಳಗೆ ಬೆಳೆಯಿಸಿದ ಪೈರು ಪಚ್ಚೆ. ಕೆಲವು ಕಡೆ ಬೇಲಿಗೆ ಬದಲು ನಟ್ಟ ಸಾಲುಮರಗಳು; ನಟ್ಟು ಬೆಳೆಯಿಸಿದ ಪೈನ್ ಮರಗಳ ಕಾಡು. ಇವ್ರೊಂದೊಂದನ್ನೂ ಕಾಣುವಾಗ ಹಸುರಿನ ಔತಣವಾಗುತಿತ್ತು. ಮನುಷ್ಯ, ಕಾದು ಬೆಳೆಸಿದ, ನಟ್ಟು ಬೆಳೆಸಿದ ಪೈರು ಪಚ್ಚೆ, ಕಾಡು, ಮೋಡು, ಪೊದೆ, ಬೇಲಿಗಳಿಂದ ಪೊಸೆದು ಮಾಡಿದ ರತ್ನಗಂಬಳಿಯಾಗಿತ್ತು. ಅಂಕೆಯಿಲ್ಲದೆ ಬೆಳೆದ ನೈಸರ್ಗಿಕ ನೋಟ ಇಲ್ಲಿನದಲ್ಲ. ಇಲ್ಲಿನ ನಿಸರ್ಗದ ಸೊಗ ಅಂಕಿತ ಸೊಗ.

ನಾನು ಹೋದ ವೇಳೆಗೆ ಬೇಸಗೆ ಕಾಲಿರಿಸಿತ್ತು. ವಸಂತ ಋತು ಕಳೆದಿದ್ದರೂ ನೆಲದ ಹಸುರಿನಲ್ಲಿ ಹೂ ಕಾಣಿಸುತ್ತಿತ್ತು; ಉದ್ಯಾನಗಳಲ್ಲಿ ಹೂ ತುಂಬಿತ್ತು. ಹಾರ್ಸ್ ಚೆಸ್ಟ್‌ನಟ್‌ನಂತಹ ಮರಗಳು ಹೂವಿನ ತೇರಾಗಿದ್ದುವು. ಸೇಬಿನ ಮರಗಳಂತೂ ಗುಲಾಬಿ, ಬಿಳಿಹೂಗಳಿಂದ ಅತ್ಯಂತ ಮನಮೋಹಕವಾಗಿದ್ದುವು. ಈ ಯಾವತ್ತು ಸಸ್ಯಸಾಮ್ರಾಜ್ಯಕ್ಕೆ ಬಿಸಿಲು ಮುಗಿಲುಗಳೊಡನೆ ಕಣ್ಣುಮುಚ್ಚಾಲೆಯಾಡುವುದೊಂದೇ ಕೆಲಸ. ಇಂಗ್ಲೆಂಡಿನ ಬೇಸಗೆ ನಮ್ಮೂರಿನ ಉರಿ ಬೇಸಗೆಯಲ್ಲ. ಬಾನಲ್ಲಿ ಅನುದಿನವೂ ಮುಗಿಲು ಕವಿದೇ ಇರುತ್ತದೆ. ಆಗೊಮ್ಮೆ ಈಗೊಮ್ಮೆ ಬಿಸಿಲು ನೆಲದ ಹೊಸ ಹಸುರಿನ ಮೇಲೆ ಬಿತ್ತೆಂದರೆ ಎಳಗೂಸಿನ ನಗುವಿನಂತೆ ನಿಷ್ಕಲ್ಮಷ ನಗು ಸೂಸುತ್ತದೆ. ಪೈನ್‌ಮರಗಳ ಕಡು ಹಸುರಿನ ಮೇಲೆ ಆ ಬಿಸಿಲು ಬೀಳುವಾಗ ಬ್ರಿಟಿಷ್ ಜನಗಳ ಗಂಭೀರ ನಡೆಯನ್ನು ಪ್ರತಿಫಲಿಸುತ್ತದೆ.

ಮಳೆಯ ಹನಿ ಎಂದು ಉದುರೀತು ಎನ್ನುವಂತಿಲ್ಲ. ಸದಾ ಚಳಿಮಳೆಗಳಿಗೆ ಸಿದ್ಧವಾಗಿಯೇ ಹೊರಬೀಳಬೇಕು. ಅಂಗಿ ನಿಲುವಂಗಿಗಳ ನಂಟುತನ ನಮಗೆ ತಪ್ಪುವಂತಿಲ್ಲ. ಮುಗಿಲಿನ ಮುಸುಕಿರುವಲ್ಲಿ ಅದು ಅನಿವಾರ್ಯ. ನಾನಿದ್ದ ಕೆಲವು ದಿನ ಸಂಜೆ ಮುಂಜಾನೆಗಳಲ್ಲಿ ಮನೆಯೊಳಗೆ ಅಗ್ಗಿಷ್ಟಿಕೆಯನ್ನೂ ಹೊತ್ತಿಸಬೇಕಾಗುತ್ತಿತ್ತು.

ಊರಿನ ಗುಡ್ಡಗಳೋ! ಕಡಿದಾದ ಭೀಕರ ಪರ್ವತ ಶ್ರೇಣಿಗಳಲ್ಲ.

ಮೆಲುವಾಗಿ ಹಾಸಿಹರಡಿರುವ ಗುಡ್ಡಗಳು; ನಯವಾದ ಇಳುಕಲುಗಳು–ಸಮತಟ್ಟಾದ ನೆಲ ತೀರ ಕಡಿಮೆ. ಈ ಎಲ್ಲ ಗುಡ್ಡಗಳು ಐನೂರು ಸಾವಿರ ಅಡಿಗಳ ಉನ್ನತಿಯನ್ನು ಮೀರಲಾರವು. ಉರುಳಿ ಸರಿಯುವ ಕಡಲ ತೆರೆಗಳನ್ನು ಒಂದು ಕ್ಷಣಕ್ಕೆ ಸ್ತಂಭನಗೊಳಿಸಿ ನಿಲ್ಲಿಸಿದಂತೆ ಕಾಣುತ್ತವೆ— ಈ ಗುಡ್ಡಗಳು. ಅವುಗಳ ಮೈಯೆಲ್ಲ ಹಸುರೇ. ಕೃಷಿಯಿಂದ ಪಳಗಿದ ಬೆಟ್ಟಗಳು; ಮನೆಮಠಗಳಿಂದ ಸಿಂಗಾರಗೊಂಡವು. ಗುಡ್ಡಗಳ ಮೈಯಲ್ಲಿ ಬರಿಮಣ್ಣಿನ ಮುಕ್ಕೂ ಕಾಣುವುದಿಲ್ಲ. ಏರು ಹಾಗಾದರೆ, ತಗ್ಗು ಇನ್ನಷ್ಟು ಮನೋಹರ. ತಗ್ಗಿನ ಬಯಲುಗಳಲ್ಲಿ ದಟ್ಟನಾಗಿ ಹುಲ್ಲು ಬೆಳೆದಿರುತ್ತವೆ. ಆ ಹಸುರಿನ ಮೇಲೆ ಹಳದಿ, ಬಿಳಿಯ ತಾರೆಗಳಂತೆ ಎಷ್ಟೆಷ್ಟೋ ಹೂವುಗಳು. ಈ ಬಯಲಿಗೂ ಆವರಣವಿದೆ, ಬೇಲಿಯಿದೆ. ಅಲ್ಲಿ ಮೇಯುವ ದನಕರುಗಳು ಪುಣ್ಯಜೀವಿಗಳು. ಎಷ್ಟು ಸೊಂಪು ಅವುಗಳ ಶರೀರ! ಏರ್‌ಶೀರ್‌ನಂತಹ ದೊಡ್ಡ ಜಾತಿಯ ದನಗಳೇ ಕಾಣಿಸುತ್ತವೆ. ಕೆಲವೊಂದು ಬಯಲು ಗಾವಲುಗಳು ಕುರಿಗಳಿಗೆ ಮೀಸಲು. ಇನ್ನು ಕೆಲವುಗಳ ನಡುವೆ ಕೋಳಿಯ ಮನೆಗಳಿವೆ. ಅವುಗಳ ಸಂಸಾರವಿದೆ. ಈ ಹಸುರು ಭೂಮಿಯ ನಡುವೆ–ತಗ್ಗಿನಲ್ಲಿ ಹಳ್ಳ, ತೋಡುಗಳು ನಗುತ್ತ ಹರಿಯುತ್ತಿರುತ್ತವೆ. ಹಳ್ಳಗಳಿಗೂ ಆಚೀಚೆಗೆ ಹಸುರು ದಂಡೆಗಳಿವೆ. ಮರ, ಹೊದರುಗಳ ಬೇಲಿ ಅವಕ್ಕೆ. ಅವುಗಳಲ್ಲಿ ಕಾಡುಬಾತುಗಳ ಸಂಸಾರ ಕಾಣಬಹುದು;ಹಂಸಪಕ್ಷಿಗಳನ್ನು ಕಾಣುವುದು ಅಪೂರ್ವವಲ್ಲ.

ಈ ನೈಸರ್ಗಿಕ ಹಳ್ಳಗಳ ಜತೆಗೆ ಮಾನವ ನಿರ್ಮಿತ ಕಾಲುವೆಗಳಿವೆ. ಎಲ್ಲೆಲ್ಲೂ ಏರನ್ನು ಕಡಿದು ಕಾಲುವೆ ಮಾಡಿದ್ದಾರೆ; ತಗ್ಗನ್ನು ಏರಿಸಿ ಕಾಲುವೆ ಹರಯಿಸಿದ್ದಾರೆ. ಇವು ದೋಣಿಗಳ ಸಂಚಾರಕ್ಕೆ! ದೇಶದಲ್ಲಿ ರೈಲು ಮೋಟರುಗಳ ಹಾದಿಗೆ ಬರಗಾಲವಿಲ್ಲದೆ ಹೋದರೂ, ಜಲಮಾರ್ಗಗಳಿಂದ ದೊರೆಯುವ ಲಾಭವನ್ನು ಅವರು ಉದಾಸೀನರಾಗಿ ಕಂಡಿಲ್ಲ.

ಇಂಗ್ಲೆಂಡಿನ ನೆಲ ಸ್ವಾಭಾವಿಕವಾಗಿ ಅಷ್ಟೊಂದು ಸಾರಭರಿತವಾಗಿದೆಯೆಂದು ನನಗನಿಸಲಿಲ್ಲ. ರೈಲುಹಾದಿಯ ಮಗ್ಗುಲಲ್ಲಿ ಅಲ್ಲಲ್ಲಿ ಕಡಿದ ನೆಲ ಕಾಣಿಸುತ್ತದೆ. ಕಡಿದ ಭಾಗಗಳನ್ನು ಕಾಣುವಾಗ, ತೀರ ಮೇಲಿನ ತನಕವೂ ಚಾಕ್,ಜೇಡಿಮಣ್ಣುಗಳು ತುಂಬಿದಂತೆ ಕಾಣುತ್ತದೆ. ಇಂತಹ ನೆಲದಲ್ಲಿಯೂ ಸೊಂಪಾದ ಗಿಡ, ಮರಗಳಿರಲು ಕೃಷಿಯಿಂದೊದಗಿಸುವ ಗೊಬ್ಬರವೇ

ಕಾರಣವಾಗಿರಬೇಕು. ನಾನು ಸಂಚರಿಸಿದ ಒಂದು ದೇಶಭಾಗವು ಮಾತ್ರ ತೀರ ಕಗ್ಗುಕಗ್ಗಾದ ಗುಡ್ಡಗಳಿಂದ ತುಂಬಿತ್ತು. ವೇಲ್ಸಿನ ದಕ್ಷಿಣ ಭಾಗವದು. ಲಂಡನಿನ ನೇರ ಪಡುವಣಕ್ಕೆ ಬ್ರಿಸ್ಟಲ್ ನಗರವಿದೆ. ಅಲ್ಲಿಂದ ಸ್ವಲ್ಪ ದೂರದಲ್ಲಿ ಚೆದ್ದರ್ ಎಂಬ ಪರ್ವತ ಪ್ರದೇಶ ಬರುತ್ತದೆ. ಚೆದ್ದರ್ ನೈಸರ್ಗಿಕ ಗುಹೆಗಳಿಗೆ ಹೆಸರಾದ ಊರು. ಅಲ್ಲಿಗೊಮ್ಮೆ ಹೋಗಿದ್ದೆ. ಬ್ರಿಸ್ಟಲ್ ದಾಟಿದ ಬಳಿಕ ನಮಗೆ ಸುಮಾರು ಸಾವಿರ ಅಡಿಗಳಿಗಿಂತಲೂ ಎತ್ತರವಾದ ಗುಡ್ಡ ಬೆಟ್ಟಗಳ ಸಾಲುಗಳು ಕಾಣಸಿಗುತ್ತವೆ. ಅಲ್ಲಲ್ಲಿ ಒಂದೆರಡು ಸುಂದರ ಸರೋವರಗಳೂ ಇದ್ದುವು. ಈ ಗುಡ್ಡಗಳ ಮೈಯನ್ನು ಮನುಷ್ಯ ಜರಿದು ಮುಕ್ಕುಗೊಳಿಸಿದ್ದು ಕಾಣುತ್ತದೆ. ಅವು ಲೈಮ್‌ಸ್ಟೋನ್ ತೆಗೆಯುವ ಅಣೆಗಳು. ಈ ಪ್ರದೇಶದ ನೆಲವಾದರೂ ಅಷ್ಟೊಂದು ಸಾರವತ್ತಾಗಿರಲಿಲ್ಲ. ಆದರೂ ಆ ಉನ್ನತ ಬೆಟ್ಟಗಳಲ್ಲೂ ಮನೆಮಾರುಗಳಿವೆ. ಅವುಗಳ ಮೈಯಲ್ಲೂ ಕೃಷಿಯಿದೆ.

ಬ್ರಿಸ್ಟಲಿನ ಈ ಭಾಗದಲ್ಲಿ ಸೇಬಿನ ತೋಟ ಕಣ್ಣಿಗೆ ಹಬ್ಬ. ಸಾವಿರಾರು ಎಕ್ರೆ ವಿಸ್ತೀರ್ಣಕ್ಕೆ ಈ ಸೇಬಿನ ಮರದ ತೋಟಗಳಿವೆ. ನಮಗೆ ಹಣ್ಣಿನ ಮರಗಳ ಕಲ್ಪನೆ ಬಂದಾಗ ಹಲಸು ಮಾವುಗಳ ನೆನವರಿಕೆಯಾಗುತ್ತದೆ. ಆದರೆ ಯುರೋಪಿನ ಹಣ್ಣಿನ ಮರಗಳಿಗೆ ಆ ಗಾತ್ರವಿಲ್ಲ, ದಟ್ಟಣೆಯಿಲ್ಲ. ಅವುಗಳಲ್ಲಿ "ಚೆರ್ರಿ"ಯೊಂದೇ ಸ್ವಲ್ಪ ಎತ್ತರಕ್ಕೆ ಬೆಳೆಯುವ ಮರ. ಉಳಿದ ಹಣ್ಣಿನ ಮರಗಳು ನಮ್ಮ ಮಾನದಿಂದ ಮರಗಳಲ್ಲ, ಗಿಡಗಳು. ಎಪ್ಪಲ್, ಪ್ಲಮ್, ಎಪ್ರಿಕಾಟ್, ಪೀಚ್, ಪೇರ್—ಇವೆಲ್ಲ ಮಾನವನ ಗಾತ್ರಕ್ಕೆ ಸಮನಾಗಿ ಬೆಳೆಯುತ್ತವೆ.

ಹಣ್ಣು ಕೈ ಎಟುಕಿಗೆ ಸಿಗುವಷ್ಟು ಸಮೀಪ. ನಾನು ಹೋದ ವೇಳೆ ಸೇಬಿನ ಮರಗಳು ಹೂಬಿಡುವ ಕಾಲ. ಮರಗಳ ತುಂಬ ಹೂಗಳೇ. ಆ ಬಿಳಿ,ಗುಲಾಬಿ ಹೂಗಳಿಂದಾಗಿ ಎಪ್ಪಲ್ ತೋಟಗಳೆಂಬವು ತಾತ್ಕಾಲಿಕ ಹೂದೋಟವಾಗಿದ್ದುವು. ಚೆದ್ದರ್ ಪ್ರದೇಶದಲ್ಲಿ ಬೆಟ್ಟ ತುಸುತುಸುವಾಗಿ ರುದ್ರ ರೂಪ ತಾಳುತ್ತದೆ. ಎರಡೆರಡು ಬೆಟ್ಟದ ಸಾಲುಗಳು ಕಡಿದಾಗಿಯೂ, ಅಂಕುಡೊಂಕಾಗಿಯೂ ನಿಂತಿದ್ದು ನಡುವಣ ಮಾರ್ಗಕ್ಕೆ ಚೆದ್ದರ್‌ಗೋರ್ಜ್ ಎಂಬ ನಾಮಕರಣ ಮಾಡಿದ್ದಾರೆ. ಮನುಷ್ಯನ ಎತ್ತರವನ್ನು ನೆಟ್ಟಗೆ ಗೋಡೆಯಂತೆ ಧಿಕ್ಕರಿಸಿ ನಿಂತ ಈ ಬೆಟ್ಟಗಳ ಮೈ ತುಂಬ ಕಠಿಣ ಶಿಲೆಗಳು

ಕಾಣುತ್ತವೆ. ಮಾನವನು ಕ್ಷಣಿಕ, ತಾನು ಕಾಲಾತೀತ–ಎನ್ನುವ ಹೆಮ್ಮೆ ಅವಕ್ಕೆ. ಈ ಕೊರಕಲಿನ ನಡುವೆ ಡಾಮರು ಬಳಿದ ರಸ್ತೆಯಿದೆ. ಅನೇಕ ಪ್ರವಾಸಿಗಳು ಇಲ್ಲಿನ ಗಂಭೀರ ನಿಸರ್ಗ ಕಾಣುವುದಕ್ಕೆ ಬರುತ್ತಾರೆ. ಈ ಬೆಟ್ಟದ ಮೈಯ್ಯಲ್ಲಷ್ಟೇ ಮನುಷ್ಯನ ಕೈಗೆ ಸಿಗದ ಹೊದರು, ಬೀಳಲನ್ನು ನಾನು ಕಂಡದ್ದು. ಈ ಹೊದರುಗಳಲ್ಲಿ ಸದಾ ಹಾರುತ್ತ ಚೀರುತ್ತಿರುವ ಶೀವನ್, ಗಿಡುಗಗಳ ಸಾಮ್ರಾಜ್ಯವಿದೆ. ಇಲ್ಲಿಂದ ಹುಟ್ಟಿ ಹರಿಯುವ ಝರಿಗಳು, ಹಳ್ಳಗಳು ವನದೇವಿಯರಂತೆ ನಲಿದು ಸರಿಯುವ ನೋಟ ಬಹು ಚೆನ್ನಾಗಿದೆ. ಚೆದರ್ ಊರಿನ ಮುಖ್ಯ ಬೀದಿಗೆ ತಾಗಿ ಇಂತಹ ಒಂದು ಹಳ್ಳ ಹರಿಯುತ್ತದೆ. ಅದರ ಮಗ್ಗುಲಲ್ಲಿ ಮನೆಗಳಿವೆ, ಹೊಟೇಲುಗಳಿವೆ. ಅಲ್ಲಿನ ಜನ ಈ ಹಳ್ಳದ ಮಗ್ಗುಲಿಗೆ ದಂಡೆಕಟ್ಟಿ ಅದಕ್ಕೊಪ್ಪುವ 'ವಿಲ್ಲೋ' ವೊದಲಾದ ಮರಗಿಡಗಳನ್ನು ನಟ್ಟಿದ್ದಾರೆ. ನೀರನ್ನು ಕೊಳವಾಗಿ ನಿಲ್ಲಿಸಿಕೊಂಡು ಬಣ್ಣದ ನೆಲ, ಮೀನು, ಪಾಮಾಚಿಗಳಿಂದ ಸಿಂಗರಿಸಿದ್ದಾರೆ.

ಚೆದ್ದರ್ ಕೊರಕಲನ್ನು ನೋಡುವುದಕ್ಕಿಂತ ಹೆಚ್ಚಾಗಿ ಜನ ಬರುವುದು ಇಲ್ಲಿನ ಕೆಲವು ನಿಸರ್ಗಸುಂದರ ಗುಹೆಗಳನ್ನು ನೋಡುವುದಕ್ಕೆ. ಇಂಗ್ಲೆಂಡಿಗೆ ಬರುವ ಪೂರ್ವದಲ್ಲೇ ಚೆದ್ದರ್ ಗುಹೆಗಳ ಸೌಂದರ್ಯದ ವಿಚಾರ ಕೇಳಿದ್ದೆ. ಈ ಊರಿನ ತುದಿಯಲ್ಲಿ ಬೆಟ್ಟಗಳು ತೊಡಗುವ ಪ್ರಾರಂಭದಲ್ಲಿ ಗುಹೆಗಳ ಬಾಗಿಲಿದೆ. ಅದಕ್ಕೆ ಕಾವಲಿನ ಮನೆಯಿದೆ, ದ್ವಾರ ಇದೆ. ಒಂದೆರಡು ಶಿಲಿಂಗುಗಳ ತೆರ ತೆತ್ತು ಒಳಗೆ ನೋಡ ಹೋಗಬೇಕು. ಇಂತಹ ಎರಡು ಪ್ರವೇಶ ದ್ವಾರಗಳಿವೆ. ಒಳಗೆ ಹೋಗುವ ತನಕ ಏನಿದ್ದೀತು? ಹೇಗಿದ್ದೀತು? ಎಂಬ ಕಲ್ಪನೆಯಾಗುವುದಿಲ್ಲ. ಒಳಗೆ ಹೊಕ್ಕಮೇಲೆ ಮಾರ್ಗದರ್ಶನ, ವಿದ್ಯುದ್ದೀಪಗಳಿಲ್ಲದೆ ದಾರಿ ಹುಡುಕುವುದೂ ಅಸಾಧ್ಯ. ಚೆಲುವನ್ನರಸುವುದೂ ಅಸಾಧ್ಯ. ಸಾವಿರಾರು ವರ್ಷಗಳಿಂದ ಈ ಬೆಟ್ಟದ ಮೇಲೆ ಬಿದ್ದ ಮಳೆಯ ನೀರು ಹಾಗೆಯೇ ಇಂಗಿ, ಶಿಲೆಯ ಪದರುಗಳೊಳಗಿಂದ ಜಿನುಗಿ, ಮಿದುವಾದ ಮಣ್ಣಿನ ಭಾಗವನ್ನು ಹೊತ್ತು ಸಾಗಿಸಿ ಅಂಕುಡೊಂಕೂ, ಬಹು ನೀಳವೂ ಆದ ಒಂದೆರಡು ಸುರಂಗಗಳಂತಿರುವ ಗುಹೆಗಳನ್ನು ನಿರ್ಮಿಸಿವೆ. ಸುರಂಗಗಳ ಮೇಲ್ಭಾಗ ಎಷ್ಟೋ ಕಡೆ ತಲೆಗೆ ಬಡಿವಷ್ಟು ಸಮೀಪ. ಆಚೆ ಈಚೆ, ಹಿಂದುಮುಂದೆಲ್ಲ ಬಂಡೆಗಳ ಒರಟು ಮೂರ್ತಿಗಳೇ ನಮ್ಮ ಕಣ್ಣಿಗೆ ಕಾಣುತ್ತವೆ. ಹೋಗುವ ದಾರಿಗೆ ದೊರಗು ಉಸುಬನ್ನು ತಂದು ಸುರಿದು

ಚೆನ್ನಾಗಿ ಮಾಡಿದ್ದಾರೆ. ಈ ದಾರಿಯಲ್ಲಿ ಅಲ್ಲಲ್ಲಿ ವಿದ್ಯುದ್ದೀಪಗಳನ್ನಿರಿಸಿದುದರಿಂದ ನಡೆಯುವುದಕ್ಕೆ ತೊಂದರೆಯಿಲ್ಲ. ಆದರೆ ಗ್ಯೈಡ್ ಒಬ್ಬ ಬಳಿ ಯಿಲ್ಲದೆ ಹೋದರೆ ನಾವು ಹೋದಂತೆ ಬರಬೇಕು. ಅಲ್ಲಲ್ಲಿ ಒಂದೊಂದು ಮೂಲೆಯನ್ನೂ ಬೆಳಗುವುದಕ್ಕೆ ಪ್ರಕಾಶಮಯವಾದ ವಿದ್ಯುದ್ದೀಪಗಳನ್ನಿರಿಸಿದ್ದಾರೆ. ನಮ್ಮ ಮಾರ್ಗದರ್ಶಕ, ಅಂತಹ ಒಂದು ದೀಪ ಬೆಳಗಿದನೆಂದರೆ, ಸುರಂಗದ ಒಂದು ಮಗ್ಗುಲೋ ಮೂಲೆಯೋ ಬೆಳಗುತ್ತದೆ. ಆ ಕಡೆ ಇಣಿಕಿದರೆ ಗುಹೆ ಕಿರಿದಾಗಿ ಇನ್ನೊಂದು ಗವಿಯನ್ನು ತೋರಿಸುತ್ತದೆ. ಮತ್ತೊಂದು ದೀಪ ಬೆಳಗಿದೊಡನೆಯೆ ಎರಡನೆಯ ಗುಹೆಯ ಒಳಗಡೆ ಒಂದು ವಿಚಿತ್ರಾಕೃತಿಯು ವೇಗುಲವೇ ಕಾಣಿಸುತ್ತದೆ. ಇಂತಹ ಹಲವಾರು ದೃಶ್ಯಗಳಿವೆ. ಕೆಲವು ಒಂದೆರಡಡಿ ಎತ್ತರದವಾಗಿದ್ದರೆ, ಕೆಲವು ಹತ್ತಿಪ್ಪತ್ತಡಿ ಅಗಲವೂ ಎತ್ತರವೂ ಆದವು. ಒಂದೊಂದರ ಆಕಾರ ಒಂದೊಂದು ತೆರ. ಬಣ್ಣ ಒಂದೊಂದು. ಜಗತ್ತಿನಲ್ಲಿ ನಾವು ನೋಡಿರುವ ಯಾವ ಮಾನವ ನಿರ್ಮಿತ ವಾಸ್ತು ಶೈಲಿಯೂ ಅದಲ್ಲ. ಅವರು ಈ ಒಂದೊಂದು ದೃಶ್ಯಕ್ಕೂ ಒಂದೊಂದು ಹೆಸರಿರಿಸಿದ್ದಾರೆ. ಅದೊಂದು ಕಲ್ಪನಾಲೋಕ. ಕೆಲವು ವಿಗ್ರಹಗಳಂತೆ ಕಾಣುತ್ತವೆ; ಕೆಲವು ಸ್ತಂಭರಾಜಿಗಳಂತಿವೆ; ತೆರೆಗಳಂತಿವೆ; ಜಾಲರಿಗಳಂತಿವೆ; ಏನೇನೋ ಇವೆ. ಬೆಳಕಿನ ಪ್ರಮಾಣಕ್ಕೆ ಸಮನಾಗಿ ಅಪಾರದರ್ಶಕವಾಗಿ ಕಾಣಿಸುತ್ತವೆ; ಅರ್ಧ ಪಾರದರ್ಶಕವಾಗಿ ಕಾಣಿಸುತ್ತವೆ. ಬಿಳುಪು, ದಂತ ವರ್ಣ, ನೆಲ್ಲಿನ ಬಣ್ಣ, ಗುಲಾಬಿ ಬಣ್ಣ ಮಾಂಸವರ್ಣಗಳೇ ಪ್ರಧಾನ ಬಣ್ಣಗಳು. ಇಂತಹ ಮಾಯಾನಗರನನ್ನು ಕಾಣುತ್ತ ನಿಂತಾಗ ಮಾರ್ಗದರ್ಶಕ ಇನ್ನೊಂದು—ದೀಪದ ಗುಂಡಿ ಒತ್ತಿದನಾದರೆ ಈ ನಗರದ ಮುಂದೆ ಹಾಸಿದ ಸಣ್ಣ ನೀರಿನ ಹಾಳೆಯಲ್ಲಿ ವಿಚಿತ್ರ ಪ್ರತಿಬಿಂಬ ಮೂಡುತ್ತದೆ. ಈ ಅಮರಾವತಿಯ ಹಿಂದೆ ಬೆಳಕು ಹಾಯಿಸಿದರೆ ಆಗ ಈ ಲೋಕಕ್ಕೆ ಒಂದು ವಿಚಿತ್ರ ಪಾರದರ್ಶಕತೆ ಒಂದು ಮಾಯಾಶಿಲ್ಪಿಯೊಬ್ಬನು ಮೇಣದಿಂದ ಕಟ್ಟಿದ ಅರಮನೆ, ಉದ್ಯಾನಗಳಂತೆ ಇದು ಕಾಣತೊಡಗುತ್ತದೆ.

ಇನ್ನೊಂದು ಗುಹೆಯ ಭಾಗಕ್ಕೆ ಹೋಗಿ ಬೆಳಗಿದರೆ—ಕಿಂಗ್ ಸೊಲ್ಮನನ ದೇವಾಲಯವಂತೆ! ಮತ್ತೊಂದರಲ್ಲಿ ಅಮರೋದ್ಯಾನ; ಇನ್ನೊಂದು ಉತ್ತರ ಧ್ರುವದ ಅರೋರಾ ತೆರೆಯಂತೆ ಕಾಣಿಸುತ್ತದೆ. ಇಂತಹ ಅನೇಕ ದೃಶ್ಯಗಳಿವೆ. ಅವುಗಳ ಆಕಾರ, ಬೆಡಗು, ಬಣ್ಣಗಳೆಲ್ಲ ವಿಚಿತ್ರ ಕಾಲ್ಪನಿಕ

ಲೋಕದವು ಎನಿಸುತ್ತದೆ. ಹೊರಗೆಲ್ಲೂ ಕಾಣಸಿಗದ ಅನಂತರೂಪಿ ಬಿಂಬ, ಪ್ರತಿಬಿಂಬ ಲಾವಣ್ಯಮಯ ರಾಜ್ಯವದು. ಇವೆಲ್ಲವು ಯುಗಪುರುಷನ ಶಿಲ್ಪಿ ಚಾತುರ್ಯ. ಮಣ್ಣಿನಲ್ಲಿ ಕರಗಿದ ಕೆಲ್ಸಿಯಮ್ ಕಾರ್ಬನೇಟ್‌ನಂತಹ ಲವಣಗಳು ನೀರಿನೊಂದಿಗೆ ಹರಿದು ಬಂದು, ಅದರ ಯಾವುದೋ ಒಂದು ಕಣ, ಶಿಲೆಯ ಎಡೆಗಳಿಂದ ಜಿನುಗುವಾಗ ಅಂಟಿಕೊಂಡು, ಕಾಲಾಂತರದಲ್ಲಿ ಇಂತಪ ಅನುಪಮವೂ, ಅದ್ಭುತವೂ ಅದ ದೃಶ್ಯಗಳುಂಟಾಗಿವೆ. ಈ ಬಗೆ ಯಲ್ಲಿ ಒಂದು ಘನ ಇಂಚು ಲವಣ ಹೆಪ್ಪುಗಟ್ಟಿನಿಲ್ಲಬೇಕಾದರೆ ಹತ್ತುಸಾವಿರ ವರ್ಷಗಳು ಹಿಡಿಯುತ್ತವಂತೆ. ಹಾಗೆಂದ ಮೇಲೆ, ಚೆದ್ದರಿನ ವಿಶ್ವಕರ್ಮನ ನಗರ, ಕೆಲವು ಕೋಟಿ ವರ್ಷಗಳ ಕೈವಾಡವಾಗಿರಬೇಕಾಯಿತು. ಇನ್ನೂ ಈ ಶಿಲ್ಪಕೃತಿ ಮುಂದುವರಿದಿದೆ. ಮಾನವನ ಆಯುರ್ಮಿತಿಯಿಂದ ಇದು ಕದಲದೆ, ಬದಲಿಸದೆ ನಿಂತಿದೆಯಾದರೂ, ಗ್ರಹಮಾನಗಳ ಮಾನದಿಂದ ಈ ಬೆಳವಣಿಗೆ ಸಾಗಿದೆ. ಪ್ರಪಂಚದಲ್ಲಿ ಇಂತಹ ನೈಸರ್ಗಿಕ ಗುಹಾಲಯ ಗಳು ಕೆಲವೇ ಇವೆ.

ಇಲ್ಲಿನ ಎರಡು ಗುಹೆಗಳಲ್ಲಿ ಸುಮಾರು 50-60 ಭವ್ಯವೂ, ಒಂದ ಕ್ಕಿಂತ ಇನ್ನೊಂದು ಭಿನ್ನವೂ ಆದ ನೋಟಗಳು ಕಾಣಸಿಗುತ್ತವೆ. ಕಾಣ ಕಾಣುತ್ತ ಮನಸ್ಸು ಹುಚ್ಚುಗಟ್ಟುತ್ತದೆ. ಈ ಸ್ವಪ್ನಸೌಂದರ್ಯ ನೋಡುತ್ತ ನಿಂತಿರುವ—ಎನಿಸುತ್ತದೆ. ಅವನ್ನು ನೋಡಿ ಹೊರಗೆ ಬರುವಾಗ ಸ್ವಪ್ನಭಂಗ ವಾದಷ್ಟೇ ನಿರಾಶೆ. ಕೊಟ್ಟ ಒಂದೊಂದು ಶಿಲಿಂಗ್ ಪ್ರವೇಶ ಧನಕ್ಕೆ ಪ್ರತಿ ಯಾಗಿ ವಿಶ್ವವನ್ನೆ ಸುತ್ತಾಡಿ ಬಂದ ಅನುಭವವಾಗುತ್ತದೆ. ಕೆಲವು ದಿನಗಳ ತನಕ ನಿದ್ರೆಯಲ್ಲೂ ಈ ಅಮರ ಲೋಕವೇ ನಲಿದಾಡುತ್ತದೆ. ನಾವು ಅಲ್ಲಿ ಸಂಚರಿಸುವ ಹಸುಗೂಸುಗಳಾಗುತ್ತೇವೆ. ಮಾನವನ ಅನೇಕ ಅದ್ಭುತ ಊಹಾಸಾಹಿತ್ಯದಲ್ಲಿ ಸೃಷ್ಟಿಯಾದ ಸ್ವರ್ಗಕ್ಕೆ ಇಂತಹವೇ ಪ್ರೇರಣೆ ಕೊಟ್ಟಿರ ಬಹುದು. ಆಗ ಇನ್ನೊಂದು ಪ್ರಶ್ನೆಮೂಡುತ್ತದೆ—ನರಕದ ಕಲ್ಪನೆಗೆ ಯಾವ ಪ್ರೇರಣೆ ಎಂದು!

ಈ ಸುಂದರ ನಾಡಿನಲ್ಲಿ ನಲಿದೋಡುವ ವಸಂತ, ವೈಶಾಖ ಋತುಗಳು ಇಂಗ್ಲಿಷ್ ಜನಗಳ ಸೌಂದರ್ಯ ಪ್ರಿಯತೆಯನ್ನು ತಿದ್ದಿಬೆಳೆಸಿದ ಶಕ್ತಿಗಳಾಗಿರ ಬೇಕು. ಈ ಜನ ತಮ್ಮ ಗುಡ್ಡ,ಹೊಲಮನೆಗಳಲ್ಲಿ,ತಗ್ಗು ತೆವರುಗಳಲ್ಲಿ ಕಂಡ ಚೆಲುವನ್ನು ತಮ್ಮ ಮನೆ ಹಿತ್ತಿಲುಗಳಿಗೂ, ನಗರಕ್ಕೂ ತಂದು ಬೆಳಗಿಸಿದ್ದಾರೆ.

ಲಂಡನ್‌ನಿಂದ ಬರ್ಮಿಂಗ್ಹಾಮ್, ಆಕ್ಸ್‌ಫರ್ಡ್ ಮೊದಲಾದ ಊರುಗಳಿಗೆ ಹೋಗಿ ಬರುವ ರೈಲು ಮೋಟಾರು ದಾರಿಗಳ ಮಗ್ಗುಲಿಗೆ ಸಣ್ಣ ದೊಡ್ಡ ಹಳ್ಳಿ, ಪೇಟೆ, ಪಟ್ಟಣಗಳಿವೆ. ಹಳ್ಳಿಯ ಮನೆಗಳಲ್ಲೂ, ಪೇಟೆಯ ಮನೆಗಳಲ್ಲೂ, ಎಲ್ಲಾ ವಿಶ್ರಾಂತಿ ವಿಹಾರಗಳಲ್ಲೂ, ಜನಗಳ ಸೌಂದರ್ಯ ಪ್ರಿಯತೆ ಕಾಣುತ್ತದೆ. ಮನೆಯ ಹಿಂದಿನ ಹತ್ತೆಂಟು ಚದರಡಿ ಹಿತ್ತಿಲೇ ಇರಲಿ, ಊರ ಬಳಿಯ ಬರಿದಾದ ವಿಶಾಲ ನೆಲವೇ ಇರಲಿ, ನಟ್ಟು ಬೆಳೆದ ಹೂ ಗಿಡಗಳಿವೆ; ಉದ್ಯಾನಗಳಿವೆ; ಸಾಲುಮರಗಳಿವೆ; ತರಕಾರಿ ತೋಟಗಳಿವೆ. ಉಪ್ಪರಿಗೆಯ ಮನೆಯವರು ಕಿಟಕಿಯ ಮಗ್ಗುಲಲ್ಲಿ ಹೂ ಗಿಡಗಳನ್ನು ಬೆಳೆಯಿಸುತ್ತಾರೆ. ಮೇಜಿನ ಮೇಲೆ ಹೂ ದಾನಿಯಲ್ಲಿ ಸುಂದರ ಪುಷ್ಪಗಳ ಗೊಂಚಲನ್ನಿಡುತ್ತಾರೆ. ಪೇಟೆಗಳಲ್ಲಿ ಹೂಗಾರರಲ್ಲದ ಅಂಗಡಿಕಾರರು ಸಹ ಅಲ್ಲಲ್ಲಿ ಕವಾಟುಗಳ ಮೇಲೆ, ಬಾಗಿಲುಗಳ ಮಗ್ಗುಲಲ್ಲಿ ಹೂ ಗಿಡಗಳಿಂದ ಅಲಂಕರಿಸುತ್ತಾರೆ. ಅವುಗಳನ್ನು ಇರಿಸುವುದರಲ್ಲಿಯೂ ಚೆಲುವಿನ ಕಣ್ಣಿದೆ. ಹತ್ತು ಜಾತಿಯ ಹೂವುಗಳನ್ನು ಒಂದು ಸೂಡಿಮಾಡಿ ವಿಕೃತಿಗೊಳಿಸದೆ, ಒಂದೊಂದೇ ಬಗೆಯ ಹೂವಿನ ಜೊಂಕೆಯನ್ನಾಯ್ದು ಅಲಂಕರಿಸುತ್ತಾರೆ. ನಾನು ಹೋದವೇಳೆ-ಸೇವಂತಿಗೆ, ಏಸ್ಟರ್, ಗ್ಲೆಡಿಯೋಲಿ ಕಾರ್ನೇಶನ್, ಟ್ಯೂಲಿಪ್‌ಗಳಂತಹ ಹೂವುಗಳ ಕಾಲ. ಅವರ ಹೂ ಮಾರಾಟದ ಅಂಗಡಿಗಳಿಗೆ ಹೋದರೋ-ಅಲ್ಲೇ ತಾಸು ತಾಸುಗಳ ತನಕ ನಿಂತು ನೋಡುವ ಆಸೆಯಾಗುತ್ತದೆ.

ನಾನು ಹೋದ ವೇಳೆ ಇಂಗ್ಲೆಂಡಿನಲ್ಲಿ ಟ್ಯೂಲಿಪ್ ಹೂಗಳ ಸುಗ್ಗಿಯ ಕಾಲ. ಲಂಡನ್ ನಗರದ ಅನೇಕ ಉದ್ಯಾನಗಳಲ್ಲಿ ದೊಡ್ಡ ದೊಡ್ಡ ಅಂಕಣಗಳಲ್ಲಿ ಕೆಂಪು, ಹಳದಿ, ಗುಲಾಬಿ ಟ್ಯೂಲಿಪ್‌ಗಳ ಚೆಲುವೇ ಚೆಲುವು. ಅವರ ಒಂದೊಂದು ಅರಳೂ ಅಷ್ಟು ಮಿದು, ಮುದ್ದು, ಮೋಹಕ. ಯಾವನೋ ಪ್ರಣಯಿಗಾಗಿ ಮುದ್ದಿಸಲು ಕಾದುನಿಂತ ಅರೆದೆರೆದ ತುಂಬು ತುಟಿಗಳ ಚೆಲುವು ಅವಕ್ಕೆ.

ಹಾಲೆಂಡ್ ದೇಶವು ಟ್ಯುಲಿಪ್ ಹೂವುಗಳ ಸ್ವರ್ಗವಂತೆ. ನಾನಲ್ಲಿಗೆ ಹೋಗುವಾಗ ಆ ಹೂಗಾಲ ಮುಗಿದಿತ್ತು. ತಕ್ಕ ಕಾಲದಲ್ಲಿ ಅಲ್ಲಿ ಸಾವಿರಾರು ಎಕ್ರೆ ಹೊಲಗಳಲ್ಲಿ ಈ ಹೂವುಗಳ ಸುಗ್ಗಿ ಸಾಗುತ್ತದೆ. ಹೊಲಗಳಲ್ಲಿ ಅರಳುವ ಅವುಗಳ ವಿಶಾಲ ಸಮುದಾಯ ನೋಡುವುದಕ್ಕೆಂದೇ ಯುರೋ

ಪಿನ ಯಾತ್ರಿಗಳು ಬರುತ್ತಾರಂತೆ. ನಿಜವಿರಬೇಕು. ನಿಸರ್ಗವನ್ನು ಮೆಚ್ಚುವ ಕಣ್ಣು ಅವರಲ್ಲಿ ಚೆನ್ನಾಗಿ ಬೆಳೆದಿದೆ. ಯುರೋಪಿನಲ್ಲಿ ನಾನು ತಂಗಿದ ಹೊಟೇಲು, ಮನೆಗಳಲ್ಲೆಲ್ಲ ಅವರ ಪುಷ್ಪಪ್ರೀತಿ ಹೊಡೆದು ಕಾಣುತ್ತಿತ್ತು.

ಲಂಡನಿನ ಉದ್ಯಾನಗಳ ವಿಚಾರ ಒಂದು ಮಾತು ಹೇಳಿ ನಿಲ್ಲಿಸಿದೆ. ಅಲ್ಲಿನ ಹೊಲ ಮನೆಗಳನ್ನು ಬಣ್ಣಿಸಿದ ನಾನು ಈ ಉದ್ಯಾನಗಳನ್ನು ಕುರಿತು ಹೇಳದಿರಲಾರೆ. ಲಂಡನ್ ನಗರದಲ್ಲಿ ಇಂದು ಎಂಟು ಮಿಲಿಯ ಜನ ಸಂಖ್ಯೆಯಿರಬೇಕು. ಆ ಜನಸಂಖ್ಯೆಯನ್ನು ಎಣಿಸಿಕೊಂಡರೆ, ಈ ನಗರದಲ್ಲಿ ಅಲೆದಾಡುವುದಕ್ಕೆ ಜಾಗವಿದ್ದೀತೇ? ನಗರ ಜನಗಳಿಂದಲೂ, ಹೊಲಸಿನಿಂದಲೂ ಗಜಿಬಿಜಿಗೊಂಡಿರದಿದ್ದೀತೇ?—ಎನಿಸಬಹುದು. ಇಂತಹ ದೊಡ್ಡ ನಗರದ ನಡುವೆ—ವಿಲಾಸಿಯಾದವನು ಹೂಗಿಡಗಳ ಎಡೆಯಲ್ಲಿ ನಿಂತು ತನ್ನ ಪ್ರೇಯಸಿಯನ್ನು ನೆನೆಯಬಹುದು; ಉಂಡಾಡಿಯಾದವನು ಬಿಸಿಲಲ್ಲಿ ಹುಲ್ಲಿನ ಹಾಸಿಗೆಯಲ್ಲಿ ಉರುಳಾಡಬಹುದು; ವ್ಯಾಯಾಮಶೀಲ ಅಲ್ಲಿನ ಕೊಳದಲ್ಲಿ ದೋಣಿ ಆಡಬಹುದು, ವಾನಪ್ರಸ್ಥ ಸಾಲುಮರಗಳ ಎಡೆಯಲ್ಲಿ ಶೇಷಾಯುಷ್ಯ ಅಳೆಯಬಹುದು; ಅಪೂರ್ವದ ತತ್ವಜ್ಞಾನಿ ಆಕಾಶಕ್ಕೆ ಮುಖಮಾಡಿ ಸಂಸಾರದ ಕ್ಷಣಭಂಗುರತೆಯನ್ನು ನೆನೆಯ ಒಹುದು—ಎಂದು ಊಹಿಸಲು ಬಂದೀತೆ? ಲಂಡನಿಗೆ ಹೋಗುವ ತನಕ ನನಗೂ ಹಾಗೆಯೇ ಅನಿಸಿತ್ತು. ನಮ್ಮ ದೇಶದ ಮೈಸೂರು, ಉದಕಮಂಡಲಗಳನ್ನು ಬಿಟ್ಟರೆ ಉಳಿದಲ್ಲಿನ ಉದ್ಯಾನಗಳು ನೆಪಕ್ಕೆ ಮಾತ್ರ. ಇಡಿಯ ಶರೀರದ ತೂಕಕ್ಕೆ ತಿಲಕದ ಅಳತೆಯಿಂದ ಇಡುವ ಚುಕ್ಕಿಯಷ್ಟು ಸ್ವಲ್ಪ. ಇರುವ ಉದ್ಯಾನಗಳಲ್ಲೂ ಅಚ್ಚುಕಟ್ಟಿಲ್ಲ; ಆಯ್ಕೆಯಿಲ್ಲ. ಸಾವಿರ ಜಾತಿಯ ಮರಗಳ ಸಮುದಾಯ. ಇದು ಉದ್ಯಾನವೋ, ಕಾದಿಟ್ಟ ಕಾಡೋ ಅನಿಸಬೇಕು. ನಮ್ಮ ದೇಶದಲ್ಲಿ ಉದ್ಯಾನ ಎಂದೊಡನೆಯೇ ಸಾವಿರಾರು ಜಾತಿಯ ಸಸ್ಯಗಳನ್ನು ಒಂದೆಡೆ ತಂದು ತುರುಕಿದರೆ ಆಗುತ್ತದೆ ಎಂಬ ಕಲ್ಪನೆಯಾದೀತು. ಲಂಡನಿನ ಉದ್ಯಾನಗಳಲ್ಲಿ ಹೆಚ್ಚುಕಡಿಮೆ ಒಂದೊಂದೇ ಜಾತಿಯ ಮರಗಳು ತುಂಬಿಕೊಂಡಿರುವುದು ಕಾಣುತ್ತದೆ.

ಲಂಡನಿನ ನಡುವೆ ಹೈಡ್‌ಪಾರ್ಕ್, ಕೆನ್ಸಿಂಗಟನ್ ಪಾರ್ಕ್ ಮೊದಲಾದ ಹಲವಾರು ಉದ್ಯಾನಗಳಿವೆ. ಹತ್ತು, ಇಪ್ಪತ್ತು, ಮೂವತ್ತು ಎಕ್ರೆಗಳಷ್ಟು ದೊಡ್ಡ ಉದ್ಯಾನಗಳವು. ಅವುಗಳ ನಡುವೆ ಅಂಚಿನಲ್ಲಿ, ದಾರಿಯ

ಪಕ್ಕಗಳಲ್ಲಿ ಒಂದೇ ಜಾತಿಯ ಮರಗಳ ಸಾಲನ್ನು ಕಾಣಬಹುದು. ಕೆನ್ಸಿಂಗ ಟನ್ ಪಾರ್ಕಿನ ವೃಕ್ಷಾವಳಿ, ನಟ್ಟು ಬೆಳೆಸಿದ ರಬ್ಬರ್ ಮರಗಳಂತೆ ಕಾಣು ತ್ತವೆ. ಒಂದೇ ಜಾತಿಯ ಮರಗಳು ಸಾಲಾಗಿ ಕಾಣಿಸುವಾಗ ಮೇಳವಿದೆ, ಚೆಲುವಿದೆ. ನೆಲವೆಲ್ಲ ಹಸುರು ಹುಲ್ಲಿಂದ ತುಂಬಿಕೊಂಡಿರುತ್ತದೆ. ಸಂಚಾ ರದ ದಾರಿಗಳಲ್ಲಾಗಲೀ, ಹಸುರು ಹುಲ್ಲಿನ ಮೇಲಾಗಲೀ, ಮರಗಳ ಬುಡ ದಲ್ಲೇ ಆಗಲಿ ತರಗೆಲೆಗಳ ಚೂರೂ ಕಾಣಿಸದು. ಅಲ್ಲಿ ಮಾಡಿದ ದಾರಿಯಲ್ಲಿ ಬೇಕಷ್ಟು ದೂರ ಅಲೆದಾಡಬಹುದು. ದಣಿದಾಗ ದಾರಿಯ ಮಗ್ಗುಲ ಮಂಚಗಳಲ್ಲಿ ಕುಳಿತಿರಬಹುದು. ಹುಲ್ಲಿನ ಮೇಲೆ ವಿರಮಿಸಬಹುದು. ಇಲ್ಲಿನ ಕೊಳಗಳಲ್ಲಿ ಸಂಸಾರ ಮಾಡಿಕೊಂಡಿರುವ ಬಾತುಗಳನ್ನು, ಹಂಸ ಗಳನ್ನು ಮನದಣಿಯೆ ಕಾಣಬಹುದು. ಹಳ್ಳಗಳಂತಿರುವ ಕಾಲುವೆಗಳಲ್ಲಿ ಜಲಪಕ್ಷಿಗಳೊಡನೆ ದೋಣಿಯಲ್ಲಿ ಕುಳಿತು ಸ್ಪರ್ಧಿಸಲೂ ಬಹುದು.

ಇಂತಹ ಉದ್ಯಾನಗಳಲ್ಲಿ ಮರಗಳನ್ನು ನಡದಂಥ ಭಾಗದಲ್ಲಿ ಹಸುರು ಹುಲ್ಲಿನ ಅಂಗಣಗಳ ಮಧ್ಯೆ ಮಧ್ಯೆ ಕಿರಿಯ ಅಂಕಣಗಳಲ್ಲಿ ಒಂದೊಂದು ಜಾತಿಯ ಹೂಗಿಡಗಳನ್ನಷ್ಟೇ ನಟ್ಟು ಬೆಳೆಯಿಸುತ್ತಾರೆ. ಒಂದೊಂದು ಅಂಕಣದಲ್ಲಿ ಒಂದೊಂದೇ ಜಾತಿಯ ಹೂ, ಒಂದೊಂದೇ ಜಾತಿಯ ಗಿಡ, ಒಂದೊಂದೇ ಬಣ್ಣದ ಹೂವನ್ನು ಹೊತ್ತು ತಲೆತೂಗುವಾಗ ಕಣ್ಣಿನ ಮೇಲೆ ಆಗುವ ಪರಿಣಾಮ ಬಹು ಮಧುರ. ವಿಶಾಲವಾದೊಂದು ಹಸುರು ಶಾಲಿನ ಮೇಲೆ ಅಂಚು, ಸೆರಗು, ಚುಕ್ಕೆಗಳು ಬರುವಂತೆ ತುಂಬ ಮೋಹಕವಾಗಿ ಕಾಣುತ್ತವೆ. ಹೀಗಾಗಿ ಅವರ ಉದ್ಯಾನಗಳು ತಾಳಮೇಳವಿಲ್ಲದ ಜಂಗ್ಲಿ ಗಳಲ್ಲ. ಬ್ರುಸೆಲ್ಸ್, ಒಸ್ಲೊ, ವರ್ಸಾಲೆ, ಪೆರಿಸ್ ಮೊದಲಾದ ಅನೇಕ ನಗರ ಗಳನ್ನು ಸುತ್ತಿದಾಗ ಇದೇ ಬಗೆಯ ಓರಣದ ಅನುಭವ ನನಗಾಯಿತು. ನೂರಾರು ಜಾತಿಯ ಗಿಡಮರಗಳನ್ನು ಸಂತೆಯಾಗಿ ಬೆರೆಯಿಸುವ ಬದಲು, ಕೆಲವೇ ಗಿಡಮರಗಳನ್ನಾಯ್ದು ವಿತರಣೆಯಿಂದ ನಟ್ಟಲ್ಲಿ, ಹೆಚ್ಚಿನ ಚೆಲು ವೆಂಬುದು ಸ್ಪಷ್ಟ. ಈ ಬಗೆಯ ಉದ್ಯಾನಗಳು ಲಂಡನಿನಲ್ಲಿ ಮಾತ್ರವಲ್ಲ ಅದರ ವಿಸ್ತರಣಗಳಲ್ಲೂ, ಇಂಗ್ಲೆಂಡಿನ ಇತರ ದೊಡ್ಡ ಚಿಕ್ಕ ನಗರಗಳಲ್ಲೂ ಇವೆ.

ಲಂಡನಿನ ಅತಿ ದೊಡ್ಡ ಉದ್ಯಾನ ಕ್ಯೂ(Kew)ಎಂಬ ಸಸ್ಯೋದ್ಯಾನ. ಇದು ಕಣ್ಣಿನ ಸೊಗಸಿಗೆ ಮಾತ್ರವಲ್ಲ; ವೈಜ್ಞಾನಿಕ ಪರಿಶೀಲನೆಗೂ ಅನು

ಕೂಲವಾದ ದೊಡ್ಡ ಉದ್ಯಾನ. ಅದರ ವಿಸ್ತೃತಿಯೇ ಮುನ್ನೂರು ಎಕ್ರೆ. ಇದರೊಳಕ್ಕೆ ಕೊಳಗಳಿವೆ, ಹಳ್ಳಗಳಿವೆ. ಮಗ್ಗುಲಲ್ಲಿ ಹರಿಯುವ ನದಿಯೂ ಇವೆ. ಇದರಲ್ಲಿ ವಿವಿಧ ವೃಕ್ಷಗಳಿದ್ದರೂ ವ್ಯವಸ್ಥಿತ ಸೌಂದರ್ಯವಿದೆ. ಇಲ್ಲಿ ನನ್ನ ಮಿತ್ರರೊಡನೆ ಹೋಗಿ ಆರು ತಾಸಿನ ಕಾಲ ಉಂಡಾಡಿಯಾಗಿ ಕಳೆದಿದ್ದೆ. ಅಲ್ಲಿಗೆ ಬರುವ ಜನ ಲಕ್ಷಗಟ್ಟಲೆ. ರಜಾದಿನಗಳಲ್ಲಿ ನಗರವೇ ಉದ್ಯಾನದಲ್ಲಿ ತುಂಬಿ ಬಿಡುತ್ತದೆ. ದಿನದ ಊಟ ಪಾಠಗಳೆಲ್ಲ ಇಲ್ಲಿಯೇ. ಉಂಡು, ತಿಂದು, ಬರಿ ಬೆನ್ನನ್ನು ಬಿಸಿಲಿಗೊಡ್ಡಿ ಬೇಯಿಸುವ ಚಟ ಇಲ್ಲಿನ ಗಂಡು ಹೆಣ್ಣುಗಳಿಗೆ. ನನ್ನನ್ನು ಕರೆದೊಯ್ದವರು ನನ್ನ ಸ್ನೇಹಿತರ ಮಡದಿಯಾದ ಮಿಸೆಸ್ ಬಾಕೆ. ಆ ದಿನ ಅವರಿಬ್ಬರ ಗೆಳೆಯರೂ ಬಂದಿದ್ದರು. ಅವರು ನನ್ನನ್ನು ಅಲ್ಲಿನ ಹುಲ್ಲುಗಾವಲಿನ ತುಣುಕೊಂದನ್ನು ತೋರಿಸಲು ಕರೆದೊಯ್ದರು. ನೀಲಕಾಂತಿಯಂತಹ, ಅಂಗಿಗುಂಡಿ ಗಾತ್ರದ, ಹೂವಿನ ಚಾಪೆಯೇ ಒಂದು ಕಡೆ ಹಾಸಿತ್ತು. ಕೇವಲ ಹುಲ್ಲು ಗಿಡದ ಹೂವು; ತನ್ನಂತೆ ಬೆಳೆಯುವಂಥದು. ಆದರೂ ಅದನ್ನು ಕಂಡು ಮೆಚ್ಚುವ ಜನಗಳುಂಟು.

ಅಲ್ಲಿನ ಕೊಳಗಳಲ್ಲಿ ಬೇರೊಂದು ಬಗೆಯ ಚೆಲುವು ತುಂಬಿತ್ತು. ನೀರಲ್ಲಿ ನೈದಿಲೆಗಳಿವೆ. ಬಳಿಯ ಹೊದರುಗಳಲ್ಲಿ ವಾಸಿಸುವ ಆರೆಂಟು ಜಾತಿಯ ಬಾತುಗಳು ಮನುಷ್ಯನ ಭೀತಿಯಿಲ್ಲದೆ ಸಂಸಾರಮಾಡಿಕೊಂಡಿವೆ. ದೊಡ್ಡವು, ಸಣ್ಣವು, ಗಂಡುಗಳು, ಹೆಣ್ಣುಗಳು, ಮರಿಗಳು ನೀರಲ್ಲಿ ತೇಲುತ್ತವೆ, ಈಜುತ್ತವೆ; ಒಂದನ್ನೊಂದು ಅಟ್ಟಿ ನಾಗುತ್ತವೆ. ದಂಡೆಯಲ್ಲಿ ಕುಳಿತ ಮನುಷ್ಯರ ಬಳಿಗೆ ಸಂಸಾರ ಸಮೇತವಾಗಿ ಬಂದು "ನಿಮ್ಮ ಮರಿಗಳಿಗಿಂತ ನಮ್ಮ ಮರಿಗಳು ಚೆನ್ನ" ಎಂದು ಕತ್ತು ಬೀಗಿಸಿ ಮಾತನಾಡಿಸುತ್ತವೆ. ಅಷ್ಟೆಲ್ಲ ಜಂಭ ಕೊಚ್ಚಿದ ಬಳಿಕ, 'ತಂದ ತಿಂಡಿಯಲ್ಲಿ ಇಷ್ಟು ಪಾಲುಕೊಡಿ' ಎಂದು ಬೇಡಿಯೂ ಬೇಡುತ್ತವೆ.

ನಾನು ಶೇಕ್ಸ್ಪಿಯರನ ನಾಟಕವನ್ನು ನೋಡುವ ಸಲುವಾಗಿ ಒಂದು ದಿನ ಎವನ್ ನದೀ ತೀರದ ಸ್ಟ್ರಾಫರ್ಡಿಗೆ ಹೋಗಿದ್ದೆ. ಶೇಕ್ಸ್ಪಿಯರ್ ಸ್ಮಾರಕ ನಾಟ್ಯಶಾಲೆಯನ್ನು ಈ ನದಿ ದಂಡೆಯ ಮೇಲೆ ಕಟ್ಟಿದ್ದಾರೆ. ಅದು ನದಿಯೆಂದರೆ ಅವರ ಪಾಲಿಗೆ; ನಮ್ಮ ಪಾಲಿಗೆ ಅದು ಐವತ್ತು ಅರುವತ್ತು ಅಡಿ ಅಗಲದ ಹಳ್ಳ. ಆ ಹಳ್ಳದಲ್ಲಿ ಎಷ್ಟು ಹಂಸಗಳೆನ್ನುತ್ತೀರಿ? ನೂರಾರು.

ಮೇಲಿನ ದಂಡೆಯಲ್ಲಿ ವಿರಮಿಸುವ, ಜನರೊಡನೆ ಅವುಗಳ ಚೇಷ್ಟೆ. ಕೈಯ ಲ್ಲೊಂದು ರೊಟ್ಟಿಯ ತುಣುಕನ್ನೊ, ಚೋಕಲೇಟನ್ನೊ ಹಿಡಿದು ಮುಂದು ವರಿದರೆ ಐವತ್ತು ನೂರು ಹಂಸಗಳು ಮುಂದೊತ್ತಿ ಬರುತ್ತವೆ. ಕತ್ತು ನೀಡು ತ್ತವೆ. ಕರ್ಕಶ ಸಂಗೀತ ತೊಡಗುತ್ತವೆ. ನೀರು ಬಿಟ್ಟು ನೆಲದ ಮೇಲೆಯೂ ಬಂದು ಕಾಡುತ್ತವೆ. ಆಹಾರ ಸಂಪಾದಿಸಿ, ತೃಪ್ತಿಯ 'ಕಕ್ ಕಕ್' ಎಂಬ ಧನ್ಯವಾದ ಅರ್ಪಿಸಿ ಜಲರಾಜ್ಯದ ದೊರೆಗಳಂತೆ ನೀರಿಗೆ ಹೋಗಿ ತೇಲುತ್ತವೆ. ಅವುಗಳ ಸಶಕ್ತ ಸೌಂದರ್ಯ, ಕತ್ತಿನ ಬಳುಕು, ಮೈಯ ಶುಭ್ರ ತುಪ್ಪಳ ಹೇಳಲಾರದಷ್ಟು ಸೊಗಸಿನವು. ನೀರಲ್ಲಿ ಚಲಿಸುವಾಗಲಂತು ಗಾಂಭೀರ್ಯ ಲಾಲಿತ್ಯಗಳ ಅಪೂರ್ವ ಮೇಳ. ಮುಂದೆ–ಯುರೋಪಿನ ಅನೇಕ ನದಿ, ಕಾಲುವೆ ಸರೋವರಗಳಲ್ಲಿ ಇಂತಹ ಹಂಸರಾಜಿಯನ್ನು ಕಂಡು ಸಂತೋಷ ಪಡುವುದಕ್ಕಾಯಿತು.

ನಾನೇನೋ ಇಂಗ್ಲೆಂಡಿನ ಸುಂದರ ನಿಸರ್ಗ, ಸುಂದರ ಉದ್ಯಾನ ಗಳನ್ನು ಬಣಿಸಿದೆ. ಆದರೆ ಇಷ್ಟೆಲ್ಲ ಮಾಡಿಕೊಂಡ ಜನರು ಅದರ ಸುಖ ಸೊಗಸುಗಳನ್ನು ಅನುಭವಿಸುತ್ತಾರೆಯೇ—ಎಂಬ ಕುತೂಹಲ ನಮ್ಮಲ್ಲಿ ಕೆಲವರಿಗುಂಟಾಗ ಬಹುದು. ನಮ್ಮ ಮುಂದೆ ಪ್ರಕೃತಿ ತಾನಾಗಿ ಸೌಂದರ್ಯ ವನ್ನು ಚೆಲ್ಲಿದಾಗ. ತಾವಾಗಿ ಸವಿಯಲಾರದ ಮನಗಳಿಗೆ, ಅಂತಹ ಸಂದೇಹ ಬರಬಹುದೇ ಹೊರತು, ಅದಕ್ಕಾಗಿ ದುಡಿದು ನಿರ್ಮಿಸಿದ ಜನಗಳಿಗೆ ಅಂತಹ ಪ್ರಶ್ನೆಯಿಲ್ಲ. ತಮ್ಮ ನಾಡಿನ ಅಂಗುಲ ಅಂಗುಲ ನೆಲವನ್ನು, ಜಲವನ್ನು, ಕಡಲನ್ನು, ಕಾಡನ್ನು, ಗುಡ್ಡಗಳನ್ನು ಕಾಣುವ ಹಂಬಲ ಅಲ್ಲಿನ ಜನಕ್ಕೆ. ನನಗೆ ಸಮಯದ ನಿರ್ಬಂಧವಿರಲಿಲ್ಲ; ವಿರಾಮವಿತ್ತು. ಆದುದರಿಂದ ದಿನದ ಬಹುಭಾಗವನ್ನು ಕಾಲುನಡೆಯಿಂದ ಲಂಡನ್ ನಗರ ಅಲೆಯುವುದರಲ್ಲಿ ಕಳೆಯುತ್ತಿದ್ದೆ. ಆಯಾಸವಾದಾಗ ಉದ್ಯಾನವೊಂದನ್ನು ಸೇರಿ, ಮಂಚದ ಮೇಲೆ ಕುಳಿತು ಹೊಗೆಬತ್ತಿ ಹೊತ್ತಿಸಿ, ಸುತ್ತಲಿನ ಚೆಲುವನ್ನು ಮೆಲುಕಾಡು ತ್ತಿದ್ದೆ. ಅಲ್ಲಿಗೆ ದಿನವೆಲ್ಲವೂ ಜನಬರುತ್ತಿರುತ್ತಾರೆ. ಮನೆಗೆಲಸ ಮುಗಿಸಿದ ಹೆಂಗಸರು ತಮ್ಮ ಕೂಸುಗಳನ್ನು ತಂದು ಇಲ್ಲಿನ ಹಸುರಿನ ಮೇಲೆ ಆಡ ಬಿಡುತ್ತಾರೆ. ತಾವು ಕಣ್ಮುಚ್ಚಿ ತೂಕಡಿಸುತ್ತಾರೆ; ಇಲ್ಲದೆ ಹೋದರೆ ಉಣ್ಣೆ ಹೆಣೆಯುತ್ತಾರೆ; ಪುಸ್ತಕ ಓದುತ್ತಾರೆ. ವಿರಾಮದ ಗಳಿಗೆಯಲ್ಲಿ ಎಮ್ಮೆಗ ಳಂತೆ ಬಿಸಿಲಿಗೆ ಬೆನ್ನುಹಾಕಿ ಮಲಗುತ್ತಾರೆ. ತುಸು ಚುರುಕಿದ್ದವರು ಅಲೆ

ಮಾಡುತ್ತಾರೆ. ದಿನ ಏರಿದಂತೆ ಬರುವವರ ಸಂಖ್ಯೆ ಹೆಚ್ಚುತ್ತದೆ. ಈ ಉದ್ಯಾನಗಳೂ ಗುಡ್ಡಗಾಡುಗಳೂ ಪ್ರಣಯಿಗಳ ಸ್ವರ್ಗ. ಗಂಡು ಹೆಣ್ಣಿಗಾಗಿ, ಹೆಣ್ಣು ಗಂಡಿಗಾಗಿ ಹಾತೊರೆದು ಕಾದಿರುವ ಮೂಲೆ. ರಾತ್ರಿ ಹಗಲು ಪ್ರಣಯಿಗಳ ವಿಹಾರಭೂಮಿಯಿದು. ಇಲ್ಲಿನ ಹೂಗಳ ನಗು ಜನಗಳ ತುಟಿ ಮುಖಗಳಲ್ಲಿ ಪ್ರತಿಬಿಂಬಿಸುತ್ತದೆ.

ಸಂಜೆಯಾಯಿತೆಂದರೆ ವಿಹಾರಿಗಳ ಸಂಖ್ಯೆ ಇಮ್ಮಡಿಸುತ್ತದೆ; ಮುಮ್ಮಡಿಸುತ್ತದೆ. ರಜಾ ದಿವಸಗಳಲ್ಲಿ ನೂರ್ಮಡಿಸುತ್ತದೆ ಜನಜಂಗುಳಿ. ಶನಿವಾರ ಆದಿತ್ಯವಾರಗಳಲ್ಲಿ ಇಲ್ಲಿನ ನಾಗರಿಕರ ಸಂಸಾರ ಮನೆಯಲ್ಲಿರುವುದೇ ಇಲ್ಲ. ದಿನದ ತಿಂಡಿ, ಕಾಫಿ ಕಟ್ಟಿಕೊಂಡು ಊರ ಉದ್ಯಾನಗಳಿಗೋ ಹೊರಗಿನ ಗುಡ್ಡಗಳಿಗೊ ಕುಟುಂಬ ಸಮೇತರಾಗಿ ಹೊರಡುತ್ತಾರೆ. ಹಾಲಿನ ಸೀಸೆ ಚೀಪುವ ಕೂಸು, ಅದರ ತಾಯಿ, ಅಜ್ಜಿ ಮುತ್ತಜ್ಜಿಯರು ಸಹ ಹುಲ್ಲುಗಾವಲಿನಲ್ಲಿ ಹೊರಳಾಡುತ್ತಾರೆ. ಮರದ ನೆರಳಲ್ಲಿ ತೂಕಡಿಸುತ್ತಾರೆ. ಕೊಳ, ಕಾಲುವೆಗಳ ನೀರಲ್ಲಿ ತೇಲಾಡುತ್ತಾರೆ. ಇಷ್ಟೆಲ್ಲ ಜನ ಇಂತಹ ಸ್ಥಳಗಳಲ್ಲಿ ಉಂಡು ತಿಂದು ತೇಗುವವರಾದರೂ, ಒಂದು ಚೂರೂ ಕಸ ನೆಲದಲ್ಲಿ ಬಿದ್ದಿರುವುದಿಲ್ಲ; ಬೀದಿಯಲ್ಲೂ ಬಿದ್ದಿರುವುದಿಲ್ಲ. ತಂದ ಕಾಗದದ ಚೂರು, ಕಸಗಳನ್ನು ಕೈಚೀಲಗಳಲ್ಲಿ ತುಂಬಿಸಿಕೊಂಡು, ಅದಕ್ಕಾಗಿ ಕಾದಿರಿಸಿದ ಬುಟ್ಟಿಗಳಲ್ಲೇ ತುಂಬಿಸಿ ಹೊರಟುಹೋಗುತ್ತಾರೆ.

ವಾಹನ ಸೌಕರ್ಯ ಇರುವವರು, ಅನುಕೂಲತೆ ಇರುವವರು, ರಜಾ ದಿನಗಳಲ್ಲಿ ಊರೊಳಗೇ ಇರಲಾರರು. ನಗರವನ್ನು ಬಿಟ್ಟು ಹತ್ತು ಇಪ್ಪತ್ತು ಮೈಲು ದೂರಹೋಗಿ ಕಾಡುಮೇಡುಗಳಲ್ಲಿ ಸುತ್ತುತ್ತಾರೆ. ಬಯಲುಗಳಲ್ಲೂ ಗುಡ್ಡ ಹಳ್ಳ ಸರೋವರಗಳಲ್ಲೂ ವಿಹಾರಿಗಳು ಕಾಣಿಸುತ್ತಾರೆ. ವಿಲಾಸಿಗಳು ವಿಲಾಸಮಗ್ನರಾಗುತ್ತಾರೆ. ಆಟಗಾರರು ಕುಣಿದಾಡುತ್ತಾರೆ. ವಿಶ್ರಾಂತಿಶೀಲರು ಓದುತ್ತಿರುತ್ತಾರೆ....... ಏನೇನೋ ಮಾಡಿಕೊಂಡಿರುತ್ತಾರೆ. ಯುರೋಪು ಎಲ್ಲ ಹೀಗೆಯೇ. 'ಹೊಲಿ ಡೇ' ಎಂದರೆ ನಿಶ್ಶೃಂಖಲವಾಗಿ ಆನಂದಿಸುವ ದಿನ. ಮನೆಯಲ್ಲುಳಿಯುವವರು ಆಗ ಕುರುಡರು, ಕುಂಟರು. ಅವರೂ ಇರುತ್ತಾರೋ ಇಲ್ಲವೋ. ಒಂದೊಂದು ರಜಾದಿನ ಒಂದೊಂದು ಮೂಲೆಗೆ ಸುತ್ತಾಡಲು ಹೋಗುತ್ತಾರೆ. ನಾನೊಮ್ಮೆ ಗ್ರೆಟ್ಸ್ ಎಂಬ ಊರಿಂದ ಪೆರಿಸಿಗೆ ಬಂದೆ. ಅದೊಂದು ಆದಿತ್ಯವಾರ ಸಂಜೆ. ಮಿತ್ರರೊಬ್ಬರ ಮೋಟಾರು

ನಲ್ಲಿ ಕುಳಿತು ನಲುವತ್ತು ಮೈಲು ದೂರದ ಪೇರಿಸಿಗೆ ಬರುವಾಗ ದಾರಿ ಯುದ್ದದ ಬಯಲುಗಳು, ಕಾಡುಗಳು ಜನಸಂದಣಿಯಿಂದ ತುಂಬಿದುದು ಕಾಣಿಸಿತು. ಅಷ್ಟು ದೂರಕ್ಕೂ ರಸ್ತೆಯ ಮಗುಲಲ್ಲಿ ಹತ್ತು, ನೂರು ಗಜ ಕ್ಕೊಂದೊಂದರಂತೆ ಕಾರುಗಳು ನಿಂತಿದ್ದುವು. ಸಂಜೆಯಾಗುವಾಗ ಮನೆಗೆ ಮರಳುವ ಮೋಟರು, ಸೈಕಲು ಮೊದಲಾದ ವಾಹನಗಳ ಪ್ರವಾಹ ಅವಿರತ. ಆದಿತ್ಯವಾರವೆಂದರೆ ನಗರವೇ ಬರಿದಾಗುತ್ತದೆ. ನಗರದ ಬೀದಿಗಳು ನಿರ್ಜನಾ ರಣ್ಯ. ಲಂಡನಿನಲ್ಲಿ ಆದಿತ್ಯವಾರ ಸಿನೆಮಾ ದೇಖಾವೆಗಳೂ ಇರುವುದಿಲ್ಲ. ಊರಿಂದ ಹೋಗಿಬರುವ ರೈಲು ಮೋಟರುಗಳಲ್ಲಿ ಹಿಡಿಸಲಾರದಷ್ಟು ಜನ ಸಂದಣಿ.

ವಾರದ ರಜಾದಿನ ಹೀಗೆಯೇ; ಇನ್ನು ವರ್ಷದ ರಜಾದಿನಗಳ ಗತಿ? ಪ್ರತಿವರ್ಷ ಈ ಜನ ಒಮ್ಮೆಯಾದರೂ, ಆರೆಂಟು ತಿಂಗಳ ದುಡಿತ ಮಾಡಿದ ಬಳಿಕ ವಾರ, ಪಕ್ಷದ ರಜೆಯನ್ನು ಕೊಂಡು ಊರನ್ನು ಬಿಟ್ಟೇ ಹೋಗು ತ್ತಾರೆ. ಅನುಕೂಲ ಕಡಿಮೆಯಾದವರು ಇಂಗ್ಲೆಂಡಿನ ಒಂದೊಂದು ಮೂಲೆಗೆ ಹೋಗಿ ಬರಬಹುದು. ಉತ್ತರದ ಪರ್ವತಮಯ ಸ್ಕಾಟ್ಲೆಂಡಿಗೆ ಹೋದಾರು. ಮಧ್ಯ ಪ್ರದೇಶದ ಸರೋವರಗಳನ್ನು ಕಂಡು ಬಂದಾರು. ತುಸು ಅನುಕೂಲವಿರುವವರು ದೇಶವನ್ನೇ ಬಿಟ್ಟು ಫ್ರಾನ್ಸ್, ಇಟೆಲಿ, ನಾರ್ವೆ, ಸ್ವಿಜರ್‌ಲೆಂಡ್ ಮೊದಲಾದ ದೇಶಗಳಿಗೆ ಬರಿಯ ಒಂದು ವಾರದ ಸುಖ ಅನುಭವಿಸುವುದಕ್ಕೂ ಹೋಗುವುದುಂಟು.

ಈ ಜನ ಉಡಬಲ್ಲರು; ಉಣಬಲ್ಲರು; ಕುಡಿಯಬಲ್ಲರು; ಕುಣಿಯ ಬಲ್ಲರು. ಜೀವನವನ್ನು ಆನಂದದಿಂದ ತುಂಬಿಸಿಕೊಳ್ಳಬಲ್ಲ ಶಕ್ತಿಯಿದೆ, ಉತ್ಸಾಹವಿದೆ. ಅದಕ್ಕೆ ಸಮತೂಕದಲ್ಲಿ ಅವರು ಚೆನ್ನಾಗಿ ದುಡಿಯಬಲ್ಲರು, ಕಷ್ಟಪಡಬಲ್ಲರು. ಸಾಹಸ ಶೀಲತೆ ಅವರ ಗುಣ.

# ೩. ಲಂಡನ್ ನಗರ.

ಮೊನ್ನೆಯ ತನಕ ಭೂಲೋಕದ ವ್ಯಾಪಾರ ವ್ಯವಹಾರಗಳ ಕೇಂದ್ರ ವಾಗಿತ್ತು ಲಂಡನ್ ನಗರ; ಇಂಗ್ಲೆಂಡಿನ ರಾಜಧಾನಿ. ಜನಸಂಖ್ಯೆಯಲ್ಲಿಯೂ ಅದು ಮೊದಲನೆಯ ಸ್ಥಾನ ಗಳಿಸಿತ್ತು. ಈಗ ಅದು ಸಂಯುಕ್ತ ಅಮೇರಿಕದ ನ್ಯೂಯಾರ್ಕ್‌ಗೆ ಬಿಟ್ಟುಕೊಟ್ಟಿದೆ. ಪ್ರಕೃತ ಲಂಡನ್ ನಗರದ ಜನಸಂಖ್ಯೆ ೮,೦೦೦,೦೦೦. ಈ ನಗರ ಥೇಮ್ಸ್ ನದಿಯ ಇಕ್ಕಡೆಗಳಲ್ಲಿ ಬಹು ವಿಶಾಲ ವಾಗಿ ಹಾಸಿದೆ. ಇದಕ್ಕೆ ತಗಲಿಕೊಂಡಿರುವ ಉಪನಗರಗಳ ಸಂಖ್ಯೆಯೂ ಬಹಳ. ಹೀಗಾಗಿ ಲಂಡನಿಗೆ ಹೋಗಿಬರುವಾಗ ಹಲವಾರು ಮೈಲುಗಳ ತನಕ ಬೀದಿ, ಮನೆಗಳ ಸಾಲುಗಳು ಎಡೆಬಿಡದೆ ಕಾಣಿಸುತ್ತವೆ. ಆದರೆ ನಮ್ಮ ದೇಶದ ಮುಂಬಯಿ, ಡಿಲ್ಲಿಯಂತಹ ನಗರಗಳಲ್ಲಿ ಅಲೆದಾಡುವವನ ಕಣ್ಣಿಗೆ ಗೋಚರಿಸುವ ಜನಸಂದಣಿ, ಮಾರ್ಗವಿಹಾರಿಗಳ ನೋಟಕ್ಕೂ ಇದಕ್ಕೂ ತುಂಬ ಅಂತರವಿದೆ. ಈ ಅಂತರ ವಿಶೇಷವಾದದ್ದು. ನಾನು ಇಂಗ್ಲೆಂಡಿಗೆ ಬಂದ ದಿನ—ಸೌತಾಮ್ಟನಿಂದ ಸಂಜೆಯ ಏಳು ಘಂಟೆಗೆ ರೈಲಿನಲ್ಲಿ ಕುಳಿತು ಮೂರು ತಾಸಿನೊಳಗೆ ಲಂಡನನ್ನು ಸೇರಿದೆ. ದಾರಿಯು ದ್ದದ ನೋಟ ನನ್ನನ್ನು ಆಶ್ಚರ್ಯಗೊಳಿಸಿತು. ಈ ಉದ್ದಕ್ಕೂ ಅಲ್ಲಲ್ಲಿ ಪೇಟೆ ಪಟ್ಟಣಗಳಿವೆ; ಹೊಲಗದ್ದೆಗಳೂ ಇವೆ. ಟ್ರೈನ್ ಹಲವಾರು ನಿಲ್ದಾ ಣಗಳನ್ನು ಹಾದುಹೋಗುತ್ತದೆ. ಸ್ವಾಭಾವಿಕವಾಗಿ ಸಂಜೆಯ ವೇಳೆಗೆ ಸಾವಿರಾರು ಜನ ನಿಲ್ದಾಣಗಳಲ್ಲಿ ಹಾದಿಬೀದಿಗಳಲ್ಲಿ ಓಡಾಡುವುದು ಕಾಣಿಸ ಬೇಕಿತ್ತು. ಆದರೆ ಲಂಡನಿಗೆ ಹೋಗುವ ತನಕ ಯಾವೊಂದು ನಿಲ್ದಾಣ ದಲ್ಲೂ, ದಾರಿಯಲ್ಲೂ ಹತ್ತು ಮಂದಿ ನಿಂತು ಅಲೆದು ಕಾಲಕಳೆಯುತ್ತಿರು ವುದನ್ನು ಕಾಣಲಿಲ್ಲ. ಹಾಗೇನೆ ಇದೆ ಲಂಡನ್.

ದಿನವಾಗಲಿ,ರಾತ್ರಿಯಾಗಲಿ ಕೆಲಸವಿಲ್ಲದೆ ಬೀದಿಯಲ್ಲಿ ಸುಳಿದಾಡುವ ಜನಗಳು ತೀರ ಕಡಿಮೆ. ಸಂಜೆಯ ಆಫೀಸು ಘಂಟೆಯಾಯಿತೆಂದರೆ ಬೀದಿ ಗಳು ನಿರ್ಜನವಾಗುತ್ತವೆ. ಜನರೇ ಇಲ್ಲವೆಂಬಲ್ಲ. ನಗರದ ಜನಸಂಖ್ಯೆಯು ಮಾನದಿಂದ ಅದು ಬರಿದಾದ ಹಾಗೆ. ಹಾಗೆಂದು ರೈಲು ಬಂಡಿಗಳು ನೆಲ ದೊಳಗಿಂದ ಮಧ್ಯರಾತ್ರಿಯ ತನಕವೂ ಜನಗಳನ್ನು ತುಂಬಿಸಿ ಸಾಗಿಸುವು ದನ್ನು ಕಾಣಬಹುದು. ಇಲ್ಲಿನ ಜನಗಳ ಸ್ವಭಾವ ಹಾಗೆ. ತಮ್ಮ ಕೆಲಸ

ನ್ನಾಯಿತೆಂದರೆ ಹೊರಡುತ್ತಾರೆ—ಮನೆ ಸೇರುತ್ತಾರೆ. ಸಿನೆಮಾ ಗೃಹಗಳಿಗೊ, ನಾಟಕ ಶಾಲೆಗಳಿಗೋ, ಉದ್ಯಾನಗಳಿಗೋ ಹೋಗಿ ಸೇರುತ್ತಾರೆಯೋ ಹೊರತು ಹಾದಿ ಬೀದಿಗಳಲ್ಲಿ, ರೈಲು ನಿಲ್ದಾಣಗಳಲ್ಲಿ ಹರಟೆ ಹೊಡೆಯುತ್ತ ವೇಳೆ ಕಳೆಯುವುದಿಲ್ಲ. ಹೀಗಾಗಿ ನಮ್ಮ ನಗರದಲ್ಲಿ ಕಾಣುವ ಗದ್ದಲ, ಅವ್ಯವಸ್ಥೆಗಳು ಲಂಡನ್ ಬೀದಿಗಳಲ್ಲಿ ಕಾಣಿಸವು.

ಒಂದು ಸಾಮ್ರಾಜ್ಯಕ್ಕೇನೆ ರಾಜಧಾನಿಯಾಗಿದ್ದ ಈ ನಗರದಲ್ಲಿ ಹಾದಿ ಬೀದಿಗಳು ವಿಶಾಲವಾಗಿವೆ; ಡಾಮರು ಬಳಿದಿವೆ. ಈ ಡಾಮರ್ ದಾರಿಗಳ ಸೌಕರ್ಯ ಪೇಟೆಯವರಿಗಷ್ಟೇ ಅಲ್ಲ. ಇಂಗ್ಲೆಂಡಿನ ಪ್ರತಿಯೊಂದು ಹಳ್ಳಿ, ಪೇಟೆಗಳ ಕಿರುದಾರಿ, ಓಣಿಗಳೂ ಡಾಮರು ಬಳಿದುವು; ಧೂಳಿನ ತಂಟೆ ಯಿಲ್ಲದೆ ಶುಚಿಯಾಗಿರುವಂತಹವು. ಲಂಡನಿನ ನಗರ ಸಂಚಾರಿಗಳಿಗೆ ವಿವಿಧ ವಾಹನ ಸೌಕರ್ಯಗಳಿವೆ. ಸಾವಿರಾರು ಮೋಟರ್ ಬಸ್ಸುಗಳಿವೆ. ಟ್ರಾಮುಗಳ ಕಾಲ ಹೊರಟು ಹೋಗಿ ಸಾರ್ವಜನಿಕರ ಓಡಾಟ ಈ ಬಸ್ಸು ಗಳಲ್ಲಿ. ಬಸ್ಸಿನಲ್ಲಿ ಕುಳಿತ ನಮಗೆ ಅದರ ಕಂಡಕ್ಟರ್ ಒಬ್ಬ ಗೆಳೆಯ. ವಿನಯದಿಂದ ಮಾತನಾಡಿಸುತ್ತಾನೆ. ಇಂಥಲ್ಲಿಗೆ ಹೋಗಬೇಕೆಂದು ಕೇಳಿ ದರೆ ಸ್ಥಳ ತೋರಿಸುತ್ತಾನೆ. ಹೋಗುವ ಬಸ್ಸಿನ ವಿವರ ಹೇಳುತ್ತಾನೆ. ಲಂಡನ್ ಬಸ್ಸುಗಳಲ್ಲಿ ಕುಳಿತ ಮನುಷ್ಯ ಒಂದು ದಿನದಲ್ಲಿ, ಆಯುಷ್ಯ ನದಲ್ಲಿ ಕೇಳಿಸದಷ್ಟು ಥೇಂಕ್ಸ್, ಕೇಳಬಹುದು. ಹಣ ಕೊಡುವಾಗ ಥೇಂಕ್ಸ್, ಟಿಕೇಟ್ ಕೊಡುವಾಗ ಥೇಂಕ್ಸ್, ನಿಂತರೆ ಥೇಂಕ್ಸ್, ಕುಳಿತರೆ ಥೇಂಕ್ಸ್ ಇದು ಅಲ್ಲಿನ ನರಕಾರಿ ನೌಕರರಲ್ಲಿ ತಾವು ಸಾರ್ವಜನಿಕ ಸೇವಕರು ಎಂದಿ ರುವ ತಿಳುವಳಿಕೆಯ ಫಲ. ಪರದೇಶೀಯನೊಬ್ಬ ನಗರದಲ್ಲಿ ತಿರುಗುವಾಗ ದಾರಿಕೇಳುವುದಕ್ಕೆ ಲಂಡನ್ ಪೊಲೀಸಿನವರಷ್ಟು ಅನುಕೂಲರು ಇನ್ಯಾರೂ ಅಲ್ಲ. ಅವರ ಉಡುಗೆಯಷ್ಟೇ ಗಂಭೀರ; ಠೀವಿಯಿಲ್ಲದ ನಡತೆ. ಮರ್ಯಾ ದೆಯಿಂದ ಮಾತನಾಡಿಸುತ್ತಾರೆ. ನಾವು ಯಾರನ್ನೂ ಒಂದು ಕಡೆಗೆ ಹೋಗುವ ದಾರಿ ಯಾವುದು ಎಂದು ಕೇಳಬಹುದು. ನಮ್ಮ ವೈ ಬಣ್ಣ ವೇಷಗಳನ್ನು ನೋಡಿ ಮೂಕ ಮೌನ ತಾಳುವುದಿಲ್ಲ; ಅನಾದರಿಸುವುದಿಲ್ಲ. ಒಮ್ಮೆ ನಾನು ಪಿಕೆಡಿಲ್ಲಿ ಸಮೀಪದ ರಾಯಲ್ ಎಕಾಡಮಿಯ ಸೋಪಾನದಲ್ಲಿ ನಿಂತು, ಅಲ್ಲಿದ್ದ ಒಬ್ಬ ಪೊಲೀಸಿನವನೊಡನೆ ಮತ್ತೊಂದು ಚಿತ್ರಾಲಯಕ್ಕೆ ಹೋಗುವ ದಾರಿಯನ್ನು ಕೇಳಿದೆ. ಆತ ವಿವರಿಸುತ್ತಿರುವಾಗಲೇ, ವಾಕ್ಯ

ನಿಲ್ಲಿಸಿ ಮೆಟ್ಟಲಿನಿಂದ ಬೀದಿಗೆ ಇಳಿದ. ಏಕೆಂದು ನೋಡಿದರೆ — ಒಬ್ಬ ವಯೋವೃದ್ಧೆ ಆ ಸ್ಥಳಕ್ಕೆ ಬರುತ್ತಿದ್ದಳು. ಈತ ಹೋಗಿ ಅವಳನ್ನು ಕೈ ಹಿಡಿದು ಕರೆತಂದುಮೆಟ್ಟಲು ಹತ್ತಿಸಿ ಬಿಟ್ಟ ಬಳಿಕವೇ ತಿರುಗಿ ನನ್ನೊಡನೆ ಬಂದು ಮಾತು ಮುಗಿಸಿದ. ಈ ಸೌಜನ್ಯವನ್ನು ನಮ್ಮ ನಾಡಿನಲ್ಲಿ ಕಾಣುತ್ತೇವೆಯೇ? ಇಂತಹ ಗುಣ ಯುರೋಪಿನಲ್ಲಿ ತೀರ ಸಾಮಾನ್ಯ.

ಲಂಡನ್ ಸುತ್ತುವವನಿಗೆ ಹೆಚ್ಚಿನ ಕಷ್ಟವಿಲ್ಲ. ನಗರದ ನಕ್ಷೆ,ರೈಲುಪಟ ಎರಡಿದ್ದರೆ ಬೇಕಾದಲ್ಲಿಗೆ ಹೋಗಬಹುದು. ಸಂದೇಹ ಬಂದಲ್ಲಿ ಯಾರನ್ನೂ ನಿಂತು ಕೇಳಬಹುದು. ನಗರ ಸಂಚಾರಿಯಾದವನು ಹೊಸಬನಾದಲ್ಲಿ ಬಸ್ಸುಗಳ ಬದಲು ಅಲ್ಲಿನ ರೈಲನ್ನು ಹೊಂದಿರುವುದು ಅನುಕೂಲ. "ಟ್ಯೂಬ್" ಅನ್ನುತ್ತಾರೆ ಅದಕ್ಕೆ. ನೆಲದಡಿಯಲ್ಲಿ ಐವತ್ತು ನೂರು ಅಡಿಗಳ ಕೆಳಗೆ ಸುರಂಗ ಮಾರ್ಗದಲ್ಲಿ ಸಂಚರಿಸುವ ರೈಲುಗಳವು. ಒಂದೊಂದು ರೈಲು ನಗರದ ವಿವಿಧ ಭಾಗಕ್ಕೆ ಸಂಪೂರ್ಣ ವೃತ್ತವಾಗಿ ಚಲಿಸುತ್ತದೆ. ಅಂತಹ ಆರೆಂಟು ವೃತ್ತಗಳಿವೆ. ಥೇಮ್ಸ್ ನದಿಯ ಅಡಿಯಿಂದ ಅವು ನಗರದ ದಕ್ಷಿಣ ಉತ್ತರಕ್ಕೂ ಹೋಗುತ್ತವೆ. ಲಂಡನ್ ನಗರದ ಪ್ರತಿಯೊಂದು ಜನನಿಬಿಡ ಸಂದುಗೊಂದಿಗೂ ಅವು ಹೋಗುತ್ತವೆ. ನಾವು ಬಹುದೂರ ನಡೆಯಬೇಕಾಗುವುದಿಲ್ಲ. ನಮ್ಮೂರಿನ ರೈಲುಗಳಂತಲ್ಲ. ಅವುಗಳ ವೇಗ ಅಧಿಕ. ಪ್ರತಿ ಮಿನಿಟಿಗೊಂದರಂತೆ ಓಡಾಡುವುದರಿಂದ ಕಾದು ಕುಳಿತಿರಬೇಕಾದ ಪ್ರಮೇಯವೇ ಇಲ್ಲ. ನಗರದ ಚೌಕಗಳಲ್ಲಿ, ಸಂದುಗಳಲ್ಲಿ, 'ಅಂಡರ್ ಗ್ರೌಂಡ್' ಎಂದು ಬೋರ್ಡ್ ತಗಲಿಸಿರುತ್ತಾರೆ. ಅಲ್ಲಿ ಮೆಟ್ಟಲಿಂದ ಕೆಳಕ್ಕಿಳಿದರಾಯಿತು. ಮುಂದೆ ನೆಲದೊಳಗೆ ವಿಶಾಲವಾದೊಂದು ಚಾವಡಿ ಬರುತ್ತದೆ. ಅಲ್ಲೇನೆ, ಬೆಲೆ ಗೊತ್ತಿದ್ದರೆ ಹಣತುಂಬಿಸಿ ಟಿಕೇಟು ಪಡೆಯಬಹುದಾದ ಯಂತ್ರಗಳಿರುತ್ತವೆ. ಬೆಲೆ ಗೊತ್ತಿಲ್ಲದವರು ಬುಕ್ಕಿಂಗ್ ಆಫೀಸಿನಿಂದ ಟಿಕೇಟು ಕೊಂಡುಕೊಳ್ಳಬಹುದು. ನೂರಾರು ಜನ ಬಂದರೂ ನೂಕುನುಗ್ಗಲಾಗುವುದಿಲ್ಲ. ಟಿಕೇಟು ಪಡೆದು ನಾವು ಇನ್ನೂ ಆಳಕ್ಕಿಳಿಯ ಬೇಕು. ನಮ್ಮನ್ನು ಇಳಿಸಬಲ್ಲ ಲಿಫ್ಟ್ಸ್‌ಗಳಿವೆ, ಎಸ್ಕಲೇಟರುಗಳಿವೆ. ನಮ್ಮೆದುರಿನ ಸುರಂಗಮಾರ್ಗದಲ್ಲಿ ಹೋಗುವ ದಾರಿಯು ಇಂತಹ ಲೈನು–ಎಂದು ಹೆಜ್ಜೆ ಹೆಜ್ಜೆಗೆ ಬರೆದಿದ್ದಾರೆ. ಕಣ್ಣುತೆರೆದು ಓದಬಲ್ಲವನಿಗೆ ಯಾವ ಗೊಂದಲವೂ ಇಲ್ಲ.

ಈ ಸುರಂಗ ಮಾರ್ಗದ ಟ್ರೈನುಗಳು ವಿಚಿತ್ರವೇಗದಿಂದ ಬಂದು ನಿಲ್ಲುತ್ತದೆ. ಅದರಿಂದ ಜನ ಕ್ಷಣದೊಳಗೆ ಇಳಿಯುತ್ತಾರೆ. ನಾವು ಕ್ಷಣದೊಳಕ್ಕೆ ಹೋಗಿ ಸೇರಬೇಕು. ಅದರ ಬಾಗಿಲು ತನ್ನಂತೆ ಜಡಿಯುತ್ತದೆ. ರೈಲು ಸರಿಯುತ್ತದೆ. 'ರೈಲು ತಪ್ಪಿತಲ್ಲಾ' ಎಂದು ಕಳವಳಿಸಬೇಕಾಗಿಲ್ಲ. ಅದರ ಬೆನ್ನಿಗೇನೆ ಮತ್ತೊಂದು ಬರುತ್ತದೆ. ಅವುಗಳ ವೇಗವಾದ ಚಲನೆಯಿಂದಾಗಿ ಈ ಸುರಂಗ ಮಾರ್ಗದಲ್ಲಿ ಸದಾ ಶೀತಗಾಳಿ ಬೀಸುತ್ತಿರುತ್ತದೆ. ಬಂಡಿಯನ್ನು ಬದಲಿಸುವ ಪಾಡು ಬಂದರೆ ಅದಕ್ಕೂ ಕಷ್ಟವಿಲ್ಲ. ಕುಳಿತಲ್ಲಿಯೇ ಮೇಲೆ ನೋಡಿದರೆ–ಇದು ಇಂಥ ದಾರಿ, ಇಂತಹ ನಿಲ್ದಾಣ ಬರುತ್ತದೆ, ಬದಲಿಸುವ ತಾಣ ಇಂಥದು—ಎಂದು ತೋರಿಸುವ ನಕ್ಷೆ ಇದೆ. ಬಂಡಿಯಲ್ಲಿ ಕುಳಿತಿರಲು ವೆಲ್ವೆಟ್ ಹಾಸಿದ ಸೋಫಾಗಳಿವೆ. ನಮ್ಮ ನಾಡಿನ ಮೊದಲ ತರಗತಿಯಲ್ಲೂ ಈ ಸುಖಸೌಕರ್ಯಗಳಿಲ್ಲ.

ಬಂಡಿಯಿಳಿದು ಒಂದು ಮಾರ್ಗದಿಂದ ಇನ್ನೊಂದು ಮಾರ್ಗ ಬದಲಿಸುವುದಕ್ಕೆ ದಾರಿತಪ್ಪದ ಸುರಂಗಗಳಿವೆ. ಮೇಲೆ ಹೋಗಲು, ಕೆಳಗೆ ಇಳಿಯಲು, ಎಸ್ಕಲೇಟರ್ ಎಂಬ ಚಲಿಸುವ ಸೋಪಾನ ಪಥಗಳಿವೆ. ನೂರಾರು ಜನಗಳನ್ನು, ಅವರು ನಿಂತಿರುವಂತೆಯೇ ಈ ಚಲಿಸುವ ಮೆಟ್ಟಲುಗಳು ಮೇಲೆ ಕೆಳಗೆ ಸಾಗಿಸುತ್ತವೆ. ಹೀಗಾಗಿ ಲಂಡನ್ ನಗರ ಸುತ್ತುವಾತನಿಗೆ ಈ ರೈಲುಗಳಿಂದಾಗಿ ಹೆಚ್ಚಾಗಿ ನಡೆಯಬೇಕಾಗಿಲ್ಲ.

ಲಂಡನಿನ ಮನೆಗಳು, ಅಂಗಡಿಗಳು, ಸಾರ್ವಜನಿಕ ಕಟ್ಟಡಗಳು, ಸೌಧಗಳು ಬಹು ವಿಶೇಷವೆಂದು ನನಗನಿಸಲಿಲ್ಲ. ಹೆಚ್ಚಿನವು ಸಾಮಾನ್ಯ ರಚನೆಯವು, ಹಳೆಗಾಲದ ವಾಸ್ತು ಶೈಲಿಯವು. ಎಡೆಎಡೆಯಲ್ಲಿ ಹೊಸಗಾಲದ ವಾಸ್ತುವೂ ಸೇರಿಕೊಂಡಿದೆ. ತೀರ ಹೊಸ ಮಾದರಿಯ ಅಮೇರಿಕನ್ ವಾಸ್ತುಶಿಲ್ಪ ಕಡಿಮೆ. ಅಮೇರಿಕದ ಗಗನಚುಂಬಕಗಳಿಲ್ಲ; ಹತ್ತೆಂಟು ಮಹಡಿಗಳುಳ್ಳ ಮನೆಗಳು ಸಾಮಾನ್ಯ. ನಗರ ವಿಸ್ತರಣಗಳಲ್ಲಿ ನಾಲ್ಕಾರು ಮಹಡಿಗಳುಳ್ಳ ಮನೆಗಳೂ, ಮುಂದೆ ಮುಂದೆ ಒಂದೆರಡು ಉಪ್ಪರಿಗೆಯ ಮನೆಗಳೂ ಕಾಣಸಿಗುತ್ತವೆ. ಇಂಗ್ಲೆಂಡಿನ ರಾಣಿ ವಾಸಿಸುವ ಬಕ್ಕಿಂಗ್ಹೇಮ್ ಅರಮನೆಯಾಗಲೀ, ಸೈಂಟ್ ಜೇಮ್ಸ್ ಅರಮನೆಯಾಗಲೀ ಹೊರ ನೋಟಕ್ಕೆ ಅಷ್ಟೊಂದು ವಿಶೇಷ ಕಟ್ಟಡಗಳಲ್ಲ. ಕೆಲವು ಸಾರ್ವಜನಿಕ ಕಟ್ಟಡಗಳು ಅವಕ್ಕಿಂತ ಚೆನ್ನಾಗಿವೆ.

ಅಲ್ಲಿ ಪ್ರಾಚೀನ ವಾಸ್ತು ಶೈಲಿಯನ್ನು ಕಾಣಬೇಕಾದರೆ ಒಂದೆರಡು ಹಳೆಯ ಚರ್ಚುಗಳನ್ನು ಕಾಣಬೇಕು. ಅಂತಹುಗಳಲ್ಲಿ ವೆಸ್ಟಮಿನಿಸ್ಟರ್ ಎಬ್ಬಿ, ಸೈಂಟ್ ಪಾಲ್ಸ್ ಕೆಥಿಡ್ರಲ್ ಮುಖ್ಯ. ಮೊದಲಿನದು ಗಾಥಿಕ್ ಶೈಲಿಯ ಉನ್ನತವಾದ ಭವ್ಯ ಕಟ್ಟಡ. ಹೊರಗೆ ಕಾಣಿಸುವಷ್ಟೇ ಭವ್ಯತೆ ಒಳಗೂ ನೆಲಸಿದೆ. ಒಳಗಡೆ ಗಾಥಿಕ್ ಕಮಾನುಗಳನ್ನು ಉಂಟುಮಾಡುವ ದೀರ್ಘ ಸ್ತಂಭರಾಜಿಗಳಿವೆ. ಆ ಸ್ತಂಭದ ಕುಡಿಗಳೇ ಕಮಾನುಗಳಾಗಿ, ಆವೃತ್ತಿಯಿಂದ ಮರುಕಳಿಸಿ, ತೋರುವ ನೋಟ ವಿಶೇಷವಾದುದು. ಈ ಸ್ತಂಭಗಳ ಆಚೀಚಿನ ಎರಡು ಪಕ್ಕಗಳಲ್ಲಿ ಅಗಲಕಿರಿದಾದ, ನೀಳವಾದ ಎರಡು ಚಾವಡಿಗಳಿವೆ. ಅಲ್ಲಿ ಅನೇಕ ಇಂಗ್ಲಿಷ್ ಪ್ರಸಿದ್ಧ ಪುರುಷರ ಸಮಾಧಿಗಳಿವೆ. ಗೋಡೆಗಳಲ್ಲಿ ಸುಂದರವಾದ ವರ್ಣರಂಜಿತ ಗಾಜಿನ (Stained glass) ಕಿಟಿಕಿಗಳಿವೆ. ವೇದಿಕೆಯ ಮಗ್ಗುಲಲ್ಲಿ ಬಹುದೊಡ್ಡದಾದ ಆರ್ಗನಿನ ನಳಿಗೆಗಳನ್ನು ಲಲಿತವಾಗಿ ಜೋಡಿಸಿ, ವಾಸ್ತುಕೃತಿಯೊಂದಿಗೆ ಮೇಳವಿಸಿದ್ದಾರೆ.

ಇಲ್ಲಿನ ಇನ್ನೊಂದು ಪ್ರೇಕ್ಷಣೀಯ ಚರ್ಚ್ ಸೈಂಟ್ ಪಾಲ್ಸ್. ಥೇಮ್ಸ್ ದಂಡೆಯಲ್ಲಿ ನಿಂತವರಿಗೆ ಇದರ ಗೋಪುರ ಬಹುದೂರದಿಂದಲೇ ಕಾಣಿಸುತ್ತದೆ. ಥೇಮ್ಸಿನ ಅಕ್ಕಪಕ್ಕದ ಕಟ್ಟಡಗಳು ಬಾಂಬುಗಳ ಹತಿಯಿಂದ ನಾಶವಾದುದನ್ನು ಇಂದೂ ಕಾಣಬಹುದು. ಆದರಿಂದ ಚರ್ಚಿನ ಭಾಗಕ್ಕೂ ಪೆಟ್ಟಾಗಿದೆ. ಈ ಮಂದಿರದ ವಾಸ್ತು ವೆಸ್ಟ್‌ಮಿನಿಸ್ಟರ್ ಎಬ್ಬಿಗಿಂತ ಭಿನ್ನವಾದುದು. ಎದುರಿಗೆ ಗ್ರೀಸ್ ಪ್ರಾರ್ಥಿಯಾನ್ ಮಾದರಿಯ ಸ್ತಂಭರಾಜಿಗಳು, ಅವುಗಳ ಮೇಲೆ ವಿರಮಿಸುವ ತ್ರಿಕೋಣಾಕೃತಿಯ ಗೋಡೆ, ಅದರ ಹಿಂದಿಂದ ಮೇಲಕ್ಕೇರುವ ಉನ್ನತವಾದ ಗೋಲಕ (Dome). ಈ ಮಂದಿರದ ಒಳಭಾಗವೂ ಭವ್ಯವಾಗಿದೆ. ನನ್ನ ಮುಂದಣ ಸಂಚಾರದಲ್ಲಿ ಗೆಂಟ್, ರೋಮ್ ಮೊದಲಾದ ನಗರಗಳಲ್ಲಿ ಇನ್ನೂ ಹೆಚ್ಚಿನ ವಾಸ್ತು ವೈಖರಿಯನ್ನು ಕಂಡೆನಾದುದರಿಂದ ಇವುಗಳನ್ನು ಕುರಿತು ಇಲ್ಲಿ ಹೆಚ್ಚಿಗೆ ಬಣ್ಣಿಸುವುದಿಲ್ಲ.

ಲಂಡನಿನ ಪ್ರಾಚೀನವೂ ಚರಿತ್ರಾರ್ಹವೂ ಆದ ಮತ್ತೊಂದು ಕಟ್ಟಡವೆಂದರೆ ಇಲ್ಲಿನ ಪಾರ್ಲಿಮೆಂಟ್ ಮಂದಿರ. ಪ್ರಪಂಚದ ಪ್ರಜಾಪ್ರಭುತ್ವದ ರಾಜ್ಯಗಳಿಗೆ ತಾಯಿಯೆನಿಸಿದ ಇಂಗ್ಲಿಷ್ ಪಾರ್ಲಿಮೆಂಟಿನ ಇತಿಹಾಸ ಈ ಭವ್ಯ ಮಂದಿರದೊಳಗೆ ಹುಟ್ಟಿ, ಬೆಳೆದು, ಪ್ರಬುದ್ಧಾವಸ್ಥೆಯನ್ನು ಪಡೆದಿದೆ. ಅಂತಹ ಹಿರಿತನವು ಕಟ್ಟಡದ ಆಕೃತಿಗೂ ಇದೆ. ಈ ಕಟ್ಟಡವು ಥೇಮ್ಸ್

ನದಿಗೆ ಸಮೀಪವಾಗಿದೆ. ನಗರದ ಬಾನಂಚಿನಲ್ಲಿ ಈ ಮಂದಿರದ ಮಾಡು, ಶಿಖರಗಳು ತಮ್ಮದೇ ಆದ ಸೌಂದರ್ಯವನ್ನು ಕೊಡುತ್ತವೆ. ಇದಕ್ಕೆ ಬಹು ಉನ್ನತ ಗೋಡೆಗಳಿವೆ. ಅದರ ಎರಡು ತುದಿಗಳಲ್ಲಿ ಚೌಕವಾದ ಕೊತ್ತಳ ಗಳಿವೆ; ಈ ದಾರಿಯಿಂದ ನಾವು ತುಸು ಮುಂದುವರಿದು ಹೋದರೆ ನಮಗೆ ಇಂಗ್ಲೆಂಡಿನ ರಾಜಕೀಯ ಸೂತ್ರಧಾರಿಗಳ ನಿವಾಸವಾದ '10 ಡೌನಿಂಗ್ ಸ್ಟ್ರೀಟ್' ಸಿಗುತ್ತದೆ. ಅದೋ–ತೀರ ಸಾಮಾನ್ಯ ಬೀದಿ; ಸಾಮಾನ್ಯ ಕಟ್ಟಡ. ಈ ಮಂದಿರದ ಬಾಗಿಲೆದುರಿಗೆ ನಿಲ್ಲುವ ಒಬ್ಬ ಕಾವಲುಗಾರನಲ್ಲವಾದರೆ ಇದೊಂದು ಮಹಾರಾಜ್ಯದ ಕಾರ್ಯಕಲಾಪಗಳ ಕೇಂದ್ರ, ಒಂದು ಕಾಲ ದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಮುಖ್ಯ ಕೇಂದ್ರ—ಎಂಬ ಭಾವನೆಯಾಗ ಲಾರದು. ಆದರೆ ಬ್ರಿಟಿಷರು ಸಾಂಪ್ರದಾಯಿಕರು. ಅದಕ್ಕೆ ಕಟ್ಟುಬಿದ್ದು, ಅಂದಿನಿಂದ ಇಂದಿನ ತನಕ ಈ ಸ್ಥಳವನ್ನು ತಮ್ಮ ಮುಖ್ಯಮಂತ್ರಿಯ ಕಚೇರಿ ಯಾಗಿ ಬಳಸಿಕೊಂಡು ಬಂದಿದ್ದಾರೆ.

ಬ್ರಿಟಿಷರು ರಾಜಕೀಯ ವೈಭವಕ್ಕೆ ಸಂಬಂಧಿಸಿದ ಮೆರವಣಿಗೆ ಮೊದ ಲಾದುವುಗಳಲ್ಲಿ ಸಾಂಪ್ರದಾಯಿಕ ಉಡುಗೆ, ಆಚರಣೆ ಮೊದಲಾದುವು ಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ. ಅವರ ಅರಮನೆಗಳ ಕಾವಲುಗಾರರು, ಯುದ್ಧ ಸ್ಮಾರಕಗಳ ಕಾವಲಿನವರು, ಮಧ್ಯಯುಗದ ಬಣ್ಣ ಬೆಡಗಿನ ಉಡುಗೆ ಧರಿಸಿ ಇಂದಿಗೂ ಕಾವಲು ನಡೆಸುತ್ತಾರೆ. ರಾಜರಾಣಿಯರ ಸಿಂಹಾಸನಾರೋಹಣವೆಂದರೆ, ಮುಂದುವರಿದ ಪ್ರಜಾಪ್ರಭುತ್ವದ ಈ ದಿನ ಗಳಲ್ಲೂ, ಮಧ್ಯಯುಗದ ಚಿತ್ರಯುತ ಸಂಪ್ರದಾಯದ ಅನುಕರಣೆಯಾಗಿದೆ. ಸಾಂಪ್ರದಾಯಿಕತೆ ಎಂಬುದು ಗೊಡ್ಡು, ಅರ್ಥಶೂನ್ಯವೂ ಎಂದೆಣಿಸ ಬೇಕಾಗಿಲ್ಲ. ಹಣಕಾಸಿನ ದೃಷ್ಟಿಯಿಂದ ಕೆಲವೊಮ್ಮೆ ಸಾರ್ವಜನಿಕ, ಸಾಂಪ್ರ ದಾಯಿಕ ಉತ್ಸವಗಳು ವ್ಯರ್ಥ ದುಂದುಗಾರಿಕೆಯಾಗಿ ಕಾಣಿಸಬಹುದು. ಆದರೆ ಸಂಸ್ಕೃತಿಬದ್ಧವಾದ ಜೀವನದಲ್ಲಿ ಅವಕ್ಕೆ ಒಂದು ಸ್ಥಾನವಿದೆ. ಅವು ಕಣ್ಣಿನ ಹಬ್ಬ ಮಾತ್ರವಲ್ಲ; ತಮ್ಮ ಸಾರ್ವಜನಿಕ ಜೀವನದ ಬೇರು ಎಷ್ಟು ಹಿಂದಿಂದ ಹೇಗೆ ಬೆಳೆದು ಬಂದಿತು ಎಂದು ಲಾವಣ್ಯಪೂರ್ಣವಾಗಿ ತೋರಿಸ ಬಲ್ಲ ಒಂದು ಅವಕಾಶವಾಗುತ್ತವೆ. ಯಾವೊಂದು ದಿನದ ಸಂಸ್ಕೃತಿಯೂ ತನ್ನ ಪೂರ್ವದ ಬೇರುಗಳನ್ನು ಸಂಪೂರ್ಣವಾಗಿ ಕಡಿದುಕೊಂಡು ಬಾಳ ಲಾರದಷ್ಟೆ.

ಲಂಡನಿನಲ್ಲಿ ತಿರುಗಾಡಿ ನೋಡುವ ಸ್ಥಳಗಳು ಎಷ್ಟಿವೆ, ಎಷ್ಟಿಲ್ಲ! ಪಿಕೆಡಿಲ್ಲಿಯಂತಹ ಅಂಗಡಿಗಳ ಮತ್ತು ನಾಟಕಶಾಲೆಗಳ ಕೇಂದ್ರ ನೋಡತಕ್ಕದ್ದೇ. ವಾರ್ತಾವಾಹಿನಿಗಳ, ವೃತ್ತಪತ್ರಿಕೆಗಳ ಕೇಂದ್ರವಾದ ಫ್ಲೀಟ್ ಸ್ಟ್ರೀಟಿಗೆ ಹೋಗಿದ್ದೆ. ಏನಿದೆ ಅಲ್ಲಿ ಎನಿಸುತ್ತದೆ? ಸಾಮಾನ್ಯವಾದ ಬೀದಿ. ಹತ್ತಾರು ದಿನಪತ್ರಿಕೆಗಳ ಕಚೇರಿಗಳು ಸಾಮಾನ್ಯ ಕಟ್ಟಡಗಳ ಒಳಗೆ ನೆಲಸಿವೆ. ಹೊರನೋಟದಿಂದಿಷ್ಟೇ ಅವು ತೀರ ಸಾಮಾನ್ಯ. ಆದರೆ ಅಲ್ಲಿಂದ ಹೊರಡುವ ಪತ್ರಿಕೆಗಳಾದ ಟೈಮ್ಸ್, ಡೈಲಿಮೈಲ್, ಮಂಚೆಸ್ಟರ್ ಗಾರ್ಡಿಯನ್ ಮೊದಲಾದ ಪತ್ರಿಕೆಗಳು ಮಿಲಿಯಗಟ್ಟಲೆ ಜನಗಳ ಮನಸ್ಸನ್ನು ಕದಡಿವೆ, ಕೆರಳಿಸಿವೆ, ರೂಪಿಸಿವೆ. ಲೋಕನಾಯಕರು ತಮ್ಮ ಉದ್ಧಟ ವೃತ್ತಿಗೆ ಕಡಿವಾಣ ಹಾಕಿಕೊಂಡು ಬಗ್ಗಿ, ತಗ್ಗಿ, ಜನಶಕ್ತಿಗೆ ಮಣಿಯುವಂತೆ ಮಾಡುವ ಶಕ್ತಿಯನ್ನು ಗಳಿಸಿವೆ. ನಾನು ಮಂಚೆಸ್ಟರ್ ಗಾರ್ಡಿಯನಿನ ಕಚೇರಿಗೆ ಹೋಗಿದ್ದೆ, ಅದರ ವಿದೇಶ ವಾರ್ತಾ ಸಂಪಾದಕನಾದ ಗೈವಿಂಟ್ ಎಂಬವನ ಪರಿಚಯಕ್ಕಾಗಿ. ಆತ ಹೆಚ್ಚಾಗಿ ಕೇಂಬ್ರಿಜ್‌ನಲ್ಲಿ ವಾಸಿಸುತ್ತಾನೆ. ವಾರಕ್ಕೊಮ್ಮೆ ಅಲ್ಲಿಗೆ ಬರುತ್ತಾನೆ. ಉಳಿದ ವೇಳೆ ಟೆಲಿಫೋನ್ ಮೂಲಕ ತನ್ನ ಕೆಲಸ ಜರುಗಿಸುತ್ತಾನೆ. ಅವನ ಕಚೇರಿ ತೀರ ಸಾಮಾನ್ಯವಾಗಿತ್ತು. ನಮ್ಮ ಮುಂಬಯಿಯ ಸಾಹುಕಾರರ ಕಚೇರಿಗಳು ಅದಕ್ಕಿಂತ ಭವ್ಯವಾಗಿವೆ. ಆದರೆ ಇವುಗಳು ಗಳಿಸಿದ ಶಕ್ತಿ ವರ್ಚಸ್ಸುಗಳು ಸಾಮಾನ್ಯವಲ್ಲ. ಅವರ ಬಾತಮಿದಾರರುಗಳು ಇಣಿಕಿ ನೋಡದ ಸಂಧಾನವಿಲ್ಲ, ಯುದ್ಧವಿಲ್ಲ, ರಾಜಕೀಯ ಚದುರಂಗವಿಲ್ಲ. ಕಾಲಮಾನದಿಂದ ಬೆಳೆಸಿಕೊಂಡು ಬಂದ ಮಹಾ ಸಂಸ್ಥೆಗಳಿವು. ನಗರ ಸಂಚಾರಿಯಾದವನಿಗೆ ಲಂಡನಿನ ಚೌಕಗಳು (Squares) ಉದ್ಯಾನಗಳು, ಥೇಮ್ಸ್ ನದೀ ತೀರ, ವಸ್ತು ಸಂಗ್ರಹಾಲಯಗಳು, ಚಿತ್ರಾಲಯಗಳು, ಚಿತ್ರ ಪ್ರದರ್ಶನಗಳು ಎಲ್ಲವೂ ಆಕರ್ಷಣೀಯವೇ. ಬರಿಯ ಅವನ್ನೇ ನೋಡುತ್ತ ತಿಂಗಳು ಕಳೆಯಬಹುದು; ಅಥವಾ ನೋಡಿಯೂ ಮುಗಿಯಲಿಲ್ಲ ಅನಿಸಬಹುದು. ಅಂತಹ ಒಂದೆರಡು ಸ್ಥಳಗಳನ್ನಷ್ಟೇ ಕುರಿತು ಇಲ್ಲಿ ಹೇಳುತ್ತೇನೆ.

ನಾನು ಆಗಾಗ ಸುತ್ತಿಸುಳಿಯುತ್ತಿದ್ದ ಒಂದು ತಾವೆಂದರೆ ಟ್ರಫಾಲ್ಗರ್ ಚೌಕ. ಟ್ರಾಫಲ್ಗರ್ ಚೌಕವೆಂದು ಕರೆಯುವ ಬಾಯಿ ನಮ್ಮದು. ಅಲ್ಲಿಗೆ ಹೋದ ಮೇಲೆ, ಆ ಮಾತನ್ನು ಟ್ರಫಾಲ್ಗರ್ ಎಂದು ತಿದ್ದಿಕೊಳ್ಳಬೇಕಾ

ಯಿತು. ನಾಲ್ಕೆಂಟು ಪ್ರಮುಖವಾದ ಬೀದಿಗಳು ಸೇರುವಲ್ಲಿ ಈ ಚೌಕವಿದೆ. ಕಲ್ಲು ಹಾಸಿದ, ನಾಲ್ಕು ಸುತ್ತಲೂ ದಂಡೆಗಳುಳ್ಳ ವಿಶಾಲವಾದೊಂದು ಅಂಗಣ ಇದು. ಅದರ ನಡುವೆ ಉನ್ನತವಾದೊಂದು ಸ್ತಂಭ ನಟ್ಟಿದ್ದಾರೆ-ಟ್ರಫಾಲ್ಗರ್ ಯುದ್ಧದ ವಿಜಯಸ್ಮಾರಕವಾಗಿ. ಅದರ ಶಿಖರದ ಮೇಲೆ ಜಲಯುದ್ಧದಲ್ಲಿ ಇಂಗ್ಲೆಂಡಿಗೆ ಕೀರ್ತಿಯನ್ನು ತಂದ ನೆಲ್ಸನನ ಪ್ರತಿಮೆಯನ್ನು ನಟ್ಟಿದ್ದಾರೆ. ಈ ಸ್ತಂಭ ನೂರು ಅಡಿಗಳಷ್ಟು ಎತ್ತರವಾಗಿರಬೇಕು. ಅದರ ಸುತ್ತು ನೀರಿನ ಕಟ್ಟೆಯಿದೆ,ನೀರು ಚಿಮ್ಮುವ ಸುಂದರ ಕಾರಂಜಿಗಳಿವೆ. ಈ ಚೌಕದ ನಾಲ್ಕು ಸುತ್ತಲೂ ಕುಳಿತಿರಲು ಕಲ್ಲಿನ ಮಂಚಹಾಕಿದ್ದಾರೆ. ಗಾಳಿ ಬೀಸದಾಗ ಇಲ್ಲಿ ಕುಳಿತು ತೂಕಡಿಸಬಹುದು; ಗಾಳಿ ಬೀಸುವಾಗ ಕಾರಂಜಿ ನೀರಿನ ತುಂತುರುಗಳೆಲ್ಲ ಮುಖದ ಮೇಲೆ! ಇಲ್ಲಿ ಸಂಜೆಯ ವೇಳೆಗೆ ನೂರಾರು ಜನ ಬಂದು ಕಲೆಯುತ್ತಾರೆ, ಮಾತನಾಡುತ್ತಿರುತ್ತಾರೆ. ಅವರ ಎಡೆಯಲ್ಲೇ ಸಾವಿರಾರು ಪಾರಿವಾಳಗಳು ಬಂದು ತಂತಮ್ಮ ರಾಜಕೀಯವನ್ನು ಗೊಣಗುತ್ತಿರುತ್ತವೆ. ಜನ ಅವುಗಳೊಡನೆ ಆಟವಾಡುತ್ತಾರೆ. ಇಂತಹ ಐತಿಹಾಸಿಕ ಸ್ಮಾರಕಗಳು, ವೀರರ ಪ್ರತಿಮೆಗಳು ಈ ನಗರದ ಅನೇಕ ಭಾಗಗಳಲ್ಲಿವೆ.

ಇಲ್ಲಿಂದ ಥೇಮ್ಸ್ ನದಿಗೆ ಬಹು ದೂರವಿಲ್ಲ. ಥೇಮ್ಸ್ ನಗರ ಮಧ್ಯದಿಂದ ನೇರಾಗಿ ಹರಿಯುವ ಬದಲು, ಅಂಕುಡೊಂಕಾಗಿ ಹರಿಯುತ್ತದೆ. ಇದು ಅಂತಹ ದೊಡ್ಡ ನದಿಯೇನಲ್ಲ. ಆದರೆ ಇಂಗ್ಲೆಂಡಿನವರಿಗೆ ಥೇಮ್ಸ್ ದೊಡ್ಡದು. ನದಿಯ ದಂಡೆಯು ವಿಹಾರಿಗಳ, ವಿಶ್ರಾಂತಿ ಬಯಸುವವರ ತಾಣ. ನದಿಯ ಮಗ್ಗುಲಲ್ಲಿ ಅದನ್ನು ಹೊಂದಿಕೊಂಡು ಹೋಗುವ ಅಗಲ ದಾರಿಗಳಿವೆ. ವಾಹನಗಳಿಗೆ ಬೇರೆ, ಜನಕ್ಕೆ ಬೇರೆ ದಾರಿಗಳು. ತಂಪುಕೊಡುವ ಮರದ ಸಾಲುಗಳಿವೆ; ಕುಳಿತು ತೂಕಡಿಸಲು ನೂರಾರು ಒರಗು ಮಂಚಗಳಿವೆ. ಅಲ್ಲಿಯೇ ಕುಳಿತಾಗ ಒಬ್ಬ ಮುದಿ ಕೆಲಸಗಾರನನ್ನು ಮಾತಾಡಿಸಿದೆ. ಅನಾರೋಗ್ಯದಿಂದ ಸಂಪಾದನೆಯಿಲ್ಲದೆ ಕುಳಿತ ಅವನ ಕೊರಗನ್ನು ಕೇಳಿದೆ. ಕ್ಷೌರವಿಲ್ಲದ ಮುಖ, ಸಾಮಾನ್ಯ ಉಡುಗೆ ಅವನ ಬಡತನವನ್ನು ಹೇಳುತ್ತಿತ್ತು. ಆದರೆ ಈ ದೇಶದಲ್ಲಿ ನಮ್ಮ ದೇಶದಲ್ಲಿ ಕಾಣುವಂತಹ ವಿಸ್ತಾರ ದಾರಿದ್ರ್ಯದ ಚಿತ್ರ ಕಾಣಸಿಗದು. ಯಾಚಕರನ್ನು ಕಾಣಲಾರೆವು. ಕೆಲವೇ ಜನ, ಭಿಕ್ಷೆ ಬೇಡುವ ಬದಲು ದಾರಿಯ ಮಗ್ಗುಲಲ್ಲಿ ಕುಳಿತು ಚಿತ್ರ

ಬರೆಯುತ್ತಿರುತ್ತಾರೆ. ವ್ಯಂಗ್ಯ ಚಿತ್ರಗಳನ್ನೂ, ಸುಂದರ ದೃಶ್ಯಗಳನ್ನೂ, ರೂಪ ಚಿತ್ರಗಳನ್ನೂ ಬಣ್ಣದ ಚೂರುಗಳಿಂದ ಬರೆಯುತ್ತಾರೆ. ಅವನ್ನು ನೋಡಿ ಸಂತೋಷಗೊಂಡವರು ಪೆನ್ನಿ, ಆರು ಪೆನ್ನಿ ಎಸೆದು ಹೋಗುತ್ತಾರೆ. ಅದೂ ಒಂದು ಗೌರವಯುತವಾದ ದುಡಿಮೆ. ಇವರನ್ನು 'ಪೇವ್‌ಮೆಂಟ್ ಆರ್ಟಿಸ್ಟ್ಸ್' ಎನ್ನುತ್ತಾರೆ. ಇಂಥವರು ಬರೆದ ಕೆಲವು ಚಿತ್ರಗಳಲ್ಲಿ ಹೆಚ್ಚಿನ ಅಣಕ, ಪ್ರತಿಭೆ ನನಗೆ ಕಾಣಿಸಿತು.

ವರ್ಷದ ಕೆಲವೊಂದು ದಿನಗಳಲ್ಲಿ, ಈ ನದಿ ದಂಡೆಯಲ್ಲಿ ವಿಶೇಷ ಹೆಸರುವಾಸಿಯಲ್ಲದ ಚಿತ್ರಕಾರರ ಚಿತ್ರಪ್ರದರ್ಶನವೂ ಆಗುತ್ತದೆ. ರಾಯಲ್ ಎಕಾಡೆಮಿಯಂತಹ ಸಂಸ್ಥೆಗಳಲ್ಲಿ ಸ್ಥಳ ಸಿಗದವರು, ಒಬ್ಬೊಬ್ಬನಾಗಿ ಚಿತ್ರ ಪ್ರದರ್ಶನ ಮಾಡಲಾಗದವರು, ಇಲ್ಲಿ ಬಹಿರಂಗ ಚಿತ್ರಪ್ರದರ್ಶನ ಮಾಡುತ್ತಾರೆ. ನಾನು ಹೋದ ವೇಳೆ ಅಂತಹ ಒಂದು ಪ್ರದರ್ಶನ ಜರಗಿತ್ತು. ಅದರ ಪ್ರವೇಶಕ್ಕೆ ಹಾಸಲಿಲ್ಲ. ನೋಡಲು ಬರುವ ಜನ ತುಂಬ. ಹೀಗಾಗಿ ಜನಗಳ ನುಗ್ಗಿನಲ್ಲಿ ಒಳಕ್ಕೆ ಹೋಗಿ ಯಾವುದೇ ಒಂದು ಚಿತ್ರವನ್ನು ಕೆಲವು ನಿಮಿಷಗಳ ತನಕ ನೋಡುವುದು ಕಷ್ಟ. ಇದೂ ದೊಡ್ಡ ಚಿತ್ರಪ್ರದರ್ಶನವೇ. ನೂರು ಗಜಗಳಷ್ಟು ದೂರಕ್ಕೆ ಚಿತ್ರಗಳನ್ನು ಸಾಲಾಗಿ ತೂಗಿದ್ದರು. ಐವತ್ತು ನೂರು ಜನರ ಚಿತ್ರಗಳಿದ್ದುವು. ಶೈಲಿಯಲ್ಲಿ, ವಿಷಯದಲ್ಲಿ ವಿಶೇಷ ಅಂತರವೂ ಇತ್ತು. ಕೆಲವು ತುಂಬ ಸೊಗಸಿನ ಚಿತ್ರಗಳಿದ್ದುವು. ಒಂದೊಂದು ಚಿತ್ರಕ್ಕೆ ಸುಮಾರು ಇಪ್ಪತ್ತು ಶಿಲಿಂಗಿನಿಂದ ಹಲವು ಪೌಂಡುಗಳ ತನಕ ಬೆಲೆ ಸೂಚಿಸಿದ್ದರು. ಅಲ್ಲಿಯೇ ಸಮೀಪದಲ್ಲಿ ಪ್ರದರ್ಶನಕ್ಕೆ ಸೇರಿದ ಕೆಲವು ಚಿತ್ರಕಾರರು ಚಿತ್ರ ಬರೆಯುತ್ತಿದ್ದರು; ಚಿತ್ರ ವಿಕ್ರಯಿಸುತ್ತಿದ್ದರು. ಇಲ್ಲಿನ ನೇಶನಲ್ ಗೆಲರಿಗೆ ಹೋಗಿ ನೋಡುವ ಜನಸಂದಣಿಗಿಂತ ಇಲ್ಲಿ ಕಲೆತವರು ಸಂಖ್ಯೆಯಲ್ಲಿ ಕಡಿಮೆಯಾಗಿ ಕಾಣಿಸಲಿಲ್ಲ. ಚಿತ್ರ ಪರಿಶೀಲಿಸುವ ಆಸಕ್ತಿಯಾಗಲಿ ವಿಮರ್ಶಕ ಬುದ್ಧಿಯಾಗಲಿ ಅವರಲ್ಲಿ ಕಡಿಮೆಯಾಗಿರಲಿಲ್ಲ.

ಈ ದಂಡೆಯಲ್ಲಿ ನಿಂತು ನಾವು ಥೇಮ್ಸ್ ನದಿಯನ್ನು ಬರಿದೆ ಕಾಣುತ್ತಿದ್ದರೂ ಸಮಯ ಹೋದೀತು. ಸಂಚಾರದ ವ್ಯಾಪಾರಿ ಹಡಗುಗಳಿವೆ. ಅಲ್ಲೀ ಸುತ್ತಿ ಸುಳಿಯುವ ವಿಲಾಸದ ಮೋಟರ್ ಲಾಂಚುಗಳಿವೆ. ನಾವು ಹೋದ ವೇಳೆ ಅಲ್ಪ ದೂರದ ಸಂಚಾರಕ್ಕಾಗಿ 'ಥೇಮ್ಸ್ ಫೆರಿ ಸರ್ವಿಸ'ನ್ನು ತೊಡಗಿದ್ದರು. ವಿದೇಶದಿಂದ ಬರುವ ಅನೇಕ ದೊಡ್ಡ ಹಡಗುಗಳು ಈ ನದಿಯನ್ನು

ಹಾಯ್ದು, ನಗರದ ಪೂರ್ವ ಭಾಗಕ್ಕೆ ಬಂದು ತಂಗುತ್ತವೆ. ಅನಂತರ ನದಿಯನ್ನು ಹಾಯುವ ಅನೇಕ ಸೇತುವೆಗಳಿವೆ. ಅವುಗಳಲ್ಲಿ ಚರಿತ್ರಾರ್ಹವಾದ ಒಂದು ಸೇತುವೆಯೆಂದರೆ ಹೆಸರಾದ ಟವರ್ ಬ್ರಿಜ್. ನದಿಯ ನೀರಿನಲ್ಲಿ ನಿಂತ ಎರಡು ಉನ್ನತ ಕೊತ್ತಳಗಳ ಮೂಲಕ ಸೇತುವೆಯ ದಾರಿ ಹಾಯುತ್ತದೆ. ದೊಡ್ಡ ಹಡಗುಗಳು ಬರುವಾಗ ದಾರಿಯ ಸಂಚಾರ ನಿಲ್ಲಿಸುತ್ತಾರೆ. ಸೇತುವೆ ಇಬ್ಭಾಗವಾಗಿ ದಾರಿ ಮೇಲಕ್ಕೇಳುತ್ತದೆ. ಹಡಗು ಹಾದು ಹೋದ ಮೇಲೆ ಅದು ತಿರುಗಿ ಕೂಡಿಕೊಳ್ಳುತ್ತದೆ. ಈ ಸೇತುವೆಯ ನೋಟ ಮನೋಹರವಾಗಿದೆ. ಅದನ್ನು ದಾಟಿ ಆಚೆಗೆ ಹೋದರೆ, ಉತ್ತರ ಭಾಗದಲ್ಲಿರುವ ಪಾರ್ಲಿಮೆಂಟ್ ಕಟ್ಟಡ, ಸ್ಯೆಂಟ್‌ಪಾಲ್ಸ್ ಚರ್ಚ್ ಮೊದಲಾದುವು ದಿಗಂತಕ್ಕೆ ಅಂಟಿಸಿದ ಜರತಾರಿಯ ಅಂಚಿನಂತೆ ಕಾಣಿಸುತ್ತವೆ. ಹಿಂದಣ ವರ್ಷ ಜರುಗಿದ 'ಫೆಸ್ಟಿವಲ್ ಆಫ್ ಬ್ರಿಟನ್' ಸಲುವಾಗಿ ಕಟ್ಟಿಸಿದ ಅದ್ಭುತವಾದೊಂದು ಮಂದಿರ ಈ ನದಿಯ ದಕ್ಷಿಣ ದಂಡೆಯಲ್ಲಿದೆ. ಅದರ ಬಳಿಯೇ ಸಂಗೀತ ಕಚೇರಿಗಳ ಸಲುವಾಗಿ ಕಟ್ಟಿಸಿದ ಒಂದು ಭವ್ಯ ಮಂದಿರವಿದೆ. ಅದರ ರಚನೆ ವಿಶೇಷವಾದುದೆಂದು ಕೇಳಿ ಅದನ್ನು ನೋಡಲು ಹೋಗಿದ್ದೆ. ಆದರೆ ಆ ದಿನ ಒಳಗೆ ಕಚೇರಿಯೊಂದು ನಡೆಯುತ್ತಿದ್ದುದರಿಂದ ನನಗೆ ನೋಡುವುದಕ್ಕಾಗಲಿಲ್ಲ.

ದಕ್ಷಿಣ ದಂಡೆಯಿಂದ ಸರಿದು, ತುಸು ಉತ್ತರಕ್ಕೆ ಹೋದರೆ ಕಾಣಿಸುವ ಒಂದು ದೊಡ್ಡ ಕಟ್ಟಡ ಲಂಡನಿನ ಶಕ್ತಿ ಕೇಂದ್ರವಾದ 'ಬೆಟರ್ಸಿ ಪವರ್ ಹೌಸ್'. ಕಲ್ಲಿದ್ದಲನ್ನು ವಿದ್ಯುತ್ತನ್ನಾಗಿ ಮಾರ್ಪಡಿಸುವ ಬಹುದೊಡ್ಡ ಶಕ್ತಿ ಕೇಂದ್ರವಿದು. ಈ ಕಟ್ಟಡದ ಗೋಡೆಗಳು, ಕೊತ್ತಳಗಳು, ಮೈ ರೇಖೆಗಳು ಬಹು ಸುಂದರವಾಗಿವೆ; ಥೇಮ್ಸ್ ನದಿಯಲ್ಲಿ ಅದರ ಆಕೃತಿ ಪ್ರತಿಬಿಂಬಿಸುವಾಗ ಕಣ್ಣಿಗೆ ಮನೋಹರವಾಗಿ ಕಾಣಿಸುತ್ತದೆ.

ನನಗೆ ಬೀದಿಸಂಚಾರದ ಮೋಹ ಕಡಿಮೆ. ವಯಸ್ಸಾದುದರಿಂದ ಅದಕ್ಕೆ ಬೇಕಾದ ಚುರುಕುತನವೂ ಇಲ್ಲ. ಹೀಗಾಗಿ ನಾನು ಸಂಚರಿಸಿದ ಯಾವುದೇ ಆಧುನಿಕ ನಗರವನ್ನು, ಎಳೆಯನಾಗಿರುವಾಗ ಮುಂಬಯಿಯ ಹಾದಿ ಬೀದಿಗಳನ್ನು ತುಳಿದಷ್ಟು ಚುರುಕಿನಿಂದ ತುಳಿಯಲಿಲ್ಲ. ಕೆಲವೇ ಪ್ರೇಕ್ಷಣೀಯ ಸ್ಥಳಗಳನ್ನು ಆರಿಸಿಕೊಂಡು ಹೋಗಿ ತೃಪ್ತಿಪಡುತ್ತಿದ್ದೆ. ವಾಸ್ತುರಚನೆಗಳನ್ನು ದೂರದಿಂದ, ಹೊರಗಿಂದ ಕಾಣುವುದು; ಅವುಗಳ

ಸೊಗ ರೇಖೆಗಳಲ್ಲಿ ಹೇಗೆ ಪ್ರಕಟವಾಗುತ್ತದೆ ಎಂದು ನೋಡುವುದು-ಇವೇ ನನ್ನ ಚಪಲಗಳಲ್ಲವೆ, ಐತಿಹಾಸಿಕ ಅನ್ವೇಷಣೆ, ಎಂಜನಿಯರಿಂಗ್ ಪ್ರೌಢಿಮೆ ಅಳೆಯುವುದು ನನಗೆ ಸಾಧ್ಯವಾಗದು. ನನ್ನ ಸಮಯದ ಬಹುಭಾಗ ಕಳೆ ದುದು "ಮ್ಯೂಸಿಯಮ್"ಗಳಲ್ಲಿ. ಆ ದೃಷ್ಟಿಯಿಂದ ಲಂಡನ್ ನನಗೆ ಅತಿ ಮುಖ್ಯವೆನಿಸಿತು. ಅಲ್ಲಿನ ಮ್ಯೂಸಿಯಮ್‌ಗಳ ಸಂಖ್ಯೆಯೂ ಅಧಿಕ; ವಿಸ್ತೃ ತಿಯೂ ಹಾಗೆ. ವೈಜ್ಞಾನಿಕ ವೈಶಿಷ್ಟ್ಯಗಳೂ ಭಿನ್ನಭಿನ್ನ. ಇನ್ನೊಂದು ಅಧ್ಯಾಯ ದಲ್ಲಿ ಇಲ್ಲಿನ ಚಿತ್ರಶಾಲೆಗಳನ್ನು ಕುರಿತು ಬಣ್ಣಿಸುತ್ತೇನಾದುದರಿಂದ, ಇಲ್ಲಿ ಕೆಲವು ಸಂಗ್ರಹಾಲಯಗಳ ವಿಚಾರದಲ್ಲಿ ನಾಲ್ಕು ಮಾತು ಹೇಳಬಹುದು.

ಒಂದು ದಿನ ನಾನು ಉಳಿದುಕೊಂಡ ಅರ್ಲ್ಸ್ ಕೋರ್ಟ್ ನಗರ ಭಾಗಕ್ಕೆ ಸಮೀಪವಾಗಿದ್ದ ಕೆನ್ಸಿಂಗ್‌ಟನ್ನಿನಲ್ಲಿರುವ ನೆಚ್ಯುರಲ್ ಹಿಸ್ಟರಿ ಮ್ಯೂಸಿಯಮಿಗೆ ಹೋಗಿದ್ದೆ. ಅದರ ಮಗ್ಗುಲಿಗೇನೇ ಇನ್ನೂ ಎರಡು ಪ್ರಸಿದ್ಧ ಮ್ಯೂಸಿಯಮ್‌ಗಳಿದ್ದುವು. ಒಂದು—ವಿಕ್ಟೋರಿಯಾ ಮತ್ತು ಆಲ್ಬರ್ಟ್ ಮ್ಯೂಸಿಯಮ್. ನಾನು ಹೋದ ಮ್ಯೂಸಿಯಮ್ ಪ್ರಕೃತಿ ಶಾಸ್ತ್ರಕ್ಕೆ ಮೀಸಲಾದುದು. ಭೂಶಾಸ್ತ್ರ, ಪ್ರಾಣಿಶಾಸ್ತ್ರಗಳು ಇವುಗಳ ಅಂಗ ಗಳು. ಬಹು ವಿಶಾಲವಾದ ಕಟ್ಟಡವೊಂದರಲ್ಲಿ ಈ ಸಂಗ್ರಹಾಲಯವಿದೆ. ಮೂರು ಮಹಡಿಗಳ ಮನೆ. ಒಂದೊಂದು ಅಂತಸ್ತಿನಲ್ಲೂ ಎಡಬಲ, ಹಿಂದೆ, ಮುಂದೆ ಸಾಲೊಡೆದು ಸಾಗುವ ಅಗಲವೂ ಉದ್ದವೂ ಆದ ಕೊಟಡಿಗಳಿವೆ. ಕೊಟಡಿ ಎಂಬ ಮಾತೇ ಅವಕ್ಕೆ ಸಲ್ಲದು. ಅರುವತ್ತು ಎಂಬತ್ತು ಅಡಿ ಅಗಲವೂ ಮುನ್ನೂರು ನಾನ್ನೂರು ಅಡಿ ಉದ್ದವೂ ಆಗಿರುವ ಈ ಕೋಣೆ ಗಳು ನಮ್ಮ ನಾಟಕಶಾಲೆಗಳ ಗಾತ್ರವನ್ನು ಮೀರಿಸುತ್ತವೆ. ಇಂತಹ ಬಹು ದೊಡ್ಡ ಅರಮನೆಯ ಮುಕ್ಕಾಲು ಮೂರು ವೀಸ ಭಾಗವು ಪ್ರಾಣಿಶಾಸ್ತ್ರ ಸಂಬಂಧವಾದ ಮಾದರಿಗಳಿಗಾಗಿ ಮೀಸಲಾಗಿದೆ.

ಪಕ್ಷಿವರ್ಗಕ್ಕೆ ಬೇರೆ ಕೊಟಡಿಗಳು, ಪತಂಗ, ಕೀಟಗಳಿಗೇನೇ ಬೇರೆ ಕೊಟಡಿ; ಜಲಚರಗಳೇ ಬೇರೆ ಕಡೆ; ಸಸ್ತನಗಳೇ (Mammal) ಬೇರೆ. ಚಿಪ್ಪುಗಟ್ಟಿದ (Fossil) ಜೀವಗಳೇ ಬೇರೆ; ಪ್ರಾಚೀನಯುಗದ ಪ್ರಾಣಿಗಳ ಅವಶೇಷವೇ ಬೇರೆ, ಉರಗ ವರ್ಗವೇ ಬೇರೆ. ಹೀಗೆ ಹಲವಾರು ವಿಭಾಗ ಗಳಿವೆ. ಒಂದೊಂದನ್ನೂ ತಾಸು ತಾಸುಗಳ ತನಕ ಸುತ್ತಿ ಸುಳಿದು ನೋಡ ಬಹುದು. ಹಕ್ಕಿಗಳ ವಿಭಾಗಕ್ಕೆ ಬಂದರೆ-ಮೂರು ನಾಲ್ಕು ಕೊಟಡಿಗಳಲ್ಲಿ

ಗಾಜಿನ ಕವಾಟುಗಳಲ್ಲಿ ಇಷ್ಟಿಷ್ಟೂ ಊನಕಾಣದಂತೆ ಸಂಗ್ರಹಿಸಿಟ್ಟ ಪಕ್ಷಿ ವರ್ಗದ ಶರೀರಗಳಿವೆ. ಅವುಗಳನ್ನು ಅವುಗಳ ಸ್ವಭಾವ, ನಿವಾಸ, ರಚನೆ ಮೊದಲಾದ ವೈಜ್ಞಾನಿಕ ದೃಷ್ಟಿಗಳಿಂದ ವಿಭಾಗಿಸಿ ಇರಿಸಿದ್ದಾರೆ. ಜಲಪಕ್ಷಿಗಳ ಬಳಗವೆಂಬುದೇ ಬೇರೆ; ಪೆಸೆಂಟ್ ವರ್ಗವೆಂಬುದೇ ಬೇರೆ; ಬೇಟೆಗಾರ ವರ್ಗ ಅದೇನೇ ಬೇರೆ—ಹೀಗೆ ಒಂದೊಂದು ವರ್ಗವಲ್ಲೂ ಸಾವಿರಾರು ತೆರತೆರನ ಹಕ್ಕಿಗಳಿವೆ. ಪ್ರಪಂಚದ ಎಲ್ಲೆಡೆಯ ಪಕ್ಷಿಗಳೂ ಇಲ್ಲಿವೆ. ಅನೇಕ ವನ್ನು ಅವುಗಳ ಮನೆ, ಆವರಣಗಳನ್ನು ತೋರಿಸುವ ರೀತಿಯಲ್ಲಿ ಸಂಗ್ರಹಿಸಿ ದ್ದಾರೆ. ಪಕ್ಷಿಗಳ ಶೃಂಗಾರ,ಒಲುಮೆ, ಬೇಟೆ,ಋತುಪ್ರವಾಸ(Migration) ಇವುಗಳನ್ನು ಚಿತ್ರಿಸುವ ರೀತಿಯಲ್ಲಿಯೂ ಪೃಥಕ್ಕರಿಸಿ ಇಟ್ಟಿದ್ದಾರೆ. ಆ ಸಂಬಂಧದ ಜ್ಞಾನ ಪ್ರೇಕ್ಷಕಸಿಗುಂಟಾಗುವಂತೆ ನಕ್ಷೆಗಳಿಂದಲೂ ಸೂಚಿಸಿ ದ್ದಾರೆ. ಅಲ್ಲಿನ ಪುಸ್ತಕ ಶಾಖೆಯಲ್ಲಿ ಈ ವಿಷಯದಲ್ಲಿ ಗ್ರಂಥ, ಲೇಖ, ಚಿತ್ರಗಳ ಸಂಗ್ರಹ ಮಾರಾಟಕ್ಕೂ ಇದೆ.

ಪತಂಗ ಕೀಟಗಳ ಮನೆಯೋ ಎಷ್ಟು ದೊಡ್ಡದು! ನೆಲದುದ್ದಕ್ಕೂ ಸಾಲುಗಟ್ಟಲೆಯಿಂದ ಬೀರುಗಳಿವೆ. ಒಂದೊಂದರ ಒಳಗಡೆ ಹಲವಾರು ಅರೆಗಳು. ನಾವು ಬಳಿ ನಿಂತ ಕವಾಟದ ಅರೆಯನ್ನು ಎಳೆದರೆ ನೂರಾರು ಬಗೆಯ ಕೀಟಗಳು ಕಾಣುತ್ತವೆ. ಅವುಗಳ ಜೀವನಾವಸ್ಥೆ, ಬಣ್ಣ, ಬೆಡಗು ಮೊದಲಾದುವುಗಳ ವಿಶೇಷ ಪರಿಚಯವಾಗುತ್ತದೆ. ಹುಳು ಹುಪ್ಪಟೆಗಳಲ್ಲಿ ಇಷ್ಟೊಂದು ವೈವಿಧ್ಯವಿದೆಯೇ ಎಂಬ ಬೆರಗು ನಮಗಾಗಬೇಕು.

ಜಲಚರಗಳ ವಿಭಾಗವೂ ಮೂರು ನಾಲ್ಕು ಕೊಟಡಿಗಳಲ್ಲಿ ತುಂಬಿದೆ. ಹವಳ, ಕಡಲ ಹೂವು (Sea anemone) ಗಳಿಂದ ತೊಡಗಿ, ಹಾವು ಮೀನು,ಹುಲಿಮೀನು ಮೊದಲಾದ ಅಸಂಖ್ಯಾತ ಮೀನುಗಳಿವೆ.ಬರಿಯೊಂದು ತಿಮಿಂಗಿಲಕ್ಕಾಗಿ ಮೀಸಲಾದ ಕೊಟಡಿಯಿದೆ. 50 ಅಡಿ ಅಗಲ 150 ಅಡಿ ಉದ್ದ ಮೂವತ್ತು ಅಡಿ ಎತ್ತರವಾದ ಕೋಣೆಯೊಂದರ ಒಳಕ್ಕೆ ಆ ಕೊಟಡಿ ಯನ್ನೇ ತುಂಬಿಸುವಷ್ಟು ದೊಡ್ಡದೊಂದು ತಿಮಿಂಗಿಲವಿದೆ. ಅದರ ಬೇಟೆ, ಎಣ್ಣೆ ಉದ್ಯಮ, ಋತು ಯಾತ್ರೆ ಮೊದಲಾದ ವೈಜ್ಞಾನಿಕ ವಿಷಯಗಳ ನಕ್ಷೆಯಿದೆ. ಅಲ್ಲಿನ ಮಹಡಿಯಲ್ಲಿ ಅದರ ಶರೀರದ ವಿವಿಧ ಭಾಗಗಳೂ ಪ್ರದರ್ಶಿತವಾಗಿವೆ.

ಪ್ರಪಂಚದ ವಿವಿಧ ಜಾತಿಯ ಉರಗಗಳಿಗಾಗಿ ಒಂದು ಕೊಟಡಿಯೇ

ಮೀಸಲು. ಸಜೀವವೆಂಬಷ್ಟು ನೈಜವಾಗಿ ಸಂಗ್ರಹಿಸಿಟ್ಟ ನೂರಾರು ಹಾವುಗಳಿವೆ. ಮಲಯ, ಭಾರತದ ಹೆಬ್ಬಾವುಗಳು, ದಕ್ಷಿಣ ಅಮೇರಿಕದ ಆನೆಕೊಂಡ, ಆಫ್ರಿಕದ ಬೋವ, ಮಂಬ—ಹಾಗೆಯೇ ಅನೇಕಾನೇಕ ವಿಷಪೂರಿತ, ವಿಷಹೀನ ಹಾವುಗಳಿವೆ. ಅಲ್ಲಿರಿಸಿದ್ದ ಮಲಯದ ಹೆಬ್ಬಾವೊಂದು ಮೂವತ್ತು ಅಡಿ ಗಾತ್ರವಾಗಿತ್ತು. ನನ್ನಂಥವನಿಗೆ ಅದರ ಹೊಟ್ಟೆಯಲ್ಲಿ ಸುಖವಾಗಿ ಮಲಗುವಷ್ಟು ಬಿಡಾರವಿದೆ. ಹೀಗಿರಲು ಹೆಬ್ಬಾವು ಮನುಷ್ಯನನ್ನು ನುಂಗೀತೆಂದು ಕತೆ ಕಟ್ಟುವುದರಲ್ಲಿ ಆಶ್ಚರ್ಯವಿಲ್ಲ.

ಹಾಗೆಯೇ ನಡೆನಡೆದು ಹುಲಿ, ಚಿರತೆ ಮೊದಲಾದ ಸಸ್ತನಗಳನ್ನೂ ಹಿಂಸ್ರ ಪಶುಗಳನ್ನೂ ನೋಡಿಕೊಂಡು ಮಗ್ಗುಲ ಮನೆಗೆ ಸರಿದರೆ ಕಣ್ಣಿದ್ದರೂ ನಂಬಲಾರದ ಊರಿಗೆ ಬಂದಂತಾಗುತ್ತದೆ. ಕಾಲಮಾನ ಸರಿದು ಮಾನವ ಕುಲಕ್ಕಿಂತ ಪೂರ್ವ ಯುಗಕ್ಕೆ ಬರುತ್ತೇವೆ. ಕೊಟಡಿಯ ಒಳಗೆ ಕಾಲಿಡುವಾಗಲೇ ಎದುರಿಗೆ ನಿಂತ ಡಿನೋಸರದ ಅಸ್ಥಿ ಪಂಜರವನ್ನು ಕಂಡು ದಿಗಿಲು ಹಾರುತ್ತದೆ. ತಿಮಿಂಗಿಲದ ಗಾತ್ರ ಅದಕ್ಕೆ; ಅದರ ಬಾಲದ ಕುಡಿಯಿಂದ ಮೂತಿಗೆ ಎಂಬತ್ತು ಅಡಿಯಾದೀತು. ಹಿಂದಿನ ಎರಡು ಕಾಲುಗಳ ಮೇಲೆ ನಿಂತ ಈ ಹೆಗ್ಗಾಳಿಯ ಎತ್ತರ ಮೂವತ್ತು ಅಡಿ ಮಿಕ್ಕೀತು. ಅದರಂತಿರುವ ಪ್ರಾಚೀನ ಯುಗದ ಪ್ರಾಣಿಗಳ ಅವಶೇಷಗಳಿವೆ. ಈ ಹೆಗ್ಗಾಳಿಯ ಮಗ್ಗುಲಿಗೇನೇ ಅರ್ಧ ಖಡ್ಗಮೃಗ ರೂಪಿಯಾದ ಪ್ರಾಣಿಯೊಂದಿದೆ. ಅದಕ್ಕೆ ಖಡ್ಗಮೃಗದ ಕಾಲುಗಳು, ಕಮಠನ ಮೈ ಮುಖ; ಮಾಸಲು ಕಂದು ಬಣ್ಣ. ಇದು ಅಸ್ಥಿಪಂಜರವಲ್ಲ. ಚರ್ಮ, ಮಾಂಸ ಸಹಿತವಾಗಿ ಹಿಮಯುಗದಲ್ಲಿ ಇದ್ದಕ್ಕಿದ್ದಂತೆ ಹೆಪ್ಪುಗಟ್ಟಿ ಇಂದಿಗೂ ಉಳಿದು ಬಂದಿರುವ ಶರೀರ. ಯುಗಮಾನದ ದೆಸೆಯಿಂದ ತುಸು ಮುದುಡಿದೆಯಷ್ಟೆ. ನೋಟಕ್ಕೆ ಅಸಹ್ಯ ರೂಪು; ಘೋರಾಕಾರ. ಅವನ್ನು ಕಾಣುವವರಿಗೆ ಮನುಷ್ಯ ಎಷ್ಟೋ ಪುಣ್ಯಶಾಲಿ ಎನಿಸಬೇಕು--ಇಂಥ ಪ್ರಾಣಿಗಳಿರುವಾಗ ಅವನ ಕುಲ ಹುಟ್ಟದೆ. ಅನಂತರ ಹುಟ್ಟಿ ಇಂಥವುಗಳ ಬಾಯಿಂದ ಪಾರಾಯಿತಲ್ಲಾ ಎನಿಸುತ್ತದೆ.

ಇತಿಹಾಸ ಪೂರ್ವಯುಗದ ಇನ್ನು ಅನೇಕ ಪ್ರಾಣಿಗಳೂ ಅಲ್ಲಿವೆ. ಕೂದಲುಳ್ಳ ಬಹು ದೊಡ್ಡ ಆನೆಯಾದ ಮಾಮತ್ ಇವೆ. ಮಾಮತಿನ ಮೂರು ನಾಲ್ಕು ಅಸ್ಥಿಪಂಜರಗಳಿವೆ. ಇದಕ್ಕೆ ಆಫ್ರಿಕದ ಆನೆಯ ಗಾತ್ರವನ್ನು ಮೀರುವ ಗಾತ್ರ; ಅತಿ ಉದ್ದವಾದ ಹೊರಲಾರದಷ್ಟು ಭಾರವುಳ್ಳ ದಾಡೆಗಳು.

ಇನ್ನು ತನ್ನ ಹಲ್ಲೇ ತನ್ನ ಬಾಯಿಗೆ ದೊಡ್ಡದಾಗಿ, ಬದುಕು ಕಷ್ಟವಾಗಿ, ಕುಲನಾಶಗೊಂಡ ಪ್ರಾಚೀನ ಯುಗದ ಹುಲಿಯಿದೆ— (Sabre toothed tiger) ಹೀಗೆಯೇ ಇರುವ ಅಸ್ಥಿಪಂಜರಗಳ ಸಂಗ್ರಹವಲ್ಲದೆ, ನೆಲದಲ್ಲಿ ಕೋಟಿಗಟ್ಟಲೆ ವರ್ಷಗಳ ಹಿಂದಕ್ಕೆ ಹುದುಗಿ ಬಿದ್ದು, ಶಿಲೆಯ ಪದರಿನೊಡನೆಯೇ ಘನವಾದ ಶರೀರಗಳಿವೆ. ಹೆಣವೂ ನೆಲದ ಸಂಸ್ತರದಲ್ಲೊಂದಾಯಿತು. ಮಣ್ಣಿದ್ದುದು ಕಾಲಾಂತರದಲ್ಲಿ ಗಟ್ಟಿ ಶಿಲೆಯಾಯಿತು. ಆಗ ಈ ಪ್ರಾಣಿಗಳ ರೂಪಗಳ ಮುದ್ರೆ ಶಿಲೆಯಲ್ಲಿ ಚಿರಂತನವಾಗುವಂತೆ ಅಚ್ಚೊತ್ತಿತು. ಇವಕ್ಕೆ 'ಫಾಸಿಲ್ಸ್' ಎನ್ನುತ್ತಾರೆ. ಇಂತಹ ನೂರಾರು ಫಾಸಿಲುಗಳ ಸಂಗ್ರಹವಿದೆ. ಉರಗವು ಪಕ್ಷಿಯಾಗಿ ವಿಕಾಸಗೊಂಡ ಕತೆ, ಉರಗ ಗೌಳಿಯಾದುದು, ಅನಂತರ, ಇತರ ರೀತಿಯ ವಿಕಾಸಗಳನ್ನು ಹೊಂದಿದುದು—ಇವೇ ಮೊದಲಾದ ವಿಚಾರಗಳು ಕಣ್ಣೆದುರಿಗೆ ತೋರುತ್ತವೆ.

ಇನ್ನೊಂದು ಭಾಗದಲ್ಲಿ ಖನಿಜ, ರತ್ನ ಮೊದಲಾದವುಗಳ ಸಂಗ್ರಹವಿದೆ. ಅಲ್ಲಿ ಸಂಗ್ರಹಿಸಿರುವ ನಾನಾ ವಿಧದ ಅದುರುಗಳೂ, ಶಿಲೆಗಳೂ, ಕಲ್ಲುಗಳೂ ಸ್ಥೂಲ, ಸೂಕ್ಷ್ಮ ಪರಿಶೀಲನೆಗಳಲ್ಲಿ ವಿಚಿತ್ರ ಬಣ್ಣ ಬೆಡಗುಗಳನ್ನು ತೋರಿಸುತ್ತವೆ. ಸೂರ್ಯನ ವಿಲಾಸದಿಂದ ನೆಲ,ಜಲ,ಮುಗಿಲುಗಳು ತೋರಿಸುವ ವೈಖರಿಗಿಂತ ಹೆಚ್ಚಿನ ವರ್ಣ ವೈಖರಿಯು ಭೂಗರ್ಭದಲ್ಲಿ ಹುದುಗಿರುವಂತೆ ಕಾಣುತ್ತದೆ- ಈ ತುಣುಕುಗಳನ್ನು ಕಾಣುವಾಗ. ಒಂದೊಂದು ಕಲ್ಲಿನ ತುಣುಕು ಅಂಗೈಯಲ್ಲಿ ನಿಲ್ಲಬಲ್ಲ ರತ್ನನಗರಿಯೋ ಸುವರ್ಣಪುರಿಯೋ ಆಗಿ ಕಾಣಿಸುತ್ತದೆ. ನಾಲ್ಕು ವರ್ಷಗಳ ಕಾಲ ಪ್ರಕೃತಿಶಾಸ್ತ್ರದ ಪುಸ್ತಕ ತಿರುವಿ ಪಾಠ ಹೇಳಿಸಿಕೊಳ್ಳುವ ಬದಲು ನಾಲ್ಕು ದಿನ ಇಲ್ಲಿ ಬಂದು ಸುತ್ತಾಡಿದರೆ ಪ್ರಕೃತಿ ಪಾಂಡಿತ್ಯ ಬಂದೀತು. ಪ್ರಾಣಿಕೋಟಿಯ ಮೇಲೆ ಅಪಾರ ಪ್ರೇಮ ಹುಟ್ಟೀತು. ನಿಸರ್ಗದ ಚೆಲುವನ್ನು ಕುಡಿಯ ಬಲ್ಲ ನಮ್ಮ ಕಣ್ಣು ಅರಳೀತು. ನಮ್ಮ ದೇಶದಲ್ಲಿ ಮ್ಯೂಸಿಯಮುಗಳು ಇಲ್ಲವೆಂದಲ್ಲ. ಮುಂಬಯಿ ಮದರಾಸುಗಳಲ್ಲಿವೆ. ಆದರೆ ಸಂಗ್ರಹದಲ್ಲಿ,ಪ್ರದರ್ಶನದಲ್ಲಿ ವೈಜ್ಞಾನಿಕತೆ ಸಾಲದು. ಪಶುಪಕ್ಷಿಗಳ ಶವವನ್ನು ಕೊಯ್ದು ತುಂಬಿಸಿ ಹೊಲಿಯುವ ಬಗೆಯಲ್ಲಿಯೂ ಓರಣ ಸಾಲದು. ಒಂದೊಂದು ಪ್ರಾಣಿಯ ಆಕಾರವನ್ನೂ ಅಭ್ಯಸಿಸಿ ತೊಗಲಿನೊಳಕ್ಕೆ ತುಂಬಿಸುವ ವಸ್ತುವನ್ನು ಆ ಆಕಾರಕ್ಕೆ ಸಮನಾಗಿ ಹೊಂದಿಸುವ ಕಲೆ ಮೋಚಿಯ ಕೆಲಸವಲ್ಲ; ವೈಜ್ಞಾನಿಕ ವೃತ್ತಿ. ಒಂದು ಪ್ರಾಣಿ ಶರೀರವು

ವೈಜ್ಞಾನಿಕ ನಿದರ್ಶನಕ್ಕೆ ಬರುವಂತೆ ತೋರಿಸಲು ಜೀವಶಾಸ್ತ್ರದ ಪರಿಚಯ ವಿರಬೇಕು. ನಮ್ಮ ದೇಶದಲ್ಲಿ ಇಂತಹ ಸಂಗ್ರಹಗಳು ಬೆಳೆಯದಿರುವುದಕ್ಕೂ ಸಂಗ್ರಹ ಶಾಸ್ತ್ರ ಬೆಳೆಯದಿರುವುದಕ್ಕೂ ಮುಖ್ಯ ಕಾರಣ-ನಮ್ಮ ಮುಂದಾಳು ಗಳಿಗೆ ಈ ಬಗೆಯ ಜ್ಞಾನ ಜನತೆಗೆ ಅವಶ್ಯವೆಂದು ಅನಿಸದಿರುವುದು.

ಕೆನ್ಸಿಂಗ್‌ಟನ್ನಿನಲ್ಲೇ ಮತ್ತೊಂದು ಪ್ರಸಿದ್ಧ ಸಂಗ್ರಹಾಲಯವಿದೆ— ಅದು ಸಾಯನ್ಸ್ ಮ್ಯೂಸಿಯಮ್. ಇದಕ್ಕೊಂದು ದಿನ ಹೋಗಿದ್ದೆ. ಇದು ಅಪಾರವಾದ ಸಂಗ್ರಹಾಲಯ-ಯಂತ್ರ, ವಿಜ್ಞಾನಗಳಿಗೆ ಸಂಬಂಧಿಸಿದ್ದು. ಈ ಕಟ್ಟಡದ ಒಳಗೆ ಪ್ರವೇಶಿಸಿದೊಡನೆಯೇ ಎಡ ಮಗ್ಗುಲಿಗೆ ಒಂದು ಗುರುತಿ ಸಿದ ನೆಲವಿದೆ. ಸುಮಾರು ನೂರು ಅಡಿ ಎತ್ತರದ ಮಾಡಿನಿಂದ ಭಾರವಾದ ಗುಂಡೊಂದು ಅಲ್ಲಿನ ನೆಲಕ್ಕೆ ಸಮೀಪವಾಗಿ ತೂಗಿ ನಿಂತಿರುವುದು ಕಾಣು ತ್ತದೆ. ನೆಲದ ಮೇಲೆ ಒಂದು ವೃತ್ತಾಂಶವನ್ನು ವಿಭಾಗಿಸಿ ಗುರುತುಮಾಡಿ ಇಟ್ಟಿ ದ್ದಾರೆ. ಆ ಗುಂಡು ವೃತ್ತದ ಮಧ್ಯಭಾಗದಲ್ಲಿರುತ್ತದೆ. ಬೆಳಗಿನ ಹನ್ನೊಂದು ಘಂಟೆಗೆ ಸಮನಾಗಿ ಆ ಗುಂಡನ್ನು ತೂಗಿ ಬಿಡುತ್ತಾರೆ. ಅದು ಗಡಿಯಾರದ 'ಪೆಂಡುಲಮ್'ನಂತೆ ಚಲಿಸುತ್ತಲೇ ಇರುತ್ತದೆ. ನಿಮಿಷ ಸರಿದಂತೆ ಅದರ ತೂಗುವ ಪಥ ಬದಲಾದುದು ಕಾಣುತ್ತದೆ. ಒಂದು ಘಂಟೆಯ ಅವಧಿಯಲ್ಲಿ, ಭೂಮಿ ತನ್ನ ಅಚ್ಚಿನಲ್ಲಿ ಚಲಿಸಿದುದರ ಪರಿಣಾಮವಾಗಿ, ವೃತ್ತ ಮಧ್ಯದಿಂದ ಓಡುತ್ತಿದ್ದ ಗುಂಡು ಅದರಿಂದ ಬಹು ದೂರದಲ್ಲಿ ಚಲಿಸುವುದು ಕಾಣಿಸು ತ್ತದೆ. ಹೀಗೆ ಅನೇಕ ವಿಷಯಗಳನ್ನು ಬೋಧಿಸುವ ಏರ್ಪಾಟುಗಳಿವೆ.

ಬ್ರಿಟಿಷ್ ವಿಜ್ಞಾನಿಗಳು ಈ ತನಕ ಯಾವಾವ ಯಂತ್ರಶೋಧನ, ವೈ ಜ್ಞಾನಿಕ ಶೋಧನೆಗಳನ್ನು ನಡೆಯಿಸಿದ್ದಾರೆಯೋ ಅಂತಹ ಎಲ್ಲ ಉಪಕರಣ, ಸಾಧನ, ಯಂತ್ರಗಳ ಸಂಗ್ರಹ ಇಲ್ಲಿದೆ. ವಾಟ್ಸ್, ಸ್ಟೀವನ್ಸನ್, ಫೆರಡಿ, ಮೊದಲಾದವರು ಬಳಸಿದ ಮೊದಲ ನಿರ್ಮಾಣಗಳಿವೆ. ಅನಂತರ ಈ ಮೂಲ ನಿರ್ಮಾಣಗಳನ್ನು ಸುಧಾರಿಸಿ ಮಾಡಿದಂಥ ಪ್ರತಿಯೊಂದು ಯಂತ್ರಸಲಕರ ಣೆಯ ಸಂಗ್ರಹವಿದೆ. ಉಗಿ ಎಂಜಿನಿನ ವಿಕಾಸ, ಉಗಿ ಟರ್ಬಾಯಿನ್‌ನ ವಿಕಾಸ, ಗೇಸ್ ಟರ್ಬಾಯಿನ್, ರೈಲು, ಮೋಟರು, ಸೈಕಲು, ಹೊಲಿಗೆ ಯಂತ್ರ ಇವೆಲ್ಲವುಗಳ ಹೆಜ್ಜೆಹೆಜ್ಜೆಯ ಬೆಳವಣಿಗೆ ಬದಲಾವಣೆಗಳನ್ನು ಇಲ್ಲಿ ತೋರಿಸಿದ್ದಾರೆ. ಅಂತಹ ಮಾದರಿಗಳನ್ನು, ಪ್ರತ್ಯಕ್ಷ ಯಂತ್ರಗಳನ್ನು, ನಾವೇ ನಡೆಯಿಸಿ ನೋಡಬಲ್ಲಂಥ ಅನುಕೂಲತೆಯಿದೆ. ಇಂಗ್ಲೆಂಡಿನ ಯಂತ್ರ

ನಿರ್ಮಾಣಕಾರರು ತಾವು ನಿರ್ಮಿಸುವ ಯಂತ್ರಗಳ ಮಾದರಿಯನ್ನು ಈ ಸಂಸ್ಥೆಗೆ ಉಚಿತವಾಗಿ ಕೊಡುತ್ತಿದ್ದಾರೆ. ಮೋಟರ್ ಎಂಜಿನ್, ಗೇಸ್ ಎಂಜಿನ್ ಮೊದಲಾದವುಗಳ ಅತ್ಯಂತ ಆಧುನಿಕ ಮಾದರಿಗಳನ್ನು ಹೊರ ಮೈ ಸೀಳಿ ಒಳಗಿನ ರಚನೆ ಕಾಣಿಸುವಂತೆ ಇಲ್ಲಿ ಪ್ರದರ್ಶಿಸಿದ್ದಾರೆ.

ಬರಿಯ ಸ್ಕಾಕಲ್ ಯಾವೆಲ್ಲ ಆಕೃತಿಗಳ ಮೂಲಕ ಹಾದು ಇಂದಿನ ರಿಲೇ, ಬಿ. ಎಸ್. ಎ. ಮಾದರಿಗಳ ರೂಪಕ್ಕೆ ಬಂದಿದೆಯೆಂದು ತೋರಿಸಲು ಅಂದಿನಿಂದ ಇಂದಿನ ವರೆಗೆ ಆದ ಎಲ್ಲ ವಿಚಿತ್ರ ಮಾದರಿಗಳನ್ನೂ ಸಂಗ್ರಹಿಸಿದ್ದಾರೆ. ಸ್ಟೀವನ್ಸನನ ಮೂಲ ಉಗಿಯಂತ್ರವಿದೆ. ಅನಂತರದ ಬೆಳವಣಿಗೆ ತೋರಿಸುವುದಕ್ಕೆ ಯಥಾಗಾತ್ರದ ಎಂಜಿನುಗಳನ್ನು ಇರಿಸುವುದಕ್ಕೆ ಸ್ಥಳ ಸಾಲದೆಂದು, ಸಣ್ಣ ಪ್ರಮಾಣದಲ್ಲಿ ರಚಿಸಿದ ಮಾದರಿಗಳನ್ನಿಟ್ಟಿದ್ದಾರೆ. ಗುಂಡಿಯೊಂದನ್ನು ಒತ್ತಿದರೆ, ಅವುಗಳ ಚಲನೆಯು ಕಾಣುತ್ತದೆ. ಇದೇ ಬಗೆಯಲ್ಲಿ ಹಡಗಿನ ವಿಕಾಸ, ಉಗಿಹಡಗುಗಳ ಮಾದರಿ, ಯುದ್ಧ ನಾವೆಗಳು, ಟೊರ್ಪೆಡೊ ಮೊದಲಾದವುಗಳು ಕೆಲಸಮಾಡುವುವೂ, ಯುಕ್ತಪ್ರಮಾಣದವೂ ಇವೆ. ಇಷ್ಟೆಲ್ಲ ವಸ್ತುಗಳನ್ನು ಸಂಗ್ರಹಿಸಿಯೂ ಅವರಿಗೆ ತೃಪ್ತಿಯಿಲ್ಲ. ಬರಿಯ ಹಿರಿಯರಲ್ಲಿ ಜ್ಞಾನ ಬೆಳೆದರೆ ಸಾಲದು, ಕಿರಿಯರಲ್ಲಿಯೂ ಜ್ಞಾನ ಬೆಳೆಯುವುದು ಅವಶ್ಯ–ಎಂದು ಒಂದು ಅಂತಸ್ತನ್ನು ಎಳೆಯರಿಗಾಗಿಯೇ ಮೀಸಲಾಗಿರಿಸಿದ್ದಾರೆ. ಅಲ್ಲಿಗೆ ಶಾಲೆಯ ಮಕ್ಕಳು ಗುಂಪು ಗುಂಪಾಗಿ ಬರುತ್ತಿರುತ್ತಾರೆ. ಧ್ವನಿ ಹುಟ್ಟಿ ಹರಿಯುವುದು ಹೇಗೆ? ಧ್ವನಿ ವಿದ್ಯುತ್ತಾಗಿ ತಂತಿಯಲ್ಲಿ, ಟೆಲಿಫೋನಿನಲ್ಲಿ, ರೇಡಿಯೊದಲ್ಲಿ ಹೇಗೆ ಸಾಗುತ್ತದೆ--ಎಂಬ ಇತ್ತೀಚಿನ ವೈಜ್ಞಾನಿಕ ಸಂಶೋಧನೆಗಳನ್ನು ಸಹ ಚಿತ್ರಿಸುವ ಯಂತ್ರಸಲಕರಣೆಗಳನ್ನಿರಿಸಿದ್ದಾರೆ.

ಮಗುವೊಂದು ಒಂದು ಧ್ವನಿವರ್ಧಕದ ಮುಂದೆ ನಿಂತು ಮಾತನಾಡುತ್ತ ಗುಂಡಿಯೊಂದನ್ನು ಒತ್ತಿತೆಂದರೆ, ಎದುರೊಂದು ಗಾಜಿನಲ್ಲಿ ಧ್ವನಿ ಬೆಳಕಿನ ಅಲೆಯಾಗಿ, ಬಣ್ಣ ಬಣ್ಣವಾಗಿ ರೂಪುಗೊಂಡು ಚಲಿಸುವುದು ಕಾಣಿಸುತ್ತದೆ. ಸ್ವರದ ಏರಿಳಿತಗಳೆಲ್ಲ ಅಲೆ ಅಲೆಗಳಂತೆ ದೃಶ್ಯ ರೂಪ ತಾಳುತ್ತವೆ.

ವಿಜ್ಞಾನ ಪ್ರಸಾರಕ್ಕಾಗಿ ಇಷ್ಟು ಕೆಲಸ ಸಾಲದೆಂದು, ಈ ಮ್ಯೂಸಿಯಂಗಳಲ್ಲಿ ಆಗಾಗ ಪ್ರಸಿದ್ಧ ವಿಜ್ಞಾನಿಗಳಿಂದ ಸಾರ್ವಜನಿಕ ಉಪನ್ಯಾಸ ಏರ್ಪ

ಡಿಸುತ್ತಾರೆ; ಚಲಚ್ಚಿತ್ರಗಳನ್ನು ತೋರಿಸುತ್ತಾರೆ. ಜ್ಞಾನ ವಿಜ್ಞಾನಗಳು ಕಾಲೇಜಿನ ಹೊರಗೂ ದೊರೆಯುವಂತೆ ವಿವಿಧ ಪ್ರಯತ್ನಮಾಡುತ್ತಿದ್ದಾರೆ. ನಮ್ಮ ನಾಡಿನಲ್ಲೂ ಶಾಲಾ ಕಾಲೇಜುಗಳಿಗೆ ಬೇಕಷ್ಟು ಹಣ ಸುರಿದು ದಿವ್ಯ ಕಟ್ಟಡಗಳನ್ನೇನೋ ಒದಗಿಸುತ್ತೇವೆ-ಮುಂದೆ ಕಾಲಕ್ಕೆ ತಕ್ಕಂತೆ ಬೆಳೆಯುವ ಪುಸ್ತಕ ಸಂಗ್ರಹವಿಲ್ಲ; ಪ್ರಯೋಗ ಶಾಲೆಗಳಿಲ್ಲ; ಉತ್ತಮ ಪಂಡಿತರನ್ನು ತಂದು ವೈಜ್ಞಾನಿಕ ವಾತಾವರಣವನ್ನು ಬೆಳೆಯಿಸುವ ಪ್ರಯತ್ನವೂ ಕಾಣು ವುದಿಲ್ಲ. ನಮ್ಮ ಕಟ್ಟಡಗಳು ವಿದ್ಯೆಯ ಗೋರಿಗಳಂತೆ ಆಗಿರುತ್ತವೆ. ಇಲ್ಲಿನ ಜನಗಳ ದೃಷ್ಟಿ ಬೇರೆ.

ನಾನು ಇಂಗ್ಲೆಂಡಿನ ಹೆಸರಾದ ಆಕ್ಸ್‌ಫರ್ಡ ವಿದ್ಯಾಮಂದಿರಗಳನ್ನೂ, ಹೊಲೆಂಡಿನ ಲೀಡನ್ ವಿಶ್ವವಿದ್ಯಾಲಯವನ್ನೂ ನೋಡಿದಾಗ ಅವುಗಳ ತೀರ ಸಾಮಾನ್ಯ ಕಟ್ಟಡಗಳನ್ನು ಕಂಡು ವಿಸ್ಮಯಗೊಂಡೆ. ಆಕ್ಸ್‌ಫರ್ಡ್, ಲೀಡನ್ ವಿಶ್ವವಿದ್ಯಾಲಯಗಳು ಮೂರು ನಾಲ್ಕು ಶತಮಾನಕಾಲ ಬಾಳಿ ದುವು. ಅಲ್ಲಿನ ವೈಭವವು ತೋರಿಕೆಯ ಕಟ್ಟಡಗಳಲ್ಲಿ ಕಾಣದು. ಅವರ ಜ್ಞಾನಪ್ರಸಾರದ ಕೆಲಸದಲ್ಲೂ ಅಲ್ಲಿ ಉಪನ್ಯಾಸಕರಾಗಿರುವ ಪಂಡಿತರುಗಳ ಹಿರಿಮೆಯಲ್ಲೂ ನಾವು ಆ ವಿಶ್ವವಿದ್ಯಾಲಯಗಳ ಯೋಗ್ಯತೆಯನ್ನು ಅಳೆಯ ಬೇಕಾಗಿದೆ.

ವಸ್ತು ಸಂಗ್ರಹಾಲಯಗಳೆಂಬುವು ಕೇವಲ ಅಪೂರ್ವ ವಸ್ತುಗಳ ಸಂಗ್ರಹವಲ್ಲ. ಬರಿಯ ನಾವೀನ್ಯತೆಯನ್ನೂ ತೋರಿಸುವುದಕ್ಕಾಗಿ ಅವು ಇರುವುದಲ್ಲ. ಸಂತೆಯ ಜನಗಳ ಮುಂದೆ ಹುಲಿ, ಸಿಂಹಗಳನ್ನು ತೋರಿಸಿ ಬೆರಗು ಹುಟ್ಟಿಸುವ ಉದ್ದೇಶ ಅವುಗಳದ್ದಲ್ಲ. ಅವುಗಳ ಕೆಲಸ ಸಾರ್ವಜನಿ ಕರ ಜ್ಞಾನ ವಿಸ್ತರಣ. ಅವೂ ಪ್ರತ್ಯಕ್ಷ ಶಿಕ್ಷಣಾಲಯಗಳೇ. ವ್ಯಕ್ತಿ ತಾನಾಗಿ ಸಂಚಾರದಿಂದ, ಗ್ರಂಥದಿಂದ, ಸಂಶೋಧನೆಯಿಂದ ಕಂಡುಕೊಳ್ಳಲಾರದ ವಸ್ತು ವಿಶೇಷಗಳನ್ನು, ರಾಷ್ಟ್ರವು ಅವನಿಗಾಗಿ ಈ ಮ್ಯೂಸಿಯಮ್‌ಗಳಲ್ಲಿ ನೋಡಲು ಒದಗಿಸಿಕೊಡುತ್ತವೆ. ಅವನ್ನು ನಡೆಯಿಸುವ ಕೆಲಸ, ಬೆಳೆಯಿ ಸುವ ಕೆಲಸ ಸುಲಭವಲ್ಲ. ಒಂದೊಂದು ವಿಷಯಕ್ಕೆ ಸಂಬಂಧಿಸಿದಂತೆ ವೈಜ್ಞಾನಿಕರನ್ನು, ಸಂಶೋಧಕರನ್ನು ಈ ಸಂಸ್ಥೆಗಳು ಸಂಗ್ರಹಕ್ಕಾಗಿ ಕಳು ಹಿಸಿಕೊಡಬೇಕು. ಸಂಗ್ರಹಮಾಡಿ ತಂದುದನ್ನು ವಿಚಕ್ಷಣರಿಂದ ಪರಿಶೀಲಿಸಿ ವರ್ಗೀಕರಿಸಬೇಕು. ಹಿಂದಿನ ಸಂಶೋಧನೆಗೂ ಈಗಿನ ಅನುಭವಕ್ಕೂ

ಹೊಂದಿಕೆ ಕಂಡು ಹಿಡಿಯಬೇಕು. ಪ್ರಾಣಿ ಮೊದಲಾದುವುಗಳನ್ನು ಸಂಗ್ರ ಹಿಸುವಾಗ ಅವುಗಳ ಆವರಣದ ಕಲ್ಪನೆ ನಮಗಾಗುವಂತೆ ಸಂಗ್ರಹಿಸಬೇಕು, ತಂದು ಸ್ಥಾಪಿಸಬೇಕು. ಪಾಶ್ಚಾತ್ಯರು ಈ ವಿಚಾರದಲ್ಲಿ ತುಂಬ ಮುಂದು ವರಿದಿದ್ದಾರೆ. ಪ್ರಕೃತಿ ಶಾಸ್ತ್ರಕ್ಕೆ ಸಂಬಂಧಿಸಿದ ಒಂದು ದೊಡ್ಡ ಮ್ಯೂಸಿ ಯಮ್ ಅಮೇರಿಕದಲ್ಲಿದೆ. ನಾನು ಕಂಡವುಗಳಲ್ಲಿ ಸ್ಟೋಕ್‌ಹೋಮ್ ನಗರದಲ್ಲಿರುವ ಪ್ರಕೃತಿ ಶಾಸ್ತ್ರದ ಸಂಗ್ರಹಾಲಯವೂ ಹಿರಿದಾದುದು. ಬಹು ಸ್ವಲ್ಪ ಕಾಲಕ್ಕೆ ಪರದೇಶಗಳಿಗೆ ಹೋಗುವ ಮನುಷ್ಯ, ಒಂದೊಂದು ದೇಶ ದಲ್ಲಿ ಸುಲಭದಲ್ಲಿ ಕಂಡು, ತಿಳಿದು ಸಂತೋಷಿಸಬಹುದಾದ ಸಂಸ್ಥೆಗಳೆಂ ದರೆ, ಈ ತೆರನ ಸಂಗ್ರಹಾಲಯಗಳು.

ಭಾರತದಿಂದ ಇಂಗ್ಲೆಂಡಿಗೆ ಹೋಗುವ ಜನರಲ್ಲಿ ಎಷ್ಟು ಮಂದಿ ನೆಚ್ಯು ರಲ್ ಹಿಸ್ಟರಿ ಮ್ಯೂಸಿಯಂ, ಸಾಯನ್ಸ್ ಮ್ಯೂಸಿಯಮಿನಂತಹ ಸಂಸ್ಥೆ ಗಳಿಗೆ ಹೋಗುತ್ತಾರೋ ಇಲ್ಲವೋ ನಾನರಿಯೆ. ಆದರೆ ಮೆಡಾಮ್ ಟುಸಾ ಡಳ ಮೇಣದ ಗೊಂಬೆಗಳ ಮ್ಯೂಸಿಯಮಿಗಂತು ಹೋಗಿಯೇ ಹೋಗು ತ್ತಾರೆ. ಅದೊಂದು ವೈಜ್ಞಾನಿಕ ಸ್ಥಳ ಇಲ್ಲವೆ ಕಲಾಪೂರ್ಣ ಸ್ಥಳವೆಂದು ನನಗನಿಸಲಿಲ್ಲ. ಅದರದೇ ಆದ ಕೀರ್ತಿಯೊಂದು ಅದಕ್ಕುಂಟು. ಈ ಸಂಸ್ಥೆ ಯ ಸ್ಥಾಪಕಳು ಮೆಡಾಮ್ ಟುಸಾಡ್ ಎಂಬವಳು. ಅವಳ ಸಂತತಿಯ ವರು ಅದನ್ನೀಗ ನಡೆಸಿಕೊಂಡು ಬಂದಿದ್ದಾರೆ. ಆಕೆ ಒಬ್ಬ ಫ್ರೆಂಚ್ ಮಹಿಳೆ; ಒಂದೆರಡು ಶತಮಾನಗಳ ಹಿಂದಿನವಳು. ತನ್ನ ಕಾಲದ ಪ್ರಸಿದ್ಧ ಪುರುಷರ ಮೇಣದ ಗೊಂಬೆಗಳನ್ನು ಮಾಡಿ ಪ್ರದರ್ಶನಕ್ಕಿರಿಸ ತೊಡಗಿದಳು. ಆ ಪರಂಪರೆಯ ಬೆಡಗು ಇಂದಿನ ಟುಸಾಡ್ ಸಂಗ್ರಹಾಲಯದ ವಿಶೇಷ ರೂಪ ತಾಳಿದೆ. ಇದು ಕುತೂಹಲಕಾರಿಯಾದ ಒಂದು ಸಂಗ್ರಹವೇನೋ ನಿಜ. ಇದಿರಿರುವ ಭವನ ಮೂರಂತಸ್ತಿನ ದೊಡ್ಡ ಮನೆ. ಮೇಲಿನ ಎರಡು ಅಂತ ಸ್ತುಗಳಲ್ಲೂ ಕೆಳಗಿನ ನೆಲಮಾಳಿಗೆಯಲ್ಲೂ ವಿಶೇಷ ಪ್ರತಿಮೆಗಳ ಸಂಗ್ರಹ ವಿದೆ. ಫ್ರಾನ್ಸ್, ಇಂಗ್ಲೆಂಡುಗಳ ರಾಜಮನೆತನದ ಸಂತಾನವೆಲ್ಲ ಪ್ರತಿಮೆ ಗಳ ರೂಪದಲ್ಲಿ ಇಲ್ಲಿ ಕಾಣುತ್ತದೆ. ಮೇರಿ ಎಂಟೋನಿಯನೆಟ್, ಹದಿನಾಲ್ಕ ನೆಯ ಲೂಯಿ, ನೆಪೋಲಿಯನ್ ಮೊದಲಾದವರು, ಬ್ರಿಟಿಷ್ ರಾಜ ಪರಂಪ ರೆಯ ಜಾರ್ಜರು, ಎಡ್ವರ್ಡರು, ಎಲಿಜಬೆತ್ ಮೊದಲಾದವರು ಇಲ್ಲಿ ಸಜೀವ ರೆಂಬಷ್ಟು ಚೆನ್ನಾಗಿ ನಿಂತಿದ್ದಾರೆ. ಇನ್ನೊಂದೆಡೆ ಬ್ರಿಟಿಷ್ ಪಾರ್ಲಿಮೆಂಟ್

ಪ್ರಮುಖರಾದ ಗ್ಲಾಡ್‌ಸ್ಟನ್, ಡಿಸ್ರೇಲಿ, ಕ್ರಾಮ್‌ವೆಲ್, ಲಾಯಡ್ ಜಾರ್ಜ್ ಮೊದಲಾದ ಮಹಾನುಭಾವರುಗಳ ಪ್ರತಿಮೆಗಳಿವೆ. ಈ ಪರಂಪರೆ ಇವತ್ತಿನ ಬ್ರಿಟಿಷ್ ಕೆಬಿನೆಟ್ಟಿನ ಸದಸ್ಯರ ತನಕವೂ ವ್ಯಾಪಿಸಿದೆ – ಅಂದರೆ ಈಡನ್, ಮಾರಿಸನ್, ಎಟ್ಲಿ, ಚರ್ಚಿಲ್ ಮೊದಲಾದವರ ಗೊಂಬೆಗಳೂ ಇಲ್ಲಿವೆ.

ಹೀಗೆ ಪ್ರಸಿದ್ಧ ಪುರುಷರನ್ನು ಚಿತ್ರಿಸಿದಂತೆ ಪ್ರಸಿದ್ಧ ಘಟನೆಗಳನ್ನೂ ವ್ಯಕ್ತಿಜೀವನದ ಕ್ಷಣಗಳನ್ನೂ ತದ್ವತ್ತಾಗಿ ಚಿತ್ರಿಸಿದ್ದಾರೆ. ಅಂತಹುಗಳಲ್ಲಿ ನೆಪೋಲಿಯನನ ಕೊನೆಗಾಲವೊಂದು. ಕಳೆದ ಎರಡು ಮಹಾಯುದ್ಧಗಳ ಪ್ರಮುಖ ಸೇನಾನಿಗಳೂ ರಾಜ ತಂತ್ರಜ್ಞರೂ ಚಿತ್ರಿತರಾಗಿದ್ದಾರೆ. ಯುನೈಟೆಡ್ ಸ್ಟೇಟ್ಸಿನ ಅಧ್ಯಕ್ಷರುಗಳಿದ್ದಾರೆ-ಲಿಂಕನ್, ವಿಲ್ಸನ್, ರೂಸ್‌ವೆಲ್ಟ್, ಟ್ರೂಮನರ ತನಕ ಇದ್ದಾರೆ. ಈ ಬಗೆಯಿಂದ ಪೌರ್ವಾತ್ಯದೇಶಗಳ ವ್ಯಕ್ತಿಗಳಲ್ಲಿ ಚಿತ್ರಿತರಾದವರೆಂದರೆ ಕೆಲವು ಜನ ಮಾತ್ರ–ಹೈಲಿ ಸಿಲಾಸಿ, ಗಾಂಧಿ, ಜಿನ್ನಾ, ನೆಹರು, ಚಾಂಗ್ ಕಿ ಶೇಕ್, ಸೇನಾನಾಯಕೆ–ಇವರುಗಳು. ನಮ್ಮ ದೇಶದ ನೆಹರು ಗಾಂಧೀಜಿಯವರ ಗೊಂಬೆಗಳು ಮಾತ್ರ, ಅವರನ್ನು ಕಂಡ ವ್ಯಕ್ತಿಗೆ ಸಮಾಧಾನಕೊಡಲಾರದಂತಹ ಪ್ರತಿಬಿಂಬಗಳೆನಿಸುತ್ತವೆ.

ಈ ಸಂಗ್ರಹ ಚರಿತ್ರೆಯನ್ನುಳಿದು ಇತರ ಕ್ಷೇತ್ರಗಳನ್ನೂ ಚಿತ್ರಿಸಿದೆ. ಪ್ರಪಂಚದ ಪ್ರಸಿದ್ಧ ಕ್ರಿಕೆಟ್ ಆಟಗಾರರಿದ್ದಾರೆ. ಶೇಕ್ಸ್‌ಪಿಯರ್, ಶೆಲ್ಲಿಯಂತಹ ಸಾಹಿತಿಗಳ ಮೂರ್ತಿಗಳಿವೆ. ಎಷ್ಟೋ ವಿಗ್ರಹಗಳು ತದ್ವತ್ ರೂಪಸಾಮ್ಯವುಳ್ಳವು. ಪ್ರಾಯಶಃ ಇದಕ್ಕೆ ಬಳಸುವ ಮೇಣ ಬಿಳಿ ತೊಗಲನ್ನು ಚಿತ್ರಿಸುವಷ್ಟು ಚೆನ್ನಾಗಿ ಪೌರ್ವಾತ್ಯರ ಬಣ್ಣಕ್ಕೆ ಒಪ್ಪದೋ ಏನೋ!

ತೀರ ಕೆಳಗಿನ ನೆಲಮಾಳಿಗೆಗೆ, ಚೆಂಬರ್ ಆಫ್ ಹೊರರ್ಸ್ ಎಂದು ನಾಮಕರಣ ಮಾಡಿದ್ದಾರೆ. ಅಲ್ಲಿರುವುವು – ಅನಾದಿಕಾಲದ ಮಾನವನ ಹಿಂಸಾ ವಿಧಾನಗಳು. ಹಿಂದಿನ ಯುಗದವರು ಒಬ್ಬ ಅಪರಾಧಿಯನ್ನು, ಕೊಲೆಗಡುಕನನ್ನು, ಸೆರೆಯಾಳನ್ನು ಎಂತಹ ಕ್ರೂರ ವಿಧಾನಗಳಿಂದ ಕೊಲ್ಲುತ್ತಿದ್ದರೆಂದು ಚಿತ್ರಿಸಿದ್ದಾರೆ. ಇವುಗಳೆಲ್ಲ ಮನುಷ್ಯ ಪ್ರಮಾಣದ ಆಕೃತಿಗಳಲ್ಲ; ಚಿಕ್ಕ ಮಾದರಿಗಳಲ್ಲಿವೆ. ಆದುದರಿಂದ ಮನಸ್ಸಿನಲ್ಲಿ ಅಷ್ಟು ಭಯ ಹುಟ್ಟಿಸದೆಂದೇ ನನಗನಿಸುತ್ತದೆ. ಈ ಮಂದಿರದ ಒಂದು ಭಾಗದಲ್ಲಿ ಬ್ರಿಟನಿನ ಹೆಸರಾದ ಕೊಲೆಗಡುಕರ ಗೊಂಬೆಗಳಿವೆ. ಅವರ ಸಾಲಿನಲ್ಲೇ ಹಿಟ್ಲರ್,

ಮುಸೋಲಿನಿ, ಗಾಬೆಲ್ಸ್, ಗೋರಿಂಗರ ಪ್ರತಿಮೆಗಳಿರಿಸಿದ್ದನ್ನು ಕಂಡರೆ ನನಗೆ ತುಸು ಆಶ್ಚರ್ಯವಾಯಿತು. ಸಂಸ್ಕೃತವಾದೊಂದು ದೇಶ, ಯುದ್ಧ ಕಾಲದ ವೈರಿಗಳನ್ನು ಆಗ ಹೇಗೇ ಕಂಡಿರಲಿ, ಶಾಂತಿಗಾಲದಲ್ಲಿ ಚಿತ್ರಿಸ ಬಹುದಾದ ಬಗೆ ಇದಲ್ಲ–ಎಂದು ನನಗನಿಸಿತು. ಜರ್ಮನಿಯು ಸೋಲುವ ಬದಲು ಗೆದ್ದಿತೆನ್ನುವ. ಆಗ ಹಿಟ್ಲರನ ಸ್ಥಾನದಲ್ಲಿ ಚರ್ಚಿಲನ ಗೊಂಬೆಯ ನ್ನಿಡುವುದಕ್ಕೆ ನಮ್ಮ ಸಭ್ಯತೆ ಒಪ್ಪೀತೇ?

ಈ ಮ್ಯೂಸಿಯಮಿನ ಮೊದಲನೆಯ ಅಂತಸ್ತು, ವಿವಿಧ ವಿನೋದ ಗಳಿಗೂ ಒಂದು ಬಗೆಯ ಜೂಜಿಗೂ ಮೀಸಲಾದ ಮನೆ. ಅಲ್ಲಿ ಅನೇಕ ಸ್ವಯಂ ಚಾಲಕ ಯಂತ್ರಗಳನ್ನಿಟ್ಟಿದ್ದಾರೆ. ಒಂದೋ ಎರಡೊ ಪೆನ್ನಿಗಳನ್ನು ಅವುಗಳಲ್ಲಿ ಹಾಕಿದರೆ ಒಂದೊಂದು ಬಗೆಯ ಫಲಪ್ರಾಪ್ತಿ. ಒಂದು ನಮ್ಮ ತೂಕ ಹೇಳುತ್ತದೆ. ಮತ್ತೊಂದು ಭವಿಷ್ಯ ಹೇಳುತ್ತದೆ. ಮೂರನೆಯದು ಚಿಕ್ಕ ಗೊಂಬೆಗಳ ಚಂಡಾಟ ತೋರಿಸುತ್ತದೆ. ನಾಲ್ಕನೆಯದು ಅದೃಷ್ಟಶಾಲಿ ಯಾದವನಿಗೆ ಸಿಗರೇಟನ್ನೋ ಇನ್ನೇನನ್ನೋ ತಂದು ಕೊಡುತ್ತದೆ. ನಮಗೆ ವಿರಾಮವಿದ್ದರೆ, ಉತ್ಸಾಹವಿದ್ದರೆ ಇಂತಹ ಇಪ್ಪತ್ತು ಮೂವತ್ತು ವಿನೋದ ಗಳಿವೆ. ಅವಕ್ಕೆಲ್ಲ ಬೇರೆಯೇ ತೆರಿಗೆ ಕೊಟ್ಟು ನೋಡಿದರಾಯಿತು.

ನಾನು ಲಂಡನ್ ಸಂದರ್ಶಿಸಿದ ವೇಳೆಯಲ್ಲಿ ಇತರ ಅನೇಕ ಪ್ರದರ್ಶನ ಗಳಿದ್ದುವು. ಅಂತಹುಗಳಲ್ಲಿ ಇಂಡೋನೇಸ್ಯ ಸರಕಾರ ಏರ್ಪಡಿಸಿದ ವಸ್ತು ಪ್ರದರ್ಶನವೊಂದು. ಆರ್ಮಿ ಎಂಡ್ ನೇವಿ ಸ್ಟೋರ್ಸ್ಸಿನ ಒಂದು ಮಹಡಿಯಲ್ಲಿ ಅದು ನಡೆದಿತ್ತು. ನಾನು ಇಂಡೋನೇಸ್ಯದ ಮೇಲಿನ ಅಭಿಮಾನದಿಂದ ಕುತೂ ಹಲಗೊಂಡು ಹೋಗಿದ್ದೆ. ಪ್ರದರ್ಶನದ ಒಂದು ಭಾಗದಲ್ಲಿ ಆಧುನಿಕ ಚಿತ್ರ ಕಾರರ ಚಿತ್ರಗಳಿದ್ದುವು. ಈ ಸಂಗ್ರಹ ಬಡಕಲಾಗಿತ್ತು; ಪ್ರದರ್ಶಿಸಿದ ರೀತಿ ನಿರಾಕರ್ಷಕವಾಗಿತ್ತು. ನಮ್ಮ ದೇಶಿಯರನೇಕರಂತೆ ಅಲ್ಲಿನ ಕಲಾವಿದರಿಗೂ ಪಾಶ್ಚಾತ್ಯ ಚಿತ್ರ ಶೈಲಿಯ ಹುಚ್ಚಿದ್ದಂತೆ ಕಾಣುತ್ತದೆ. ಚಿತ್ರಕಾರ ಏನೂ, ಹೇಗೂ ಬರೆಯ ಬಹುದಾದಂಥ ಸ್ವತಂತ್ರ ಎಂದು ಅವರು ಸಾರುವಂತಿತ್ತು. ಅವನ ಸ್ವಾತಂತ್ರ್ಯವನ್ನು ಅಲ್ಲಗಳೆಯುವವರಿಲ್ಲ. ಆದರೆ ಹೊಸ ಶೈಲಿಯಿಂದವೇ ಕಲೆಯಾಗಲಾರದು. ಪರದೇಶೀಯರ ಅನುಕರಣೆಯಿಂದ ಮಾತ್ರ ಕಲೆ ಬೆಳೆ ಯಲಾರದು. ಒಂದೊಂದು ದೇಶಕ್ಕೆ ಒಂದೊಂದು ಪರಂಪರೆಯಿದೆ. ಅದನ್ನು ಕಲಿಮುಕೊಂಡವ, ತನ್ನದೇ ಆದ ಪರಂಪರೆಯನ್ನು ಸ್ಥಾಪಿಸಬಹುದು. ಆದರೆ

ಅನ್ಯರ ಪರಂಪರೆಯನ್ನು ಬಳಸಿ ಯಶಸ್ವಿಯಾಗುವುದು ಕಷ್ಟ. ಅನುಕರಣೆ ಯೆಂಬುದು ತೀರ ದುರ್ಬಲ ದಾರಿ. ಹೊರಗಿನ ಶೈಲಿಯನ್ನು ತಂದುದರಿಂದ ನಾವು ಹೊಸಬರಾಗಲಾರೆವು. ನಮ್ಮ ದೃಷ್ಟಿ, ಹಂಬಲ, ಚಿತ್ರಿಸುವ ವಿಷಯ, ವಸ್ತು ನಮ್ಮದಾಗಿರಬೇಕು, ನವೀನವಾಗಿರಬೇಕು. ನಮ್ಮದೇ ಆದ ಆವ ರಣದಲ್ಲಿ ಹುಟ್ಟಿ ಬೆಳೆದಂತೆ ಕಾಣಿಸಬೇಕು. ಈ ದೃಷ್ಟಿಗಳಿಂದ ನಾನು ಕಂಡ ಇಂಡೋನೇಸ್ಯದ ಈ ಚಿತ್ರ ಪ್ರದರ್ಶನ ತುಂಬ ಬಡವಾಗಿ ಕಾಣಿಸಿತು.

ಈ ಪ್ರದರ್ಶನದ ಇನ್ನೊಂದು ಭಾಗದಲ್ಲಿ ಜಾವಾ ದೇಶದ ಪ್ರಸಿದ್ಧ ವಾದ ಬತಿಕ್ ಕೆಲಸ, ಜರತಾರಿ ಕೆಲಸ, ಕೆತ್ತನೆ ಮೊದಲಾದ ಕುಶಲವೃತ್ತಿ ಗಳಿಗೆ ಸಂಬಂಧಿಸಿದುವಿದ್ದುವು. ಆ ಭಾಗ ಅಷ್ಟೊಂದು ಪುಷ್ಟವಾಗಿಲ್ಲವಾಗಿ ದ್ದರೂ ಮಾದರಿಗಳೇನೋ ಚೆನ್ನಾಗಿದ್ದುವು. ಮತ್ತೊಂದು ಕೊಟಡಿಯಲ್ಲಿ ಆ ದೇಶದ ಸಿದ್ಧ, ಅಸಿದ್ಧ ಪದಾರ್ಥಗಳ ಚಿತ್ರಣವಿತ್ತು. ಟಿಪಿಯೋಕಾ,ಅಕ್ಕಿ, ಬಿದಿರು ಮೊದಲಾದ ವ್ಯಾಪಾರಿ ವ್ಯವಸಾಯಗಳ ಪ್ರದರ್ಶನವಿತ್ತು. ನಾನು ಅನಂತರ ಲೀಡನ್, ಎಮ್‌ಸ್ಟರ್‌ಡೆಮ್ ನಗರಗಳಲ್ಲಿ ಕಂಡಂಥ ಇಂಡೋ ನೇಸ್ಯದ ಬಹು ಸೊಗಸಾದ ಕಲಾಸಂಪತ್ತುಗಳ ಪ್ರದರ್ಶನದ ಮುಂದೆ ಈ ಪ್ರದರ್ಶನ ಮಕ್ಕಳಾಟವೆನಿಸಿತು. ಇದನ್ನು ಏರ್ಪಡಿಸಿದವರು ಇಂಡೋ ನೇಸ್ಯದ ರಾಯಭಾರಿ ಕಚೇರಿಯವರು. ಇಂಗ್ಲೆಂಡಿನಂತಹ ಒಂದು ಕಲಾ, ವ್ಯವಹಾರ,ವ್ಯಾಪಾರ ಕ್ಷೇತ್ರದಲ್ಲಿ ಪೌರ್ವಾತ್ಯರಾದ ನಾವು ಒಂದು ಪ್ರದರ್ಶನ ನಡೆಸುವುದಾದರೆ, ಇಂತಹ ಅರ್ಥಮರ್ಥ ಪ್ರದರ್ಶನಗಳಿಂದ ಪ್ರಯೋಜನ ವಿಲ್ಲ. ನಮ್ಮ ಅತ್ಯುತ್ತಮ ವಸ್ತುಗಳನ್ನು ನಾವು ಸಂಗ್ರಹಿಸಿ ತೋರಿಸಬೇಕು. ಅಲ್ಲಿನ ಜನರು ಪೌರ್ವಾತ್ಯ ದೇಶಗಳನ್ನು ಕಾಣದ, ತಿಳಿಯದ ಕುರುಡರಲ್ಲ. ನಮಗಿಂತ ಹೆಚ್ಚಿನ ಪಾಂಡಿತ್ಯ ಪಡೆದವರು ಆ ದೇಶದಲ್ಲಿದ್ದಾರೆ. ಹೀಗಾ ಗಲು ಮುಖ್ಯ ಕಾರಣವೆಂದರೆ--ನಮ್ಮ ಪೌರ್ವಾತ್ಯ ರಾಯಭಾರಿಗಳು ತಕ್ಕ ತಜ್ಞರನ್ನು ಬಳಸಿಕೊಳ್ಳದೆ, ನಂಟರಿಷ್ಟರುಗಳಿಗೆ ಕೆಲಸ ಒದಗಿಸುವ ಸಂಸ್ಥೆ ಗಳಾಗಿ ಉಳಿದಂತಿರುವುದು. ಇಂಡೋನೇಸ್ಯದ ಈ ಪ್ರದರ್ಶನ ಪೌರ್ವಾತ್ಯ ಜನಗಳ ಅಯೋಗ್ಯತೆಯನ್ನಷ್ಟೇ ಸಾರುವಂತಿತ್ತು.

ನಾನು ಲಂಡನಿನಲ್ಲಿ ಇನ್ನೇನನ್ನು ಕಾಣಲಿ-ಎಂದು ಯೋಚಿಸಬೇಕಾ ಗಿರಲಿಲ್ಲ. ಲಂಡನ್ ನಗರದ ಕೈಪಿಡಿ ನನ್ನಲ್ಲಿತ್ತು. ಅದರಲ್ಲಿ ನಮೂದಿಸಿದ ಯಾವುದನ್ನು ಆರಿಸಿ ನೋಡಲಿ, ಎಲ್ಲಿಗೆ ಹೋಗಲಿ, ಯಾವ ದಿನ-ಎಂದು

ಅಳೆದು ವಿತರಣೆಯಿಂದ ನೋಡುವುದೇ ನನಗೆ ದೊಡ್ಡ ಕೆಲಸವಾಗಿತ್ತು.

ಸತ್ತ ಮೃಗಗಳ ಪ್ರದರ್ಶನಾಲಯಗಳನ್ನು ಕಂಡ ನಾನು, ಬದುಕಿದ ಮೃಗಗಳನ್ನು ಕಾಣದೆ ಉಳಿದೇನೆ? ಅದರಲ್ಲೂ ಬಾಲ ಪ್ರಪಂಚ ಬರೆಯುವ ಕಾಲದಲ್ಲೇ ಲಂಡನ್, ನ್ಯೂಯಾರ್ಕ್ ಮೊದಲಾದ 'ಜೂ'ಗಳಿಂದ ಅನೇಕ ಪ್ರಾಣಿಗಳ ಚಿತ್ರ ತರಿಸಿಕೊಂಡಿದ್ದೆ. ಹೀಗಾಗಿ ಅವುಗಳನ್ನು ನೋಡದಿರುವಂತಿಲ್ಲ. ಲಂಡನ್ನಲ್ಲೇ ಎರಡೆರಡು ಮೃಗಾಲಯಗಳಿವೆ. ಸ್ಥಳೀಯ ಜೂ ಆಲೋಜಿಕಲ್ ಉದ್ಯಾನವೊಂದು. ತುಸು ದೂರದ ವಿಪ್ಸಿನೇಡ್ ಇನ್ನೊಂದು. ವಿರಾಮ ಸಾಲದಿದ್ದುದರಿಂದ ನಗರದೊಳಗಿನ ಉದ್ಯಾನವನ್ನು ನೋಡುವುದಕ್ಕೆ ಹೋಗಿದ್ದೆ. ನಾನು ಆರಿಸಿದ ದಿನವೇನೋ ಚೆನ್ನಾಗಿರಲಿಲ್ಲ. ಅದು ಆದಿತ್ಯವಾರ. ಲಂಡನಿನ ನಾಗರಿಕರು ವಿಹಾರ, ವಿಶ್ರಾಂತಿಗಳ ಒಂದು ತಾವನ್ನೂ ಬಿಟ್ಟಿರದ ದಿನ. ಮೃಗಾಲಯದ ಪ್ರವೇಶಕ್ಕಾಗಿಯೇ ಒಂದು ತಾಸಿನಷ್ಟು ಕಾಲ--ಕ್ಯೂ ನಿಂತಿರಬೇಕಾಗಿತ್ತು. ಒಳಹೊಗ್ಗುವ ಮೊದಲೇ ಕಾಲು ದಣಿದುಹೋಗಿತ್ತು. ಆದರೆ ಆ ಆಲಯವನ್ನು ಸೇರುವ ಮೊದಲು ಅದರ ಹೊರಗಣ ವಿಶಾಲ ಉದ್ಯಾನದಲ್ಲಿ ಆನಂದಿಸುವುದಕ್ಕೆ ಎಡೆಯಿದೆ.

ಈ ಮೃಗಾಲಯ ಬಹು ದೊಡ್ಡದು; ವಿಪ್ಸಿನೇಡಿನಂತೆ ವಿಶಾಲವಾಗಿರಲಿಲ್ಲ; ನೈಸರ್ಗಿಕ ಆವರಣ ಉಳ್ಳದಾಗಿರಲಿಲ್ಲ. ಅಲ್ಲಿನ ಪ್ರಾಣಿಯೊಂದೊಂದನ್ನೂ ನಾನು ಬಣ್ಣಿಸುವ ಕಾರಣವಿಲ್ಲ—ಉಳಿದಲ್ಲಿ ಕಾಣದ ವಿಷಯಗಳನ್ನಷ್ಟೇ ಹೇಳುತ್ತೇನೆ.

ಇಲ್ಲಿನ ಬೇಟೆಗಾರ ಪಕ್ಷಿಗಳ ಸಂಗ್ರಹವು ಬಹು ದೊಡ್ಡದಾಗಿದೆ. ಇಪ್ಪತ್ತಕ್ಕೆ ಮೇಲ್ಪಟ್ಟ ವಿವಿಧ ಜಾತಿಯ ಗೂಬೆಗಳೇ ಇವೆ. ಅಷ್ಟೇ ಹೆಚ್ಚಿನ ವೈವಿಧ್ಯ ಹದ್ದು, ಗಿಡುಗ ಮೊದಲಾದುವುಗಳ ಸಂಗ್ರಹದಲ್ಲಿದೆ.

ನಮ್ಮ ಭಾರತೀಯ ಮೃಗಾಲಯಗಳಲ್ಲಿ ಕಂಡಿರದ ಒಂದು ಸಂಗ್ರಹ —ಪೆಂಗ್ವಿನ್ ಪಕ್ಷಿಗಳದು. ಇಲ್ಲಿನ ಪೆಂಗ್ವಿನ್ ಕೆರೆಯಲ್ಲಿ ಹತ್ತೆಂಟು ಅರಸು ಪೆಂಗ್ವಿನ್‌ಗಳಿದ್ದುವು. ದಕ್ಷಿಣ ಧ್ರುವವಲಯದ ಈ ಪಕ್ಷಿಗಳ ಠೀವಿಯೋ ಠೀವಿ! ಸರ್ಕಸಿನ ರಿಂಗ್ ಮಾಸ್ಟರುಗಳಂತೆ ಬಿಳಿಯಂಗಿ, ಕರಿಕೋಟುಗಳನ್ನು ಧರಿಸಿದಂತಿರುವ ಅವುಗಳ ನಡೆಗೆ ಒಂದು ಬಗೆಯ ವಿಚಿತ್ರ ಗಾಂಭೀರ್ಯವಿದೆ. ಇಲ್ಲಿನ ಇನ್ನೊಂದು ವಿಶೇಷ ಮೃಗವೆಂದರೆ ಹಿಮಾಲಯದ—ಪಾಂಡ. ಪಾಂಡ ಕೆಂಚುಗೂದಲಿನ, ಮರವನ್ನೇರುವ ಒಂದು ಜಾತಿಯ ಕರಡಿ.

ನಮ್ಮ ದೇಶದಲ್ಲಿ ನಾನಂಥ ಪ್ರಾಣಿಯನ್ನು ಕಂಡಿರಲಿಲ್ಲ.

ಇಲ್ಲಿನ ಮುಖ್ಯ ವಿಶೇಷ—ಉರಗದ ಮನೆ. ಈ ಮನೆಯಲ್ಲಿ ನಾನಾ ಬಗೆಯ ಗೌಳಿ, ಓತಿ, ಉಡ, ಹಾವು ಮೊದಲಾದವನ್ನು ಕಲೆಯ ಹಾಕಿದ್ದಾರೆ. ಒಂದೊಂದಕ್ಕೂ ಒಂದೊಂದು ಗಾಜಿನ ಕೊಟಡಿಯಿದೆ. ಅವಕ್ಕೆ ಹಿತವಾದ ಹವೆಯನ್ನು ಒದಗಿಸುವ ಏರ್ಪಾಡಿದೆ; ಹಿನ್ನೆಲೆ ಚಿಕ್ಕದಾದರೂ ಅವುಗಳ ನೈಸರ್ಗಿಕ ಆವರಣಗಳಾದ ಕಲ್ಲು, ಮಣ್ಣು, ಮರಗಿಡಗಳನ್ನು ನಟ್ಟು ನಿಜತೆ ಕಲ್ಪಿಸಿದ್ದಾರೆ. ಇಲ್ಲಿ ದಕ್ಷಿಣ ಅಮೇರಿಕದ ಇಗುವಾನ್, ಮಾನಿಟರ್‌ಗಳನ್ನು ನೋಡಿದೆ; ಮೊಸಳೆಯ ಪ್ರಭೇದವಾದ ಎಲಿಗೇಟರ್ ನೋಡಿದೆ. ಬ್ರಿಟಿಷ್ ಹಾವುಗಳನ್ನು ಹೊರಗೊಂದು ಕೃತಕ ದ್ವೀಪದಲ್ಲಿ ಪ್ರದರ್ಶಿಸಿದ್ದರಾದರೂ ಈ ಗಾಜಿನ ಮನೆಯೊಳಕ್ಕೆ ಅನೇಕ ಅನ್ಯ ದೇಶೀಯ ಹಾವುಗಳ ಸಂಗ್ರಹವಿದೆ. ವೈಪರ್, ರಸೆಲ್ಸ್ ವೈಪರ್ (ಕನ್ನಡಿ ಹಾವು) ರೆಟಲ್ ಸ್ನೇಕ್, ಕ್ರೈಟ್ (ಕಡಂಬಳ) ನಮ್ಮ ದೇಶದ ಸರ್ಪ, ಕಾಳಿಂಗ, ಗಳಿವೆ. ಆಫ್ರಿಕದ ಇನ್ನೂ ಕ್ರೂರವಾದ ಸರ್ಪವೂ, ಕಪ್ಪು ಮಾಂಬ,ಹಸುರು ಮಾಂಬ ಮೊದಲಾದ ವಿಷದ ಹಾವುಗಳೂ ಇದ್ದಾವೆ. ಹಿರಿಯ ಹಾವುಗಳಲ್ಲಿ ಭಾರತ, ಮಲಯಗಳ ಹೆಬ್ಬಾವುಗಳಿವೆ. ಆನೆಕೊಂಡ ಕಂಡೆನೋ ಇಲ್ಲವೋ ನೆನಪಾಗದು. ನಮ್ಮ ನಾಡಿನಲ್ಲಿ ಚೆನ್ನಾದ ಉರಗದ ಮನೆಯಿರುವುದು ಕಲ್ಕತ್ತೆಯೊಂದರಲ್ಲಿ. ನಾನು 1933ರಲ್ಲಿ ಅದನ್ನು ಕಂಡಾಗ ಅಲ್ಲಿದ್ದ ಸಂಗ್ರಹ 1950ರಲ್ಲಿ ಕಾಣಿಸಲಿಲ್ಲ. ಎಷ್ಟೊಂದು ಅಂತರ! ಇದ್ದ ಹಾವುಗಳು ಸತ್ತರೆ, ಪ್ರಾಣಿಗಳು ಸತ್ತರೆ ಅವನ್ನು ತಿರುಗಿ ಶೇಖರಿಸುವ ಶಕ್ತಿ ನಮಗಿಲ್ಲ.

ಅವರ ಮೃಗಾಲಯಗಳಲ್ಲಿ ಒಂದು ಹೆಚ್ಚಿನ ಸೌಕರ್ಯವೆಂದರೆ—ತಾಸು ತಾಸುಗಳ ತನಕ ನೋಡುತ್ತ ಅಲೆದಾಡುವ ಮನುಷ್ಯ ಪ್ರಾಣಿಯೂ ಹಸಿದಿರಬೇಕಾಗಿಲ್ಲ. ನಾಲ್ಕೆಂಟು ಕಡೆಗಳಲ್ಲಿ ತಿಂಡಿಯ ಮನೆಗಳಿವೆ; ಆಟದ ತಾಣಗಳಿವೆ. ಹೀಗಾಗಿ ವಿರಮಿಸಿ, ಉಪಹಾರ ತೆಗೆದುಕೊಂಡು, ಸುಖವಾಗಿ ಇದನ್ನೆಲ್ಲ ಕಂಡು ಬರಬಹುದು. ಇಲ್ಲಿಂದ ಹೊರಡುವ ಮೊದಲು ಇಲ್ಲಿನ ಮಂಗನ ಮನೆಗೂ ಹೋಗಿದ್ದೆ. ಅದಕ್ಕೆ ಮಾತ್ರ ಪ್ರೇಕ್ಷಕರು ಕಡಿಮೆಯಿರಲಿಲ್ಲ. ಮನುಷ್ಯ ಪಿತೃಭಕ್ತಿ ತೋರಿಸುವ ತಾಣವಷ್ಟೇ ಅದು! ಮಕ್ಕಳಂತೂ ಅದನ್ನು ಬಿಟ್ಟು ಕದಲುವುದೇ ಇಲ್ಲ. ನಾನು ಅಲ್ಲಿಗೆ ಹೋದುದು ಗೋರಿಲ್ಲ ನೋಡುವ ಸಲುವಾಗಿ. ಆದರೆ ಆ ಪ್ರಾಣಿ ಒಳಗೆ ಹೋಗಿ

ನಿಂತುದು ಹೊರಗೆ ಬರಲೇ ಇಲ್ಲ. ಕಾದು ನಿಂತು ಬೇಸರವಾಯಿತು. ಒಳಗಿನ ಕತ್ತಲನ್ನು ಚಾಚಿ ನಿಡುಗಣ್ಣಿನಿಂದ ನೋಡೋಣವೆಂದರೆ, ಹೊರಗಡೆಯಲ್ಲಿ ನಿಂತ ಮನುಷ್ಯನ ಗೋಡೆ ಬಲು ದಟ್ಟವಾಗಿತ್ತು.

ಇಂತಹ ತಾವುಗಳಿಗೆ ಬರುವ ಜನರ ಪ್ರವಾಹ ನೋಡಿದರೆ ಮಾತ್ರ—ಮನೆಗೆ ಮರಳಲು ಬಸ್ಸು ಸಿಕ್ಕೀತೇ-ಎಂಬ ಬೆದರಿಕೆಯಾಗುತ್ತದೆ. ವೇಳೆಗೆ ಮುಂಚಿತವಾಗಿಯೇ ಬಂದು ನಿಂತರೂ ನಮ್ಮ ಸರದಿ ಬರಲು ಸುಮಾರು ಮುಕ್ಕಾಲು ಘಂಟೆ ಹಿಡಿಯಿತು. ಕ್ಯೂ ಸಸ್ಯೋದ್ಯಾನಕ್ಕೆ ಹೋದಾಗಲಂತೂ ನೂರಾರು ಬಸ್ಸುಗಳು ಬಂದರೂ ಎರಡು ತಾಸಿನ ತನಕ ಕಾಯಬೇಕಾಯಿತು. ಆ ದಿನ ಮರಳುವಾಗ ಬಸ್ಸಿಗಾಗಿ ಅರೆತಾಸು ಕಾದು, ಬಸ್ಸಿನ ಆಸೆಬಿಟ್ಟು ರೈಲನ್ನು ನುಗ್ಗಿ ಮನೆಯನ್ನು ಸೇರಬೇಕಾಯಿತು.

## ೪. ಬ್ರಿಟಿಷ್ ಉದ್ಯಮ

ನಾನು ಲಂಡನ್ ಸೇರಿದ ಮೊದಲ ಮೂರು ನಾಲ್ಕು ದಿನಗಳನ್ನು, ಅವರು ಏರ್ಪಡಿಸಿದ್ದ ಬ್ರಿಟಿಷ್ ಔದ್ಯೋಗಿಕ ಪ್ರದರ್ಶನವನ್ನು ಕಾಣುವುದರಲ್ಲಿ ಕಳೆದೆ. ಈ ಪ್ರದರ್ಶನವನ್ನು ಮೂರು ವಿಭಾಗಗಳಾಗಿ ಮಾಡಿದ್ದರು. ಒಂದರಲ್ಲಿ–ಉಡುಗೆ ಮೊದಲಾದ ಗೃಹಕೃತ್ಯದ ವಸ್ತುಗಳು; ಇನ್ನೊಂದರಲ್ಲಿ ಆಫೀಸು ಮೊದಲಾದುವುಗಳಿಗೆ ಬೇಕಾಗುವ ಸಲಕರಣೆಗಳು. ಅವುಗಳಲ್ಲಿ ಒಂದನ್ನು ಲಂಡನಿನ ಆರ್ಲ್ಸ್ ಕೋರ್ಟ್ ಎಂಬಲ್ಲಿಯೂ, ಇನ್ನೊಂದನ್ನು ಒಲಿಂಪಿಯಾ ಎಂಬಲ್ಲಿಯೂ ಏರ್ಪಡಿಸಿದ್ದರು. ಮೂರನೆಯದಾದ ಇನ್ನೊಂದು ಭಾಗ ಯಂತ್ರೋದ್ಯಮಗಳಿಗೆ ಸಂಬಂಧಿಸಿದುದು. ಈ ಪ್ರದರ್ಶನವನ್ನು ಬರ್ಮಿಂಗ್ಹೇಮ್ ನಗರದ ಬಳಿಯ ಕಾಸಲ್ ಬ್ರೋಮ್‌ವಿಚ್ ಎಂಬಲ್ಲಿ ಜರಗಿಸಿದ್ದರು. ಬ್ರಿಟಿಷರ ಈ ವ್ಯಾಪಾರಿ ಪ್ರದರ್ಶನವನ್ನು ನೋಡುವ ಸಲುವಾಗಿ ಯುರೋಪಿನಿಂದ ಅನೇಕ ವ್ಯಾಪಾರಿಗಳೂ, ಉದ್ಯಮಿಗಳೂ ಬಂದಿದ್ದರು. ನಾನು ಇಳಿದುಕೊಂಡ ಅರ್ಲ್ಸ್‌ಕೋರ್ಟಿನ ಲಾಫ್ಟಸ್ ಹೊಟೇಲಿನಲ್ಲಿಯೇ ಆ ವಾರದಲ್ಲಿ ಅದಕ್ಕಾಗಿ ಬಂದ ಮೂವತ್ತು, ನಲವತ್ತು ಜನ ಯುರೋಪಿಯನರು ತಂಗಿದ್ದರು.

ಪ್ರದರ್ಶನದ ಒಂದು ಭಾಗ ನನ್ನ ಹೊಟೇಲಿಂದ ಬರಿಯ ನೂರು ಗಜ ದೂರದಲ್ಲಿತ್ತುದಾದುದರಿಂದ ಮೊದಲ ದಿನವೇ ನಾನಲ್ಲಿಗೆ ಹೋದೆ. ವಿದೇಶೀಯರಿಗೆ ಅಲ್ಲಿ ಹೆಚ್ಚಿನ ಸೌಕರ್ಯವಿತ್ತು. ವಿದೇಶಿ ಗಿರಾಕಿ ಎಂದೊಡನೆಯೇ ಒಂದು ಅಂಕಿತ ಕೊಡುತ್ತಾರೆ. ಅದನ್ನು ಧರಿಸಿ ಮೂರು ಪ್ರದರ್ಶನಗಳಲ್ಲಿಯೂ ಬೇಕಾದಂತೆ ಅಲೆದಾಡಬಹುದು. ಅಲ್ಲದೆ ಈ ಪ್ರದರ್ಶನಗಳ ಯಾವತ್ತು ವಿಷಯಗಳನ್ನು ಮುದ್ರಿಸಿರುವ ಗ್ರಂಥಗಳನ್ನು ಮುಫತ್ತಾಗಿ ಕೊಡುತ್ತಾರೆ. ಪ್ರದರ್ಶನಾಲಯದೊಳಗೇನೇ ಹಲವಾರು ಬೇಂಕುಗಳೂ ಆಮದು ರಫ್ತುಮಾಡುವ ಮಂದಿರಗಳೂ ತಮ್ಮ ಕಚೇರಿಯನ್ನು ತೆರೆದಿವೆ. ಹೊರ ದೇಶಗಳಿಂದ ಬಂದ ಗಿರಾಕಿಗೆ ತನ್ನ ದೇಶಕ್ಕೆ ಸಾಮಾನುಗಳನ್ನು ಸಾಗಿಸಬೇಕಾದಲ್ಲಿ ಯಾವ ರೀತಿಯ ವ್ಯಾಪಾರ, ವಿನಿಮಯ, ಉದ್ಯಮಗಳ ತಡೆ, ತೊಂದರೆಗಳಿವೆಯೆಂಬುದನ್ನು ಅಲ್ಲಿ ಕುಳಿತವರು ನಿಮಿಷದಲ್ಲಿ ತಿಳಿಸಿಬಿಡುತ್ತಾರೆ. ಯುದ್ಧಾನಂತರ ಅಂತರ್ರಾಷ್ಟ್ರೀಯ ವ್ಯಾಪಾರಕ್ಕೆ ಅನೇಕ ತಡೆ

ತೊಂದರೆಗಳುಂಟಾದುವಷ್ಟೆ. ಒಂದೊಂದು ದೇಶವೂ ವಿವಿಧ ಕಾರಣಗಳಿಂದ ಆಮದು, ರಫ್ತುಗಳ ಮೇಲೆ ನಿರ್ಬಂಧ ಹೊರಿಸಿತು. ಆ ಸಂಬಂಧದ ಕಾಯಿದೆಗಳು ಆಗಾಗ ಬದಲಾಗುತ್ತಿರುವುದರಿಂದ ಆದರ ಕಚೇರಿಗಳಿಗೆ ಕೊಡುವ ಮಾಹಿತಿ ತುಂಬ ಸಹಾಯಕವಾಗುತ್ತದೆ.

ಅಲ್ಸ್ವರ್ಕೋರ್ಟಿನ ಗೃಹಕೃತ್ಯ ಸಾಮಾಗ್ರಿಗಳ ಪ್ರದರ್ಶನವೆಂಬುದು ಸಾಮಾನ್ಯವಾಗಿರಲಿಲ್ಲ. ಬಹು ದೊಡ್ಡ ಮೂರಂತಸ್ತಿನ ಪ್ರದರ್ಶನ ಮಂದಿರವದು. ಸಾವಿರಾರು ಅಂಗಡಿಗಳಿಂದ ತುಂಬಿದ್ದುವು. ಪ್ರತಿಯೊಬ್ಬ ಪ್ರದರ್ಶನಕಾರನೂ ಸುಂದರವಾದ ಹೂಗಿಡಗಳಿಂದ ತನ್ನ ಅಂಗಡಿಯನ್ನು ಅಲಂಕರಿಸಿದ್ದ. ಒಳಗೆ ಪ್ರದರ್ಶಿಸಿದ ವಸ್ತುಗಳ ವಿವಿಧತೆ, ಅವನ್ನಿರಿಸಿದ ಓರಣವಾದರೋ ಅಷ್ಟು ಸುಂದರವಾಗಿತ್ತು. ಮೈಸೂರಿನ ದಸರಾ ಪ್ರದರ್ಶನದಲ್ಲಿ ಕಾಣುವಂತೆ, ಈ ಅಂಗಡಿಗಾರರು ಯಾರು ಯಾರೋ ಉತ್ಪನ್ನಮಾಡಿದಂಥ ಮಾಲುಗಳನ್ನು ತಂದು ಪ್ರದರ್ಶನಕ್ಕಿಟ್ಟಿರಲಿಲ್ಲ. ತಮ್ಮ ಸಂಸ್ಥೆಗಳ ಉತ್ಪನ್ನವನ್ನಷ್ಟೇ ತೋರಿಸಿದ್ದರು.

ಎರಡು ಮೂರು ಬಹು ನೀಳವಾದ ಅಂಗಡಿ ಸಾಲುಗಳಲ್ಲಿ ಉಣ್ಣೆ, ಹತ್ತಿ ವಸ್ತ್ರಗಳು, ಅಂಗಿ ಅರಿವೆಗಳು, ಕಾಲರ್ ಟೈಗಳು, ಬೂಟ್ಸ್ ಮೊದಲಾದುವುಗಳಿದ್ದುವು. ಮನೆಗಳಲ್ಲಿ ಬಳಸುವ ವಿವಿಧ ರೀತಿಯ ಕುರ್ಚಿ, ಮೇಜುಗಳು, ಮಂಚಗಳೊಂದು ಕಡೆಯಲ್ಲಿ. ಬರಿಯ ನೆಲವನ್ನು ಹಾಸುವ ಕಂಬಳಿ, ರತ್ನಕಂಬಳಿ, ಲಿನೋಲಿಯಮ್ ಅಂಗಡಿಗಳೆಷ್ಟೋ. ಅಡುಗೆ ಮನೆಯ ಸಾಮಾಗ್ರಿಗಳಾದ ಲೋಹ, ಪಿಂಗಾಣಿ ವಸ್ತುಗಳು, ಒಲೆಗಳು ಎಷ್ಟೋ ತೆರನದಿದ್ದುವು. ಒಂದೊಂದೂ ನೋಡುವುದಕ್ಕೆ ಅಷ್ಟು ಚೆನ್ನಾಗಿತ್ತು. ಒಬ್ಬರ ಅನುಕರಣೆಯನ್ನು ಇನ್ನೊಬ್ಬರು ಮಾಡದಷ್ಟು ವೈವಿಧ್ಯಪೂರ್ಣವಾಗಿತ್ತು. ಒಂದು ರತ್ನಕಂಬಳಿ, ಲಿನೋಲಿಯಮಿನ ಅಂಗಡಿಯ ಮುಂದೆ ನಿಂತರೆ, ಅವರು ತೋರಿಸುವ ಮಾದರಿಗಳನ್ನು ನೂರಿನ್ನೂರು ಸಂಖ್ಯೆಗಳಲ್ಲಿ ಕಾಣಬಹುದು.

ಒಲಿಂಪಿಯಾದಲ್ಲಿ ವ್ಯಾಪಾರಕ್ಕೆ ಬೇಕಾದ, ಉಡುಗೆ ತೊಡುಗೆಗಳನ್ನು ಪ್ರದರ್ಶಿಸಲು ಅನುಕೂಲವಾಗುವ, ಮಾನವ ರೂಪದ ಗೊಂಬೆಗಳು, ಟೈಪ್ ರೈಟರುಗಳು, ಲೆಕ್ಕಮಾಡುವ ಯಂತ್ರಗಳು-ಏನೋನೋ ಇದ್ದುವು. ಲೆಕ್ಕವನ್ನು ವರ್ಗೀಕರಿಸುವ ಯಂತ್ರಗಳಿದ್ದಾವೆ. ಧ್ವನಿ ಬರೆದುಕೊಳ್ಳುವ ಯಂತ್ರ

ಗಳಿದ್ದಾವೆ. ವ್ಯಾಪಾರದ ವೇಗಕ್ಕೆ ಸಮನಾಗಿ ಈ ಯಂತ್ರ ಸಲಕರಣೆ ಬೆಳೆದು ಬಂದಿರುವುದು ಕಾಣುತ್ತದೆ.

ಇನ್ನು ಎಣ್ಣೆ, ರಬ್ಬರ್, ಪ್ಲಾಸ್ಟಿಕ್ ಮೊದಲಾದ ರಸಾಯನಿಕ ಉದ್ಯಮಗಳಿಗೆ ಸಂಬಂಧಿಸಿದ ಕಂಪೆನಿಗಳಾದರೋ, ತಮ್ಮ ಕಚ್ಚಾ, ಪಕ್ಕಾ ಮಾಲುಗಳನ್ನು ತೋರಿಸುವುದರ ಜತೆಗೆ ಉದ್ಯಮದ ರೂಪರೇಷೆ ಕೊಡುವ, ವೈಶಾಲ್ಯ ತೋರಿಸುವ ಕಾರ್ಖಾನೆಗಳ ಮಾದರಿಯನ್ನೂ ತೋರಿಸಿದ್ದಾರೆ. ಬ್ರಿಟಿಷ್ ಕಾಮನ್‌ವೆಲ್ತಿಗೆ ಸಂಬಂಧಿಸಿದ ರಾಷ್ಟ್ರಗಳ ಪ್ರದರ್ಶನ ಭಾಗವೂ ಇದರಲ್ಲಿ ಸೇರಿತ್ತು. ನ್ಯೂ ಗಿನಿ, ಗೋಲ್ಡ್ ಕೋಸ್ಟ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮೊದಲಾದ ವಸಾಹತುಗಳ ವ್ಯಾಪಾರ, ಉತ್ಪನ್ನ ಮೊದಲಾದುವುಗಳನ್ನು ತೋರಿಸುವ ಪ್ರದರ್ಶನದ ಭಾಗವಿತ್ತು. ಪಾಕಿಸ್ತಾನದ ಒಂದು ಅಂಗಡಿಯೂ ಅಲ್ಲಿತ್ತು. ಅಲ್ಲಿ ಕಾಣಿಸದಿದ್ದುದು ಭಾರತದ ಅಂಗಡಿ ಮಾತ್ರ. ಪ್ರಾಯಶಃ ನಮ್ಮ ಒಡವೆಗಳಿಗೆ ಗಿರಾಕಿ ತುಂಬಿ ತುಳುಕಿರುವುದರಿಂದಲೋ ಏನೋ, ನಾವು ಈ ಅವಕಾಶವನ್ನು ಪಡೆಯಲಿಲ್ಲವೆಂದು ಕಾಣುತ್ತದೆ. ಈ ಪ್ರದರ್ಶನವನ್ನು ನೋಡುವುದಕ್ಕೆ ಹಲವು ಹಿಂದೀಯರು ಬಂದಿದ್ದರು ಎಂದಿಷ್ಟೇ ಹೇಳಬಲ್ಲೆ.

ಕಾಸೆಲ್ ಬ್ರೋಮ್‌ವಿಚ್ಚಿಗೆ ಲಂಡನ್ ನಗರದಿಂದ ಮೂರು ತಾಸಿನ ಹಾದಿ. ಒಂದು ದಿನ ನಾನು ಯಂತ್ರೋದ್ಯಮದ ಪ್ರದರ್ಶನ ನೋಡುವುದಕ್ಕೆ ಅಲ್ಲಿಗೂ ಹೋಗಿದ್ದೆ. ಅಲ್ಲಿನ ಪ್ರದರ್ಶನಾಲಯ ತೀರ ದೊಡ್ಡದು. ಆಲಯದೊಳಗೇ ಎಲ್ಲದಕ್ಕೂ ಸೌಕರ್ಯ ಕಲ್ಪಿಸಲಾರದೆ, ಹೊರಗಿನ ಬಯಲಲ್ಲೂ ಲೋರಿ, ಟ್ರಿಕ್ಟರ್ ಮೊದಲಾದ ಯಂತ್ರೋಪಕರಣಗಳನ್ನಿರಿಸಿದ್ದರು. ಒಳಗಡೆ ಒಂದು ನಗರವೇ ಇತ್ತು. ಸುಮಾರು ಐನೂರು ಆರ್ನೂರು ಗಜ ದೂರದ ಇಪ್ಪತ್ತು ಮೂವತ್ತು ಬೀದಿಗಳಾದರೂ ಅಲ್ಲಿ ಇದ್ದಿರಬೇಕು. ಕನಿಷ್ಠ 3,000 ಉತ್ಪನ್ನಕಾರರು ಇಲ್ಲಿ ಭಾಗವಹಿಸಿರಬಹುದು. ಲೋಹ, ಮಿಶ್ರಲೋಹ, ರಬ್ಬರ್ ಮೊದಲಾದುವುಗಳಿಂದ ನಿರ್ಮಿತವಾದ ಅಸಂಖ್ಯಾತವಾದ ವಸ್ತುಗಳು, ಅವುಗಳ ನಿರ್ಮಾಣಕ್ಕೆ ಬೇಕಾದ ಯಂತ್ರೋಪಕರಣಗಳು ತುಂಬಿಕೊಂಡಿದ್ದುವು. ಬರಿಯ ಒಂದು ಬೀದಿಯ ತುಂಬ ಹಾರ್ಡ್‌ವೇರ್ ಸಾಮಾನುಗಳಿದ್ದುವು. ಬೀಗ, ಬಿಜಾಗರಿ, ಅರ, ಕೊಡತಿ ಮೊದಲಾದ ಸಾವಿರಾರು ತೆರನ ಸಲಕರಣೆಗಳಿದ್ದುವು. ಇದರಂತೆಯೇ ಹಲವು ಯಂತ್ರೋಪಕರಣಗಳಿದ್ದುವು; ಮುದ್ರಣ, ನೇಯ್ಗೆ, ಮರಗೆಲಸ, ಮೊದಲಾದುವುಗಳಿಗೆ

ಸಂಬಂಧಿಸಿದ ಯಂತ್ರಗಳನ್ನು ಇರಿಸಿದ್ದರು.

ಒಂದು ಯಂತ್ರ ನಿರ್ಮಾಣಕ್ಕೆ ಬೇಕಾಗುವ ಮುಖ್ಯ ಮತ್ತು ಸಹಾಯಕ ಉತ್ಪನ್ನಕಾರರ ಸಂಖ್ಯೆ ಎಷ್ಟು ಬೆಳೆದಿರಬೇಕು ಎಂಬುದರ ಅನುಭವ ಇಲ್ಲಿಗೆ ಬಂದರೆ ಆಗುತ್ತದೆ. ಯಾವನಾದರೂ ಒಬ್ಬ ಸಂಶೋಧಕ ತನ್ನ ಕಲ್ಪನೆಯನ್ನು ನಕ್ಷೆಯ ರೂಪದಲ್ಲಿ ಬರೆದರಾಯಿತು. ಆತ ತಾನೇ ಕುಳಿತು ಪ್ರತಿಯೊಂದು ಯಂತ್ರಾಂಗವನ್ನೂ ನಿರ್ಮಿಸುವುದು ಹೇಗೆಂಬ ಚಿಂತೆ ಹೊರಬೇಕಾಗಿಲ್ಲ. ಅವನು ಬರೆದ ನಕ್ಷೆಯನ್ನು ತೆಗೆದುಕೊಂಡು ತನಗೆ ಬೇಕಾಗುವ ಯಂತ್ರಾಂಗದಲ್ಲಿ ಇಂತಹ ಗುಣಗಳಿರಬೇಕೆಂದು ನಿರ್ಧರಿಸಿದರಾಯಿತು. ಸ್ಕ್ರೂ ಮಾಡುವವರು ಯಾವ ಗಾತ್ರದ, ಆಕೃತಿಯ ಸ್ಕ್ರೂವನ್ನೂ ಒದಗಿಸಬಲ್ಲರು. ಮಿಶ್ರಲೋಹದ ಅಂಗ ಬೇಕಾದರೆ ಅದರ ಆಕಾರ ತೋರಿಸಿ, ಅದಕ್ಕಿರಬೇಕಾದ ಗುಣ (ಭಾರ ತಡೆಯುವ ಶಕ್ತಿ, ಘರ್ಷಣೆ ತಡೆಯುವ ಶಕ್ತಿ) ಇವೆನ್ನೆಲ್ಲ ತಿಳಿಸಿದರೆ, ಅವರೇ ಅಚ್ಚುಮಾಡಿ ಸಾವಿರಾರು ತುಣುಕುಗಳನ್ನು ಒದಗಿಸಬಲ್ಲರು. ಅದರಂತೆಯೇ ಕಚ್ಚು, ಗಾಲಿ, ಬೇರಿಂಗ್, ಶಾಫ್ಟ್ ಯಾವುದು ಬೇಕಾದರೂ ಆಕಾರ ತೋರಿಸಿ ಅದರ ತಾಳಿಕೆಯ ಗುಣ, ತೈಲೀಕರಣ ಗುಣಗಳನ್ನು ಹೇಳಿದಲ್ಲಿ ಒದಗಿಸುತ್ತಾರೆ. ಒಂದೊಂದು ಉದ್ಯೋಗ ಸಂಸ್ಥೆಯವರು ವಿಶಿಷ್ಟ ಪೂರ್ಣವಾದ ಒಂದೊಂದು ಯಂತ್ರಾಂಗ ಮಾಡುವುದಕ್ಕೆ ಅನುಕೂಲತೆಯುಳ್ಳವರಾಗಿದ್ದಾರೆ. ಯಂತ್ರ ಸಂಶೋಧಕನು, ಅವರಿಂದ ಬೇರೆ ಬೇರೆ ಭಾಗಗಳನ್ನು ಕೊಂಡು ತಾನು ಅವನ್ನು ಒಟ್ಟಿಗೆ ಜೋಡಿಸಿದರಾಯಿತು.

ಈ ತೆರನ ಅನುಕೂಲತೆಗಳು ನಮ್ಮ ದೇಶದಲ್ಲಿ ಇಲ್ಲವೇ ಇಲ್ಲ. ಇಲ್ಲಿ ಒಬ್ಬನ ಮನಸ್ಸಿಗೆ ಒಂದು ಸಂಶೋಧನೆ ಹೊಳೆದರೆ—ಅದರ ಎರಕ, ಕಡಚಲು ಕೆಲಸ, ಕಮ್ಮಾರ ಕೆಲಸ ಎಲ್ಲವನ್ನೂ ಅವನೇನೆ ಮಾಡಬೇಕಾಗುತ್ತದೆ. ಇಂಥದೇ ಶಕ್ತಿಯ, ಗುಣವುಳ್ಳ, ಕಬ್ಬಿಣವೋ ಉಕ್ಕೋ ಬೇಕೆಂದರೆ ನಮ್ಮಲ್ಲಿ ಅಂಥದು ದೊರೆಯುವುದೂ ಕಷ್ಟ. ಆ ದೇಶಗಳಲ್ಲಿ ಇಂಥವುಗಳ ಬಗ್ಗೆ ನಿರ್ಮಾಣಕಾರ ತಲೆಬೇನೆ ಹೊರಬೇಕಾಗಿಲ್ಲ. ಯುರೋಪಿನ ದೇಶಗಳಲ್ಲಿ ಒಬ್ಬ ಸಂಶೋಧಕ ಇಲ್ಲವೆ ನಿರ್ಮಾಣಕಾರ ತನ್ನ ನಿರ್ಮಾಣದ ಪ್ರತಿಯೊಂದು ಅಂಗವನ್ನು ತಾನೇ ಮಾಡುವೆನೆಂಬ ಹಟಹಿಡಿಯುವುದಿಲ್ಲ. ಇಂದು ಮೋಟರ್ ಕಾರಿನ ಉದ್ಯಮವಿದೆಯೆಂದು ತಿಳಿಯುವ—ಅದರ ವಿವಿಧಾಂಗಗಳು ನೂರಾರು ತಜ್ಞ ಸಂಸ್ಥೆಗಳಿಂದ ಪೂರೈಕೆಗೊಳ್ಳುತ್ತವೆ.

ನನಗೆ ಈ ಪ್ರದರ್ಶನಮಂದಿರದಲ್ಲಿ ತಾಸು ತಾಸು ಅಲೆದಾಡಿ ದಣಿವು ಬಂದಿತು. ಕಂಡಷ್ಟು ಮುಗಿಯದ ಕೆಲಸವಾಗಿತ್ತು. ಮುದ್ರಣ ಉದ್ಯಮಕ್ಕೆ ಸಂಬಂಧಿಸಿದ ಕೆಲವೊಂದು ನವೀನ ಉಪಕರಣಗಳನ್ನೇನೋ ನೋಡಿದೆ. ಬೆಲೆಯನ್ನು ಕೇಳಿ ದಿಗಿಲಾಯಿತು. ಅವನ್ನು ಕೊಂಡು ಉತ್ತಮ ಕೆಲಸವನ್ನೂ ಅಧಿಕ ಮುದ್ರಣವನ್ನೂ ಮಾಡಬಹುದು, ನಿಜ. ಆದರೆ ಬರಿಯ ಸಾವಿರ ಪ್ರತಿಗಳನ್ನು ಮುದ್ರಿಸಿದರೆ ಸಾಕಾಗುವ ನಾವು, ಇಷ್ಟು ಭಂಡವಾಳ ತೊಡಕಿಸಿ ಏನು ಮಾಡಲು ಬರುತ್ತದೆ?

ಇಷ್ಟನ್ನೆಲ್ಲಾ ನೋಡಿಕೊಂಡು ನಾನು ಹೊರಕ್ಕೆ ಬರುವಾಗ ಒಬ್ಬ ಮಹಿಳೆ ನನ್ನನ್ನು ತಡೆದಳು. "ತುಸು ಮಾತನಾಡಲೇ?" ಎಂದು ಕೇಳಿದಳು. 'ಆಗಲಿ' ಎಂದೆ. ಆಗ ಅವಳು ನಾಲ್ಕಾರು ಪುಟಗಳ ಒಂದು ಮುದ್ರಿತ ಪ್ರಶ್ನಾವಳಿಯೊಂದನ್ನು ಹೊರತೆಗೆದಳು; ಒಂದೊಂದಾಗಿ ನನ್ನನ್ನು ಪ್ರಶ್ನಿಸತೊಡಗಿದಳು. "ಬ್ರಿಟಿಷ್ ಇಂಡಸ್ಟ್ರೀಸ್ ಫೇರ್ ಇದೆಯೆಂದು ನಿಮಗೆ ಹೇಗೆ ತಿಳಿಯಿತು?" "ಮೊದಲ ವಾರ್ತೆ ಎಲ್ಲಿ ಸಿಕ್ಕಿತು?" "ಮೊದಲ ಜಾಹೀರಾತನ್ನು ಯಾವ ಪತ್ರಿಕೆಯಲ್ಲಿ ಕಂಡಿರಿ?" ಎಂದು ಮೊದಲಾಗಿ ಕೇಳಿದಳು. ಅನಂತರ 'ಈ ಪ್ರದರ್ಶನ ನಿಮಗೆ ತೃಪ್ತಿಕೊಟ್ಟಿತೇ' ಎಂದೂ ಕೇಳಿದಳು. ಸಂದೇಹದ ಮುಖ ತೋರಿಸಿದೆ. "ಏನು, ಹೇಳಿ" ಎಂದಳು. "ನಾನು ಸಣ್ಣ ಪುಟ್ಟ ಉದ್ಯಮಗಳನ್ನು ತೊಡಗುವುದಕ್ಕೆ ಯಂತ್ರಗಳಿವೆಯೋ ಎಂದು ನೋಡಲು ಬಂದವನು. ನಿಮ್ಮ ಪ್ರದರ್ಶನ ಸಿದ್ಧವಸ್ತುಗಳನ್ನು ವಿಕ್ರಯಿಸುವುದಕ್ಕಾಗಿ ಏರ್ಪಟ್ಟುದು. ಕಡಿಮೆ ಭಂಡವಾಳವುಳ್ಳವನಿಗೆ ಸಣ್ಣ ಪ್ರಮಾಣದಲ್ಲಿ ಯಾವುದಾದರೂ ಒಡವೆ ನಿರ್ಮಿಸುವುದಕ್ಕೆ ಬರುವ ಯಂತ್ರ ಇಲ್ಲಿ ಕಾಣಿಸಲಿಲ್ಲ" ಎಂದೆ. ಅದನ್ನೂ ಬರೆದುಕೊಂಡಳು; ಧನ್ಯವಾದ ಅರ್ಪಿಸಿದಳು.

ಮುಂದೆ ನಾನು ಲಂಡನಿಗೆ ತಲುಪಿದಾಗ ಎರಡೆರಡು ತಂತಿಗಳು ನನಗಾಗಿ ಕಾದಿದ್ದುವು. ತಂತಿಗಳ ಸಾರಾಂಶವಿಷ್ಟು: "ನೀವು ಬ್ರಿಟಿಷ್ ಇಂಡಸ್ಟ್ರೀಸ್ ಫೇರ್ ನೋಡಲು ಬಂದಿರಿ. ಬರ್ಮಿಂಗ್ಹೇಮ್ ಪ್ರದರ್ಶನ ನೋಡಿದ್ದೀರಿ. ಅಲ್ಲಿ ನಮ್ಮ ಸ್ಟಾಲನ್ನು ಕಂಡಿದ್ದೀರಿ. ಆದರೆ ಲಂಡನಿನಲ್ಲಿ ನಮ್ಮ ಮುಖ್ಯ ಕಚೇರಿಯಿದೆ. ಅಲ್ಲಿಗೆ ಬಂದು ಭೇಟಿ ಕೊಡಲಾರಿರಾ?"

ಈ ತೆರನಾದ ಎಷ್ಟೋ ತಂತಿಗಳು ಅದೆಷ್ಟೋ ಜನರಿಗೆ ಹೋಗಿರಬಹುದು. ನನಗೆ ಕಳುಹಿಸಿದ ತಂತಿಯಂತೆ ಪ್ರಯೋಜನಕ್ಕೆ ಬಾರದ ತಂತಿ

ಗಳೂ ಹಲವಿರಬಹುದು. ಆದರೆ ಕೆಲವಾದರೂ ಗಿರಾಕಿಗಳು ಅವರಿಗೆ ದೊರೆಯಲೇ ಬೇಕಲ್ಲ. ಗಿರಾಕಿಯನ್ನೊಲಿಸಲು ಅವರು ಮಾಡುತ್ತಿರುವ ಪ್ರಯತ್ನ ಅದ್ಭುತ. ನಮ್ಮ ಜನಗಳೂ ವ್ಯಾಪಾರಮಾಡುತ್ತಾರೆ. ಅವರೂ ಮಾಡುತ್ತಾರೆ. ಆದರೆ ಅದರ ದಾರಿ, ರೀತಿ, ಚುರುಕುತನ, ಓರಣ, ಪ್ರಾಮಾಣಿಕತೆ ಇವುಗಳಲ್ಲಷ್ಟೇ ಅಂತರ. ಇಂಗ್ಲೆಂಡಿನಲ್ಲಿ ಉತ್ಪನ್ನವಾಗುವ ಎಷ್ಟೋ ವಸ್ತುಗಳನ್ನು ನಾನು ಇಂಡಿಯದ ಅವರ ಏಜಂಟರುಗಳಿಂದ ತರಿಸಿಕೊಂಡಿದ್ದೇನೆ. ಆದರೆ ಇವರು ಹೆಸರಿಗಷ್ಟೇ ಏಜಂಟರು. ಪ್ರತಿನಿಧಿಗಳಂತೆ ಬರಿಯ ಕಮಿಷನ್ ಪಡೆದು ವ್ಯಾಪಾರಮಾಡುವವರಲ್ಲ. ಮೂಲ ಬೆಲೆಯನ್ನು ಇಮ್ಮಡಿಸಿ, ಮುಮ್ಮಡಿಸಿ ಸ್ವಂತ ವ್ಯಾಪಾರ ಮಾಡುವವರಂತೆ ವರ್ತಿಸುತ್ತಾರೆ. ಉತ್ಪನ್ನಕಾರರಿಗೆ ದೊರೆಯದ ಲಾಭ ತಮಗೆ ದೊರೆಯುವಂತೆ ಮಾಡಿಕೊಳ್ಳುತ್ತಾರೆ. ಈ ಅನುಭವದಿಂದ ನಾನು ಅನೇಕ ಸಂಸ್ಥೆಗಳೊಡನೆ 'ನೀವು ನೇರಾಗಿ ಇಂತಿಂತಹ ವಸ್ತುಗಳ ಮಾದರಿಗಳನ್ನು ಕಳುಹಿಸಬಲ್ಲಿರಾ? ರಫ್ತು ಬೆಲೆ ತಿಳಿಸಬಲ್ಲಿರಾ?' ಎಂದುಕೇಳಿದ್ದೆ. ನಾನು ಸ್ವದೇಶವನ್ನು ಸೇರಿದಾಗ ಅಂತಹ ಪ್ರತಿಯೊಬ್ಬರೂ ತಮ್ಮ ಬೆಲೆಪಟ್ಟಿ, ವಸ್ತುಗಳ ಮಾದರಿ, ವಿವರ ಮೊದಲಾದುವುಗಳನ್ನು ಒದಗಿಸಿದ್ದರು. ನಾನು ವ್ಯಾಪಾರಮಾಡಲಿ ಬಿಡಲಿ, ಅವರ ಕರ್ತವ್ಯ ಅವರು ನಡೆಯಿಸಿದ್ದರು.

ಬ್ರಿಟನ್, ಜರ್ಮನಿಗಳು ಉತ್ಕೃಷ್ಟ ಯಂತ್ರಸಾಮಗ್ರಿಗಳ ಉತ್ಪನ್ನಕಾರ ದೇಶಗಳಾಗಿವೆ. ಆ ಯಂತ್ರಗಳ ತಾಳಿಕೆ ಯೋಗ್ಯತೆಗಳ ವಿಚಾರದಲ್ಲಿ ಲೋಕಕ್ಕೆ ನಂಬಿಕೆ ಬಂದಿದೆ. ಆದರೆ ಇಂದು ಇಂಗ್ಲೆಂಡಿಗೆ ಅಲ್ಲಿನ ಜೀವನದ ಮಟ್ಟ ಹೆಚ್ಚಿಕೊಂಡಿರುವುದರಿಂದ, ಜರ್ಮನಿ, ಇಟಲಿ ಮೊದಲಾದ ದೇಶಗಳೊಡನೆ ಸ್ಪರ್ಧಿಸುವುದು ಕಷ್ಟವಾಗಿದೆ. ಮೊದಲಿನ ಅನಿರ್ಬಂಧಿತ ವ್ಯಾಪಾರವಿಲ್ಲ. ಆಮದು ರಫ್ತುಗಳಿಗೆ ತಡೆಗಳಿವೆ. ಒಂದೊಂದು ದೇಶದವರೂ ತಮ್ಮಲ್ಲಿ ಹುಟ್ಟಿಕೊಂಡ ಹೊಸ ಉದ್ಯಮಗಳಿಗೆ ರಕ್ಷಣೆಯನ್ನು ಕೊಡುತ್ತಿದ್ದಾರೆ. ಇದರಿಂದಾಗಿ ಬ್ರಿಟನಿನ ವಿದೇಶ ವ್ಯಾಪಾರ ತುಂಬ ಅಡಚಣೆಗೆ ಗುರಿಯಾಗಿದೆ. ನಮ್ಮ ದೇಶದವರಂತೆ, ರಕ್ಷಣೆ ದೊರಕಿದೊಡನೆ ಉತ್ಪನ್ನ ವಸ್ತುಗಳ ಗುಣ, ಬೆಲೆಗಳೊಂದಕ್ಕೂ ಗಮನಕೊಡದೆ, ಸದಾ ರಕ್ಷಣೆಯನ್ನು ಬಯಸುವುದಿಲ್ಲ. ಆ ದೇಶದಲ್ಲಿ ಸ್ವದೇಶಿಯ ಸ್ಪರ್ಧೆಯಿಂದ ಒಂದು ಉದ್ಯಮ ಸಾಯದಂತೆ ಮಾಡಲು ಬೆಲೆ ನಿಷ್ಕರ್ಷಿಸುತ್ತಾರೆ. ಆದರೆ ಅದರ

ಗುಣಗಳ ನಿರ್ಧಾರವನ್ನೂ ಮಾಡಿ ಒಂದೊಂದು ಉದ್ಯಮಕ್ಕೂ ಆದರ್ಶ ವಾದ ಅಳತೆ, ತೂಕ ಮೊದಲಾದುವನ್ನು ನಿಶ್ಚೈಸಿ ಅದರಂತೆ ಉತ್ಪನ್ನಮಾಡು ತ್ತಾರೆ. ಹಾಗಾಗಿ ಯಾವುದೇ ಉದ್ಯಮದ ಮರ್ಯಾದೆ, ನಂಬಿಕೆ ಕೆಡಿಸುವ ವ್ಯಾಪಾರಿ ವಂಚನೆಗೆ ಅವಕಾಶಕೊಡುವುದಿಲ್ಲ. ಅಂಥ ಪ್ರಾಮಾಣಿಕತೆಗೂ ನಮ್ಮ ದೇಶದಲ್ಲಿ ಯುದ್ಧ ತೊಡಗಿದ ಮೇಲೆ ಹರಡಿಕೊಂಡಿರುವ ಕಳ್ಳಸಂತೆ ಗೂ ಎಷ್ಟು ಅಂತರವಿಲ್ಲ! ಔಷಧ ತಯಾರಿಸಿದರೆ ಪರಕೀಯ ಲೇಬಲು, ಸೀಸೆಗಳ ಅನುಕರಣೆಯಷ್ಟೇ ಹೊರತು, ಒಳಗಿನ ವಸ್ತು ಏನೇನೋ! ವಸ್ತು ಇಂಥದೆಂದು ಮೇಲೆ ಬರೆದರೆ ಒಳಗಿರುವುದು ಬೇರೊಂದೇ. ಸರಕಾರದ ರಕ್ಷಣೆಯಿಂದ ಬೆಳೆದ ಉದ್ಯಮಗಳು-ವಸ್ತುಗಳ ತಾಳಿಕೆ, ಖಾತ್ರಿಗಳ ಕಡೆಗೆ ಗಮನ ಕೊಡುವುದಿಲ್ಲ. ದೇಶಭಕ್ತಿಯಿಂದ ಒಬ್ಬ ಮಾಲನ್ನು ಕೊಂಡು, ೂಂಡು, ದಂಡತೆತ್ತು ವಂಚನೆಗೆ ಗುರಿಯಾಗುತ್ತಾನೆ. ಯಾವುದೇ ಸರಕಾರ ಒಂದು ಉದ್ಯೋಗವನ್ನು ರಕ್ಷಿಸುವಷ್ಟೇ ಮಹತ್ವದ ಕೆಲಸ, ಗಿರಾಕಿಗಳನ್ನು ರಕ್ಷಿಸುವುದೂ ಇದೆ ಎಂದು ತಿಳಿಯಬೇಕು. ವಸ್ತುಗಳಿರುವುದು ಗಿರಾಕಿಗಳಿ ಗಾಗಿ ಹೊರತು ವ್ಯಾಪಾರಿಯೊಬ್ಬನ ಲಾಭಕ್ಕಲ್ಲ. ವಸ್ತುಗಳ ಯೋಗ್ಯತೆ, ಬೆಲೆ ಗಳನ್ನು ನಿಷ್ಕರ್ಷಿಸಿ ಉತ್ಪನ್ನದ ಮೇಲೆ ಹತೋಟಿ ಇಟ್ಟುಕೊಳ್ಳಲಾರದ ಸರಕಾರವು ಬರಿಯ ರಕ್ಷಣೆ ಕೊಡುವುದರಿಂದ, ಕೆಲವು ವ್ಯಾಪಾರಿ ವಂಚಕರ ಹಿತಸಾಧನೆ ಮಾಡಿದಂತೆ ಆಗುತ್ತದೆ. ಇಂಥೆಲ್ಲ ಪ್ರಶ್ನೆಗಳನ್ನು ಕುರಿತು ನಾವು ತುಂಬ ಯೋಚಿಸಬೇಕಾಗಿದೆ.

ಬ್ರಿಟನಿನ ಈ ಉದ್ಯೋಗ ಪ್ರದರ್ಶನವನ್ನೂ, ಲಂಡನಿನಿಂದ ಇತರ ನಗರಗಳಿಗೆ ಹೋಗುವಾಗ ದಾರಿಯುದ್ದಕ್ಕೂ ಹರಡಿದ್ದ—ಊರು, ಕೇರಿ, ಕಾರ್ಖಾನೆಗಳನ್ನೂ ಕಂಡಾಗಲೆಲ್ಲ—ನನಗೊಂದು ಸಂಶಯವಾಗುತ್ತಿತ್ತು,— ಇಲ್ಲಿ ಹಿಟ್ಲರನ "ಬ್ಲಿಟ್ಸ್" ಆದುದು ನಿಜವೇ—ಎಂದು. ಮಹಾಯುದ್ಧದ ವೇಳೆ, ದಿನನಿತ್ಯವೆಂಬಂತೆ ಇಂಗ್ಲೆಂಡಿನ ಮೇಲೆ ವಿಮಾನ ಧಾಳಿಯಾಗಿತ್ತಷ್ಟೆ. ಆದರೆ—ಕೇವಲ ಅಲ್ಲೊಂದು, ಇಲ್ಲೊಂದು ಮುರುಕು ಕಟ್ಟಡ, ಗೋಡೆ ಕಾಣಿಸುತ್ತಿದೆಯೇ ಹೊರತು ವಿಶೇಷ ವಿಧ್ವಂಸವಾದಂತೆಯೇ ಇಲ್ಲ. ಆಗಿಲ್ಲ ವೆಂದಲ್ಲ; ಆ ಗಾಯಗಳೆಲ್ಲವೂ ಮಾಸಿವೆ. ಇಂದು ಮೇಲುತೊಗಲಿನಲ್ಲಿ ಗಾಯದ ಕಲೆಯೂ ಉಳಿದಿಲ್ಲವೆಂಬಷ್ಟು ಪುನರುಜ್ಜೀವನಗೊಂಡಿದೆ. ಅಷ್ಟೇ ಅಲ್ಲ—ಯುದ್ಧ ಮುಗಿದ ಬಳಿಕ, ಲಂಡನಿನ ಅನೇಕ ಬರೋ, ಮುನಿಸಿಪಾಲಿಟಿ

ಗಳವರು, ಕಾರ್ಖಾನೆಗಳೊಡೆಯರು–ತಮ್ಮ ಜನರಿಗಾಗಿ ಹೊಸತಾಗಿ ಕಟ್ಟಿಸಿ ಕೊಟ್ಟ ಮನೆಗಳ ಸಾಲುಸಾಲುಗಳೇ ಅಲ್ಲಲ್ಲಿ ಕಾಣುತ್ತಿವೆ. ಈ ದೇಶವು ಮೊದಲಿಗಿಂತಲೂ ಹೆಚ್ಚಿಗೆ ಚೇತನ ಪಡೆದಿದೆಯೆಂದೇ ಕಾಣಿಸುತ್ತದೆ. ಇದು ಹೇಗೆ ಸಾಧ್ಯ?

ನನಗೆ ಕೆಲವಾದರೂ ಬ್ರಿಟಿಷ್ ಕಾರ್ಖಾನೆಗಳನ್ನು ನೋಡಿಕೊಂಡು ಬರಬೇಕು ಎಂಬ ಆಸೆಯಿತ್ತು. ವೇಳೆ ಸಾಕಾಗದೆ ಹೋಯಿತು. ಅನೇಕ ಬಾರಿ ರೈಲಿನಲ್ಲಿ ಓಡಾಡುವಾಗ-ದಾರಿಯ ಮಗ್ಗುಲಲ್ಲಿ ನೆಸಲ್ಸ್, ಜಿ. ಇ. ಸಿ, ಬಿ. ಟಿ. ಎಚ್, ವಿಲ್ಸ್, ಹಂಟ್ಲೀ ಪಾಮರ್ಸ್, ಮೊದಲಾದ ಪೂರ್ವಪರಿಚಿತ ಹೆಸರುಳ್ಳ ಕಾರ್ಖಾನೆಗಳು ಕಾಣಿಸಿದ್ದುವು. ಅವಾವೂ ಬೃಹದಾಕೃತಿಯು ವಾಗಿ ಕಾಣಿಸಲಿಲ್ಲ. ಇಷ್ಟು ಸಾಮಾನ್ಯ ಗಾತ್ರದ ಮಂದಿರಗಳು–ಇಷ್ಟೆಲ್ಲ ವಿಶೇಷ ಪ್ರಮಾಣದ ಉತ್ಪನ್ನಮಾಡಿ ಪ್ರಪಂಚದಲ್ಲೇ ಹೆಸರು ಪಡೆಯಲು ಸಾಧ್ಯವೇ--ಎಂದು ಸಂದೇಹವಾಗುತ್ತಿತ್ತು. ಇಂಗ್ಲೆಂಡಿನ ಎಲ್ಲೆಲ್ಲೂ ಸಣ್ಣ ದೊಡ್ಡವಾದ ಸಾವಿರಾರು ಕಾರ್ಖಾನೆಗಳು ತುಂಬಿಕೊಂಡಿವೆ. ಅವು ಗಾತ್ರ ದಲ್ಲಿ ದೊಡ್ಡದಿರದೆ ಹೋದರೂ ಎಡೆಬಿಡದ ಚಟುವಟಿಕೆ, ಆಮದು, ರಫ್ತು ಗಳು ನಡೆದಿರುವುದರಿಂದ ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದಾಗಲು ಕಾರಣವಾಯಿತು.

ಬ್ರಿಟಿಷ ಜನಗಳ ನಿಕಟವಾದ ಪರಿಚಯ ನನ್ನ ಅಲ್ಪಾವಧಿಯ ಇರು ವಿಕೆಯಲ್ಲಿ ಆಗಲಿಲ್ಲ; ಆಗುವುದೂ ಸುಲಭವಲ್ಲ. ಆದರೆ ಅವರು ಸಾಧಿಸಿ ರುವ ಕೆಲಸಗಳನ್ನು ನೋಡುವಾಗ—ಅವರ ಹಿರಿಮೆ ತನ್ನಂತೆಯೇ ಹೊಳೆ ಯುತ್ತದೆ. ಯುದ್ಧದಿಂದ ಹಾನಿಗೊಂಡ ತಮ್ಮ ಮನೆ ಮಠ, ಕಾರ್ಖಾನೆಗಳ ನ್ನೆಲ್ಲ ತಿರುಗಿ ರೂಪಿಸಿ, ಇಷ್ಟೊಂದು ಚೇತನಗೊಳಿಸುವ ಕೆಲಸ ಜಡಪ್ರವೃತ್ತಿ ಯವರಿಂದೆಂದೂ ಆಗಲಾರದ ಕೆಲಸ. ಅದರಂತೆ ಪ್ರತಿ ನಗರದಲ್ಲೂ ಸಾವಿ ರಾರು ಹೊಸ ಮನೆಗಳ ನಿರ್ಮಾಣ ಮಾಡುತ್ತಿರಬೇಕಾದರೆ— ದುಡಿಯಲು ಬಾರದವರಿಂದ ಅದು ಸಾಧ್ಯವಲ್ಲದ ಕೆಲಸವೆಂದೂ ಹೊಳೆಯುತ್ತದೆ. ನಾನು ಬ್ರಿಟಿಷ್ ಔದ್ಯೋಗಿಕ ಪ್ರದರ್ಶನದಲ್ಲಿ ಕಂಡ ಅಸಂಖ್ಯಾತ ವಸ್ತು, ಯಂತ್ರ ಮೊದಲಾದುವುಗಳ ಮಾದರಿಗಳು ಅವರ ಹೆಚ್ಚಿನ ಉತ್ಪನ್ನ ಶಕ್ತಿಯನ್ನು ತೋರಿಸುತ್ತವೆ. ಇವು ಕೇವಲ ದ್ರವ್ಯಬಲದಿಂದಲಾಗಲಿ, ಯಂತ್ರಬಲದಿಂದಾ ಗಲಿ ಆಗುತ್ತವೆ ಎಂದು ಎಣಿಸಬಾರದು. ಅಮೇರಿಕದವರಿಂದ ಸಾಧ್ಯವಾದ

ದೈತ್ಯಾಕೃತಿಯ ಯಂತ್ರಸಾಧನ ಇಂಗ್ಲೆಂಡಿನವರಿಂದ ಸಾಧ್ಯವಿಲ್ಲ. ಇಂಗ್ಲೆಂಡಿನ ಯಶಸ್ಸು-ಬಹುವಾಗಿ ಯಂತ್ರದ ಹಿಂದೆ ಆಲಸ್ಯವಿಲ್ಲದೆ ನಿಂತು ದುಡಿಯುವ ಸ್ವದೇಶ ಪ್ರೀತಿಯುಳ್ಳ ಸಾಮಾನ್ಯ ಪ್ರಜೆಯಿಂದಲೇ ಉಂಟಾಯಿತು. ದಾರಿಯಲ್ಲಿ ಸಂಚರಿಸುವಾಗ ಸಮೀಪದ ಹೊಲ, ಹಿತ್ತಿಲುಗಳಲ್ಲಿ ದುಡಿಯುತ್ತಿದ್ದ ಜನಗಳನ್ನು ನೋಡಿದ್ದೇನೆ. ಅಲ್ಲಿ ಹಳ್ಳಿಯ ರೈತರೊಡನೆ, ಕೃಷಿಯ ಪಾಠ ಕಲಿಯಲು ಹೋದ ಒಬ್ಬ ಮಿತ್ರರೊಡನೆ ವಿಚಾರವಿನಿಮಯಮಾಡಿದ್ದೇನೆ. ತಂತಮ್ಮ ಹಿತ್ತಲು ಹೊಲಗಳಲ್ಲಿ ಸಂಜೆಯ ಎಂಟು ಘಂಟೆಯ ಹೊತ್ತಿಗೂ ಹಾರೆ, ಪಿಕ್ಕಾಸುಗಳಿಂದ ಅಗೆಯುತ್ತಿದ್ದ ಅರವತ್ತು ಎಪ್ಪತ್ತು ವರ್ಷದ ಮುದುಕರನ್ನು ಕಂಡಿದ್ದೇನೆ. ನನಗೆ ಥೆಮ್ಸ್ ನದಿ ದಂಡೆಯಲ್ಲಿ ಮಾತನಾಡಲು ಸಿಕ್ಕಿದ ಕೆಲಸಗಾರ ಸುಮಾರು ಅರವತ್ತಕ್ಕೆ ಮೀರಿದಂಥ ಪ್ರಾಯಸ್ಥ. ಆತ ‘ಬೇನೆಯಿಂದ ನಿರುದ್ಯೋಗಿಯಾಗಬೇಕಾಯಿತೇ?’ ಎಂಬ ಕೊರಗನ್ನು ತೋರಿಸಿದನೇ ಹೊರತು, ವಯಸ್ಸಿನ ನೆಪ ಹೇಳಿ ನಿವೃತ್ತಿ ವೇತನ ಬಯಸುವವನಂತೆ ಕಾಣಿಸಲಿಲ್ಲ.

ಅವರು ಹೊಟೇಲು ಅಂಗಡಿಗಳಿಗೆ ಹೋದರೋ! ಅಲ್ಲಿನ ಹುಡುಗಿಯರ ಚುರುಕುತನ ನಮ್ಮ ಪ್ರಾಯಸ್ಥರಲ್ಲೂ ಕಾಣಲಾರೆವು. ಅವರಲ್ಲಿ ಮನೆಯಲ್ಲಿ ಆಳುಗಳನ್ನು ಇರಿಸಿಕೊಳ್ಳುವ ಪರಿಪಾಠ ಕಡಿಮೆ. ಅಂಥ ಸೇವಕರು ಬೇಕಾದಲ್ಲಿ ತಾಸಿಗೆ ಮೂರುನಾಲ್ಕು ಶಿಲಿಂಗುಗಳ ವೇತನ ಕೊಡಬೇಕು. ಅವನೊಬ್ಬ ಸೇವಕ ಎಂಬ ದೃಷ್ಟಿಯಿಂದ ಕಾಣುವಂತೆಯೂ ಇಲ್ಲ. ಆತನೂ ಮಿತ್ರನೇ. ಆತ ದಿನಕ್ಕೊಂದು ಘಂಟೆ ಕಾಲ ಮನೆಗೆ ಬಂದು ದುಡಿಯುವವನಾದರೆ, ನಿಯಮಿತ ವೇಳೆಗೆ ಬಂದಾನು; ವಂಚನೆ ಇಲ್ಲದೆ ದುಡಿದಾನು; ನಿಯಮಿತ ವೇಳೆಗೇನೆ ಹೋದಾನು.

ಇಂದು ಸರ್ವಸಾಮಾನ್ಯ ಬ್ರಿಟಿಷ್ ಪ್ರಜೆಯೊಬ್ಬನು ಬಹು ಸುಖಿಯೆನ್ನಲಾರೆ. ನಮ್ಮ ಮಾನದಿಂದ ಅವನ ಜೀವನ ಕಷ್ಟತಮವಾಗಿದೆ. ಅವನ ಪಾಲಿಗೆ ತೆರಿಗೆಯೂ ಹೆಚ್ಚು; ದುಡಿಮೆಯೂ ಹೆಚ್ಚು; ಅವನು ಕೊಳ್ಳುವ ವಸ್ತು, ಒಡವೆಗಳ ಬೆಲೆಯೂ ತುಟ್ಟಿ. ಒಂದು ಹತ್ತಿಯ ಶರ್ಟಿಗೆ ೨೫ ಶಿಲಿಂಗ್ ಬೆಲೆ; ಕಾಲಿನ ಬೂಟ್ಸುಗಳಿಗೆ ೫೦ ಶಿಲಿಂಗ್. ಆ ಹವೆಗೆ ಅನಿವಾರ್ಯವಾದ ಉಣ್ಣೆಯ ಪೋಷಾಕಿಗೆ ೧೫೦ ಶಿಲಿಂಗುಗಳು. ಈ ಕೊಳ್ಳುವ ವಸ್ತುಗಳಲ್ಲಿ ಅರೆವಾಸಿಯಷ್ಟು ತೆರಿಗೆಗಳೇ. ಆದರೆ ಅವನ್ನು ತೆತ್ತು ಬಾಳುವ

ವಿಚಾರದಲ್ಲಿ ಜನ ಗುರುಗುರಿಸುತ್ತಲಿಲ್ಲ. ತೆರಿಗೆ ತೆರದೆ ತಮ್ಮ ಸರಕಾರ ನಡೆಯು ದೆಂದೂ, ದೇಶದ ಕಷ್ಟತರ ಪರಿಸ್ಥಿತಿ ಹೋಗದೆಂದೂ ಅವರಿಗೆ ತಿಳಿದಿದೆ. ನಾಳಿನ ಯುದ್ಧಕ್ಕೆ ತಮ್ಮ ದೇಶ ಬಲಿಯಾಗಬಾರದೆಂಬ ಬುದ್ಧಿ ಅವರಲ್ಲಿದೆ.

ಕೆಲಸ ಹೆಚ್ಚಾಯಿತೆಂದು ಕೊರಗುತ್ತಾರೆಯೇ? ನನಗೆ ಅವರನ್ನು ಕಂಡು ಆ ಭಾವನೆಯಾಗಲಿಲ್ಲ. ಯಾರ ಬಾಯಿಂದಲೂ ಅಂಥ ಮಾತನ್ನು ನಾನು ಕೇಳಲಿಲ್ಲ. ತಾವು ಉಳಿಯಲು, ತಮ್ಮ ದೇಶ ಉಳಿಯಲು ಎಂಥ ತ್ಯಾಗಕ್ಕೂ ಅವರು ಸಿದ್ಧರೆಂಬುದಾಗಿ ನನಗೆ ತೋರಿತು. ತಮ್ಮ ದೇಶ ಬದುಕದೆ ತಾವು ಬದುಕಲಾರೆವು ಎಂಬ ಪ್ರಜ್ಞೆ ಅವರಿಗಿರುವಂತೆ ಕಾಣುತ್ತಿತ್ತು. ದೇಶದ ಸಾಂಪತ್ತಿಕ ಉತ್ಪನ್ನ ಹೆಚ್ಚದೆ ತಮ್ಮ ವರಮಾನ ಹೆಚ್ಚಾಗಲಾರದೆಂಬ ತಿಳಿವು ಅವರ ಶ್ರಮಗಾರರಿಗೆ ಇದ್ದಂತೆ ಕಾಣಿಸುತ್ತದೆ. ನಮ್ಮ ದೇಶದಲ್ಲಿ 'ಕೆಲಸದ ವೇತನ ಹೆಚ್ಚಿಸಿ; ಕೆಲಸದ ವೇಳೆ ತಗ್ಗಿಸಿ' ಎಂಬೊಂದೇ ಕೂಗನ್ನು ಕೇಳು ತ್ತಿದ್ದೇವೆ. ಹಕ್ಕಿನ ಮಾತುಗಳನ್ನಷ್ಟೇ ಆಡುತ್ತಿದ್ದೇವೆ. ಹಕ್ಕಿನೊಂದಿಗೆ ಬೆರೆತ ಹೊಣೆಯ ಮಾತು ಯಾರಿಗೂ ಬೇಡವಾಗಿದೆ. ದುಡಿಮೆಯ ಉತ್ಪನ್ನಹೆಚ್ಚಿಸಿ, ದೇಶದ ಸಂಪತ್ತನ್ನು ಹೆಚ್ಚಿಸಿ—ಎಂದು ಕೂಗುವ ಶ್ರಮಗಾರರನ್ನಾಗಲಿ, ಅವರ ಮುಂದಾಳುಗಳನ್ನಾಗಲಿ ಕಾಣುತ್ತಿದ್ದೇವೆಯೇ?

ಸಂಬಳ, ವೇತನಗಳ ಪ್ರಶ್ನೆ ಅವರಲ್ಲಿ ಇಲ್ಲವೇ ಇಲ್ಲ ಎಂದೆನ್ನಲಾರೆ. ಆದರೆ ಆ ನೆಪದಿಂದ ಕೆಲಸವನ್ನು ವಂಚಿಸುವ ಜನರಲ್ಲ; ಮೈಗಳ್ಳರಲ್ಲ; ಕೆಲಸಗಳ್ಳರಲ್ಲ–ಎಂಬುದೇ ನನ್ನ ಅಭಿಪ್ರಾಯ. ಬ್ರಿಟನಿನ ಹೊಲ, ಹಿತ್ತಲು, ತೋಟಗಳು, ಹಾಳುಬೀಳದ ಭೂಮಿಗಳು, ಚೊಕ್ಕತನ, ಜನಗಳ ಅವಸರ, ತ್ವರೆಗಳು ಅವರ ವಿಶೇಷವಾದ ಕರ್ತವ್ಯ ಬುದ್ಧಿಯನ್ನು ಸೂಚಿಸುತ್ತವೆ.

ಲಂಡನ್ ನಗರದಲ್ಲಿ ಅಲೆಯುವ ಹಿಂದೀಯರಿಗೆ ಕಾಣಿಸುವ ಇನ್ನೊಂದು ಚಿತ್ರವೆಂದರೆ—ಅವರ ಜನಗಳು, ಬದುಕುವ ಹಟವುಳ್ಳಂಥ ಜನಗಳೆಂದು. ನಾನು ಸುಯೆಜಿನಲ್ಲಿಳಿದು ಕೈರೋವಿಗೆ ಹೋದ ಸಂಗತಿ ಗಳನ್ನು ಹೇಳಿದೆನಷ್ಟೆ. ಆಗ ನಮ್ಮ ಪ್ರಯಾಣಕ್ಕೆ ದೊರೆತ ಇಪ್ಪತ್ತು ಟೇಕ್ಸಿ ಗಳೂ 1950–52ರ ಮಾದರಿಯವುಗಳೇ. ಆದರೆ ಹತ್ತೆಂಟು ಮೋಟರು ಉತ್ಪನ್ನಕಾರರ ಇಂಗ್ಲೆಂಡಿನ ರಾಜಧಾನಿಯಲ್ಲಿ–ಸೇಕಡ ಒಂದರಷ್ಟು ಅಂಥ ಹೊಸಗಾಡಿಗಳು ಕಾಣಿಸಬೇಕೇ? ಪ್ರತಿಯೊಂದು ಟ್ಯಾಕ್ಸಿಯೂ 1935ರಷ್ಟು ಹಳೆಯದು. ಸಾರ್ವಜನಿಕರ ಖಾಸಗಿ ವಾಹನಗಳು 1945–48ರ ಗಡಿ

ಯನ್ನೂ ದಾಟಿದುವಲ್ಲ. ಹಚ್ಚ ಹೊಸ ಗಾಡಿಗಳೆಲ್ಲವು ವಿದೇಶಗಳಿಗೆ ವಿಕ್ರಯ ವಾಗುತ್ತವೆ. ಅಲ್ಲಿನ ಒಳನಾಡಿನ ಮೋಟರಿನ ಬೆಲೆ, ರಫ್ತಿನ ಬೆಲೆಯ ಇಮ್ಮಡಿ ಯಷ್ಟು. ಯಾಕೆ? ಊರಲ್ಲಿ ಉಂಟಾದ ಮೋಟರುಗಳನ್ನೆಲ್ಲ ಅವರೇ ಬಳ ಸುವ ಶಕ್ತಿಯುಳ್ಳವರೆಂದರೂ ಅನ್ನಬಹುದು. ಆದರೆ ಅದು ವ್ಯಾಪಾರೀದೇಶ. ವಿದೇಶ ವ್ಯಾಪಾರದಿಂದಲೇ ಅವರ ಸಾಂಪತ್ತಿಕ ಶ್ರೇಯಸ್ಸು. ಆದುದರಿಂದ ತಾವು—ಹಳೆಯ ಬಂಡಿಗಳಲ್ಲಿ ಕುಳಿತು ದಿನ ತೆಗೆಯುತ್ತಾರೆ. ಹೊಸ ಬಂಡಿ ಗಳನ್ನು ಪರದೇಶಗಳಿಗೆ ವಿಕ್ರಯಿಸುತ್ತಾರೆ.

ಇನ್ನು ಈ ಜನಗಳ ಪ್ರಾಮಾಣಿಕತೆಯನ್ನು ಕುರಿತು ಒಂದೆರಡು ಅನು ಭವಗಳನ್ನು ಇಲ್ಲಿ ಹೇಳಬಹುದು. ನಾನೊಂದು ದಿನ ಲಂಡನ್ ವಿಶ್ವವಿದ್ಯಾ ಲಯಕ್ಕೆ ಸಮೀಪವಾಗಿರುವ ರಸೆಲ್ ಸ್ಟ್ರೀಟ್ ನಲ್ಲಿ ಅಲೆದಾಡುತ್ತಿದ್ದೆ. ಆಗೊಬ್ಬ ಇಂಗ್ಲಿಷ್ ತರುಣ ನನ್ನನ್ನು ನಿಲ್ಲಿಸಿ “ಯುನಿವರ್ಸಿಟಿಗೆ ದಾರಿ ಯಾವುದು?” ಎಂದು ಕೇಳಿದ. ನಾನು ಸಮೀಪದ ದಾರಿಯನ್ನು ತೋರಿಸಿದೆ. ಆ ದೇಶ ದವನಾದ ಅವನಿಗೆ ಯುನಿವರ್ಸಿಟಿಯ ದಾರಿ ತಿಳಿಯದೇ ಎಂಬ ಕುತೂ ಹಲದಿಂದ “ಏಕೆ?” ಎಂದೂ ಕೇಳಿದೆ.

ಆತ ಲಂಡನಿನ ಹೊರಭಾಗದಲ್ಲಿ ವಾಸಿಸುವವನಂತೆ. ಅವನಿರುವ ಉಪಾಹಾರ ಗೃಹಕ್ಕೆ ಈ ವಿಶ್ವವಿದ್ಯಾಲಯದ ಒಬ್ಬ ವಿದ್ಯಾರ್ಥಿ ಸಂದರ್ಶನ ವಿತ್ತಿದ್ದ. ಆ ವೇಳೆ ಒಂದು ಕೈ ಚೀಲವನ್ನು ಅಲ್ಲಿ ಮರೆತು ಬಂದಿದ್ದ. ಅವನ ಚೀಲದ ಮೇಲಿನ ವಿಳಾಸವನ್ನು ಕಂಡು, ಅದನ್ನು ಮರಳಿಕೊಡುವ ಸಲು ವಾಗಿ, ಈ ತರುಣ ಅವನನ್ನೇ ಅರಸಿಕೊಂಡು ಯುನಿವರ್ಸಿಟಿಗೆ ಹೊರಟಿದ್ದ. ಇಂಥ ಘಟನೆ ಅವರ ನಿಸ್ಪೃಹತೆಯನ್ನು ಕುರಿತು ಎಷ್ಟು ಅಭಿಮಾನವನ್ನು ಉಂಟುಮಾಡುವುದಿಲ್ಲ!

ಇನ್ನೊಂದು ದಿವಸ ನಾನು ಲಂಡನಿನ ಒಂದು ರೈಲು ನಿಲ್ದಾಣದಲ್ಲಿ ಟಿಕೇಟುಕೊಳ್ಳಲು ಹೋಗಿದ್ದೆ. ಅವಸರವಾಗಿ ಟಿಕೇಟು ಕೇಳಿದೆ. ಎರಡು ಪೌಂಡುಗಳನ್ನೆಸೆದು ಟಿಕೇಟು ಪಡೆದು ಅಲ್ಲಿಂದ ಹೊರಟು ಈಚೆಗೆ ಬಂದೂ ಆಯಿತು. ತುಸು ದೂರ ಹೋದ ಬಳಿಕ ನನಗೆ ಕರೆ ಬಂದಿತು: ನನ್ನ ಟಿಕೇ ಟಿನ ಹಣ ಕಳೆದುಳಿದ ಚಿಲ್ಲರೆಯನ್ನು ನಾನು ಬಿಟ್ಟು ಬಂದಿರುವೆನೆಂದು. ನಮ್ಮ ದೇಶದಲ್ಲಿ—ಹೆಚ್ಚಿನ ಬೆಲೆಕೊಂಡು ಕಡಿಮೆ ಬೆಲೆಯ ಟಿಕೇಟು ಮಾರುವ ಬುಕ್ಕಿಂಗ್ ಕ್ಲಾರ್ಕರ ಅನುಭವ, ಕಡಿಮೆ ಚಿಲ್ಲರೆಯನ್ನು ಉದ್ದೇಶಪೂರ್ವಕ

ವಾಗಿಕೊಡುವ ಗುಮಾಸ್ತರರ ಅನುಭವ, ಬಲು ಬಾರಿ ನನಗಾಗಿದೆ.

ಲಂಡನಿನ ಬೀದಿಗಳಲ್ಲಿ, ಕೆಲ ಕೆಲವು ಕಡೆಗಳಲ್ಲಾದರೂ ನಮಗೆ ಒಡೆಯನಿಲ್ಲದ ವಾರ್ತಾಪತ್ರಿಕೆಗಳ ಅಂಗಡಿಗಳು ಕಾಣಿಸುತ್ತವೆ. ನಮಗೆ ಬೇಕಾದ ಪತ್ರಿಕೆಗಳನ್ನು ಕೊಂಡು, ಅದರ ನಿಯುಕ್ತ ಬೆಲೆಯನ್ನು ಅಲ್ಲಿರಿಸಿದ ಹ್ಯಾಟಿನಲ್ಲಿ ಎಸೆದು ಬಂದರಾಯಿತು. ಈ ತೆರನ ಹಿರಿಮೆ ನಮ್ಮ ದೇಶದಲ್ಲೂ ಒಂದು ಕಾಲದಲ್ಲಿತ್ತೆಂದು ನಾವು ಚರಿತ್ರೆಯಿಂದ ತಿಳಿದಿದ್ದೇವೆ. ಆದರೆ ಇಂದಿನ ದಿನಮಾನದ ನಡತೆಯಲ್ಲಿ ಅಂತಹ ಗುಣ ಕಾಣುತ್ತಿದ್ದೇವೆಯೋ?

ನಾವು ಬೆಳಗಿನ ಆರು ಘಂಟೆಗೋ ಅದಕ್ಕೂ ಮುಂಚಿತವಾಗಿಯೋ ಎದ್ದು ಹೊರಕ್ಕೆ ಅಲೆದಾಡಲು ಹೋದರೆ, ದಾರಿಯಲ್ಲಿ ಇನ್ನೂ ವಿಚಿತ್ರವಾದ ನೋಟ ಕಾಣಬಹುದು. ಅಲ್ಲಿನ ಮನೆಗಳ ಮುಂದೆಲ್ಲ— ಅವರವರಿಗೆ ಸಲಲಿರುವ ಹಾಲಿನ ಸೀಸೆಗಳನ್ನು ಇರಿಸಿ ಹೋಗಿರುತ್ತಾರೆ. ಹೊಟೇಲುಗಳ ಎದುರು ತರಕಾರಿ, ಹಾಲು ಹಣ್ಣುಗಳ ಬುಟ್ಟಿ, ಬಾಟ್ಲಿಗಳನ್ನು ಇರಿಸಿಹೋಗಿರುತ್ತಾರೆ. ಯಜಮಾನರು ಎದ್ದು, ಕದ ತೆರೆದು, ಅವನ್ನು ಒಳಕ್ಕೆ ಒಯ್ಯುವ ತನಕವೂ ಅವು ಅಲ್ಲಿಯೇ ಬಿದ್ದಿರುತ್ತವೆ.

ತಮ್ಮ ಸಾರ್ವಜನಿಕರಲ್ಲಿ ಈ ತೆರನ ಪ್ರಾಮಾಣಿಕತ, ನಡತೆ, ಮಾನಸಿಕ ಶುಚಿಗಳು ಬೆಳೆಯದೆ ಹೋದಲ್ಲಿ ಯಾವ ದೇಶವೂ ದೊಡ್ಡದಾಗಲಾರದು. ಇಂಗ್ಲೆಂಡಿನಿಂದ ಆಳಿಸಿಕೊಂಡ ನಾವು, ಮನಸ್ಸಿನಲ್ಲಿ ಎಷ್ಟೇ ಕಹಿಯನ್ನುಳಿಸಿ ಕೊಂಡು ಆ ದೇಶಕ್ಕೆ ಹೋದರೂ— ಅವರ ದೇಶದಲ್ಲಿ ಆ ಜನರ ನಡತೆ, ಅವರು ಬದುಕುವ ಬಗೆಗಳನ್ನು ಕಂಡಾಗ, ಅವರ ವಿಚಾರದಲ್ಲಿ ಗೌರವ ಬುದ್ಧಿಯುಂಟಾಗುವುದು ಖಂಡಿತ.

ಅವರ ಸಾರ್ವಜನಿಕ ಜೀವನದಲ್ಲಿ ಮುಖ್ಯವಾಗಿ ಪ್ರವಹಿಸುತ್ತಿರುವ ಗುಣಗಳು ಇವು. ಲಂಚಕ್ಕೆ ಕೈ ಚಾಚುವ ಬುದ್ಧಿ, ತನ್ನ ಬಂಧು ಬಾಂಧವರಿಗೆ ಸಾರ್ವಜನಿಕ ಅಧಿಕಾರ, ನೌಕರಿಗಳನ್ನು ಒದಗಿಸುವ ದುರ್ನೀತಿ ಅವರಲ್ಲಿ ಕಾಣುವುದು ಅಪೂರ್ವ. ಅಂಥ ಕೊರತೆಗಳಾಗಲಿ ಕರ್ತವ್ಯ ಲೋಪಗಳಾಗಲಿ ಸಾರ್ವಜನಿಕ ನೌಕರರಲ್ಲಿ ಕಂಡರೆ, ಮರುದಿನವೇ ಪತ್ರಿಕೆಗಳಲ್ಲಿ ಟೀಕೆಯ ಸುರಿಮಳೆ ಬಂದೀತು.

ನಾನು ಅಲ್ಲಿದ್ದ ದಿನಗಳಲ್ಲಿ–ಒಂದು ದಿನ ಒಬ್ಬ ಅಪರಾಧಿ ಒಂದು ಸೆರಮನೆಯಿಂದ ತಪ್ಪಿಸಿಕೊಂಡ. ಆತ ಅಪಾಯಕರ ಅಪರಾಧಿವರ್ಗಕ್ಕೆ

ಸೇರಿದವ. ಆ ಮೊದಲೇ ಅಂಥವರ ಸೆರಮನೆಯನ್ನು ಆ ಊರಲ್ಲಿ ಸ್ಥಾಪಿಸುವ ವಿಚಾರವಾಗಿಯೇ ಸಾರ್ವಜನಿಕ ವಿರೋಧವುಂಟಾಗಿತ್ತಂತೆ. ತಪ್ಪಿಸಿಕೊಂಡು ಹೊರಟ ಆತ, ೨೫ ತಾಸಿನೊಳಗಾಗಿ ಸನಿಃ ದ್ದೊಂದು ಊರಿನ ಉದ್ಯಾನದಲ್ಲಿ ಆಡುತ್ತಿದ್ದ ಮಗುವನ್ನು ಕೊಲೆಮಾಡಿ ಕಾಣೆಯಾದ. ಅವನನ್ನು ಒಂದು ದಿನದಲ್ಲಿ ಹಿಡಿದುದೂ ಆಯಿತು. ಆದರೆ ಪತ್ರಿಕೆಗಳೆಲ್ಲವು– ಈ ತೆರನ ಭಯಂಕರ ಅಪರಾಧಿಯು ನಿರ್ಬಂಧದಿಂದ ತಪ್ಪಿಸಿಕೊಂಡು ಹೋದುದಾದರೂ ಹೇಗೆ? ಅಲ್ಲಿ ಕಾವಲುಗಾರರ ಅಜಾಗರೂಕತೆಗೆ ಕಾರಣವೇನು? ಅದನ್ನು ಒಂದು ವಿಶೇಷ ಸಮಿತಿಯನ್ನು ನೇಮಿಸಿ ತನಖಿಮಾಡಬೇಕು–ಎಂದು ಬರೆಯತೊಡಗಿದುವು. ನಾನು ಯುರೋಪಿಗೆ ಬಂದಾಗ, ಸಾರ್ವಜನಿಕರ ಅಭಿಪ್ರಾಯಕ್ಕೆ ತಲೆವಾಗಿ, ಸರಕಾರ ಸಮಿತಿಯನ್ನು ರಚಿಸಿಯೂ ಆಗಿತ್ತು. ಅದರ ಪರಿಣಾಮವಾಗಿ ಕೆಲವರಾದರೂ ಹೊಣೆಗಾರ ಜೈಲು ಅಧಿಕಾರಿಗಳು ತಮ್ಮ ಕೆಲಸ ಕಳೆದುಕೊಳ್ಳುವುದೂ ಖಂಡಿತ.

ನಮ್ಮ ನಾಡಿನಲ್ಲಿ-ನಮ್ಮ ಕೇಂದ್ರ ಪಾರ್ಲಿಮೆಂಟಿನಲ್ಲೊ, ಪ್ರಾಂತೀಯ ಶಾಸನಸಭೆಗಳಲ್ಲೊ — ಸರಕಾರದಲ್ಲಿ ತುಂಬಿದ ಲಂಚಕೋರತನ, ಸಾರ್ವಜನಿಕ ಹಣದ ದುರಾಡಳಿತೆ, ದ್ರವ್ಯಾಪಹಾರ ಮೊದಲಾದ ಸಂಗತಿಗಳಲ್ಲಿ- ಅಧಿಕೃತ ಪ್ರತಿನಿಧಿಗಳೇ ಕೇಳುತ್ತಿರುವಂಥ ಪ್ರಶ್ನೆಗಳಿಗೆ ಅಧಿಕಾರದಲ್ಲಿರುವವರು ಕೊಡುವ ಉತ್ತರ, ಅವುಗಳ ತನಖಿಯನ್ನೂ ಮಾಡಲು ಹಿಂಜರಿದು, ಮುಚ್ಚುಮರಿಸುವ ವರ್ತನೆ-ಇವನ್ನೆಲ್ಲ ಕಂಡಾಗ, ಭಾರತಕ್ಕೂ ಇಂಗ್ಲೆಂಡಿಗೂ 7,000 ಮೈಲುಗಳ ದೂರವಿರುವುದು ನಿಜವೆಂದೇ ಅನಿಸುತ್ತದೆ.

ಸಾರ್ವಜನಿಕರ ಜೀವನದಲ್ಲಿ, ಸರಕಾರಗಳಲ್ಲಿ ನಾವು ಪ್ರಾಮಾಣಿಕತೆಗೆ ಎಷ್ಟು ಉನ್ನತ ಸ್ಥಾನಕೊಡುತ್ತೇವೆಯೋ, ಅಷ್ಟು ಸುಖಶಾಂತಿಗಳು ಪ್ರಜೆಗಳ ಪಾಲಿಗೆ. ಅದಿದ್ದರೇನೆ ರಾಮರಾಜ್ಯ; ಇಲ್ಲದ್ದು ಹರಾಮ ರಾಜ್ಯ.

## ೫. ಕಲೆಗಳ ಪರಿಚಯ.

ಇಂಗ್ಲಿಷ್ ಭಾಷೆಯ ಕವನ, ಕಾದಂಬರಿ, ನಾಟಕ, ವಿಮರ್ಶೆ ಮೊದಲಾದುವುಗಳ ಪರಿಚಯವುಳ್ಳವರಿಗೆ ಅಲ್ಲಿನ ಜನಗಳ ಮನಸ್ಸು ಎಂಥದು, ಅಂತರಂಗದ ಭಾವನೆಗಳು ಯಾವೆಲ್ಲ ಮುಖಗಳನ್ನು ಪಡೆದಾವು ಎಂದು ಸ್ವಾಭಾವಿಕವಾಗಿಯೇ ಹೊಳೆಯಬಹುದು. ಆದರೆ ಒಂದು ಜನಾಂಗ, ಭಾವ ಪ್ರಕಟನೆಯ ಹಾದಿಯಲ್ಲಿ-ಒಂದು ಸಾಧನದಲ್ಲಿ ಮುಂದುವರಿದಷ್ಟೇ ಇನ್ನೊಂದು ಸಾಧನದಲ್ಲಿಯೂ ಮುಂದುವರಿಯಬೇಕೆಂಬ ನಿಶ್ಚಯವಿಲ್ಲವಷ್ಟೆ. ಕೆಲವೊಮ್ಮೆ ಒಂದು ದೇಶದಲ್ಲಿಯೇ, ಒಂದೊಂದು ಕಾಲಮಾನದಲ್ಲಿ ಒಂದೊಂದು ಕಲೆಯೇ ಹೆಚ್ಚಾಗಿ ಬೆಳೆಯುತ್ತದೆ; ಅದರ ಮೂಲಕವಾಗಿಯೇ ಜನತೆಯ ಮನಸ್ಸು ಪ್ರಕಟಗೊಳ್ಳುವುದು ಕಾಣಿಸುತ್ತದೆ. ಹೀಗಿದ್ದರೂ ಇಂದಿನ ಬ್ರಿಟನು ಸಾಮಾನ್ಯವಾಗಿ ಎಲ್ಲ ಕಲೆಗಳಲ್ಲೂ ಮುಂದುವರಿದ ದೇಶವಾಗಿಯೇ ಕಾಣಿಸುತ್ತದೆ; ಎಲ್ಲ ಬಗೆಯ ಕಲೆಗಳಿಗೂ ಜನತೆಯ ಆದರ, ಪ್ರೋತ್ಸಾಹಗಳು ದೊರೆಯುತ್ತಿರುವಂತೆ ಕಾಣುತ್ತದೆ. ಅವರ ಕಲಾಮಂದಿರಗಳು ಹೆಸರಾದುವು. ಲಂಡನ ನಗರದ-ನೆಶನಲ್ ಗೆಲರಿ, ಟೇಟ್ ಗೆಲರಿ, ವಾಲೆಸ್ ಗೆಲರಿ ಮೊದಲಾದುವು ಪಾಶ್ಚಾತ್ಯ ಕಲಾಪ್ರಿಯರ ಯಾತ್ರಾಸ್ಥಳಗಳಾಗಿವೆ. ನಮಗೆ ಸಾಹಿತ್ಯದ ಪರಿಚಯ ದೂರದಿಂದ ಆಗುವುದು ಸಾಧ್ಯವಾದರೂ, ಇನ್ನೊಂದು ದೇಶದ ಚಿತ್ರ, ಶಿಲ್ಪ, ವಾಸ್ತು, ಗೀತ, ನೃತ್ಯ ಮೊದಲಾದುವುಗಳ ನಿಕಟ ಪರಿಚಯವಾಗಲು ಆಯಾಯ ದೇಶಗಳಿಗೇನೆ ಹೋಗುವುದು ಅನಿವಾರ್ಯವಾಗುತ್ತದೆ. ಬ್ರಿಟನು ಅಂಥೆಲ್ಲ ಸಂಪತ್ತುಳ್ಳ ದೇಶವೇ ಸರಿ.

ಟ್ರಫಾಲ್ಗರ್ ಚೌಕದ ಎದುರಿಗಿರುವ ಒಂದು ವಿಶಾಲವಾದ ಸೌಧದಲ್ಲಿ ಅವರ ರಾಷ್ಟ್ರೀಯ ಚಿತ್ರಾಲಯ (ನೆಶನಲ್ ಗೆಲರಿ) ಸ್ಥಾಪಿತವಾಗಿದೆ. ಇದರಲ್ಲಿ ಹೆಚ್ಚಾಗಿರುವುದು ಯುರೋಪಿನ ಮಧ್ಯಯುಗದ ಚಿತ್ರಗಳ ಸಂಗ್ರಹ. ಯುರೋಪಿನ ಅನೇಕ ದೇಶಗಳ ಕಲಾವಿದರ ಕೃತಿಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಈ ಚಿತ್ರಶಾಲೆಯ ರಚನೆಯು ಚೆನ್ನಾಗಿದೆ. ಪ್ರತಿಯೊಂದು ಕೋಣೆಯೂ ದೊಡ್ಡ ಪ್ರಮಾಣದ್ದು; ಅವುಗಳ ಮಾಡುಗಳಿಗೆ ಗಾಜಿನ ಹೊದ್ದಿಕೆಯಿದ್ದು ಎಂಥ ಮುಗಿಲು ಕವಿದ ದಿನಗಳಲ್ಲೂ-ಮಂದಿರದ ಗೋಡೆಗಳ ಮೇಲೆ ತೂಗಿರುವ ಚಿತ್ರಗಳ ಮೇಲೆ ಬೆಳಕು ಬೀಳುವ ಮಾದ

ರಿಯ ರಚನೆಯಾಗಿದೆ. ಈ ಮಂದಿರದ ಗೋಡೆಯನ್ನು ಸೊಗಸಾದ ಅರಿವೆಗಳಿಂದ ಮುಚ್ಚಿ ದೂರದೂರಕ್ಕೆ ಚಿತ್ರಗಳನ್ನಿರಿಸಿದ್ದಾರೆ. ವಿರಾಮವಾಗಿ ಅವನ್ನು ನೋಡಲು ಬಯಸುವವರಿಗೆ—ಎದುರಿಗೆ ಸುಖಾಸನಗಳನ್ನೂ ಒದಗಿಸಿದ್ದಾರೆ. ಅಲ್ಲಿ ಪ್ರದರ್ಶನಕ್ಕಿಟ್ಟಿರುವ ಚಿತ್ರಗಳ ಸಂಖ್ಯೆಯೂ ಒಂದೆರಡಲ್ಲ, ಸಾವಿರಾರು.

ಯುರೋಪಿನ ಚಿತ್ರಕಲಾವೈಭವ ತೊಡಗುವುದೇ ಸುಮಾರು 1400–1,500ನೆಯ ಕಾಲದಿಂದ. ಇಲ್ಲಿ, ವೇನಿಸಿನ ಪ್ರಸಿದ್ಧ ಚಿತ್ರಕಾರ ಪಾವ್ಲೊ ವೆರೊನೀಸನ ಹಲವು ಉಜ್ವಲ, ಭವ್ಯ ಚಿತ್ರಗಳನ್ನು ಕಂಡೆ. ವೇನಿಸಿನ ಕಾಲುವೆ, ಸೌಧ, ಆವರಣ, ಬಾನು, ನೆಲ, ಜಲ, ನೆರಳು, ಬೆಳಕುಗಳನ್ನು ಅನಂತ ಸ್ವರೂಪಗಳಲ್ಲಿ ಬರೆದ ಕೆನಲಿಟೋವಿನ—ಹಲವಾರು ಚಿತ್ರಗಳು ಇಲ್ಲಿವೆ. ಇಲ್ಲಿರುವಷ್ಟು ಸಂಖ್ಯೆಯಿಂದ ಅವನ ಚಿತ್ರಗಳನ್ನು ನಾನು ಇನ್ನೆಲ್ಲಿಯೂ ಕಾಣಲಿಲ್ಲ. ಅವನ್ನು ನಾನಿಲ್ಲಿ ನೋಡಿದುದರಿಂದಲೇ ವೇನೀಸು ನಗರವನ್ನು ಕಾಣುವ ಆಸೆ ನನ್ನಲ್ಲುಂಟಾಯಿತು. ಇನೊಬ್ಬ ವೇನಿಸು ನಗರದ ಚಿತ್ರಕಾರ, ಚಿತ್ರಕಾರರಲ್ಲಿ ದೈತ್ಯನೆನಿಸಿರುವ–ಟೈಟನ್. ಅವನ ಕೆಲವೊಂದು ಹಿರಿಯ ಚಿತ್ರಗಳೂ ಇಲ್ಲಿವೆ.

ಹಾಲೆಂಡಿನ ಹಲವಾರು ಚಿತ್ರಕಾರರ ಸುಂದರ ಚಿತ್ರಗಳು ಇಲ್ಲಿವೆ. ಆ ಜನಗಳು ಇಂಗ್ಲೆಂಡಿನಂತೆ ಮುಗಿಲು ಕವಿದ ನಾಡಿನವರು. ಅವರ ನೆಲ–ಸಮತಟ್ಟಾದುದು; ಬಣ್ಣಗಳಲ್ಲಿ ತೀಕ್ಷ್ಣತೆಯಿಲ್ಲದುದು. ಅವರ ಸಂಪತ್ತು–ಕಡಲು, ಬಯಲು, ದನಕರುಗಳು. ಈ ವಸ್ತುಗಳಿಂದ ಅನೇಕ ಬಗೆಯ ಮನೋವಿಲಾಸಗಳಿಗೆ ರೂಪನ್ನು ಕೊಟ್ಟ ಹಲವಾರು ಚಿತ್ರಗಳು ಇಲ್ಲಿ ಕಾಣಸಿಗುತ್ತವೆ.ಬೆಳಕು ತುಂಬಿ ಹರಿದು,ಬಣ್ಣಗಳ ತೀಕ್ಷ್ಣ ವ್ಯತ್ಯಾಸವಾಗದೊಂದು ನಾಡಿನಲ್ಲಿ–ಮುಸುಕಿದ ಮುಗಿಲುಗಳು, ನೆಲದ ಹಸರು, ಚಳಿಗಾಲದ ಹಿಮ, ಕಡಲು ನೀರಿನ ನೀಲ, ನೀಲಜನ್ಯ ವಿವಿಧ ವರ್ಣಗಳು, ತೇಲುವ ನಾವೆಗಳು ಸಾಮಾನ್ಯ ಜನಜೀವನದೊಂದಿಗೆ ಎಂಥ ಶಾಂತ ರಾಗಾಲಾಪಗಳಿಗೆ ಎಡೆಕೊಟ್ಟಾವು ಎಂಬುದನ್ನು ಅವು ಅರ್ಥವತ್ತಾಗಿ ಬಣ್ಣಿಸುತ್ತವೆ. ಡಚ್ ಚಿತ್ರಕಾರರಲ್ಲಿ ಅಗ್ರಗಣ್ಯನೆನಿಸಿದ, ಪ್ರಪಂಚದ ಚಿತ್ರಕಾರರಲ್ಲೇ ಉನ್ನತ ನಿಲುವೆಯನ್ನು ಪಡೆದ ರೆಂಬ್ರಾಂಡನ ಕೃತಿಗಳೂ ಇಲ್ಲಿವೆ. ಆತ ಪ್ರಬುದ್ಧಾವಸ್ಥೆಯಲ್ಲಿ ಬರೆದ–ಆತ್ಮಚರಿತ್ರೆಯನ್ನೇ ತನ್ನ ಮುಖ, ಕಣ್ಣುಗಳಿಂದ ಹೊರಸೂಸು

ವಂತಿರುವ ಅವನ ಸ್ವ-ರೂಪ ಚಿತ್ರಕೃತಿಯೊಂದು ಇಲ್ಲಿದೆ. ರೆಂಬ್ರಾಂಡ್ ತನ್ನ ಬಣ್ಣಗಳನ್ನು–ಶ್ರೀಮಂತರನ್ನು ಹೊಗಳಲು ಬಳಸಿದವನಲ್ಲ. ಅವರ ಮುಂದೆ ಯಾಚಕನಾಗಿ ಎಂದೂ ನಿಂತವನಲ್ಲ. ಬಣ್ಣಗಳು ಮಾನವನ ಆತ್ಮವನ್ನೇ ಚಿತ್ರಿಸುವ ಸಾಧನಗಳೆಂದು ತಿಳಿದವನವನು. ಅವನ ಚಿತ್ರಗಳಲ್ಲಿ-ಉಡುಗೆ,ಶರೀರ, ಹಿನ್ನೆಲೆಯೊಂದೊಂದೂ ನೆರಳಲ್ಲಿ ಕಾಣುವ ವರ್ಣ ಪ್ರಭೇದಗಳಿಂದ ಸೂಕ್ಷ್ಮ ಹವೆಯಂತೆ ತೇಲುತ್ತವೆ. ಆ ಹವೆಯು ವ್ಯಕ್ತಿಯ ಶೀಲ ಸ್ವಭಾವಗಳನ್ನು ಚಿತ್ರಿಸುವ ಶಕ್ತಿಯಂತಿರುತ್ತದೆ. ಅವನ ಬಾಳು ಕಹಿಯಾದ ಅನುಭವಗಳಿಂದ, ಸಾಮಾಜಿಕ ತಿರಸ್ಕಾರಗಳಿಂದ ತುಂಬಿಕೊಂಡಿದ್ದರೂ–ಅದರಿಂದ ತನ್ನ ಆತ್ಮವನ್ನು ಕಹಿಗೊಳಿಸಿಕೊಳ್ಳಲಿಲ್ಲ. ಬದಲು ಅದನ್ನು ಕಹಿ, ಸಿಹಿಗಳಿಗಿಂತಲೂ ಮೇಲಕ್ಕೆ ಒಯ್ದು–ಸುತ್ತಣ ಪ್ರಪಂಚವನ್ನು ಆತ್ಮವಿಶ್ವಾಸ, ಧೃತಿ, ಧೈರ್ಯಗಳಿಂದ ಕಂಡನು. ಅವನ ಈ ಆತ್ಮಚಿತ್ರವು, ಅವನ ಈ ಎಲ್ಲ ಗುಣಗಳನ್ನು ಎಷ್ಟು ಸುಂದರವಾಗಿ, ಶಕ್ತಿಯುತವಾಗಿ ಚಿತ್ರಿಸುತ್ತದೆ ಬಲ್ಲಿರಾ?

ಇನ್ನು--ಸ್ಪೆಯಿನಿನ ಮುರಿಲ್ಲೋ, ವೆಲಾಸ್ಕ್ವರು ಬರೆದ ಅನೇಕ ಭಾವಚಿತ್ರಗಳಿವೆ. ಗ್ರೀಸಿನಲ್ಲಿ ಹುಟ್ಟಿ, ಸ್ಪೆಯಿನಿನ ಬಣ್ಣಬೆಡಗುಗಳನ್ನು ಆಸ್ವಾದಿಸಿ, ತನ್ನ ಸ್ವಂತ ನಿಲುಮೆಯ ನೋಟದಿಂದ–ಅನೇಕ ಚಿತ್ರಕೃತಿಗಳನ್ನು ಬರೆದ ಎಲ್ ಗ್ರೆಶೋ ಎಂಬವನ ಕೆಲವು ಮೂಲಕೃತಿಗಳಿವೆ. ಗ್ರೇಷೋ ವಸ್ತುಗಳನ್ನೂ ವ್ಯಕ್ತಿಗಳನ್ನೂ ತುಸು ಜಗ್ಗಿ ನಿಡಿದಾಗಿಸ್ಪಟ್ಟವರಂತೆ ಕಾಣುವ ರೀತಿಯಲ್ಲಿ ಚಿತ್ರಗಳನ್ನು ಬರೆದವನು.

ಇವರಂತೆಯೇ ಹೆಸರಾದ ರೂಬೆನ್ಸ್, ಜಾನ್‌ವಾನ್ ಇಕ್ ಮೊದಲಾದವರ ಹಲವು ಕೃತಿಗಳೂ, ಫ್ರೆಂಚ್ ಚಿತ್ರ ಕ್ರಾಂತಿಯುಗದವರಾದ–ಮೆನೆಟ್, ಮೊನೆಟ್, ರಿನಾಯರ್, ಸಿಜಾನರಂಥ ಹಲವು ಚಿತ್ರಕಾರರ ಕೃತಿಗಳನ್ನು ಇಲ್ಲಿನ ಗೆಲರಿಗಳಲ್ಲಿ ನಾವು ಕಾಣಬಹುದಾಗಿದೆ. ಇವರೆಲ್ಲರು ಯುರೋಪಿನ ಕಲಾವಿದರು; ಬ್ರಿಟನಿನಲ್ಲಿ ಹುಟ್ಟಿಬೆಳೆದವರಲ್ಲ. ಆದರೆ ಈ ದೇಶವೂ ಸಹ ಕೆಲವೊಂದು ಹಿರಿಯ ಕಲಾವಿದರನ್ನು ಪಡೆದ ದೇಶವಾಗಿದೆ. ಅನ್ಯ ದೇಶೀಯರಾದರೂ ಬ್ರಿಟನಿನ ಆಶ್ರಯದಿಂದ ಬೆಳೆದ ಹೊಗಾರ್ತ್, ವಿಸ್ಲ್ಲರ್ ಎಂಬವರು ಇಲ್ಲಿನವರೆನ್ನಬೇಕು. ದೇಶೀಯರಾದವರಲ್ಲಿ ಗೈನ್ಸ್‌ಬರೋ, ರೇನಾಲ್ಡ್ಸ್, ಟರ್ನರ್ ಮೊದಲಾದವರಿದ್ದಾರೆ.

ಈ ಚಿತ್ರಮಂದಿರದ ವಿಶಾಲವಾದ ಭಾಗವೊಂದನ್ನು—ಟರ್ನರ್

ಮತ್ತು ವಿಸ್ಲರರುಗಳ ಕೃತಿಗಳಿಗಾಗಿ ವಿಂಗಡಿಸಿಟ್ಟಿದ್ದಾರೆ. ವಿಸ್ಲರನ 'ಬಿಳಿಯು ಡುಗೆಯ ನಾರಿ' ಶ್ವೇತಾಂಬರಧಾರಿಯಾದ ಮಧ್ಯವಯಸ್ಸಿನ ಸರಳೆ. ಬಿಳಿ ಬಣ್ಣ ದಿಂದಲೇ ಆವರಿಸಿದ ಈ ಚಿತ್ರದಲ್ಲಿ ಹೂದಾನಿಯೊಂದರ ನೀಲ, ಬೀಸಣಿಗೆ ಯಲ್ಲಿನ ನೀಲಗಳ ಎರಡು ರತ್ನನೀಲ ಬಿಂದುಗಳಿಂದಾಗಿ "ಬಿಳಿ"ಯ ಸೊಗ, ಮಿದುತನ, ಲಾಲಿತ್ಯಗಳು ಈ ನಾರಿಯ ರೂಪಕ್ಕೊಂದು ವಿಶಿಷ್ಟ ಗುಣ ವನ್ನು ಪ್ರೇರಿಸುತ್ತವೆ. ರಸ್ಕಿನ್‌ನಂಥ ಕಲಾವಿಮರ್ಶಕನನ್ನು ಕೆರಳಿಸಿದ ಅವನ 'ನೀಲಿಮ ರಾತ್ರಿ' ಎಂಬ ಚಿತ್ರ ಇಲ್ಲಿದೆ. ಅದರಲ್ಲಿರುವುದೊಂದು ಸೇತು ವೆಯ ದಾರಿಯ ಭಾಗ; ಅದರ ಒಂದು ಸ್ತಂಭ, ತೀರ ದೂರದ ದಂಡೆಗಳು- ಅವೆಲ್ಲ ಕತ್ತಲನ್ನೇ ಸೂಚಿಸುತ್ತಿದ್ದು, ಕೆಲವು ದೂರದ ದೀಪಗಳು ಮಾತ್ರ ಮಿನುಗುತ್ತಿವೆ. ಆವೇನೆ ರಾತ್ರಿಯ ಆವರಣದಲ್ಲಿನ ವಿವಿಧ ನೀಲ, ನೀಲ ಕಪ್ಪುಗಳನ್ನು ವ್ಯತ್ಯಾಸಗೊಳಿಸಿ ತೋರಿಸುವಂತಿವೆ. ಅವು ಕೆರಳಿಸುವ ಭಾವನಾಲೋಕ ವಿಶೇಷವಾದುದು.

ವಿಸ್ಲರನು ವಸ್ತುಗಳ ಹೊರಗಿನ ರೂಪ ಮೋಹಿಸಿದವನಲ್ಲ; ವಸ್ತುಗಳ ಒಳಗಿನ ಆತ್ಮವನ್ನು ತಿಳಿಯಲು ಹೊರಟವನು. ಅವನಂತೆಯೇ ಹೊರಗಿನ ರೂಪವನ್ನು ಧಿಕ್ಕರಿಸಿ, ರೇಖೆಗಳನ್ನು ಮುರಿದು, ಒಳಗಡೆ ನಿಲುಕಿ ಕಾಣಲು ಹಂಬಲಿಸಿದವನು ಟರ್ನರ್. ಅವನು ಬರೆದ ಅನೇಕ ಚಿತ್ರಗಳಿವೆ. ಅವು ಗಳಲ್ಲಿ ಬಾಹ್ಯರೇಖೆ, ವರ್ಣಗಳೆಲ್ಲವೂ ಅಸ್ಪಷ್ಟ. ಅವನ ಮುಗಿಲು, ಬಾನು, ನೆಲ, ನೀರುಗಳು ಹಳದಿ, ಕೆಂಪು, ನೀಲ, ನೇರಳೆ ಮೊದಲಾದ ಬಣ್ಣಗಳಿಂದ ಹಿಮದ ಹೊಗೆಯಂತೆ, ಇಡಿಯ ದೃಶ್ಯವನ್ನೊಂದಾಗಿಸುತ್ತವೆ. ಆ ಬಣ್ಣಗಳ ತೆರೆಯ ಹಿಂದಿರುವ ನಿಸರ್ಗದ ಭಾವವೇನು, ಅಂತರಂಗವೇನು — ಎಂದು ಪ್ರಕಟವಾಗುತ್ತವೆ. ಇಂಥ ಚಿತ್ರಗಳೆಲ್ಲವು ರೂಢಿಯನ್ನೂ ಹಳೆಯ ಸಂಪ್ರದಾಯವನ್ನೂ ಮುರಿದು ಮುಂದೆ ಬಂದ ಶೈಲಿಗಳು. ಅವನ್ನು ಮೆಚ್ಚುವುದೂ ಸುಲಭವಲ್ಲ. ಏಕೆಂದರೆ ಅವುಗಳಲ್ಲಿ ಶೈಲಿಯ ಮೋಹಕತೆಯಾಗಲಿ, ಬಾಹ್ಯ ರೂಪದ ಸೊಗಸಾಗಲಿ ಇರುವುದಿಲ್ಲ. ಕಲಾವಿದನ ಉದ್ದೇಶ, ಮನೋ ಧರ್ಮಗಳನ್ನು ತಿಳಿದ ಮೇಲೆಯೇ ಇವುಗಳ ಮೇಲೆ ಅಭಿಮಾನ ಬರಬೇಕು.

ಆದರೂ ನಾನೀ ಕೊಟಡಿಗಳಲ್ಲಿ ಅಲೆಯುತ್ತಿದ್ದಾಗಲೇ ಹತ್ತೆಂಟು ಸಾಮಾನ್ಯ ಉಡುಗೆಯ ಸ್ತ್ರೀಯರು ಬಂದು, ತುಂಬ ಹೊತ್ತು ಅವನ್ನು ನಿರೀಕ್ಷಿಸಿ, ನೋಡಿ, ಮೆಚ್ಚಿಹೋದುದು ಕಂಡಿತು. ಅವರಲ್ಲಿ ಕೆಲವರು

ಹೆಚ್ಚಿನ ಶಿಕ್ಷಣ ಪಡೆಯದ ಹಳ್ಳಿಯವರಾಗಿಯೂ ಕಾಣಿಸಿದರು. ಆದರೆ - ಅಂಥ ಚಿತ್ರಗಳನ್ನು ಎವೆತೆಗೆಯದೆ ನಿಂತುನೋಡಲು, ಅವರು ಸ್ವಲ್ಪವಾದರೂ ಟರ್ನರರನ ವಿಚಾರದಲ್ಲಿ ಓದಿ ತಿಳಿದವರೆಂದೇ ನನಗನಿಸಿತು. ಅವರ ಸಂಸ್ಕೃತಿಯ ಮಟ್ಟವು ನಾನೆಣಿಸಿದಷ್ಟು ಗ್ರಾಮೀಣವಾಗಿದ್ದಿರಲಾರದು.

ಇಂಗ್ಲೆಂಡಿನವರಾದ ಗೈನ್ಸ್‌ಬರೊ, ರಿನಾಲ್ಡ್ಸ್‌ರುಗಳ ಹಲವಾರು ಚಿತ್ರ ಕೃತಿಗಳಿವೆ ಇಲ್ಲಿ. ಇವರು ಇಂಗ್ಲೆಂಡಿನ ಶ್ರೀಮಂತ ಸಮಾಜದ ಆಶ್ರಯವನ್ನು ಪಡೆದವರಾದುದರಿಂದ--ಅಂಥ ಸಮಾಜದ ವ್ಯಕ್ತಿಗಳ ಸೌಂದರ್ಯವನ್ನೂ, ಉಡುಗೆಗಳ ಬೆಡಗನ್ನೂ ಧಾರಾಳವಾಗಿ, ಆಕರ್ಷಕವಾಗಿ ಚಿತ್ರಿಸಿದ್ದಾರೆ.

ಈ ಚಿತ್ರಶಾಲೆಯಲ್ಲಿ ನಾವು ಒಂದೆರಡು ದಿನಗಳಲ್ಲಿ ನೋಡಿಮುಗಿಸದಷ್ಟು ಸಂಖ್ಯೆಯಲ್ಲಿ ಉತ್ತಮ ಚಿತ್ರಗಳಿವೆ. ಹಾಗೆಂದು ನನ್ನೀ ಬರಹವನ್ನು ಬೆಳೆಯಿಸುವುದು ಶಕ್ಯವಿಲ್ಲ. ಈ ನೆಶನಲ್ ಗೆಲರಿಯಲ್ಲಿ ಹಳಬರ ಚಿತ್ರಗಳನ್ನು ನಾವು ಕಾಣಬಹುದಾದರೆ, ಹೊಸಬರ ಚಿತ್ರಗಳನ್ನು ನೋಡಲು ಥೇಮ್ಸ್ ನದಿ ದಂಡೆಯಲ್ಲಿರುವ 'ಟೇಟ್ ಗೆಲರಿ'ಗೆ ಹೋಗಬಹುದು. ಇದು ಲಾರ್ಡ ಟೇಟ್ ಎಂಬಾತನು ಮಾಡಿದ ಖಾಸಗಿ ಸಂಗ್ರಹ; ಇಂದದು ರಾಷ್ಟ್ರದ ಚಿತ್ರ ಸಂಗ್ರವೂ ಆಗಿದೆ. ಈ ಕಟ್ಟಡವು ಸುಂದರವೂ ಭವ್ಯವೂ, ಹಿರಿದೂ ಆದ ಕಟ್ಟಡವಾಗಿದೆ.

ಈ ಮಂದಿರದಲ್ಲಿ ನನಗೆ ಬ್ರಿಟನಿನ ಕೆಲವೊಂದು ಆಧುನಿಕ ಶಿಲ್ಪಗಳ ಮಾದರಿಯನ್ನು ಕಾಣುವುದಕ್ಕೆ ಸಾಧ್ಯವಾಯಿತು. ಫ್ರೆಂಚ್ ಶಿಲ್ಪಿಯಾದ ರೋಡಿನ್ ಮಹಾಶಯನ ನಾಲ್ಕಾರು ಶಿಲೆ, ಕಂಚಿನ ಪ್ರತಿಮೆಗಳನ್ನು ಸಂಗ್ರಹಿಸಿ ಇರಿಸಿದ್ದಾರೆ. ತೀರ ಆಧುನಿಕರೆನಿಸುವ ಇಂಗ್ಲೆಂಡಿನ ಎಪ್ಸ್ಟೀನ್ ಮೊದಲಾದವರ ಕೆಲವು ಕೃತಿಗಳೂ ಇಲ್ಲಿವೆ. ಇನ್ನು ಶಿಲ್ಪವನ್ನು, ತಾತ್ವಿಕವಾಗಿ (abstract) ಚಿತ್ರಿಸಲು 'ಪ್ರಯತ್ನಿಸಿರುವ ತೀರ ನವೀನರ ಕೃತಿಗಳಿವೆ. ಅವು ತುಂಬ ಕುತೂಹಲವನ್ನೇನೋ ಕೆರಳಿಸುತ್ತವೆ. ರೋಡಿನ್ ಮೊದಲಾದವರ ಶಿಲ್ಪಕೃತಿಗಳು ನಮ್ಮ ಮನಸ್ಸನ್ನು ಸೆರೆಹಿಡಿದು ಏನನ್ನೋ ತಿಳಿಸಿ ಹೇಳುವಂತೆ ಇಂಥವು ಹೇಳಲಾರವು. ಇವುಗಳಲ್ಲಿ ಲಾಲಿತ್ಯ ಕಾಣಬಹುದು, ಚಮತ್ಕಾರಿಕತೆಯೂ ಉಂಟು. ಆದರೆ ಮುಂದೇನು--ಎಂದು ದಾರಿಗಾಣದಂತೆ ನಮ್ಮನ್ನು ನಿಲ್ಲಿಸಿಬಿಡುತ್ತವೆ.

ಲಂಡನ್ ನಗರದ ಮತ್ತೊಂದು ಹೆಸರಾದ ಚಿತ್ರ ಸಂಗ್ರಹಾಲಯವು

ಸರ್ ಹೆನ್ರಿ ವಾಲೇಸರವರ ಸಂಗ್ರಹ. ಅಲ್ಲಿ ಯುರೋಪಿನ ಅನೇಕ ಕಲಾವಿದರ ಚಿತ್ರಗಳ ಸಂಗ್ರಹವಿದೆ. ಅದರ ಜತೆಗೆ ಬ್ರಿಟನಿನ ಅನೇಕ ಶ್ರೀಮಂತ ಮನೆತನಗಳಲ್ಲಿ ಹಿಂದೆ ಬಳಸಿದ–ಗಾಜು, ಪಾತ್ರೆ, ಆಸನ, ಗಡಿಯಾರ ಮೊದಲಾದ ವಿಶೇಷವಾದ ಮನೋಹರವಾದ ವಸ್ತುಗಳ ಸಂಗ್ರಹವಿದೆ. ಇನ್ನೂರು ಮುನ್ನೂರು ವರ್ಷಗಳಿಂದಲೂ ನಡೆಯುತ್ತ ಬಂದಿರುವ ಹಳೆಗಾಲದ ಗಡಿಯಾರಗಳಿವೆ. ಉತ್ತಮ ಕೆತ್ತನೆಯನ್ನು ತೋರಿಸುವ ಬ್ರಿಟಿಷ್ ಬಡಗಿಯರ ಕೈವಾಡವಾದ ಕುರ್ಚಿ, ಮೇಜು ಮೊದಲಾದುವುಗಳಿವೆ. ಅದರಂತೆ ಮೂರು ನಾಲ್ಕು ಶತಮಾನಗಳ ಹಿಂದಿನ–ವರ್ಣರಂಜಿತ, ಚಿತ್ರರಂಜಿತವಾದ ಅನೇಕ ಪಿಂಗಾಣಿಯ ಪಾತ್ರೆಗಳ ಸಂಗ್ರಹವಿದೆ. ಅಲ್ಲಿನ ಮತ್ತೊಂದು ಕೋಣೆಯಲ್ಲಿ ಮಧ್ಯ ಯುಗದ ವೀರರ—ಯುದ್ಧ ಕವಚ, ಆಯುಧ, ಶಿರಸ್ತ್ರಾಣ ಮೊದಲಾದುವುಗಳ ಸಂಗ್ರಹವಿದೆ. ಇವುಗಳನ್ನಿರಿಸಿದ ಕೊಟಡಿಯ ಮಗ್ಗುಲ ಮನೆಯಲ್ಲಿ—ಚೀನ, ಜಪಾನು, ಭಾರತ ದೇಶಗಳ ಹಳೆಗಾಲದ ಯೋದ್ಧರು ಬಳಸುತ್ತಿದ್ದ ಯುದ್ಧೋಪಕರಣಗಳೂ ಪ್ರದರ್ಶನಕ್ಕಿವೆ.

ನಾನು ಇಂಗ್ಲೆಂಡಿಗೆ ಬಂದ ಕಾಲ, ಸಾಮಾನ್ಯವಾಗಿ ಅನೇಕ ವಾರ್ಷಿಕ ಚಿತ್ರ ಪ್ರದರ್ಶನಗಳು ಅಲ್ಲಲ್ಲಿ ಜರುಗುವ ವೇಳೆಯಾಗಿತ್ತು. ಆದುದರಿಂದ ನನಗೆ ಕೆಲವೊಂದು ಪ್ರದರ್ಶನಗಳೂ ಕಾಣಸಿಕ್ಕಿದುವು. ಪಿಕೆಡಿಲ್ಲಿ ನಮೀಪದ ಬರ್ಲಿಂಗ್‌ಟನ್ ಹೌಸಿನಲ್ಲಿ ರಾಯಲ್ ಎಕಾಡೆಮಿಯವರು ಏರ್ಪಡಿಸಿದ ಆಧುನಿಕ ಚಿತ್ರಕಾರರ ಪ್ರದರ್ಶನವಿತ್ತು. ಅಲ್ಲಿ ಆರಿಸಿ ತೋರಿಸಿದ ಚಿತ್ರಗಳ ಸಂಖ್ಯೆಯೇ ಎರಡು ಮೂರು ಸಾವಿರಗಳಾದಾವು. ಈ ಸಂಖ್ಯೆಯಾರಿಗೂ ಹೆಮ್ಮೆಯನ್ನು ಕೊಟ್ಟೀತು. ಚಿತ್ರಗಳಲ್ಲಿ—ತೈಲವರ್ಣ, ಜಲವರ್ಣ, ಟೆಂಪ್ರಾ–ಮೂರು ಜಾತಿಯವೂ ಇದ್ದುವು. ಪ್ರಾಚೀನರಂತೆ ಬಹು ದೊಡ್ಡ ಪ್ರಮಾಣದ ಚಿತ್ರಗಳನ್ನೇನೋ ಪ್ರದರ್ಶಿಸಿರಲಿಲ್ಲ. ಇಂಗ್ಲೆಂಡಿನ ಈ ಕಲಾವಿದರು–ತಮ್ಮ ವಿಷಯ, ವಸ್ತುಗಳನ್ನು ಜೀವನದ ಎಲ್ಲ ಮುಖಗಳಿಂದ ಆರಿಸಿಕೊಂಡುದು ಕಾಣುತ್ತದೆ. ಅವರ ಶೈಲಿಗಳಲ್ಲೂ ತುಂಬ ವೈವಿಧ್ಯ ಕಾಣಿಸುತ್ತದೆ. ಹಳೆಯ ಪರಂಪರೆಯವರಿದ್ದಾರೆ; ಕ್ರಾಂತಿಕಾರರಿದ್ದಾರೆ. ನಾನು ನೋಡಿದ ಕೆಲವು ತಾದ್ರೂಪಿಕ ಚಿತ್ರಗಳಲ್ಲಿ—ಮನೆಯೊಳಗಿನ ನಿರ್ಜೀವ ವಸ್ತುಗಳ ಚಿತ್ರಗಳಿದ್ದುವು. ಅವು ಕೆಮರಕ್ಕೂ ಎಟುಕದ ತಾದ್ರೂಪಿಕ ರೂಪ, ಭಾವ, ಚೇತನಗಳನ್ನು—ನೆಲ, ಕುರ್ಚಿ, ಮೇಜು, ಪಾತ್ರೆಮೊದಲಾದುವು

ಗಳಿಂದ ಹೊರಡಿಸುವುದು ಕಂಡಿತು.

ಅಲ್ಲಿ ಪ್ರದರ್ಶಿತವಾದ ತೈಲಚಿತ್ರಗಳಲ್ಲಿ ಹಲವು ನಿಸರ್ಗದ ನೋಟಗಳಿದ್ದುವು. ಕೆಲವು ಚಿತ್ರಗಳಂತು ಹಳೆಯ ಡಚ್ ಚಿತ್ರಕಾರರು ಪ್ರದರ್ಶಿಸಿದ ಸೌಮ್ಯವರ್ಣ ವ್ಯತ್ಯಾಸಗಳನ್ನು ತೋರಿಸಿ, ಶಾಂತ ವಾತಾವರಣ ಸೃಷ್ಟಿಸುವುದರಲ್ಲಿ ಯಶಸ್ವಿಯಾಗಿದ್ದುವು. ಕುಂಚ್ಚಿನ ಸೆಳೆತಗಳು--ಹುಲ್ಲು, ಎಲೆ ಮೊದಲಾದುವುಗಳ ಸೂಕ್ಷ್ಮ ಘನತೆಯನ್ನು ಪುಷ್ಟವಾಗಿ ಚಿತ್ರಿಸುತ್ತಿದ್ದುವು.

ಈ ಪ್ರದರ್ಶನದಲ್ಲಿ ಇಷ್ಟೆಲ್ಲ ಚಿತ್ರಗಳನ್ನು ಆರಿಸಿ ಪ್ರದರ್ಶಿಸುವುದಕ್ಕೆ - ದೇಶದಲ್ಲಿ ಅನೇಕಾನೇಕ ಚಿತ್ರಪ್ರಿಯರು ದುಡಿಯದಿದ್ದರೆ ಸಾಧ್ಯವೇ?

ಈ ಚಿತ್ರಪ್ರದರ್ಶನ ಮಂದಿರದ ಇನ್ನೊಂದು ಭಾಗ ಹೆಚ್ಚಿನ ಆಕರ್ಷಣೆಯುಳ್ಳದಾಗಿತ್ತು. ನಾನು ಹೋದ ವೇಳೆಯಲ್ಲಿ ಅಲ್ಲಿ ಇಟೆಲಿಯನ್ ಚಿತ್ರಕಾರನೂ ವಿಜ್ಞಾನಿಯೂ ಆಗಿದ್ದ ಲಿಯನಾರ್ಡೊವಿನ ವಿಶೇಷ ಪ್ರದರ್ಶನವಿತ್ತು. ಅವನ ೫೦೦ನೆಯ ವರ್ಷದ ಹಬ್ಬವನ್ನು ಈ ವರ್ಷ ಯುರೋಪಿನ ಮುಖ್ಯ ನಗರಗಳೆಲ್ಲಾ ಆಚರಿಸಿದುವು. ಅವನ ಬರಹ ಮತ್ತು ಚಿತ್ರಗಳ ವಿಶೇಷ ಪ್ರದರ್ಶನಗಳನ್ನು ಹಲವು ನಗರಗಳಲ್ಲಿ ಮಾಡಿದರು. ಲಂಡನಿನ ಈ ಉತ್ಸವಕ್ಕೆ ಪೇರಿಸ್, ರೋಮ್ ಮೊದಲಾದ ಊರುಗಳಿಂದ ಅವನ ಮೂಲ ಚಿತ್ರಕೃತಿಗಳು ಎರವಲಾಗಿ ಬಂದಿದ್ದುವು. ಆತ ಬರೆದ 'ಮೊನಾ ಲೀಸಾ,' ಸ್ಕ್ಯಾಲಾ, ಯೇಸುವಿನ ಕೊನೆಯ ಭೋಜನ-ದಂಥ ಚಿತ್ರಗಳನ್ನು ನಾವು ತಾಸು ತಾಸುಗಳ ತನಕ ನೋಡಿ ಹಿಗ್ಗಬಹುದಾಗಿದೆ. ಈತ ವಿಶೇಷ ಕನಸುಗಾರ. ಅವನ ಮನಸ್ಸಿನ ಅಂಬು ಸೀಳದಂಥ ಲಕ್ಷ್ಯವಿಲ್ಲ. ವಿಜ್ಞಾನದ ವಿಷಯದಲ್ಲಿ ಅವನ ತೀಕ್ಷ್ಣ ಮನಸ್ಸು ಎಲ್ಲಿಯ ತನಕ ಚಾಚಿತ್ತು ಎಂದು ತೋರಿಸಲು-ಅವನ ಕೈಬರಹದ ಆರೆಂಟು ಗ್ರಂಥಗಳನ್ನು ಅಲ್ಲಿ ಪ್ರದರ್ಶಿಸಿದ್ದರು. ಒಂದೊಂದು ಗ್ರಂಥದಲ್ಲಿ ನೂರಾರು ಪುಟಗಳು. ಒಂದೊಂದು ಹಾಳೆಯಲ್ಲೂ ಯಾವುದೋ ಒಂದು ವೈಜ್ಞಾನಿಕ ಕಲ್ಪನೆಯ ಚಿತ್ರವಿದೆ; ಆ ಸಂಬಂಧದ ವಿವರಗಳಿವೆ. ಶರೀರ ಶಾಸ್ತ್ರದ ವಿಷಯದಲ್ಲಿ ಆತ ಬರೆದ ಚಿತ್ರಗಳ ಸಂಖ್ಯೆಯೆಷ್ಟು! ಅಷ್ಟು ಹಿಂದೆಯೇ ಆತ ಶವವನ್ನು ಸಿಗಿದು ಒಳಗಿನ ಅವಯವ, ನರ, ಮಾಂಸ ಖಂಡ, ಎಲುಬುಗಳ ವಿಚಾರಗಳ ಹೆಚ್ಚಿನ ಜ್ಞಾನವನ್ನು ಸಂಗ್ರಹಿಸಿದ್ದನು. ಅಷ್ಟೇಯೆ? ವಿಜ್ಞಾನದ ವಿವಿಧ ಕ್ಷೇತ್ರಗಳಿಗೂ ಅವನ ಮನಸ್ಸು ಓಡಿತ್ತು. ಭೌತ ಶಾಸ್ತ್ರ ಅದರಲ್ಲಿ ಮುಖ್ಯವಾದುದು. ಅವನೇನೆ ಕಂಡ—

ಯಂತ್ರದ ಕನಸುಗಳಿದ್ದಾವೆ; ವಿವರಗಳಿದ್ದಾವೆ—ನೀರಿನ ಪಂಪುಗಳ ಚಿತ್ರ ವಿದೆ–ವಿಮಾನದ ವಿವರಗಳಿವೆ; ಏನೇನೋ ಸಂಶೋಧನೆಯ ವಿವರಗಳಿವೆ. ಪ್ರದರ್ಶನಕಾರರು–ಅವನ ಸೂಚನೆಯಂತೆ ರಚನೆಮಾಡಿದ ಯಂತ್ರಗಳನ್ನು ಅಲ್ಲಿ ಪ್ರದರ್ಶಿಸಿದ್ದರು. ವಿನ್ಸಿಯ ಮೇಧಾವಿತನಕ್ಕೆ, ಅದ್ಭುತ ಶಕ್ತಿಗೆ ಶರಣು ಹೊಡೆದು ನಾವು ಹೊರಗೆ ಬರುವಂತಾಗುತ್ತದೆ.

ಪಿಕೆಡಿಲ್ಲಿಯಲ್ಲೇ—ಇನ್ನೊಂದುಕಡೆ, ಇಂಗ್ಲೆಂಡಿನ ಬರಿಯ ಜಲ ವರ್ಣ (Water colour) ಚಿತ್ರಕಾರರದೇ ಒಂದು ಕಲಾಪ್ರದರ್ಶನ ಏರ್ಪ ಟ್ಟಿತ್ತು. ಅಲ್ಲಿಗೂ ಹೋಗಿ ನೂರಾರು ಚಿತ್ರಗಳನ್ನು ಕಂಡು ಬಂದೆ. ಇವು ಗಳನ್ನು ಕಂಡಾಗಲೆಲ್ಲ ಒಂದು ಬಗೆಯ ನಿರಾಶೆಯಾಗುತ್ತದೆ. ಎಷ್ಟು ನೋಡಿ ದರೂ ಮುಗಿಯದ ಕೆಲಸ! ಈ ಮೊದಲೇ ಯಾವುದಾದರೂ ಚಿತ್ರದ ಪೂರ್ವ ಪರಿಚಯ ಓದಿನಿಂದ ನಮಗಾಗಿದ್ದರೆ—ಆಗ ಅಂಥ ಚಿತ್ರಗಳ ಮುಂದೆ ತುಸುಹೊತ್ತು ನಿಂತು ನೋಡುತ್ತೇವೆ. ನೋಡಿ ದಣಿದ ನಾವು ಅನೇಕ ವನ್ನು ಉದಾಸೀನವಾಗಿಯೇ ನೋಡಿ ಸರಿಯುತ್ತೇವೆ. ಆದರೆ ವಿರಾಮ ಸಾಲದೆ, ಹೊರ ದೇಶದಿಂದ ಹೋಗಿರುವ ನಮಗೆ–ಇವನ್ನು ಕಾಣಲು ಅವ ಕಾಶ, ಆಯುಷ್ಯ, ಅನುಕೂಲ ಸಾಲದಾಯಿತೇ-ಎಂಬ ಚಿಂತೆಯುಂಟಾಗು ತ್ತದೆ. ಒಮ್ಮೆ ಬಂದು ಕೆಲವು ತಾಸುಗಳೊಳಗೆ ಅವನ್ನೆಲ್ಲ ನೋಡಿ ಮುಗಿಸುವ ಬದಲು, ವಿರಾಮದಲ್ಲಿ ಒಂದು ದಿನಕ್ಕೆ ಒಂದೋ ಎರಡೋ ಚಿತ್ರಗಳನ್ನು ನೋಡಿ ಸಂತೋಷಿಸುವ ಅವಕಾಶ, ಸಾಮೀಪ್ಯ ಇರಬಾರದೇ ಎನಿಸುತ್ತದೆ. ಹಾಗೆಂದು—ಲಂಡನಿಗೆ ಮೇಲಿಂದ ಮೇಲೆ ನಮಗೆ ಹೋಗಿ ಬರುವು ದಾದರೂ ಶಕ್ಯವೇ?

ಅವನ್ನೆಲ್ಲ ನೋಡಿ ಮುಗಿಸಿದ ಬಳಿಕ—ಎಲ್ಲ ವಿವರಗಳೂ ಮರವೆ ಯಾಗುತ್ತವೆ. ಒಟ್ಟು ಮೊತ್ತವಾಗಿ ಅನುಭವಿಸಿದಂಥ ಸುಖ, ಸಂತೋಷಗಳ ನೆನಪಷ್ಟೇ ಉಳಿಯುತ್ತದೆ.

ಬ್ರಿಟನಿನ ಒಂದು ಕಲಾಮುಖವನ್ನು ಕಂಡ ನನಗೆ, ಇನ್ನಿತರ ಮುಖ ಗಳನ್ನು ಕಾಣಲು ಆಸೆಯಾಗುವುದು ಸಹಜ. ಲಂಡನ್ ನಗರವೊಂದರಲ್ಲಿ ಯೇ ಹತ್ತೆಂಟು ನಾಟಕ ಶಾಲೆಗಳಿವೆ. ವರ್ಷವೆಲ್ಲ ಅವರು ಒಂದೊಂದೇ ನಾಟಕ ಪ್ರದರ್ಶನ ಮಾಡಿದರೂ ನೋಡುವ ಪ್ರೇಕ್ಷಕ ವರ್ಗವಿದೆ. ನಮ್ಮ ದೇಶದಲ್ಲಿ ಇಂದು ನಾಟಕ ಮಂಡಲಗಳ ಹೆಸರು ನಿರ್ನಾಮಗೊಳುತ್ತ ಬಂ

ವಿದೆ. ಅವುಗಳ ಸ್ಥಾನವನ್ನೆಲ್ಲ ಅಸಹ್ಯರೂಪಿ ಚಲಚ್ಚಿತ್ರಗಳು ಆವರಿಸಿ ಬಿಟ್ಟಾ ಯಿತು. ಚಲಚ್ಚಿತ್ರ ಮಂದಿರಗಳೂ ಇಂಗ್ಲೆಂಡಿನಲ್ಲಿ ಕಡಿಮೆ ಸಂಖ್ಯೆಯ ಲಿಲ್ಲ. ಅವುಗಳ ಎಡೆಯಲ್ಲಿ ಶೇಕ್ಸ್ಪಿಯರ್, ಶಾ ಮೊದಲಾದವರ ನಾಟಕ ಗಳು ಬದುಕಿ ಉಳಿಯಲು ಸಾಧ್ಯವೇ–ಎಂಬ ಯೋಚನೆ ನಮಗಾಗಬಹುದು. ಇಲ್ಲಿಗೆ ಬಂದ ಮೇಲೆ ಆ ಸತ್ಯ ಗೋಚರಿಸಿತು. ಸಂಸ್ಕಾರವಿರುವವರಿಗೂ, ಇಲ್ಲದವರಿಗೂ ಇರುವ ವ್ಯತ್ಯಾಸ ಬಹಳ. ಇರುವವರು ಮಾತ್ರ ತಮ್ಮ ಕಲೆ ಗಳನ್ನು ಉಳಿಸಿಕೊಳ್ಳಬಲ್ಲರು. ನಮ್ಮ ದೇಶದಲ್ಲಿ ಕಾಳಿದಾಸ, ಭಾಸರಂಥ ಹಿರಿಯ ನಾಟಕಕಾರರಾಗಿ ಹೋದರು. ಆದರೆ ಅವರ ನಾಟಕದ ಸಂಸ್ಕಾರ ನಮ್ಮ ಮೇಲುಂಟಾಗಿದೆಯೇ? ಅವನ್ನು ಆಡುವವರಿದ್ದಾರೆಯೇ? ನೋಡು ವವರಿದ್ದಾರೆಯೇ? ಅಂಥ ಸಂಸ್ಕಾರ ನಮ್ಮಲ್ಲಿ ಉಳಿದಿದ್ದರೆ ನಮ್ಮ ಇಂದಿನ ನಾಟಕಗಳು ಬೆಳೆಯುತ್ತಿದ್ದುವು; ಚಲಚ್ಚಿತ್ರ ಬಂದ ಮರುದಿನ ಅವು ಸಾಯ ಬೇಕಾಗಿರಲಿಲ್ಲ. ಡೊಂಬರಾಟವು ಒಂದು ಚಲಚ್ಚಿತ್ರ ಸಾಯಬಹುದಾದ ಪ್ರಮೇಯವೂ ಬರಲಾರದು. ಒಂದೊಂದು ಕಲೆಗೂ ತನ್ನದಾದ ಶಕ್ತಿಯಿದೆ; ಕರ್ತವ್ಯವಿದೆ. ನಾಟಕದ ಕೆಲಸವನ್ನು, ಅಷ್ಟೇ ಶಕ್ತಿಯಿಂದ ಚಲಚ್ಚಿತ್ರವು ಮಾಡಲಾರದು ಎಂದು ತಿಳಿಯಬಲ್ಲ ಸಂಸ್ಕಾರವಂತ ಜನರು ಮಾತ್ರ-ತಮ್ಮ ರಂಗಭೂಮಿಯನ್ನು ಉಳಿಸಿಕೊಂಡಾರು.

ಆಕಸ್ಮಿಕವಾಗಿ ಲಂಡನ್ ಹೊಕ್ಕು ಹೊರಡುವವನಿಗೆ, ನಾಟಕ ಶಾಲೆ ಗಳಲ್ಲಿ ಅವಕಾಶ ಸಿಗುವುದು ಕಷ್ಟ. ತೀರ ಹೆಚ್ಚಿನ ಬೆಲೆಯ ಟಿಕೇಟುಗಳು ಆಯಾ ದಿನಗಳಲ್ಲಿ ಸಿಗಬಹುದೋ ಏನೋ! ಹೆಚ್ಚಿನ ಟಿಕೇಟುಗಳು ಬಹು ಮುಂಚಿತವಾಗಿಯೇ ವಿಕ್ರಯವಾಗಿಬಿಡುತ್ತವೆ. ಶೇಕ್ಸ್ಪಿಯರನ ನಾಟಕ ಶಾಲೆಯಲ್ಲಿ ನಾಟಕ ನೋಡಲು ಬಯಸುವವರು ತಿಂಗಳಿಗೂ ಮುಂಚಿತವಾಗಿ ಜಾಗವನ್ನು ಕಾದಿರಿಸುವುದು ಸಾಮಾನ್ಯ ಸಂಗತಿ. ನಾನು ಅಲ್ಪಕಾಲವೇ ಈ ನಗರದಲ್ಲಿದ್ದುದರಿಂದ ಬರಿಯ ಎರಡು ನಾಟಕಗಳನ್ನು ಮಾತ್ರ ನೋಡುವುದು ಸಾಧ್ಯವಾಯಿತು. ಒಂದು-ಲಂಡನಿನ ಹೇ ಮಾರ್ಕೆಟ್ ಥಿಯೇಟರಿನಲ್ಲಿ ನ ಡೆದ ನಾಟಕ; ಇನ್ನೊಂದು-ಸ್ಟ್ರಾಫರ್ಡಿನಲ್ಲಾದ ಶೇಕ್ಸ್ಪಿಯರ್ ನಾಟಕ. ಉಳಿ ದವುಗಳಿಗೆ ಟಿಕೇಟು ದೊರಕಿಸಿಕೊಳ್ಳುವ ನನ್ನ ಪ್ರಯತ್ನ ಸಫಲವಾಗಲಿಲ್ಲ.

ಮೊದಲನೆಯದು ಸರಳ, ಆಧುನಿಕ ಗದ್ಯ ನಾಟಕ; ಹೆಸರನ್ನು ಭಾ ಷಾಂತರಿಸಿದರೆ "ಚಂದ್ರನ ನೀರು" (Waters of the moon) ಎಂದಾ

ಗುತ್ತದೆ. ನಾಟಕ ನೋಡಿದ ಬಳಿಕವೂ ನನಗೆ ನಾಟಕದ ಆಖ್ಯೆಯು ಅರ್ಥ ಹೊಳೆಯಲಿಲ್ಲ. ಈ ನಾಟಕವು ಮೂರಂಕದ ನಾಟಕ; ಕಾಲ, ಸ್ಥಳ, ಕ್ರಿಯೆ ಗಳೊಳಗೆ ಐಕ್ಯತೆಯುಳ್ಳ ಜಾತಿಯದು. ಕಥಾ ವಿಷಯ—ಯುರೋಪಿನ ವಿಶ್ರಾಂತಿ ಕೇಂದ್ರವೊಂದರ ಮನೆಯಲ್ಲಿ; ಬಡಜನರ ಮತ್ತು ಶ್ರೀಮಂತರ ನಡೆನುಡಿಗಳಲ್ಲಿ ಉಂಟಾದ ಸಂಪರ್ಕ, ಅದನ್ನು ಕುರಿತಾದ ಅನುರಕ್ತ, ಭಾವ ನಾಪರ ತೀರ್ಮಾನ.

ಆ ಮನೆಯಲ್ಲಿ ಒಂದು ಕಾಲದಲ್ಲಿ ಶ್ರೀಮಂತೆಯಾಗಿದ್ದು ಈಗೆಲ್ಲವನ್ನು ಕಳೆದುಕೊಂಡ ಮುದುಕಿಯೊಬ್ಬಳು ವಾಸಿಸುತ್ತಾಳೆ-ಮನೆಯಲ್ಲಿಅವಳ ಒಬ್ಬ ಹಂಗೇರಿಯನ್ ನಿರಾಶ್ರಿತ, ಇನ್ನೊಬ್ಬಳು ಕೆಲಸದಾಕೆ, ಅವನ ಮಗಳು, ಮಗ ಇರುತ್ತಾರೆ. ಕಿರಿಯರಿಬ್ಬರ ಸರಳ ಮನಸ್ಸಿಗೆ ಪ್ರತಿಯಾದ ಸ್ವಭಾವ, ಕೆಲಸ ದವಳದು. ಒಂದು ದಿನ ಅಲ್ಲಿಗೆ ಆಗಂತುಕರಾಗಿ ಒಬ್ಬ ಶ್ರೀಮಂತ ವಿಲಾಸಿನಿ ಅವಳ ಮಗಳು, ಪ್ರಿಯನೂ ಬಂದು—ವಿಚಿತ್ರ ಅಂದೋಲನವೆಬ್ಬಿಸುತ್ತಾರೆ. ನಿರಾಶ್ರಿತನು ಕೆಲಸದ ಹುಡುಗಿಯಲ್ಲಿ ಅನುರಕ್ತನಾಗಿದ್ದಾತ, ಬಂದ ವಿಲಾಸಿ ನಿಯ ಮೋಹಕ್ಕೊಳಗಾಗುತ್ತಾನೆ. ಆ ಸೇವಕಿಯ ಮಗಳಿಗೆ, ವಿಲಾಸಿನಿಯ ಮಗಳ ಮೇಲೆ ಅಭಿಮಾನವಿದ್ದುದು ಈ ಪ್ರೇಮಯದಿಂದ ಬದಲಾಗುತ್ತದೆ. ವಿಲಾಸಿನಿಯು ಹೊರಟು ಹೋಗುತ್ತಾಳೆ—ಎರಡು ದಿನಗಳ ಉದ್ವೇಗಭರಿತ ಜೀವನದಿಂದ ಮನೆಗೆ ಮನೆಯೇ ಅಲ್ಲೋಲ ಕಲ್ಲೋಲವಾಗುತ್ತದೆ. ಹೀಗೆ ಎರಡು ದಿನಗಳಲ್ಲಿ ತನ್ನ ಕಣ್ಣೆದುರಿಗೆ ನಡೆದ ಯಾವತ್ತು ಘಟನೆಗಳನ್ನು— ಸಹನೆ, ಅಸಹನೆ, ಅನಾದರ ಇವೇ ಮೊದಲಾದ ದೃಷ್ಟಿಗಳಿಂದ ಕಾಣುತ್ತ ಕುಳಿತವಳು ಮನೆಯೊಡತಿ. ಆ ಪಾತ್ರವನ್ನು ಬ್ರಿಟನಿನ ಪ್ರಸಿದ್ಧ ನಟಿ ಡೇಮ್ ಸಿಬಿಲ್ ಥಾರ್ನ್‌ಡೈಕ್ ವಹಿಸಿದ್ದಳು.

ನಾಟಕದ ತುರೀಯಾವಸ್ಥೆಯಲ್ಲಿ—ಹೊಸವರ್ಷದ ಗಳಿಗೆ ಸನ್ನಿಹಿತ ವಾದಾಗ, ಜನಗಳ ವಿಲಾಸ ಶೃಂಗಾರಗಳ ಅಮಲಿನೊಂದಿಗೆ ಕುಡಿತದ ಅಮ ಲೂ ಸೇರಿ, ಎಲ್ಲರೂ ಕುಣಿಯಲು ಹೊರಟಾಗ-ಈ ತನಕ ಶಿಲೆಯ ಸಂಯಮ ದಿಂದ ಕುಳಿತ ಮನೆಯೊಡತಿ, ಥಟ್ಟನೆ ಪಿಯಾನೋ ಮುಂದೆ ಹೋಗಿ, ಹೊಸ ವರ್ಷವನ್ನು ಸ್ವಾಗತಿಸುವ ಹಾಡನ್ನು ಬಾರಿಸಿದ ಆ ಒಂದು ನೋಟ ಅಪೂರ್ವ ರಸ ನಿಮಿಷವಾಗಿತ್ತು.

ಇಲ್ಲಿ ಪ್ರತಿನಾಯಕಿಯಾದವಳೂ ಹೆಸರಾದ ನಟಿ-ಎಡಿತ್ ಇವಾನ್ಸ್,

ನಾಟಕದ ಉಪಪಾತ್ರಗಳೆಲ್ಲರೂ ತೋರಿಸಿದ ಸಹಜ ಅಭಿನಯ, ರಂಗ ರಚನೆ, ನಿರ್ದೇಶನಗಳು ಬಹು ಉನ್ನತಮಟ್ಟದುವು. ಇಂಥೊಂದು ನಾಟಕವು ಪ್ರದರ್ಶನಕ್ಕೆ ಬರುವ ಮೊದಲು ಎಷ್ಟೆಲ್ಲ ಅಭ್ಯಾಸ, ಸಾಧನಗಳಿಗೆ ಗುರಿಯಾಗಿರಬಹುದೆಂದು ಊಹಿಸುವುದು ಸುಲಭ. ಇಲ್ಲಿ ಕಥೆಯೇ ದುರ್ಬಲವಾಗಿತ್ತು; ಅಲ್ಲಿ ಪ್ರವಹಿಸಿದ ಭಾವ ಅನುರಕ್ತಿ (Sentiment)ಯೆನಿಸೀತು. ಆದರೆ ಪ್ರದರ್ಶನದ ರೀತಿಯು ಅವನ್ನೆಲ್ಲ ಮರೆಯಿಸಿ, ಸಹಜ ಜೀವನವನ್ನು ತೋರಿಸುವಷ್ಟೇ ಶಕ್ತಿಯುತವಾಗಿತ್ತು.

ಇನ್ನೊಂದು ಆದಿತ್ಯವಾರ ಶೇಕ್ಸ್ಪಿಯರ್ ಸ್ಮಾರಕ ಥಿಯೇಟರಿನಲ್ಲಿ ನಡೆದ ಒಂದು ನಾಟಕವನ್ನು ನೋಡಲು ಹೋಗಿದ್ದೆ. ವಸಂತ ಋತುವಿನಲ್ಲಿ ಅಲ್ಲಿನ ನಾಟಕದ ಶ್ರಾಯತೊಡಗಿ ಆಗಸ್ಟ್ ತನಕ ನಡೆಯುತ್ತದೆ. ವಾರದಲ್ಲಿ ಮೂರು ನಾಟಕಗಳನ್ನು, ಶೇಕ್ಸ್ಪಿಯರನವು ಮಾತ್ರ, ಪ್ರಸಿದ್ಧ ಕಲಾವಿದರು ಸೇರಿ ಆಡುತ್ತಾರೆ. ಎವನ್ ನದೀ ತೀರದ ಸ್ಟ್ರಾಟ್ಫರ್ಡಿನಲ್ಲಿ ಅವನ ಮನೆಯನ್ನು ಗುಡಿಯೆಂಬಷ್ಟು ಭಕ್ತಿಯಿಂದ ಕಾದಿರಿಸಿದ್ದಾರೆ. ಅಲ್ಲಿಯೇ ಸುಂದರವಾದ ನಾಟಕ ಶಾಲೆ ಕಟ್ಟಿಸಿದ್ದಾರೆ. ಬ್ರಿಟಿಷ ಜನಗಳು ಇಲ್ಲಿಗೇನೆ ಯಾತ್ರಿಕರಂತೆ ನಾಟಕ ನೋಡುವುದಕ್ಕಾಗಿ ಬರುತ್ತಾರೆ. ಇಂಗ್ಲೆಂಡಿನ ಎಲ್ಲ ಮೂಲೆಗಳಿಂದ ಸಾವಿರ, ಎರಡು ಸಾವಿರಗಳಷ್ಟು ಮೋಟರುಗಳು ಆ ದಿನ ಬರುತ್ತವೆ. ಅನೇಕ ಕಲಾಪ್ರಿಯರು ಒಂದು ವಾರವೇ ಅಲ್ಲಿದ್ದು—ಆ ಕಾಲದ (ಸೀಸನ್) ಮೂರು, ನಾಲ್ಕು ನಾಟಕಗಳನ್ನು ಕಂಡು ಮರಳುವುದುಂಟು.

ನನಗೆ ನೋಡಲು ದೊರಕಿದುದು ಅವನ 'As you like it' ಎಂಬ ನಾಟಕ. ಇದು ಮಧ್ಯಯುಗದ ಫ್ರಾನ್ಸಿನ ಒಂದು ಕಥೆಯಷ್ಟೆ. ಇವತ್ತಿನ ಉಡುಗೆ,ಸಾಮಾಜಿಕ ನಡವಳಿಕೆಗಳೆರಡರಿಂದಲೂ ದೂರವಾಗಿರುವಂಥದು. ಆದರೇನು? ನಾಟಕ ನಿರ್ದೇಶನ ಅಂಥದಿತ್ತು—ನಮ್ಮನ್ನು ಮಧ್ಯಯುಗದ ಫ್ರಾನ್ಸಿಗೇನೆ ಒಯ್ದು, ಆ ಕಾಲದ ಕೃತಕವೂ ಅತಿರೇಕವೂ ಆದ ಅರಮನೆಯ ಶಿಷ್ಟಾಚಾರ ತೋರಿಸಿದರು. ದೃಶ್ಯಗಳೂ, ಉಡುಗೆ, ತೊಡುಗೆಗಳೂ ಚರಿತ್ರೆಗೊಪ್ಪುವಂತಿದ್ದುವು. ಈ ಮಿತಿಯೊಳಗಿನಿಂದ ನಾಟಕದ ವಿವಿಧ ಪಾತ್ರಗಳು ತಂತಮ್ಮ ಅಭಿನಯವನ್ನು ಅಷ್ಟು ಸಹಜವೂ ಸುಂದರವೂ ಆಗಿ ಆಡಿತೋರಿಸಿದರು. ಒರ್ಲಾಂಡೋ, ರೊಸಾಲಿಂಡ್, ಅವಳ ಗೆಳತಿ, ಇನ್ನು ಗಡಿಪಾರಾದ ಡ್ಯೂಕ್, ಅವನ ವೈರಿ, ವಿದೂಷಕ, ಹಳ್ಳಿಯ ಕುರುಬ

ಇತರರು — ಯಾರೇ ಆಗಲಿ ತಮ್ಮ ಸ್ಥಾನ, ಮಾನ, ಸಂಸ್ಕಾರಗಳ ಅಳತೆಗೆ ಒಪ್ಪುವ ರೀತಿಯಲ್ಲಿ ಅಭಿನಯಿಸಿದರು. ಕವಿಯ ಬರವಣಿಗೆಯು ಸರಳ ರಗಳೆಯಲ್ಲಿದ್ದರೂ, ಅದು ನೇರಾದ ಗದ್ಯದಲ್ಲಿ ಬರೆದಿರುವಷ್ಟೇ ಅಕೃತಕವಾಗಿ ನುಡಿಯಲ್ಪಟ್ಟಿತು.

ಜನತೆಯಲ್ಲಿ ಕಲಾಭಿರುಚಿ ಬೆಳೆಯಬೇಕು ಎನ್ನುವವರು ಅದನ್ನು ಈ ಬಗೆಯಲ್ಲಿ ಬೆಳೆಯಿಸಿದರೆ ಮಾತ್ರ ಬೆಳೆದೀತು. ಹಾಗೆ ನಾಟಕ ಬೆಳೆಯಲು-ಬಹುಮುಖವಾದ ರಂಗ ಪರಿಶ್ರಮ, ನಾಟಕದ ನಿರ್ದೇಶಕರಿಗೆ ಬೇಕು. ಆ ನಿರ್ದೇಶನ ಸಫಲವಾಗುವ ರೀತಿಯಲ್ಲಿ ಜನತೆ ಆಶ್ರಯ ನೀಡಬೇಕು. ನಮ್ಮ ನಾಡಿನಲ್ಲಿ ಇದ್ದ ನಾಟಕದ ರೂಪವೇ ಸಾಕಷ್ಟು ಕಡಿಮೆತರದ್ದಿತ್ತು. ಅದಾದರೂ ಇರಲಿ-ಎಂದು ಯೋಚಿಸುವಾಗ,ಅದರ ಹುಟ್ಟನ್ನು ಚಲಚ್ಚಿತ್ರ ಬಂದು ಅಳಿಸಿತು. ಅಲ್ಲಂತು — ನಾಯಕಿ ನಾಯಕರೆಲ್ಲರೂ ಹಾಸ್ಯಕ್ಕಿಳಿದ ವಿಕಟ ವಿನೋದಿನಿಗಳೇ! ಸದಾ ಅತಿರೇಕ ಅಭಿನಯ, ಉಡುಗೆ ನಡವಳಿಕೆಗಳಲ್ಲಿ —ಕಾಲ, ಕುಲ, ಶೀಲ, ಶಿಷ್ಟಾಚಾರಗಳೊಂದರ ಕಲ್ಪನೆಯಾಗದಂಥ ಕಲಸು ಮೇಲೋಗರ!

ನಮ್ಮ ದೇಶದಲ್ಲಿ ಶೇಕ್ಸ್ಪಿಯರನ ಇಂಥ ನಾಟಕಗಳನ್ನು ಕಾಣಲು ಸಾಧ್ಯವಿಲ್ಲವಾದರೂ, ಉತ್ತಮ ನಟನಟಿಯರು ಅಭಿನಯಿಸಿರುವ ಒಥೆಲ್ಲೋ, ಹೆಮ್ಲೆಟ್, ರೋಮಿಯೋ ಎಂಡ್ ಜೂಲಿಯಟ್ ನಂಥ ಚಿತ್ರಗಳನ್ನು ಕಂಡಿರುತ್ತೇವೆ. ಇಂಗ್ಲೆಂಡಿನ ನಟರ, ನಿರ್ದೇಶಕರ ಹಿರಿಮೆಯು ಅದರಿಂದ ನಮಗೆ ಸ್ಪಷ್ಟವಾಗದಿರದು.

ತಮ್ಮ ಶೇಕ್ಸ್ಪಿಯರನ ನೆನಪನ್ನು ಬ್ರಿಟಿಷರು ಉಳಿಸಿಕೊಂಡಿರುವ ಬಗೆಯಲ್ಲಿ—ಕಾಳಿದಾಸ, ಭಾಸರ ನೆನಪನ್ನಾಗಲಿ ಅನಂತರದ ನಾಟಕಕಾರರ ನೆನಪನ್ನಾಗಲಿ ನಾವು ಉಳಿಸಬಲ್ಲೆವೇ—ಎಂಬ ಪ್ರಶ್ನೆ ಸ್ವಾಭಾವಿಕವಾಗಿ ನಮ್ಮ ಮನಸ್ಸಿನಲ್ಲಿ ಮೂಡುತ್ತದೆ.

ಹೀಗೆ ನಾನೆರಡು ನಾಟಕಗಳನ್ನು ಮಾದರಿಗಾಗಿ ನೋಡಿದೆ. ಅನಂತರ ನನಗೆ ನೋಡಲು ದೊರಕಿದುದು ಬ್ರಿಟಿಷರ "ಬಾಲೆ" ಮತ್ತು ಅಣಕವಾಡ. ಕಾವೆಂಟ್ ಗಾರ್ಡನಿನಲ್ಲಿರುವ ಒಪೆರಾ ಹೌಸ್‌ನಲ್ಲಿ ಅವು ನಡೆದುವು. ಈ ಮಂದಿರವು ಬಲು ಹೆಸರಾದ ನಾಟಕ ಶಾಲೆ. ಸೆಡ್ಲರ್‌ವೆಲ್ಸ್ ಎಂಬಾತ ಬೇಸಗೆಯಲ್ಲಿ ಅಲ್ಲಿ ಅನೇಕ ,ನೃತ್ಯ, ಅಣಕ ಮೊದಲಾದ ಗೀತಬದ್ಧ ಪ್ರದ

ರ್ಶನಗಳನ್ನು ಮಾಡುತ್ತಿದ್ದಾನೆ. ಇವೆಲ್ಲ ಇಂಗ್ಲಿಷ್ ಕಲಾವಿದರ ಪ್ರಯತ್ನದ ಫಲ. ನಾನು ನೋಡಿದ ದಿನ–ಎರಡು, ಮೂರು ಬಾಲೆ (ballet) ಗಳೂ, ಅವುಗಳ ಜತೆಗೆ ಅರ್ಧನಾಟಕ, ಅರ್ಧನೃತ್ಯದಂತೆ ಕಾಣುವ ವಿಡಂಬನೆಗಳೂ ಇದ್ದುವು. ಒಂದು ಡಾನ್ಸ್ಕ್ವಿಕ್ಸಟನ ಸಾಹಸದ ಕತೆ; ಮತ್ತೊಂದು ಆಧುನಿಕ ಪ್ರಣಯದ ಅಣಕವಾಡ.

ಈ ಆಧುನಿಕ 'ಬಾಲೆ'ಗೆ ಯುರೋಪಿನ ಮಧ್ಯಯುಗದ ರಸ್ಯವೇ ಜನ್ಮಭೂಮಿ. ಬಹು ಹಿಂದಿನಿಂದಲೂ ರಸ್ಯದ ಬಾಲೆ ನರ್ತಕಿಯರು ಲೋಕ ಪ್ರಸಿದ್ಧರು. ಅವರ ನೃತ್ಯ ಶೈಲಿಯೇ ಹೆಚ್ಚುಕಡಿಮೆ ಪಾಶ್ಚಾತ್ಯರ ಆಧುನಿಕ ಬಾಲೆ ಶೈಲಿಯನ್ನು ರೂಪಿಸಿದ್ದಾಗಿದೆ. ರಂಗಮಂಟಪದಲ್ಲಿ ಹತ್ತು, ಇಪ್ಪತ್ತು, ನಾಲ್ವತ್ತರ ತನಕ ಸಮರೂಪ ಧರಿಸಿದ, ಸಮವಯಸ್ಕರಾಗಿ ಕಾಣಿಸುವ ತರುಣತರುಣಿಯರು ಬಂದು, ತಮ್ಮ ನೃತ್ಯದಿಂದಲೂ, ಗುಂಪಿನ ಚಲನೆಯ ಗತಿಗಳಿಂದಲೂ–ಏನಾದರೊಂದು ಭಾವ ವಿಸ್ತರಣ ಮಾಡುತ್ತಾರೆ. ಎಲ್ಲರೂ, ತಮ್ಮ ಮೈಯ್ಯ ರೇಖೆಗಳು ಸ್ಪಷ್ಟವಾಗಿರುವಂತೆ ಬಿಗಿಯುಡುಗೆ ತೊಡುತ್ತಾರೆ, ತರುಣಿಯರು ಅದರ ಮೇಲೆ, ನಡುವಿಗೆ ಕಿರಿದಾದೊಂದು ನಿರಿಗೆ ತುಂಬಿದ ಲಂಗ ಧರಿಸುತ್ತಾರೆ. ಕುಣಿತ, ಚಲನೆಗಳೆಲ್ಲವು ಹೆಚ್ಚುಕಡಿಮೆ ತುದಿಗಾಲಿನ ಮೇಲೆ ನಿಂತೇ ಸಾಗುತ್ತವೆ. ಅವರ ಇಡಿಯ ಶರೀರದ ಭಂಗಿ, ವಿನ್ಯಾಸ ಗಳೂ, ಬೇರೆಬೇರೆ ವ್ಯಕ್ತಿ, ಗುಂಪುಗಳ ರಂಗಚಲನೆ, ವಿನ್ಯಾಸಗಳೂ–ವಿಷಯ ವನ್ನೂ ಭಾವವನ್ನು ವಿಸ್ತರಿಸಿ ಹೇಳಬೇಕು. ಹಿನ್ನಲೆಗೆ ಹಲವು ವಾದನಗಳುಳ್ಳ ಆರ್ಕೆಸ್ಟ್ರಾ ಇದೆ. ಅಷ್ಟು ವಾದ್ಯಗಳಿದ್ದರೂ ಕೆಲವೇ ವಾದ್ಯಗಳು ಮುಖ್ಯವೆನಿಸಿ ನೃತ್ಯದ ವಿಷಯುವನ್ನು ವಿಸ್ತರಿಸುತ್ತವೆ. ಇದು ಅವರ ಸಾಮಾನ್ಯ ಸೌರಸ್ಯ ಪದ್ಧತಿಯಂತಿರದೆ, ಮೆಲೊಡಿ ಪದ್ಧತಿಯನ್ನೇ ಬಿಂಬಿಸುತ್ತವೆ. ಈ ಸಂಗೀ ತದ ನಿರ್ದಿಷ್ಟ ರೂಪರಚನೆಗಳಿಗೆ ತಕ್ಕುದಾಗಿ–ಅದರ ಅಲೆ, ತಾನ, ಕಂಪ, ಅನುಕಂಪ, ಇಳಿ, ಏರುಗಳಿಗೆ ಹೊಂದಿಕೊಂಡೇ ಕುಣಿಯುವವರ ಪ್ರತಿ ಯೊಂದು ಚಲನೆಯೂ ನಡೆಯುತ್ತದೆ. ಈ ಗೀತಭಾಗ ಮಾತ್ರ ಪೌರ್ವಾತ್ಯರ ಕಿವಿಗೂ ಪ್ರಿಯವಾಗಿ ಕೇಳಿಸುವಂಥದು. ಅಲ್ಲದೆ ನಮ್ಮ 'ಮಾರ್ದವ' ಪದ್ಧತಿಯಿಂದಲೇ ಎಷ್ಟೆಲ್ಲ ವಿವಿಧ ಸೃಷ್ಟಿಮಾಡಬಹುದು–ಎಂಬ ಯೋಚನೆ ಯನ್ನು ಕೆರಳಿಸುತ್ತದೆ.

ನಾನು ನೋಡಿದ ಈ ಕುಣಿತವನ್ನು ಇಲ್ಲಿ ವಿಮರ್ಶಿಸುವುದು ಕಷ್ಟ.

ಅದನ್ನು ಮೆಚ್ಚುವುದಕ್ಕೂ ಪ್ರಯತ್ನ ಬೇಕಾಗುತ್ತಿತ್ತು. ಕಾಲಿನ ಹೆಜ್ಜೆಯ ಗತಿಗಳು ಸದ್ದಿಲ್ಲದೆ ಸರಿವ ನಡಿಗೆಗಳು. ಜನಗಳು ಕಲಿಯುವ, ಚೆದರುವ, ಚಲಿಸುವ ರಂಗಚಲನೆಗಳು ತುಂಬ ಮೋಹಕವಾದುವು; ಒಂಟಿ ನರ್ತಕರು ತೋರುವ ಅಂಗ ಭಂಗಿ, ವಿನ್ಯಾಸಗಳೂ, ಕಷ್ಟವಾದ, ಮೈಯ ಬಾಗುಗಳೂ, ಕಾಲು, ಬೆನ್ನು, ಮೈಯ ಚಲನೆಗಳೂ ವ್ಯಾಯಾಮದಂತೆ ಕಾಣಿಸುತ್ತವೆ ಹೊರತು–ಭಾವ ರಸಗಳಿಗೆ ಜೋಡಿಸಬಲ್ಲ ಶರೀರ ಭಂಗಿಗಳೆಂದು ಅನಿಸುವುದಿಲ್ಲ. ಅದು ಬೇರೆಯೇ ಪದ್ಧತಿ. ಆಶ್ಚರ್ಯಕರವಾಗಿ ನಮಗೆ ಕಂಡರೂ ಅರ್ಥವನ್ನು ಗ್ರಹಿಸುವುದು ಕಷ್ಟವಾಗುತ್ತದೆ. ಈ ವಿಚಿತ್ರವಾದ ಕಸರತ್ತುಗಳಿಂದ— ಒಂದು ರಸ ಭಾವ ಹೇಗೆ ಉಂಟಾಗುತ್ತದೆ–ಎಂದು, ಹಿನ್ನೆಲೆಯ ಸಂಗೀತವನ್ನು ಮರೆತು ನೋಡಲು ಪ್ರಯತ್ನಿಸಿದರೆ, ಮನಸ್ಸಿಗೆ ಉತ್ತರವೇ ಹೊಳೆಯಲಿಲ್ಲ.

ಅಂತು ನಾನು ಅದರಲ್ಲಿ ಮೆಚ್ಚಿದುದು ಹಿನ್ನೆಲೆಯ ಗೀತವನ್ನು; ಅದ್ಭುತವಾದ ವ್ಯಾಸಂಗ, ಕ್ರಮಬದ್ಧತೆಗಳನ್ನು ಮಾತ್ರ.

ಈ ನೃತ್ಯಗಳ ಜತೆಗೆ ಪ್ರದರ್ಶಿತವಾದ 'ಡಾನ್ ಕ್ವಿಕ್ಸಟ್' ಅಣಕವಾದವಾಗಲಿ, ಮತ್ತೊಂದು ವಿಡಂಬನೆಯಾಗಲಿ ನನಗೆ ವಿಶೇಷವೆನಿಸಲಿಲ್ಲ. ಅದು ನೃತ್ಯಗತಿಯಿಂದ ಕೂಡಿದ್ದರೂ, ನಾಟಕದ ಅನೇಕ ಕಡೆಗಳಲ್ಲಿ ಅದಿಲ್ಲದೆಯೇ, ಬರಿಯ ಜಡವಾದ ಅಭಿನಯದಿಂದಲೇ ಸಾಗುತ್ತದೆ. ಅನೇಕ ವೇಳೆ ಬರಿಯ ಮೂಕಾಭಿನಯವಿಷ್ಟೇ ಉಳಿಯುತ್ತದೆ. ಕೆಲವು ಬಾರಿ–ಡಾನ್ ಕ್ವಿಕ್ಸ್ಟನ ಉನ್ಮತ್ತತೆ, ನಿರಾಶೆಯ ಪರಮಾವಧಿಗಳ ವೇಳೆ, ಜತೆಯಲ್ಲಿರುವ ವ್ಯಕ್ತಿಗಳ ನೃತ್ಯ ಏನೊಂದೂ ಹೊಂದಿಕೆಯಿಲ್ಲದ ಚಲನೆಗಳಾಗಿ ಕಾಣಿಸುತ್ತವೆ. ಈ ನಾಟಕದ ವಿಕಟ ಕಥಾವಸ್ತು ಇನ್ನಷ್ಟು ಉಜ್ವಲವಾದ ಚಿತ್ರಣಕ್ಕೆ ನೆರವಾಗಬಲ್ಲುದು. ಈ ಪ್ರಯತ್ನ "ಸಾಲದು" ಎಂದು ನನಗನಿಸಿತು.

ಇನ್ನೊಂದು ಅಣಕವಾಡ — ಕೆನ್ಸಿಂಗ್‌ಟನ್ ವಯ್ಯಾರಿಯೊಬ್ಬಳ ಶೃಂಗಾರ ಲೀಲೆ. ಆಕೆ ಒಬ್ಬೊಬ್ಬರನ್ನು ಮೋಹಿಸಿ, ಹೂವಿಂದ ಹೂವಿಗೆ ಹಾರುವ ಪತಂಗದಂತೆ ಸರಿದು, ಕೊನೆಗೆ ಒಬ್ಬ ನಿಗ್ರೋ ದೊರೆಯನ್ನು ವರಿಸುತ್ತಾಳೆ. ಆಗ ಹಲ್ಲಿಯ ಬಾಯಿಗೆ ಬೀಳುವ ಪತಂಗವಾಗುತ್ತಾಳೆ. ಈ ಅಪಹಾಸದ ವಸ್ತು ಅತ್ಯಂತ ಸುಂದರ, ಹಾಸ್ಯ ಪುಷ್ಟ ವಸ್ತುವಾಗಿದ್ದರೂ, ಚಿತ್ರಣ ಶಕ್ತಿ ಸಾಲದು ಎನಿಸಿತು ನನಗೆ.

ಆದರೆ ಈ ಪ್ರದರ್ಶನಗಳಲ್ಲಿ ಗಮನಾರ್ಹವಾದೊಂದು ಸಂಗತಿಯೆಂದರೆ ಅವರ ಸಂಗೀತದ ಹಿನ್ನೆಲೆ. ಈ ಹಿನ್ನೆಲೆಯ ವಾದ್ಯಗಳಲ್ಲಿ ಸಂಖ್ಯೆ ಅನೇಕವಿದ್ದರೂ ಕೆಲವೇ ವಾದ್ಯಗಳು ಪ್ರಧಾನವಾಗಿವೆ. ಬಾಲೆಗೆ ಹಿನ್ನೆಲೆಯಾಗಿರುವಂತೆ, ಕಥಾ ವಿಸ್ತರಣಕ್ಕೆ (ಮೆಲೊಡಿ) ಮಾರ್ದವ ಪದ್ಧತಿಯು ಸಂಗೀತವೇ ಸಾಧನವಾಗಿರುವಂತೆ ಕಾಣಿಸಿತು. ಸಂಗೀತದ ತರಂಗಿತತೆ(Rythm)ಯನ್ನು ಬಳಸಿ, ಬೆಳೆಯಿಸಿ, ಚಿತ್ರಿಸಿದ ಹಿಮ್ಮೇಳ ಪ್ರದರ್ಶನದ ಅರ್ಧ ಜೀವನವೆನಿಸುವಂತಿತ್ತು. ಅವನ್ನೆಲ್ಲ ಕಾಣುವಾಗ ನಮ್ಮ ಮಾರ್ದವ ಪದ್ಧತಿಯಲ್ಲಿರುವ-ವಿವಿಧ ರಾಗ, ತಾಲ ಪ್ರಭೇದಗಳನ್ನು ಬಳಸಿ, ಕೇವಲ ತರಂಗಿತತೆಯ ಸಂಪೂರ್ಣ ಶಕ್ತಿಯನ್ನು ನಾವಾದರೂ ಉಪಯೋಗಿಸಿ, ಅದ್ಭುತ ಸೃಷ್ಟಿಮಾಡಲು ಬಂದೀತೆಂಬ ವಿಶ್ವಾಸವುಂಟಾಗುತ್ತದೆ. ಹಾಗಿದ್ದರೂ—ಪಾಶ್ಚಾತ್ಯರ ಅನುಕರಣೆಯನ್ನು ಮಾಡುತ್ತಿರುವ ನಮ್ಮ ಚಲಚ್ಚಿತ್ರಗಳ ಆರ್ಕೆಸ್ಟ್ರಾ,ಯಾವ ಅರ್ಥವನ್ನೂ ಕೊಡದ ಬರಿಯ ವಾದ್ಯಗಳ ಕೋಲಾಹಲಗಳಾಗಿರುವುದೇಕೆ?

ಲಂಡನ್ ನಗರದಲ್ಲಿದ್ದಾಗ ನನಗೆ ದೂರದ ಬಾಲ್ಕಾನ್ ದೇಶಗಳ ನೃತ್ಯಗೀತ ಸಾಂಪ್ರದಾಯವನ್ನು ಕಾಣಲು ಅನುಕೂಲವಾದೊಂದು ಸಂಧಿ ದೊರಕಿತು. ನನ್ನ ಸಂಚಾರದ ಕಾರ್ಯಕ್ರಮದೊಳಗೆ ಯುಗೋಸ್ಲಾವಿಯ ಸೇರಿರಲಿಲ್ಲ. ಆದರೆ ಅಲ್ಲಿಂದ ಬಂದ ಒಂದು ನೃತ್ಯಮಂಡಲದ ಸುಂದರ ಪ್ರದರ್ಶನವು, ನನಗೆ ಲಂಡನಿನ ಕೆಂಬ್ರಿಜ್ ಥಿಯೇಟರಿನಲ್ಲಿ ಕಾಣಸಿಕ್ಕಿತು. "ಯುಗೊಸ್ಲಾವಿಯನ್ ರೆಪ್ರೊಡಿ" ಎಂಬುದು ಅದರ ನಾಮಕರಣ.

ಯುಗೊಸ್ಲಾವಿಯಾದ ಸಂಸ್ಕೃತಿ ಅರ್ಧ ಪೌರ್ವಾತ್ಯ, ಅರ್ಧ ಪಶ್ಚಿಮಾತ್ಯವೆನ್ನಲೂ ಬಹುದು. ಆ ರಾಷ್ಟ್ರದ ಸ್ಲೊವಾನಿಯಾ, ಕ್ರೋಶಿಯಾ, ಬಾಸ್ನಿಯಾ ಮೊದಲಾದ ಭಾಗಗಳು ಬಹು ಹಿಂದಿನಿಂದಲೂ ಸುಂದರ ಜಾನಪದ ನೃತ್ಯಗಳಿಗೆ ಹೆಸರಾದುವು. ಈ ದೇಶವು ಹಲವು ಶತಮಾನಗಳ ಕಾಲದ ತನಕ ತುರ್ಕಿ ದೊರೆಗಳ ಕೆಳಗೆ ಇದ್ದುದರ ಪರಿಣಾಮವಾಗಿ, ಮುಸ್ಲಿಂ ಗೀತದ ವರ್ಚಸ್ಸೂ, ಕುಣಿತದ ವರ್ಚಸ್ಸೂ ಅವರ ಜಾನಪದ ಗೀತ, ನೃತ್ಯಗಳ ಮೇಲೆ ಬಿದ್ದಿವೆ. ಈ ವಿವಿಧ ಭಾಗದ ಜನಗಳ ಉಡುಗೆ ತೊಡುಗೆಯಲ್ಲಿ ಪಡುವಣ ಮೂಡಣ ನಾಡುಗಳ ವಯ್ಯಾರ ಬೆಡಗುಗಳು ಬೆರೆತಿದೆ. ಹೀಗಾಗಿ, ಕೇವಲ ಜನಪದಕ್ಕೆ ಸಂಬಂಧಿಸಿ-ಹತ್ತಿಪ್ಪತ್ತು ನೃತ್ಯ ಸಂವಿಧಾನಗಳಿಂದ ಕೂಡಿದ, ಈ ನೃತ್ಯೋತ್ಸವ ಬಲು ಸರಳವಾಗಿದ್ದಂತೆಯೇ ಸುಂದ

ರವೂ ಆಗಿತ್ತು; ಪಾಶ್ಚಾತ್ಯ ಗೀತ, ಬಾಲೆಗಳಿಗಿಂತ ತೀರ ಭಿನ್ನವೂ ಆಗಿತ್ತು.

ಹೆಂಗಸು ಗಂಡುಸರೆಂದು ಸುಮಾರು ನಾಲ್ವತ್ತು ಮಂದಿ ಒಮ್ಮೆಗೇನೆ ರಂಗಸ್ಥಳಕ್ಕೆ ಬಂದು ನರ್ತಿಸುತ್ತಿದ್ದರು. ಅವರ ದೇಶದ ವಿವಿಧ ಭಾಗಗಳ ಜಾನಪದ ಉಡುಗೆಗಳನ್ನೊಮ್ಮೊಮ್ಮೆ ಬೇರೆ ಬೇರೆಯಾಗಿ ತೋರಿಸುತ್ತಿದ್ದರು. ಬಂದು ಹೋಗುವ ರೀತಿ, ಮೇಳವಾಗಿ ಕುಣಿಯುವ ಬಗೆ, ತುಂಬ ಅಭ್ಯಾಸ ದಿಂದ ಬಂದುದು. ಆದರೆ ಕುಣಿತಗಳೆಲ್ಲವು ಬಹು ಸರಳವಾದುವು; ತಾಲ ವನ್ನು ಕಾಲಿಂದ ಬಡಿದು ತೋರಿಸುವುವು. ಆಗ ಅವರ ಕೈಗಳಿಗೆ ಹೆಚ್ಚಾಗಿ ಒಂದೊಂದು ಕರವಸ್ತ್ರ ತಿರುಗಿಸುವ ಸಾಮಾನ್ಯ ಕೆಲಸ.

ಕುಣಿತದ ವಿವಿಧ ವಿಷಯಗಳಲ್ಲಿ–ಗಿಡುಗನ ಹಾರಾಟ, ಖಡ್ಗನೃತ್ಯ, ದಕಾಯಿತ ನೃತ್ಯ, ದೇಶೀಯ ಜಾನಪದ ನೃತ್ಯಗಳು ಕೆಲವು. ಹಿಮ್ಮೇಳದ ವಾದ್ಯಗಳಲ್ಲಿ ಕೊಳಲು, ಎಕಾರ್ಡಿನುಗಳು ಮುಖ್ಯವಾದ ವಾದ್ಯಗಳು. ಗೀತ ಮಾರ್ಗವು ನಮ್ಮ ಪೌರ್ವಾತ್ಯರಿಗೆ ಪ್ರಿಯವೆನಿಸುವ ಜಾನಪದ ಮಾರ್ದವ ಗೀತ. ಅವುಗಳ ಆಲಾಪಗಳಲ್ಲಿ ತುರ್ಕಿ ದೇಶದ 'ಆಲಾಪನೆಯ' ಛಾಯೆ ಕಾಣಿಸುತ್ತವೆ.

ಇಷ್ಟೊಂದು ಸರಳವಾದ ನೃತ್ಯಗಳನ್ನು ಆ ತರುಣತರುಣಿಯರು ತೋರಿಸಿದ ಪ್ರದರ್ಶನ ವೈಖರಿಯು ಮಾತ್ರ ವಿಶೇಷವಾಗಿತ್ತು. ಅದೊಂದೇ — ಸಾಮಾನ್ಯವೆನಿಸುವ ಜಾನಪದ ಕಲೆಯನ್ನು ವಿಶೇಷವನ್ನಾಗಿ ಮಾಡಿ ತೋರಿಸಿದಂಥದು. ರಂಗ ಚಲನೆ (Choreography), ನಿರ್ದೇಶನಗಳು ಹೆಚ್ಚಿನ ಕೆಲಸ ಮಾಡಿದುವು. ಇವು ಬಾಲೆ ನೃತ್ಯಗಳ ಪ್ರೇರಣೆಯೆಂದರೆ ಸಲ್ಲುತ್ತದೆ.

ನಮ್ಮ ದೇಶವು ಅನುಸರಿಸಬಹುದಾದ ದಾರಿಯಿದು. ನಮ್ಮ ನಾಡಿ ನಲ್ಲಿ ನೂರಾರು ಬಗೆಯ ಜಾನಪದ ಗೀತಗಳಿವೆ; ನೃತ್ಯಗಳಿವೆ. ಅವನ್ನು ಇದ್ದಕ್ಕಿದ್ದಂತೆ ಪ್ರದರ್ಶಿಸಿದಲ್ಲಿ–ಆಧುನಿಕರ ಕಣ್ಣುಗಳಿಗೆ, ಕಿವಿಗಳಿಗೆ ರುಚಿಸ ಲಾರವು–ಎಂಬುದನ್ನು ಅರಿತಿದ್ದೇವೆ. ಆದರೆ ಅವನ್ನು ತಕ್ಕ ರೀತಿಯಲ್ಲಿ ಉಳಿಸದೆ ಹೋದರೆ ಆ ಒಂದು ಸಂಸ್ಕೃತಿಯೇ ನಷ್ಟವಾಗುತ್ತದೆ. ಆ ಕೆಲಸ ವನ್ನು ಎಷ್ಟು ಯಶಸ್ಸಿನಿಂದ ನಾವು ಸಾಧಿಸಬಹುದೆಂಬುದಕ್ಕೆ ನಾನು ಮೇಲೆ ಹೇಳಿದ 'ಯುಗೊಸ್ಲಾವಿಯನ್ ರಿಪ್ನೊಡಿ' ಉತ್ಕೃಷ್ಟ ಸಾಕ್ಷಿಯಾಗಿತ್ತು.

ಬ್ರಿಟನಿನ ಕಲಾಮಂದಿರಗಳನ್ನು ಕುರಿತು ಬಣ್ಣಿಸುವಾಗ — ಅಲ್ಲಿನ

ಬಹು ಮುಖ್ಯವಾದ ಬ್ರಿಟಿಷ್ ಮ್ಯೂಸಿಯುಮ್‌ನ ವಿಚಾರವನ್ನು ಹೇಳದಿದ್ದರೆ ತಪ್ಪೇ ಸರಿ. ಪ್ರಾಚೀನ ಕಲೆ, ಸಂಸ್ಕೃತಿಗಳ ಬಹುದೊಡ್ಡ ಸಂಗ್ರಹಾಲಯುಗಳಲ್ಲಿ ಇದು ಮುಖ್ಯವೆನಿಸುವ ಮಂದಿರ. ಲಂಡನ ನಗರದ ಕೇಂದ್ರ ಭಾಗದಲ್ಲಿಯೇ ಇದೆ; ವಿಶಾಲ ಅರಮನೆಯಂತಹ ಈ ಮಂದಿರವನ್ನು ಚೆನ್ನಾಗಿ ನೋಡುವುದಕ್ಕೆ ಎಂಟು ದಿನಗಳ ಕಾಲವೇ ಬೇಕಾದೀತು. ಆಳುಗಳಿಗೆ ವಿಶ್ರಾಂತಿ ದೊರಕಿಸುವ ಸಲುವಾಗಿ, ಅವರು ಕೆಲವು ಕೆಲವು ಭಾಗಗಳನ್ನು ಮಾತ್ರ ಒಂದೊಂದು ದಿನ ತೆರೆಯುತ್ತಾರೆ. ಅಲ್ಲದೆ 'ಬ್ಲಿಟ್ಸ್'ನ ವೇಳೆ ಅಲ್ಲಿಂದ ಸ್ಥಳಾಂತರಿಸಿ ಅಡಗಿಸಿಟ್ಟಂಥ ಎಷ್ಟೋ ಕಲಾ ಸಂಪತ್ತನ್ನು, ತಿರುಗಿ ಅಲ್ಲಿಗೆ ತಂದಿರಿಸುವ ಕೆಲಸ ಇನ್ನೂ ನಡೆದಿದೆಯಂತೆ.

ನಾನು ಅಲ್ಲಿಗೆ ಮೂರು ಬಾರಿ ಹೋಗಿ ಬಂದರೂ–ಇನ್ನೂ ನೋಡಬೇಕೆನ್ನುವ ಆಸೆ ಉಳಿದುಕೊಂಡಿದೆ. ಅಲ್ಲಿನ ಸಂಗ್ರಹಗಳಲ್ಲಿ ಮುಖ್ಯವಾದ ಕೆಲವೊಂದು ಸಂಗತಿಗಳಷ್ಟನ್ನೆ ನಾನಿಲ್ಲಿ ಬಣ್ಣಿಸುತ್ತೇನೆ.

ಮಂದಿರದ ಎಡಭಾಗದಲ್ಲಿ ಮೊದಲಿಗೆ ನಮಗೆ–ಗ್ರೀಸ್ ದೇಶದ ಶಿಲ್ಪ ಸಂಪತ್ತು ಕಾಣಸಿಗುತ್ತದೆ. ಅನೇಕ ಸುಂದರವಾದ ಪೂರ್ಣ ಪ್ರತಿಮೆಗಳೂ, ಅರ್ಧ ಪ್ರತಿಮೆಗಳೂ ಇವೆ. ಗ್ರೀಕ್‌ದೇವತೆ ವೀನಸಿನ ನಾಲ್ಕಾರು ಉತ್ಕೃಷ್ಟ ಮಾದರಿಗಳಿವೆ. ಗ್ರೀಸಿನ ಮೇಧಾವಿಗಳಾಗಿದ್ದ–ಪ್ಲೇಟೋ, ಎರಿಸ್ಟಾಟಲ್ ಮೊದಲಾದವರ ಮುಖಗಳ ಶಿಲ್ಪವಿದೆ. ಗ್ರೀಸಿನ ಪ್ರಸಿದ್ಧ ದೇವಾಲಯಗಳಾದ ಪಾರ್ತಿನಾನ್ ನಾಶವಾದ ಬಳಿಕ, ಅದನ್ನು ಅಲಂಕರಿಸಿದ್ದಂಥ ಅನೇಕ ಉತ್ಕೀರ್ಣ ಶಿಲ್ಪಗಳನ್ನು ಇಲ್ಲಿ ತಂದಿರಿಸಿದ್ದಾರೆ. ಅದರಂತೆ ಮತ್ತೊಂದು ಪ್ರಾಚೀನ ದೇವಾಲಯದ ಶಿಲ್ಪಗಳಿವೆ. ಅವೆಲ್ಲ ಹಾಲುಗಲ್ಲಿನವು. ಎಮೆಜಾನರಿಗೂ ಗ್ರೀಕರಿಗೂ ನಡೆದ ಕದನದ ಚಿತ್ರಗಳು, ಅಶ್ವಾರೋಹಿಗಳ ಸಾಲುಗಳು, ಜನಜೀವನದ ಲಲಿತ ಚಿತ್ರಗಳು, ಗ್ರೀಸಿನ ಪ್ರಾಚೀನ ಶಿಲ್ಪ ಪ್ರತಿಭೆಯನ್ನು ಕುರಿತಾಗಿ ನಮ್ಮನ್ನು ಬೆರಗುಗೊಳಿಸುತ್ತವೆ.

ಮತ್ತೊಂದು ನೀಳವಾದ ಕೊಟಡಿಯಲ್ಲಿ—ಪರ್ಸಿಯದ ಪ್ರಾಚೀನ ಐತಿಹಾಸಿಕ ಅವಶೇಷಗಳಿವೆ. ಅಸುರನಿಸಿಪಾಲ, ದರಾಯಸರಂಥ ದೊರೆಗಳನ್ನು, ಹಿಂದಣ ಯುಗದ ಯಜ್ಞಯಾಗಗಳನ್ನು, ದೇವತೆಗಳನ್ನು, ತೋರಿಸುವ ದೊಡ್ಡ ಪ್ರಮಾಣದ ಶಿಲ್ಪಗಳನೇಕ ಇವೆ. ಎಸ್ಸೀರಿಯದ ಪಾಚೀನ ವೈಭವವೆಲ್ಲವು ನಮ್ಮೆದುರಿಗೆ ಎದ್ದು ಕಾಣುತ್ತದೆ–ಈ ಮಂದಿರದಲ್ಲಿ.

ಮುಂದಿನ ಶಿಲ್ಪಾಲಯವೊಂದರಲ್ಲಿ—ಪ್ರಾಚೀನ ಈಜಿಪ್ಟಿನ ಅನೇಕ ಫರೋವರುಗಳ, ಅತಿಮಾನವ ಗಾತ್ರದ ಕಲ್ಲಿನ ಪ್ರತಿಮೆಗಳಿವೆ. ರಾಮುಸೆಸ್ ಮೊದಲಾದ ದೊರೆಗಳ ಭವ್ಯ ವಿಗ್ರಹಗಳು, ಅರ್ಧಮಾನವ, ಅರ್ಧಮೃಗ ರೂಪದ ದೇವತೆಗಳು, ರಾಣಿಯರು ಕಾಣಿಸುತ್ತಾರೆ. ತೀರ ಸರಳವಾದ ರೇಷೆಗಳನ್ನು ಒಳಗೊಂಡ ಶಿಲೆಯ ಹೊಳೆಯುವ ಈ ಮೂರ್ತಿಗಳು — ಯಾವ ಕಾಲದಲ್ಲೂ ಅತ್ಯುತ್ತಮ ಶಿಲ್ಪಗಳೆನಿಸುವ ಹಿರಿಮೆಯುಳ್ಳವುಗಳಾಗಿವೆ.

ಈ ಮಂದಿರದ ಮಹಡಿಯೊಂದರಲ್ಲಿ-ಕಣ್ಣು ದಣಿಯುವಷ್ಟು ವಿಸ್ತಾರದಲ್ಲಿ, ವೈವಿಧ್ಯದಲ್ಲಿ ಈಜಿಪ್ಟಿನ ಕಲಾ ವಿಶೇಷಗಳೂ, ಮೃತ್ಯು ಸಂಪುಟಗಳೂ ಇವೆ. ಕೈರೋ ಮ್ಯೂಸಿಯಮನ್ನು ನಾನು ಕಾಣದಿದ್ದರೂ ಇಲ್ಲಿಗೆ ಬಂದು ತೃಪ್ತಿಯಾಯಿತು. ನೂರಾರು ಮಮ್ಮಿಗಳ ಶರೀರವಿದೆ. ಅವುಗಳ ಹೊದ್ದಿಕೆ, ಅಲಂಕಾರ, ಮೃತ್ಯು ಸಂಪುಟ, ಆ ಸಂಪುಟಗಳಲ್ಲಿ ಬರೆದ ವಿಚಿತ್ರ ಚಿತ್ರಗಳು—ಪ್ರಾಚೀನ ಯುಗವೊಂದನ್ನು ನಮ್ಮ ಮುಂದಿರಿಸುತ್ತವೆ. ಆಗಿನ ಕಾಲದ ಶವಸಂಸ್ಕಾರದ ಸಲಕರಣೆಗಳು ಆ ಜನಗಳ ನಂಬಿಕೆಗಳನ್ನು ಬಿಡಿಸಿ ಹೇಳುತ್ತವೆ. ಈ ನಾಗರಿಕತೆಯು ೫೦೦೦ ವರ್ಷಗಳಷ್ಟು ಹಿಂದಿನದಾದರೂ ಅಲ್ಲಿನದು ಬಲು ಮುಂದುವರಿದ ನಾಗರಿಕತೆಯೆಂಬುದಕ್ಕೆ ಅಡ್ಡಿಯೇ ಇಲ್ಲ. ಈ ಮಂದಿರದಲ್ಲಿ ಶೇಖರಿಸಿದ—ಕೆತ್ತನೆಗಳು, ಮೂರ್ತಿಗಳು, ಗೊಂಬೆಗಳು, ಲೋಹಕರ್ಮಗಳು ಒಂದು ಅದ್ಭುತ ಪ್ರಾಚೀನ ಯುಗವನ್ನು ಬಣ್ಣಿಸುತ್ತವೆ.

ಇಷ್ಟೇ ವಿಸ್ತೃತಿ, ವಿವರಗಳಿಂದಲ್ಲವಾದರೂ-ಇತರ ಅನೇಕ ಪ್ರಾಚೀನ ಸಂಸ್ಕೃತಿಗಳ ಇತಿಹಾಸದ ಕುರುಹುಗಳನ್ನೂ ಇಲ್ಲಿ ಸಂಗ್ರಹಿಸಿದ್ದಾರೆ. ಮಾಯಾ ನಾಗರಿಕತೆ; ನೇಪಾಲಿ, ಚೀನಿ, ಜಪಾನಿ ಸಂಸ್ಕೃತಿಗಳ ಅವಶೇಷಗಳು, ನಮಗೆ ನಮ್ಮ ವಿಸ್ತೃತ ಪ್ರಪಂಚದ ಸಂಸ್ಕೃತಿಯನ್ನು ತೋರಿಸುತ್ತವೆ. ಅದರಲ್ಲೂ ಚೀನ, ಜಪಾನುಗಳ ಕಂಚಿನ ಮೂರ್ತಿಗಳು, ಪಿಂಗಾಣಿಗಳು (Porcelein) ಬಲು ರಮಣೀಯವಾದ ಸಂಗ್ರಹಗಳು. ಭಾರತದ ಶಿಲ್ಪಕೃತಿಗಳೂ ಇಲ್ಲಿ ಅನೇಕವಿವೆ.

ಪ್ರಪಂಚದ ಆದಿವಾಸಿಗಳ ಸಂಸ್ಕೃತಿಯನ್ನು ಚಿತ್ರಿಸುವ ಭಾಗವೂ ಹಿರಿದಾದುದೇ. ಮಾರ್ಶಲ್ ದ್ವೀಪವಾಸಿಗಳು,ಸಮೋವಾದವರು,ಅಮೇರಿಕದ ಅನೇಕ ಇಂಡಿಯನ್ ಬಳಗದವರು—ಇವರೇ ಮೊದಲಾದವರು ಬಳಸುತ್ತಿರುವ ಆಯುಧ, ಬೇಟೆಯ ಸಾಮುಗ್ರಿ, ಉಡುಗೆ, ಮನೆಯೊಡವೆಗಳು ನಮಗೆ

ವಿಶ್ವ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯವನ್ನುಂಟುಮಾಡಿ ಕೊಡುತ್ತವೆ. ಹೀಗೆ ಹೊರನಾಡಿನ ಸಂಸ್ಕೃತಿಗಳನ್ನು ವಿಶೇಷವಾಗಿ ತೋರಿಸುವ ಇಂಥ ಸಂಗ್ರಹಾಲಯಗಳು ನಮ್ಮ ದೇಶದಲ್ಲಿ ಇಲ್ಲವೇ ಇಲ್ಲ. ಇವು ಒಂದೊಂದು ಇತಿಹಾಸ, ನಂಬಿಕೆ, ಧರ್ಮ, ಮತ, ಅಂಧಶ್ರದ್ಧೆಗಳ ಹುಟ್ಟು, ಬೆಳವಣಿಗೆ ಮೊದಲಾದುವುಗಳನ್ನು ತೋರಿಸಬಲ್ಲ ಮುಖ್ಯ ವಸ್ತುಗಳು.

ಈ ಮಂದಿರದ ಕೆಳಗಣ ಒಂದು ಭಾಗದಲ್ಲಿ ಸಾವಿರಗಟ್ಟಲೆಯಿಂದೆಂಬಂತೆ ಅಪೂರ್ವ ಗ್ರಂಥಗಳನ್ನು ಸಂಗ್ರಹಿಸಿರಿಸಿದ್ದಾರೆ. ಅವುಗಳ ಸಂಖ್ಯೆ, ಗಾತ್ರಗಳನ್ನು ಕಂಡೇ ನಾವು ಬೆರಗಾಗುತ್ತೇವೆ. ನಮ್ಮ ದೇಶದಿಂದ ಬ್ರಿಟನನ್ನು ಸೇರಿದ ಪ್ರಾಚೀನ ಕೈಬರಹಗಳೆಷ್ಟಿವೆಯೆನ್ನುತ್ತೀರಿ? ಮೊಗಲರ ಕಾಲದ, ಅದಕ್ಕೂ ಮೊದಲಿನ ಅನೇಕ ಬರಹಗಳು ಸಚಿತ್ರವಾಗಿವೆ! ಸೂಕ್ಷ್ಮ ಚಿತ್ರಗಳನೇಕ ತುಂಬಿರುವ ಈ ಬರಹದ ಹಾಳೆಗಳಲ್ಲಿನ ಕೈಬರಹ, ಅವುಗಳ ಸುತ್ತ ಅಲಂಕಾರಕ್ಕಾಗಿ ಬರೆದ ಚೌಕಟ್ಟುಗಳು ನಮ್ಮ ದೇಶದ ಚಿತ್ರಕಲೆಯನ್ನೂ ಪ್ರತಿರೂಪ ನಿರ್ಮಾಣ ಶಕ್ತಿಯನ್ನೂ ಅದ್ಭುತವಾಗಿ ತೋರಿಸುತ್ತವೆ. ಅಂಥವುಗಳನ್ನು ಫೋಟೋ ತೆಗೆದಾದರೂ ನಮ್ಮ ದೇಶ ದೊರಕಿಸಿಕೊಳ್ಳಬೇಡವೆ? ಅವುಗಳಲ್ಲಿ ತುಂಬಿದ ಅಲಂಕಾರಿಕ ರಟ್ಟು, ಚೌಕಟ್ಟುಗಳು— ನಮ್ಮ ಮನೆಯ ಅಲಂಕಾರ, ಸೆಯ್ಗೆಯ ಕೆಲಸ, ಕೆತ್ತನೆಗಳಿಗೆ ಎಂಥ ಅಮೂಲ್ಯವಾದ ಪ್ರೇರಣೆಯನ್ನು ಕೊಡಲಾರವು?

ಈ ಬ್ರಿಟಿಷ್ ಮ್ಯೂಸಿಯುಮಿನವರು-ಮೇಲಿನ ಹಲವು ವಿವರಗಳನ್ನು, ಶಿಲ್ಪಗಳನ್ನು, ಬಿಡುಚಿತ್ರಗಳನ್ನು, ಸುಂದರವಾಗಿ ಮುದ್ರಿಸಿ, ಅಗ್ಗದ ಕಾರ್ಡುಗಳನ್ನಾಗಿ ಮಾಡಿ ಮಾರುತ್ತಿದ್ದಾರೆ. ಯಾವುದೊಂದು ಸಂಸ್ಕೃತಿಯ ಪರಿಚಯವನ್ನು ಜನಸಾಮಾನ್ಯರಿಗೆ ಮಾಡಿಕೊಡಲು ಇಂತಹ ಪ್ರಯತ್ನಗಳು ಅತ್ಯಾವಶ್ಯಕ ಕೆಲಸಗಳು. ಸಂಸ್ಕೃತಿಯ ಹಿರಿಮೆ, ಅಭ್ಯಾಸಗಳೆಂಬುವು ಬರಿಯ ವಾಗಾಡಂಬರದಿಂದ ಸಾಧನೆಯಾಗದೆಂದು ಅರಿಯಲು-ಬ್ರಿಟನಿನ ಈ ಅಗಾಧ ಮ್ಯೂಸಿಯುಮನ್ನು ಸಂದರ್ಶಿಸಿಯೇ ತಿಳಿಯಬೇಕು.

# ೬. ಬ್ರಿಟನಿನಲ್ಲಿ ಸ್ನೇಹಿತರು

ಈ ಪ್ರವಾಸಕ್ಕೆ ಹೊರಡುವುದಕ್ಕಿಂತ ಮುಂಚಿತವಾಗಿ ನಾನು ಅಲ್ಲಿನ ಕೆಲವು ಮಿತ್ರರಿಗೆ ಪತ್ರ ಬರೆದಿದ್ದೆ; ಹಾಗೆಯೇ ಕೆಲವರಿಗೆ ನನ್ನ ಸ್ನೇಹಿತರಿಂದ ಪರಿಚಯ ಪತ್ರಗಳನ್ನೂ ಕೊಂಡುಹೋಗಿದ್ದೆ. ಲಂಡನನ್ನು ಸೇರಿದೊಡನೆಯೇ–ನಾನು ಬಂದ ಸಮಾಚಾರವನ್ನು ತಿಳಿಸಿದೆ; ಪರಿಚಯ ಪತ್ರಗಳನ್ನು ಕಳುಹಿಸಿ, ಅವರ ಕರೆಯನ್ನೊ, ಮಾರುತ್ತರವನ್ನೊ ನಿರೀಕ್ಷಿಸಿ ಕುಳಿತೆ. ಇದಕ್ಕೇನೆ ನಾಲ್ಕಾರು ದಿನಗಳು ಹಿಡಿದುವು. ಆದರೆ ನಾನು ಹೋದ ದಿವಸವೇ ನಾನು ತಂಗಿದ ಹೊಟೇಲಿಗೆ– ಶ್ರೀ ನೆಟ್ಟಾರ್ ಎಂಬವರಿಂದ ನನಗೆ ಫೋನ್ ಕರೆ ಬಂದಿತ್ತೆಂದು ತಿಳಿಸಿದರು. ಮರುದಿನ ಹಾಸುಗೆಯಿಂದ ಏಳುವಾಗಲೇ ಇನ್ನೊಮ್ಮೆ ಅವರಿಂದ ಕರೆ ಬಂದಿತು. ಸುಪ್ರಭಾತದಲ್ಲಿ ನನ್ನ ಕಿವಿಗೆ ಅವರ ಕನ್ನಡದ ಸ್ವಾಗತ ದೊರೆಯಿತು. ಅವರು ಪುತ್ತೂರಿನವರಾಗಿದ್ದರು; ಅಲ್ಲಿನ ಇಂಡಿಯನ್ ಸ್ಟೂಡೆಂಟ್ಸ್ ಹಾಸ್ಟೆಲಿನ ವಾರ್ಡನರಾಗಿ ಕೆಲಸ ಮಾಡುತ್ತಿದ್ದರು. ತಮ್ಮಲ್ಲಿಗೆ ನನ್ನನ್ನು ಬರಲು ಆಮಂತ್ರಿಸಿದರು. ಆ ಸಂಜೆಯೇ ಅಲ್ಲಿಗೆ ಹೋದೆ; ಹಾಸ್ಟೆಲಿನಲ್ಲಿ ಅವರ ಮತ್ತು ಕೆಲವೊಂದು ಕನ್ನಡ ವಿದ್ಯಾರ್ಥಿಗಳ ಪರಿಚಯ ನನಗಾಯಿತು. ಪರ ನಾಡಿನಲ್ಲಿ ಒಂಟಿಯಾಗಿರುವ ವ್ಯಕ್ತಿಗೆ ತಮ್ಮವರೆನ್ನುವ ಕೆಲವರಾದರೂ ಸಂಧಿಸಿದರೆ ಅಷ್ಟೊಂದು ಸಂತೋಷವಾಗುತ್ತದೆ.

ಸಂಚಾರಿಯಾದವನಿಗೆ ಪರದೇಶದಲ್ಲಿ ಒಂಟಿತನ ತುಂಬ ಕಷ್ಟವಾಗಿ ಕಾಣಿಸುತ್ತದೆ. ನನ್ನ ಪಾಲಿಗೆ ಕೆಲವೊಂದು ನಗರಗಳಲ್ಲಿ ಒಬ್ಬರಲ್ಲ ಒಬ್ಬ ಪರಿಚಿತರು ದೊರಕಿದರಾದರೂ, ಹಾಗೆ ದೊರೆಯದ ಊರುಗಳಲ್ಲಿ ಈ ಏಕಾಕಿತನ ತುಂಬ ಕಷ್ಟವಾಗಿಯೇ ಕಾಣಿಸಿತು. ಮಾನಸಿಕ ಜೀವಿಯಾದ ಮನುಷ್ಯನಿಗೆ, ಬದುಕು ಮಾತಿಲ್ಲದೆ ಕಳೆಯಲಾರದು. ಆದರೆ ಯಾರೊಡನೆ ಮಾತಾಡಬೇಕು? ಅದೂ ದಿನ, ದಿನಗಳ ಮೌನ ನಮ್ಮ ಪಾಲಿಗೆ ಎದುರಾದರೆ, ನಮ್ಮವರಿಂದ ದೂರವಾಗಿರುವೆನಲ್ಲಾ ಎಂಬ ನೆನವರಿಕೆಯಾಗುತ್ತದೆ; ಮನಸ್ಸು ಮುಗ್ಗುತ್ತದೆ. ಕನಿಷ್ಠ ಒಬ್ಬನಾದರೂ ಸಹಚರನಿರಬೇಕು. ಆತ ನಮ್ಮ ಮನಸ್ಸಿಗೆ, ಅಭಿರುಚಿಗಳಿಗೆ ಹೊಂದುವವನಾದರೆ ತುಂಬ ಅನುಕೂಲ. ಅದಿಲ್ಲದಂಥ ಮಿತ್ರರು ದೊರಕಿದರೂ ಅವಾಂತರವೇ. ಒಂದೆರಡು ಕಡೆಗಳಲ್ಲಿ ಅಂಥ ಸ್ನೇಹಿತರೂ ದೊರಕಿದರು. ಆಗಲೂ ತೊಂದರೆಯೇ. ಲಂಡನ್ ನನಗೆ ಈ

ವಿಷಯದಲ್ಲಿ ತುಂಬ ಹಿತಕರವಾಗಿಯೇ ಪರಿಣಮಿಸಿತು. ಈ ಹಾಸ್ಟೆಲಿನಲ್ಲಿ ಒಬ್ಬರಲ್ಲ ಒಬ್ಬರು ಸಿಗುತ್ತಿದ್ದರು; ನನ್ನ ತಾಯ್ನುಡಿಯಲ್ಲಿ ಮನಬಿಚ್ಚಿ ಮಾತ ನಾಡಲು ಅವಕಾಶವಾಗುತ್ತಿತ್ತು. ಹಾಗಿಲ್ಲದೆ ಹೋಗಿದ್ದರೆ ನನ್ನ ಪ್ರವಾಸದ ಮೂರುತಿಂಗಳ ಅವಧಿಯಲ್ಲಿ ನಾನು ಇಂಗ್ಲಿಷೊಂದನ್ನು ಬಳಸಿಯೇ ದಿನ ಕಳೆಯಬೇಕಾಗಿತ್ತು. ನನ್ನ ಯುರೋಪಿನ ಪ್ರವಾಸದಲ್ಲಿ ಒಟ್ಟು ಆರೆಂಟು ಮಂದಿ ಕನ್ನಡಿಗರಾದರೂ ದೊರೆತುದರಿಂದ ತಾಯ್ನುಡಿಯ ಸವಿಗೂ, ನಮ್ಮ ದಲ್ಲದ ಅನ್ಯಭಾಷೆ ಯಾವುದೇ ಇರಲಿ, ಅದರ ಸವಿಗೂ, ಇರುವ ವ್ಯತ್ಯಾಸ ವನ್ನು ನಾನು ಮನಗಾಣುವಂತಾಯಿತು.

ಈ ಹಾಸ್ಟೆಲಿನ ಪರಿಚಯವಾದುದು ಇನ್ನೊಂದು ದೃಷ್ಟಿಯಿಂದಲೂ ಹಿತಕರವಾಯಿತು. ದಕ್ಷಿಣ ಭಾರತೀಯನಾದ ನನಗೆ ಯುರೋಪಿನ ಜನ ಗಳ ಸಪ್ಪೆ ಭೋಜನ ಹಿಡಿಸುತ್ತಿರಲಿಲ್ಲ. ಅದರಲ್ಲಿಯೂ ನಾನು ಶಾಖಾಹಾರಿ. ಹೀಗಿದ್ದುದರಿಂದ ಇಲ್ಲಿರುವಷ್ಟು ದಿನ ಉಪ್ಪು, ಹುಳಿ, ಕಾರಗಳ ಸಲುವಾಗಿ ನಾಲಗೆ ಚಡಪಡಿಸುತ್ತಿತ್ತು. ಹಾಗೆಂದೇ, ಅನೇಕ ಹಿಂದೀಯರು ಸಂಜೆಯ ಊಟಕ್ಕೆ ಈ ಹಾಸ್ಟೆಲಿಗೆ ಬಂದು ಹೋಗುತ್ತಾರೆ. ಅಂಥವರಲ್ಲಿ ಹಡಗಿನಲ್ಲಿ ನನಗೆ ಪರಿಚಿತರಾಗಿ ದೊರಕಿದ ಶ್ರೀ ಪಿಳ್ಳೆಯವರೂ ಒಬ್ಬರಿದ್ದರು.

ನಾನು ನೋಡಲಿರುವ ಲಂಡನಿನ ಪ್ರೇಕ್ಷಣೀಯ ಸ್ಥಳಗಳು ಹಾಸ್ಟೆ ಲಿರುವ ಭಾಗಕ್ಕೆ ಸಮೀಪ; ನಾನಿರುವ ಹೊಟೇಲಿಂದ ದೂರ. ಹೀಗಾಗಿ ಪ್ರತಿ ನಿತ್ಯವೂ ಅಲ್ಲಿಗೆ ಹೋಗುತ್ತಿದ್ದೆ. ಶ್ರೀ ನೆಟ್ಟೂರ್‌ರವರ ಕಚೇರಿಯಲ್ಲೇನೆ ನನ್ನ ಬಿಡಾರ ಹೂಡುತ್ತಿದ್ದೆ.

ನಾನು ಹೋದ ಮೂರು ನಾಲ್ಕು ದಿನಗಳಲ್ಲಿ ನನ್ನ ಪತ್ರಗಳಿಗೆ ಒಂ ದೊಂದಾಗಿ ಉತ್ತರ ಬರತೊಡಗಿದುವು. ಭೇಟಿಗೆ ಕರೆ, ಊಟಕ್ಕೆ ಕರೆ, ಮಾತಿಗೆ ಕರೆಗಳು ಬರತೊಡಗಿ ಸ್ಥಳೀಯ ಜನಗಳೊಂದಿಗೆ ಸಂಪರ್ಕ ಸ್ನೇಹ ಗಳನ್ನು ಬೆಳೆಸಲು ಅನುಕೂಲವಾಯಿತು. ಮೊದಲನೆಯ ಕರೆಯೆಂಬುದು ಅಲ್ಲಿನ ಥಿಯಾಸೊಫಿಕಲ್ ಕೇಂದ್ರದ ಮಿಸ್ ಬೆಸ್ವಿಕರವರಿಂದ ಬಂದಿತು. ಹಾಗೂ ಹೀಗೂ ಅವರ ಮನೆಯನ್ನು ಅರಸಿಹೋದೆ; ಮುಂದಿನ ಬಾಗಿಲಿನ ಗುಂಡಿ ಒತ್ತಿದೊಡನೆಯೇ, ಸುಮಾರು ಅರವತ್ತು ವಯಸ್ಸಿನ ಬೆಸ್ವಿಕರವರು ಬಂದು ನನ್ನನ್ನು ಆದರದಿಂದ ಬರಮಾಡಿಕೊಂಡರು. ಅವರು ಭಾರತಕ್ಕೆ ಬಂದವರು; ಅದರ ಅಧ್ಯಾತ್ಮ,ಸಂಸ್ಕೃತಿಗಳನ್ನು ಮೆಚ್ಚಿದವರು. ಆದುದರಿಂದ

ನಮ್ಮೊಳಗಿನ ಮಾತುಕತೆಗಳಿಗೆ ಧಾರಾಳವಾಗಿ ವಿಷಯಗಳಿದ್ದುವು. ಆಕೆಯ ಒತ್ತಾಯಕ್ಕೆ, ಒಂದು ದಿನ ಅವರ ಸಂಘದ ಆಶ್ರಯದಲ್ಲಿ ಅವರ ಹತ್ತೆಂಟು ಮಿತ್ರರ ಮುಂದೆ ಕರ್ಣಾಟಕದ ಜಾನಪದಕಲೆಗಳನ್ನು ಕುರಿತು ನಾನೊಂದು ಉಪನ್ಯಾಸವನ್ನೂ ಮಾಡಬೇಕಾಯಿತು. ಆ ಉಪನ್ಯಾಸ ಹೇಗೆಯೇ ಇರಲಿ; ಮಿತ್ರಲಾಭವೇನೋ ಸಂತೋಷಕರವಾಗಿತ್ತು.

ಮಿಸ್ ಬೆಸ್ವಿಕರ ಪರಿಚಯದಿಂದಾಗಿ ಅವರ ಮಿತ್ರರಾದ 'ಕೊಟುವಾ' ದಂಪತಿಗಳು, ಇವರು ಬೆಲ್ಜಿಯಮಿನವರು, ನೌಕರಿಗಾಗಿ ಲಂಡನಿನಲ್ಲಿರುವವರು, ನಮ್ಮನ್ನು ತಮ್ಮ ಮನೆಗೊಂದು ದಿನ ಭೋಜನಕ್ಕೆ ಆಮಂತ್ರಿಸಿದರು. ಆ ದಿನ ಇಬ್ಬರು ವೆಲ್ಷ್ ದಂಪತಿಗಳೂ ಭೋಜನಕ್ಕೆ ಆಮಂತ್ರಿತರಾಗಿದ್ದರು. ಮಿಸೆಸ್ ಕೋಟುವಾ ಸವಿಗಾರಳೂ, ಶಿಷ್ಟಾಚಾರ ಸಂಪನ್ನಳೂ ಆದ ಗೃಹಿಣಿ. ಹೀಗಾಗಿ ನಮ್ಮ ಎರಡು ಮೂರು ತಾಸಿನ ಸಿಡಿದಾದ ಸಂಭಾಷಣೆ, ಸವಿಯೂಟದಿಂದಲೂ ಹಿತವಾಗಿತ್ತು; ನಡುವೆ ನಡೆದ ಸಂಸ್ಕೃತಿಪರವಾದ ಅನೇಕ ವಿಚಾರ ಲಹರಿಗಳಿಂದಲೂ ರುಚಿಕರವಾಗಿತ್ತು. ಈ ಪರಿಚಯಕ್ಕೆ ಕಾರಣಳಾದ ಮಿಸ್ ಬೆಸ್ವಿಕರ ಸಹಾಯದಿಂದ, ನನಗೆ ನಾರ್ವೆ ದೇಶದ ಒಸ್ಲೋ ನಗರದಲ್ಲಿ ತುಂಬ ಸಹಾಯಕರೂ, ಅನುಕೂಲರೂ ಆದ ಗೆಳೆಯರು ಪ್ರಾಪಿಸಿದರು.

ನಮ್ಮ ದೇಶದ ಬಡೋದೆ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ। ಎಂ. ಎನ್. ಶ್ರೀನಿವಾಸರವರು ತಮ್ಮ ವಿದ್ವಾಂಸ ಮಿತ್ರರಾದ ಡಾ। ಹೈಮನ್‌ಡಾರ್ಫ್ ಎಂಬವರಿಗೆ ಕಾಗದ ಬರೆದಿದ್ದರು. ಹಾಗೆಯೇ– ನಾನು ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯ ವಿದೇಶವಾರ್ತಾ ಸಂಗ್ರಾಹಕರಾದ ಗೈ ವಿಂಟ್ ಎಂಬವರನ್ನು ಭೇಟಿಯಾಗಿ ಬರುವುದೊಳಿತೆಂದು ಸೂಚಿಸಿದ್ದರು. ಹಾಗೆಂದು ಆ ಇಬ್ಬರಿಗೂ ನಾನು ಪತ್ರ ಬರೆದಿದ್ದೆ. ಡಾ। ಹೈಮನ್‌ಡಾರ್ಫರಿಂದ ತ್ವರಿಯಲ್ಲಿ ಪ್ರತ್ಯುತ್ತರ ಬಂದಿತು. ಅವರು ಲಂಡನ್ ಯುನಿವರ್ಸಿಟಿಯ ಪ್ರಾಧ್ಯಾಪಕರು; ಅಲ್ಲಿನ--ಆಸ್ಯ ಮತ್ತು ಆಫ್ರಿಕಗಳ ಸಂಸ್ಕೃತಿ ಅಭ್ಯಾಸ ವಿಭಾಗದಲ್ಲಿ ಕೆಲಸಮಾಡುತ್ತಿದ್ದರು. ಅವರು ಭಾರತದ ಅನೇಕ ಆದಿವಾಸಿ ಜನಗಳ ಸಂಸ್ಕೃತಿಯನ್ನು ಅಭ್ಯಸಿಸಿದವರು; ನಮ್ಮ ದೇಶದಲ್ಲಿ ಈ ಅಭ್ಯಾಸಕ್ಕಾಗಿಯೇ ಎಷ್ಟೋ ಕಾಲ ಬಂದು ವಾಸಿಸಿದವರು. ಅವರು "ನಾಳೆ ಸಂಜೆ ೫ ಗಂಟೆಗೆ ಉಪಾಹಾರಕ್ಕೆ ಬನ್ನಿ" ಎಂದು ಬರೆದಾಗ, ನನಗೆ

ತುಂಬ ಆನಂದವಾಯಿತು. ಅವರ ಅಭ್ಯಾಸದ ಕೊಟಡಿಗೇನೆ ಹೋಗಿದ್ದೆ. ಆಗ ಅವರು ತಮ್ಮ ಶಿಷ್ಯರಾದ ಡಾ। ರೂಕ್ಸ್ಬಿ ಎಂಬವರೊಡನೆ ಮಾತನಾಡು ತ್ತಿದ್ದರು. ಸ್ವಾಗತವಾಯಿತು; ಬಳಿಯ ಗೆಳೆಯರ ಪರಿಚಯವನ್ನು ಮಾಡಿ ಕೊಟ್ಟುದಾಯಿತು. ಡಾ। ಶ್ರೀನಿವಾಸರು ನನಗೆ ಡಾ। ರೂಕ್ಸ್ಬಿಯವರ ವಿಚಾರವಾಗಿಯೂ ಬರೆದಿದ್ದರು. ಅವರು ಈ ವರ್ಷವೇ ಭಾರತಕ್ಕೆ, ಆದಿವಾಸಿ ಗಳನ್ನು ಕುರಿತಾದ ಸಂಶೋಧನೆಗೆ, ಬರುವರೆಂದೂ ತಿಳಿಸಿದ್ದರು. ಮರುದಿನ ಅವರೂ ನನ್ನನ್ನು ಉಪಾಹಾರಕ್ಕೆ ಕರೆದರು. ಅವರು ಹೊರಟು ಹೋಗು ತ್ತಲೇ, ಮಿಸೆಸ್ ಹೈಮನ್ ಡಾರ್ಫರವರು ಬಂದು ನಮ್ಮನ್ನು ಸೇರಿಕೊಂಡರು. ಚಹ, ಬಿಸ್ಕಿಟುಗಳ ಜತೆಗೆ ನಮ್ಮ ಮಾತುಕತೆ ಮುಂದುವರಿಯಿತು.

ಡಾಕ್ಟರವರಾಗಲಿ, ಅವರ ಪತ್ನಿಯಾಗಲಿ ಇಂಗ್ಲೆಂಡ್ ದೇಶದವರಲ್ಲ; ಆಸ್ಟ್ರಿಯದವರು. ಇಬ್ಬರೂ ತೀರ ಸರಳ ಸ್ವಭಾವಿಗಳು. ಜಾನಪದ ಸಂಸ್ಕೃತಿಯ ಪರಿಚಯಕ್ಕಾಗಿ ಕೂಡಿಯೇ ದುಡಿದವರು. ಹೀಗಾಗಿ ನಮ್ಮ ಮಾತುಕತೆ ಗಳಿಗೆ ವಿಷಯಗಳ ಅಭಾವವಿರಲಿಲ್ಲ. ಭಾರತದ ಸ್ವಾತಂತ್ರ್ಯಾನಂತರದ ಮಾತುಕತೆಗಳು ಬಂದುವು; 'ಶಾಂತ' ರೀತಿಯ ಮಹಾ ಚುನಾವಣೆಯನ್ನು ಕುರಿತು ತರ್ಕವಾಯಿತು. ನಾನಾಗಲೇ ಚುನಾವಣೆಯನ್ನು ಮುಗಿಸಿ ಹೊರಟ ವನೂ, ಪ್ರತ್ಯಕ್ಷ ಅನುಭವ ಸಂಪಾದಿಸಿದವನೂ ಆದುದರಿಂದ– ನನ್ನ ಹಲವು ಅನುಭವಗಳನ್ನು ಹೇಳಿದೆ. ಅವರಿಗೆ ಸಾಕಷ್ಟು ನಗು ಬರುವಂತಾಯಿತು. "ಹಾಗಿರುವುದು ಸೋಜಿಗವಲ್ಲ; ನಮಗೆ ನಿಮ್ಮ ದೇಶದ ನಿಕಟ ಪರಿಚಯ ವಿದೆ. ನೀವೆನ್ನುವ ಮಾತು ನಿಜ. ಅಂಥ ಸಾರ್ವಜನಿಕ ಮತದಾನ ಪ್ರಯೋ ಗಕ್ಕೆ ಇನ್ನೂ ಕಾಲ ಬಂದಿಲ್ಲ" ಎಂದು ಅವರು ತಮ್ಮ ಅಭಿಪ್ರಾಯವನ್ನು ಸೂಚಿಸಿದರು.

ಅಲ್ಲಿಂದ 'ಆದಿವಾಸಿ' ಸಂಸ್ಕೃತಿಗಳಿಗೆ ಸಂಬಂಧಪಟ್ಟಂಥ ವಿಷಯ ಗಳಲ್ಲಿ ಮಾತುಕತೆಗಳು ನಡೆದುವು. ನಮ್ಮ ಕನ್ನಡನಾಡಿನ ಯಾವ್ಯಾವ ಭಾಗಗಳಲ್ಲಿ ಈ ವಿಷಯದ ವಿಚಾರ, ವಸ್ತು ಸಂಗ್ರಹಗಳಿಗೆ ಅವಕಾಶವಿದೆ ಯೆಂಬುದನ್ನು ಕುರಿತು ತರ್ಕಿಸಿದೆವು. ಅವರು ಸಂಗ್ರಹಿಸಿದ ಅನೇಕ ಚಿತ್ರ ಗಳನ್ನು ನನಗೆ ತೋರಿಸಿದರು. ಮುಂದಿನ ವಾರ, ಇನ್ನೂ ವಿರಾಮವಾಗಿ ಮಾತನಾಡಲು ಅನುಕೂಲಿಸುವಂತೆ, ತಮ್ಮ ಮನೆಗೆ ಒಂದು ರಾತ್ರಿ ಭೋಜನಕ್ಕೆ ಬರಲು ಆಮಂತ್ರಿಸಿದರು.

ಲಂಡನ್ ವಿಶ್ವವಿದ್ಯಾಲಯದವರು ಪೌರ್ವಾತ್ಯ ದೇಶಗಳ ಸಂಸ್ಕೃತಿಗಳ ವಿಚಾರದಲ್ಲಿ ನಡೆಯಿಸುತ್ತಿರುವ ಸಂಶೋಧನೆ,ಅದಕ್ಕಾಗಿ ಇರಿಸಿಕೊಂಡ ಪ್ರಾಧ್ಯಾಪಕ ವರ್ಗ, ವ್ಯಯಿಸುತ್ತಿರುವ ಹಣ–ಇವನ್ನೆಲ್ಲ ಕಾಣುತ್ತಿರುವಾಗ ನಮ್ಮ ದೇಶವೇ ನಮ್ಮ ಸಂಸ್ಕೃತಿಯ ವಿಚಾರದಲ್ಲಿ ಎಷ್ಟೊಂದು ಉದಾಸೀನವಾಗಿದೆ–ಎಂದನಿಸದಿರಲಾರದು.

ಮುಂದಣ ವಾರದಲ್ಲಿ, ಒಂದು ದಿನ ಗೊತ್ತುಮಾಡಿಕೊಂಡು ಅವರ ಮನೆಗೆ ರಾತ್ರಿ ಭೋಜನಕ್ಕೆ ಹೋಗಿದ್ದೆ. ನಾನು ಭಾರತೀಯನಾದುದರಿಂದ ತಮ್ಮ ಅಡುಗೆ ನನಗೆ ರುಚಿಸದೆಂದು, ತಮ್ಮೊಬ್ಬ ಮಿತ್ರರನ್ನು ಅವರು ಮನೆಗೆ ಬರಮಾಡಿಕೊಂಡಿದ್ದರು. ಅವರು ಪುಣೆಯ ಸ್ತ್ರೀ ವಿಶ್ವವಿದ್ಯಾಲಯದ ಸ್ಥಾಪಕರಾದ ಡಾ। ಕರ್ವೆಯವರ ಸೊಸೆ ಮಿಸೆಸ್ ಕರ್ವೆಯವರು. ಅವರ ಗಂಡನೂ ಈಗ ಲಂಡನ್ ವಿಶ್ವವಿದ್ಯಾಲಯದಲ್ಲಿ ಕೆಲಸಮಾಡುತ್ತಿದ್ದಾರೆ. ಮಿಸೆಸ್ ಕರ್ವೆಯವರ ಭಾರತೀಯ ಅಡುಗೆಯ ಪರಿಚಯವಾದಂತೆ,ಅವರ ಪರಿಚಯವೂ ನನಗಾಯಿತು. ಹೈಮನ್‌ಡಾರ್ಫ ದಂಪತಿಗಳು-ತಮ್ಮ ಮನೆ, ಮನೆಯ ನೆಲ, ಕುರ್ಚಿ, ಮೇಜು ಮೊದಲಾದ ಪ್ರತಿಯೊಂದನ್ನೂ ಇರಿಸಿಕೊಂಡ ಓರಣ, ಶುಚಿ, ಚೆಲುವುಗಳು ನೋಡುವಂಥವು. ಅವುಗಳನ್ನು ಚೊಕ್ಕ, ಹೊಳಪಾಗಿ ಇರಿಸಲು ದಿನದ ಎಷ್ಟು ವೇಳೆ ಕಳೆಯುತ್ತಿದ್ದಾರೋ ಎನಿಸಬೇಕು.

ಈ ದಂಪತಿಗಳು ಸ್ವತಃ ಪಾಂಡಿತ್ಯಪೂರ್ಣರಿರುವಷ್ಟೇ ವಿನಯಶೀಲರು. ತಮ್ಮ ಅಭ್ಯಾಸದ ವಿಷಯಗಳಲ್ಲಿ ತಾಳುತ್ತಿದ್ದ ಆತುರ, ಉತ್ಸಾಹಗಳು ಬರಿಯ ಸಂಬಳಕ್ಕಾಗಿ ದುಡಿಯುವ ಮಹಾನುಭಾವರಂತೆ ಇರಲಿಲ್ಲ. ನೌಕರಿಯಿಂದ ನಿವೃತ್ತರಾದ ಮೇಲೆಯೂ ಅವರು "ಎಂತ್ರೊಪಾಲಜಿ"ಯ ಪಂಡಿತರೇ. ಅವರ ಆಯುಷ್ಯವೇ ಅದಕ್ಕೆ ಮೀಸಲು. ಅವರು ಕೊಟ್ಟೊಂದು ಪರಿಚಯ ಪತ್ರದಿಂದ ನನಗೆ ಕೊಪನ್‌ಹೇಗನ್ ನಗರದಲ್ಲಿ ಭಾರತಪ್ರಿಯರಾದ ಮತ್ತೊಬ್ಬ ಪಂಡಿತರ ಸ್ನೇಹ ದೊರೆಯಿತು. ಮೊದಲಬಾರಿ ಈ ಸ್ನೇಹಿತರೊಡನೆ ಮಾತನಾಡುತ್ತಿರುವಾಗ ಪ್ರಾಸಂಗಿಕವಾಗಿ,ನನ್ನ ಮಿತ್ರರಾದ ಡಾ। ಆರ್ನಲ್ಡ್ ಬಾಕೆಯವರ ಸುದ್ದಿಯನ್ನೆತ್ತಿದೆ. ಅದು ಬರುತ್ತಲೇ 'ಅವರೂ ನಮ್ಮ ವಿಶ್ವವಿದ್ಯಾಲಯದಲ್ಲಿದ್ದಾರೆ' ಎಂದರು ಹೈಮನ್‌ಡಾರ್ಫರವರು. ಆಗ ನನಗಾದ ಆನಂದ ಅಷ್ಟಿಷ್ಟಲ್ಲ. ಅವರು ಆಕ್ಸ್‌ಫರ್ಡಿನಲ್ಲಿರುವರೆಂದು ಊಹಿಸಿ ನಾನು ಪತ್ರಬರೆದು, ಉತ್ತರ ಬಾರದೆ ನಿರಾಶನಾಗಿದ್ದೆ. ಈ ಗೆಳೆ

ಯರು ನನಗೆ ಪೂರ್ವಪ ಮಿತ್ರರು. ಅವರೂ ಅವರ ಪತ್ನಿಯೂ ಹಿಂದುಸ್ಥಾನ ದಲ್ಲಿ ಸುಮಾರು ಇಪ್ಪತ್ತು ವರ್ಷಗಳ ಆಯುಷ್ಯವನ್ನು ಕಳೆದವರು. ಸಂಗೀತ, ಜಾನಪದ ನೃತ್ಯ,ಸಂಸ್ಕೃತಿ ಮೊದಲಾದ ಹಲವು ವಿಷಯಗಳನ್ನು ತಿಳಿದವರು. ಯುದ್ಧ ಕೊನೆಗೊಳ್ಳುವ ತನಕ ಭಾರತದಲ್ಲಿಯೇ ಇದ್ದು, ಅನಂತರ ಯುರೋಪಿಗೆ ಹೋದರು. ಈ ಆರೆಂಟು ವರ್ಷಗಳಲ್ಲಿ ನನ್ನ ಅವರ ಸಂಪರ್ಕ ಕಡಿದು ಹೋಗಿತ್ತು. ಅವರು ಅಷ್ಟು ಸಮೀಪವಾಗಿದ್ದಾರೆಂದು ಕೇಳಿ ಹಿಗ್ಗಿದೆ; ನಾನು ಬಂದ ಸುದ್ದಿಯನ್ನು ಅವರಿಗೆ ತಿಳಿಸುವಂತೆ ವಿನಂತಿಮಾಡಿದೆ.

ನಾನು ಡಾ। ರೂಕ್ಸ್ಬಿಯವರ ಭೇಟಿಗೆಂದು ಲಂಡನ್ ವಿಶ್ವವಿದ್ಯಾಲಯಕ್ಕೆ ಹೋದಾಗ ಅಲ್ಲಿಯೇ ಮಿಸೆಸ್ ಬಾಕೆಯವರ ಭೇಟಿಯಾಯಿತು. ಅನಂತರದ ಒಂದೆರಡು ತಾಸಿನಲ್ಲಿಯೇ ನಾನು ಡಾಕ್ಟರ್ ಬಾಕೆ ದಂಪತಿಗಳ ಸಮ್ಮುಖದಲ್ಲಿ ಕುಳಿತು,ನಮ್ಮ ಹಳೆಗಾಲದ ಸವಿನೆನಪುಗಳನ್ನು ಕೂಡಿ ಸ್ಮರಿಸುವುದು ಸಾಧ್ಯವಾಯಿತು. ಆ ಗಂಡಹೆಂಡಿರಿಬ್ಬರು ಡಚ್ಚರು; ಭೀಮಕಾಯರು. ಅವರನ್ನು ಕಂಡಾಗ ನಮ್ಮ ಮನೆಯನ್ನು ಹೊಕ್ಕಷ್ಟೇ ಮನಸ್ಸು ಉಲ್ಲಸಿತವಾಯಿತು. ಹಳೆಯ ನೆನಪು, ಅನುಭವ, ಗೆಳೆತನದ ಮಾತುಗಳು, ಗೀತ ನೃತ್ಯಗಳನ್ನು ಕುರಿತಾದ ನೂರಾರು ವಿಮರ್ಶೆಗಳು ನಮ್ಮೊಳಗೆ ಉರುಳಾಡಿದುವು. ಅನಂತರ ಪ್ರತಿ ಎರಡು ದಿವಸಗಳಿಗೊಮ್ಮೆ ಎಂಬಂತೆ ನಾನವರ ಮನೆಗೋ, ಆಫೀಸಿಗೋ ಹೋಗಿ ವೇಳೆ ಕಳೆಯತೊಡಗಿದೆ.

ಡಾಕ್ಟರವರ ಪಾಂಡಿತ್ಯ ಭಾರತೀಯ ಸಂಸ್ಕೃತಿಯ ಅಂಗವಾದ ಗೀತ, ನೃತ್ಯ, ಮೊದಲಾದುವಕ್ಕೆ ಸಂಬಂಧಿಸಿದುದೆಂದೆ. ಅವರು ಚೆನ್ನಾಗಿ ಸಂಸ್ಕೃತವನ್ನು ಅಭ್ಯಸಿಸಿದವರು; ಕೆಲವರಿಗೆ ಪಾಠವನ್ನೂ ಹೇಳುತ್ತಿದ್ದಾರೆ. ಅವರು ಭಾರತದಲ್ಲಿರುವಾಗ ನಮ್ಮ ನಾಡಿನ ಮೂಲೆಮೂಲೆಗಳಲ್ಲಿ ಬಳಕೆಯಲ್ಲಿರುವ ಜಾನಪದ ಗೀತಗಳನ್ನು ಸಂಗ್ರಹಿಸಿದ್ದರು. ನೃತ್ಯಗಳ ಚಲಚ್ಚಿತ್ರಗಳನ್ನುಸಂಗ್ರಹಿಸಿದ್ದರು. ಅವರು ಕರ್ಣಾಟಕದಲ್ಲಿ ಈ ಕೆಲಸ ಮಾಡುತ್ತಿರುವಾಗಲೇ ನನ್ನ ಅವರ ಪರಿಚಯಕ್ಕೆ ಅವಕಾಶವಾಯಿತು. ಲಂಡನ್ ವಿಶ್ವವಿದ್ಯಾಲಯವೂ ಈ ಕೆಲಸದಲ್ಲಿ ಅವರಿಗೆ ನೆರವಾಗಿದೆ. ಇಂದು ಅಮೇರಿಕನ್ ತರುಣಿಯೊಬ್ಬಳು ಅವರ ಕೆಳಗೆ, ಭಾರತೀಯ ಸಂಗೀತದ ಪರಿಚಯಮಾಡಿಕೊಳ್ಳುತ್ತಿದ್ದಾಳೆ. ಇಂಥ ವಿಷಯವನ್ನು ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಬರಿಯ ಒಂದೆರಡಾದರೂ, ಲಂಡನ್, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳು

ಈ ಸಲುವಾಗಿ ಮಾಡುತ್ತಿರುವ ವೆಚ್ಚವಾಗಲಿ, ಪಡುತ್ತಿರುವ ಶ್ರಮವಾಗಲಿ ಸ್ತುತ್ಯಾರ್ಹವಾಗಿದೆ.

ಇನ್ನೂ ಒಂದು ಮಾತು–ಡಾ। ಬಾಕೆ, ಡಾ। ಹೈಮನ್‌ಡಾರ್ಫರಂತಹ ವಿದ್ವಾಂಸವರ್ಗದವರಿಗೂ ನಮ್ಮಲ್ಲಿ ಸಾಮಾನ್ಯವಾಗಿ ಕಾಣಬಹುದಾದ ವಿದ್ವಾಂಸರೆನಿಸುವವರಿಗೂ ತುಂಬ ಅಂತರವಿದೆ. ಇವರು ತಮ್ಮ ಉದ್ಯೋಗ ದಲ್ಲಿ ಹೆಚ್ಚಿನ ಅಭಿರುಚಿಯುಳ್ಳವರು. ನೌಕರಿಯ ಸಲುವಾಗಿಯಲ್ಲವಾದರೂ ಆ ಕೆಲಸವನ್ನು ಸಾಧಿಸುವಂತಹರು. ಅಂತಹ ವ್ಯಕ್ತಿಗಳ ಸಾಮಾನ್ಯ ಪತ್ರ ವ್ಯವಹಾರ, ಮಾತುಕತೆಗಳಲ್ಲೂ ತಮ್ಮ ಪ್ರಿಯ ವಿಷಯಗಳಿಗೆ ಸಂಬಂಧಿಸಿದ ಹಲವಾರು ಸಂಗತಿಗಳು ಪ್ರಕಟವಾಗುತ್ತವೆ. ಅವರು ತಮ್ಮ ಐಚ್ಛಿಕ ವಿಷ ಯದ ಸಲುವಾಗಿ ಶರೀರ ಶ್ರಮ, ಮಾನಸಿಕ ಶ್ರಮಗಳೆರಡನ್ನೂ ಬಹುವಾಗಿ ಪಟ್ಟವರು. ಅದೂ ಡಾ।ಬಾಕೆಯವರ ಒಡನಾಟ ನನಗೆ ಕೆಲವು ದಿನಗಳ ತನಕ ವಾದರೂ ಆಗಿರುವುದರಿಂದ, ಅವರ ದುಡಿಮೆಯ ರೀತಿಯನ್ನೂ ಬಲ್ಲೆನು.

ನಾನು ಬಾಕೆಯವರ ಬಳಿಗೆ ಹೋದಾಗ, ಅವರಲ್ಲಿಗೊಮ್ಮೆ ಡಾ। ಸಿಂಹ ಎಂಬ ಬೀಹಾರಿ ವಿದ್ವಾಂಸರು ತಮ್ಮ ಒಂದು ಪ್ರಬಂಧವನ್ನು ಕುರಿತು ಅಭಿಪ್ರಾಯ ಕೇಳಲು ಬಂದಿದ್ದರು. ಇನ್ನೊಮ್ಮೆ ನಾನು ಅವರ ಜತೆಗೆ ನಮ್ಮ ನಾಡಿನಲ್ಲಿ ತಯಾರಾದ "ರಿವರ್" ವರ್ಣಚಿತ್ರ ನೋಡಲು ಹೋಗಿದ್ದೆ. ಆ ಚಿತ್ರವನ್ನು ಕುರಿತಾಗಿ ಅವರು "ಇದು ಬಂಗಾಲದ ಗಂಗಾ ತೀರದ ಜೀವನ ವನ್ನೇನೋ ಸುಂದರವಾಗಿ ತೋರಿಸುತ್ತಿದೆ. ನಿಜ; ಕತೆ ಮಾತ್ರ ತೀರ ದುರ್ಬಲ. ಆದರೆ ಬಂಗಾಲದಲ್ಲಿ ಭರತನಾಟ್ಯವನ್ನೂ,ದಕ್ಷಿಣಾದಿ ಗೀತವನ್ನೂ ತಂದು ಏತಕ್ಕೆ ತುಂಬಿಸಿದರೋ ತಿಳಿಯೆ!" ಎಂದು ಟೀಕೆಮಾಡಿದರು.

ನನ್ನ ತೀರ ಅಲ್ಪಕಾಲದ ಪರಿಚಯ ಮೆಂಚೆಸ್ಟರ್ ಗಾರ್ಡಿಯನಿನ ಗಯ್ ವಿಂಟರೊಡನೆ. ನಾನು ಕಾಗದ ಬರೆದಾಗ ಅವರು ಊರಲ್ಲಿರದಿದ್ದು ದರಿಂದ, ಅವರಿಂದ ಕರೆ ಬರಲು ತುಂಬ ವಿಲಂಬವಾಯಿತು. ಕೊನೆಗೆ ಆ ಕರೆ ಬಂದಿತು. ಒಂದು ಬೆಳಗ್ಗೆ ಅವರನ್ನರಸಿಕೊಂಡು ನಿಶ್ಚಿತ ವೇಳೆಗೆ ಫ್ಲೀಟ್ ಸ್ಟ್ರೀಟಿನ ಅವರ ಕಚೇರಿಗೆ ಹೋದೆ. ಭೇಟಿಯಾಗುತ್ತಲೇ, ಸ್ವಾಗತಿಸಿ "ನಾನಿಲ್ಲಿ ರುವುದಿಲ್ಲ–ನೀವು ನೆಟ್ಟಗೆ ನಾಸಿರುವ ಕೆಂಬ್ರಿಜಿಗೆ ಬಂದಿದ್ದರೆ ಒಂದು ದಿನವೆಲ್ಲ ವಿರಾಮವಾಗಿ ಮಾತನಾಡಬಹುದಿತ್ತು. ಇಲ್ಲಿ ಇನ್ನರೆತಾಸಿನಲ್ಲಿ ಬೇರೊಂದು ಕಡೆಗೆ ಹೋಗಬೇಕು. ಇದರಲ್ಲೇ ವೇಳೆ ಹೋಗುತ್ತದೆ" ಎಂದರು. ಅನಂತರ

ಭಾರತದ ರಾಜಕೀಯದ ವಿಚಾರವಾಗಿ ನಮ್ಮಲ್ಲಿ ಮಾತುಕತೆಗಳಾದುವು. ಬಳಿಕ—ಅವರು ನನಗೆ Existencialism ನ ತಿಳಿವಿದೆಯೋ—ಎಂದು ಕೇಳಿದರು. ನನಗದು ಹೊಸ ವಿಷಯ; ಅಲ್ಲದೆ ತತ್ವಜ್ಞಾನದ ಯಾವ ಗೊಂದಲಕ್ಕೂ ನಾನು ಹೋದವನಲ್ಲ. ಫ್ರಾನ್ಸಿನಲ್ಲಿ ಇತ್ತೀಚೆಗೆ ಕೆಲವು ಮಹನೀಯರಿಂದ ಹುಟ್ಟಿಕೊಂಡ ಈ ಹೊಸ ತತ್ವಜ್ಞಾನದ ಅಭ್ಯಾಸ ತುಂಬ ಮಹತ್ವದ್ದೆಂದೂ, ನಾನು ಫ್ರಾನ್ಸಿಗೆ ಹೋಗುವಲ್ಲಿ ಅಂಥ ಕೆಲವು ಮಿತ್ರರನ್ನು ಕಾಣಬೇಕೆಂದೂ ಹೇಳಿದರು. ಅಷ್ಟೆಲ್ಲ ಮಾತುಕತೆಗಳು ನಡೆಯುವಾಗ ವೇಳೆಯಾಯಿತು. "ಇನ್ನೊಮ್ಮೆ ಬಂದಾಗ ಬನ್ನಿ"-ಎಂದು ಹೇಳಿದರು. ನಿಜ; ಇನ್ನೊಮ್ಮೆ ಹೋಗಬಹುದಿತ್ತು. ನಮ್ಮಂತಹರ ಪಾಲಿಗೆ ಆಯುಷ್ಯಕ್ಕೊಮ್ಮೆ ಹೋಗಿ ಬರುವ ಊರೂ ಅಲ್ಲ — ಆ ದೇಶ. ಆದರೂ ಉಪಚಾರದ ಮಾತುಗಳಿಗೆ ವಂದನೆಯನ್ನು ಸಲ್ಲಿಸಿ ಅಲ್ಲಿಂದೆದ್ದೆ.

ಇಂಗ್ಲೆಂಡಿನ ನನ್ನ ಇನ್ನೆರಡು ಭೇಟಿಗಳನ್ನು ಕುರಿತು ಹೇಳಿದೆನಾದರೆ ಹೇಳುವುದೆಲ್ಲ ಹೇಳಿದಂತಾಯಿತು. ಶ್ರೀ ನೆಟ್ಟಾರವರ ಪರಿಚಯದಿಂದಾಗಿ ನನಗೊಂದು ದಿನ ಡಾ| ಅಂಗಡಿ ಎಂಬವರಿಂದ ಅವರ ಮನೆಗೆ ಕರೆ ಬಂದಿತು. ಅವರು ಬೆಳಗಾಂವಿಯ ಕನ್ನಡಿಗರು; ಇಂಗ್ಲೆಂಡಿನಲ್ಲಿಯೇ ಲಗ್ನವಾಗಿ ನೆಲಸಿದವರು. ಈಗ ಪತ್ರಿಕೋದ್ಯಮಿಗಳೂ, ವಿಶ್ವವಿದ್ಯಾಲಯಗಳ ಉಪನ್ಯಾಸಕರೂ ಆಗಿ ಯುರೋಪನ್ನೆಲ್ಲ ಸುತ್ತುತ್ತಿರುತ್ತಾರೆ. ಅವರ ಮನೆ ಇಂಗ್ಲೆಂಡಿನ ವಿಸ್ತರಣವೊಂದರಲ್ಲಿತ್ತು. ನಾನು ಶ್ರೀ ನೆಟ್ಟಾರರು, ಶ್ರೀ ಪಿಳ್ಳೈಯವರೂ ಕೂಡಿ ಒಂದು ರಾತ್ರಿ ಅವರ ಮನೆಗೆ ಹೋದೆವು. ಅವರಿರುವ ವಿಸ್ತರಣ ಬಲುಸುಂದರವಾದ ತಾವು; ಅನುಕೂಲವಂತರ ವಸತಿಗಳು ಇರುವ ಭಾಗ. ಶ್ರೀ ಅಂಗಡಿಯವರು ತಮ್ಮದೇ ಆದ ಮನೆಯಲ್ಲಿ ಮಡದಿ ಮಕ್ಕಳೊಂದಿಗೆ ಸುಖವಾಗಿದ್ದಾರೆ. ಅವರ ಮಡದಿ ಚಿತ್ರಕಾರಳಾಗಿದ್ದಾಳೆ. ಮಕ್ಕಳಿನ್ನೂ ಚಿಕ್ಕವರು. ನಾವು ಅವರ ಮನೆಗೆ ಹೋದಾಗ, ಜಪಾನಿನ ಹಿಂದಿನ ಲೇಬರ್ ಮಂತ್ರಿಯೊಬ್ಬರ ಮಡದಿಯಾದ ಯಮಕಾವಾ ಎಂಬಾಕೆಯೂ ಬಂದಿದ್ದಳು. ಶ್ರೀ ಅಂಗಡಿಯವರು ನಮ್ಮ ಕರ್ಣಾಟಕದ ಇಂದಿನ ಆಗುಹೋಗುಗಳನ್ನು ವಿಚಾರಿಸಿದರು; ಬಳಿಕ ನಮ್ಮೆಲ್ಲರ ಮಾತು ಯಮಕಾವಾಳೊಡನೆ ನಡೆಯಿತು.

ಆಕೆ ಬ್ರಿಟಿಷ್ ಲೇಬರ್ ಸರಕಾರದಿಂದ ಆಮಂತ್ರಿತಳಾಗಿ ಬಂದಿದ್ದು, ಇಂಗ್ಲೆಂಡಿನ ಸಾಮಾಜಿಕ ಚಟುವಟಿಕೆಗಳನ್ನು ಪರಿಶೀಲಿಸುತ್ತಿದ್ದಳು. ಅವಳು

ಸದ್ಯವೇ ಕಲ್ಕತ್ತೆಯ ದಾರಿಯಿಂದ ವಿಮಾನ ಮಾರ್ಗವಾಗಿ ಸ್ವದೇಶವಾದ ಜಪಾನಿಗೆ ಮರಳುತ್ತಾಳೆಂದು ತಿಳಿದೊಡನೆಯೇ-"ನೀವು ಇಂಡಿಯದಲ್ಲೊ ನಿಂತು, ನೋಡಿ ಹೋಗಬಹುದಲ್ಲ; ಹೇಗೂ ಆ ದಾರಿಯಾಗಿಯೇ ಹೋಗುತ್ತೀರಿ" ಎಂದೆ.

"ನನ್ನ ಇಚ್ಛೆಯೂ ಹಾಗೆಯೇ ಇತ್ತು. ಅಲ್ಲದೆ ಕಲ್ಕತ್ತೆಯಲ್ಲಿ ನನಗೆ ಮಿತ್ರರೂ ಇದ್ದಾರೆ. . . . . ಆದರೆ"

"ಆದರೆ ಏನು?" ಎಂದು ಕೇಳಿದೆವು.

"ನಿಮ್ಮ ಇಂಡಿಯನ್ ರಾಯಭಾರಿ ಕಚೇರಿಗೆ 'ವೀಸಾ' ದೊರಕಿಸಲು ನಾನು ಮೂರು ಮೂರು ಬಾರಿ ಹೋಗಿ ಮರಳಿಬಂದೆ. ಅವರು ವೀಸಾ ಕೊಡುತ್ತೇವೆನ್ನುವುದೂ ಇಲ್ಲ; ಇಲ್ಲ ಎನ್ನುವುದೂ ಇಲ್ಲ . . . . ಹೀಗಾಗಿ ನೇರಾಗಿ ಊರಿಗೇನೆ ಹೋಗುತ್ತೇನೆ" ಎಂದಳು.

ನಮ್ಮ ವಿದೇಶ ರಾಯಭಾರಿ ಕಚೇರಿಗಳ ಚುರುಕನ್ನು ಕುರಿತು ಹಲವ ರಾಡಿದುದನ್ನು ಕೇಳಿದ್ದೆ. ಇದೊಂದು ಪ್ರತ್ಯಕ್ಷವಾದ ನಿದರ್ಶನವಷ್ಟೆ. ಅಲ್ಲಿ ಸಾವಿರಾರು ಜನರಿದ್ದಾರಂತೆ. ನಮ್ಮ ವಿಶ್ವದ ಪ್ರಸಿದ್ಧ ಮಹಿಳೆಯೊಬ್ಬಳಿಗೆ ತಾತ್ಕಾಲಿಕ ಪ್ರವೇಶಕ್ಕಾಗಿ "ವೀಸಾ" ಕೊಡುವುದಕ್ಕೇನೇ ಅಷ್ಟು ಉದಾಸೀನರಾದ ನಮ್ಮವರ ನಡತೆ, ನನಗೇನೂ ಚೆನ್ನಾಗಿ ಕಾಣಿಸಲಿಲ್ಲ. ಪರಕೀಯರ ಮುಂದೆ ನಮ್ಮವರು ಪ್ರಕಟಿಸುವ ಮೂರ್ಖತೆಯನ್ನು ಕಂಡು ನಮಗೆ ನಾಚಿಕೆಯಾಗುತ್ತದೆ. ಬ್ರಿಟಿಷ್ ಸರಕಾರವು ಆಕೆಯನ್ನು ತನ್ನ ವೆಚ್ಚದಿಂದ ಕರೆಯಿಸಿಕೊಂಡಿತಂತೆ. ನಮ್ಮವರು "ವೀಸಾ" ಕೊಡುವುದಕ್ಕೇನ ಹಿಂದೆ ಮುಂದೆ ನೋಡುತ್ತಾರೆ!

ಆ ದಿನ ನಾವು ಎರಡುಮೂರು ತಾಸುಗಳ ಹರಟೆ ಹೊಡೆದು, ಮನೆಗೆ ಮರಳಿದೆವು. ಅನಂತರ ಒಂದು ದಿನ ನಾನು ಲಂಡನಿನ ಪಿ. ಇ. ಎನ್ ಅಂತರ ರಾಷ್ಟ್ರೀಯ ಸಂಸ್ಥೆಯ ಕಚೇರಿಗೆ ಹೋಗಿ, ಅದರ ಕಾರ್ಯದರ್ಶಿಯಾದ ಡೇವಿಡ್ ಕಾರ್ವರ್ ಎಂಬವರನ್ನು ಕಂಡೆ. ನೀಸ್ ನಗರದಲ್ಲಿ ನಡೆಯುವ ಅಂತರ್‍ರಾಷ್ಟ್ರೀಯ ಬರಹಗಾರರ ಸಮ್ಮೇಳನಕ್ಕೆ ನಾನು ಹೋಗುವ ಯೋಚನೆ ಮಾಡಿದ್ದೆ. ಅದಕ್ಕೆ ಬೇಕಾದ ಮುಂದಿನ ವ್ಯವಸ್ಥೆಯನ್ನು ಅವರು ಮಾಡಿದರು. ಫ್ರಾನ್ಸಿನ ವಿಚಾರದಲ್ಲಿ ಬರೆಯುವಾಗ, ಈ ಸಮ್ಮೇಳವನ್ನು ಕುರಿತಾಗಿ ನಾಲ್ಕು ಮಾತು ಹೇಳುತ್ತೇನೆ.

ನಾನು ಲಂಡನ ನಗರವನ್ನು ಬಿಡುವ ಎರಡು ದಿನಗಳಿಗೆ ಮುಂಚೆ—ನನ್ನ ಮಿತ್ರರು, ಮುಖ್ಯತಃ ಲಂಡನ ನಗರದಲ್ಲಿರುವ ಯಾವತ್ತು ಕನ್ನಡ ಸೋದರರು ಸೇರಿ, ನನಗಾಗಿ ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು. ಆಲ್ಡ್ವಿಚ್‌ನಲ್ಲಿನ ಇಂಡಿಯನ್ ಸ್ಟೂಡೆಂಟ್ಸ್‌ಹೋಮಿನಲ್ಲಿ ಇದರ ಏರ್ಪಾಟಾಗಿತ್ತು. ಕನ್ನಡದ ಜನತೆಯ ಪರಿಚಯವಾಗುವ ಈ ಸಂದರ್ಭವನ್ನು ನಾನೂ ಸಂತೋಷದಿಂದಲೇ ಒಪ್ಪಿಕೊಂಡೆ. ಅಲ್ಲಿಗೆ ಬಂದಿದ್ದವರಲ್ಲಿ ಹಲವರು ನನ್ನ ಪೂರ್ವಪರಿಚಯವುಳ್ಳವರು; ಇನ್ನುಳಿದವರ ಪರಿಚಯ ಅಲ್ಲಿಯೇ ಆಯಿತು. ಆದಿನ ಸತ್ಕಾರಕ್ಕೆ—ಲಂಡನಿನಲ್ಲಿ ಬಹುವರ್ಷಗಳಿಂದ ವೈದ್ಯಕೀಯ ವೃತ್ತಿ ನಡೆಯಿಸಿಕೊಂಡು ಬಂದು ಹೆಸರಾದ ಡಾ। ಬಿ. ಎನ್. ರಾಯರವರು ಅಧ್ಯಕ್ಷರಾಗಿದ್ದರು. ಅವರ ಮಡದಿಯೂ ಜತೆಗೆ ಬಂದಿದ್ದಳು. ಆಕೆ ಡೇನಿಷ್‌ಮಹಿಳೆ. ಸಾಕಷ್ಟುಉಪಚಾರದ ಮಾತು, ಉಪಚಾರದ ಪ್ರತ್ಯುತ್ತರಗಳು ನಡೆದುವು. ಎಲ್ಲರೂ ಸೇರಿ ಊಟ, ಉಭಯ ಕುಶಲೋಪರಿಗಳಾದುವು. ಮಿಸೆಸ್ ಬಿ. ಎನ್. ರಾಯರವರು ಮರುದಿನ ತಮ್ಮ ಮನೆಗೆ ನಾನು ಬಂದೇ ತೀರಬೇಕೆಂದು ಒತ್ತಾಯಮಾಡಿದರು. ಆ ಗಂಡ ಹೆಂಡಿರಿಬ್ಬರೂ ತೀರ ಸರಳರು. ಅವರ ಕರೆಯನ್ನು ನಾನು ಮನ್ನಿಸದಿರಬಾರದೆಂದು ಕಂಡಿತು. ಅದರ ಮರುದಿನವೇ ನಾನು ಇಂಗ್ಲೆಂಡಿನಿಂದ ಹೊರಡುವ ನಿಶ್ಚಯಮಾಡಿದ್ದರೂ, ಅವರ ಆಮಂತ್ರಣ ಸ್ವೀಕರಿಸಿ, ಮರು ದಿನ ಸಂಜೆಯ ವೇಳೆಗೆ ದಕ್ಷಿಣ ಲಂಡನಿನಲ್ಲಿರುವ ಅವರ ಮನೆಗೆ ಹೋದೆ.

ಬಿ. ಎನ್. ರಾಯರವರು ತಮ್ಮ ವೈದ್ಯಕೀಯ ಕೆಲಸದಲ್ಲಿದ್ದವರು. ಅವರು ಮನೆಗೆ ಬರುವುದಕ್ಕೆ ವೇಳೆಯಾಗುತ್ತದೆ. ಅವರ ಮಡದಿ ನನ್ನನ್ನು ಆದರದಿಂದ ಬರಮಾಡಿಕೊಂಡಳು. ಆಕೆಗೆ ಬಾಯಿತುಂಬ ಮಾತಾಡಬೇಕು. ಮಾತಿನಲ್ಲಿ ಒಂದು ಬಗೆಯ ಆತ್ಮೀಯತೆ ಕಾಣುತ್ತಿತ್ತು; ಅವಳ ಜೀವನದಲ್ಲಿ ಕಷ್ಟಾನುಭವದ ಮುದ್ರೆ ಚೆನ್ನಾಗಿ ಒತ್ತಿ ಮೂಡುತ್ತಿತ್ತು. ಈಗ ಅವರು ಸುಖಿಗಳಾಗಿರುವರಾದರೂ, ಅವರ ದಾಂಪತ್ಯ ಜೀವನದ ಆರಂಭಕಾಲ ಹೂವಿನ ಹಾಸುಗೆಯಾಗಿರಲಿಲ್ಲ. ಆಕೆಗೆ ಮಕ್ಕಳಿಲ್ಲವಾದರೂ, ತನ್ನ ಪತಿಯ ಅನೇಕ ಬಂಧುಗಳನ್ನು ಇಂಗ್ಲೆಂಡಿಗೆ ಕರೆಸಿಕೊಂಡು ತನ್ನ ಮಕ್ಕಳಂತೆ ವಿದ್ಯಾಭ್ಯಾಸ ಕೊಟ್ಟುಕಳುಹಿಸಿದ್ದಳು. ಒಂದೆರಡು ವರ್ಷಗಳ ಹಿಂದೆ ಆಕೆಯೂ ಭಾರತಕ್ಕೆ ಬಂದಿದ್ದಳು. ಆಗ ಕಂಡ ಕೆಲವೊಂದು ಸಂಗತಿಗಳನ್ನು ಕುರಿತು ಮಾತನಾಡ

ತೊಡಗಿದಳು. "ನಿಮ್ಮವರು ಮೈಗೆಲಸಕ್ಕೆ ಬಲು ಅಂಜುತ್ತಾರೆ. ಒಂದು ಚಿಕ್ಕ ಚೀಲ ಹಿಡಿಯುಕೊಳ್ಳುವುದಕ್ಕೆ ಆಳನ್ನು ಕರೆಯುತ್ತಾರಲ್ಲವೇ. ಅನುಕೂಲವಂತರೆಂಬವರು ಆಳುಗಳ ಸಹಾಯವಿಲ್ಲದೆ ತಮ್ಮ ಮಕ್ಕಳನ್ನೂ ನೋಡಿಕೊಳ್ಳಲಾರರು ಎಂದರೆ ಆಶ್ಚರ್ಯವಾಗುತ್ತದೆ. . . . ನೋಡಿ– ಈ ಮನೆ ನಾವು ಕೊಂಡದ್ದು. ಕೊಂಡಾಗ ಅದು ಮುರುಕಲು ಮನೆಯೇ ಆಗಿತ್ತು -ಅದರ ದುರಸ್ತಿ, ಬಣ್ಣ ಬಳೆಯುವಿಕೆ, ಉದ್ಯಾನ(Garden) ನಿರ್ಮಾಣಗಳನ್ನೆಲ್ಲ ನಾನೇ ನನ್ನ ಸ್ವಂತ ಕೈಗಳಿಂದ ಮಾಡಿದೆ...... ಹೆಂಗಸರಿಗೆ ಇಷ್ಟು ಮಾಡುವುದಕ್ಕೆ ಬರಲಾರದೇ?" ಎಂದಳು.

ಅವಳೊಡನೆ ಅನೇಕ ವಿಷಯಗಳನ್ನು ಕುರಿತು ಮಾತನಾಡಿದುದಾಯಿತು. ಆ ಮನೆಯ ನಾಜೂಕು, ಚೆಲುವುಗಳೆಲ್ಲವು ಉತ್ತಮ ಗೃಹಿಣಿಯ ಚಿತ್ರಕೊಡುತ್ತಿದ್ದುವು. ನಾವು ಕುಳಿತ ಕೊಟಡಿಯಲ್ಲಿ ಎರಡು ಹಳೆಗಾಲದ ಚಿತ್ರಕೃತಿಗಳು ತೂಗಿದ್ದುವು. "ಅವು ಯಾರವು?" ಎಂದು ಕೇಳಿದೆ. "ನಾನೆಲ್ಲೋ ಹಳೆಯ ಅಂಗಡಿಯೊಂದರಲ್ಲಿ ಕಡಿಮೆ ಬೆಲೆಗೆ ಕೊಂಡೆ. ಚಿತ್ರಕಾರರ ಹೆಸರಿಲ್ಲ. ಆದರೂ ಮೂರು ಶತಮಾನಗಳ ಹಿಂದಿನ ಚಿತ್ರಗಳಾಗಿ ಕಾಣಿಸುತ್ತವೆ....ಚೆನ್ನಾಗಿಲ್ಲವೇ" ಎಂದರು. ನಿಜಕ್ಕೂ ಅವು ಚೆನ್ನಾಗಿದ್ದುವು. ಅವರ ಕಲಾಭಿರುಚಿಯನ್ನು ತೋರಿಸುತ್ತಿದ್ದುವು.

ಸಂಜೆಯ ಎಂಟು ಘಂಟೆಯ ಹೊತ್ತಿಗೆ ಬಿ. ಎನ್ ರಾಯರು ಬಂದು ನಮ್ಮನ್ನು ಕೂಡಿಕೊಂಡರು. ನಾವು ಊಟದ ಮನೆಗೆ ಸರಿದೆವು. ರಾಯರಿಗೆ ಅವರ ಹೆಂಡತಿಗಿಂತಲೂ ಹೆಚ್ಚಿನ ಮಾತು. ಅಲ್ಲಿಯೇ ಬಳಿಯಲ್ಲಿ 'ಟೆಲಿವಿಜನ್' ಸೆಟ್ ತೆರೆದಿತ್ತು. ನನಗೆ ಅದರ ಪ್ರಥಮ ದರ್ಶನವೂ ಆಯಿತು. ನಮ್ಮ ಸವಿಯಾದ ಊಟ, ಮಾತುಗಳ ಎಡೆಯಲ್ಲಿ ವಿದಾಯದ ವೇಳೆಯೂ ಸಮೀಪಿಸಿತು. "ನೀವು ಬಂದಾಗಲೇ ನಮಗೆ ತಿಳಿದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು" ಎಂದರು ಮಿಸೆಸ್ ರಾವ್. ನನಗೂ ಅವರ ಸೌಜನ್ಯವನ್ನು ಕಂಡು ಹಾಗೆಯೇ ಅನಿಸಿತು. ಅವರನ್ನು ಬೀಳ್ಕೊಟ್ಟು— ನಿರ್ಜನವಾದ ಬೀದಿಗಳನ್ನು ಹಾದು, ರೈಲು ನಿಲ್ದಾಣವನ್ನು ಸೇರಿದೆ. ಅಲ್ಲಿಂದ ವಾಸದ ಹೊಟೇಲಿಗೆ ಮರಳಿ ಸೇರುವಾಗ ರಾತ್ರಿಯ ಹನ್ನೊಂದು ಘಂಟೆಯಾಗಿತ್ತು. ನಾಳೆ ದಿನವೇ ಇಂಗ್ಲೆಂಡನ್ನು ವಂದಿಸಿ ಹೊರಡಬೇಕಿತ್ತು.

## ೭. ನಾರ್ವೆಗೆ ಪಯಣ.

ಇಂಗ್ಲೆಂಡಿನ ಪ್ರವಾಸ ಮುಗಿಯುತ್ತಲೇ ಅಲ್ಲಿಂದ ಸ್ಕಾಟ್‌ಲೆಂಡಿಗೆ ಹೋಗಬೇಕೆಂದು ಮೊದಲು ಯೋಚನೆಮಾಡಿದ್ದೆ. ಹೋಗುವ ಹಾದಿಯಲ್ಲಿ ಸುಂದರ ಸರೋವರಗಳ ಪ್ರದೇಶವೂ ಸಿಗುತ್ತಿತ್ತು. ಆದರೆ-ನನಗೆ ಹಡಗಿನಲ್ಲಿ ಗೆಳೆಯರಾಗಿ ದೊರೆತ ಶ್ರೀ ಪಿಳ್ಳೆಯವರು 'ನೀವು ಸ್ಕಾಟಲೆಂಡ್ ಬಿಟ್ಟರೂ ಚಿಂತೆಯಿಲ್ಲ; ಸ್ಕಾಂಡಿನೇವಿಯವನ್ನು ನೋಡಲು ಮರೆಯಬೇಡಿರಿ' ಎಂದಿದ್ದರು. ಆದುದರಿಂದ ಸ್ಕಾಟ್‌ಲೆಂಡನ್ನು ಮರೆತು ಸ್ಕಾಂಡಿನೇವಿಯದ ದೇಶಗಳಾದ ನಾರ್ವೆ, ಸ್ವೀಡನುಗಳಿಗೆ ಹೋಗುವುದೆಂದು ತೀರ್ಮಾನಿಸಿದೆ. ಸ್ವಲ್ಪ ದಿನಗಳಲ್ಲಿ ಅಲ್ಲಿನ ವೀಸಾಗಳನ್ನು ದೊರಕಿಸಿಕೊಂಡೆ. ಇಂಗ್ಲೆಂಡಿನಲ್ಲಿ ಬರಿಯ ಹದಿನೆಂಟು ದಿನಗಳನ್ನು ಕಳೆದು ತೃಪ್ತಿಗೊಂಡುದಾಯಿತು. ಅಷ್ಟು ವಿರಾಮವಾಗಿ ಇನ್ನುಳಿದ ದೇಶಗಳನ್ನು ನೋಡಲು ಶಕ್ಯವಾಗದೆ ಹೋದರೂ, ಒಂದು ವಿಹಂಗಮ ನೋಟವಾದರೂ ಸಾಧ್ಯವಷ್ಟೆ—ಎಂಬ ಹಂಬಲದಿಂದ ಹೊರಟೆ. ಮೇ ತಿಂಗಳ ೨೪ನೆಯ ದಿವಸ ಲಂಡನ್ ನಗರವನ್ನು ಬಿಟ್ಟೆ. ಬೆಳಗ್ಗೆ ಅಲ್ಲಿನ ಕಿಂಗ್ಸ್ನವೆ ನಿಲ್ದಾಣಕ್ಕೆ ಹೋಗಿ 'ನ್ಯೂಕಾಸಲ್ ಆನ್‌ಟೈನಿ'ಗೆ ಹೊರಡುವ ಬಂಡಿಯನ್ನು ಹಿಡಿದೆ. ನನ್ನ ಕೊಟಡಿಯಲ್ಲಿ ನಾರ್ವೆ ದೇಶವನ್ನು ನೋಡಲು ಹೊರಟಂಥ ಇಬ್ಬರು ದಂಪತಿಗಳಿದ್ದರು. ಬ್ರಿಟನಿನವರಿಬ್ಬರು, ಇನ್ನೊಂದು ದಂಪತಿ ಕೂಟ, ಯುನೈಟೆಡ್ ಸ್ಟೇಟ್ಸಿನಿಂದ ಬಂದವರು. ಬಂಡಿಯಲ್ಲಿ ನಮ್ಮೊಳಗೆ ಪರಿಚಯವಾಗಿ ಮಾತಿಗೆ ಆರಂಭವಾಯಿತು. ನಮ್ಮ ಬಂಡಿ ನ್ಯೂ ಕಾಸಲನ್ನು ಸೇರುವಾಗ ಸಂಜೆಯ ನಾಲ್ಕು ಘಂಟೆಯಾಗಿತ್ತು. ಆ ಊರಿನ ಸುತ್ತುಮುತ್ತಲಿನ ಅನೇಕ ಗುಡ್ಡಗಳ ತುದಿಯಲ್ಲಿ ನಿಲ್ಲಿಸಿದ ಕೊತ್ತಳಗಳು, ನೀಳ್ಗೈ (Crane) ಮೊದಲಾದುವನ್ನು ಕಂಡು ಅವು ಕಲ್ಲಿದ್ದಲಿನ ಗನಿಗಳಿರಬೇಕೆಂಬ ನೆನಪೂ ಆಯಿತು. ನಮ್ಮ ರೈಲುಬಂಡಿ ನೆಟ್ಟಗೆ ರೇವಿನ ಬಳಿಗೇನೆ ಹೋಗಿ ನಿಂತಿತು. ಅದು ಟೈನ್ ನದಿಯು ಕಡಲನ್ನು ಕೂಡುವ ಮುಖ. ಬಂಡಿಯಿಂದ ಇಳಿದೆವು; ಅರ್ಧ ತಾಸಿನೊಳಗಾಗಿ ಸುಂಕದ ಮನೆಯನ್ನು ದಾಟಿ, ನಮಗಾಗಿ ಕಾದಿದ್ದ 'ಬರ್ಗನ್ ಲೈನಿ'ನ ಹಡಗೊಂದನ್ನು ಏರಿಯಾಯಿತು. ಅದು ನಾರ್ವೆ ದೇಶದ ಬರ್ಗನಿಗೂ, ನ್ಯೂ ಕಾಸಲಿಗೂ ನಡುವೆ ಓಡಾಡುವ ಚಿಕ್ಕೊಂದು ಹಡಗು; ನಮ್ಮ ಬಿಟೊರಿಯಂತೆ ದೊಡ್ಡದಲ್ಲ; ವಿಲಾಸ ಪೂರ್ಣವಾದುದಲ್ಲ.

ನಾನು ಹೊರಟುದು ನಾರ್ವೆಯ ರಾಜಧಾನಿಯಾದ "ಒಸ್ಲೊ" ನಗರಕ್ಕೆ. ಅಲ್ಲಿಗೇನೆ ಒಂದು ದಿನಕ್ಕೆ ಹೋಗಿ ಮುಟ್ಟುವ ಹಡಗಿತ್ತು. ಆದರೆ ನಾನು ನಾರ್ವೆಯ ಉತ್ತರ ಭೂಭಾಗವನ್ನು ಕಾಣಲೆಳಸಿ, ಬರ್ಗನ್ ಎಂಬ ರೇವಿಗೆ ಟಿಕೇಟು ಕೊಂಡಿದ್ದೆ. ಅಲ್ಲಿಂದ ಒಂದು ಹಗಲಿನ ರೈಲು ಹಾದಿಯಿತ್ತು ಒಸ್ಲೋ ನಗರಕ್ಕೆ. ಸಂಜೆಯ ಐದು ಘಂಟೆಗೆ ಸಮನಾಗಿ ನಮ್ಮ ಹಡಗು ರೇವನ್ನು ಬಿಟ್ಟು ಕಡಲನ್ನು ಹೊಕ್ಕಿತು. ಉತ್ತರ ಸಮುದ್ರದ ಮೂಲಕವಾಗಿ ಸುಮಾರು ೪೧೦ ಮೈಲು ದೂರದ ಕಡಲ ಹಾದಿ ನಮ್ಮನ್ನು ಇದಿರುಕಾದಿತ್ತು. ನಾವು ಕಡಲನ್ನು ಹೊಕ್ಕ ಗಳಿಗೆಯಿಂದಲೂ ಬಾನು ಮುಗಿಲಿಂದ ಕವಿದಿತ್ತು; ಚಳಿಗಾಳಿ ಬೀಸುತ್ತಿತ್ತು. ಹಡಗಿನ ಹೊರಕ್ಕೆ ಬಂದು ನಿಂತರೆ, ಬಹುದೂರ ಕಾಣಿಸುವಂತಿರಲಿಲ್ಲ. ಕಡಲುದ್ದಕ್ಕೂ ಹಿಮ ಕವಿದಿತ್ತು. ಆದರೆ ಅಟ್ಲಾಂಟಿಕ ಸಾಗರದ ಕಡಲಿನ ರೌದ್ರವಿರಲಿಲ್ಲ! ಕಡಲು ಶಾಂತವಾಗಿತ್ತು. ಅಲ್ಲದೆ ಹೋದರೆ ನಾವು ಏರಿದ ಈ ಚಿಕ್ಕ ಹಡಗು ಎಷ್ಟು ಕಲ್ಲೋಲಗೊಳ್ಳುತ್ತಿತ್ತೋ! ನಮ್ಮ ಹಡಗಿನಲ್ಲಿ ಬರಿಯ ಮುನ್ನೂರು ಮಂದಿ ಪ್ರಯಾಣಿಕರಿದ್ದಿರಬಹುದು. ಬಹು ಮಂದಿ ನಾರ್ವೆಗೆ ಹೊರಟ ಇಂಗ್ಲಿಷರು; ಕೆಲವರು ನಾರ್ವೆಯವರೂ ಇದ್ದರು. ಅವರಲ್ಲಿ ಕೆಲವರು ದಕ್ಷಿಣ ಧ್ರುವದಲ್ಲಿ ತಿಮಿಂಗಲ ಹಿಡಿಯುವ ಹಡಗುಗಳಲ್ಲಿ ಕೆಲಸ ಮಾಡಿ, ಕಾಲ ಮುಗಿಯುತ್ತಲೇ, ಸ್ವದೇಶಕ್ಕೆ ವಿಶ್ರಾಂತಿಗಾಗಿ ಮರಳುವವರಿದ್ದರು. ನಾರ್ವೆಯ ಮಕ್ಕಳಿಗೆ ಮೀನುಗಾರಿಕೆಯೆಂಬುದು ಬಹು ದೊಡ್ಡ ಜೀವನಾಧಾರ. ಅನೇಕರಿಗೆ ವರ್ಷವೆಲ್ಲ ಅದೇನೆ ಉದ್ಯೋಗ-ತಮ್ಮ ಸೆಕೆಗಾಲದಲ್ಲಿ ಉತ್ತರ ಧ್ರುವ ಸಾಗರದಲ್ಲಿ ತಿಮಿಂಗಿಲ, ಕಾಡ್ ಮೊದಲಾದುವುಗಳ ಬೇಟೆ; ತಮ್ಮ ಚಳಿಗಾಲದಲ್ಲಿ, ದಕ್ಷಿಣ ಧ್ರುವಕ್ಕೆ ಹೋಗಿ ಅದೇ ಉದ್ಯಮವನ್ನು ಸಾಗಿಸುವುದು. ಕಡಲೇ ಅವರ ಉಪಜೀವನವಾದುದರಿಂದ ಸಾವಿರಾರು ವರ್ಷಗಳಿಂದಲೂ ಆ ದೇಶದ ಜನರು ನಾವಿಕರಾಗಿ ಹೆಸರುಗಳಿಸಿದ್ದಾರೆ. ಇಂದಿಗೂ-ದೊಡ್ಡ ವ್ಯಾಪಾರಿ ನೌಕಾ ಪಡೆಯುಳ್ಳವರಲ್ಲಿ ನಾರ್ವೆಯವರು ಮುಖ್ಯರು.

ನಾವು ಹೊರಟ ದಿನ ರಾತ್ರಿಯೆಲ್ಲ ಸರಿಯಿತು; ತುಂಬ ಚಳಿಯಾದ ರಾತ್ರಿ. ಬೆಳಗಾಯಿತು. ನಾವು ಉತ್ತರಕ್ಕೆ ಸರಿದಂತೆ ಚಳಿಗಾಳಿಯೂ ಹೆಚ್ಚುತ್ತ ಬಂದಿತು. ಆದರೆ ಕಡಲು ಮಾತ್ರ ಹೊತ್ತೇರಿದರೂ ಹಿಮದಿಂದಲೇ ತುಂಬಿಕೊಂಡಿತ್ತು. ಹವೆ-ಮೇಲಂಗಿತೊಟ್ಟು ಮುದುಡಿ ಕುಳಿತರೂ ಮೈ ನಡುಗಿಸು

ಕ್ತಿತ್ತು. ಒಂದಿಷ್ಟು ಬಿಸಿಲು ಬಂದರೆ, ಮುಖವನ್ನು ಸೂರ್ಯನಿಗೊಡ್ಡಿ ನಿಂತಿರಬಹುದಲ್ಲ-ಎಂಬ ನಮ್ಮಾಸೆ ಸಫಲವಾಗದೆ ಇತ್ತು. ದಿನವೆಲ್ಲ ಪಯಣ ಸಾಗಿ ಸಂಜೆಯ ಹೊತ್ತಿಗೆ, ಮಬ್ಬಿನಲ್ಲೇ ಹಡಗು 'ಸ್ಟ್ಯಾವಂಗರ್' ರೇವನ್ನು ಸೇರಿತು. ನಾರ್ವೆಯ ಬೆಟ್ಟಗುಡ್ಡಗಳು ಕಡಲಿನೊಳಗೆ ಚಾಚಿ ನಿಂತಿರುವುದು ಮುಸಕುಮುಸಕಾಗಿ ಕಾಣಿಸುತ್ತಿತ್ತು. ಅಷ್ಟಕ್ಕೆ ಮಳೆಯೂ ಹನಿಯತೊಡ ಗಿತು. ನಾರ್ವೆಯಲ್ಲಿಳಿಯುವ ಯಾವತ್ತು ಜನಗಳ ಪಾಸಪೋರ್ಟು, ವೀಸಾ ಗಳ ತನಖಿ ಹಡಗಿನಲ್ಲಿಯೇ ನಡೆದು, ಹಡಗಿಂದ ಇಳಿಯುವವರು ಇಳಿದರು. ಮೂರು ಘಂಟೆಗಳ ವಿರಾಮವಿದೆಯೆಂದು ಕೆಲವು ಬರ್ಗನ್ ನಗರದ ಪ್ರವಾಸಿಗಳೂ ಇಳಿದರು. ಆ ಚಳಿಯಲ್ಲೇನು ಅಲೆದಾಟವೆಂದು ನಾನು ಹಡಗಿನಲ್ಲಿಯೇ ಉಳಿದೆ. ಹಡಗಿನಿಂದ ಇಳಿಸುವ ಮಾಲುಗಳನ್ನು ನೋಡು ತ್ತಿದ್ದೆ. ಹಾಗೆ ಇಳಿಸಿದ ಸಾಮಾನುಗಳಲ್ಲಿ ಹೆಚ್ಚಿನವು ಬ್ರಿಟನಿನಲ್ಲಿ ಸಿದ್ಧವಾದ ಉಳುವ ಯಂತ್ರೋಪಕರಣಗಳು. ಈ ಪರ್ವತಮಯ ಪ್ರದೇಶದಲ್ಲಿಯೂ ಕೃಷಿಯೇ-ಎನಿಸಿತು ನನಗೆ.

ಆ ರಾತ್ರಿಯೇ ನಮ್ಮ ಹಡಗು ಪಯಣ ಮುಂದುವರಿಸಿತು; ಇನ್ನೊಂದು ಶೀತ ರಾತ್ರಿ ಕಳೆಯಿತು. ಬೆಳಗಿನ ಬೆಳಕು ಬೀಳುವ ಮುಂಚೆಯೇ ನಮ್ಮ ಹಡಗು ಇನ್ನೊಂದು ಕಡಲ ನಾಲಗೆಯನ್ನು ಹೊಕ್ಕಿತ್ತು. ಅಡ್ಡತಿಡ್ಡವಾಗಿ ಕಡಲಲ್ಲಿ ಪರ್ವತಗಳು ಇಳಿಯುವಾಗ, ಅವುಗಳೊಳಗೆ ಅಷ್ಟೇ ವಿಚಿತ್ರಾಕಾರ ದಿಂದ ಕಡಲು ತನ್ನ ನಾಲಗೆಯನ್ನು ಭೂಮಿಯೊಳಗೆ ಚಾಚುತ್ತದೆ. ಇವನ್ನು 'ಫಿಯೊರ್ಡ' ಎಂದು ಕರೆಯುತ್ತಾರೆ. ನಮ್ಮ ಹಡಗು ಅಂಕುಡೊಂಕಾದ ಕಾಲುವೆಯೊಂದನ್ನು ಸೇರುವಂತೆ ಚಲಿಸತೊಡಗಿತು. ನಮ್ಮ ಇಕ್ಕಡೆಗಳಲ್ಲೂ ಹಸುರು ತುಂಬಿದ ಉನ್ನತ ಪರ್ವತಗಳು, ಗುಡ್ಡಗಳು. ಅವುಗಳ ಮೇಲೆ ಹುಲ್ಲು ತುಂಬಿಕೊಂಡಿತ್ತು. ನಡುನಡುವೆ ಪೈನ್ ವೃಕ್ಷಗಳ ಸಮುದಾಯ. ಅವುಗಳ ಎಡೆಯಲ್ಲಿ ಬರ್ಗನ್ ನಗರದ ಮನೆಗಳು; ಅವನ್ನೂ ಬೀದಿಯನ್ನೂ ಬೆಳಗುವ ವಿದ್ಯುದ್ದೀಪಗಳು. ಆಗಲೇ ಸೂರ್ಯ ಮೇಲಕ್ಕೇರಿದ್ದ. ಹೊತ್ತೇನೊ ೫ ಘಂಟೆ; ಅವನು ಉದಯಿಸಿ ಒಂದೂವರೆ ಘಂಟೆಯ ಕಾಲವೇ ಸಂದಿದೆ. ಬೇಸಗೆಯಲ್ಲಿ ಈ ಸೂರ್ಯನಿಗೆ ಬರಿಯ ೫ ತಾಸುಗಳ ವಿಶ್ರಾಂತಿ. ನಾವು ಇನ್ನೂ ಮುನ್ನೂರು ಮೈಲು ಉತ್ತರಕ್ಕೆ ಸರಿದೆವಾದರೆ ಆರು ತಿಂಗಳ ದಿನ, ಆರು ತಿಂಗಳ ಅಗಾಧ ರಾತ್ರಿಯೇ ಬರುವಂಥ ವಿಚಿತ್ರನಾಡು ದೊರೆಯುತ್ತದೆ.

ಬರ್ಗನ್ ರೇವಿನ ಸುತ್ತಲಿನ ನೋಟ, ಆ ಸೂರ್ಯನ ಇಳಿ ಬಿಸಿಲಿನಲ್ಲಿ ಅತ್ಯಂತ ಮನೋಹರವಾಗಿತ್ತು. ಹಸುರು ನೀಲ ಬಣ್ಣಗಳು ಕೈ ಕೈ ಹಿಡಿದು ಶಾಂತವಾಗಿ ನರ್ತಿಸುವ ಒಂದು ಆನಂದಮಯ ದೃಶ್ಯವಾಗಿತ್ತು. ರೇವನ್ನು ಸೇರಿದವನೇ ಹಡಗಿನಿಂದ ಇಳಿದೆ; ನನ್ನ ಪೆಟ್ಟಿಗೆಯನ್ನು ಸುಂಕದವರಿಗೆ ತೋರಿಸಿದೆ; "ರೈಲು ನಿಲ್ದಾಣವೆಲ್ಲಿ?" ಎಂದು ಕೇಳಿದೆ. "ಸಮೀಪ–" ಎಂದರು. ಒಂದು ಟೇಕ್ಸಿಯನ್ನೇರಿ ಹೊರಟೆ. ರೈಲು ನಿಲ್ದಾಣಕ್ಕೆ ಸುಮಾರು ಒಂದು ಮೈಲು ದೂರವಾಗಿತ್ತು. ನಗರದ ಜನಜಂಗುಳಿ ಇನ್ನೂ ಎಚ್ಚೆತ್ತಿರಲಿಲ್ಲ. ನಾನು ಆ ನಿಲ್ದಾಣವನ್ನು ಸೇರುವಾಗ ಬೆಳಗಿನ ಏಳು ಘಂಟೆಯಷ್ಟೇ ಆಗ. ರೈಲು ನಿಲ್ದಾಣವೂ ಜನಶೂನ್ಯವಾಗಿ ಕಾಣಿಸುತ್ತಿತ್ತು.

ಇಂಗ್ಲೆಂಡಿನಲ್ಲಿ ಸಂಚರಿಸಿದಷ್ಟು ಕಾಲ ಇಂಗ್ಲಿಷ ಭಾಷೆ ತಿಳಿದುದರಿಂದ ತೊಂದರೆಯಾಗಲಿಲ್ಲ; ಅಲ್ಲದೆ ಅಲ್ಲಿನ ಕೆಲವರು ನನ್ನ ಮುರುಕು ಇಂಗ್ಲಿಷಿಗೇ 'ನೀವು ಚೆನ್ನಾಗಿ ಇಂಗ್ಲಿಷ್ ಮಾತನಾಡುತ್ತೀರಿ' ಎನಿಸಿಕೊಂಡ ಜಂಭ ಸೇರಿತ್ತು. ಆದರೆ ಈಗ ಬೇರೊಂದೇ ನಾಡಿಗೆ ಬಂದಿದ್ದೇನೆ; ನನ್ನ ಗತಿಯೇನು–ಎಂಬ ಯೋಚನೆ ಬಾರದಿರುತ್ತದೆಯೇ? ಮೊದಲು ನನಗೆ ಭೇಟಿಯಾದ ಕೆಲವರಂತು ನನ್ನ ಪ್ರಶ್ನೆಗಳಿಗೆ ತಮ್ಮದೇ ಆದ ನಾರ್ವೇಜಿಯನ್ ಭಾಷೆಯಲ್ಲಿ ಉತ್ತರ ಸಲ್ಲಿಸಿದರು. ಹೇಗೂ ಇರಲಿ, ಬಂದವನು ಹಾಗೆಯೇ ಮರಳುವುದಿಲ್ಲವಷ್ಟೆ.

ರೈಲು ನಿಲ್ದಾಣದಲ್ಲಿ ಒಸ್ಲೊ ನಗರಕ್ಕೆ ಹೊರಡುವ ರೈಲು ಕಾದು ನಿಂತಿತ್ತು; 7–30ಕ್ಕೆ ಅದರ ಪಯಣ. ಜನ ಒಬ್ಬೊಬ್ಬರಾಗಿ ಬರತೊಡಗಿದರು. ನಾನು ಫ್ರಾನ್ಸಿನ ತನಕ ಟಿಕೇಟು ಕೊಂಡೇ ಬಂದಿದ್ದೆ. ಬುಕ್ಕಿಂಗ ಆಫೀಸಿಗೆ ಹೋಗಿ,ನನ್ನ ಸ್ಥಳವನ್ನೂ ಕಾದಿರಿಸಿ,ಬಂದು ಬಂಡಿಯಲ್ಲಿ ಕುಳಿತೆ. ಮೂರನೆಯ ತರಗತಿಯ ಆಸನಗಳು ತುಂಬ ಶುಚಿಯೂ ಸುಖಕರವೂ ಆಗಿದ್ದುವು. ಒಂದೊಂದು ಸಾಲಿಗೆ ಇಬ್ಬರು, ಮೂವರು ಕುಳಿತಿರಲು ಜಾಗವಿತ್ತು. ಆಚೀಚಿನ ಕಿಟಿಕಿಗಳು ವಿಶಾಲವಾದ ಗಾಜಿನ ಕಿಟಿಕಿಗಳು; ಹೊರಗಿಂದ ನಿಸರ್ಗವನ್ನು ನೋಡಲು ಯಾವ ತಡೆಯೂ ಇರಲಿಲ್ಲ. ವೇಳೆಯಾಗುವಾಗ ಬಂಡಿಯೂ ತುಂಬಿತು. ನಿಯತ ವೇಳೆಗೆ ಹೊರಟೂ ಬಿಟ್ಟಿತು. ನನಗೆ ಬೆಳಗಿನ ಉಪಾಹಾರವಾಗಿರಲಿಲ್ಲ. ಆದರೂ ಯೋಚನೆಯಿಲ್ಲದೆ ಗಾಜಿನ ಕಿಟಿಕಿಯೊಂದಕ್ಕೆ ಮುಖಮಾಡಿ, ಆಚೀಚಿನ ಸೌಂದರ್ಯವನ್ನು ನೋಡುತ್ತ

ಕುಳಿತೆ. ಒಂದು ದಿನವೆಲ್ಲ ನನ್ನ ಪಯಣ; ಸುಮಾರು ಮುನ್ನೂರು ಮೈಲಿನ ದಾರಿ.

ರೈಲುಬಂಡಿ, ನಗರದ ಕಟ್ಟಡಗಳ ಪಟ್ಟಣಿಯನ್ನು ದಾಟಿತು; ಮುಂದೆ ಊರಿನ ವಿಸ್ತರಣಗಳೂ, ಉದ್ಯಾನಗಳೂ, ನಡುವೆ ಚೆಲುವಿನ ಚರ್ಚುಗಳೂ ಕಾಣಿಸಿದುವು. ಅಲ್ಲಿಂದ ಗುಡ್ಡವೊಂದರ ಕಡಿದಾದ ಮಗ್ಗುಲನ್ನು ಏರ ತೊಡಗಿತು; ಆಗ ಅದರ ಇನ್ನೊಂದು ಮಗ್ಗುಲಿಗೆ ಬರ್ಗನ್ ರೇವಿನ ಕಡಲೂ ಆಚೀಚಿನ ಮನೋಹರವಾದಗುಡ್ಡಗಳೂ ಕಾಣಿಸತೊಡಗಿದುವು. ವಿದ್ಯುತ್ತಿನ ಬಲದಿಂದ ಓದುತ್ತಿದ್ದ ರೈಲಿನ ವೇಗ ಹೆಚ್ಚುತ್ತ ಹೋಯಿತು. ದಾರಿ ಅಂಕು ಡೊಂಕಾದ ಪರ್ವತಮಾರ್ಗ; ನಡುನಡುವೆ ಕಡಿದುಕೊಟ್ಟ ಶಿಲೆಯಲ್ಲಿನ ದಾರಿಯೊಳಗಿಂದ ಅದು ಸಾಗುತ್ತಲಿತ್ತು.

ಬರ್ಗನ್ ಒಸ್ಲೋ ನಗರಗಳ ನಡುವಣ ಈ ಸಿಡಿದಾದ ದಾರಿಯೇ ಒಂದು ವಿಚಿತ್ರ ಸೌಂದರ್ಯ ವಿಲಾಸ. ಅದರ ಇಕ್ಕಡೆಗಳಲ್ಲೂ, ಉದ್ದಕ್ಕೂ ವಿಭಿನ್ನವಾದ ಹಲವು ತೆರನ ದೃಶ್ಯಗಳು ನಮಗೆ ಮೇಲಿಂದ ಮೇಲೆ ಕಾಣಿಸುತ್ತವೆ; ಒಂದೊಂದೂ ಮನಸ್ಸನ್ನು ಸೆರೆಹಿಡಿದು ಮುಗ್ಧಗೊಳಿಸಬಲ್ಲ ನೋಟ. ಮೊದಲಿನ ಒಂದೆರಡು ತಾಸುಗಳ ಕಾಲ ರೈಲಿಗೆ ಬೆಟ್ಟದ ಕಡಿದಾದ ಮಗ್ಗುಲಿಗಳಿಗಂಟಿಕೊಂಡು ಏರುವುದೇ ಕೆಲಸ; ಭುಜಂಗ ಮಾರ್ಗ. ಒಂದು ಕಡೆಯಲ್ಲೆಲ್ಲ ಕಡಿದಾದ ಶಿಲಾಮಯ ಪರ್ವತದ ಸೆರಗು. ಅದರ ಮೇಲೆ ದೆವ್ವಗಳಂತೆ ನಿಂತ ಪೈನ್ ವೃಕ್ಷಾವಳಿ! ಎಡೆಎಡೆಗಳಲ್ಲಿ ಗಾಳಿಗೆ ತೂಗುವ ಹಸುರು ಹುಲ್ಲು...ಒಂದು ಬೆಟ್ಟದ ಮಗ್ಗುಲಿಂದ ಇನ್ನೊಂದಕ್ಕೆ ಹಾಯುವ ಕಣಿವೆಯ ಇಳಕಲುಗಳು, ಬಯಲು ಪ್ರದೇಶಗಳು. ಅಲ್ಲೆಲ್ಲ ನಾಗರಿಕ ವಸತಿಗಳು, ಹೂದೋಟಗಳು, ಉದ್ಯಾನಗಳು. ಬೆಳಗಿನ ಎಳೆ ಬಿಸಿಲು—ಈ ಹಸುರಿನ ತಗ್ಗು, ತೆವರು, ಗುಡ್ಡ, ಶಿಲೆಗಳನ್ನು ಬೆಳಗುವಾಗ--ಬೆಳುದಿಂಗಳ ಲಾವಣ್ಯ ಅದಕ್ಕೆ. ರೈಲು ಬೆಟ್ಟದ ಸೆರಗನ್ನು ವಿಚಿತ್ರ ವೇಗದಿಂದ, ಆಕಾರದಿಂದ, ಹಾವಿನಂತೆ ಏರುತ್ತಲೇ ಸರಿಯುವಾಗ, ಒಮ್ಮೆ ಎತ್ತರವಾದ ಬೆಟ್ಟ, ಇನ್ನೊಮ್ಮೆ ಕಡಿದಾದ ಇಳುಕಲು, ತಗ್ಗು ನೆಲ, ಆವೃತ್ತಿಯಿಂದ ಎಂಬಂತೆ ಕಾಣಿಸುತ್ತವೆ. ಕಡು ಹಸುರಿನ ಪೈನ್ ಸಮುದಾಯದ ನಡುನಡುವೆ, ಎಳೆ ಹಸುರಿನ ಹುಲ್ಲುಗಾವಲು, ಅವನ್ನು ರಂಜಿಸುವ ನೂರಾರು ಹೂವುಗಳು! ಅಲ್ಲಿನ ಬಯಲ ತುಣುಕುಗಳಲ್ಲಿ ಜನನಿವಾಸದ ಮನೆಗಳು ದೇವಾಲಯಗ

ಳಂತೆ ಕಾಣಿಸುತ್ತವೆ. ಮರದ ಗೋಡೆ,ತೀರ ಇಳಿಕಲು ಮಾಡು; ಕೆಲವೊಮ್ಮೆ ಅವಕ್ಕೆ ಶಿಖರಗಳಿರುವುದುಂಟು. ಅವುಗಳನ್ನು ನೋಡಿ ಕಣ್ಣನ್ನು ಮೇಲೆ ಸರಿಸಿದರೆ, ಮಗ್ಗುಲಿನ ಪರ್ವತವು ಬಾನಿಗೆ ಮುಟ್ಟುವಷ್ಟು ಎತ್ತರವಾಗಿರುವಂತೆ ಕಾಣಿಸುತ್ತದೆ.

ಆಚೆಯ ಮಗ್ಗುಲಿಂದ ನಮ್ಮ ನೋಟ ತಿರುಗಿಸಿ ಈಚೆಗೆ ಹರಿಸಿದರೆ– ಕೆಳಗಡೆ ನೆಟ್ಟಗೆ ಇಳಿಯುವ ಪ್ರಪಾತ, ಇಲ್ಲವೆ ಮೆಲ್ಲಗೆ ಹರಿಯುವ ಬೆಟ್ಟದ ಸೆರಗು; ಮುಂದೆ ಕಣಿವೆ; ಬಯಲು, ಹರಿಯುವ ಹಳ್ಳ. ಅಲ್ಲಿಂದ ನೆಲತಿರುಗಿ ಏರುತ್ತ ಪರ್ವತವೊಂದರಲ್ಲಿ ಲೀನವಾಗಿಬಿಡುವ ನೋಟ. ತಗ್ಗಾಗಿರುವಲ್ಲಿ ಮೇಲಿಂದ ಮೇಲೆ ಕಾಣಿಸುವ ಇನ್ನೊಂದು ನೋಟ ವಿಶಾಲ ಜಲ ಸಮುದಾಯದ್ದು! ಶಾಂತವೂ ನೀಲವೂ ಆಗಿ ಕಾಣಿಸುವ ಸರೋವರಗಳು; ಅಂಕುಡೊಂಕು ಮೈಗಳುಳ್ಳ ಜಲಸಮುದಾಯ. ಹೀಗೆ ನಾವೆಷ್ಟು ದೂರ ಸಾಗಿದರೂ ಒಂದು ಕಡೆ ಉನ್ನತ ಪರ್ವತಾವಳಿ! ಮತ್ತೊಂದು ಕಡೆ ನಿನ್ನ ಸರೋವರ ಸದೃಶ ಜಲಭಾಗ. ಅಲ್ಲಿ ತೇಲುವ, ಸರಿಯುವ ಹಡಗುಗಳನ್ನು ಕಾಣುತ್ತ ಹೋದಂತೆ— ಇವು ಸರಸ್ಸುಗಳಲ್ಲ; ಕಡಲ ನಾಲಗೆಗಳು; ಪ್ರಸಿದ್ಧವಾದ ಫಿಯೋರ್ಡುಗಳು ಎಂಬ ಭಾವನೆಯಾಯಿತು. ನಾರ್ವೆಯ ಉತ್ತರ ಭಾಗದ ಕಡಲ ದಂಡೆಯು ಇದಕ್ಕೇನೆ ಹೆಸರಾದುದು. ಸಾವಿರ ಮೈಲು ದೂರದ ತನಕ, ದೇಶದ ತುದಿಯಿಂದ ತುದಿಯ ವರೆಗೂ ಚಾಚಿರುವ ಪರ್ವತ ಶ್ರೇಣಿಯಿಂದ- ಅಸಂಖ್ಯಾತ ಉಪ ಪರ್ವತಗಳು ಒಡೆದು, ಸಹಸ್ರ ಬಾಹುಗಳಾಗಿ ಕಡಲನ್ನು ಸೇರುತ್ತವೆ. ಅದರ ಪರಿಣಾಮವಾಗಿ ಕಡಲು-ಈ ಬೆಟ್ಟದ ತೋಳುಗಳೊಡನೆ ಸಂಧಾನಕ್ಕೆ ಹೊರಟಂತೆ–ತನ್ನ ಅಸಂಖ್ಯಾತ ತೋಳುಗಳನ್ನು,ಬೆರಳುಗಳನ್ನು ಕಳ್ಳನ ಕೈಯಷ್ಟು ನದ್ದಿಲ್ಲದೆ, ನೆಲದೊಳಕ್ಕೆ ಚಾಚುತ್ತದೆ. ನಿಸರ್ಗದ ಈ ವಿಚಿತ್ರ ಮೇಳ ಕಂಡು ಅನುಭವಿಸಬೇಕಾದ ಸುಖ! ನಾಲಗೆಯ ವರ್ಣನಾ ಶಕ್ತಿಯನ್ನು ಮೀರಿದ್ದು.

ನಮ್ಮ ರೈಲುಹಾದಿ ತುಂಬ ಕಠಿಣ ಮಾರ್ಗ. ಅದು ನೇರಾಗಿ ಹೋಗುವಂತಿಲ್ಲ; ಬೆಟ್ಟದ ಅಂಕು ಡೊಂಕುಗಳಿಗೆ ಅಂಟಿಕೊಂಡೇ ಮುಂದುವರಿಯಬೇಕು; ಏರುತ್ತ ಏಗುತ್ತ ಸರಿಯಬೇಕು. ಅಲ್ಲಲ್ಲಿ ದಾರಿಗೆ ಅಡ್ಡವಾಗಿ ಬರುವ ಶಿಲಾಶ್ರೇಣಿಗಳನ್ನು ಕೊರೆದು ಮಾಡಿದ ಸುರಂಗಗಳ ಮೂಲಕ ಸರಿಯಬೇಕು. ಒಸ್ಲೋವಿಗಿರುವ ಮುನ್ನೂರು ಮೈಲು ಹಾದಿಯಲ್ಲಿ ಕನಿಷ್ಠ ಕಾಲಂಶ

ವಾದರೂ ಸುರಂಗಗಳೇ. ಒಂದೊಂದು ಸುರಂಗದಿಂದ ಹೊರಬೀಳುವಾಗ ಒಂದೊಂದು ಬಗೆಯ ನೋಟ–ಎಡಕ್ಕಿದ್ದ ಪರ್ವತ ಬಲಕ್ಕೆ ಸರಿಯುತ್ತದೆ; ಬಲಕ್ಕಿದ್ದ ಕಡಲಸಾಲಗೆ ಎಡಕ್ಕೆ ಬಂದಿರುತ್ತದೆ!

ನಾರ್ವೆಯ ಫಿಯೋರ್ಡುಗಳ ಜಡ, ಶಾಂತವೃತ್ತಿಗೆ ಪ್ರತಿಯಾದ ಶೀಲ –ಅಲ್ಲಿನ ಗಿರಿ ಶಿಖರಗಳಿಂದಿಳಿಯುವ ಅಬ್ಬಿಗಳದು. ನಮ್ಮ ಕಣ್ಣಿಗೆ ಈ ಬೆಟ್ಟದ ಕೊರಕಲುಗಳಿಂದ ಇಳಿಯುವ, ಧುಮುಕುವ, ಕುಣಿದು ಬರುವ ಅಬ್ಬಿಗಳು, ಎಲ್ಲೆಲ್ಲೂ ಕಾಣಿಸುತ್ತವೆ. ಮೊದಲಿನ ಒಂದೆರಡು ತಾಸುಗಳ ಅವಧಿಯಲ್ಲಿ ನಮಗಿದಿರಾಗುವ ಈ ನಾಟ್ಯರಾಣಿಯರ ಸಂಖ್ಯೆ ನೂರಾರು. ನಾರ್ವೆಯವರು ಹುಂಬರಲ್ಲ! ಆಲಸಿಗಳಲ್ಲ. ಈ ಬೆಡಗುಗಾತಿಯರ ವಯ್ಯಾರಕ್ಕೆ ಮನಸೋತು ಮೈಮರೆತು ಕುಳಿತವರಲ್ಲ. ಈ ವನದೇವಿಯರ ಕುಣಿತವನ್ನು, ಲಾಸ್ಯವನ್ನು ತಮ್ಮ ಜೀವನದ ಕರ್ಮ ಕಾಂಡಕ್ಕೆ ಬಳಸಿಕೊಂಡಿದ್ದಾರೆ. ಅಲ್ಲಲ್ಲಿ ಈ ಅಬ್ಬಿಗಳ ನೀರನ್ನು ತಡೆದು, ಕೊಳವೆಗಳಿಂದ ಇಳಿಸಿ, ವಿದ್ಯುತ್ತು ಹೊರಡಿಸುವ ಯೋಜನೆ ಮಾಡಿರುವುದು ಕಾಣುತ್ತದೆ. ಯಾವ ಕಿರಿಯ ನೀರಿನ ಪ್ರಪಾತವನ್ನೂ ವ್ಯರ್ಥವಾಗಿ ಕಡಲಿಗೆ ಹರಿಯಲು ಬಿಟ್ಟಿಲ್ಲ. ಪ್ರಪಂಚದಲ್ಲೇ ಅದು ವಿದ್ಯುತ್ತಿನ ಬಳಕೆಯ ವಿಚಾರದಲ್ಲಿ ಅಗ್ರಸ್ಥಾನ ಗಳಿಸಿದೆ. ಚೆಲುವು ಸಂಪತ್ತುಗಳೆರಡೂ ನಾರ್ವೆಯವರನ್ನು ಒಲಿದಿವೆ. ಅಲ್ಲಿ ವಿದ್ಯುತ್ತು, ಟೆಲಿಫೋನ್ ಸೌಕರ್ಯಗಳಿಲ್ಲದ ಹಳ್ಳಿಯ ಮನೆಯೂ ಇಲ್ಲ. ನಾಗರಿಕತೆಯಿಂದ ಅತಿ ದೂರವಿರುವವರಿಗೂ, ಕಾಡಿನ ಕಿಬ್ಬದಿಯಲ್ಲೂ, ಬೆಟ್ಟದ ಕೊರಕಲಿನಲ್ಲೂ ಮನೆ ಮಾಡಿಕೊಂಡಿರುವ ನಾರ್ವೀಜಿಯನನ ಮನೆಗೂ ವಿದ್ಯುತ್ತಿನ ಪೂರೈಕೆಯಿದೆ

ಸುಮಾರು ಎರಡು ತಾಸಿನ ಪಯಣ ಸಾಗಿತಾದರೆ–ಮುಂದೆ ಗಿರಿಗಳ ಮೈಗೆ ಅಂಟಿಕೊಂಡು ಸರಿಯುವ ರೈಲು, ಪರ್ವತಗಳ ಬೆನ್ನಿನ ಮೇಲೋ, ಕಣಿವೆಗಳ ನಡುವಣದಿಂದಲೇ ಸರಿಯತೊಡಗುತ್ತದೆ. ಆಗ ಇಕ್ಕಡೆಗಳಲ್ಲೂ ದೂರದ ಪರ್ವತ ಶಿಖರಗಳ ದರ್ಶನವಾಗುತ್ತವೆ. ಈ ಎತ್ತರವಾದ ಪರ್ವತ ಶಿಖರಗಳಲ್ಲಿ ಹಸುರೇ ಇರುವುದಿಲ್ಲ; ಕಪ್ಪು ತಲೆ ಅವಕ್ಕೆ. ಅವುಗಳ ಮೇಲೆ ಯಾರೋ ಒಣಗಿಸಿಟ್ಟ ಬಿಳಿಯ ಅರಿವೆಗಳಂತೆ– ಬಿಳಿ ಬಣ್ಣದ ಸೆರಗುಗಳು ಕಾಣಿಸುತ್ತವೆ. ಅದೇ ಹಿಮ. ಸುಮಾರು 4,000 ಅಡಿಗಳ ಎತ್ತರದಲ್ಲಿಯೇ ನಮಗೆ ಹಿಮದ ದರ್ಶನವಾಗತೊಡಗುತ್ತದೆ. ನಮ್ಮ ರೈಲು ಇನ್ನೂ ಮೇಲ

ಕ್ಕೇರುತ್ತಿರುತ್ತದೆ. ಆಗ ಪೈನ್ ವೃಕ್ಷಗಳ ಹಸುರು ಮಾಯವಾಗಿ ಬಿಡುತ್ತದೆ. ಗಿರಿ ಶ್ರೇಣಿಗಳ ಕಪ್ಪು ಬಿಳಿಯ ಡುಬ್ಬ, ಬೆನ್ನು, ತಲೆಗಳ ಸಾಲುಗಳು ಗೋಚರಿಸುತ್ತವೆ. ಕ್ರಮೇಣ ಈ ಕಪ್ಪೆಲ್ಲ ಮಾಯವಾಗ ತೊಡಗಿ, ಎಲ್ಲೆಲ್ಲೂ ಹಿಮಾಚ್ಛಾದಿತ ನೆಲವು ಕಾಣಿಸುತ್ತಲೇ, ಅತ್ಯಪೂರ್ವ ಶುಚಿ, ಶುಭ್ರತೆಗಳ ವಿಲಾಸ ಹರಡುತ್ತದೆ. ಸುಮಾರು ಮೂರು ತಾಸಿನ ಪಯಣದಲ್ಲಿ ನಾವು ೪೦೦೦ಅಡಿ ಎತ್ತರ ಏರಿಯಾಯಿತು. ಹೆಸರಿಗೆ ಬೇಸಗೆ; ಕೊರೆಯುವ ಚಳಿ; ಎಲ್ಲೆಲ್ಲೂ ಹಾಸಿ ಹರಡಿರುವ ಶ್ವೇತವರ್ಣ ವಿಲಾಸ.

ನಮ್ಮ ರೈಲಿನ ಮೊದಲನೆಯ ನಿಲ್ದಾಣ "ಮಿರ್ದಾಳ್" ಎಂಬುದು. ಅಷ್ಟಕ್ಕೆ ರೈಲಿನ ಗಾರ್ಡ್ ಬಂದು 'ಇಪ್ಪತ್ತು ನಿಮಿಷ ಕಾಲ ಬಂಡಿ ವಿರಮಿಸುತ್ತದೆ' ಎಂದು ತಿಳಿಸಿ ಹೋದ. "ಇಳಿದು ನೋಡಿ" ಎನ್ನುವ ಸೂಚನೆಯದು. ಬಂಡಿಯಿಂದಿಳಿದು ನಮ್ಮ ಎಡಕ್ಕೆ ತಿರುಗಿದೆವು. ಕೆಳಗಡೆ ಆಳವಾದ ಪ್ರಪಾತವಿತ್ತು. ಅಲ್ಲಿಂದು ಸುಂದರವಾದ ನಗರ, ಆ ನಗರ ನಿಂತುದು ಒಂದು ಕಡಲಿನ ಕೊಲ್ಲಿಯ ದಂಡೆಯಲ್ಲಿ. 'ಫ್ಲಾಮ್' ಎಂಬ ಆ ನಗರ, ಕಡಲ ಮಟ್ಟಕ್ಕಿಂತ ಬರಿ ಆರು ಅಡಿ ಎತ್ತರದಲ್ಲಿದೆ. ಮಿರ್ದಾಳದಿಂದ–ಒಂದು "ಫ್ಯುನಿಕುಲರ್" ರೈಲಿನಲ್ಲಿ ಕುಳಿತು ನೇರಾಗಿ ಇಳಿದರೆ ನಾಲ್ವತ್ತು ಮಿನಿಟುಗಳಲ್ಲಿ ಆ ಊರನ್ನು ಸೇರಬಹುದು. ಅಲ್ಲಿಂದ ಹಡಗಿನಲ್ಲಿ ಕುಳಿತು ಬರ್ಗನ್ ನಗರಕ್ಕೆ ಮರಳಿ ಹೋಗಬಹುದು. ಫ್ಲಾಮಿನ ಕಡಲಿನ ನಾಲ್ಕು ಸುತ್ತಲೂ ಗೋಡೆಗಟ್ಟಿನಿಂತ ಬೆಟ್ಟಗಳ ಭವ್ಯತೆ, ಚೆಲುವುಗಳು ಅವರ್ಣನೀಯ.

ಮುಂದೆ ಮೂರು ತಾಸಿನ ತನಕ ಬಂಡಿ ಸಮತಟ್ಟಾದ ಕಣಿವೆಯೊಂದರಲ್ಲಿ ಸಾಗುತ್ತದೆ. ದಾರಿಗೆ ಅಡ್ಡವಾಗುವ ಪ್ರತಿ ಪರ್ವತವನ್ನೂ ಕೊರೆದು ಸಾಗುತ್ತದೆ. ಇಲ್ಲಿನ ನೆಲ, ಜಲಗಳೆರಡೂ ಹಿಮದಿಂದ ಹೆಪ್ಪುಗಟ್ಟಿವೆ. ತಗ್ಗಿನ ಜಲಾಶಯಗಳಲ್ಲಿ ನೀರು ಬಿಳಿಯ ಹಾಳೆಯಾಗಿ ನಿಂತುದೂ, ಅವರ ಅಂಚುಗಳಿಂದ ನೀರು ಕರಗಿ ಒಸರುವುದೂ ಕಾಣುತ್ತದೆ. ಇಲ್ಲಿನ–ಗಿಡಗಳು ಕುಬ್ಜಗಳು; ಹಸುರಿಲ್ಲದ ಕಡ್ಡಿಗಳು. ಇಂಥ ದಾರಿಯಲ್ಲಿ ಸರಿದು, ನಡುಮಧ್ಯಾಹ್ನ ವೇಳೆಗೆ, ಫಿನ್ಸೆ ಎಂಬಲ್ಲಿಗೆ ಬಂದೆವು. ಅಲ್ಲಿಯ ಸೌಂದರ್ಯ ನಿರೀಕ್ಷಣೆಗಾಗಿ ಇಪ್ಪತ್ತು ನಿಮಿಷಗಳ ವಿರಾಮ. ನೆಲವನ್ನು ಸೇರಿದರೆ, ಅಸಾಧ್ಯ ಮೈನಡುಕು. ಬಿಸಿಲಿಗೇನೆ ಚಳಿ ಅಂಟಿದಂತಿತ್ತು ಆ ಹವೆಯಲ್ಲಿ. ಸ್ಟೇಶನಿನ ಪ್ಲಾಟಫಾರ್ಮಿನಲ್ಲಷ್ಟೆ ಮಣ್ಣು ಹಾಸಿತ್ತು–ಉಳಿದ ನೆಲವೆಲ್ಲ ಚಿರಗಾಲದ ಹಿಮ

ದಿಂದ ಕವಿದಿತ್ತು. ನಮ್ಮ ಒಂದು ಮಗ್ಗುಲಲ್ಲಿ, ಇನ್ನೂ ೨೦೦೦ ಅಡಿ ಎತ್ತರ ವಾಗಿ ಕಾಣಿಸುತ್ತಿರುವ ಒಂದು ಹಿರಿಯ ಪರ್ವತ ಶ್ರೇಣಿಯಿತ್ತು. ಬಿಸಿಲಿಂದ ಕಣ್ಣು ಕುಕ್ಕುವಂತೆ ಅದು ಹೊಳೆಯುತ್ತಿತ್ತು. ಅದರ ಕೆಲವೊಂದು ಮಗ್ಗುಲು ಗಳಿಂದ ಹಿಮವು ಕಳಚಿ ಜಾರಿ, ಬೆಟ್ಟದ ಮೈಯು ಸ್ವಲ್ಪ ಕಪ್ಪಾಗಿ ಕಾಣಿಸುತ್ತಿತ್ತು.

ನಾವು ಬಂಡಿಯಲ್ಲಿ ಕುಳಿತಾಗಲೇ, ಟಿಕೇಟು ಇನಸ್ಪೆಕ್ಟರ ಬಂದು ನನ್ನ ಕೈಗೆ "ಒಸ್ಲೋ ಬರ್ಗನ್" ದಾರಿಯ ಸಚಿತ್ರ ಪಟವೊಂದನ್ನು ಕೊಟ್ಟು ಹೋಗಿದ್ದ. ಆ ದಾರಿಯಲ್ಲಿ ಪ್ರವಾಸಿಗೆ ಇದಿರಾಗುವ ಪ್ರತಿಯೊಂದು ನಗರ, ಸುಂದರ ದೃಶ್ಯದ ವಿವರಗಳನ್ನು ಬಣ್ಣಿಸುವ ನಕ್ಷೆಯದು. ಅದನ್ನು ಕಾಣುತ್ತ ಕುಳಿತವನು,"ಮುಂದೇನು ಬರುತ್ತದೆ?" ಎಂಬ ನಿರೀಕ್ಷಣೆಯನ್ನು ಆಡಿಗಡಿಗೆ ತಾಳುತ್ತಿರುವುದು ತೀರ ಸಹಜ. ಪ್ರತಿಯೊಂದು ನಿರೀಕ್ಷೆಯೂ ಊಹೆ ಯನ್ನು ಮೀರಿದ ಚೆಲುವಿಗೆ ಇಂಬಾಗಿ, ಅತ್ಯಂತ ತೃಪ್ತಿಯನ್ನು ಕೊಡುತ್ತದೆ.

ಫಿನ್ಸೆಯಿಂದ ಇನ್ನೂ ಎರಡು ತಾಸುಗಳ ತನಕ ಬಂಡಿಯು ಹಿಮದ ನಾಡಿನಲ್ಲಿ ಸರಿಯುತ್ತದೆ. ಅಲ್ಲಲ್ಲಿ ಸಿಗುವ ಕಟ್ಟಡಗಳೆಂದರೆ ನಿಲ್ದಾಣಗಳು, ರೈಲ್ವೆ ನೌಕರರ ಮನೆಗಳು ಮಾತ್ರ. ನೋಡ ನೋಡುತ್ತ ಬಿಸಿಲು,ಬಿಳುಪು ಗಳಿಂದ ಕಣ್ಣಿಗೆ ನೋವು ಬರುತ್ತದೆ. ರೈಲು ದಾರಿಯ ಮೇಲೆ ಆಗಾಗ ಹಿಮ ಬಂದು ಉರುಳುವುದರಿಂದ ಅದನ್ನು ತೆಗೆಯುವ ನೌಕರ ವರ್ಗ ಇಲ್ಲಿ ಸದಾ ನೆಲಸಿರಬೇಕು. ಇಂಥ ನಿರ್ಜನ ಪ್ರದೇಶದಲ್ಲೂ ವಿದ್ಯುತ್ತಿನ ತಂತಿಗಳೂ-ನಾಲ್ಕೆಂಟು ದಿಕ್ಕುಗಳಿಗೆ ಸಾಗಿ ಹೋಗುವುದನ್ನು ಕಾಣಬಹುದು. ನಾರ್ವೆಯ ಕಡುಮೂಲೆಯಲ್ಲಿ ಅಡಗಿರಬಹುದಾದ ಮನುಷ್ಯನ ಸೇವೆಗಾಗಿ ಅವು ಅರಸಿ ಕೊಂಡು ಹೋಗುವಂತೆ ಕಾಣುತ್ತವೆ.

ಇನ್ನಷ್ಟು ದೂರ ಸರಿದೆವೆಂದರೆ, ತಿರುಗಿ ಕರಿಯ ಶಿಲೆ, ಬಿಳಿಯ ಹಿಮ ಗಳು ಬರತೊಡಗುತ್ತವೆ. ಹರಿಯದ ಹಿಮದ ನಡುವೆ, ಹರಿಯುವ ನೀರು ಕಾಣಿಸತೊಡಗುತ್ತದೆ; ನೆಲ ಇಳಿಯತೊಡಗುತ್ತದೆ. ದಾರಿಯ ಇಕ್ಕಡೆಗಳಲ್ಲಿ ಬರಿದಾಗಿ ನಿಂತ ಮರಗಳು ಕಾಣಿಸುತ್ತವೆ. ಅವುಗಳಲ್ಲಿ ಒಡೆದ ಕೆಂಚಿಗುರು ಇನ್ನೊಂದು ವರ್ಣಭೇದವನ್ನು ಕಲ್ಪಿಸುತ್ತದೆ. ಅವೆಲ್ಲ-ನಡುಗಾತ್ರದ ಬರ್ಚ್ ವೃಕ್ಷಗಳು. ನಾರ್ವೆಯ ವೃಕ್ಷಾವಳಿಯಲ್ಲಿ ಪೈನ್,ಬರ್ಚ್ ಎರಡೇನೆ ಮುಖ್ಯ ವಾದುವುಗಳು. ನಾವು ದಾರಿಯನ್ನು ಇಳಿಯತೊಡಗಿದಂತೆ,ಕೆಂಪು ಚಿಗುರಿನ ಬದಲು,ಹಸುರೆಲೆಯ ಮರಗಳನ್ನು ಇನ್ನೊಮ್ಮೆ ಕಾಣತೊಡಗುತ್ತೇವೆ. ಮರ

ಗಳ ಗಾತ್ರವೂ ಹೆಚ್ಚಾಗತೊಡಗುತ್ತದೆ. ಇನ್ನೊಮ್ಮೆ ಹಸುರಿನ ವಿಲಾಸ ನಮ್ಮ ಮುಂದಿನ ಬೆಟ್ಟ ಗುಡ್ಡಗಳ ಮೇಲೆ ಕಾಣಿಸತೊಡಗುತ್ತದೆ. ಇನ್ನು, ಒಸ್ಲೋ ಸೇರುವ ತನಕ — ಕಡಿದಾದ ಪರ್ವತಗಳ ಬದಲು, ದುಂಡಾಗಿ ಹಾಸಿ ಹರಡಿರುವ, ತಗ್ಗು, ತೆವರು, ಬೆಟ್ಟ, ದಿನ್ನೆಗಳು. ಪರ್ವತಗಳ ಭವ್ಯ, ರೌದ್ರ ರೂಪಗಳು ಲಲಿತ ಸೌಮ್ಯ, ರೂಪುಗಳಿಗೆ ಇಂಬು ಕೊಡುತ್ತವೆ. ಅವುಗಳ ಎಡೆಯಲ್ಲಿ ಹರಿಯುವ ವೇಗದ ಅಬ್ಬಿಗಳ ಬದಲು—ನಕ್ಕು ನಲಿದಾಡುವ ಅಸಂಖ್ಯಾತ ಹಳ್ಳಗಳು ಕಾಣಿಸತೊಡಗುತ್ತವೆ. ಕೆಲವು ಪ್ರಶಾಂತವಾಗಿ ಹರಿಯುವ ಹಿರಿಯ ನದಿಗಳೂ ನಮ್ಮ ದಾರಿಯನ್ನು ರಂಜಿಸುತ್ತವೆ.

ಮುಂದೆ ಅದೆಷ್ಟು ಕಾಡುಗಳೋ ಬಣ್ಣಿಸಲಾರೆ . . . . .ಎಲ್ಲೆಲ್ಲೂ ವೃಕ್ಷ ಸಮುದಾಯ; ಅವುಗಳ ನಡುನಡುವೆ ಮರದ ಮನೆಗಳು. ಜನವಸತಿಗಳು. ಈ ದಾರಿ ಜನವಸತಿ, ಉದ್ಯೋಗ ನಿಬಿಡವಾದ ಕೇಂದ್ರ. ಕಾಡಿಲ್ಲದ ಇಳುಕಲುಗಳ ಮೇಲೆ ರೈತರ ಉಳುಮೆಯ ನೆಲವೂ, ಹೊಲದ ಹಸುರೂ ನಮಗೆ ಕಾಣಸಿಗುತ್ತವೆ. ಅಲ್ಲಲ್ಲಿ ಮರಗಳ ದಿಂಡುಗಳ ರಾಶಿಯೂ, ಮರ ಸಿಗಿಯುವ ಕಾರ್ಖಾನೆಗಳೂ ಕಾಣಿಸುತ್ತವೆ. ಈ ಉದ್ಯಮವೂ ಅವರ ಒಂದು ವಿಶೇಷ ವೃತ್ತಿ. ದಾರಿಯ ನದಿ, ಕಾಲುವೆಗಳೆಲ್ಲ ತೇಲುವ ಮರದ ದಿಮ್ಮಿಗಳಿಂದ ತುಂಬಿರುತ್ತವೆ. ಅವನ್ನು ಹೀಗೆ ತೇಲಿಸಿಕೊಂಡೇ ರೇವಿಗೆ ಸಾಗಿಸುತ್ತಾರೆ.

ನಾವು ಮುಂದಕ್ಕೆ ಸರಿದಂತೆ ಕಾಡು ಕಡಿಮೆಯಾಗುತ್ತದೆ, ನಾಡು ಹೆಚ್ಚುತ್ತದೆ. ಆದರೆ ಹಸುರಿಲ್ಲದ ನೆಲದ ತುಣುಕೊಂದೂ ಕಾಣಿಸುವುದಿಲ್ಲ. ಅನೇಕ ಕಡೆ ಕುದುರೆಗಳನ್ನು ನೇಗಿಲಿಗೆ ಕಟ್ಟಿ ಉಳುವ ನೋಟ ಕಾಣಸಿಗುತ್ತದೆ. ಅವರ ಮುಖ್ಯ ಬೆಳೆ 'ರೈ'ಯದು; ಈಗೀಗ ಗೋಧಿಯನ್ನು ಬೆಳೆಯಿಸುತ್ತಿದ್ದಾರಂತೆ. ಈ ದೇಶವೇನೋ ವಿಶಾಲವಾಗಿದೆ; ಆದರೆ ನೈಸರ್ಗಿಕ ತಡೆಗಳಿಂದ ಕೂಡಿದೆ. ಜನಸಂಖ್ಯೆ ತೀರ ಕಡಿಮೆ. ಆದರೆ ಸಂಚಾರದ ರೈಲುಗಳು ವಿದ್ಯುತ್ತಿನವು; ಯಾವತ್ತು ಗಾಡಿ ದಾರಿಗಳೂ ಡಾಮರು ಬಳಿದುವು. ಅಸಂಖ್ಯಾತ ನದಿಗಳಿದ್ದರೂ, ಅವಕ್ಕೆ ಅಲ್ಲಲ್ಲಿ ತೂಗು ಸೇತುವೆಗಳನ್ನು ಹಾಕಿ, ಸಂಚಾರ ಯೋಗ್ಯವಾಗಿ ಮಾಡಿರುವುದೂ ಕಾಣಿಸುತ್ತದೆ.

ನಮ್ಮ ಪಯಣದ ಮುಕ್ಕಾಲು ಪಾಲು ಕಳೆದರೆ—ದಾರಿಯಲ್ಲಿ ಸಣ್ಣ ಪುಟ್ಟ ನಗರಗಳನೇಕ ಕಾಣಸಿಗುತ್ತವೆ. ಅಲ್ಲಲ್ಲಿನ ರೈಲು ನಿಲ್ದಾಣಗಳಲ್ಲಿ

ವಿದ್ಯುತ್ ಬಸ್ಸುಗಳು ಸಣ್ಣ ಊರುಗಳಿಗೆ ಹೋಗಲು ನಿಂತಿರುತ್ತವೆ. ಅವೂ ರೈಲು ದಾರಿಯನ್ನು ಬಳಸುವ ಬಂಡಿಗಳು. ದಾರಿಯ ನಗರಗಳಲ್ಲಿ ಸುಂದರ ಉದ್ಯಾನಗಳೂ, ಫಲವೃಕ್ಷಗಳ ತೋಟಗಳೂ ನೂರಾರಿವೆ. ಊರುಗಳು ಹೆಚ್ಚಿದಂತೆ, ಅಲ್ಲಲ್ಲಿ ಕಾರ್ಖಾನೆಗಳ ಸಂಖ್ಯೆಯೂ ಹೆಚ್ಚುತ್ತವೆ. ಅವುಗಳಿರು ವಲ್ಲಿಗೆ ಆಚೀಚಿನ ಬೆಟ್ಟದ ಏರುಗಳಿಂದ ಹಾಯ್ದು ಬರುವ ಉಕ್ಕಿನ ಮಿಣಿ ಗಳಿಗೆ ತೂಗಿಕೊಂಡು ಬರುವ ತೊಟ್ಟಿಲುಗಳಲ್ಲಿ—ಸಾಮಾನುಗಳು ಬಂದು ಹೋಗುವುದೂ ಕಾಣಿಸುತ್ತದೆ. ಈ ಪ್ರಾಂತ ಮರದ ಗೊಜ್ಜಿನಿಂದ ತಯಾರಿ ಸುವ ಕಾಗದ, ರಯಾನ್ ಉದ್ಯಮಗಳಿಗೆ ಹೆಸರಾದ ಪ್ರದೇಶವಾಗಿದೆ.

ನಾವು ಮುಂದೆ ಸಾಗಿದಂತೆ--ಇಂಗ್ಲೆಂಡಿನ ಹವೆ, ಇಂಗ್ಲೆಂಡಿನ ನೆಲ, ಬೇಸಾಯಗಳ ಚಿತ್ರವನ್ನು ಇಲ್ಲಿಯೂ ಕಾಣತೊಡಗುತ್ತೇವೆ. ರೈತರು ಕುದುರೆ ಗಳನ್ನು ಜೋಡಿಸಿ ಉಳುವುದರ ಬದಲು, ಟ್ರ್ಯಾಕ್ಟರುಗಳನ್ನು ಬಳಸುವುದು ಕಾಣುತ್ತದೆ. ಊರು ಕೇರಿಗಳ ಜನಸಂಖ್ಯೆ ಹೆಚ್ಚುತ್ತಾ ಬರುವುದು ಕಾಣಿಸು ತ್ತದೆ. ಭೂಮಿ ಕಡಲ ಮಟ್ಟಕ್ಕೆ ಸಮೀಪವಾದಂತೆ, ಪೈನ್ ವೃಕ್ಷಗಳ ಬೆಳ ವಣಿಗೆ ಹೆಚ್ಚುಹೆಚ್ಚಾಗುವುದನ್ನು ಕಾಣುತ್ತೇವೆ.

ಒಸ್ಲೋವಿಗೆ ಇನ್ನೆರಡು ತಾಸಿನ ಹಾದಿಯಿರುವಾಗ—ನಮ್ಮ ಒಂದು ಮಗ್ಗುಲಿಗೆ ಇನ್ನೊಂದು ಕಡಲನಾಲಗೆ ಚಾಚಿ ಬಂದಿರುವುದು ಕಾಣಸತೊಡ ಗುತ್ತದೆ. ಅದೇನೆ ಒಸ್ಲೋ ಫಿಯೋರ್ಡ. ಇದು ಭೂಮಿಯೊಳಗೆ ಬಹು ದೂರದ ತನಕ ಚಾಚಿರುವಂಥ ಕಡಲಿನ ಸೆರಗು; ಅದರ ಉದ್ದಕ್ಕೂ ಹಡಗಿನ ಸಂಚಾರಕ್ಕೆ ಅನುಕೂಲವಾಗಿದೆ.

ಸಂಜೆಯ ಐದೂವರೆ ಘಂಟೆ ಕಳೆದಾಯಿತು; ರೈಲಿನ ಅಂಕು ಡೊಂಕು ಹಾದಿ ಅಂಕುಡೊಂಕಾಗಿಯೇ ಉಳಿದಿದೆ. ಆಚೀಚಿನ ಮನೆಗಳು, ಗುಡ್ಡ ಗಾಡುಗಳು ಒಂದೇ ಸಮನೆ ಹಾಗೆಯೇ ಸಾಗಿವೆ. ಆಚೀಚಿನ ಮನೆಗಳು ಹಳ್ಳಿಯ ಮನೆಗಳೇ ಎನಿಸುತ್ತಿತ್ತು ಮನಸ್ಸಿಗೆ. ಅಷ್ಟರಲ್ಲಿಯೇ ಒಸ್ಲೋ ವಿಸ್ತ ರಣಗಳು ಬರತೊಡಗಿಯಾಯಿತು. ಗುಡ್ಡಗಾಡಿನ ನಡುವೆ ಸಣ್ಣ ಮನೆಗಳ ಬದಲು—ದೆವ್ವದಾಕೃತಿಯ ದೊಡ್ಡ ಮನೆಗಳು ಕಾಣಿಸತೊಡಗಿದುವು. ಇನ್ನಿ ಪ್ಪತ್ತು ನಿಮಿಷಗಳೊಳಗಾಗಿ ನಮ್ಮ ರೈಲು ಒಸ್ಲೋ ನಿಲ್ದಾಣವನ್ನು ಸೇರಿ ಯೂ ಆಯಿತು.

ನಾನು ಲಂಡನ್ ಸೇರುವ ಮೊದಲು—ನನ್ನ ನಿವಾಸದ ಹೊಟೇಲನ್ನು

ಥಾಮಸ್ ಕುಕ್ ಕಂಪೆನಿಯವರ ಮೂಲಕ ಗೊತ್ತುಪಡಿಸಿದ್ದೆ. ಆದರೆ ಈ ಪಯಣದಲ್ಲಿ ಹಾಗೇನೂ ಮಾಡದೆ ಅದೃಷ್ಟ ನಂಬಿ ಹೊರಟಿದ್ದೆ. ಇಳಿದವನೇ -ನಿಲ್ದಾಣದ ಇನಫರ್ಮೇಶನ್ ಆಫೀಸಿಗೆ ಹೋದೆ; ಅವರಲ್ಲಿ "ಹೊಟೇಲಿನ ವಿಚಾರ ತಿಳಿಸಿ" ಎಂದೆ. ಅದಕ್ಕಿರುವ ಇನ್ನೊಂದು ಕಚೇರಿಯನ್ನು ತೋರಿಸಿದರು. ಅಲ್ಲಿಗೆ ಹೋದೆ. ಅಲ್ಲಿ ಇಂಗ್ಲಿಷ್ ಭಾಷೆ ಬಲ್ಲ ಒಬ್ಬ ಮಧ್ಯವಯಸ್ಕ ಸ್ತ್ರೀ ಇದ್ದಳು. ನನ್ನ ಹೆಸರನ್ನು ಬರೆದುಕೊಂಡಳು. 'ಎಂಥ ಹೊಟೇಲು ಬೇಕು-ದಿನಕ್ಕೆ ಆರು ಕ್ರೋನರಿನಿಂದ, ಇಪ್ಪತ್ತು ಮೂವತ್ತರ ತನಕ ಚಾರ್ಜು ಮಾಡುವವರು ಇದ್ದಾರೆ' ಎಂದಳು. 'ಆದಷ್ಟು ಕಡಿಮೆಯದು' ಎಂದೆ. ಟೆಲಿಫೋನ್ ಹಿಡಿದು ಹೊಟೇಲಿನವರೊಡನೆ ಸಂಭಾಷಣೆ ತೊಡಗಿದಳು. ಒಂದು ಸ್ಥಳವನ್ನು ನಿಶ್ಚಯಿಸಿ-ಅದರ ವಿಳಾಸ ಬರೆದು ಕೊಟ್ಟಳು; ಅನಂತರ ಒಂದು ಕ್ರೋನರ್ (0-12-0) ಚಾರ್ಜುಕೊಂಡು—ಒಸ್ಲೋ ನಗರದ ನಕ್ಷೆಯನ್ನು ಕೊಟ್ಟು "ಇಲ್ಲಿ ನೀವಿದ್ದೀರಿ; ಇಲ್ಲಿ ಹೊಟೇಲಿದೆ. ನೀವು ಟ್ರಾಮಿನಲ್ಲೂ ಹೋಗಬಹುದು, ನಡೆದೂ ಹೋಗಬಹುದು" ಎಂದು ನನಗೆ ತಿಳಿಸಿದಳು. ಅದರ ಜತೆಗೆ ಒಸ್ಲೋ ನಗರದಲ್ಲಿ ಏನೇನನ್ನೆಲ್ಲ ನೋಡಬಹುದೆಂದು ತಿಳಿಸುವ ಚಿತ್ರ ಪುಸ್ತಕಗಳನ್ನು ಉಚಿತವಾಗಿ ಕೊಟ್ಟಳು. ವಂದಿಸಿ ಹೊರಟೆ.

ಹೊರಗೆ ಬಂದೆ; ಯಾರಾರನ್ನು ಕೇಳಿ ದಣಿಯುವ ಗೊಂದಲ ಬೇಡೆಂದು ಕಾದಿದ್ದ ಒಂದು ಟೇಕ್ಸಿಯನ್ನು ಕರೆದೆ. ವಿಳಾಸ ತೋರಿಸಿದೆ. ಆತ ನನ್ನನ್ನು ಸುಮಾರು ಮೈಲುದೂರದ "ಜಾನ್ ಹೆಫ್ಟಿಸ್ ಗಾಟೆ"ಯಲ್ಲಿನ ಒಂದು ಐದು ಪ್ಪರಿಗೆಯ ಮನೆಗೆ ಒಯ್ದು ಮುಟ್ಟಿಸಿದ. ಆ ಕಟ್ಟಡದ ತುತ್ತತುದಿಯಲ್ಲಿರುವ ಹೊಟೇಲಿನಲ್ಲಿ ನನ್ನ ವಸತಿ. ಅಲ್ಲಿನ ಕೊರತೆಯೆಂದರೆ—ಅಲ್ಲಿ ಬೆಳಗಿನ ಉಪಾಹಾರಕ್ಕೆ ಅನುಕೂಲತೆಯಿರಲಿಲ್ಲ. ಅದು "ಪೆನ್ ಶಿಯಾನ್" ಅಂದರೆ ಬರಿಯ ನಿವಾಸದ ಮನೆಯಷ್ಟೆ.

ಬಂದವನೇ ಮುಖವನ್ನು ತೊಳೆದು, ಕಟ್ಟಡದಿಂದ ಇಳಿದೆ; ಹಸಿದ ಹೊಟ್ಟೆಗೆ ಒಂದಿಷ್ಟು ಆಹಾರ ತುಂಬಿಸ ಬೇಕಲ್ಲ-ಎಂದು. ಬೆಳಗಿಂದ ಹೆಚ್ಚು ಕಡಿಮೆ ನನಗೆ ಉಪವಾಸವಾಗಿತ್ತು. ಒಮ್ಮೆಯೇನೋ ಕಾಫಿಯನ್ನು ತೆಗೆದುಕೊಂಡಿದ್ದೆ. ಮತ್ತೊಮ್ಮೆ ರೈಲುನಿಲ್ದಾಣದಲ್ಲಿ ನಿಂತಾಗ ಚಹಾ ಕೇಳಿದೆ. ನಿಂಬೆ ಹಣ್ಣಿನ ರಸ ಹಾಕಿದ ಚಹ ಕೊಟ್ಟರು-ಬೇಡ ಅನ್ನುವಾಗ ರೈಲು ಹೊರಟಿತು! ಮುಂದೊಂದು ಕಡೆ ಇಳಿದಾಗ ಜನರ ನಿಗ್ಗಿನಲ್ಲಿ ಏನನ್ನು ಕೊಳ್ಳುವುದಕ್ಕೂ

ಮನಸ್ಸು ಮುಂದುವರಿಯಲಿಲ್ಲ. ರೈಲಿನಲ್ಲಿ ಆಹಾರದ ಏರ್ಪಾಡಿತ್ತು. ಆದರೆ ನಾನು ಸಸ್ಯಾಹಾರಿಯೆಂದು ಇಂಗ್ಲಿಷ್ ಬಾರದ ಅವರಿಗೆ ಬೋಧಿಸಿ, ವಿಫಲನಾಗಿ ಮರಳಿ ಬರಬೇಕಾಯಿತು.

ನನ್ನ ನಿವಾಸದ ಹೋಟೇಲಿಗೆ ಸಮೀಪವಾಗಿ ಒಂದು ಉಪಾಹಾರ ಗೃಹವಿತ್ತು. ಅಲ್ಲಿ ನನ್ನ ಇಂಗ್ಲಿಷನ್ನು ವ್ಯಯಿಸಿ 'ಕಾಫಿ'ಎಂದೆ. 'Koffee'ಎಂದರು ಅವರು. ಮುಂದೆ "ಕಾಫಿ"ಯೇ ನನ್ನ ಹಸಿವಿನ ಜಪವಾಯಿತು. ಕಾಫಿ, ಕೇಕ್ ಕೊಂಡು ತಿಂದು, ಹಾಗೆಯೇ ಮರಳಿ ನನ್ನ ಬಿಡಾರವನ್ನು ಸೇರಿದೆ. ಸಂಜೆಯ ಎಂಟು ಘಂಟೆಯಾಗಿತ್ತು. ಸೂರ್ಯನೇನೋ ಮುಳುಗಿರಲಿಲ್ಲ. ನಾನು ದಣಿದು ಬಂದಿದ್ದುದರಿಂದ ನನ್ನ ಕೊಟಡಿಯನ್ನು ಸೇರಿದೆ. ಕಿಟಿಕಿಯಿಂದ ಸೂರ್ಯರಶ್ಮಿ ಬರುವುದನ್ನು ಕಂಡು, ತೆರೆಹಾಕಿದೆ. ಇನ್ನೂ ಆ ಬೆಳ್ದೆರೆಯಿಂದ ಬೆಳಕು ಹರಿದು ಬರುತ್ತಿತ್ತು. ಕಣ್ಮುಚ್ಚಿ ಮಲಗಿಕೊಂಡೆ. ಆ ರಾತ್ರಿ ನನಗೆ ಅಪೂರ್ಣ ನಿದ್ರೆ. ಎಷ್ಟು ಹೊತ್ತಿಗೆ ಎಚ್ಚೆತ್ತು ಕಣ್ತೆರೆದು ನೋಡಿದರೂ ಕೊಟಡಿಯ ತುಂಬ ಬೆಳಕು; ಹೊರಗೂ ಬೆಳಕೇ ಸೂರ್ಯ ಆ ಊರಲ್ಲಿ ರಾತ್ರಿಯ ಹತ್ತೂವರೆ ಘಂಟೆಗೆ ಮುಳುಗುವವ. ಅನಂತರ ಎರಡು ತಾಸಿನ ಮುಂಬೆಳಕು ಇದೆ. ಮೂರೂವರೆಗೆ ಮೂಡುತ್ತಾನೆ ಸೂರ್ಯ; ಅದಕ್ಕೆ ಎರಡು ತಾಸಿನ ಹಿಂಬೆಳಕಿದೆ. ಹಾಗಾಗಿ ಕಡುಗತ್ತಲ ರಾತ್ರಿಯೆಂಬುದು ಒಂದೋ ಎರಡೋ ತಾಸು ಮಾತ್ರ. ನನ್ನ ನಿದ್ರೆಗೆ ಮಾರಿಯಾಗಿ ನಿಂತ ಸೂರ್ಯನನ್ನು ನಾನೆಷ್ಟು ಶಪಿಸಿದೆನೋ. ಆ ಚಳಿಯ ಹವೆಗೆ ನನಗೆ ಸೂರ್ಯನ ಕಾವು ಬೇಕಿತ್ತಾದರೂ, ನಿದ್ರೆ ಕೆಡಿಸುವ ಅವನ ಬೆಳಕು ಬೇಕಿರಲಿಲ್ಲ.

ಈ ದೇಶದ ಜನಕ್ಕೆ ಬೇಸಗೆಗೆ ಹದಿನೆಂಟು ತಾಸುಗಳ ಹಗಲು; ಚಳಿಗಾಲದಲ್ಲಿ ಅಷ್ಟೇ ತಾಸುಗಳ ರಾತ್ರಿ. ಹೀಗಾಗಿ ನಮ್ಮಂತೆ ಅವರ ಚಟುವಟಿಕೆಗಳಾಗಲಿ ವಿಶ್ರಾಂತಿಗಳಾಗಲಿ–ಸೂರ್ಯಾಸ್ತ, ಸೂರ್ಯೋದಯಗಳನ್ನು ಹೊಂದಿಕೊಂಡಿರುವುದಿಲ್ಲ. ಅವು ಗಡಿಯಾರವೊಂದನ್ನು ನಂಬಿ ಸಾಗಿದೆ. ಆದರೆ ಚಳಿಗಾಲದ ನಿಡುವಾದ ರಾತ್ರಿಯಲ್ಲಿ ಅವರೇನು ಉತ್ಸಾಹವನ್ನು ತಾಳಿಯಾರು! ಅದಕ್ಕೇನೆ–ಬೇಸಗೆಯ ಬಿಸಿಲಿನ ಗಳಿಗೆಯೊಂದೊಂದನ್ನೂ ಹಾಳುಮಾಡದೆ ಬಳಸುವ ಜನರವರು.

## ೮. ಒಸ್ಲೋ ನಗರದಲ್ಲಿ

ನಾನು ಬಹುದೂರದಿಂದ ನಾರ್ವೆದೇಶಕ್ಕೆ ಬಂದಿದ್ದರೂ, ನನ್ನ ಮುಂದಿದ್ದ ಕಾಲಾವಕಾಶ ತೀರ ಸ್ವಲ್ಪ. ಬರಿಯ ಎರಡು ದಿವಸಗಳನ್ನಷ್ಟೆ ಒಸ್ಲೋ ನಗರಕ್ಕಾಗಿ ಮೀಸಲಾಗಿರಿಸಿದ್ದೆ. ಅನಂತರ ಸ್ವೀಡನ್, ಡೆನ್‌ಮಾರ್ಕ್‌ಮೊದಲಾದ ದೇಶಗಳನ್ನು ಕಂಡು ಮುಂದಿನ ಪಕ್ಷದ ಪ್ರಾರಂಭಕ್ಕೆ ಫ್ರಾನ್ಸನ್ನು ಸೇರಬೇಕಾಗಿತ್ತು. ಈ ಚೆಲುವಿನ ನಗರವನ್ನು ಕಾಣಲು ನನ್ನ ಅಲ್ಪಾವಕಾಶ ಸಾಲದೆಂದು ಗೊತ್ತಿತ್ತು; ಆದರೆ ಅದರ ನಿಡುಹಗಲಿನ ಕ್ಷಣಗಳೊಂದನ್ನೂ ಬಿಡದೆ ಅಲೆದಾಡಿ, ನೋಡುವುದನ್ನೆಲ್ಲ ನೋಡಿ ಮುಗಿಸಬೇಕೆಂಬ ಹುಚ್ಚು ನನಗೆ!

ಬೆಳಕು ಕಿಟಿಕಿಯಿಂದ ಹರಿದು ನನ್ನ ಕೊಟಡಿಯನ್ನು ತುಂಬಿ ಕೊಂಡಿತ್ತು. ಕಣ್ಣಿನ ನಿದ್ರೆ ಇನ್ನೂ ಹೋಗಿರಲಿಲ್ಲ. ಎದ್ದೆ. ನೀರು, ಗೊಬ್ಬರಗಳಿಲ್ಲದೆಯೆ ಸ್ವಚ್ಛಂದವಾಗಿ ಬೆಳೆಯುವ ಗಡ್ಡವನ್ನು ಹೆರೆದುಕೊಂಡು, ಮುಖ ತೊಳೆದು, ಉಡುಗೆ ಧರಿಸಿ ಹೊರಟೆ. ಮೈಮೇಲೆ ಬನೀನು,ಶರ್ಟು,ಕೋಟು, ಇಷ್ಟಿದ್ದುವು.ಆದರೆ ಒಮ್ಮೆ ಹೊರಟು ಬೀದಿಯನ್ನಿಳಿದ ಬಳಿಕ ಹೆಚ್ಚಿನ ಚಳಿಯ ಅನುಭವವಾಗಿ ಮರಳಿಬಂದು ಸ್ವೆಟರ್,ಮೇಲಂಗಿಗಳನ್ನು ತೊಟ್ಟುಕೊಂಡು ಇನ್ನೊಮ್ಮೆ ಹೊರಬೀಳುವಂತಾಯಿತು. ಮೊದಲಿನ ದಿನ ಸಂದರ್ಶಿಸಿದ ಹೊಟೇಲನ್ನು ಹೊಕ್ಕು ಕಾಫಿ, ಬ್ರೆಡ್ಡಿನಂತಿರುವ ಏನನ್ನೋ ಕೊಂಡು ತಿಂದೆ. ಅನಂತರ ಕಿಸೆಯಿಂದ—ವಿಳಾಸ ಬರೆದ ಒಂದು ಕಾರ್ಡನ್ನು ಹಿಡಿದು ನನ್ನ ಗುರಿಯನ್ನರಸಲು ಹೊರಟೆ. ಒಸ್ಲೋವಿನ ಮಿಸ್ ಹೀಬರ ಎಂಬಾಕೆಗೆ, ಲಂಡನಿನ ಮಿಸ್ ಬೆಸ್ಸಿಕಳು ನನ್ನ ಆಗಮನವನ್ನು ಕುರಿತು ಮುಂಚಿತವಾಗಿ ತಿಳಿಸಿದ್ದಳು. ನಾನೂ ಬರುವ ವೇಳೆ ತಿಳಿಸಿದ್ದೆ. ಅವಳ ನಿವಾಸದ ತಾವು "ಪ್ರಿಶ್ ಗೇಟ್". ಅದನ್ನೆ ಮಟಮಟಿಸುತ್ತ ನಿಂತೆ. ದಾರಿಯಲ್ಲಿ ಬರುತ್ತಿದ್ದೊಬ್ಬ ಯುವಕನನ್ನು ಕಂಡು "ಪ್ಲೀಸ್"ಎಂದೆ. ವಿಳಾಸ ತೋರಿಸಿ "ಪ್ರಿಶ್ ಗೇಟ್" ಎಲ್ಲೆಂದು ಕೇಳಿದೆ. "ಫ್ರಿಶ್‌ಗಾಟೆ?" ಎಂದು ಆತ ಉತ್ತರಿಸಿದ. ಆತಗೆ ಇಂಗ್ಲಿಷ್ ಬರುತ್ತಿತ್ತಾದರೂ ಆ ಸ್ಥಳ ತಿಳಿಯದು. ಅವನು, ನಾನು ಹೊರಬಿದ್ದ ಕಫೆಗೇನೆ ಬಂದು, ಆ ವಿಳಾಸದ ವಿವರಗಳನ್ನು ತಿಳಿದು, ಒಂದು ಕಾಗದದಲ್ಲಿ ವಿವರವಾಗಿ ಬರೆದುಕೊಟ್ಟ. 'ಕರ್ಕವೈನ್ ಹಾದಿಯಾಗಿ

ಮುಯೂಸ್ಯುವಾಕ್ಕೆ ಹೋಗಿ ಇಳಿಯಿರಿ. ಅಲ್ಲಿಂದ ಮೊದಲ ಬಲ, ಎರಡನೆಯ ಬಲ, ಮೂರನೆಯ ಎಡ'ಎಂದೇನೇನೋ ವಿವರಿಸಿದ. ಸಾಲದುದಕ್ಕೆ ನನ್ನನ್ನು ಟ್ರಾಮು ನಿಲ್ದಾಣಕ್ಕೆ ಕರೆದೊಯ್ದು ಕಂಡಕ್ಟರನೊಂದಿಗೆ ನನ್ನನ್ನುಮುಯುಸ್ಯು ವಾದಲ್ಲಿ ಇಳಿಸಲು ತಿಳಿಸಿ ಹೋದ. ಅವನಾಗಿ ಇಷ್ಟೆಲ್ಲ ಸೌಜನ್ಯ ತೋರಿಸಿದ.

ಮುಯುಸ್ಯುವಾದಲ್ಲಿ ಇಳಿದೆ. ದಾರಿಯಲ್ಲಿನ ಒಂದು ಉದ್ಯಾನ ಕಂಡು ಇಳಿಯುವ ಎಂದು ತೋರಿತಾದರೂ ಮುಂದುವರಿದು ಬಂದಿದ್ದೆ. ಇಳಿದು ಆತ ಹೇಳಿದ 'ಮೊದಲ ಬಲ, ಅನಂತರದ ಎಡ, ಬಲಗಳನ್ನು ಯೋಚಿಸಿದೆ'. ಎಡವು ಬಲವಾಯಿತು; ಬಲವು ಎಡವಾಯಿತು. ಹೀಗಾಗಿ ಸಮೀಪದ ಬೀದಿಯೊಂದರ ಮೂಲೆಯಲ್ಲಿ "ಪ್ರಿಶ್ ಗಾಟೆ" ಯೆಂದು ಉರು ಹಾಕುತ್ತ ನಿಂತೆ. ದಾರಿಯಲ್ಲಿ ಹೋಗುತ್ತಿದ್ದ ಒಬ್ಬತರುಣಿ, ಸೈಕಲಿನಿಂದಿಳಿದು ಬಂದು ತಾನಾಗಿಯೇ "Can I help you?" ಎಂದು ನನ್ನನ್ನು ಕೇಳಿದಳು. ಆ ಸೌಜನ್ಯ ನನಲ್ಲಿ ಆಶ್ಚರ್ಯಹುಟ್ಟಿಸಿತು. ವಿಳಾಸ ತೋರಿಸಿದೆ. ಅದೆಲ್ಲೆಂದು ಅವಳಿಗೂ ತಿಳಿದಿರಲಿಲ್ಲ. ಇನ್ನೊಬ್ಬನೆಡೆಗೆ ಧಾವಿಸಿಹೋಗಿ ಅದನ್ನು ಕೇಳಿ ಬಂದು ತಿಳಿಸಿದಳು. ನಾನು ಶೀಘ್ರವೇ ಆ ಸ್ಥಳವನ್ನು ಸೇರಿದೆ. ಅದು ತೀರ ಸಮೀಪದ, ಕಿರಿಯದೊಂದು ಓಣಿ. ಒಸ್ಲೋವಿನಂತಹ ದೊಡ್ಡ ನಗರದಲ್ಲಿ ಅವರ ಹೆಸರು ಎಲ್ಲರಿಗೂ ತಿಳಿದಿರಲು ಶಕ್ಯವೇ?

ಎರಡನೆಯ ನಂಬರದ ಮನೆಯ ಮುಂಗಡೆಯಲ್ಲಿ ನಿಂತು, ನಿವಾಸಿಗಳ ವಿವರಗಳನ್ನುಓದಿದೆ. ಹೀಬರ್ ಅದರ ತುತ್ತುದಿಯ ಮಹಡಿಯಲ್ಲಿರುವುದಾಗಿ ತಿಳಿಯಿತು. ಮೇಲಕ್ಕೆ ಹೋಗಿ ಅವಳ ಬಾಗಿಲಿನ ಗಂಟೆಯೊತ್ತಿ ಬಾರಿಸಿದೆ. ಅರವತ್ತು ವಯಸ್ಸಿಗೂ ಮೀರಿದ, ಸಾಮಾನ್ಯ ಗಾತ್ರದ ಮುದುಕಿಯೊಬ್ಬಳು ಬಂದು ಕದವನ್ನು ತೆರೆದಳು. ಕೈಕುಲುಕಿ ಒಳಕ್ಕೆ ಕರೆದೊಯ್ದಳು. ನನ್ನನ್ನು ಆಕೆ ನಿರೀಕ್ಷಿಸಿಕೊಂಡಿದ್ದಳು. ಆಸನ, ಅಲಂಕಾರಗಳಿಂದ ಸಜ್ಜಾಗಿರಿಸಿದ ಒಂದು ಕೊಟಡಿಯಲ್ಲಿ ನನ್ನನ್ನು ಕುಳಿತಿರಲು ಹೇಳಿ ಹೋದಳು. ಬೇಡ ವೆಂದರೂ ಕೇಳದೆ, ಚಹ ಮಾಡಿ ತಂದು ಮುಂದಕ್ಕಿರಿಸಿ, ತನ್ನ ಸ್ನೇಹಿತೆ ಯಾದ ಮಿಸ್ ಬೆಸ್ವಿಕಳ ಕ್ಷೇಮ ಸಮಾಚಾರವನ್ನು ವಿಚಾರಿಸಿದಳು.

ಆಕೆ ನನ್ನ ನೆರವಿಗಾಗಿ ತನ್ನಿಬ್ಬರು ಸ್ನೇಹಿತರನ್ನು ಈ ಮೊದಲೇ ಬರ ಹೇಳಿದ್ದಳು; ಅವರಿಗಾಗಿ ಕಾದಿದ್ದಳು. ನಾನು ಹೋದ ಅರೆ ತಾಸಿನಲ್ಲಿ ಅವಳ ಗೆಳತಿ ಮಿಸೆಸ್ ಎಡವರ್ ಎಂಬಾಕೆ ಬಂದಳು. ಆಕೆಯು ಹುಟ್ಟಿದುದು ನಾರ್ವೆ

ಯಲ್ಲಿ; ಗಂಡನೊಡನೆ ಕೈರೋವಿನಲ್ಲಿ ವಾಸಿಸುತ್ತಿದ್ದಾಳೆ; ಈಗ ವಿಶ್ರಾಂತಿಗೆಂದು ತನ್ನ ಊರಿಗೆ ಬಂದಿದ್ದಾಳೆ. ಅವರಿಗೆಲ್ಲ ಭಾರತವೆಂದರೆ ಅಭಿಮಾನ. ಅವರೆಲ್ಲರು ಸೇರಿ ಚಿಕ್ಕದೊಂದು ಅಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರ ನಡೆಯಿಸುತ್ತಿದ್ದಾರೆ. ಹೀಗಾಗಿ ಅಂಥ ವಿಷಯಗಳೆಂದರೆ ತುಂಬ ಮಮತೆ. ನಮ್ಮ ಉಪಾಹಾರ ಮುಗಿಯುತ್ತಲೇ ಮಿಸೆಸ್ ಎಡಮ್, ನನ್ನನ್ನು ಟ್ರಾಮಿನಲ್ಲಿನಗರದ ಪ್ರಸಿದ್ಧ ಉದ್ಯಾನವಾದ ವೀಗಲೆಂಡ್ ಪಾರ್ಕಿಗೆ ಕರೆದೊಯ್ದಳು. ತುಸು ಹೊತ್ತಿನಲ್ಲಿ ನಮ್ಮನ್ನು ಸೇರುವೆನಾಗಿ ಭರವಸೆಯನ್ನು ಕೊಟ್ಟು ಮಿಸ್ ಹೀಬರ್ ಮನೆಯಲ್ಲಿ ಉಳಿದುಕೊಂಡಳು.

ಈ ಉದ್ಯಾನ ಒಸ್ಲೋವಿನ ಪ್ರೇಕ್ಷಣೀಯ ಸ್ಥಳಗಳಲ್ಲೊಂದು. ಅದನ್ನು ಆ ನಗರದ ಪ್ರಸಿದ್ಧ ಶಿಲ್ಪಿಯಾಗಿದ್ದ ಗಸ್ಟಾವ್ ವೀಗಲೆಂಡ್ ಎಂಬವನ ಸ್ಮಾರಕವಾಗಿ ನಿರ್ಮಿಸಿದ್ದಾರೆ. ಉದ್ಯಾನದ ಮಹಾ ದ್ವಾರವು ಬಹು ಹಿರಿದು; ಅಷ್ಟು ಭವ್ಯ. ಒಳಗೆ ಕಾಲಿರಿಸುತ್ತಲೇ— ಸಾಲುಸಾಲಾಗಿ ವೃಕ್ಷರಾಜಿಗಳು ಕಾಣಿಸುತ್ತವೆ. ಅವುಗಳ ತಂಪಾದ ನೆರಳಿನಲ್ಲಿ ಹಾದು ಮುಂದುವರಿದರೆ ವಿಶಾಲವಾದ ಉದ್ಯಾನ ಪ್ರದೇಶ ಕಾಣಸಿಗುತ್ತದೆ. ಉದ್ಯಾನದ ನಡುವೆಯೇ ಕಿರಿಯೊಂದು ಹಳ್ಳ ಹರಿಯುತ್ತಿದೆ; ದೂರದಲ್ಲಿ ಹಸುರಾದ ಉನ್ನತ ಬೆಟ್ಟಗಳು ಕಾಣಿಸುತ್ತವೆ. 'ಒಬ್ಬ ಕಲಾವಿದನಿಗಾಗಿ ಇಂಥ ಸಂಭ್ರಮವೇ!'--ಅನಿಸಬೇಕು ಮೊದಲಿನ ನೋಟಕ್ಕೆ. ಆದರೆ ಉದ್ಯಾನದಲ್ಲಿ ಕಾಲಿರಿಸಿ ಅಲೆದಾಡತೊಡಗಿದೆವೆಂದರೆ, ಅದೇ ಕಲಾವಿದನ ಶಿಲ್ಪಕೃತಿಗಳನೇಕವನ್ನು ಅಲ್ಲಿಯೇ ಕಾಣಬಹುದು. ಅದು ಅವನ ಶಿಲ್ಪಶಾಲೆಯೂ ಅಹುದು; ಸ್ಮಾರಕೋದ್ಯಾನವೂ ಅಹುದು.

ಆ ಉದ್ಯಾನದ ನಡುವಿಗೊಂದು ಕಾರಂಜಿಯಿದೆ--ಅದನ್ನು ಸೇರುವ ಮೊದಲು, ಸಿಗುವ ಹಳ್ಳದ ಮೇಲಕ್ಕೆ ಸೇತುವೆಯಿದೆ. ಸೇತುವೆಯ ಇಬ್ಬದಿಯ ದಂಡೆಗಳಲ್ಲಿ ಸಾಲುಸಾಲಾಗಿ–ವಿವಿಧ ಮಾನವ ರೂಪಿ ಕಂಚಿನ ಪ್ರತಿಮೆಗಳನ್ನಿರಿಸಿದ್ದಾರೆ. ಎಲ್ಲವೂ ವೀಗಲೆಂಡ್‌ನ ಕೃತಿಗಳು. ಕೃತಿಗಳಲ್ಲಿ–ಶಿಶುಗಳಿದ್ದಾರೆ, ಬಾಲಕ ಬಾಲಕಿಯರಿದ್ದಾರೆ, ತರುಣ ತರುಣಿಯರಿದ್ದಾರೆ, ವಯೋವೃದ್ಧರಿದ್ದಾರೆ. ಮಾನವನ ವಿವಿಧ ವಯೋ ಅವಸ್ಥೆಗಳನ್ನು ಒಂಟಿಯಾಗಿ, ಗುಂಪಾಗಿ ಪ್ರತಿಮೆಗಳ ರೂಪದಲ್ಲಿ ಆತ ಚಿತ್ರಿಸಿದ್ದಾನೆ. ವಿವಿಧ ವಯಸ್ಸುಗಳು ಚಿತ್ರಿತವಾದಂತೆಯೇ, ವಯೋನುಗುಣವಾದ ಮನೋಧರ್ಮ, ಚಟುವಟಿಕೆ

ಗಳೂ ಚಿತ್ರಿತವಾಗಿವೆ. ಆ ವಿಗ್ರಹಗಳ ಮುಖಗಳ ವರ್ಚಸ್ಸುಮಾತ್ರ ತುಂಬ ತಮೋಗುಣಭರಿತವಾಗಿ ನನಗೆ ಕಾಣಿಸಿದುವು. ಮಿಸೆಸ್ ಎಡಮ್ ನನ್ನೊಡನೆ "ಹೇಗೆ ಕಾಣಿಸುತ್ತವೆ ನಿಮಗೆ ಇವು? ದಾಕ್ಷಿಣ್ಯವಿಲ್ಲದೆ ಹೇಳಿ" ಎಂದಳು. ನಾನೆಂದೆ "ಅವು ನಾರ್ವೇಜಿಯನ್ ಮುಖಗಳನಿಸುವುದಿಲ್ಲವಲ್ಲ; ಪ್ರಾಯಸ್ಥರ ಮುಖಗಳಂತು ಮಸೋಲಿನಿಯ ತಾಮಸಿಕ ಭಾವವನ್ನು ತೋರಿಸುತ್ತಿವೆ. ತುಂಬ ಜಡಶೀಲ ಪ್ರಕೃತಿಯವಾಗಿ ಕಾಣಿಸುತ್ತವೆ!" "ಹೂಂ," ಎಂದಳು ಅವಳು. "ಶಿಲ್ಪಿಯ ಅಪರ ವಯಸ್ಸಿನ ಮನೋಧರ್ಮ ವಿಚಿತ್ರವಾಗಿತ್ತು. ಇವೆಲ್ಲ ಆಗಿನ ಕೃತಿಗಳು" ಎಂದಳು. ಇಂಥ ವಿಗ್ರಹಗಳ ಸಂಖ್ಯೆಯಾದರೂ ಎಷ್ಟು!

ಅಲ್ಲಿಂದ ಮುಂದುವರಿದರೆ ಒಂದು ಕಾರಂಜಿಯು ಕಟ್ಟೆ ಬರುತ್ತದೆ. ಬಹು ದೊಡ್ಡ ಕಂಚಿನ ಬಟ್ಟಲೊಂದರ ಮೇಲೆ ಅದರ ನೀರು ಹಾರಾಡುತ್ತದೆ. ಆ ಕಾರಂಜಿಗೆ ನಾಲ್ಕು ಸುತ್ತಲೂ ದಂಡೆಗಳಿವೆ. ದಂಡೆಯೊಳಕ್ಕೆ ನೀರು ತುಂಬಿದೆ; ದಂಡೆಯ ಮೇಲೆ ವೃಕ್ಷಾವಳಿಗಳಂತಿರುವ ಹತ್ತು ಹದಿನಾರು ಕಂಚಿನ ರಚನೆಗಳಿದ್ದುವು. ಅವನ್ನು ಸಮೀಪಿಸಿ ನೋಡಿದರೆ- ಈ ಒಂದೊಂದು ಮರದ ಗುಂಪಿನ ಕೆಳಗೂ, ಹಲವಾರು ಮಾನವ ವಿಗ್ರಹಗಳಿವೆ. ತಿರುಗಿ, ಶಿಶುಗಳಿಂದ ಮುಪ್ಪಿನ ವರೆಗಿನ ಎಲ್ಲ ಅವಸ್ಥಾ ಸ್ವರೂಪಗಳೂ ಚಿತ್ರಿತವಾಗಿವೆ. ಅವು ಕೇವಲ ಅಲಂಕಾರಿಕ ರಚನೆಗಳಾಗಿರದೆ ತುಂಬ ಭಾವಪೂರ್ಣ ಗುಂಪುಗಳಾಗಿದ್ದುವು. ಮಾನವನ ಬಾಲಿಶಃ, ಉದ್ವೇಗ, ಕಾಮ, ಶೃಂಗಾರ, ಮುಪ್ಪಿನ ನೋವು, ನಿರಾಶೆಗಳ ಹಲವು ಮುಖಗಳು ಅಲ್ಲಿ ಕಾಣಿಸುತ್ತಿದ್ದುವು. ಮಾನವನ ಜೀವನಯಾತ್ರೆಯ ಸತ್ಯಸಾರವನ್ನು ಇಲ್ಲಿ ವೀಗಲೆಂಡ್ ಪ್ರತಿಮೆಗಳ ರೂಪದಲ್ಲಿ ಎರಕವಾಗಿಳಿಸಿದ ಬಗೆಯೂ ಚೆನ್ನಾಗಿ ಕಾಣುತ್ತಿತ್ತು. ಇಷ್ಟಕ್ಕೇನೆ ಸುಮಾರು ಇನ್ನೂರರಷ್ಟು ಕೃತಿಗಳಿದ್ದುವು. ಎಂತ ಅದ್ಭುತ ಸಾಮರ್ಥ್ಯ ಪ್ರತಿಭೆ!

ಇಲ್ಲಿಂದ ತುಸು ಮುಂದುವರಿದರೆ—ನೆಲ ಸ್ವಲ್ಪ ಏರುತ್ತದೆ; ಇನ್ನಷ್ಟು ವಿಶಾಲ ಭೂಮಿ ಕಾಣಿಸುತ್ತದೆ. ಆಚೀಚೆ ಸರಿಯುವ ವಿಹಾರ ಪಥಗಳೂ ಮಗ್ಗುಲ ಹೂವಿನ ಹಾಸಿಗೆಗಳೂ ಇದಿರಾಗುತ್ತವೆ. ಅಷ್ಟಕ್ಕೆ ಮಿಸ್ ಹೀಬರ್ ನಡೆದು ಬಂದು ನಮ್ಮನ್ನು ಸೇರಿಕೊಂಡಳು. ನಾವು ಉದ್ಯಾನದ ಮೇಲು ಭಾಗಕ್ಕೆ ಸರಿದೆವು. ನಾನು ಅವರಿಬ್ಬರನ್ನೂ ಮರೆತೆ; ಎದುರಿನ ನೆಲದ ಮೇಲೆ

ಕಾಣಿಸಿದ ಶಿಲೆಯ ವಿಶಾಲವಾದೊಂದು ವೇದಿಕೆ, ಅದರ ನಡುವೆ ಟೋಟೆಮ್ ಸ್ತಂಭದಂತೆ ನಟ್ಟಿರುವ ಶಿಲಾಸ್ತಂಭದ ಬಳಿಗೆ ಸಾಗಿದೆ. ಇನ್ನೊಂದು ಅದ್ಭುತ ನೋಟ ನನ್ನನ್ನು ಇದಿರುಗೊಂಡಿತ್ತು. ಆ ವೇದಿಕೆಗೆ ನಾಲ್ಕು ದಿಕ್ಕುಗಳಿಂದೇರುವ ಸೋಪಾನ ರಾಜಿಗಳು, ಅದರ ಮೈಯನ್ನು ಹದಿನಾರು ದಿಶೆಗಳಲ್ಲಿ ಸೀಳುವ ರೇಖೆಗಳು. ಈ ಒಂದೊಂದು ರೇಖೆಯ ಮೇಲೂ ಸಾಲಾಗಿ ನಟ್ಟ ನಾಲ್ಕೋ ಮೂರೋ ಶಿಲ್ಪದ ಗುಂಪುಗಳಿವೆ. ನಡುವಣ ಶಿಲಾಸ್ತಂಭವು ಸುಮಾರು ಅರುವತ್ತು ಎಪ್ಪತ್ತು ಅಡಿ ಎತ್ತರವಾಗಿತ್ತು; ಅದರ ಬುಡದಿಂದ ತುದಿಯ ತನಕವೂ ಕೆತ್ತನೆಯೋ. ಅಲ್ಲೂ ಮಾನವನ ಜೀವನಯಾತ್ರೆಯ ಚಿತ್ರಗಳಿದ್ದುವು. ಈ ಬೇರೆ ಬೇರೆ ಶಿಲ್ಪಪುಂಜಗಳಲ್ಲಿಯೂ ಅದೇ ಇತಿಹಾಸ! ಕರಾರಾ ಹಾಲುಗಲ್ಲಿನಂಥ (Karara marble) ಬೆಳುಗಲ್ಲಿನಲ್ಲಿ ಕೊರೆದು ಮಾಡಿದ ಈ ಯಾವತ್ತು ಪ್ರತಿಮೆಗಳು--ಮಾನವ ಗಾತ್ರವನ್ನು ತುಸು ಮೀರಿ ಕಾಣುವ ಪ್ರಮಾಣದುವು. ಒಂದೊಂದು ಗುಂಪೂ ಒಂದೊಂದು ಸೊಗಸಿನ, ಸತ್ಯದ ಮುಖವನ್ನು ಸಾರುತ್ತಿತ್ತು. ಸರಳವಾಗಿ, ತೀವ್ರವಾಗಿ, ಮಾನವ ಜೀವನದ ಒಂದೊಂದು ಕಥಾನಕವನ್ನು ಒತ್ತಿ ಬಣ್ಣಿಸುತ್ತಿತ್ತು. ಹಿಂದೆ ಕಂಡ ಕಂಚಿನ ಪ್ರತಿಮೆಗಳಲ್ಲಿರದಂಥ--ರಾಜಸ, ಸಾತ್ವಿಕ ಗುಣಗಳೂ ಈ ಶಿಲಾಮೂರ್ತಿಗಳಲ್ಲಿ ಅರಳಿವೆ. ಎಳೆಗೂಸುಗಳ ಹಾರಾಟ; ತಾಯಿಯ ಬೆನ್ನಿನ ಮೇಲೆ ಸವಾರಿಮಾಡುವ ವಿಲಾಸ, ಶೈಶವ ಕಳೆದು ಬಾಲಿಶದಲ್ಲಿ ತೋರುವ ಉತ್ಸಾಹ, ಕುತೂಹಲ, ನಗು; ಅನಂತರ--ಮೂಡುವ ಮುಗ್ಧ ಪ್ರೇಮ, ಪ್ರೇಮಮಿಶ್ರಿತ ಕಾಮ, ದೌಷ್ಟ್ಯ, ಶೌರ್ಯ; ಅಲ್ಲಿಂದ ಜೀವನ ಸಾಗರದ ವಿವಿಧ ಸಂಕಷ್ಟ ಪರಂಪರೆಗಳೆನ್ನುವ ಮಾಯೆ. ಸಿಹಿಯಿಂದ ಕಹಿಗೆ ಸಾಗುವ ಸಂತಾಪಮಯ ಸಂಸಾರ. ಅನಂತರ ಬರುವ ವಯಸ್ಸಿನ ಲೀಲೆ--ಮುಪ್ಪು. ಮುಪ್ಪಿನಲ್ಲೂ ಕಹಿ, ನೋವುಗಳನ್ನುಂಡು ಬೆಂದು ಬಸಿದ ಜೀವಗಳು ಕೆಲವಾದರೆ, ಈ ಜೀವನದ ಲೀಲೆಯನ್ನು ಸಿರ್ಲೇಪದಿಂದ ನೋಡಿ, ತತ್ವಜ್ಞಾನದ ದೃಷ್ಟಿಯಿಂದ ಚಿಂತಿಸಿ, ಯೋಚಿಸುವ ಪ್ರಬುದ್ಧ ಮನಸ್ಸುಗಳು ಕೆಲವು. ಹೀಗೆ ಬಾಳ್ವೆಯ ಯಾತ್ರೆಯು ಮುಂದುವರಿದಂತೆ ಶಿಲ್ಪಕೃತಿಗಳ ಗಾತ್ರವೂ ಬೆಳೆಯುತ್ತದೆ — ನಕ್ಕು ಸಂಸಾರವನ್ನು ಹೊಕ್ಕ ಜೀವ, ಅದರ ನೋವನ್ನುಂಡು ಅತ್ತು, ಅನಂತರ ವಿವೇಕವನ್ನು ಗಳಿಸಿ, ನೋವಿನ ಚಿಂತೆಯನ್ನು ಕಳೆದುಕೊಂಡು — ಸಾತ್ವಿಕ ದೃಷ್ಟಿಯನ್ನು ತಮ್ಮ ಗತ ಯಾತ್ರೆಯನ್ನು ಕುರಿತಾಗಿ

ಬೀರುವ ಮುಖಗಳು ಕಾಣಿಸತೊಡಗುತ್ತವೆ. ಜೀವನ ಎಷ್ಟು ವಿಸ್ತಾರವಾದುದು; ವಿವಿಧ ಮುಖಿ–ಎಂಬುದನ್ನು ವೀಗಲೆಂಡ್ ಈ ಶಿಲೆಯ ಕಾವ್ಯದಲ್ಲಿ ಬಣ್ಣಿಸಿದ್ದಾನೆ. ಇದು ಬರಿಯ ಕಾವ್ಯವಲ್ಲ–ಮಹಾಭಾರತದಂತಿರುವ ಒಂದು ಮಹಾ ಕಾವ್ಯ.

ವೇದಿಕೆಯ ನಡುವೆ ನಟ್ಟ ಸ್ತಂಭರಾಜಿಯಲ್ಲಿ ಕೊರೆದ ಚಿತ್ರಗಳೂ, ಈ ಮಹಾ ಕಾವ್ಯವನ್ನು –ಸೂತ್ರ ರೂಪದಲ್ಲಿ ತಿಳಿಸಿ ಹೇಳುವಂತೆ, ತರಂಗ ಪೂರ್ಣವಾಗಿ ಚಿತ್ರಿಸುತ್ತವೆ. ಇಲ್ಲಿಯೂ ನೂರಿನ್ನೂರು ಶಿಲ್ಪಕೃತಿಗಳಿವೆ. ಒಬ್ಬ ಶಿಲ್ಪಿ– ಐನೂರಕ್ಕೂ ಮೇಲ್ಪಟ್ಟು ಪ್ರತಿಮೆಗಳನ್ನು ನಿರ್ಮಿಸಿ ತೋರಿಸಿದ್ದಾನೆಂದರೆ, ಅದೂ ಶಿಲ್ಪದ ಪೂರ್ವ ಪರಂಪರೆಯಿಲ್ಲದ ನಾರ್ವೆಯಂಥ ನಾಡಿನಲ್ಲಿ–ಎಂದರೆ, ಈತ ಮಾನವನಲ್ಲ ದೈತ್ಯನೆಂದೇ ಅನಿಸುತ್ತದೆ ನಮಗೆ!

ಗಸ್ಟಾವ್ ವೀಗ್‌ಲೆಂಡ್ 1943ರಲ್ಲಿ ತೀರಿಕೊಂಡನು; ಅವನ ಇತರ ಶಿಲ್ಪಗಳ ಮ್ಯೂಸಿಯಂ ಸಹ ಇಲ್ಲಿದೆ. ಆತನ ಜೀವನದ ಪರಿಚಯವುಳ್ಳವರು ಅವನ ಕುಂದುಕೊರತೆಗಳನ್ನು ಬಲ್ಲರು. ಮಾನವ ಸಹಜ ಕೊರತೆಗಳನೇಕ ಅವನಲ್ಲಿದ್ದಿರಬಹುದು. ಆದರೆ, ಅವುಗಳ ಬಂಧನದಿಂದ ಮುಕ್ತನಾಗಿ ಕೆಲಸ ಮಾಡಿದಂಥ ಶಿಲ್ಪಿ ವೀಗ್‌ಲೆಂಡ್, ಅತ್ಯದ್ಭುತ ವ್ಯಕ್ತಿಯೇ ಸರಿ. ನಾರ್ವೆಯ ಜನರ ಪಾಲಿಗೆ ವೀಗಲೆಂಡ್ ಮಹಾಪುರುಷನಾಗಿರುವುದರಲ್ಲಿ ಅಚ್ಚರಿಯಿಲ್ಲ. ಅವನ ಕನಸುಗಳೆಲ್ಲ ಶಿಲ್ಪದಲ್ಲಿ ಮೂಡಿ, ಈ ಉದ್ಯಾನವೊಂದರಲ್ಲೇ ಇಂದು ಬಂದು ನಿಲ್ಲಬೇಕಾದರೆ–ಓಸ್ಲೋ ನಾಗರಿಕರು,ನಾರ್ವೆಯ ದೊರೆ 'ಹಾಕನ್' ಎಷ್ಟು ತ್ಯಾಗಮಾಡಿರಬಹುದು! ಸಂಸ್ಕೃತಿ, ಕಲೆಗಳನ್ನು ಮೆಚ್ಚಿ, ಅವನ್ನು ಬದುಕಿಸಲು ಎಷ್ಟು ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಅವರು ವ್ಯಯಿಸಿದರೋ ಏನೋ?

ಈ ಸುಂದರವಾದ ತಾವಿನಲ್ಲಿ ಸುಮಾರು ಎರಡು ತಾಸುಗಳ ಸಮಯವನ್ನು ಕಳೆದು, ಬಳಿಕ ಟ್ರಾಮಿನ ಮೂಲಕ–ಊರಿನ ಪ್ರಸಿದ್ಧ ಪುರಭವನ ನೋಡುವುದಕ್ಕೆ ಹೋದೆವು. ಮಿಸೆಸ್ ಎಡವರ್ಡ್ ತನ್ನೊಂದು ಕೆಲಸಕ್ಕಾಗಿ ಹೊರಟುಹೋದಳು. ನಾನು ಮಿಸ್ ಹೀಬರಳೊಂದಿಗೆ ಈ ಮಂದಿರವನ್ನು ನೋಡ ಹೋದೆ.

ಈ ಪುರಭವನ ಬಲು ಉನ್ನತವಾದ, ವಿಶಾಲವಾದ ಭವನ. ಹೊರಗಿನ ಗೋಡೆಗಳಿಗೆ ಗಾರೆಯನ್ನು ಬಳಿಯದೆ, ಇಟ್ಟಿಗೆಯ ಮೈ ಕಾಣಿಸುತ್ತಿದ್ದರಿಂದ

ಅಷ್ಟೊಂದು ಆಕರ್ಷಕವಾಗಿ ಕಾಣಿಸುವುದಿಲ್ಲ. ಹತ್ತೆಂಟು ಮಹಡಿಗಳುಳ್ಳ ವಾಸದ ಮನೆಯೋ, ಒಂದು ಕಾರ್ಖಾನೆಯೋ ಎಂಬಂತೆ ಕಾಣಿಸುತ್ತಿತ್ತು. ನಾರ್ವೇಜಿಯನರು ಗಡುತರ ಜೀವಿಗಳು; ಎತ್ತರದವರು. ಅವರ ಆಂತರಿಕ ಸ್ವಭಾವವನ್ನು ತಿಳಿಯಲು ನಿಕಟ ಪರಿಚಯವಾಗಬೇಕು; ಹಾಗೆಯೇ ಇತ್ತು ಈ ಪುರಭವನ.

ಒಸ್ಲೋ ಫಿಯೋರ್ಡಿನ ಒಂದು ದಂಡೆಯ ಮೇಲೆ, ಉನ್ನತವಾದ ಪಾಯದ ಮೇಲೆ ಈ ಭವನ ನಿಂತಿದೆ. ಎದುರಿಗೆ ವಿಶಾಲವಾದ ಅಂಗಣವಿದೆ. ಅದರ ನಡುವೆ ಸುಂದರವಾದೊಂದು ಕಾರಂಜಿಯಿದೆ. ಕಾರಂಜಿಯ ನೀರಲ್ಲಿ–ಕತ್ತುಗಳನ್ನು ನೀಡಿ, ರೆಕ್ಕೆಗಳನ್ನು ಬಿಡಿಸಿ ಈಯುತ್ತಿರುವ ಹಂಸಗಳೆರಡಿವೆ; ಕಂಚಿನ ಮೂರ್ತಿಗಳು. ಈ ಕಾರಂಜಿಯ ಬಳಿಯಿಂದ ಎರಡು ಸೋಪಾನ ರಾಜಿಗಳು ಮುಖ್ಯ ಮಂದಿರವನ್ನು ಇಕ್ಕಡೆಗಳಿಂದ ಹೋಗಿ ಸೇರುತ್ತವೆ. ಮೊದಲ ಚಾವಡಿಯನ್ನು ಏರುವಾಗ ಗೋಡೆಗೆ ತಗಲಿಸಿರುವ ಮರದ ಕೆತ್ತನೆಯ ಚೌಕಟ್ಟುಗಳು ಕಾಣಸಿಗುತ್ತವೆ. ಇವು–ಮರದಿಂದ ಮಾಡಿದ, ವರ್ಣರಂಜಿತ ಉತ್ಕೀರ್ಣ ಶಿಲ್ಪಗಳು. ಒಂದೊಂದು ಚಾವಡಿಯಲ್ಲಿ–ನಾಲ್ಕು ನಾಲ್ಕು ಇಂತಹ ಚಿತ್ರಗಳಿವೆ. ನೋಟಕ್ಕೆ ಬಲು ರಮಣೀಯವೂ ಶಕ್ತಿಯುತವೂ ಆದ ಚಿತ್ರಗಳಿವು.

ಈ ಚಾವಡಿಯನ್ನು ನಾವು ಹಾದು ಮುಂದುವರಿದರೆ, ಬಲುದೊಡ್ಡ ಬಾಗಿಲೊಂದು ಬರುತ್ತದೆ. ಅದನ್ನು ದಾಟುತ್ತಲೇ ಪುರಭವನದ ವಿಶಾಲವಾದ ಸಭಾಂಗಣ ಇದಿರಾಗುತ್ತದೆ. ಮಂದಿರದ ಹೊರನೋಟಕ್ಕೂ, ಈ ಸಭಾಂಗಣಕ್ಕೂ ಎಷ್ಟು ಅಂತರವೆನ್ನುತ್ತೀರಿ! ಸುಮಾರು ೨೦೦೦–೩೦೦೦ಜನಗಳು ಕುಳಿತಿರ ಬಹುದಾದಷ್ಟು ಹಿರಿಯ ಕೊಟಡಿ ಅದು. ಸುತ್ತಲಿನ ಗೋಡೆಗಳು 30–40ಅಡಿ ಎತ್ತರವಾಗಿವೆ. ಅಷ್ಟೇ ಹಿರಿಯ ಪ್ರಮಾಣದ ಕಿಟಿಕಿ ಬಾಗಿಲುಗಳಿವೆ. ನೆಲಕ್ಕೂ, ಗೋಡೆಯ ತಳದ ಭಾಗಕ್ಕೂ–ಎಳೆಹಸುರು ಬಣ್ಣದ, ಅನುರೂಪವಾದ ಇತರ ಬಣ್ಣಗಳ ಹಾಲುಗಲ್ಲಿನ ಇಟ್ಟಿಗೆ ಹೊದೆಯಿಸಿದ್ದಾರೆ. ಶಿಲೆಯಲ್ಲಿ ಅಂಥ ಎಳೆಹಸುರಿನ ಬಣ್ಣವೊಂದಿದೆಯೆಂದೂ ನಾನರಿತಿರಲಿಲ್ಲ. ಈ ಕೊಟಡಿಯಿಂದ ಆಚೀಚೆ ಮೇಲುಪ್ಪರಿಗೆಗೆ ಹೋಗುವ ಮೆಟ್ಟಲುಗಳು, ಕಟಾಂಜನ, ಅಲಂಕಾರಗಳೆಲ್ಲ ಅದೇ ಅಪೂರ್ವ ಹಾಲುಗಲ್ಲಿನಿಂದ ನಿರ್ಮಿತವಾದುವು. ಸಭಾಂಗಣದ ಉನ್ನತ ಗೋಡೆಗಳಲ್ಲಿ-ತುಂಬ ದೊಡ್ಡದಾದ ಚಿತ್ರ

ಗಳನ್ನು ಬರೆಯಿಸಿದ್ದಾರೆ. ಇವನ್ನು ಬರೆದವರು ನಾರ್ವೆಯ, ಹೆಸರಾದ ಕಲಾಕೋವಿದರು. ಈ ಗೋಡೆಯ ಚಿತ್ರಗಳೇನೆ ಅನೇಕ ಕಲಾಪ್ರಿಯರನ್ನು ಇಲ್ಲಿಗೆ ಆಕರ್ಷಿಸುತ್ತಿವೆಯಂತೆ.

ನಮಗೆ ಎದುರಾಗುವ ಮೊದಲಗೋಡೆಯಲ್ಲೂ, ಮಗ್ಗುಲಿನ ಗೋಡೆಗಳಲ್ಲೂ ಇರುವ ಚಿತ್ರ ಸೃಷ್ಟಿಗಳು ಶೈಲಿಯಲ್ಲಿ ಕೇವಲ ಆಧುನಿಕವಾದುವು. ಅವು ಹೇಳುವ ಕಥಾನಕ–ನಾರ್ವೆಯ ಜನಜೀವನದ ವಿವಿಧ ಮುಖಗಳ ಇತಿಹಾಸ. ಈ ಚಿತ್ರಗಳಿಗೆ ಪ್ರೇರಕನಾಗಿ ಕೆಲಸಮಾಡಿದ ಸೊರನ್‌ಸೆನ್ ಎಂಬಾತ ಅವುಗಳಲ್ಲಿ ಒಂದನ್ನು ಕುರಿತು ಹೇಳಿದ ಮಾತುಗಳಿವು! "ಈ ಚಿತ್ರದ ತಳದಲ್ಲಿ ಹಳೆಗಾಲದ 'ವಿಕಾ' ಎಂಬ ನಗರದ ಭಾಗವಿದೆ. ಅಲ್ಲಿರುವ ಅಶುಚಿಯಿಂದ ತುಂಬಿದ ಕೇರಿಯನ್ನು ನಾಶಪಡಿಸಿ, ಉತ್ತಮ ವಸತಿಗಳನ್ನು ಏರ್ಪಡಿಸದಿದ್ದರೆ ನಮ್ಮ ಸಮಾಜಕ್ಕೆ ಸೌಖ್ಯವಿಲ್ಲ--ಎಂಬುದರಿಂದ 'ವಿಕಾ'ದ ದುರ್ದೆಸೆಯನ್ನು ಡ್ರೇಗನ್–ಒಂದರ ಸಂಕೇತದಿಂದ ಚಿತ್ರಿಸಿದೆ. ಅಲ್ಲಿಂದ ಆಶಾದಾಯಕವಾದ ಕಿತ್ತಳೆ, ಕೆಂಪು, ನೀಲವರ್ಣಗಳು ತೊಡಗುತ್ತವೆ. ನಮ್ಮ ಪ್ರಾಚೀನ ದಂತಕತೆಗಳಲ್ಲಿನ ಒಬ್ಬ ಹುಡುಗನು — ಕಾಡಿಗೆ ಹೊರಡುತ್ತಾನ; ಆತ ಅನೇಕ ಸಾಹಸಗಳನ್ನು ಮಾಡಿ ಮುಂದಿನ ಭವಿಷ್ಯದ ಗುರಿಯನ್ನು ಸೇರುತ್ತಾನೆ............" ಎನ್ನುವ ದಂತಕತೆಯಂತೆ ಉನ್ನತಿಯ ಅಭಿಲಾಷೆಯನ್ನು ಚಿತ್ರಿಸಿದ್ದಾರೆ.

ಇದರಂತೆಯೆ ಒಂದೊಂದು ಚಿತ್ರವೂ–ನಾರ್ವೆಯ ಆಸೆ, ಆಕಾಂಕ್ಷೆಗಳು, ಸಾಹಸ ವ್ಯಾಪಾರ, ಉದ್ಯಮಗಳು, ಸ್ವಾತಂತ್ರ್ಯದ ದೀರ್ಘ ಹೋರಾಟದ ಹಲವು ಮುಖಗಳು– ಇವನ್ನು ಸುಂದರವಾಗಿ ಚಿತ್ರಿಸುತ್ತವೆ.

ಒಂದು ಚಿತ್ರವು–ವ್ಯಕ್ತಿ ಸ್ವಾತಂತ್ರ್ಯ ಮತ್ತು ದೇಶ ಸ್ವಾತಂತ್ರದ ಗಾಳಿ ಫ್ರಾನ್ಸಿನ ಕ್ರಾಂತಿಯಿಂದ ಹೇಗೆ ನಾರ್ವೆಗೆ ಪಸರಿಸಿತೆಂದೂ, ಆ ದೇಶವು ಆ ಬೆಳಕಿಗೆ ಹೇಗೆ ಪೋಷಣೆಯಿತ್ತಿತೆಂದೂ, ಎರಡನೆಯ ಮಹಾಯುದ್ಧದ ಕಾಲದಲ್ಲಿ ಜರ್ಮನರ ಆಕ್ರಮಣವನ್ನು ಹೇಗೆ ನಿರೋಧಿಸಿತೆಂದೂ ಉಜ್ವಲವಾಗಿ ಚಿತ್ರಿಸುತ್ತದೆ. ಈ ಹಲವು ಚಿತ್ರಗಳಲ್ಲಿ--ನಾರ್ವೆಯ ಸಂಶೋಧಕರಾದ ನಾನ್ಸೆನ್, ಎಮುಂಡ್ಸನ್‌ರಂಥ ಸಾಹಸಿಗಳೂ, ಇಬ್ಸೆನನಂಥ ನಾಟಕಕಾರರೂ, ನಾರ್ವೆಯ ಇತಿಹಾಸಕ್ಕೆ ಪುಟವನ್ನು ಕೊಟ್ಟ ಇನ್ನು ಹಲವು ಮಹಾನುಭಾವರುಗಳೂ ಸೇರಿಕೊಂಡಿದ್ದಾರೆ.

ಈ ಮಧ್ಯ ಸಭಾಂಗಣದಿಂದ ಮೇಲಿನ ಮಹಡಿಗೆ ಹೋದರೆ, ಅಲ್ಲಿಯೂ ಹಲವು ಸುಂದರವಾದ ಕೊಟಡಿಗಳಿವೆ; ನಗರ ಸಭೆಯವರು ಕೂಡುವ ಕಚೇರಿಗಳಿವೆ. ಅಲ್ಲಿನ ಆಸನ, ಅಲಂಕಾರಗಳೆಲ್ಲವು ಕಲಾಪೂರ್ಣವಾಗಿವೆ. ಈ ನಗರ ಮಂದಿರವನ್ನು ನೋಡುವುದಕ್ಕಾಗಿ ಪ್ರತಿದಿನ ಸಾವಿರಾರು ಮಂದಿ ಬರುತ್ತಿರುತ್ತಾರೆ. ಬರಿಯ ಮೂವತ್ತೈದು ಲಕ್ಷ ಜನಸಂಖ್ಯೆಯುಳ್ಳ ನಾರ್ವೆಯಲ್ಲಿ, ಒಸ್ಲೊವಿನಲ್ಲೇ ಹತ್ತು ಲಕ್ಷ ಜನರು ವಾಸಿಸುತ್ತಿದ್ದಾರೆ. ಹೀಗಾಗಿ ಒಸ್ಲೋ ಎಂಬುದು ನಾರ್ವೆಯ ಹೃದಯವಿದ್ದಂತೆ. ಅದರಂತೆ ನಾರ್ವೆಯ ಜನಗಳ ಇತಿಹಾಸ, ಸಂಸ್ಕೃತಿ, ಅಭಿಮಾನಗಳ ಪ್ರತೀಕವಾಗಿರುವಂಥದು ಈ ಪುರಭವನ.

ಈ ಕಟ್ಟಡದ ಹೊರಗಡೆಯಲ್ಲಿ ದೇಶೀಯ ಆಧುನಿಕ ಶಿಲ್ಪಿಗಳಿಂದ ನಿರ್ಮಿತವಾದ ಕೆಲವೊಂದು ಶಿಲ್ಪಗಳೂ ಇವೆ. ಮಂದಿರದ ಹಿಂದುಗಡೆಯಲ್ಲಿ ಕಡಲು ಚಾಚಿಕೊಂಡಿದೆ; ಒಸ್ಲೋವಿನ ದೊಡ್ಡ ರೇವು ಇದೆ. ಈ ಮಂದಿರದ ಇನ್ನೊಂದು ಕಡೆ, ಕಡಲ ದಂಡೆಗೆ ತಗಲಿಕೊಂಡು ಸುಂದರವಾದೊಂದು ಉದ್ಯಾನವನ್ನು ನಿರ್ಮಿಸಿದ್ದಾರೆ. ಮಂದಿರವನ್ನು ಸುತ್ತಿ ಸುಳಿದು, ದಣಿದ ನಾನೂ, ಮಿಸ್ ಹೀಬರ್, ಮಿಸೆಸ್ ಎಡವುರವರ ಆಗಮನಕ್ಕಾಗಿ ಇಲ್ಲಿ ಕಾದು ಕುಳಿತೆವು.

ಆ ವೇಳೆಯಲ್ಲಿ ನಾನು—ನಾರ್ವೆಯು ಮಹಾಯುದ್ಧದ ಕಾಲದಲ್ಲಿ ಜರ್ಮನರಿಂದ ಆಕ್ರಮಣಗೊಂಡಾಗ ಏನೇನು ಪಾಡುಪಟ್ಟಿತು ಎಂದು ವಿಚಾರಿಸಿದೆ. ಆಕೆಯೂ ಅದರಲ್ಲಿ ಭಾಗವಹಿಸಿದವಳು. ಅವಳ ಬಂಧುಗಳು ಜರ್ಮನರಿಂದ ಚಿತ್ರಹಿಂಸೆಯನ್ನು ಅನುಭವಿಸಿದವರು. ಆಕೆ ಆ ಹಿಂದಣ ಕತೆಯನ್ನು ಮೆಲು ಮಾತಿನಿಂದ ವಿವರಿಸಿದಳು. 'ಯಾವುದಾದರೂ ಹೊಟೇಲಿಗೆ ಜರ್ಮನ ಸೈನಿಕರು ಬಂದರೆಂದರೆ, ಉಳಿದೆಲ್ಲ ನಾರ್ವೆಜಿಯನರು, ಅಲ್ಲಿಂದ ಎದ್ದು ಬಿಡುತ್ತಿದ್ದರು; ಅದಕ್ಕಾಗಿ ಹಾಗೆ ಎದ್ದು ಹೋಗಬಾರದೆಂದು ಜರ್ಮನರು ಶಾಸನ ಮಾಡಬೇಕಾಯಿತು' ಎಂದಳು.

ಅವರ ದೇಶದ ಸಶಕ್ತ ಗಂಡುಸು ಹೆಂಗುಸರೆಲ್ಲ ಆಗ ಸ್ವೀಡನಿಗೆ ಓಡಿದರೆಂದೂ, ಅಲ್ಲಿಂದ ಗಂಡಸರು ಇಂಗ್ಲೆಂಡಿಗೆ ಹೋಗುವುದು ಸಾಧ್ಯವಾಯಿತೆಂದೂ, ಆ ಕಾಲದಲ್ಲಿ ಸ್ವೀಡನು ತಮ್ಮ ನಿರಾಶ್ರಿತ ಹೆಂಗಸರು, ಮಕ್ಕಳಿಗೆ ಆಶ್ರಯ ನೀಡಿತೆಂದೂ ತಿಳಿಸಿದಳು. ಆಗಿನ ಕತ್ತಲು ದಿನಗಳಲ್ಲಿ ಊರಲ್ಲಿ

ಇದ್ದವರು ಜರ್ಮನರೆದುರಿಗೆ ನಡೆಯಿಸಿದ ವಿಧ್ವಂಸಕ ಚಟುವಟಿಕೆಗಳೂ ತುಂಬ ರೋಮಾಂಚಕಾರಿಯಾದುವು. ಅವುಗಳ ಕೆಲವು ಕತೆಗಳನ್ನು ಹೇಳಿ ದಳು.

ಅಷ್ಟರಲ್ಲಿ ಮಿಸೆಸ್ ಎಡಮ ಬಂದಳು; ನಾವು ಮೂವರೂ ಈ ಪುರ ಭವನದ ಬಳಿಯಲ್ಲಿಯೇ ಒಂದು ಚಿಕ್ಕ ಮನೆಯಲ್ಲಿ ನಡೆಯುತ್ತಿದ್ದ ಒಂದು ಚಿತ್ರಪ್ರದರ್ಶನವನ್ನು ನೋಡಲು ಹೋದೆವು. ಆ ನಗರದ ಒಬ್ಬ ವೃದ್ಧ ಚಿತ್ರಗಾರ್ತಿಯ ಚಿತ್ರಗಳನ್ನು ಅಲ್ಲಿ ಪ್ರದರ್ಶಿಸಿದ್ದರು. ನಾನು ವಿದೇಶೀಯ ನೆಂದು ಪ್ರವೇಶಧನವಿಲ್ಲದೆಯೆ ನನ್ನನ್ನು ಒಳಗೆ ಬಿಟ್ಟರು. ಒಳಗಡೆ ಮಂದಿ ರದ ನಡುವೆ ಒಂದು ಕುರ್ಚಿಯಲ್ಲಿ, ಆ ಚಿತ್ರಕಾರ್ತಿಯೇ ಕುಳಿತಿದ್ದಳು— ಸುಮಾರು ಎಂಬತ್ತು ವಯಸ್ಸಿನ ಮುದುಕಿ. ಮಿಸ್ ಹೀಬರ ನನ್ನನ್ನು ಅವಳ ಪರಿಚಯ ಮಾಡಿಸಲು ಕರೆದೊಯ್ದಳು; ಆಕೆ ಹೆರವರ ಸಹಾಯದಿಂದ ಏಳ ಬೇಕಾಯಿತು. ಎದ್ದು ಕೈ ಕುಲುಕಿದಳು--'ನೀವು ಬಂದುದು ಸಂತೋಷ' ಅಂದಳು. ಆಷ್ಟೊಂದು ವಯಸ್ಸಿನ ಆಕೆ, ಪ್ರತಿವರ್ಷವೂ ತನ್ನ ಚಿತ್ರಗಳ ಪ್ರದರ್ಶನ ಮಾಡುತ್ತ ಬಂದಿದ್ದಾಳಂತೆ. ಈ ವರ್ಷವೇ ಅವಳು ಬರೆದ ಹದಿ ನೈದು ಹೊಸ ಚಿತ್ರಗಳು ಅಂದು ಪ್ರದರ್ಶಿತವಾಗಿದ್ದುವು. ಅವುಗಳಲ್ಲಿ ನಾಲ್ಕಾರು ಚಿತ್ರಗಳು ತುಂಬ ಅನುಭವ, ಭಾವಪ್ರೇರಿತ ಚಿತ್ರಗಳಾಗಿದ್ದುವು.

ಅಂದಿಗೆ ನಮ್ಮ ದಿನದ ಸಂಚಾರ ಮುಗಿದಂತೆಯೇ ಸರಿ. ಸಂಜೆಯ ನಾಲ್ಕು ಘಂಟೆ ಕಳೆದಿತ್ತು. ಮಿಸ್ ಎಡಮ ಹೊರಟುಹೋದಳು. ಹೀಬರ್ ನನ್ನನ್ನು ಸಮೀಪದ ಉಪಾಹಾರ ಗೃಹವೊಂದಕ್ಕೆ ಕರೆದುಕೊಂಡು ಹೋ ದಳು. ಅದು ಒಸ್ಲೋವಿನ ಒಂದು "ಶಾಖಾಹಾರಿ" ರೆಸ್ಟೋರಾಂಟ್. ಈ ಬಗೆಯವು ಯುರೋಪಿನಲ್ಲಿ ವಿರಳವಾದರೂ, ಅಲ್ಲಲ್ಲಿ ಒಂದೊಂದು ಕಾಣ ಸಿಗುತ್ತದೆ. ಲಂಡನಿನ 'ಲಿಯಾನ್ಸ'ರ ಉಪಾಹಾರ ಗೃಹಗಳಲ್ಲಿರುವಂತೆಯೇ ನಮಗೆ ಬೇಕಾದ ತಿಂಡಿತಿನಸುಗಳನ್ನು ಕೊಂಡು, ಒಂದೆಡೆ ಕುಳಿತು ತಿನ್ನ ಬಹುದಾದ, ಮಿತ ಬೆಲೆಯ ಉಪಾಹಾರ ಮಂದಿರವಿದು. ತಿನಿಸುಗಳಲ್ಲಿಯೂ ವೈವಿಧ್ಯವಿತ್ತು. ಅಕಾಲ ಭೋಜನವಾದರೂ, ತೀರ ಹಸಿವಿದ್ದ ನನಗೆ ಅದು ಹಿತಕರವಾಗಿಯೇ ಕಾಣಿಸಿತು. ನಮ್ಮ ಉಪಾಹಾರ ಮುಗಿದೊಡನೆಯೇ "ನೀವಿನ್ನು ನಿಮ್ಮ ಮನೆಗೆ ಹೋಗಿ. ನಾನು ನನ್ನ ತಾವನ್ನು ಸೇರುತ್ತೇನೆ. ನಾಳೆ ಬಂದು ಭೇಟಿಯಾಗುತ್ತೇನೆ" ಎಂದು ಹೇಳಿದೆ. ಆದರೆ ಮಿಸ್ ಹೀಬರ

ಕೇಳಬೇಕಲ್ಲ! ನನಗೆ ನಡೆದೇ ಮನೆಗೆ ಹೋಗುವ ಇಚ್ಛೆಯಿರುವುದನ್ನು ಕಂಡು, "ನನಗೂ ಅವಸರವಿಲ್ಲ"ವೆಂದು ಹೇಳಿ, ನನ್ನ ಜತೆಯಲ್ಲಿ ಸುಮಾರು ಎರಡು ಮೈಲುಗಳ ದೂರ ನಡೆದು ಬಂದಳು. ನನ್ನನ್ನು ನನ್ನ ನಿವಾಸದ ತನಕ ಮುಟ್ಟಿಸಿ, ಮರುದಿನ ತನ್ನ ಮನೆಗೆ ಊಟಕ್ಕೆ ಬರಲು ಆಮಂತ್ರಣವಿತ್ತು ಹೊರಟುಹೋದಳು. "ಆದರೆ ಮಾತ್ರ ಎರಡು ಘಂಟೆಗೆ ಬಂದರೆ ಸಾಕು" ಎಂದಳು. ಅದಕ್ಕೆ ಕಾರಣವಿಷ್ಟೆ. ಮಧ್ಯಾಹ್ನದ ವೇಳೆಗೆ ಪ್ರತಿ ಆದಿತ್ಯವಾರವೂ ಅವರು ಕೆಲವರು ಸೇರಿ ಒಂದು ಸಾಂಸ್ಕೃತಿಕ ಸಂಘ ನಡೆಯಿಸುತ್ತಿದ್ದರು. ಹಾಗಾಗಿ ಅನಂತರ ಬಂದರೆ ಸಾಕೆಂಬುದು ಅವರ ಅಭಿಪ್ರಾಯವಾಗಿತ್ತು.

ನಾನು ನಿವಾಸದ ಮನೆಗೆ ಮರಳಿದೆ; ಇನ್ನೂ ಸಂಜೆಯ ಐದು ಘಂಟೆಯಷ್ಟೆ. ಹಾಗೆಂದು ಇನ್ನೊಮ್ಮೆ ಇಳಿದು ಬೀದಿಗೆ ಬಂದೆ; ಊರಿನ ಬೀದಿಗಳನ್ನು ನೋಡುತ್ತ ಅಲೆದಾಡಿದೆ. ಲಂಡನಿನ ಸಂಚಾರದಲ್ಲಿ ನಮಗೆ ದಿನದಲ್ಲಿ ಕೆಲವರಾದರೂ ಬಣ್ಣದ ಜನ ಕಾಣಸಿಗುತ್ತಾರೆ. ಆದರೆ ಸ್ಕೆಂಡಿನೇವಿಯದ ಈ ನಗರದಲ್ಲಿ, ಒಬ್ಬರಾದರೂ ನನ್ನ ತೊಗಲಿನ ಬಣ್ಣದವನು ಕಾಣಸಿಗಬೇಕೇ? ಸಾಮಾನ್ಯವಾಗಿ ಯುರೋಪಿಗೆ ಬರುವ ನಮ್ಮ ಪ್ರವಾಸಿಗಳು, ಈ ಭಾಗವನ್ನು ಸಂಚರಿಸಿ ನೋಡುವುದು ಕಡಿಮೆ.

ಮರುದಿನ ಬೆಳಗ್ಗೆ ನನಗೆ ವಿರಾಮವಿತ್ತು. ನನ್ನ ಕಾಲುಗಳ ಮೇಲೆ ನಾನು ನಿಂತಿರಬೇಕಿತ್ತು. ಕೈಯಲ್ಲಿ ಒಸ್ಲೋ ನಗರದ ನಕ್ಷೆಯನ್ನು ಹಿಡಿದುಕೊಂಡು, ಎಂಟು ಘಂಟೆಯ ಹೊತ್ತಿಗೇನೆ ಹೊರಟೆ. ಮೊದಲು ರೈಲು ನಿಲ್ದಾಣಕ್ಕೆ ಹೋಗಿ ಮರುದಿನದ ರೈಲಿನ ವೇಳೆ ಕೇಳಿಬಂದೆ; ಅಲ್ಲಿಂದ ಕಡಲ ದಂಡೆಗೆ ಬಂದು ಅಲೆದಾಡಿದ ಅನಂತರ—ಅಲ್ಲಿನ ಅರಮನೆಯ ವಿಶಾಲ ಉದ್ಯಾನವೊಂದರಲ್ಲಿ ಹೋಗಿ ಕುಳಿತುಕೊಂಡೆ. ಬಿಸಿಲು ಬೀಳುತ್ತಿತ್ತು; ಆ ಚಳಿಗೆ ತುಂಬ ಹಿತವೆನಿಸುತ್ತಿತ್ತು. ಆ ಉದ್ಯಾನದ ಭಾಗದಲ್ಲಿಯೇ, ಒಂದು ಕಡೆ ಕಿರಿಯ ಮಕ್ಕಳ ಆಟದ ಮನೆಯಿತ್ತು. ನಗರದ ಸ್ತ್ರೀಯರು ಕೆಲಸಕ್ಕೆ ಹೊರಡುವಾಗ, ತಮ್ಮ ಕಿರಿಯ ಮಕ್ಕಳನ್ನು ಇಲ್ಲಿಗೆ ತಂದು ಬಿಟ್ಟು ಹೋಗುತ್ತಾರೆ. ಅವರನ್ನು ವಿವಿಧ ರೀತಿಯ ಆಟದ ಸಾಮಗ್ರಿಗಳನ್ನು ಕೊಟ್ಟು ಆಡಿಸುವ ಏರ್ಪಾಟಿದೆ; ಕೂಸುಗಳ ನಿದ್ರೆ, ಆಹಾರಗಳಿಗೂ ಇಲ್ಲಿ ಏರ್ಪಾಟಿದೆ. ಇಂಥ ಮೂರು ಕೇಂದ್ರಗಳನ್ನು ಆ ಊರಿನಲ್ಲಿ ನನ್ನ ಅಲ್ಪಾವಧಿಯಲ್ಲಿ ಕಂಡೆ. ಸುಮಾರು ತಾಸುಕಾಲ ವಿರಮಿಸಿ ಅಲ್ಲಿಂದ ಹೊರಟೆ; ಕಾಲು ನಡೆಯಿಂದಲೇ

ಹಿಂದಣ ದಿವಸ ನಾನು ನೋಡಿದ ವೀಗಲೆಂಡ್ ಉದ್ಯಾನಕ್ಕೆ ಹೋದೆ.

ಈ ಉದ್ಯಾನಕ್ಕೆ ಸಮೀಪವಾಗಿ ಒಂದು ಮ್ಯೂಸಿಯಮ್ ಇದೆಯೆಂದು ತಿಳಿಸಿದ್ದರು. ಅದನ್ನು ನೋಡಲು ಆತುರನಾಗಿ, ಹತ್ತಲನ್ನು ಹೊಕ್ಕೆ; ಮಂದಿರದ ಬಾಗಿಲು ತೆರೆದಿದ್ದುದನ್ನು ಕಂಡು ಒಳಕ್ಕೂ ಹೋದೆ. ಮಂದಿರದಲ್ಲಿ ಅನೇಕಪ್ರಸಿದ್ಧ ಚಿತ್ರಗಳನ್ನು ತೂಗಿದ್ದರು—ಅವರಲ್ಲೊಂದು ಹೆನ್ರಿಕ್ ಇಬ್ಸೆನಿನದು. ಆಗಲೇ ನನಗೆ ನಾರ್ವೆ ದೇಶವು ಈ ಪ್ರಸಿದ್ಧ ನಾಟಕಕಾರನ ಜನ್ಮಭೂಮಿಯಲ್ಲವೆ—ಎಂಬ ಸ್ಮರಣೆ ಹೊಳೆದುದು. ಆ ಹೆಸರಿನಿಂದ ಮನಸ್ಸು ನಾನ್ಸೆನ್, ರೊನಾಲ್ಡ್ ಎಮುಂಡ್ಸನರಂಥ ಕೆಲವು ನಾರ್ವೆಜಿಯನ್ ಸಾಹಸಿಗಳ ವಿಚಾರವಾಗಿಯೂ ಹೊರಳಿತು. ಅಷ್ಟಕ್ಕೆ ಅಲ್ಲಿನವರಾರೋ ಬಂದು—"ಇನ್ನೂ ಮ್ಯೂಸಿಯಮ್ ತೆರೆಯುವ ವೇಳೆಯಾಗಿಲ್ಲ" ಎಂದರು. ನನ್ನ ಗಡಿಯಾರ ನೋಡಿದೆ; ಮಧ್ಯಾಹ್ನದ ಒಂದು ಘಂಟೆಯಾಗಿತ್ತು. ಅಲ್ಲಿಂದ ಹೊರಬಿದ್ದೆ—ನಡೆದು ಹೋದಲ್ಲಿ ಮಿಸ್ ಹೀಬರಳ ಮನೆಗೆ ಸಕಾಲಕ್ಕೆ ತಲುಪಬಹುದೆಂದು. ನಾನು ಹೋದಾಗ-ಆಕೆಯೂ ಅವಳ ಇನ್ನೊಬ್ಬಳು ಗೆಳತಿಯಾದ ಇಂಗರ್ ಡಾನ್ ಎಂಬವಳೂ ಕಾದು ಕುಳಿತಿದ್ದರು. ಇಂಗರ್ ಡಾನ್ ಅಮೇರಿಕೆಗೆ ಮದುವೆಯಾಗಿ ಹೋದವಳು. ಅವಳ ತಂದೆ ಒಬ್ಬ ನಾರ್ವೆಯ ಉದ್ಯಮಿ. ಗಂಡ ನ್ಯೂಯಾರ್ಕಿನವನು. ಅವಳು ಆ ನಗರದಲ್ಲಿ ಒಬ್ಬ ಲೈಬ್ರೆರಿಯನ್ ಆಗಿ ಕೆಲಸಮಾಡಿಕೊಂಡಿದ್ದಳು. ಅಲ್ಲಿ ಅವಳ ಪತಿಯು ತೀರಿಕೊಂಡುದರಿಂದ ಆಕೆ ಸ್ವದೇಶಕ್ಕೆ ಮರಳುವಂತಾಯಿತು. ಆಕೆ ವಿಶಾಲವಾಗಿ ಓದಿಕೊಂಡವಳು, ಜೀವನದ ಹಲವು ಮುಖಗಳನ್ನು ಕುರಿತಾಗಿ ಯೋಚಿಸಿದವಳು. ಆ ದಿನ ಮಿಸೆಸ್ ಎಡಮ್‌ಗೆ ಬರಲು ಅನುಕೂಲವಾಗದಿದ್ದುದರಿಂದ, ಈಕೆಯನ್ನು ಹೀಬರ್ ಕರೆಯಿಸಿಕೊಂಡಿದ್ದಳು.

ನಮ್ಮ ಊಟ ಸಿದ್ಧವಾಗಿತ್ತು. ಮಿಸ್ ಹೀಬರ್, ನನಗೆ 'ಅನ್ನ' ಪ್ರೀತಿಯೆಂದು ಊಹಿಸಿ, ಎಲ್ಲಿಂದಲೋ ಒಂದಿಷ್ಟು ಅಕ್ಕಿಯನ್ನು ಸಂಪಾದಿಸಿ, ಬೇಯಿಸಿದ್ದಳು. ಅನ್ನದ ಬದಲು 'ಗಂಜಿ'ಯಾಗಿತ್ತು. ಹಾಗೆಯೆ ಎಲ್ಲಿಂದಲೊ 'ಕರ್ರಿಪೌಡರ್' ಸಂಪಾದಿಸಿ, ತರಕಾರಿಯೊಂದಿಗೆ ಸೇರಿಸಿ, ಅವಳ ಕಲ್ಪನೆಯಂತೆ ಭಾರತೀಯ ಪಾಕವನ್ನು ಸಿದ್ಧಗೊಳಿಸಿದ್ದಳು. ಅಡುಗೆ ರುಚಿಯಾಗಿತ್ತು; ಎಂದರೆ ನನ್ನ ಹಸಿವು ಮತ್ತಷ್ಟು ಚೆನ್ನಾಗಿತ್ತು. ಅನಂತರ ಐಸ್‌ಕ್ರೀಮ್ ಬಂದಿತು; ಚಾ ಬಂದಿತು; ಊಟ ಮುಗಿಯಿತು. ಈ ವಯಸ್ಸಿನಲ್ಲಿ

ಹೀಬರ ತೋರಿದ ಉತ್ಸಾಹ, ಅದೂ ಅತಿಥಿಗಾಗಿ ಪಟ್ಟ ಶ್ರಮ, ಇವನ್ನೆಲ್ಲ ನೋಡುವಾಗ ಅದೊಂದು ಔತಣವೇ ಸರಿ. ಊಟದ ಬಳಿಕ ಇಂಗರ್ ಡಾನ್ ನನ್ನನ್ನು ನಗರ ಸಂಚಾರಕ್ಕೆ ಕರೆದೊಯ್ಯುವವಳು. ಹಾಗಾಗಿ ಹೀಬರ ಳೊಡನೆ ಬೀಳ್ಕೊಡುವ ಮಾತುಗಳನ್ನಾಡಿ ಹೊರಟೆ. ನಮ್ಮ ಸ್ನೇಹ ತೀರ ಅಲ್ಪ ಕಾಲದ್ದಾದರೂ, ಆ ಹಿರಿಯೆ ತೋರಿದ ಸೌಜನ್ಯದಿಂದಾಗಿ ನಮ್ಮ ವಿದಾಯ ತಾಪದಾಯಕವಾಗಿಯೇ ಇತ್ತು.

ಇಂಗರ್‌ಡಾನಳೊಡನೆ ಮಹಡಿಯಿಂದಿಳಿದೆ; ಅವಳ ಭರ್ಜರಿ ಅಮೇರಿಕನ್ ಕಾರಿನಲ್ಲಿ ಹೋಗಿ ಕುಳಿತೆ. ಅವಳು ಬಂಡಿ ನಡೆಸುವವಳು. "ಎಲ್ಲಿಗೆ?" ಎಂದು ಕೇಳಿದಳು. 'ಒಸ್ಲೋ ಬಲ್ಲವರು ನೀವು; ತೋರಿಸಲು ಯೋಗ್ಯವಾದುದನ್ನೆಲ್ಲ ತೋರಿಸಿ' ಎಂದೆ. ನಮ್ಮ ಮೊದಲ ಪಯಣ ಒಸ್ಲೋ ಫಿಯೊರ್ಡಿನಲ್ಲಿ ಪರ್ಯಾಯ ದ್ವೀಪದಂತೆ ಚಾಚಿರುವ "ಬಿಗಡಾಯ್" ಎಂಬಲ್ಲಿಗೆ ಸಾಗಿತು. ಇದು ಒಸ್ಲೋ ನಗರದ ಒಂದು ವಿಸ್ತರಣ. ವಿಶೇಷ ಅನುಕೂಲವಂತರ ಸುಂದರ ಗೃಹೋದ್ಯಾನಗಳು ಈ ಹಾದಿಯಲ್ಲೂ, ಅಲ್ಲೂ ಇವೆ. ದಾರಿಯುದ್ದಕ್ಕೂ ಮನೋಹರವಾದ ಹೂದೋಟಗಳಿದ್ದುವು. ನೆಲ ಸಮತಟ್ಟಾಗಿರದೆ ಏರುತಗ್ಗುಗಳ ಪ್ರದೇಶವಾಗಿತ್ತು. ನೆಲವನ್ನೆಲ್ಲ ಹಸುರು ತುಂಬಿಕೊಂಡಿತ್ತು. ಈ ಸ್ಥಳದಲ್ಲಿ ನಾಲ್ಕಾರು ಪ್ರೇಕ್ಷಣೀಯ ಸ್ಥಳಗಳಿರುವುವೆಂದು ಓದಿಕೊಂಡಿದ್ದೆ—ಜಾನಪದ ಕಲಾಸಂಗ್ರಹ; ವೈಕಿಂಗ್ ಹಡಗಿನ ಮನೆ; ಕಾನ್ ಟಿಕಿ ಮ್ಯೂಸಿಯಂ, ನಾನ್ಸೆನ್ ಮ್ಯೂಸಿಯಮ್–ಮೊದಲಾದುವು.

ಮೊದಲು ವೈಕಿಂಗ್ ಹಡಗಿನ ಮನೆಗೆ ಹೋದೆವು. ಈ ಮನೆಯಲ್ಲಿ ಬಹುದೊಡ್ಡದಾದ ಹಳೆಗಾಲದ ಎರಡು ಮರದ ಹಡಗುಗಳನ್ನು ಇರಿಸಿದ್ದಾರೆ. ಸಾವಿರ ವರ್ಷಗಳಿಗೂ ಹಿಂದಿನ ರಚನೆಗಳವು. ನಾರ್ವೆಯ ಜನಗಳು ಸಾವಿರಾರು ವರ್ಷಗಳಿಂದಲೂ ಕಡಲ ದಾರಿಯನ್ನು ತುಳಿದವರು. ಅವರ ಪ್ರಾಚೀನ ಪಾಳೆಯಗಾರರು ತೀರಿಕೊಂಡರೆ–ಇಂಥ ದೊಡ್ಡ ಹಡಗುಗಳಲ್ಲಿ ಅವರನ್ನು ವೈಭವಪೂರ್ವಕವಾಗಿ ತಂದಿರಿಸಿ, ಸಮಾಧಿ ಮಾಡುವುದು ವಾಡಿಕೆಯಾಗಿತ್ತು. ಇಂಥ ಎರಡು ಭೂಗತ ಹಡಗುಗಳನ್ನು ಅಗೆದು ತೆಗೆದು ಇಲ್ಲಿರಿಸಿದ್ದಾರೆ. ಸಾವಿರ ವರ್ಷಗಳ ಹಿಂದಿನ ಜೀವನ ವೃತ್ತಾಂತವನ್ನು ಆ ಹಡಗುಗಳೂ, ಅದರಲ್ಲಿ ತುಂಬಿರುವ ಸಾಮಗ್ರಿಗಳೂ ನಮ್ಮ ಮುಂದೆ ಬಿಡಿಸಿ ಹೇಳುತ್ತವೆ.

ಈ ಹಡಗುಗಳ ಆಕೃತಿಗಳು ನೀರನ್ನು ಸೀಳಲು ಅನುಕೂಲವಾದುವು-ಆಧುನಿಕರೆನ್ನುವ Stream-lining ಗುಣವನ್ನು ಇದಕ್ಕೂ ಬಹುವಾಗಿ ಬೆಳೆಯಿಸಲು ಸಾಧ್ಯವಾಗದು. ಈ ಪೂರ್ವಕಾಲದ ಹಡಗು ಎಷ್ಟು ಆಧುನಿಕವಾಗಿ ನಮಗೆ ಕಾಣಿಸುತ್ತದೆಯೋ, ಅಷ್ಟೇ ಆಧುನಿಕವಾಗಿದ್ದ, ಇತಿಹಾಸ ಪೂರ್ವಯುಗದ್ದಾಗಿ ಕಾಣಿಸುವಂಥ ಮತ್ತೊಂದು ಹಡಗು 'ಕಾನ್ ಟಿಕಿ' ಎಂಬುದು. ಇದು ನಾರ್ವೇಜಿಯನರ ಇನ್ನೊಂದು ಹೆಮ್ಮೆಯ ಸ್ಮಾರಕವಾಗಿದೆ; ತನಗಾಗಿಯೂ ಒಂದು ಸ್ಮಾರಕ ಮಂದಿರವನ್ನು ದೊರಕಿಸಿಕೊಂಡಿದೆ.

ಕಾನ್ ಟಿಕಿ ಹಡಗಲ್ಲ, ಮರದ ಒಂದು ತೆಪ್ಪ; ಈ ತೆಪ್ಪವನ್ನು ರಚಿಸಿದುದು ಎರಡು ಮೂರು ವರ್ಷಗಳ ಹಿಂದೆ; ಇದರಲ್ಲಿ ಆಧುನಿಕ ನಾರ್ವೇಜಿಯನರು ಕುಳಿತುಕೊಂಡು ದಕ್ಷಿಣ ಶಾಂತ ಸಾಗರದಲ್ಲಿ ಐದು ಸಾವಿರ ಮೈಲು ದೂರದ ಯಾನಮಾಡಿ ಬಂದರು. ಈ ಸಾಹಸದ ಹಿನ್ನಲೆ ತುಂಬ ಸ್ವಾರಸ್ಯವಾಗಿದೆ. ಡಾ। ಹೈಡರ್ಡಾಲ್ ಎಂಬ ನಾರ್ವೇಜಿಯನ್ ಪಂಡಿತರು ದಕ್ಷಿಣ ಅಮೇರಿಕರಲ್ಲಿ ವಾಸಿಸುವ ಪೆರುವಿಯನರ ಸಂಸ್ಕೃತಿಯನ್ನು ಅಭ್ಯಸಿಸಿ, ಅದಕ್ಕೂ ಶಾಂತಸಾಗರದ 'ಸೌತ ಸೀ' ದ್ವೀಪಗಳ ಜನಗಳ ಸಂಸ್ಕೃತಿಗೂ ಇರುವ ಹೆಚ್ಚಿನ ಹೊಂದಿಕೆಯನ್ನೂ ಕಂಡು—ಈ ಜನರೇ ಒಂದು ಕಾಲದಲ್ಲಿ (ಸಾವಿರದ ನಾನ್ನೂರು ವರ್ಷಗಳ ಹಿಂದೆ) ದಕ್ಷಿಣ ಅಮೇರಿಕದ ಪೇರು ಭಾಗದಿಂದ ಅಲ್ಲಿಗೆ ತೇಲಿಹೋಗಿರಬೇಕು—ಎಂದು ವಾದ ಹೂಡಿದರು. ಅವರ ವಾದ ಸರಣಿಗೆ ಅನುಕೂಲವಾದ ಅಂಶವೆಂದರೆ—ಹಿಂದೆ ನೌಕಾ ನಿರ್ಮಾಣ ಬೆಳೆದಿತ್ತೆಂದಲ್ಲ; ಬದಲು ತೇಲುವಿಕೆಗೆ ಸಹಾಯವಾಗುವಂಥ ಹಂಬೋಲ್ಟ್ಸ್ಟ್ರೀಮ್ ಎಂಬ ಕಡಲಿನ ಪ್ರವಾಹವು, ಈ ಭಾಗದಿಂದ ತಾನಾಗಿಯೆ ಆ ದ್ವೀಪ ಸಮುದಾಯಕ್ಕೆ ಹರಿಯುತ್ತದೆಯೆಂಬುದು. ಆದರೆ ಎರಡು ತಾಣಗಳೊಳಗಿರುವ ದೂರ 4500 ಕಡಲ ಮೈಲು. ಹಾಗೆ ತೇಲಿ ಹೋಗಿರಬಹುದಾದುದು ಇತಿಹಾಸ ಪೂರ್ವಯುಗದಲ್ಲಿ; ಅಲ್ಲಿನ ಜನರು ದೋಣಿಯೇನೆಂದು ಕಂಡು ಹಿಡಿಯುವ ಮೊದಲೇನೆ. ಅದಕ್ಕಾಗಿ "ತೆಪ್ಪ"ವನ್ನು ರಚಿಸಿ ಹೋದರು-ಎಂಬುದು ತರ್ಕ. ಈ ವಾದವು ಉಳಿದ ಸಂಸ್ಕೃತಿಜ್ಞರಲ್ಲಿ ನಗೆಗೆ ಕಾರಣವಾಯಿತು. ಡಾ। ಹೈಡರ್ಡಾಲರು ಅದು ಸಾಧ್ಯವೆಂದೇ ತೋರಿಸಲು ಪ್ರಯೋಗಕ್ಕೆ ಹೊರಟರು.

ಅದಕ್ಕಾಗಿ ಕೆಲವರನ್ನು ಕೂಡಿಕೊಂಡು ಕೆಲಸತೊಡಗಿದರು. ಪೇರುವಿನ ಉತ್ತರಭಾಗದ ಕಾಡುಗಳಿಂದ ಅತಿ ಹಗುರವಾದ ಬಾಲ್ಸಾಮರಗಳನ್ನು

ತಂದು ತೆಪ್ಪವಾಗಿ ಜೋಡಿಸಿದರು. ಇತರ ಮರಗಳು ಶಿಲಾಯುಗದ ಮನು ಷ್ಯರ ಕೊಡಲಿಯಿಂದ ತುಂಡಾಗವಷ್ಟೆ. ಆ ಮರದ ದಿಂಡುಗಳನ್ನು ಬೀಳಲು ಗಳಿಂದ ಬಿಗಿದು, ಬಿದಿರು ಎಲೆಗಳ ಪರ್ಣಕುಟೀರವೊಂದನ್ನು ಆ ತೆಪ್ಪದ ಮೇಲೆ ನಿಲ್ಲಿಸಿದರು. ತೆಪ್ಪ ಸಿದ್ಧವಾದ ಬಳಿಕ, ಪೂರ್ವಯುಗದ, ಸಲಕರಣೆ ಗಳನ್ನು ಹಿಡಿದುಕೊಂಡು ಒಂದು ದಿನ ಕಡಲನ್ನು ಹೊಕ್ಕೇ ಪೊಕ್ಕರು. ಅವರ ತೆಪ್ಪವು ಹಂಬೋಲ್ಟ್ಸ್ಟ್ರೀಮ್ ಕೊಂಡೊಯ್ದಲ್ಲಿಗೆ ಹೋಗುವಂತಾ ಯಿತು. ದಿನ ದಿನಗಳ ಅನಿಶ್ಚಿತ ಭವಿಷ್ಯ; ಕಡಲಿನ ಹುಲಿಮೀನುಗಳು ಅವ ರನ್ನು ಎದುರಿಸಿದುವು. ಆದರೂ ಎದೆಗುಂದದೆ 90 ದಿನಗಳ ಬಳಿಕ ಒಂದು ದಿನ ತಾವು ಎಣಿಸಿದ ದ್ವೀಪ ಸಮುದಾಯವೊಂದನ್ನು ಸೇರಿಯೂ ಬಿಟ್ಟರು. ಈ ದ್ವೀಪಗಳು ಹಾಯಿತಿ ದ್ವೀಪಕ್ಕೆ ಸಮೀಪವಾಗಿವೆ.

ಇಂಥ ಒಂದು ಹಡಗನ್ನು ಕಾಣುವಾಗ ನಗುಬರುತ್ತದೆ. ಯಾವ ರಕ್ಷೆಯೂ ಇಲ್ಲದಂಥ ಮರದ ದಿಂಡುಗಳ ತೆಪ್ಪ. ಸುಮಾರು ೧೬ ೧೬ ಅಡಿ ಗಾತ್ರದ್ದು. ಅದರಲ್ಲಿ ಅವರು ಹೇಗೆ ಸಾಗಿದರೋ, ಕಡಲಿನ ಅಬ್ಬರ, ಗಾಳಿ ಗಳಿಗೆ ಹೇಗೆ ದಾಟಿದರೋ, ಆಹಾರವನ್ನು ಕಡಲಿಂದ ಹೇಗೆ ಗಳಿಸಿದರೋ! ತಮ್ಮ ಯಾವತ್ತು ದಿನಚರಿಯನ್ನು ಚಲಚ್ಚಿತ್ರವಾಗಿಯೂ ಸಂಗ್ರಹಿಸಿದ್ದಾರೆ. ಕಾನ್ ಟಿಕಿ ಚಲಚ್ಚಿತ್ರ ಸಾವಿರಾರು ಜನರನ್ನು ಆಕರ್ಷಿಸಿದೆ. ಅಂತೆಯೇ ಹೈರ್ಡಾಲ್ ಮತ್ತು ಅವರ ಗೆಳೆಯರ ಈ ಸಾಹಸವನ್ನು ಜನಸಾಮಾನ್ಯರೂ, ಪಂಡಿತರೂ ಕೊಂಡಾಡಿದ್ದಾರೆ.

ಈ ತೆಪ್ಪವಿರಿಸಿದ ಸ್ಥಳಕ್ಕೆ ಸಮೀಪವಾಗಿ–ನಾನ್ಸೆನ್ ಮ್ಯೂಸಿಯುಮ್ ಇದೆ. ಅದರಲ್ಲಿ ನಾನ್ಸೆನ್ ಉತ್ತರ ಧ್ರುವವನ್ನು ಶೋಧಿಸಲು ಹೊರಟಾಗ ಒಯ್ದ ಸಾಧನ ಸಲಕರಣೆಗಳನ್ನು ಕೂಡಿರಿಸಿದ್ದಾರೆ. ಇದೇ ಸಂದರ್ಭದಲ್ಲಿ —ದಕ್ಷಿಣ ಧ್ರುವದ ಒಬ್ಬ ಶೋಧಕರಲ್ಲಿ ನಾರ್ವೆಯವನೇ ಆದ ರೊನಾಲ್ಡ್ ಎಮುಂಡ್ಸೆನನ ಹೆಸರನ್ನೂ ನಾವು ಮರೆಯುವಂತಿಲ್ಲ.

ಇವನ್ನು ನೋಡಿಕೊಂಡು ನಾವು ನಾರ್ವೆಯ ಜಾನಪದ ಕಲೆಗಳನ್ನು ತೋರಿಸುವ ವಿಶಾಲ ಸಂಗ್ರಹಾಲಯಕ್ಕೆ ಹೋದೆವು. ಅದರಲ್ಲಿ ಎರಡು ವಿಭಾಗಗಳಿವೆ–ಒಂದು ಬಹಿರಂಗದಲ್ಲಿಯೇ ನಿಲ್ಲಿಸಿದ ಪ್ರಾಚೀನ ಮನೆಮಠ ಗಳು; ಇನ್ನೊಂದು ಕಟ್ಟಡದ ಒಳಗಡೆ ಕೂಡಿಸಿರಿಸಿದ ಅನೇಕ ಕಲಾಸಂಪ ತ್ತುಗಳು. ಹೊರಗಡೆ ವಿಶಾಲ ಆವರಣದಲ್ಲಿ ನಾರ್ವೆಯಲ್ಲಿ ಹಿಂದಿನ ವಿವಿಧ

ಶತಮಾನಗಳಲ್ಲಿ ರೂಢಿಯಲ್ಲಿದ್ದ ಮನೆಗಳನ್ನೂ ಅವುಗಳೊಳಗಿನ ಸಾಧನ ಸಲಕರಣೆಗಳನ್ನೂ ಇದ್ದಕ್ಕಿದ್ದಂತೆಯೇ ತಂದು ನಟ್ಟಿದ್ದಾರೆ. ಅವುಗಳಲ್ಲಿ ಬಹು ಸುಂದರವಾದೊಂದು ಚರ್ಚಿನ ಕಟ್ಟಡವಿದೆ. ಅದರ ಗೋಡೆ ಮಾಡುಗಳೆಲ್ಲವೂ ಮರದುವು. ಅದರ ಪ್ರಾಚೀನ ವಾಸ್ತು ಶೈಲಿಯೂ ಕೆತ್ತನೆಗಳೂ ಬಹು ಸುಂದರವಾಗಿವೆ. ಈ ಶೈಲಿಯನ್ನು ಇಂದಿಗೂ ಸ್ಕಾಂಡಿನೇವಿಯದ ಅನೇಕ ಇಗರ್ಜಿಗಳಲ್ಲಿ ಕಾಣಬಹುದಾಗಿದೆ.

ಅವರ ಜಾನಪದ ಕಲೆಗಳನ್ನು ಸಂಗ್ರಹಿಸಿ ಇರಿಸಿದ ಕಟ್ಟಡ ಹಿರಿದು; ಮೂರಂತಸ್ತಿನದು. ಅದರ ಒಂದು ಭಾಗದಲ್ಲಿ-ನಾರ್ವೆಯವರು ಹಿಂದೆ ಅನುಸರಿಸುತ್ತಿದ್ದ ಕೆಥೋಲಿಕ್ ದೇವಾಲಯಗಳಲ್ಲಿನ ಪ್ರತಿಮೆ, ಅಲಂಕಾರ, ವೇದಿಕೆಗಳನ್ನೆಲ್ಲ ತಂದಿರಿಸಿದ್ದಾರೆ. ಅವುಗಳ ಕೆತ್ತನೆಯ ಶೈಲಿ ನಮಗೆ ಕೆಲವೊಮ್ಮೆ ಪೊಲಿನೇಶ್ಯದ ಕೆತ್ತನೆಯ ಬಗೆಯನ್ನು ತೋರಿಸುತ್ತದೆ. ಅವರ ಪ್ರಾಚೀನ ಜನಗಳು ಬಳಸುತ್ತಿದ್ದ-ಮರದ, ಕಬ್ಬಿಣದ, ಕಾಜಿನ, ಪಿಂಗಾಣಿಯ ಸಲಕರಣೆಗಳನ್ನೂ, ಒಲೆಗಳನ್ನೂ, ಸ್ಲೆಜ್ ಗಾಡಿಗಳನ್ನೂ ಇತರ ಕೊಟಡಿಗಳಲ್ಲಿ ವರ್ಗೀಕರಿಸಿ ಇರಿಸಿದ್ದಾರೆ. ಹಿಂದಣ ಜಾನಪದ ಕಲೆಗಳ ಬಹು ವಿಸ್ತಾರವಾದ ಚಿತ್ರ ಇಲ್ಲಿ ನಮಗೆ ಕಾಣುತ್ತದೆ. ನೇಯ್ಗೆಯ ವಿಭಾಗವೊಂದಿದೆ. ಅದನ್ನು ನಾವು ತುಸು ವಿರಾಮವಾಗಿ ಪರಿಶೀಲಿಸಿದೆವು. ಅಲ್ಲಿಟ್ಟ ಬೀರುಗಳಲ್ಲಿ ನೂರಾರು ಬಗೆಯ ದಟ್ಟಿ, ಅಂಚು (Ribbon) ಕಸೂತಿ ಮೊದಲಾದುವುಗಳ ಸಂಗ್ರಹವಿದೆ. ಇಂದಿನ ನಾರ್ವೆಯ ಜನ ಅಂತರ್ರಾಷ್ಟ್ರೀಯ ಉಡುಗೆಯನ್ನು ಮೆಚ್ಚುತ್ತಿರುವರಾದರೂ, ನಾರ್ವೆಯವರ ದೇಶೀಯ ಉಡುಗೆಯು ಇವಕ್ಕಿಂತ ಎಷ್ಟೋ ಪಾಲು ಹೆಚ್ಚಿನ ಸೌಂದರ್ಯವುಳ್ಳದ್ದಾಗಿದೆ.

ಬಿಗಡಾಯ್‌ಯ ಪರ್ಯಾಯ ದ್ವೀಪಭಾಗವನ್ನೆಲ್ಲ ಸುತ್ತಿಕೊಂಡು ನಾವು ತಿರುಗಿ ಒಸ್ಲೋವಿಗೆ ಬಂದು, ಅಲ್ಲಿಂದ ಮತ್ತೊಂದು ವಿಸ್ತರಣಕ್ಕೆ ಹೊರಟೆವು. ಅದೂ ಊರ ಹೊರಗಣ ಪ್ರದೇಶ; ಉನ್ನತವಾದೊಂದು ಪರ್ವತ. ಆ ದಾರಿಯುದ್ದಕ್ಕೂ ಸುಂದರ ಮನೆಮಠಗಳಿವೆ; ಅಲ್ಲಿಗೆ ಹೋಗುವ ರೈಲು ಹಾದಿಯೂ ಇದೆ. ನಮ್ಮ ಘಟ್ಟದ ರಸ್ತೆಗಳಂತೆ ಸುತ್ತಿಸುಳಿಯುವ ದಾರಿಯಿದು. ಹತ್ತು ಮೈಲು ಸುಮಾರು ಹೋದ ಬಳಿಕ, ಈ ಬೆಟ್ಟದ ಕುಡಿಗೆ ಬಂದೆವು. ಆ ಪರ್ವತವೆಲ್ಲವು ಪೈನ್ ವೃಕ್ಷದ ಹಸುರಿನಿಂದ, ದೈತ್ಯಾಕಾರದ ಕಾಂಡಗಳಿಂದ, ಗಂಭೀರವೂ ಸುಂದರವೂ ಆಗಿ ಕಾಣಿಸುವ ತಾವಾಗಿದೆ.

ಆಬೆಟ್ಟದ ತುದಿಯಲ್ಲಿ ಒಂದು ಸ್ಕೀ–ಆಟದ ಕೊತ್ತಳವಿದೆ. ಕಾಲಿಗೆ ದೋಣಿ ಯಾಕೃತಿಯ ಮರದ ಹಾಳೆಗಳನ್ನು ಕಟ್ಟಿಕೊಂಡು, ಹಿಮದ ಮೇಲೆ ವೇಗ ವಾಗಿ ಚಲಿಸುವ ಆಟವೇ ಸ್ಕೀ ಆಟ. ಇದಕ್ಕಾಗಿ ಎತ್ತರವಾದೊಂದು ಕೊತ್ತಳ ಮಾಡಿದ್ದಾರೆ. ಅದರ ಮೇಲಣ ವೇದಿಕೆಯಿಂದ ವೇಗವಾಗಿ ಜಾರಿ ಇಳಿಯು ವಂತಹ ಒಂದು ಮರದ ಹಾದಿಯಿದೆ. ಅದರಲ್ಲಿಳಿಯುವವನು—ವೇಗಾ ಧಿಕ್ಯದಿಂದ ದೂರದ ಹೆಪ್ಪುಗಟ್ಟಿದ ಕೊಳವೊಂದರ ಹಿಮದ ಮೇಲೆ ಹೋಗಿ ಎರಗುತ್ತಾನೆ—ಅಲ್ಲಿಂದ ಆತ ಮಿಂಚಿನವೇಗದಿಂದ ಸರಿಯುತ್ತಾನೆ. ಇಲ್ಲಿನ ವೇದಿಕೆಯೆಂಬುದು ಸಮಾರು ನೂರಡಿಗಿಂತ ಉನ್ನತವಾಗಿದೆ; ಮೊದಲ ನೆಗೆತವೇ ಐವತ್ತು ನೂರಡಿಗಳಷ್ಟು ದೂರದ ಕೊಳದ ಮೇಲೆ ಅವನನ್ನು ಎರಗಿಸುತ್ತದೆ. ಚಳಿಗಾಲದಲ್ಲಿ ಆ ದೇಶದ ತಗ್ಗುತೆವರುಗಳನ್ನು ಮುಚ್ಚುವ ಹಿಮದ ಮೇಲೆ, ಊರಿಂದೂರಿಗೆ ಸ್ಕೀ--ಕಟ್ಟಿಕೊಂಡು ಓಡಾಡುವ ವಿನೋದ ಅವರ ರಾಷ್ಟ್ರೀಯ ವಿನೋದವಂತೆ. ಪ್ರಾಯಕ್ಕೆ ಬರುತ್ತಲೇ ಅವರ ಅರಸೂ ಈ ಆಟವನ್ನು ಆಡಬೇಕಂತೆ. ಇದು ತುಂಬ ಧೈರ್ಯ, ಎಚ್ಚರಗಳು ಬೇಕಾ ಗುವ ಆಟ. ಸಾಹಸದ ಕೆಲಸ;ಅಷ್ಟೇ ಅಪಾಯವುಳ್ಳವಿನೋದವೂ ಅಹುದು.

ಈ ವೇದಿಕೆಯನ್ನು ನೋಡಿ ತುಸು ಮುಂದುವರಿದು, ಬೆಟ್ಟದ ಒಂದು ಕುಡಿಯಲ್ಲಿ ನಿಂತೆವು. ಅಲ್ಲೊಂದು ವಿಶ್ರಾಂತಿ ಗೃಹವಿತ್ತು. ಅದು ಪ್ರಾಚೀನ ಯುಗದ ಕಟ್ಟಿಗೆಯ ಮನೆ; ಹಿಂದಿನ ಜಾನಪದ ಶೈಲಿಯ ರಚನೆ. ಅದಕ್ಕೆ ಬೆನ್ನುಮಾಡಿ ನಿಂತರೆ ನಮ್ಮೆದುರಿಗೆ ಅತಿ ಸುಂದರವಾದ ನೋಟವಿದೆ. ಒಸ್ಲೋ ಕಡಲು–ಅದರ ನಾಲ್ಕು ಸುತ್ತು, ದಿಗಂತದ ಅಂಚಿನ ತನಕ ತೆರೆ ತೆರೆ ಯಾಗಿ ಹಾಸಿಕೊಂಡಿರುವ ಹಸುರು ಪರ್ವತ ಶ್ರೇಣಿ. ನಾವು ಹೋದ ವೇಳೆ ಬಾನಲ್ಲಿ ಮೋಡ ಮುಸುಕಿತ್ತು; ನಮಗಾಗಿ ಎಂಬಂತೆ ಮುಗಿಲಿನ ತೂತೊಂದ ರಿಂದ ಬೆಳಕಿನ ಕಂಬಿಯೊಂದು ಒಸ್ಲೋ ಫಿಯೋರ್ಡಿನ ಜಲವನ್ನು ಕನ್ನಡಿ ಯಾಗಿಮಾಡಿತ್ತು. ಮಗ್ಗುಲಿನ ನಗರದ ಮನೆಗಳ ಮಾಡುಗಳನ್ನು ಕೆಂಬಣ್ಣ ದಿಂದ ತೊಯ್ದಿತ್ತು. ಆ ಚೆಲುವಿನ ದೃಶ್ಯ ಮರೆಯಲಾರದ್ದು. ಅಲ್ಲಿಯೇ ನಿಂತು 'ಅಪೂರ್ವ ನಗರವೆ! ನಿನಗೆ ವಂದನೆ' ಎಂದೆ.

ದಾರಿಯಲ್ಲೆಲ್ಲ ಇಂಗರ್ ಡಾನ್ ನನಗೆ ತಮ್ಮ ರಾಜಕೀಯ,ಆರ್ಥಿಕ ಜನಜೀವನಕ್ಕೆ ಸಂಬಂಧಿಸಿದ ಅನೇಕ ವಿಷಯುಗಳನ್ನು ತಿಳಿಸಿದಳು. ನಾನು ಕೇಳಿದ ಎಲ್ಲ ಪ್ರಶ್ನೆಗಳನ್ನು ಚೆನ್ನಾಗಿ ಉತ್ತರಿಸಿದಳು. ಅಲ್ಲಿನ ಮುಖ್ಯ ಉದ್ಯ

ಮವಾದ—ಕಾಗದ, ರಯಾನ್ ತಯಾರಿ, ಇಂದು ಅವರ ದೇಶದಲ್ಲಿ ಗಾಳಿ ಯಿಂದ ಸಾರಜನಕ ಪಡೆದು ಗೊಬ್ಬರ ತಯಾರಿಸುತ್ತಿರುವ ವಿಚಾರ, ಸಮಾಜ ವಾದದಿಂದ ದೇಶದಲ್ಲಿ ಉಂಟಾದ ಸುಧಾರಣೆ, ಪ್ರತಿಭಟಿಗಳ ವಿಚಾರ, ಮೊದ ಲಾದುವನ್ನು ತಿಳಿಸಿದಳು.

ಸಂಜೆಯಾಯಿತು; ಎಂದರೆ ಏಳು ಘಂಟೆ ಕಳೆಯಿತು. ಆಕೆ ನನ್ನನ್ನು ಮನೆಯ ತನಕ ಮುಟ್ಟಿಸಿ ಬೀಳ್ಕೊಟ್ಟಳು. ಒಸ್ಲೋ ನಗರದಲ್ಲಿ ನಾನು ಕಳೆದ ಎರಡು ದಿನಗಳೆಂಬುವು ಆ ಮೂವರು ಮಹಿಳೆಯರಿಂದಾಗಿ ತುಂಬ ಸವಿಯಾಗಿ ಕಳೆದುವು.

# ೯. ಸ್ವೀಡನಿನ ರಾಜಧಾನಿಯಲ್ಲಿ

ಮೂರನೆಯ ದಿನ ಬಂದಿತು. ನಾನು ಒಸ್ಲೋ ನಗರವನ್ನು ಬಿಡಬೇಕಾದ ಗಳಿಗೆಯೂ ಒದಗಿತು. ನಾನು ನನ್ನ ಪೆಟ್ಟಿಗೆಯನ್ನು ಹಿಡಿದುಕೊಂಡು ಟ್ರಾಮ್ ಬಂಡಿಯನ್ನೇರಿ ಆರೂವರೆ ಘಂಟೆಗೆ ಸಮನಾಗಿ ರೈಲುನಿಲ್ದಾಣವನ್ನು ಸೇರಿದೆ. ಅಲ್ಲಿ ಚಾವಡಿಯಲ್ಲಿ, ಸ್ಟೋಕ್‌ಹಾಮ್ ನಗರಕ್ಕೆ ಬಂಡಿ ಹೊರಡಲಿರುವ ಗೇಟಿಗೆ ಸಮೀಪವಾಗಿ ಕಾದು ಕುಳಿತೆ. ನನ್ನ ಜತೆಗೆ ಇನ್ನೂ ಹಲವರಿದ್ದರು. ನಮ್ಮೆದುರಿನ ಪ್ಲಾಟ್‌ಫಾರ್ಮಿನಲ್ಲಿ ಬೆಳಗಿನ ಏಳು ಘಂಟೆಗೆ ಹೊರಡುವ ಬಂಡಿಯೊಂದಿತ್ತು. ಏಕೊ ಏನೋ--ಆ ಬಂಡಿ ವೇಳೆಗೆ ಒಂದೆರಡು ನಿಮಿಷ ಮುಂಚಿತವಾಗಿ ಸರಿದು, ಮುಂದುವರಿದು, ತೀರ ಮುಂದೆ ಹೋಗಿ ನಿಂತಿತು. ಆ ವೇಳೆಗೆ ಒಬ್ಬ ಮುದುಕ ಎರಡೆರಡು ಪೆಟ್ಟಿಗೆಗಳನ್ನು ಹೊತ್ತುಕೊಂಡು ಅದೇ ಬಂಡಿಯನ್ನೇರಲು ಧಾವಿಸಿ ಬಂದ. ಪೊರಲಾರದ ಹೊರೆ ಅವನದು! ಬಂಡಿಯೂ ಸ್ಥಳವನ್ನು ಬಿಟ್ಟು ಸರಿದು ಹೋಗಿತ್ತು. ಬಾಗಿಲಲ್ಲಿ ನಿಂತಿದ್ದ ಟಿಕೇಟು ಕಲೆಕ್ಟರನು ಒಮ್ಮೆಗೇ ಅವನ ಬಳಿಗೆ ಓಡಿದ; ಅವನ ಪೆಟ್ಟಿಗೆಗಳನ್ನು ತಾನು ಎತ್ತಿಕೊಂಡು, ಅವನ ಕೈಹಿಡಿದುಕೊಂಡು ಧಾವಿಸಿದ. ದೂರ ಸರಿದು ನಿಂತಿದ್ದ ಆ ಬಂಡಿಯ ತನಕವೂ ಓಡಿಹೋಗಿ, ಆ ಪ್ರಯಾಣಿಕನನ್ನು ಬಂಡಿಯೊಳಕ್ಕೆ ಕುಳ್ಳಿರಿಸಿಯೇ ಬಂದ. ನನಗೆ ಅವನ ಉಪಕಾರ ಬುದ್ಧಿಯನ್ನು ಕಂಡು ಆಶ್ಚರ್ಯವಾಯಿತು. ಸಾಮಾನ್ಯವಾಗಿ ಈ ಜನರು ವಯಸ್ಸಾದವರ ಕಡೆಗೆ ತೋರುವ ಆದರ ಇಂಥದು. ಒಬ್ಬ ಟ್ರಾಮು ಕಂಡಕ್ಟರನಾದರೂ ಸರಿಯೇ--ಬಂಡಿಗೆ ಬರುವ ಮುದುಕ ಮುದುಕಿಯರನ್ನೂ, ಇಳಿಯುವ ಅಂಥವರನ್ನೂ ಗೌರವ ಆದರಗಳಿಂದ ಕೈಹಿಡಿದು ಮೇಲಕ್ಕೆ ತರುವುದನ್ನೂ, ಕೆಳಗೆ ಇಳಿಸುವುದನ್ನೂ ಸದಾ ಕಾಣಬಹುದು.

ಈ ಒಂದು ಸವಿ ನೆನಪನ್ನೂ ನೆನೆಸುತ್ತ ನಮ್ಮ ಬಂಡಿಯಲ್ಲಿ ಹೋಗಿ ಕುಳಿತೆ. ಬೆಳಗಿನ ಏಳೂವರೆ ಘಂಟೆಗೆ ಅದು ಹೊರಟಿತು. ಅಲ್ಲಿಂದ ಸ್ವೀಡನಿನ ರಾಜಧಾನಿಯಾದ ಸ್ಟೋಕ್‌ಹಾಮಿಗೆ ನನ್ನ ಪಯಣ. ಒಸ್ಲೋವಿನಿಂದ ಸುಮಾರು ಎರಡು ತಾಸಿನ ದಾರಿ, ನಾನು ಬಂದ ದಾರಿಯಂತೆ--ಗುಡ್ಡಗಾಡಿನ ದಾರಿ; ಅಲ್ಲಲ್ಲಿ ಪೈನ್ ಮರದ ಕಾಡುಗಳಿದ್ದುವು. ಅಲ್ಲಿಂದ ಮುಂದಕ್ಕೆ ಸರಿದಂತೆ ನೆಲ ಸಮತಟ್ಟಾಗುತ್ತದೆ; ಸ್ವೀಡನಿನ ಗಡಿಯೂ ಬರುತ್ತದೆ. ಈ ದಾರಿ

ಯಲ್ಲೆಲ್ಲ ಸಮತಟ್ಟಾದ ಬಯಲು ಭೂಮಿ. ಒಸ್ಲೋವಿನಿಂದ ಸುಮಾರು 250 ಮೈಲು ದೂರವಿರುವ ಸ್ಟೋಕಹಾಮಿನ ತನಕವೂ ಹಸುರಾದ ಬಯಲು ಗಾವಲು ಎದುರಾಗುತ್ತದೆ. ಅಲ್ಲಲ್ಲಿ ಕೃಷಿಕ ಭೂಮಿ; ಪೈನ್ ಮರಗಳ ಕಾಡು. ಅದೆಷ್ಟೋ ನದಿಗಳು; ಸರೋವರಗಳು. ಈ ಸರೋವರಗಳನ್ನು ಒಂದಕ್ಕೊಂದು ಕೂಡಿಸಿ ಹಡಗಿನ ಚಲನೆಗೆ ಅನುಕೂಲಮಾಡಿದ್ದಾರೆ. ನದಿಗಳಲ್ಲೆಲ್ಲ ತೇಲುವ ಮರದ ದಿಮ್ಮಿಗಳು ಅಸಂಖ್ಯಾತವಾಗಿವೆ. ಈ ದೇಶದಲ್ಲೂ ಬೆಳೆದ ಪೈನ್ ವೃಕ್ಷಗಳ ವ್ಯಾಪಾರ ಹೆಚ್ಚಾಗಿದೆ. ಎಲ್ಲಿಯೂ ಬರಿದಾದ ನೆಲವಿಲ್ಲ; ಕಾಡು, ಪೈರು, ಹುಲ್ಲು ಗಾವಲು—ಇವುಗಳಿಲ್ಲದ ಬೀಳು ನೆಲವಿಲ್ಲ. ಬಾನಲ್ಲಿ ಆಗಾಗ ಮುಗಿಲು ಕವಿದಿರುತ್ತದೆ. ಆಗಾಗ ಸೂರ್ಯ ಕಾಣಿಸುತ್ತಾನೆ. ಹವೆಯಂತೂ ಶೀತವಾಗಿಯೇ ಇರುತ್ತದೆ.

ಸ್ವೀಡನಿನ ರೈಲುಗಳಿಗೆ ವೇಗವೂ ಅಧಿಕ. ದಾರಿಯೂ ನೇರಾದುದು. ಬಂಡಿಯಲ್ಲಿ ಬಂದು ಕುಳಿತುಕೊಳ್ಳುವ ಜನಗಳಲ್ಲಿ ಬಡತನ ಕಡಿಮೆಯೆಂದೇ ಕಾಣಿಸುತ್ತದೆ. ಸ್ವೀಡನು ಶ್ರೀಮಂತ ನಾಡು ಎಂಬ ಮಾತು ನಿಜ. ಅದು ಕಾಗದ, ಉಕ್ಕು ಮೊದಲಾದ ಹಲವು ಉದ್ಯಮಗಳಲ್ಲಿ ಮುಂದುವರಿದಿದೆ. ಅನೇಕ ಯಂತ್ರಗಳ ಉತ್ಪನ್ನಕ್ಕೆ ಹೆಸರಾದ ದೇಶವಾಗಿದೆ. ಇಲ್ಲಿನ ಜನಸಂಖ್ಯೆ ಸುಮಾರು ಏಳು ಮಿಲಿಯ. ಆ ದೇಶಕ್ಕೆ ಕಳೆದ ಮಹಾಯುದ್ಧದಿಂದ ಪೆಟ್ಟು ತಗಲಲಿಲ್ಲ. ಉಳಿದ ಯುರೋಪಿನ ರಾಷ್ಟ್ರಗಳನ್ನು ಪುನರ್ರಚನೆಯ ಸಮಸ್ಯೆ ಕಾಡಿದಂತೆ ಕಾಡಲಿಲ್ಲ. ವಿದ್ಯೆ, ವಿಜ್ಞಾನ, ಸಂಪತ್ತು ತುಂಬಿದ ದೇಶವಾದುದರಿಂದ ಜನಗಳಲ್ಲಿಯೂ ಅದರ ವರ್ಚಸ್ಸು ಹೆಚ್ಚಾಗಿ ಕಾಣುತ್ತದೆ. ಅವರಿಗೆ ತಮ್ಮ ಹಿರಿಮೆ, ಸಂಪತ್ತುಗಳ ಪ್ರತಿಷ್ಠೆಯೂ ಉಂಟೆನ್ನುತ್ತಾರೆ.

ಸ್ವೀಡನಿನ ನೆನಪು ಬಂತೆಂದರೆ—ಪ್ರಸಿದ್ಧ ವಿಜ್ಞಾನಿ ಕಾರ್ಲ್‌ಲಿನೆಯ ನೆನಪು ಬರುತ್ತದೆ. ಆತ ಪ್ರಪಂಚದ ಸಸ್ಯ ವರ್ಗವನ್ನೆಲ್ಲ ಶಾಸ್ತ್ರೀಯವಾಗಿ ವರ್ಗೀಕರಿಸಲು ದಾರಿ ತೋರಿಸಿದ ಮಹಾಪಂಡಿತ. ಇಂದಿನ ಸ್ಟೋಕ್‌ಹಾಮಿನಲ್ಲಿ ಅನೇಕ ಪ್ರಸಿದ್ಧ ಉತ್ಪನ್ನಕಾರರೂ, ವೈದ್ಯರೂ ಇದ್ದಾರಂತೆ. ನಾನು ಆ ನಗರಕ್ಕೇನೋ ಹೊರಟಿದ್ದೆ; ಹೋಗುವ ತನಕವೂ ಅಲ್ಲಿ ಏನೇನು ನೋಡಲಿಕ್ಕೆ ಇದೆಯೆಂಬುದರ ಕಲ್ಪನೆ ನನಗೇನೆ ಇರಲಿಲ್ಲ. ಆ ನಗರವನ್ನು ಸೇರುವಾಗ ಸಂಜೆಯ ಆರು ತಾಸಾಗಿತ್ತು. ಮಿತ್ರರಾದ ಡಾಕ್ಟರ ಬಾಕೆಯವರು, ಇಲ್ಲಿನ ಮ್ಯೂಸಿಕ್ ಎಕಾಡಮಿಯ ಡಿರೆಕ್ಟರರಾದ ಡಾಕ್ಟರ್ ಅನ್ಸ್‌ರ್

ಹೈಮರ್ ಎಂಬವರಿಗೆ ಒಂದು ಪತ್ರ ಕೊಟ್ಟಿದ್ದರು. ನಾನೂ ಅವರಿಗೆ ಬರೆದಿದ್ದೆ. ಆದರೆ ಊರಿಗೆ ಹೋಗಿ, ಫೋನ್ ಹಿಡಿದು ವಿಚಾರಿಸಿದಾಗ, ಆ ಮಿತ್ರರು ನಗರದಲ್ಲಿಲ್ಲವೆಂಬುದಾಗಿ ತಿಳಿಯಿತು. ಅವರು ಪ್ರಪಂಚದ ಜಾನಪದ ಗೀತ ಗಳ ಬಹುದೊಡ್ಡ ಸಂಗ್ರಹವನ್ನಿರಿಸಿಕೊಂಡಿದ್ದಾರೆಂದೂ ಕೇಳಿದ್ದೆ. ಆದರೆ ಅವರಿಲ್ಲದೆಯೆ ನಿರಾಶನಾಗುವಂತಾಯಿತು.

ರೈಲ್ವೆ ಸಿಲ್ದಾಣಕ್ಕೆ ಸಮೀಪವಾಗಿರುವ ಒಂದು ಹೊಟೇಲಿನಲ್ಲಿ ವಸ ತಿಯ ಏರ್ಪಾಟನ್ನು ಮಾಡಿದೆ. ಹೊಟೇಲು ಆ ದೇಶದ ನಾಗರಿಕರ ಸಿರಿ ವಂತಿಕೆಗೆ ತಕ್ಕುದಾಗಿತ್ತು. ಬಹು ಚೆಲುವಿನ ಚಿಕ್ಕದಾದೊಂದು ಕೊಟಡಿಯು ನನಗೆ ದೊರೆಯಿತು. ಅದೂ ನಗರ ಕೇಂದ್ರದಲ್ಲಿ. ರೈಲ್ವೆಯವರು ನಗರದ ನಕ್ಷೆ ಯನ್ನೂ, ಪ್ರೇಕ್ಷಣೀಯ ಸ್ಥಳಗಳ ವಿವರವನ್ನೂ ಒದಗಿಸಿದ್ದರು. ನಗರವೆಲ್ಲ ಕಾಲುವೆಗಳ ಬಲೆಯಂತೆ ಕಾಣುತ್ತಿತ್ತು. ಆ ಕಾಲುವೆಗಳು ಹಡಗು ಸಂಚಾ ರಕ್ಕೆ ಅನುಕೂಲವಾದುವು; ಅವುಗಳ ದಂಡೆಯಲ್ಲಿರುವ ಕಟ್ಟಡಗಳಲ್ಲಿ ಪ್ರಾಚೀನಶೈಲಿಯ ಮಾಡು, ಶಿಖರಗಳೆಲ್ಲ ಸೇರಿವೆ. ಸೂರ್ಯನ ಬೆಳಕಿಗೆ ಈ ಹಳೆಯ ಮಂದಿರಗಳು ಕಾಲುವೆಯ ನೀರಲ್ಲಿ ಕೆಡೆಯುವ ಪ್ರತಿಬಿಂಬ ಮನ ಮೋಹಕವಾದುದು. ಅದರಂತೆ ಬಾನಲ್ಲಿ ತೋರುವ ಅವುಗಳ ರೇಖೆಯೂ ಸುಂದರವಾದುದು. ಈ ವಸ್ತುಗಳ ಎಡೆಯಲ್ಲಿ, ಹಿನ್ನೆಲೆಯಲ್ಲಿ ಹಸುರು ಮರ ಗಳ ಸಮುದಾಯವೂ ಕಾಣುತ್ತದೆ; ಕೆಲವು ಗುಡ್ಡಗಳೂ ಇವೆ. ಹೀಗಾಗಿ– ನೆಲ, ನೀರು, ಬೆಟ್ಟ, ಸೌಧಗಳ ಒಂದು ಸೊಗಸಾದ ಮೇಳ ಈ ನಗರ ದೃಶ್ಯ ಗಳಿಗಿತ್ತು.

ನಗರದ ಬೀದಿಗಳು ವಾಹನ ಸಂಚಾರದಿಂದ ತುಂಬಿವೆ; ಕಾಲುವೆ ಗಳಲ್ಲಿ ಅಸಂಖ್ಯಾತ ದೋಣಿಗಳು, ಲಾಂಚುಗಳು, ಚಿಕ್ಕ ದೊಡ್ಡ ಹಡಗು ಗಳು. ನಗರದ ವಿಹಾರಿಗಳಿಗಾಗಿ ಹಲವು ಲಾಂಚುಗಳು ಸದಾ ಚಲಿಸುತ್ತಲೇ ಇರುತ್ತವೆ. ಅವುಗಳಲ್ಲಿ ಕುಳಿತು ೨೦–೩೦ ಮೈಲು ದೂರದ ನೆರೆಕರೆಯ ಊರುಗಳಿಗೂ ಹೋಗಿ ಬರಬಹುದು. ಅಂಥವುಗಳಲ್ಲಿ ಪ್ರಸಿದ್ಧ ವಿಶ್ವವಿದ್ಯಾ ಲಯವಿರುವ ಊರಾದ 'ಅಪ್ಸಾಲಾ' ಎಂಬುದೂ ಒಂದು. ಸಾಮಾನ್ಯವಾಗಿ ಈ ದೇಶದ ಕಾಲುವೆ, ಸರೋವರ, ಕಡಲುಗಳಿಂದಾಗಿ ಹೆಚ್ಚಿನ ಭೂಭಾಗಕ್ಕೆಲ್ಲ ನೆಲಮಾರ್ಗಗಳ ಸೌಕರ್ಯವಿರುವಂತೆ ಜಲಮಾರ್ಗದ ಸೌಕರ್ಯವೂ ಇದೆ. ನನ್ನ ಎರಡು ದಿವಸಗಳನ್ನು ಮಿತ್ರರ ಸಹಾಯವಿಲ್ಲದೆಯೆ, ಉಂಡಾಡಿಯಂತೆ

ಅಲೆದಾಡುವ ಪ್ರಸಂಗ ನನಗೆ. ಕೈಯ ನಕ್ಷೆಯನ್ನು, ಕಾಲುಗಳನ್ನು ನಂಬಿ ಅಲೆದಾಡತೊಡಗಿದೆ.

ಮೊದಲನೆಯ ದಿನ–ಇಲ್ಲಿನ ಹಡಗು ಕಾಲುವೆಯೊಂದರ ದಂಡೆಯಲ್ಲಿರುವ ಪುರ ಭವನವನ್ನು ನೋಡಹೋದೆ;ಅಂದರೆ ಒಸ್ಲೋ ಪುರ ಭವನ ಕಂಡ ನನಗೆ–ಪ್ರತಿ ನಗರದ ಪುರ ಭವನಗಳನ್ನು ಕಾಣುವ ಹಂಬಲವಾಗಿತ್ತು. ಈ ಪುರ ಭವನವೂ ಹಿರಿದಾದುದು; ಬಹು ಉನ್ನತವಾದುದು, ಮಗ್ಗುಲಿಗೆ ನಗರದಲ್ಲೇ ಅತ್ಯುನ್ನತವೆನಿಸುವ ಕೊತ್ತಳವೊಂದು ಇದರ ಅಂಗವಾಗಿ ನಿಂತಿದೆ. ಅದರ ತುತ್ತುದಿಯಿಂದ—ಸ್ಟೋಕ್‌ಹಾಮಿನ ಸಂಪೂರ್ಣ ದೃಶ್ಯ ಕಾಣಲು ದೊರಿಯುತ್ತದೆ. ಈ ನಗರ ಭವನದಲ್ಲಿ ಎರಡೆರಡು ಅಂತಸ್ತುಗಳಿವೆ. ವಿಶಾಲ ಚಾವಡಿಗಳಿವೆ; ಕೊಟಡಿಗಳಿವೆ. ಗೋಡೆಗಳನ್ನು ಪಿಂಗಾಣಿ (porcelein)ಯ ಚೂರುಗಳಿಂದ ಚಿತ್ರಪೂರ್ಣವಾಗಿ ಅಲಂಕರಿಸಿದ್ದಾರೆ;ಹಾಗೆಯೇ ಗಾರೆಯಲ್ಲಿ ಉತ್ಕೀರ್ಣ ಚಿತ್ರಗಳಿವೆ. ಗೋಡೆಯ ಅಲಂಕಾರ-ಚಿನ್ನದ ಮುಲಮಿನ ಪಿಂಗಾಣಿಗಳಿಂದ ಮಾಡಿದ್ದಾಗಿದೆ. ಅಂಥ ಒಂದು ಚಿತ್ರಕೆಲಸವನ್ನು ಸ್ವೀಡನಿನ ರಾಜಕುಮಾರನೊಬ್ಬ ಮಾಡಿಕೊಟ್ಟುದು. ಒಸ್ಲೋ ನಗರ ಮಂದಿರದ ಲಾಲಿತ್ಯವು ಇದಕ್ಕೆ ಬಾರದಾದರೂ, ಇದೂ ಬಹು ಚೆನ್ನಾಗಿದೆ. ಇಲ್ಲಿನ ಶೈಲಿಯು ಬೇರೆ; ಇದು ಪ್ರದರ್ಶಿಸುವ ಭಾವ ಬೇರೆ.

ಈ ಮಂದಿರದ ಹೊರಕ್ಕೆ ಬಂದರೆ—ಒಂದು ಉದ್ಯಾನವಿದೆ; ಅದಕ್ಕೆ ತಗಲಿ ಹರಿಯುವ ಕಡಲುಗಾಲುವೆ; ಅದರ ಆಚೆಗೆ ಎತ್ತರದ ಬೆಟ್ಟದ ಸೆರಗು. ಅದಕ್ಕೆ ತಗಲಿಕೊಂಡ ನಗರದ ಭಾಗಗಳು ಸುಂದರವಾಗಿ ಕಾಣಿಸುತ್ತವೆ. ಕಾಲುವೆಯ ನೀರಲ್ಲಿ ಬಿಂಬಿಸಿ ಆ ಸೌಂದರ್ಯವನ್ನು ಇಮ್ಮಡಿಸುತ್ತವೆ.

ಈ ಕಾಲುವೆಗಳ ಮಗ್ಗುಲಿಂದ ನಡೆದು ತಿರುಗಾಡಬಹುದು. ಅವನ್ನು ದಾಟಲು ಹಲವು ಸೇತುವೆಗಳಿವೆ. ನಗರದ ಕೇಂದ್ರ ಭಾಗದಲ್ಲಿಯೆ ಕಾಲುವೆಗಳ ಮಧ್ಯದ ದ್ವೀಪವೊಂದರ ಮೇಲೆ ಅನೇಕ ಪ್ರಾಚೀನ ಕಟ್ಟಡಗಳಿವೆ. ಸ್ವೀಡನಿನ ಪಾರ್ಲಿಮೆಂಟ್ ಮಂದಿರ ಅಂಥದರಲ್ಲೊಂದು. ಅದು ಬಹು ಹಿರಿಯ ಕಟ್ಟಡ. ಅಲ್ಲಿಂದ ತುಸು ಆಚೆಗೆ ಸರಿದರೆ, ತೀರ ಉನ್ನತ ಪಾಯದ ಮೇಲೆ ಕಟ್ಟಿರುವ ಅರಮನೆಯಿದೆ; ಅದು ಇನ್ನೂ ವಿಶಾಲವಾದ ತಾವು. ದೂರದ ನೋಟಕ್ಕೆ ತುಂಬ ಗಂಭೀರವಾಗಿ ಕಾಣಿಸುತ್ತದೆ; ಇಲ್ಲಿಯೇ ತುಸು ಸಮೀಪದಲ್ಲಿ ಉನ್ನತವಾದ ಹಲವು ಕಟ್ಟಡಗಳಿವೆ. ಕೆಲವು ವ್ಯಾಪಾರಿ ಮಂದಿರ

ಗಳು, ಹೊಟೇಲುಗಳೂ ಇವೆ. ಒಂದು ಹೊಟೇಲಿನ ೨೦ಅಂತಸ್ತಿನ ಮಹಡಿಯ ಮೇಲೆ ಸುಂದರವಾದೊಂದು ಉದ್ಯಾನವನ್ನು ಮಾಡಿದ್ದಾರೆ. ಈ ಎಲ್ಲವುಗಳ ಮುಂದೆ-ಬಹು ಅಗಲವಾದ ಕಾಲುವೆ; ಕಾಲುವೆ ಆಚೆಯ ಮಗ್ಗುಲಲ್ಲಿ ಭವ್ಯ ಮಂದಿರಗಳು, ಸೌಧಗಳು, ಚರ್ಚುಗಳು, ಕಾಲುವೆಯಲ್ಲಿ ಹಲವಾರು ದೇಶಗಳಿಗೆ ಹೋಗಲು ಬಂದು ನಿಂತ ಆಧುನಿಕ ಹಡಗುಗಳಿವೆ.

ಈ ಪ್ರಾಂತದ–ವಾಹನ ಸಂಚಾರವು ಬೆರಗನ್ನು ಹುಟ್ಟಿಸುವಂಥದು. ಮೋಟರುಗಳು ಸಾಲುಸಾಲಾಗಿ ಬರುತ್ತಲೇ ಇರುತ್ತವೆ. ಅವುಗಳ ಆಚೀಚಿನ ಮಗ್ಗುಲಲ್ಲಿ ಸರಿಯುವ ಸೈಕಲು ಸವಾರರೋ–ಅನಂತ. ಸಂಜೆ, ಮುಂಜಾನೆಗಳಲ್ಲಿ ಆಫೀಸು ಬಿಡುವ ಕಾಲ, ತೆರೆಯುವ ಕಾಲಗಳಲ್ಲಿ ಸೈಕಲುಗಳ ಅವಿರತ ಪ್ರವಾಹವನ್ನು ನೋಡಿದರೆ, ಈ ಓಡಾಟದಲ್ಲಿ ದಿನಕ್ಕೆಷ್ಟು ಮಂದಿ ಜೀವ ಕಳೆದುಕೊಳ್ಳುತ್ತಾರೋ ಎನಿಸಬೇಕು.

ನಗರ ಭವನವನ್ನು ನೋಡಿಕೊಂಡು ಮರಳಿದವನೇ, ಅಲ್ಲಿನ ರಾಷ್ಟ್ರೀಯ ಮ್ಯೂಸಿಯಮನ್ನು ನೋಡಲು ಹೊರಟೆ. ಇದು ಚಿತ್ರ ಮತ್ತು ಶಿಲ್ಪಗಳ ಒಂದು ಸಂಗ್ರಹ. ಈ ಸಂಗ್ರಹದ ಜತೆಗೆ ಹಳೆಗಾಲದ ಹಸ್ತಲಿಖಿತ ಗ್ರಂಥಗಳ ದೊಡ್ಡ ಸಂಗ್ರಹವೂ ಇದೆ. ಈ ಮಂದಿರವು ಕಾಲುವೆಯ ದಂಡೆಯೊಂದರ ಮೇಲಿದೆ; ಕಟ್ಟಡವೂ ದೊಡ್ಡದಾಗಿತ್ತು; ಈ ಚಿತ್ರಸಂಗ್ರಹವೂ ದೊಡ್ಡದೇ. ಯುರೋಪಿನ ಹೆಸರಾದ ಚಿತ್ರಕಾರರಲ್ಲಿ ಸ್ವೀಡಿಷ್ ಚಿತ್ರಕಾರರ ಹೆಸರನ್ನು ನಾನು ಕೇಳಿರಲಿಲ್ಲ; ಇಲ್ಲಿನ ಸಂಗ್ರಹದಲ್ಲಿ ಅಂಥವರನೇಕರ ಚಿತ್ರಗಳಿವೆ. ಅಲ್ಲಿನ ಸಂಗ್ರಹ ಯುರೋಪಿನ ಚಿತ್ರ,ಶಿಲ್ಪಗಳ ಸಂಗ್ರಹವಾಗಿತ್ತು. ರೆಂಬ್ರಾಂಡನ ಕೆಲವು ಚಿತ್ರಗಳೂ, ಅನೇಕ ಡಚ್ ಚಿತ್ರಕಾರರ ಚಿತ್ರಗಳೂ ಅಲ್ಲಿ ಪ್ರದರ್ಶನಕ್ಕಿವೆ. ದೇಶೀಯ ಚಿತ್ರಕಾರರ ಕೆಲವು ಚಿತ್ರಗಳು ನನ್ನ ಮನಸ್ಸನ್ನು ಸೆಳೆದುವು. ಅವುಗಳಲ್ಲಿ ಒಂದು–ಎಂಡರ್ಸ್ ಜೋರ್ನನ ಚಿತ್ರ–ಕಿರಿಮನೆಯೊಂದರಲ್ಲಿ ಸ್ನಾನಕ್ಕೆ ಹೊರಟ ಬರಿ ಮೈಯ್ಯ ನಾರಿಯರಿಬ್ಬರ ಚಿತ್ರವದು. ಸಮೀಪದಲ್ಲಿ ಉರಿಯುವ ಬೆಳಕಿದೆ; ಆ ಬೆಳಕಿನ ಹೊಂಬಣ್ಣ ಕೆಂಬಣ್ಣಗಳು, ನಿಂತ, ಕುಳಿತ ಈರ್ವರು ಸ್ತ್ರೀಯರ ಮೇಲೆ ಬೀಳುತ್ತ, ಅವರ ಶರೀರಕ್ಕೆ ವಿಶೇಷವಾದ ಕಾಂತಿಯನ್ನೂ ಪಾರದರ್ಶಕತೆಯನ್ನೂ ಉಂಟುಮಾಡುತ್ತದೆ. ಶರೀರದ ಚೆಲುವಿನ ಮಾಂಸವನ್ನು ಹೂವಿನಷ್ಟು ಮಿದುವಾಗಿಸಿ, ಒಂದು ಅನುಪಮ ಮೋಹಕತೆಯನ್ನು ಕಲ್ಪಿಸುತ್ತದೆ.

ಜಾಕೊಬ ಜೊರ್ಡೇನ್ ಎಂಬ ಫ್ಲೆಮಿಷ್ ಚಿತ್ರಕಾರ ಬರೆದ "ಕುರುಬನ ಆರಾಧನೆ" ಎಂಬ ಚಿತ್ರವು ಹಿರಿದೂ ಮೋಹಕವೂ ಆಗಿದೆ. ಮೇರಿಯ ಕೈಯಲ್ಲಿ ಈಗಷ್ಟೆ ಜನಿಸಿದ ಮುದ್ದು ಯೇಸುವಿದ್ದಾನೆ. ಮಗುವನ್ನು ಕಾಣಲು ನೆರೆಕರೆಯ ಜನರು ಸೇರಿದ್ದಾರೆ. ಇಲ್ಲಿ ತಾಯಿಯ ಆಂತರಿಕ ತೃಪ್ತಿಯನ್ನು ಜೊರ್ಡೇನ್ ಬಲು ಸುಂದರವಾಗಿ ಚಿತ್ರಿಸಿದ್ದಾನೆ.

ಜ್ಯೂಡಿತ ಲಿಸ್ಟರ್ ಎಂಬ ಹದಿನಾರನೆಯ ಶತಮಾನದ ಒಬ್ಬ ಚಿತ್ರಕಾರನು ಬರೆದ ಕೊಳಲೂದುವ ಹುಡುಗನ ಚಿತ್ರವೊಂದು ಅಲ್ಲಿನ ಶ್ರೇಷ್ಠ ಚಿತ್ರಗಳಲ್ಲೊಂದೆನ್ನಬಹುದು.

ಇನ್ನು ಶಿಲ್ಪಭಾಗದಲ್ಲಿ–ಸ್ವೀಡನಿನವನಾದ ಜೋರ್ ಸ್ಟ್ರಿಂಗ್‌ಬರ್ಗನು ಕಂಚಿನಲ್ಲಿ ನಿರ್ಮಿಸಿದ ಡಿಯಾನಾ ದೇವತೆಯ ವಿಗ್ರಹ ಸುಂದರವಾದುದು. ಡಿಯಾನಾ ಗ್ರೀಕ್‌ದೇವತೆ. ತನ್ನಂತೆಯೇ ಬಳುಕುವ ಶರೀರವುಳ್ಳ ಜಿಂಕೆಯೊಂದರ ಮೇಲೆ ಕುಳಿತು ಆಕೆ ಬೇಟೆಗೆ ಹೊರಟಿದ್ದಾಳೆ. ಅವಳ ಮೈಯ್ಯ ಲಲಿತ ಬಾಗುಗಳು, ಜಿಂಕೆಯ ಲಲಿತ ವಕ್ರ ರೇಖೆಗಳೊಂದಿಗೆ ಅಪೂರ್ವ ಮೇಳವಾಗಿ ಬೆರೆಯುತ್ತವೆ. ಅದೊಂದು ಕವಿತೆಯಂತೆ ಮನೋಹರವಾಗಿದೆ. ಈ ಡಿಯಾನ ಬೇಟೆಯಾಡದೆಯೆ ತನ್ನ ಕಣ್ಣಿನ ಕೂರಂಬಿನಿಂದಲೇ ಬೇಟೆಯನ್ನು ಸೆರೆಹಿಡಿಯಬಲ್ಲ ಚದುರೆಯಾಗಿ ಶಿಲ್ಪದಲ್ಲಿ ಮೂಡಿಬಂದಿದ್ದಾಳೆ.

ಈ ಚಿತ್ರಭಾಗವನ್ನು ನೋಡಿ–ಪುಸ್ತಕ ವಿಭಾಗಕ್ಕೆ ತೆರಳಿದೆ. ಕೆಲವು ಶತಮಾನಗಳಿಂದಲೂ ಯುರೋಪಿನಲ್ಲಿ ಕೈಬರಹದ ಗ್ರಂಥ ಕಲೆ ಬೆಳೆದು ಬಂದಿದೆ. ತೆಳುವಾದ ಚರ್ಮದ ಪರೆಯನ್ನು (Parchment) ಕಾಗದವಾಗಿ ಬಳಸಿ–ಅದರ ಮೇಲೆ ಸುಂದರ ಕೈಬರಹ, ಅಲಂಕಾರ, ಚಿತ್ರಗಳಿಂದ ಅನೇಕಾನೇಕ ಗ್ರಂಥಗಳನ್ನು ಬರೆದಿದ್ದಾರೆ. ನಮ್ಮ ನಾಡಿನಲ್ಲಿ ಮೊಗಲರು ಈ ಕಲೆಗೆ ಕೊಟ್ಟ ಆಶ್ರಯವನ್ನು, ಯುರೋಪಿನಲ್ಲಿ ಚರ್ಚುಗಳು ಕೊಡುತ್ತ ಬಂದಿದ್ದುವು.

ಇಲ್ಲಿನ ಮ್ಯೂಸಿಯಮನ್ನು ನೆನೆಯುವಾಗ ಮುಂದೆ ನಡೆದೊಂದು ಘಟನೆ ನನ್ನ ಸ್ಮರಣೆಗೆ ಬರುತ್ತದೆ. ಈ ಜನರು ತುಸು ಸ್ವಪ್ರತಿಷ್ಠೆಯವರು ಎಂದು ಯಾರೋ ನನಗೆ ಹೇಳಿದ್ದರು. ನಾನು ಡೆನ್‌ಮಾರ್ಕಿನಿಂದ ಜರ್ಮನಿಗೆ ಹೋಗುವಾಗ ನನ್ನ ಜತೆಯಲ್ಲಿಯೇ ಒಬ್ಬ ಸ್ವೀಡಿಷ್ ಗೃಹಸ್ಥ ಪ್ರವಾಸ ಮಾಡಿದ. ಆತನೊಡನೆ ಸಂಭಾಷಿಸುವಾಗ ಆತ "ನೀವು ನಮ್ಮ ರಾಷ್ಟ್ರೀಯ

ಮ್ಯೂಸಿಯಮ್ ನೋಡಿದ್ದೀರೇ? ಹೇಗಿದೆ, ನಿಮ್ಮ ಅಭಿಪ್ರಾಯ?" ಎಂದ. ನಾನದಕ್ಕೆ ನೇರಾದ ಉತ್ತರವನ್ನು ಸಲ್ಲಿಸದೆ ಬ್ರಿಟಿಷ್ ಚಿತ್ರಶಾಲೆಗಳ ವಿಚಾರ ವಾಗಿ ಮಾತನಾಡಿದೆ. ಅದು ಅವನ ಹೆಮ್ಮೆಯನ್ನು ತೀರ ಚುಚ್ಚಿದಂತಾ ಯಿತು. ಅವನೆಂದ "ನಮ್ಮ ಮ್ಯೂಸಿಯಮ್ ದೊಡ್ಡದು-ನಮ್ಮಲ್ಲಿ ಎರಡು ರೆಂಬ್ರಾಂಡ್‌ನ ಚಿತ್ರಗಳಿವೆ; ಬಲ್ಲಿರಾ?" ಎಂದು. ರೆಂಬ್ರಾಂಡ್ ಹಾಲೆಂಡಿನ ವನು. ಅವನ ಒಂದೊಂದು ಚಿತ್ರವೆಂದರೆ ಒಂದೊಂದು ಸಂಪತ್ತು. ಅಷ್ಟೊಂದು ಬೆಲೆಯನ್ನು ಕೊಟ್ಟೇ ಕೊಳ್ಳಬೇಕು. ಹಾಗೆ ಕೊಟ್ಟು ಕೊಂಡಂಥ ಎರಡು ಚಿತ್ರಗಳಿವೆ — ಎಂಬ ಹೆಮ್ಮೆ ಅವನಿಗೆ. ಅವನ ಹೆಮ್ಮೆಗೆ ಸಂಪತ್ತಿನ ಜಂಭವೂ ಕಾರಣವಿರಬಹುದು; ತಮ್ಮಲ್ಲಿ ಆ ಶ್ರೇಷ್ಠ ಕಲಾವಿದನ ಚಿತ್ರಗಳಿವೆ ಯೆಂಬ ಭಾವನೆಯೂ ಕಾರಣವಿರಬಹುದು. ಹೇಗೂ ಇರಲಿ-ಯುರೋಪಿನ ಜನರು ತಮ್ಮ ಕಲಾವಿದರನ್ನು ಕಾಣುವ ಗೌರವದ ಬಗೆಯಂತು ಅದರಿಂದ ಚೆನ್ನಾಗಿ ಸ್ಪಷ್ಟವಾಗುತ್ತದೆ.

ಸ್ಟೋಕ್‌ಹಾಮಿನಲ್ಲಿ ನಾನು ಕಳೆದ ದಿವಸಗಳು ಎರಡೇನೇ. ಅವನ್ನು ಪರಿಚಯದವರಿಲ್ಲದೆ ಕಳೆಯಬೇಕಾಗಿತ್ತು. ಹೊರಗಿನ ಹವೆಯು ಚಿರಿಚಿರಿ ಮಳೆ ಬರುವ ಶೀತವಾದ ಮುಗ್ಗುಲು ಹವೆ. ಮನಸ್ಸೂ ಆ ತೆರನಾಗಿ ಮುದುಡಿ ಕೊಂಡಿತ್ತು. ಮೊದಲ ದಿವಸ ಹೀಗೆ ಮನಸ್ಸು ಮುಗ್ಗುರಿಸಿದ್ದರೂ ಅದನ್ನೇ ವಿಚಿತ್ರವಾಗಿ ಬೆಳಗಿಸಿ, ಕಾವುಗೊಳಿಸಿದ ಒಂದು ಸಂದರ್ಭವನ್ನು ನಾನು ನೆನೆದಲ್ಲಿ ಈ ನಗರವನ್ನು ನಾನು ಎಂದೂ ಮರೆಯಬಾರದಾಗುತ್ತದೆ.

ನನಗೆ ಪ್ರಿಯ ಪಾನೀಯವಾದ 'ಕಫೆ'ಯನ್ನು ಅರಸಿ, ಹೊಟೇಲು ಹುಡುಕಿಕೊಂಡು ಹೋಗುವ ನನಗೆ, ಸ್ಥಳಿಕ ಭಾಷೆ ತಿಳಿಯದ ಕಷ್ಟವಿತ್ತು. ಇಂಗ್ಲಿಷಿನ coffee, koffee ಯಿಂದ Kafe ಯಾದ ಊರಿದು. Tea, 'tee' ಆಗಿತ್ತು. ಇಂಗ್ಲಿಷು ಎಲ್ಲರಿಗೂ ಅರ್ಥವಾಗದು. ಕೆಲವರೇನೋ ಆಡುತ್ತಾರೆ. ನನ್ನ ನಿವಾಸದ ಬಳಿಯ ಹೊಟೇಲೊಂದಕ್ಕೆ ಹೋಗಿ-ಕಫೆ ಕೇಳಿದೆ; ಮುಗ್ಗುಲ ಗಾಜಿನ ಮೇಜಿನಲ್ಲಿರಿಸಿದ ತಿಂಡಿಯೊಂದನ್ನು ತೋರಿಸಿದೆ- ಅದು ಪುಡಿಂಗ್ ಇರಬಹುದೆಂಬ ಭ್ರಮೆಯಿಂದ. ಅಷ್ಟಕ್ಕೆ ಅದರೊಳಗಿನ ಮೀನಿನ ತುಣುಕು ಕಾಣಿಸಿತು. ಈಚೆ ಸರಿದು ಬಂದು ಹಾಲು, ಸಸ್ಯಾಹಾರಿ ಭೋಜನ ಕೇಳಿದೆ. ಅಲ್ಲಿ ನಿಂತಿದ್ದಾಕೆಗೆ ಇಂಗ್ಲಿಷ್ ತಿಳಿದಿತ್ತು. ನನಗಾಗಿ ಬಟಾಟೆ, ಬಟಾಣಿ ಬೇಯಿಸಿ ತಂದಳು. ಮಧ್ಯಾಹ್ನ ಆ ಬಗೆಯ ಭೋಜನ ದೊರೆತುದರಿಂದ,

ಸಂಜೆಯೂ ಅಲ್ಲಿಗೇನೆ ಹೋದೆ. ಆದರೆ ಸಂಜೆ ಅಲ್ಲಿ ನಿಂತಿದ್ದ ಕೆಲಸದವಳು ಬೇರೆಯೇ. 'Milk' ಎಂದರೆ ಮುಖಮುಖ ನೋಡಿದಳು. ಬಳಿ ನಿಂತಿದ್ದವನೊಬ್ಬ 'ಹಾಲು' ಎಂದು ತಿಳಿಸಿದ. ಅವಳು ಮೇಲಿನ ಅಂತಸ್ತನ್ನು ತೋರಿಸಿದಳು. ಅಲ್ಲಿ ಊಟದ ತಾವಿತ್ತು. ಸಂಜೆಯ ವೇಳೆಯಾದುದರಿಂದ ಎಲ್ಲರೂ ಊಟವನ್ನು ತರಿಸಿ ಉಣ್ಣುತ್ತಿದ್ದರು. ನಾನು ಹೋಗಿ ಹಾಲನ್ನು ಕೇಳಿದೆ. ಅಲ್ಲಿದ್ದವಳಿಗೆ ಅದೇನೆಂದು ಹೊಳೆಯಲಿಲ್ಲ. ಆಚೀಚೆ ವಿಚಾರಿಸಿ ಅದೇನೆಂದು ತಿಳಿದುಕೊಂಡು, ಆ ಬಳಿಕ ಹಾಲನ್ನು ತಂದುಕೊಟ್ಟಳು. ನಾನು ಕುಡಿದು, ದುಡ್ಡು ಕೊಟ್ಟು, ಹೊರಟೆ.

ಹೊರಗೆ ಬಂದವನು ಮೆಲ್ಲಗೆ ದಾರಿಯನ್ನು ತುಳಿಯುತ್ತ ನೂರು ಗಜ ಸರಿದಿದ್ದೆ. ಅಷ್ಟಕ್ಕೆ ಒಬ್ಬ ಮಧ್ಯವಯಸ್ಕ ಸ್ತ್ರೀಯು ನನ್ನನ್ನು ಹಿಂಬಾಲಿಸಿಕೊಂಡು ಬಂದು, ತಡೆದು ನಿಲ್ಲಿಸಿದಳು. "ನೀವು ಹೊಟೇಲಿಂದ ಬಂದಿರಲ್ಲವೇ?" ಎಂದು ಕೇಳಿದಳು. ಅರ್ಧ ಇಂಗ್ಲಿಷು, ಅರ್ಧ ಸ್ವೀಡಿಷ್ ಭಾಷೆಯಲ್ಲಿ "ಹೊಟೇಲು" ಎಂಬ ಪದವನ್ನು ಕೇಳಿ–ನನ್ನ ನಿವಾಸದ ಹೊಟೇಲು ಎದುರಿಗೇನೆ ಇರುವುದನ್ನು ತೋರಿಸಿದೆ. ಆಗ ಅವಳು "ಹಾಗಲ್ಲ, ನೀವು ಹೊಟೇಲಿಗೆ ಬಂದಿರಿ; ಊಟದ ಮನೆಯಿಂದ ಊಟ ಮಾಡದೆ ಮರಳಿದಿರೇಕೆ? ಕೈಯ್ಯಲ್ಲಿ ಹಣವಿದ್ದಿರಲಿಲ್ಲವೇ" ಎಂದು ತನ್ನ ಚೀಲ ತೆರೆದು ಹಣಕೊಡಲು ಮುಂದಾದಳು. ನಾನು ಅಲ್ಲಿ ಒಂದೆರಡು ನಿಮಿಷ ನಿಂತುದನ್ನು ಆಕೆ ಕಂಡಿದ್ದಳು. ಹಾಲು ಕುಡಿದುದನ್ನು ಕಂಡಿರಲಾರಳು. ಊಟದ ಮನೆಯಿಂದ ಬರಿದೆ ಹೊರಡಲು ಏನು ಕಾರಣವೆಂದು ಊಹಿಸಿ, ನನ್ನನ್ನು ಅರಸಿಕೊಂಡು ಸಹಾಯಮಾಡಲು ಅವಸರಿಸಿ ತಾನಾಗಿ ಓಡಿಬಂದಳು.

ಒಂದು ಕ್ಷಣಕ್ಕೆ ನನ್ನ ಮೈ ಜುಮ್ಮೆಂದಿತು. ನಾನು ಆಕೆಯ ವಿಶಾಲ ಅಂತಃಕರಣವನ್ನು ಕಂಡು ಶಿಶುವಾದೆ. "ಇಲ್ಲ–ನಾನು ಹಾಲನ್ನು ಕುಡಿದು ಬಂದೆ" ಎಂದು ಸಮಾಧಾನ ಹೇಳಿದೆ. ಆಕೆ ಕೂಡಲೆ ಮರಳಿದಳು. ಈಬಗೆಯ ಔದಾರ್ಯವನ್ನು ನಮ್ಮ ಜೀವನದಲ್ಲೆಷ್ಟು ಬಾರಿ ಕಾಣಬಹುದು? ಪಾಶ್ಚಾತ್ಯರೆಲ್ಲ ಲೌಕಿಕರು–ಎಂದು ಒಂದೇ ಉಸಿರಿಗೆ ಹೇಳುವ ನಾವು, ಇಂಥ ಉದಾರ ಅಂತ:ಕರಣವು ಐಹಿಕವೇ, ಪಾರಮಾರ್ಥಿಕವೇ ಎಂದು ಹೇಳಬಹುದೇ?

ಮೊದಲ ದಿನ ಕಳೆಯಿತು. ಮರುದಿನ ಬೆಳಗ್ಗೆ ಉಪಾಹಾರ ಮುಗಿಸಿ ನಗರದ ಇನ್ನಿತರ ಭಾಗಗಳನ್ನು ನೋಡಲು ಹೊರಟೆ. ಅಲ್ಲಿನ ಮುಖ್ಯ

ಬೀದಿಗಳನ್ನು ತುಳಿಯುತ್ತ, ಆಚೀಚೆ ಇರುವ ಅಂಗಡಿಗಳ ಪ್ರದರ್ಶನ ನೋಡುತ್ತ ಹೊರಟೆ. ಸುಮಾರು ನಾನು ನಡೆದ ಎರಡು ಮೈಲುಗಳ ದಾರಿಯಲ್ಲಿ ಸಾವಿರಾರು ಅಂಗಡಿಗಳಿದ್ದುವು. ಅವುಗಳಲ್ಲಿ ಸಾಮಾನುಗಳ ವೈವಿಧ್ಯವಿತ್ತು. ಉಡುಗೆ ತೊಡುಗೆಗಳ ಪ್ರದರ್ಶನ ವಿಶೇಷವಾಗಿತ್ತು. ಅದಕ್ಕಿಂತ ನಾನು ನೋಡಲು ಇಷ್ಟಪಟ್ಟ ಸಂಗತಿಯೆಂದರೆ-ಅಲ್ಲಿನ ದೇಶೀಯ ಯಂತ್ರೋದ್ಯಮ ಮೊದಲಾದುವನ್ನು. ಸ್ವೀಡನಿನಲ್ಲಿ, ತಯಾರಾದ—ವಿದ್ಯುತ್ ಸಲಕರಣೆಗಳು ಯಂತ್ರಸಲಕರಣೆಗಳು (Machine tools) ಇವನ್ನೆಲ್ಲ ನೋಡುತ್ತ ಹೋದೆ. ಆ ದೇಶವು ಯಂತ್ರೋದ್ಯಮ, ಲೋಹ ಕಾಮಗಾರಿಗಳಲ್ಲಿ ಮುಂದುವರಿದುದಕ್ಕೆ ಬೇಕಷ್ಟು ದೃಷ್ಟಾಂತಗಳು ಈ ಅಂಗಡಿಯಲ್ಲಿ ದೊರಕಿದುವು. ದೇಶ ಸಿರಿವಂತ ದೇಶವೆಂದು ಜನರೂ, ಅಂಗಡಿಗಳೂ, ಕಟ್ಟಡಗಳೂ ಸಾರಿ ಹೇಳುವಂತಿತ್ತು. ಹಾಗೆಯೇ ಮುಂದುವರಿದು ಒಂದು ಚೌಕಕ್ಕೆ ಬಂದೆ; ಅಲ್ಲಿಂದ ರೈಲು ಬಂಡಿ ಹಿಡಿದು ನಗರದ ಹೊರಭಾಗದಲ್ಲಿರುವ ಪ್ರಸಿದ್ಧ ನೆಚ್ಯುರಲ್ ಹಿಸ್ಟರಿ ಮ್ಯೂಸಿಯಂ ನೋಡಲು ಹೊರಟೆ. ಈ ವಿದ್ಯುತ್ತಿನ ರೈಲು, ಟ್ರಾಮಿನಂತೆಯೆ ನಗರದೊಳಕ್ಕೇನೆ ಬಂದು ನಿಂತಿತ್ತು. ಬಂಡಿಯನ್ನೇರಿದ ಬಳಿಕವೇ ನಮಗೆ ಟಿಕೇಟು ಕೊಡುವ ವ್ಯವಸ್ಥೆಯಿತ್ತು. ಆ ಬಂಡಿಯಲ್ಲಿ ಸುಮಾರು ಅರ್ಧತಾಸಿನ ಹಾದಿ ಸಾಗಿ, ನಗರದ ಸುಂದರವಾದೊಂದು ವಿಸ್ತರಣವನ್ನು ಸೇರಿದೆ. ನಿಲ್ದಾಣಕ್ಕೆದುರಾಗಿಯೇ ವಿಶೇಷವಾದೊಂದು ಸೌಧ ಕಾಣಿಸಿತು. ಅದೇನೆ ಮ್ಯೂಸಿಯಮ್ ಇರುವ ತಾವು. ಆಚೀಚಿನ ಕಟ್ಟಡಗಳು ದೇಶೀಯ ವಾಸ್ತು ಶೈಲಿಯವು; ಮರಗಿಡಗಳ ಎಡೆಯಲ್ಲಿ ಬಲು ಚೆಲುವಾಗಿ ಕಾಣಿಸುತ್ತಿದ್ದುವು. ಈ ಮ್ಯೂಸಿಯಮ್ ಯುರೋಪಿನಲ್ಲಿ ಹೆಸರಾದ ಸಂಗ್ರಹಾಲಯಗಳಲ್ಲೊಂದು. ನಗರದ ಹೊರಗಡೆ ಇರುವುದರಿಂದಲೋ ಏನೋ, ಬ್ರಿಟನಿನ ನೆಚ್ಯುರಲ್ ಹಿಸ್ಟರಿ ಸಂಗ್ರಹಾಲಯವನ್ನು ಕಾಣಲು ಬರುವಂಥ ಜನ ಸಂದಣಿಯಿರಲಿಲ್ಲ

ಇಲ್ಲಿನ ಸಂಗ್ರಹದ ಮೃಗ, ಪಕ್ಷಿಗಳ ಸಂಖ್ಯೆ ವಿಶೇಷವೂ ವಿಸ್ತಾರವೂ ಆದುದು. ಲಂಡನಿನಲ್ಲಿರುವುದಕ್ಕಿಂತ ಸಂಖ್ಯೆಯಲ್ಲಿ ಹೆಚ್ಚೆಂದೇ ಹೇಳಬೇಕು. ಅದಲ್ಲದೆ— ಜಿಂಕೆಯ ಬಳಗ, ಕಾಡುಹಂದಿಯ ಗುಂಪು, ಕಪಿ ಬಳಗಗಳು ತೀರ ದೊಡ್ಡ ಸಂಗ್ರಹಗಳು. ಅಲ್ಲಿ ಕಂಡ ದಕ್ಷಿಣ ಅಮೇರಿಕದ ಕಾಡು ಹಂದಿಯೊಂದರ ಗಾತ್ರ, ಭುಜಕ್ಕೆ ಮೂರೂವರೆ ಅಡಿಯಷ್ಟು ಎತ್ತರವಾಗಿತ್ತು.

ಹಿಂದಿನ ಕಾಲದ ದಂತ ಕತೆಗಳಲ್ಲಿನ ಗಾತ್ರ, ಉಗ್ರತೆಗಳನ್ನು ತೋರುವ ಹಂದಿಗಳ ರೂಪ ನಾನು ನೋಡಿದುದು ಇಲ್ಲೇನೆ.

ಕಪಿ ವರ್ಗದಲ್ಲಿಯೂ ವಿಶೇಷವಾದ ವೈವಿಧ್ಯವಿತ್ತು. ಅದರಲ್ಲೊಂದು ಜಾತಿಯದು-ಸಾಮಾನ್ಯ ನಮ್ಮೂರಿನ ಕಪಿಯ ಆಕೃತಿಯದು. ಮುಸುವನ ಮುಖ, ಮೈತುಂಬ ಸ್ಪೆನಿಯಲ್ ನಾಯಿಗಳಿಗಿರುವಂತಹ ಜೂಲುಗೂದಲು, ಬೆನ್ನಿನ ಮೇಲೆ, ಬಾಲದ ತುದಿಯ ತನಕವೂ ಬೆಳೆದಿರುವ ತೂಗುವ ಬಿಳಿಯ ಜೂಲು ಕೂದಲು.

ಇಲ್ಲಿ ಸಂಗ್ರಹಿತವಾದ-ಗೋರಿಲ್ಲಾ ಬಳಗವು ಆಫ್ರಿಕದ ಎರಡೆರಡು ಬಗೆಯ ದೈತ್ಯ ರೂಪಿ ಗೋರಿಲ್ಲಾಗಳಿಂದ ಕೂಡಿದ್ದು ವಿಸ್ಮಯಕಾರಿಯಾಗಿದೆ. ಈ ಎಲ್ಲ ಸಂಗ್ರಹ ವಿಶಿಷ್ಟವಾಗಿ ಕಾಣಿಸಿದರೂ, ಪ್ರಾಣಿಗಳ ಶರೀರಗಳನ್ನು ತುಂಬಿಸಿ ಹೊಲಿದ ಬಗೆ ಚೆನ್ನಾಗಿರಲಿಲ್ಲ. ಅಲ್ಲದೆ ವೈಜ್ಞಾನಿಕ ದೃಷ್ಟಿಯಿಂದ ಅವನ್ನು ವಿಭಾಗಿಸಿದ್ದು ಸಾಲದಾಗಿದೆ.ಪ್ರಾಯಶಃ ಹಾಗೆ ವಿಭಾಗಿಸಿ ತೋರಿಸುವಲ್ಲಿ ಇದರ ಇಮ್ಮಡಿಯಷ್ಟು ಸ್ಥಳ ಬೇಕಾದೀತು. ನಾನಿಲ್ಲಿ ನೋಡಿದ ಜಲಚರ, ಉರಗ ವಿಭಾಗಗಳಲ್ಲಿ-ತೀರ ಒತ್ತೊತ್ತಾಗಿ ಅವನ್ನು ಇರಿಸಿದ್ದನ್ನು ಕಂಡರೆ ಸ್ಥಳಾಭಾವ ತುಂಬ ಇದ್ದಂತೆ ಕಾಣುತ್ತದೆ.

ಇಲ್ಲಿನ ಧ್ರುವವಲಯದ ಪ್ರಾಣಿಗಳ ಸಂಗ್ರಹ ವಿಶೇಷವಾಗಿತ್ತು. ಅವುಗಳಲ್ಲಿ ಕಡಲು ಸಿಂಹ, ಕಡಲು ದನ ಮೊದಲಾದುವನ್ನೂ, ಕೆಲವು ಜಿಂಕೆಗಳನ್ನೂ ನೈಸರ್ಗಿಕ ಹಿನ್ನೆಲೆಯೊಡನೆ, ದೂರ ದೂರವಾಗಿ ಪ್ರದರ್ಶಿಸಿದ್ದಾರೆ. ಒಂದು ಕಡಲು ಸಿಂಹದ ಉದ್ದವೇ ಸುಮಾರು 20 ಅಡಿಗಳಷ್ಟಿದ್ದುದನ್ನು ಕಂಡು ಬೆರಗಾದೆ.

ಈ ಸಂಗ್ರಹಾಲಯದಲ್ಲಿ ಕೂಡಿಸಿದ-ಪ್ರಪಂಚದ ಪಕ್ಷಿಗಳ ಸಂಖ್ಯೆ ಬಹು ದೊಡ್ಡದಾದರೂ, ಅವುಗಳ ವರ್ಗೀಕರಣ ಅಷ್ಟೊಂದು ಬೋಧಪ್ರದವಾಗಿರಲಿಲ್ಲ. ಹೀಗೆಯೇ ನಾನು ಕೆಳಗಿನ ಅಂತಸ್ತನ್ನು ನೋಡಿಕೊಂಡು, ಮೇಲಿನ ಅಂತಸ್ತಿನಲ್ಲಿ ಕೂಡಿರಿಸಿದ-ಪ್ರಾಚೀನ ಪ್ರಾಣಿಗಳ ಅವಶೇಷಗಳನ್ನು ನೋಡಹೋದೆ. ಈ ವಿಭಾಗದಲ್ಲಿ ಹೆಪ್ಪುಗಟ್ಟಿದ ಶಿಲೆಯಲ್ಲಿ ಅಚ್ಚೊತ್ತಿದ ಪ್ರಾಣಿಗಳ ವಸ್ತು ಸಂಗ್ರಹ ವಿಸ್ತಾರವಾಗಿತ್ತು. ಅಲ್ಲದೆ ಅನೇಕ ಹಿಮಯುಗದ ಕಾಲದ ಪ್ರಾಣಿಗಳ ಅಸ್ಥಿಪಂಜರಗಳೂ ಇದ್ದುವು.

ಹೀಗೆ ನಾನು ಎರಡು ಮೂರು ಘಂಟೆಗಳ ಕಾಲವನ್ನು ಈ ಸಂಗ್ರಹ

ನೋಡುವುದರಲ್ಲಿ ಕಳೆದು, ಹೊರಕ್ಕೆ ಬಂದು, ರೈಲನ್ನೇರಿ ನಗರಕ್ಕೆ ಹಿಂದಿರುಗಿ ಬಂದೆ. ನಿವಾಸಕ್ಕೆ ಮರಳುವ ದಾರಿಯಲ್ಲಿ ದೊಡ್ಡದೊಂದು ಹೂ ಮಾರಾಟದ ಸಂತೆ ನೆರೆದಿತ್ತು. ಅದರಲ್ಲಿ ಮಾರಾಟಕ್ಕಿರಿಸಿದ ಹೂವುಗಳ ಬೆಡಗಾಗಲಿ, ಪ್ರಮಾಣವಾಗಲಿ ಸ್ವಲ್ಪವಲ್ಲ. ಇಷ್ಟೆಲ್ಲ ಹೂವುಗಳು ಖರ್ಚಾಗದಾವೇ–ಎಂಬ ಬೆರಗು ಉಂಟಾಗಬೇಕು. ಈ ಸಂತೆಗೆ ಸಮೀಪದಲ್ಲಿಯೆ ಒಂದು ಸುಂದರ ಕಾರಂಜಿಯಿದೆ. ಕಾರಂಜಿಯ ಕೇಂದ್ರದಲ್ಲಿ–ಒಂದು ಸುಂದರವಾದ ಕಂಚಿನ ಪ್ರತಿಮೆಯ ಮುಖದಿಂದ ನೀರು ಚಿಮ್ಮುತ್ತದೆ. ಸುತ್ತಲು ಹತ್ತಾರು ಮನುಷ್ಯ ಗಾತ್ರದ ಕಂಚಿನ ನಾರಿಯರು ಸ್ನಾನಮಾಡುತ್ತಾ ನಿಂತಿದ್ದಾರೆ. ಈ ಗುಂಪು ಲಾಲಿತ್ಯದ ದೃಷ್ಟಿಯಿಂದ ಅತಿ ಸುಂದರವಾಗಿದೆ. ಆದರೆ ಅದನ್ನು ನಿಲ್ಲಿಸಿದ ಸ್ಥಳ ಮಾತ್ರ–ವಾಹನ ಸಂಚಾರ, ಜನದಟ್ಟಣೆ, ಕಟ್ಟಡಗಳ ಸಾಮೀಪ್ಯವಿರುವಲ್ಲಿ. ಆದುದರಿಂದ–ಎಷ್ಟೊಂದು ಚೆನ್ನಾಗಿ ಕಾಣಿಸಬಹುದೋ, ಆ ನೋಟವನ್ನೂ ಅಪಹರಿಸಿದಂತಾಗಿದೆ.

ಆ ಮಧ್ಯಾಹ್ನವೆಲ್ಲ ನನಗೆ ತೆರವು. ನಾನು ಓದಿಕೊಂಡ ಸ್ಥಳಗಳನ್ನೆಲ್ಲ ಸುತ್ತಿಸುಳಿದು ನೋಡಿ ಬಂದಾಯಿತು. ಹವೆಯಂತು ಶೀತವಾಗಿತ್ತು. ಆಗಾಗ ಬಿಸಿಲಿನ ಎಡೆಯಲ್ಲಿ ಹನಿಮಳೆಯೂ ಉದುರುತ್ತಿತ್ತು. ಕುಳಿತಿರಲಾರದುದಕ್ಕೆ ಇನ್ನೊಮ್ಮೆ ನಗರದ ಕಾಲುವೆಗಳ ಅಂಚನ್ನು ತುಳಿಯುತ್ತ, ಮೈಗಳ್ಳ ಶುಹಾನುಭಾವನಾಗಿ ಅಲೆದಾಡತೊಡಗಿದೆ. ಸಂಜೆಯ ತನಕ ಇದೇ ಕೆಲಸ. ಸಂಜೆಯಾಗುತ್ತಲೇ ನನ್ನ ಪೆಟ್ಟಿಗೆಯನ್ನು ಎತ್ತಿಕೊಂಡು ರೈಲು ನಿಲ್ದಾಣವನ್ನು ಸೇರಿದೆ. ಆ ರಾತ್ರಿಯೇ ನಾನು ಮುಂದಣ ನಗರವಾದ ಕೊಪನ್‌ಹೇಗನಿಗೆ ಹೋಗಲು ರೈಲಿನಲ್ಲಿ ಮಲಗುವ ಸ್ಥಳ ಕಾದಿರಿಸಿದ್ದೆ. ಆದರೆ ಅಲ್ಲಿಗೆ ಹೋಗಿ ನೋಡುವಾಗ, ಪ್ರಮಾದದಿಂದ ನಾನು ಕಾದಿರಿಸಿದ ತಾರೀಕು ಮರುದಿನವೆಂಬುದಾಗಿ ಬರೆದಿತ್ತು. ಸರಿ, ಅದನ್ನು ರದ್ದುಗೊಳಿಸಿ, ನನ್ನ ನಿಶ್ಚಯದಂತೆಯೆ, ಆ ರಾತ್ರಿ ಹೊರಡುವ ಬಂಡಿಯಲ್ಲಿಯೇ ಹೋಗಿ ಕುಳಿತೆ. ಅದು ರೋಮ್ ನಗರಕ್ಕೆ ಹೋಗುವ ಅಂತರ್ರಾಷ್ಟ್ರೀಯ ಬಂಡಿ. ಮೂರನೆಯ ವರ್ಗದವರ ಸಲುವಾಗಿ ಮಿತವಾಗಿ ಸ್ಥಳಗಳಿದ್ದುವು. ನನಗೆ ಕುಳಿತಿರಲು ಸ್ಥಳವೇನೋ ದೊರೆಯಿತು. ಮಲಗುವ ಅವಕಾಶ ದೊರೆಯದಾಯಿತು.

ರಾತ್ರಿಯಲ್ಲಿ—ನಮ್ಮ ಕೋಣೆಯಲ್ಲಿ ಕುಳಿತ ಆರುಮಂದಿಗೆ ಕುಳಿತೇ ತಪಸ್ಸು ಮಾಡುವ ಕೆಲಸವಾಯಿತು. ಚಳಿಯೋ! ಘಂಟೆ ಸರಿದಂತೆ ಹೆಚ್ಚು

ತ್ತಿತ್ತು. ಹೊರಗಡೆ ಬೆಳಕು ತುಂಬಿಕೊಂಡಿತ್ತು. ಅಂತು ರಾತ್ರಿಯೆಂಬುದು ಕಠಿಣ ತಪಸ್ಸು ಅನಿಸಿತು. ದಾರಿಯು ಸಮತಟ್ಟಾದ ಮಾರ್ಗ. ನನಗೆ ಹೊರಗೆ ಇಣಿಕಿ ನೋಡುವ ಕುತೂಹಲವಿರಲಿಲ್ಲ. ಹೊರಗಣ ನೋಟ ಗಾಜಿನ ಕಿಟಕಿಯೊಳಗೆ ಕುಳಿತ ನಮಗೆ, ಮುಸುಕು ಮುಸುಕಾಗಿ ಕಾಣಿಸುತ್ತಿತ್ತು. ಪೈನ್ ಮರಗಳ ಛಾಯೆ,ಅಲ್ಲಲ್ಲಿ ರೈಲುದಾರಿಯಲ್ಲಿದ್ದ ಮನೆ, ನಗರಗಳ ವಿದ್ಯುದ್ದೀಪಗಳು ಬೆಳಗಿನ ತನಕವೂ ಕಾಣಿಸುತ್ತಿದ್ದುವು. ಬೆಳಗಿನ ಏಳು ಘಂಟೆಯ ವೇಳೆಗೆ ನಮ್ಮ ಬಂಡಿ ಸ್ವೀಡನಿನ ಗಡಿಯೂ, ರೇವೂ ಆದ ಮಾಲ್ಮೋವಿಗೆ ಬಂದಿತು. ಅದು ರೇವಿಗೆ ಬಂದೊಡನೆಯೇ ಬಂಡಿಯಿಂದಿಳಿದು ನಮ್ಮ ಪಾಸುಪೋರ್ಟುಗಳಿಗೆ ಮುದ್ರೆಯೊತ್ತಿಸಿಕೊಂಡು, ಸಂಡೆಯ ಬಳಿ ನಿಂತ ಹಡಗನ್ನೇರಿದೆವು. ನಮ್ಮ ರೈಲು ಬಂಡಿಯೂ ಆ ನಾವೆಯ ಗರ್ಭವನ್ನು ಸೇರಿತು.

ಬೆಳಗಿನ ವೇಳೆ,ಕಡಲು ಶಾಂತವಾಗಿತ್ತಾದರೂ ಚಳಿ ಕೊರೆಯುತ್ತಿತ್ತು. ಮಂಜು ಕಡಲನ್ನೆಲ್ಲ ಮುಸುಕಿಕೊಂಡಿತ್ತು. ಒಳಗಿನ ವಿಶ್ರಾಂತಿ ಗೃಹದಲ್ಲಿ ಮುಂಚಿತವಾಗಿ ಹೋಗಿ ಕುಳಿತವರು ಕೊನೆಯ ತನಕವೂ ಹೊರಗೆ ಬರಲಿಲ್ಲ. ನಾವು ಹೊರ ಡೆಕ್ಕಿನಲ್ಲಿ ನಡುಗುತ್ತ ನಿಂತಿರುವುದಾಯಿತು. ನನ್ನ ಮಗ್ಗುಲಲ್ಲಿ ಕುಳಿತ ಇಬ್ಬರು ಫಿನ್ನಿಷ್ ದಂಪತಿಗಳು ನನ್ನನ್ನು ಮಾತನಾಡಿಸಿದರು. ಸದ್ಯವೇ ಜರಗಲಿರುವ ಹೆಲ್ಸಿಂಕಿಯ ಒಲಂಫಿಕ್ ಪಂದ್ಯಾಟಕ್ಕೆ ನಾನು ಬರುವುದಿಲ್ಲವೇ—ಎಂದು ಕೇಳಿದರು. ಅವರಲ್ಲಿ ಆಕೆಗೆ ಇಂಗ್ಲಿಷ್ ಭಾಷೆ ಬರುತ್ತಿತ್ತು. ತುಂಬ ಮಾತನಾಡಿದಳು. ಹಾಗೆಯೇ ಚೊಕ್ಲೆಟ್ ಡಬ್ಬಾ ತೆಗೆದು ತಿನ್ನುವುದಕ್ಕೂ ಕೊಟ್ಟಳು. ಈ ಬಗೆಯಲ್ಲಿ ಸಮಯ ಸರಿದು,ಒಂದು ತಾಸು ಸುಮಾರು ಕಳೆಯಲು, ದೂರದ ಕೊಪನ್‌ಹೇಗನ್ ನಗರದ ಬಾನಂಚು ಹಿಮದಲ್ಲಿ ಮುಸುಕು ಮುಸುಕಾಗಿ ಕಾಣಿಸತೊಡಗಿತು. ಆ ರೇವಿನ ದಂಡೆಯಿಂದ ಹಿಮದ ಎಚ್ಚರಿಕೆ (Fog-alarm) ಕೇಳಿಸುತ್ತಲೇ ಇತ್ತು. ಹಡಗು ಬಲು ಎಚ್ಚರದಿಂದ ರೇವನ್ನು ಸೇರಿ, ನೆಲದ ದಂಡೆಗೆ ತಾಗಿ ನಿಂತಿತು. ನಾನು ನನ್ನ ಸಾಮಾನುಗಳನ್ನು ಹಿಡಿದುಕೊಂಡು ಸುಂಕದ ಮನೆಯನ್ನು ಸೇರಿದೆ;ವೀಸಾ, ಪಾಸುಪೋರ್ಟುಗಳನ್ನೆಲ್ಲ ತೋರಿಸಿ, ತಿರುಗಿ ರೈಲಿನಲ್ಲಿ ಕುಳಿತೆ. ಇನ್ನೇನು? ಒಂದೆರಡು ಮೈಲು ದೂರವಿದೆಯಷ್ಟೆ ಕೇಂದ್ರ ರೈಲು ನಿಲ್ದಾಣಕ್ಕೆ. ಅಲ್ಲಿಗೆ ಆ ದಿನದ ಪಯಣದ ಕೊನೆ.

## ೧೦. ಕಿರಿಯ ದೇಶವೆನಿಸಿದರೂ

ಡೆನ್‌ಮಾರ್ಕಿನ ಪೂರ್ವ ಪರಿಚಯ ನನಗಿರಲಿಲ್ಲ; ಅಲ್ಲೇನು ಕಂಡೇನು ಎಂಬ ಊಹೆಯೂ ನನಗುಂಟಾಗಿರಲಿಲ್ಲ. ಆ ದೇಶ ಕಿರಿದು; ಬಡ ದೇಶವಾಗಿರಲೂ ಬಹುದೆಂಬ ಊಹೆ. ಪ್ರಬಲ ಜರ್ಮನ್ ಸೇನೆಗಳ ಮುಂದೆ ಅದು ಕಳೆದ ಮಹಾಯುದ್ಧದಲ್ಲಿ ಕುಸಿದು ಬಿದ್ದ ಬಗೆಯನ್ನು ಕಂಡ ನಮಗೆ ಅದರ ವಿಷಯದಲ್ಲೊಂದು ಆಸಕ್ತಿ, ಅಭಿಮಾನಗಳುಂಟಾಗುವುದು ಸಾಧ್ಯವಿರಲಿಲ್ಲ. ಆದರೆ ಡೆನ್‌ಮಾರ್ಕಿನ ರಾಜಕುಮಾರ ಹೆಮ್ಲೆಟ್‌ನ ಸಲುವಾಗಿ ಶೇಕ್ಸ್ಪಿಯರ್ ಒಂದು ಅಮರ ನಾಟಕವನ್ನು ಬರೆದಿದ್ದಾನೆ. ಹೆನ್ಸ್ ಎಂಡರ್ಸನ್ ಆ ದೇಶದವನು; ಮಕ್ಕಳ ಸ್ವಪ್ನ ಸುಖ ಸಾಮ್ರಾಜ್ಯವನ್ನು ವಿಸ್ತರಿಸಿದ ಕೀರ್ತಿಶಾಲಿ ಸಾಹಿತಿ. "ಫೇರಿ ಟೇಲ್ಸ್" ಎಂದರೆ ಅವಕ್ಕೆ ಅರಸನೆಂದೇ ಈತನ ಹೆಸರನ್ನು ಹೇಳಬೇಕು.

ಡೆನ್‌ಮಾರ್ಕ್-ಎರಡು ಹಿರಿಯ ಮತ್ತು ಅನೇಕ ಕಿರಿಯ ದ್ವೀಪಗಳು ಯುರೋಪಿನಿಂದ ಚಾಚುವ ಜಡ್‌ಲೆಂಡ್ ಭೂಭಾಗದೊಡನೆ ಸೇರಿಕೊಂಡು ಉಂಟಾದ ದೇಶವಾಗಿದೆ. ಬಾಲ್ಟಿಕ್ ಸಮುದ್ರದ ಕಾವಲಿಗೆ ನಿಂತಂತಿದೆ ಈ ದೇಶ. ಅದರ ರಾಜಧಾನಿಯಾದ ಕೋಪನ್‌ಹೇಗನ್ ಒಂದು ದ್ವೀಪದ ಮಧ್ಯದಲ್ಲಿದೆ. ಆಚಿನ ಜಟ್‌ಲೆಂಡಿಗೆ ಅಲ್ಲಿಂದ ೨೦ ಮೈಲು ದೂರ; ಈಚಿನ ಸ್ವೀಡನಿಗೆ ಅಷ್ಟೇ ದೂರ. ಯುರೋಪಿನ ಇತರ ರಾಷ್ಟ್ರಗಳ ಮಾನದಿಂದ ಅದು ಬಡ ದೇಶ. ಅಂಥಲ್ಲಿ ಜನರು ಹೇಗೆ ಬದುಕುತ್ತಿದ್ದಾರೆ ಎಂದು ನೋಡುವ ಕುತೂಹಲವಷ್ಟೆ ನನಗೆ. ಈ ಭೂಭಾಗ ಇಷ್ಟುಷ್ಟು ಏರು ತಗ್ಗಿಲ್ಲದ ಸಮತಟ್ಟಾದ ಬಯಲುಭೂಮಿ. ಹೆಚ್ಚು ಕಡಿಮೆ ಹಾಲೆಂಡ್, ಇಂಗ್ಲೆಂಡುಗಳಂತೆ ಮುಗಿಲು ಕವಿದ ನಾಡು; ರೈ, ಗೋಧಿಗಳು ಇಲ್ಲಿನ ಮುಖ್ಯ ಬೆಳೆಗಳು. ಅದರ ಜತೆಗೆ ಹಾಲುಹಯನಿನ ತಯಾರಿ, ಹಂದಿಗಳ ಸಾಕಣೆ ಬಹು ಜನಗಳಿಗೆ ಜೀವನಾಧಾರವಾಗಿದೆ. ಅಲ್ಲಿಗೆ ನಾನು ಹೋಗುವ ತನಕವೂ—ಇದೂ ಅನೇಕ ಉದ್ಯಮಗಳಲ್ಲಿ ಮುಂದುವರಿದಿರಬಹುದಾದ ರಾಜ್ಯ; ಬಡ ಜನಗಳ ಜೀವನ ಉತ್ತಮ ಆಡಳಿತೆಯಿಂದ ಭಯ ಭೀತಿಯಿಲ್ಲದೆ ಸಾಗೀತೆಂದು ನನಗೆ ಅನಿಸಿರಲಿಲ್ಲ. ಇಲ್ಲಿನ ಜನಸಂಖ್ಯೆಯು ೩,೦೦೦,೦೦೦. ಅದರಲ್ಲಿ ಕಾಲಂಶದಷ್ಟು ಕೋಪನ್‌ಹೆಗನ್ ನಗರದಲ್ಲಿಯೇ ವಾಸವಾಗಿದೆ. "ಕೋಪನ್‌ಹೇಗನ್"

ಎಂಬ ಹೆಸರು ಇಂಗ್ಲಿಷಿನಿಂದ ನಮಗೆ ದೊರಕಿದ ನಾಮಾಂಕಿತ. ಅಲ್ಲಿಯ ಹೆಸರು "ಕೊಬೆನ್‌ಹೇವ್ನ್";ವ್ಯಾಪಾರದ ರೇವು-ಎಂದು. ಈ ನಗರವುದೇಶದ ರಾಜಧಾನಿಯೂ ಅಹುದು; ಬಹುದೊಡ್ಡ ವ್ಯಾಪಾರದ ಕೇಂದ್ರವೂ ಅಹುದು.

ನಗರದ ಹಿರಿಯ ರೈಲು ನಿಲ್ದಾಣದಲ್ಲಿಳಿದವನೇ, ಇನ್ ಫರ್ಮೇಶನ್ ಆಫೀಸು ಹುಡುಕಿಕೊಂಡು ಹೋಗಿ, ಅವರ ಮೂಲಕ ನಗರ ಮಧ್ಯದ ಒಂದು ಹೊಟೇಲಿನಲ್ಲಿ ನಿವಾಸವನ್ನು ದೊರಕಿಸಿಕೊಂಡೆ. ಅಲ್ಲೇನೆ, ಒಂದು ಪ್ರವಾಸದ ಕಂಪೆನಿಯವರಿಂದ–ಆ ಮಧ್ಯಾಹ್ನ ನಗರ ಸಂಚಾರಕ್ಕಾಗಿ ಟಿಕೇಟನ್ನೂ ಕಾದಿರಿಸಿದೆ. ನಾನು ಡಾ। ಪಾಲ್ ಬೊರೂಪ ಎಂಬ ಒಬ್ಬ ವಿದ್ವಾಂಸರಿಗೆ ಕಾಗದ ಬರೆದಿದ್ದೆ; ಅವರನ್ನು ನಿಲ್ದಾಣದಲ್ಲಿ ಕಾಣದುದರಿಂದ, ಹೊಟೇಲಿಗೆ ಹೋಗಿ ಫೋನ್ ಮೂಲಕ ಕರೆದೆ. ಅವರ ಭೇಟಿಯಾಯಿತು. ನನ್ನ ಕಾಗದ ಅವರಿಗೆ ಸಿಕ್ಕಿರಲಿಲ್ಲ; ಆದರೆ ಡಾ। ಹೈಮನ್‌ಡಾರ್ಫರವರ ಪತ್ರ ತಮಗೆ ಬಂದಿದೆಯೆಂದೂ, ತಮ್ಮ ತಾಯಿ ಕಾಯಲೆಯಲ್ಲಿರುವ ಪ್ರಯುಕ್ತ ಸಂಜೆ ೫॥ ಗೆ ಹೊಟೇಲಿಗೆ ಬಂದು ಭೇಟಿಯಾಗುವೆನೆಂದೂ ತಿಳಿಸಿದರು. ಅಲ್ಲಿಯ ತನಕ ನನಗೆ ನಾನೇ.

ಬೆಳಗ್ಗಿನ ಒಂಬತ್ತು ಘಂಟೆಗೆ ಉಪಾಹಾರ ಮುಗಿಸಿದೆ; ರಾತ್ರಿಯೆಲ್ಲ ನಿದ್ರೆ ಕೆಟ್ಟವನಾದುದರಿಂದ ಕೊಟಡಿಗೆ ಹೋಗಿ ಹಾಸುಗೆ ಹಿಡಿದೆ. ಮಧ್ಯಾಹ್ನ ಒಂದು ಘಂಟೆಗೆ, ವಿಶ್ರಾಂತಿಯಿಂದೆದ್ದು, ನಮ್ಮ ಪ್ರವಾಸಿಗಳ ಬಸ್ಸು ನಿಲ್ಲುವ ತಾವಾದ–ನಗರ ಭವನದ ಮುಂದಿನ ಚೌಕಕ್ಕೆ ಹೋದೆ. ಅಲ್ಲೊಂದು ಹೊಟೇಲಿನಲ್ಲಿ ಉಪಾಹಾರ ಮುಗಿಸಿ, ಎದುರಿನ ವಿಶಾಲ ಚೌಕದಲ್ಲಿ ಅಲೆದಾಡಿದೆ. ಬಹು ವಿಶಾಲವಾದ ಚೌಕ-ಒಂದು ಲಕ್ಷ ಜನ ಕುಳಿತಿರುವಷ್ಟು ದೊಡ್ಡ ತಾವು. ನಾಲ್ಕು ಸುತ್ತಲೂ ಕವಲೊಡವ ದಾರಿ, ಟ್ರಾಮು, ಮೋಟಾರುಗಳ ಓಡಾಟವಿತ್ತು; ಎದುರಿಗೆ ಅನೇಕ ಸುಂದರ ಭವ್ಯ ಕಟ್ಟಡಗಳಿದ್ದುವು. ಎರಡು ಘಂಟೆಯ ವೇಳೆಗೆ ನಮ್ಮ ಬಸ್ಸು ಹೊರಡಲು ಅಣಿಯಾಯಿತು; ನಾನಾ ದೇಶಗಳಿಂದ ಬಂದ ಪ್ರವಾಸಿಗಳು ತುಂಬಿದರು; ನಮ್ಮ ಮಾರ್ಗದರ್ಶಕಿಯಾದವಳು ಒಬ್ಬ ಮುದುಕಿ. ಸಂಚಾರದ ಕಾರ್ಯಕ್ರಮ ವಿವರಿಸ ತೊಡಗಿದಳು ಅವಳು; ಬಸ್ಸು ಹೋಗುತ್ತಲೇ ಇತ್ತು. ಏನಿಲ್ಲದಾಗ ಇಂಥ ಪ್ರವಾಸವನ್ನ್ನಮಾಡಬೇಕು. ಅನೇಕ ಸ್ಥಳಗಳನ್ನು ಬಸ್ಸಿನ ಗಾಜಿನ ಕಿಟಿಕಿಯಿಂದಲೇ ನೋಡುತ್ತ ಹೆಸರುಗಳನ್ನು ಸ್ಮರಿಸುತ್ತಿರಬೇಕು—ಬೀದಿಗಳ

ಹೆಸರು, ದೊಡ್ಡ ಕಟ್ಟಡಗಳ ಹೆಸರು, ಪರ್ಯಾಯವಾಗಿ ಬರುವ ಮಹಾ ವ್ಯಕ್ತಿಗಳ ಹೆಸರನ್ನೂ ಆಕೆ ಹೇಳುತ್ತಿದ್ದಳು.

ಕಿವಿಯ ಮೇಲೆ ಬಿದ್ದ ಹೆಸರುಗಳಲ್ಲಿ ನನಗೆ ಹೆಚ್ಚಾಗಿ ಕೇಳಿಸಿದ್ದು-ಬಿಶಪ್ ಎಬ್ಸಲಾನ್ – ಎಂಬವನ ಹೆಸರು; ಅದಕ್ಕೂ ಮಿಗಿಲಾಗಿ–ಅನೇಕ ಅರಮನೆ, ಚರ್ಚುಗಳನ್ನು ನಿರ್ಮಿಸಿದ, ಆ ದೇಶಕ್ಕೆ ಚರಿತ್ರೆಯಲ್ಲೊಂದು ಸ್ಥಾನವನ್ನು ಕಲ್ಪಿಸಿದ ದೊರೆ ಕ್ರಿಶ್ಚಿಯನ್–ಇವನ ಹೆಸರು ಮುಖ್ಯವಾಗಿತ್ತು. ದಾರಿಯಲ್ಲಿ ಹೆಂಡ ತಯಾರಿಸುವ ಕಾರ್ಖಾನೆಯೊಂದಿತ್ತು; 'ಕಾರ್ಲ್ಸಬರ್ಗ' ಬಿಯರ್ ತಯಾರಿಸುವ ಮನೆಯದು. ಅವನ ಹೆಸರನ್ನು ಆಕೆ ಹೇಳಿದಳು. ಆ ಬಿಯರ್ ಲೋಕ ಪ್ರಸಿದ್ಧ ಅಂದಳು. ಅದರ ಜತೆಗೆ "ಈ ವರ್ಷ ಬಿಯರಿನ ಮೇಲಿನ ಸುಂಕ ಹೆಚ್ಚಿಸುತ್ತಾರೆ;ಅದಿಲ್ಲವಾದರೆ ನಮ್ಮ ಕಲಾಮಂದಿರಗಳನ್ನು ಬೆಳೆಯಿಸಲಾರೆವು" ಎಂದಳು. ಅದರ ಅರ್ಥ ನನಗೆ ಆಗ ಆಗದೆ ಹೋದರೂ ಮುಂದೆ ಆಗಿಯೇ ಆಯಿತು. ಆ ಮೂರು ತಾಸುಗಳ ನಗರ ಸಂಚಾರದಲ್ಲಿ ಕಂಡ ಕೆಲವೇ ಮಹತ್ವದ ವಸ್ತುಗಳನ್ನು ಕುರಿತು ಇಲ್ಲಿ ಹೇಳುತ್ತೇನೆ.

ನಮ್ಮ ಬಸ್ಸು ನಗರದ ಒಳಗುಗಳನ್ನೆಲ್ಲ ಸುತ್ತಿ ಹೊರಗಣ ವಿಸ್ತರಣಗಳನ್ನು ಹಾಯುವಾಗ—ಊರಿನ ಸಮತಟ್ಟಾದ ನೆಲ, ಹೊಸತಾಗಿ ಸಾಲು ಸಾಲಾಗಿ ನಿರ್ಮಿಸಿದ ಒಂದೇ ಆಕೃತಿಯ ಮನೆಗಳು ಆಕರ್ಷಿಸಿದುವು. ಇವೆಲ್ಲ ಬಡ ಕುಟುಂಬಗಳ ಸಲುವಾಗಿ ಅಲ್ಲಿನ ಸಮಾಜವಾದೀ ಸರಕಾರವು ಕಟ್ಟಿಸಿ ಕೊಟ್ಟುದಂತೆ. ಸುಮಾರು 30–40 ರೂಪಾಯಿ ಬಾಡಿಗೆಯ ಅಂಥ ಮನೆ, ವಸತಿಗಳು ನಮ್ಮ ಮದ್ರಾಸು ಮುಂಬಯಿಗಳಲ್ಲೂ ಸಿಗಲಾರವು. ಅಂಥ ವಸತಿಗಳನ್ನು–ಬಹು ದೊಡ್ಡ ಸಂಖ್ಯೆಯಿಂದ ಒದಗಿಸಿದ್ದಾರೆ. ಮಕ್ಕಳಿರುವ ಕುಟುಂಬಿಕರಿಗೆ ಬೇರೆಯ ತೆರನ ಮನೆಗಳಿವೆ; ಅಲ್ಲಿ ಮಕ್ಕಳಾಟಕ್ಕೆ ಅನುಕೂಲತೆಯಿದೆ. ಹೊಸ ಶಾಲೆಗಳಿವೆ; ಅವನ್ನು ಚೆಲುವಿನ ತೋಟದೊಡನೆ ಸೃಜಿಸಿದ್ದಾರೆ. ಅಲ್ಲಿನ ಜನರು ಮುಪ್ಪು ಬಂದೊಡನೆ ನಿರ್ಗತಿಕರಾಗಬೇಕಿಲ್ಲ. ಅವರನ್ನು ಮುಪ್ಪಿನ ವೇಳೆ ಸಾಕುವ ಭಾರ ದೊಡ್ಡದು. ಮನೆ, ಅರಿವೆ, ಅನ್ನ ಕೊಟ್ಟು, ತಿಂಗಳಿಗೆ ಚಿಲ್ಲರೆ ವೆಚ್ಚಕ್ಕಾಗಿ ಸುಮಾರು ೨೦ ರೂಪಾಯಿಗಳ ಉಂಬಳಿಯನ್ನೂ ದೇಶದ ಸರಕಾರವೇ ಕೊಡುತ್ತದೆ. ದೇಶ ಸಣ್ಣದಾದರೇನು? ಜನತೆಯ ನೆಮ್ಮದಿಗಾಗಿ ಶ್ರಮಿಸುವ ಸರಕಾರ ದೊಡ್ಡ ಸರಕಾರವೇ ಅನಿಸಿತು ನನಗೆ.

ಊರನ್ನು ಕಳೆದು ಇನ್ನೂ ಮುಂದುವರಿದಾಗ–ದಾರಿಯಲ್ಲಿ ವಿಶಾಲ ಹುಲ್ಲುಗಾವಲೊಂದು ಕಾಣಿಸಿತು. ಅಲ್ಲಿ ಅನೇಕಾನೇಕ ಜಲಪಕ್ಷಿಗಳಿದ್ದುವು. ಅವನ್ನು ತೋರಿಸುತ್ತಾ ಇದು ನಮ್ಮ "ಪಕ್ಷಿಗಳನ್ನು ರಕ್ಷಿಸುವ ಪ್ರದೇಶ" (Bird sanctuary) ಎಂದಳು. ಮೊದಲೇ ಕಿರಿಯ ದೇಶ, ಜನಸಂಖ್ಯೆಯು ಒತ್ತಡವೂ ಇದೆ. ಅದರಲ್ಲಿಯೆ ವಿಶಾಲವಾದೊಂದು ತುಣುಕು ನೆಲವನ್ನು ಹಕ್ಕಿಗಳ ರಕ್ಷಣೆಗಾಗಿ ಕಾಯ್ದಿರಿಸಿದ ಅವರ ಸವಿನೋಟ ವಿಶೇಷವೆನಿಸಿತು. ಅಲ್ಲಿಂದ ನಾವು ಮುಂದುವರಿದು ನೋಡಹೋದುದು-ಒಂದು ಹೊಸಗಾಲದ ಇಗರ್ಜಿಯನ್ನು. ಗ್ರಂಟ್‌ವಿಗ್ ಎಂಬಾತ (ಒಬ್ಬ ಬಿಶಪ್)–ಹೊಸ ವಾಸ್ತು ಶೈಲಿಯೊಂದನ್ನು ಬಳಸಿ ಅತ್ಯಾಧುನಿಕ ಚರ್ಚ್ ನಿರ್ಮಿಸಿದ್ದಾನೆ. ಯುದ್ಧದ ಮೊದಲಷ್ಟೇ ಅದು ಕೊನೆಗೊಂಡಿತು. ಅದರ ಹೊರಗಿನ ಆಕೃತಿ ವಿಶೇಷ ವಾಗಿಲ್ಲ; ವಿಚಿತ್ರವಾಗಿದೆ. ಒಳಗೆ ಹೊಕ್ಕರೆ ಏನೋ ಒಂದು ಹೊಸ ಭಾವನೆ ಬರುತ್ತದೆ. ಅದೊಂದು ಸರಳ ಭಕ್ತಿಯ ಸ್ಮಾರಕವೆನಿಸುತ್ತದೆ. ಗಾರೆಯನ್ನು ಹಚ್ಚದೆಯೆ, ಬರಿಯ ಇಟ್ಟಿಗೆಗಳಿಂದ ಸ್ತಂಭ, ಕಮಾನುಗಳನ್ನು ಗಾಥಿಕ್ ಶೈಲಿಯಲ್ಲಿಕಟ್ಟಿಮಾಡಿದ ವಿಶಾಲವಾದ ಪ್ರಾರ್ಥನಾಮಂದಿರವಿದೆ; ತುದಿಯಲ್ಲಿ ವೇದಿಕೆಯಿದೆ. ಎಲ್ಲವೂ ಬಿಳಿಯ ದಂತವರ್ಣದ ಇಟ್ಟಿಗೆಗಳು. ಈ ಮಂದಿರದ ಸ್ತಂಭ, ಕಮಾನು, ಗೋಡೆಗಳೆಲ್ಲ-ಅಲಂಕಾರವೇ ಇಲ್ಲದ ಸಾದಾ ವಕ್ರ, ಸರಳ ರೇಖೆಗಳು. ಬಡವನ ನಿರಾಡಂಬರ ಭಕ್ತಿಯು ಅದರ ಪ್ರತಿಯೊಂದು ಅಂಗುಲದಲ್ಲೂ ಕಾಣುತ್ತದೆ. ಕಣ್ಣಿಗೆ ಹೊಡೆಯುವ, ಕುಕ್ಕುವ ಜಂಭದ ಒಂದೇ ಒಂದು ತುಣುಕು ಅಲಂಕಾರವಿಲ್ಲ. ನಾವು ಉಳಿದೆಡೆ ಕಂಡ ವೈಭವ ಮಾರ್ಗದ ಸಿರಿವಂತ ಮಂದಿರಗಳಿಗೂ ಈ ಚರ್ಚಿಗೂ ಹೋಲಿಕೆಯೇ ಇಲ್ಲ. ಗಿಡದಲ್ಲೇ ಜೊಲ್ಲೆಯಾಗಿ ತೂಗುವ ಮಲ್ಲಿಗೆಯ ಹೂವಿನಂತೆ–ಸರಳ, ಸುಂದರ ಮಂದಿರ. ಆಧುನಿಕ ಭಕ್ತನೊಬ್ಬನು ತನ್ನ ಭಾವನೆಗೆ ಈ ರೀತಿಯ ಅತ್ಯಂತ ಭವ್ಯರೂಪವನ್ನು, ಅತಿ ಸರಳ ರಚನೆಯಿಂದ ಕೊಟ್ಟನಲ್ಲ–ಎಂಬ ವಿಸ್ಮಯವಾಗುತ್ತದೆ ಇದನ್ನು ಕಂಡು. ಈ ಮಂದಿರದಲ್ಲಿ ಸಾವಿರ ಜನ ಶುಭ್ರ ವಸನರಾದ ಭಕ್ತರು ಮೊಣಕಾಲೂರಿ, ಬರಿದಾಗಿ ಕಾಣಿಸುವ ವೇದಿಕೆಯ ಸಮ್ಮುಖದಲ್ಲಿ ಕುಳಿತರೆ ಹೇಗನಿಸೀತು? ಇಂಗ್ಲಿಷಿನಲ್ಲಿ ರಾಗ, ತಾಲ, ಭಾವ ರಸಗಳು ಲಲಿತವಾಗಿ ಮೇಳವಿಸುವ ಬಗೆಗೆ "ಸಿಂಫನಿ" ಅನ್ನುತ್ತಾರೆ. ಇದು ನಿಜಕ್ಕೂ ಶ್ವೇತವರ್ಣದ ಒಂದು (ಸಮ್ಮೇಳ) 'ಸಿಂಫನಿ'ಯಾಗಿತ್ತು.

ಈ ಚರ್ಚನ್ನು ನೋಡಿ, ನಗರದ ಹೊರ ಮಗ್ಗುಲಿನಿಂದಲೇ ಅದರ ನೌಕಾಶ್ರಯದ ಭಾಗಕ್ಕೆ ಬಂದೆವು. ದಾರಿಯಲ್ಲಿ ತಿರುಗಿ ಜನವಸತಿಗಳು, ಸುಂದರ ಉದ್ಯಾನ, ಸಾಲು ಮರಗಳೂ ಕಾಣಿಸತೊಡಗಿದುವು. ಕೊನೆಗೆ ಕಡಲಿನ ದಂಡೆಯೂ ಬಂದಿತು. ಒಂದು ಭಾಗದಲ್ಲಿ ಕಡಲಿನ ಅಂಚು ಕತ್ತಿಯ ಬಾಗಿನಂತಾಗುತ್ತದೆ. ಎದುರೇನೆ ದೂರದಲ್ಲಿ ಹಡಗುಗಳ ಧಕ್ಕೆಗಳಿವೆ. ವಕ್ರವಾದ ಕಡಲದಂಡೆಯ ಉದ್ದಕ್ಕೂ ಉದ್ಯಾನ, ವಿಹಾರಗಳಿವೆ. ಇಲ್ಲೇನೆ, ಕಡಲ ದಂಡೆಗೆ ಸಮೀಪವಾಗಿ–ಹೆನ್ಸ್ ಎಂಡರ್ಸನನ ನೆನಪನ್ನು ಕಾಯಲು ಒಂದು ಕಂಚಿನ ಪ್ರತಿಮೆಯನ್ನಿಟ್ಟಿದ್ದಾರೆ. ಕಡಲಿನ ನೀರು ಬಂದು ಬಡಿಯುವ ಒಂದು ಬಂಡೆಯ ಮೇಲೆ— ಈಗಷ್ಟೆ ನೀರಿಂದ ಮೇಲಕ್ಕೆದ್ದು ಬಂದು, ಬಂಡೆಯನ್ನೇರಿ ಬಿಸಿಲಿಗೆ ಮೈಯೊಡ್ಡಿದ ನಾರಿಯಂತೆ ಕಾಣಿಸುವ ಜಲಕನ್ಯೆ (mermaid)ಯೊಬ್ಬಳ ಪ್ರತಿಮೆಯಿದೆ. ಸುಮಾರು ಹದಿನಾರು ವಯಸ್ಸಿನ ಮುಗ್ಧಮುಖ, ಅರ್ಧ ಮಾನವ ರೂಪ; ಅರ್ಧ ಮೀನಿನ ಶರೀರ. ಈ ಜಲಕನ್ನೆಯು ಎಂಡರ್ಸನಿನ ಕತೆಗಳೊಂದರಲ್ಲಿ ಬರುತ್ತಾಳೆ.

ಇಲ್ಲಿಂದ ತುಸು ದೂರದಲ್ಲಿಯೆ ಇನ್ನೊಂದು ಉದ್ಯಾನವಿದೆ–ಅದರಲ್ಲಿ ಒಂದು ಹಿರಿಯ ಕಾರಂಜಿಯಿದೆ. ಆ ಕಾರಂಜಿಯನ್ನಲಂಕರಿಸುವ ಪ್ರತಿಮೆ ನಾಲ್ಕು ಉಗ್ರ ಎತ್ತುಗಳನ್ನು, ಹಿಡಿದು ಓಡಿಸುವ ಒಬ್ಬ ವೀರ ನಾರಿಯ ಚಿತ್ರ. ಅದು ದೊಡ್ಡ ಆಕೃತಿಯ ಪ್ರತಿಮೆಗಳ ಗುಂಪು. ಆ ಸ್ತ್ರೀ ಜೆಟ್‌ಲೆಂಡಿನ ಕನ್ಯೆ; ಅವಳಿಗೆ ದೇವರೊಂದು ಕಾಲದಲ್ಲಿ "ನೀನು ಒಂದು ರಾತ್ರಿ ಉಳುವ ನೆಲವೆಲ್ಲಾ ದಾನವಾಗಿ ಕೊಡುವೆ" ಎಂದರಂತೆ. ಆಕೆ ಒಂದೇ ರಾತ್ರಿಯಲ್ಲಿ ನಾಲ್ಕು ಇಂತಹ ಎತ್ತುಗಳನ್ನು ಕಟ್ಟಿ, ಇಡಿಯ ಜಟ್‌ಲೆಂಡ್ ಭಾಗವನ್ನೇ ಉತ್ತು ತನ್ನದನ್ನಾಗಿ ಮಾಡಿಕೊಂಡಳೆಂಬ ಕಥೆಯನ್ನು ಇಲ್ಲಿ ಚಿತ್ರಿಸಿದ್ದಾರೆ. ಈ ಪ್ರತಿಮೆಗಳ ಗುಂಪೂ, ಅದರ ಕೆಳಗಡೆ, ಅಂತರ ಅಂತರವಾಗಿ ಹರಿಯುವ ಕಾರಂಜಿಯ ನೀರೂ ಮನೋಹರವಾಗಿದೆ.

ಅವನ್ನೆಲ್ಲ ಕಂಡಾದ ಮೇಲೆ ನಾವು ತಿರುಗಿ ನಗರದ ಕೇಂದ್ರಭಾಗಕ್ಕೇನೆ ಬಂದೆವು. ಹಿಂದಣ ಕಾಲದ ಅರಮನೆಗಳು, ಚೌಕಗಳು, ಕೆಲವೊಂದು ಚರ್ಚುಗಳು, ಪಾರ್ಲಿಮೆಂಟ್ ಮಂದಿರ ಇವನ್ನೆಲ್ಲ–ಕುಳಿತ ಬಸ್ಸಿನಿಂದಲೇ ನೋಡುತ್ತ ಸಂಚರಿಸಿದೆವು. ಅಂತು ಬಂದುದಕ್ಕೆ "ಒಂದು ಹಕ್ಕಿಯ ನೋಟ" ದೊರೆಯಿತು. ಇಂಥ ಹಕ್ಕಿಯ ನೋಟ ಎಂದೂ ತೃಪ್ತಿಕರವಾದ ನೋಟವಾಗ

ಲಾರದು. ಸಂಚಾರದ ಮೂರು ತಾಸುಗಳು ಕಳೆಯುತ್ತಲೇ ನಾನು ಹೊಟೀಲಿಗೆ ಮರಳಿದೆ; ಡಾ। ಬೊರೂಪ್‌ರಿಗಾಗಿ ಕಾದು ಕುಳಿತೆ. ಅವರು ನಿಯತ ವೇಳೆಗೆ ಬಂದೇ ಬಂದರು. ಯೌವನಸ್ಥರೂ, ದೀರ್ಘಕಾಯರೂ ಹಸನ್ಮುಖಿಗಳೂ ಆದ ಅವರು ನಿರಾಡಂಬರವಾಗಿ ಮಾತಿಗೆ ಕುಳಿತರು. ಅವರು ತತ್ವಜ್ಞಾನದ ಡಾಕ್ಟರರು. ಅದರ ಕೆಲವೊಂದು ನೋಟಗಳು ಆದಿವಾಸಿಗಳ ಮತ, ಧರ್ಮದಲ್ಲಿ ಹೇಗೆ ಉಳಿದಿವೆ—ಎಂಬುದನ್ನು ತಿಳಿಯುವುದರಲ್ಲಿ ಆತುರರು. ನಮ್ಮ ಭಾರತೀಯ ತತ್ವಜ್ಞಾನವನ್ನೂ ಅವರು ಅಭ್ಯಸಿಸಿದಂತಿದೆ. ಹಾಗೆಯೇ-ಆಸ್ಸಾಮ್, ಭೂತಾನ ಪ್ರಾಂತ್ಯದ ಆದಿವಾಸಿಗಳ ಮತ, ಸಂಸ್ಕೃತಿಗಳ ಪರಿಚಯಕ್ಕಾಗಿ, ಭಾರತಕ್ಕೆ ಮುಂದಿನ ವರ್ಷ ಬರುವ ಹಂಚಿಕೆಯನ್ನೂ ಹಾಕಿಕೊಂಡಿದ್ದರು. ನಾವು ಮಾತನಾಡುತ್ತ, ಅಲ್ಲೇ ಕುಳಿತಿರಬೇಡವೆಂದು ಯೋಚಿಸಿ, ತಿರುಗಿ ಹೊರಬಿದ್ದೆವು. ಅವರು ನನ್ನನ್ನು ನಗರದ ಹಳೆಯ ಮಂದಿರಗಳಿರುವಲ್ಲಿಗೆ ಕರೆದೊಯ್ದರು. ಅಂದು ರಜಾ ದಿನವಾಗಿತ್ತು. ದಾರಿಗಳೆಲ್ಲವೂ ಬರಿದಾಗಿ ಕಾಣಿಸುತ್ತಿದ್ದುವು. ಹಳೆಗಾಲದ ವಾಸ್ತು ಮಂದಿರಗಳನೇಕವನ್ನು ನೋಡಿದೆವು. ಡೆನ್‌ಮಾರ್ಕ್ ರೊಮನ್ ಕಥೋಲಿಕ್ ಧರ್ಮ ಅನುಸರಿಸುತ್ತಿದ್ದುದನ್ನು ಬಿಟ್ಟು, ಪ್ರೊಟೆಸ್ಟಾಂಟ್ ಧರ್ಮಕ್ಕೆ ತಿರುಗಿದುದು, ಅದರ ಪರಿಣಾಮ, ಆ ಸಂಬಂಧದ ಸ್ಮಾರಕಗಳು-ಮೊದಲಾದುವನ್ನು ಅವರು ತೋರಿಸುತ್ತ ನಡೆದರು. ಮರುದಿನ ಸಂಜೆಯ ತನಕ ಅವರಿಗೆ ವಿರಾಮವಿದ್ದಿಲ್ಲವಾದರೂ ನಾನು ಮುಖ್ಯತಃ ನೋಡಬೇಕಾದ ಸ್ಥಳಗಳನ್ನೆಲ್ಲ ಸೂಚಿಸಿದರು. ಅವುಗಳಲ್ಲಿ ತೀರ ಮುಖ್ಯವಾದುವೆಂದರೆ-ಕಾರ್ಲ್ಸ್‌ಬರ್ಗ್ ಎಂಬಾತ ಸ್ಥಾಪಿಸಿದ "ಗ್ಲಿಪ್ಟೋಟೇಕ್" ಅಥವಾ ಕಲಾಮಂದಿರ; ಇನ್ನು ಡೆನ್‌ಮಾರ್ಕಿನ ಹೆಮ್ಮೆಯೆಂಬಷ್ಟು ಹಿರಿದಾದ "Ethnological museum". ಇವಿರುವ ತಾವುಗಳನ್ನು ಅವರು ನನಗೆ ತೋರಿಸಿಕೊಟ್ಟು ತಮ್ಮ ಮನೆಗೆ ಹೊರಟು ಹೋದರು. ನಾನೂ ಹೊಟೇಲಿಗೆ ಮರಳಿದೆ.

ಮರುದಿನ ಬೆಳಿಗ್ಗೆ ನಾನು ಸಂಚಾರಕ್ಕೆ ಹೊರಡುವ ಮೊದಲು ಡಾ। ಬೊರೂಪರವರು ಬಂದು, ನನ್ನೊಡನೆ ತುಸು ದೂರ ಸಂಚರಿಸಿದರು; ಸಂಜೆ ತಾನು ಬರಲು ವೇಳೆಯಾದೀತೆಂದೂ "ಆದರೆ ಆರು ಘಂಟೆಯೊಳಗೆ ಬರುತ್ತೇನೆ; ಜತೆಗೆ ಊಟಮಾಡುವ" ಎಂದಂದರು. ಒಪ್ಪಿಕೊಂಡೆ. ನನ್ನ ಮೊದಲನೆಯ ಗಮನ ಅಲ್ಲಿನ ಪ್ರಸಿದ್ಧ ಗ್ಲಿಪ್ಟೋಟೇಕ್ ಕಡೆಗೆ ಸಾಗಿತು. ಇದು ಆ

ನಗರದ ಶ್ರೀಮಂತನಾಗಿದ್ದ ಕಾರ್ಲ್ಸ್‌ಬರ್ಗ್ ಎಂಬಾತನು ಸ್ಥಾಪಿಸಿದ ಸಂಗ್ರಹಾಲಯ. ಅವನದೇ ಆದ "ಕಾರ್ಲ್ಸ್‌ಬರ್ಗ್" ಮದ್ಯಕಾರ್ಖಾನೆಯ ಲಾಭದಿಂದ ಇದು ಬೆಳೆದುಬಂದಿದೆ. ಈ ಮಂದಿರ ಎರಡಂತಸ್ತಿನ, ಎರಡೆರಡು ಚೌಕಗಳುಳ್ಳ ಸೌಧವಾಗಿತ್ತು. ಕೆಳಗಡೆ ಶಿಲ್ಪಗಳನ್ನೂ ಮೇಲೆ ಚಿತ್ರಸಂಗ್ರಹವನ್ನೂ ಇರಿಸಿದ್ದರು. ಮಂದಿರದ ಒಂದು ಭಾಗದಲ್ಲಿ ಅನೇಕ ಗ್ರೀಕ್ ಪಂಥ ಕತೆಗಳ ವ್ಯಕ್ತಿಗಳನ್ನು ಅದೇ ಶೈಲಿಯಲ್ಲಿ, ಆ ದೇಶದವರು ಮಾಡಿರಿಸಿದ ಹಾಲುಗಳ್ಲಿನ ಪ್ರತಿಮೆಗಳಿವೆ. ಎಡಮ್ ಮತ್ತು ಈವ್ ಇವರ ಬಹು ಸುಂದರವಾದ ಪ್ರತಿಮೆಯೊಂದಿದೆ. ಆ ದೇಶದವರೇ ಆದ ಕೆಲವರ ಶಿಲ್ಪಕೃತಿಗಳು ಬಹು ಉತ್ತಮವಾಗಿದ್ದುವು. ಎಲ್ಲವೂ ಹೆಚ್ಚು ಕಡಿಮೆ ಮಾನವ ಗಾತ್ರದುವು.

ಅವುಗಳಲ್ಲಿ ಎರಡು ಶಿಲ್ಪಗಳು ವಿಶೇಷವಾಗಿದ್ದುವು. ಇವು ಮಾನವ ಗಾತ್ರದ ಆವೆ ಮಣ್ಣಿನ ಶಿಲ್ಪಗಳು. ಒಂದು ಗುಂಪಿನಲ್ಲಿ ಚಿಂತಾಸಕ್ತನಾದ ತಂದೆಯೊಬ್ಬನು ತನ್ನ ನಾಲ್ಕು ಕೂಸುಗಳೊಡನೆ ಬಡತನವನ್ನೋ ಅಥವಾ ತನ್ನ ಮಡದಿಯ ಸಾವನ್ನೋ ನೆನೆದು ಕುಳಿತಿದ್ದಾನೆ; ಬಳಿ ನಿಂತ, ಕುಳಿತ, ನಿಸ್ಸಹಾಯ ಎಳೆಯ ಮಕ್ಕಳ ವ್ಯಥೆಯನ್ನಂತು ಹೇಳಬೇಡ. ಈ ಗುಂಪು ವಿಧಿವಿಲಾಸದ ಒಂದು ದುರಂತವನ್ನು ಅಷ್ಟುಮಾರ್ಮಿಕವಾಗಿ ಚಿತ್ರಿಸುತ್ತದೆ.

ಇನ್ನೊಂದು ಶಿಲ್ಪ–ಸಿಂಡಿಂಗ್ ಸ್ಟೀಫನ್ ಎಂಬವನ ಕೃತಿ; ಸ್ಥಳಿಕ ಇತಿಹಾಸದಿಂದ ಆಯ್ದುದು. ತಾಯಿಯೊಬ್ಬಳು, ಶಿವಿತದಿಂದ ಗಾಯಗೊಂಡ ತನ್ನ ಪ್ರಾಯಸ್ಥ ಮಗನ ಶರೀರವನ್ನು ತೊಡೆಯ ಮೇಲೆತ್ತಿ ಅನಿಸಿಕೊಂಡ ಚಿತ್ರ. ಆಕೆ ವಸ್ತ್ರಭೂಷಿತಳು; ಹುಡುಗ ಬತ್ತಲೆಯಾಗಿದ್ದಾನೆ. ಅವಳ ಕಾಲಿನ ಕೆಳಗೆ ಸಾಂಕೇತಿಕವಾಗಿ ಏನೋ ಆಯುಧ ಸಾಮಗ್ರಿಗಳಿವೆ. ಡೆನ್‌ಮಾರ್ಕೇ ಆ ತಾಯಿ; ಅದರ ಸ್ವಾತಂತ್ರ್ಯಕ್ಕಾಗಿ ಜೀವ ತೆತ್ತ ತರುಣನೇ ಅವಳ ಮಗನೆಂದು ಎಣಿಸಿದಲ್ಲಿ–ಈ ಚಿತ್ರಭಾವದ ತೀವ್ರತೆ ಪೂರ್ಣವಾಗುತ್ತದೆ.

ಈ ಶಿಲ್ಪ ಸಂಗ್ರಹದಲ್ಲಿ ನನಗೆ ಬೆರಗನ್ನು ಹುಟ್ಟಿಸಿದ ಅಂಶ-ರೋಡಿನನ ಕೃತಿಗಳು. ಆತ ಹೆಸರಾದ ಫ್ರೆಂಚ್ ಶಿಲ್ಪಿ. ಬೆಲೆಕೊಟ್ಟು ಅವನ ಯಾವತ್ತು ಶಿಲ್ಪಗಳನ್ನು ಸಂಗ್ರಹಿಸಿದಂತಿದೆ ಈ ದೇಶ. ಹಾಲುಗಳ್ಲಿನಲ್ಲಿ ಮಾಡಿದ ಅನೇಕ ಪ್ರತಿಮೆಗಳ ಜತೆಗೆ, ಅವನ ವಿಶೇಷ ಪ್ರತಿಮೆಗಳ ಗುಂಪಾದ "ಬರ್ಗರ್ಸ್‌ಆಫ್ ಕೆಲೆ"ಯ ಒಂದು ಶಿಲ್ಪ ಪುಂಜವಿದೆ. ವೈರಿಗೆ ಸೋತವರು, ನಗರ ದ್ವಾರದ ಕೀಲಿಯನ್ನು ಒಪ್ಪಿಸುತ್ತಿರುವ ಬಲು ನೋವಿನ ಪ್ರಸಂಗವನ್ನು–ಆ ಆರೆಂಟು

ಮುಂದಿಯ ಗುಂಪಿನ ಪ್ರತಿಯೊಂದು ಮೈ ರೇಖೆಯೂ ಚಿತ್ರಿಸುತ್ತಿದೆ. ಇವೆಲ್ಲ ದೊಡ್ಡ ಪ್ರಮಾಣದ ಕಂಚಿನ ಮೂರ್ತಿಗಳು. ಹಿಂದಿನ ಒಂದು ಅಂಗಣದಲ್ಲಿ-ರೋಡಿನನ "ಯೋಚನಾಪರ" (Thinker) ವಿಗ್ರಹವನ್ನಿರಿಸಿದ್ದಾರೆ. ತದೇಕ ಚಿತ್ತನಾಗಿ ಯಾವುದೋ ಒಂದು ಸಮಸ್ಯೆಯನ್ನು ಕುರಿತು ಚಿಂತಿಸುತ್ತಿರುವ ಮಾನವ ವ್ಯಕ್ತಿಯ ಈ ಪ್ರತಿಮೆ ಹೆಸರುವಾಸಿಯಾದುದು.

ರೋಡಿನನಿಂದಲೇ ನಿರ್ಮಿತವಾದ ಸೈಂಟ್ ಪೀಟರ್ ವಿಗ್ರಹವೂ ಇಲ್ಲಿದೆ. ಈ ಕಂಚಿನ ಪ್ರತಿಮೆ-ಯೇಸುವಿನ ಕೊನೆಗಾಲವನ್ನು ನಿಸ್ಸಹಾಯಕನಾಗಿ ನೆನೆದ ವ್ಯಕ್ತಿಯಂತೆ ಚಿತ್ರಿಸಿದ್ದಾನೆ. ಕಣ್ಣು ಬಾಯಿಗಳು, ಹಸ್ತದ ಬೆರಳುಗಳು, ಒಳಗಿನ ಈ ವ್ಯಥೆಯನ್ನು ಅಪ್ರತಿಮವಾಗಿ ಚಿತ್ರಿಸುತ್ತವೆ. ಎರಡು ಮೂರು ತಾಸುಗಳ ತನಕ ಇಲ್ಲಿ ಅಲೆದಾಡಿದರೂ ಇಲ್ಲಿಂದ ಕದಲುವ ಮನಸ್ಸಾಗುವುದಿಲ್ಲ. ಶಿಲ್ಪಗಳ ಸಂಖ್ಯೆಯು ಹೆಚ್ಚಿಗಿಲ್ಲವಾದರೂ, ಅವುಗಳ ಹಿರಿಮೆ ಅಸಾಮಾನ್ಯವಾದುದು. ಎಷ್ಟೆಲ್ಲ ಬೆಲೆ ತೆತ್ತು ಈ ದೇಶವು ಇವನ್ನು ಸಂಗ್ರಹಿಸಿ ತನ್ನದಾಗಿ ಮಾಡಿಕೊಂಡಿತು—ಅನಿಸುತ್ತದೆ.

ಈ ಶಿಲ್ಪಾಲಯದ ಒಂದು ವಿಭಾಗದಲ್ಲಿ-ಈಜಿಪ್ಟ್, ರೋಮ್, ಗ್ರೀಸುಗಳಿಂದ ಸಂಗ್ರಹಿಸಿದ ಮೂರ್ತಿಗಳನೇಕ ಇವೆ.

ಮಹಡಿಯ ಮೇಲಿನ ಭಾಗಕ್ಕೆ-ಹೋದರೆ, ಅಲ್ಲಿ ಮಿತವಾದ ಸಂಖ್ಯೆಯಲ್ಲಿ ಚಿತ್ರ ಸಂಗ್ರಹವಿದೆ. ಫ್ರಾನ್ಸಿನ-ಕ್ರಾಂತಿಯುಗದ ಸಿಜಾನ್, ಪಾಲ್ ಗಾಗಿನ್, ವಾನ್ ಗಫ್‌ರ ಹಲವು ಅಪೂರ್ವ ಕೃತಿಗಳನ್ನು ಈ ಸಂಗ್ರಹಾಲಯ ತಂದು ಇರಿಸಿಕೊಂಡಿದೆ—ಎಂಬುದನ್ನು ಕಾಣುವಾಗ, ಅಲ್ಲಿನ ಕಲಾವಿದರ ಆಯ್ಕೆ, ಆದರ್ಶಗಳ ಬಗ್ಗೆ ಮೆಚ್ಚುಗೆಯಾಗದಿರಲಾರದು. ಕಲೆಗಾಗಿ ಈ ಪುಟ್ಟ ದೇಶವು ಎಷ್ಟೊ ಹಣವನ್ನು ವ್ಯಯಿಸೀತೆನಿಸುತ್ತದೆ. ಈ ನನ್ನ ವಿಸ್ಮಯ ಅವರ ಇನ್ನೊಂದು ಸಂಗ್ರಹಾಲಯವನ್ನೂ ನೋಡಿದೊಡನೆಯೇ, ವಿಸ್ಮಯವನ್ನು ಮೀರಿದಂಥ "ಇನ್ನೇನೋ" ಆಗಿ ಪರಿಣಮಿಸಿತು.

ಇಲ್ಲಿನ 'ಮಾನವ ಕುಲ ವಿಜ್ಞಾನದ ಮ್ಯೂಸಿಯಮ್', ತನ್ನ ಪ್ರಯತ್ನದಲ್ಲಿ ಬ್ರಿಟಿಷ್ ಮ್ಯೂಸಿಯಮನ್ನು ಸಹ ಹಿಂದಿಡುವಂಥದು. ಮಾನವ ಕುಲ, ಸಂಸ್ಕೃತಿಗಳ ಚಿತ್ರಣಕ್ಕಾಗಿ—ಈ ಸಣ್ಣ ದೇಶ ಇಂಥ ಹಿರಿಯ ಸಂಗ್ರಹಮಾಡಿದುದನ್ನು ಕಂಡರೆ, ತುಟಿಗೆ ಬೆರಳಿಟ್ಟೇ ಅಲೆಯುವಂತಾಗುತ್ತದೆ. ಸುಮಾರು ಐನೂರು, ಐನೂರಡಿ ಉದ್ದದ ನಾಲ್ಕು ಮಗ್ಗುಲುಗಳುಳ್ಳ ಚೌಕಿಯ ಮನೆ

ಈ ಕಟ್ಟಡ. ನಾಲ್ಕು ವೈಗಳಿಂದ ಕೂಡಿ ೨೦೦೦ ಅಡಿ ನೀಳವಾಗಬಹುದು; ಅದರ ಅಗಲ ಐವತ್ತು ಅಡಿಗಳಷ್ಟಿರಬೇಕು; ಇಂಥ ಐದು ಅಂತಸ್ತುಗಳಿವೆ. ಈ ಮಂದಿರದ ಬರಿಯ ಸ್ವಲ್ಪ ಭಾಗದಲ್ಲಷ್ಟೆ ಡೆನ್‌ಮಾರ್ಕಿನ ಸಂಸ್ಕೃತಿಗೆ ಸಂಬಂಧಿಸಿದಂಥ ವಸ್ತು ಸಂಗ್ರಹವಿತ್ತು. ಉಳಿದ ಭಾಗಗಳೆಲ್ಲವೂ — ಏಸ್ಯ ಮತ್ತು ಎಸ್ಕಿಮೋ ಸಂಸ್ಕೃತಿಗಳಿಗಾಗಿ ಮೀಸಲಾಗಿತ್ತು.

ಈ ಮಂದಿರದ ಒಳಗಡೆ ಹೊಕ್ಕರೆ, ಅಡ್ಡತಿಡ್ಡ ತಿರುಗಿ, ನಡೆ ನಡೆದು ಇದು ಕೊನೆಯಿಲ್ಲದ ದಾರಿ ಅನಿಸುತ್ತದೆ. ಒಂದೊಂದು ಅಂತಸ್ತಿನಲ್ಲಿಯೇ ಇನ್ನೂರಷ್ಟು ಕೊಟಡಿಗಳಿವೆ. ಅವುಗಳಲ್ಲಿ ತುಂಬಿಸಿಟ್ಟಿದ್ದಾರೆ ಸಂಗ್ರಹ ವನ್ನು.

ಉದಾಹರಣೆಗಾಗಿ ಎಸ್ಕಿಮೋ ಸಂಸ್ಕೃತಿಯ ವಿಚಾರವಾಗಿ ಹೇಳು ತ್ತೇನೆ. ಎಲಾಸ್ಕಾ, ಗ್ರೀನ್‌ಲೆಂಡ್, ಐಸಿಲೆಂಡ್ ಭಾಗಗಳಿಂದ ಹಿಡಿದು ಪೂರ್ವದ ಕಮುಚಟ್ಕಾ ತನಕ-ಧ್ರುವವಲಯದಲ್ಲಿ ವಾಸಿಸುವ ಯಾವತ್ತು ಜನಸಮುದಾಯ ಈ ಸಂಸ್ಕೃತಿಯ ಪಾಲಕರು. ಅವರ ಮನೆ, ವಾಹನ, ಗೂಡಾರ, ಜೀವನ ಕ್ರಮ, ಕುಲಗಳನ್ನು ಚಿತ್ರಿಸುವ ಪ್ರಯತ್ನಮಾಡಿದ್ದಾರೆ. ಇದೊಂದೇನೆ ಒಂದು ಮಹಡಿಯಷ್ಟು ವಿಸ್ತಾರವಾಗಿರಬೇಕಾದರೆ. ಇಲ್ಲಿನ ಪಂಡಿತರು ಹಲವಾರು ಸಂಶೋಧಕರನ್ನು, ಈ ಮನುಷ್ಯ ಕುಲವು ಅಡ ಗಿರುವ ಮೂಲೆಮೂಲೆಗಳಿಗೆ ಕಳುಹಿಸಿ ಅವರ ಸಂಸ್ಕೃತಿಗೆ ಸಂಬಂಧಿಸಿದ-ವಸ್ತು ಸಂಗ್ರಹಮಾಡದೆಯೆ ಸಾಧ್ಯವಿದೆಯೋ! ಅವನ್ನು ವರ್ಗೀಕರಿಸಿದ ಬಗೆಯೂ ಅಲ್ಲಿ ವಿವರವಾಗಿ ತೋರಿಸಿರುವ ನಕ್ಷೆಗಳೂ, ಚಿತ್ರಗಳೂ ಇತ್ಯಾದಿ ವಿವರಗಳು "ಎಸ್ಕಿಮೋ" ಜನರು ಬರಿಯೊಂದು ಅಲ್ಪಸಂಖ್ಯಾಕ ಕುಟುಂಬ ಎನ್ನುವಂತೆಯೇ ಇಲ್ಲ.

ಏಸ್ಯದ ಜಪಾನು, ಚೀನಾ, ಇಂಡೋಚೀನ, ಇರಾಕ ಮೊದಲಾದ ಮುಸ್ಲಿಂ ರಾಷ್ಟ್ರಗಳು, ಕೊನೆಗಾಗಿ ಭಾರತ--ಇವುಗಳೇ ಮೂರು ಅಂತಸ್ತು ಗಳನ್ನು ತುಂಬಿವೆ. ಚೀನ, ಜಪಾನುಗಳ ಸಂಗ್ರಹವಂತು ಬಲು ವಿಶೇಷವಾ ದುದು. ಕಾಲವಿಸ್ತಾರದ ದೃಷ್ಟಿಯಿಂದಲೂ, ಇತಿಹಾಸದ ದೃಷ್ಟಿಯಿಂದಲೂ ಕಲೆ ಸಂಸ್ಕೃತಿಗಳ ವಿಭಿನ್ನ ಮುಖಗಳ ಅತ್ಯಪೂರ್ವ ಸಂಗ್ರಹ ಇಲ್ಲಿದೆ. ಇಂಡೋನೇಸ್ಯಾದ ಸಂಗ್ರಹ ಭಾಗವೂ ದೊಡ್ಡದು; ಹಾಲೆಂಡಿನಲ್ಲಿರುವಷ್ಟು ಹಿರಿದಲ್ಲ. ಇನ್ನು-ಭಾರತದ ದ್ರಾವಿಡ,ಉತ್ತರಾದಿ ಶಿಲ್ಪಗಳು,ವಾಸ್ತು, ವಸ್ತ್ರ,

ಆಭರಣ, ಶಿಲ್ಪ, ಚಿತ್ರಗಳ ಸಂಗ್ರಹವಾದರೂ ಎಷ್ಟಿಲ್ಲ! ನಿಜಕ್ಕೂ-ಪ್ರಪಂಚದ ಅದ್ವಿತೀಯ ಸಂಗ್ರಹಗಳಲ್ಲೊಂದೆನಿಸಿದೆ ಈ ಮ್ಯೂಸಿಯಮ್. ಇದನ್ನು ಬೆಳೆಯಿಸಲು ಆಗಾಗ ಎಂಬಂತೆ ಆ ಸಣ್ಣ ದೇಶದವರು ಪ್ರಪಂಚದ ಅನೇಕ ಮೂಲೆಗಳಿಗೆ ತಮ್ಮ ಸಂಶೋಧಕರನ್ನೂ ವಿದ್ವಾಂಸರನ್ನೂ ಕಳುಹಿಸುತ್ತಿದ್ದಾರೆ. ಇದಕ್ಕೆ ಎಷ್ಟು ಹಣ ಬೇಕಾದೀತು? ಅನ್ಯ ದೇಶಗಳ ಸಂಸ್ಕೃತಿಯ ಅಭ್ಯಾಸಕ್ಕಾಗಿ ಅವರೇಕೆ ಅಷ್ಟು ವೆಚ್ಚಮಾಡಬೇಕು? ಅಷ್ಟು ಮಾಡಲು-ದೇಶದಲ್ಲಿ ಹಣ ತುಂಬಿ ತುಳುಕಾಡುತ್ತಿದೆಯೇ?

ಎಂದರೆ, ಅವಕ್ಕೆಲ್ಲ ಒಂದೇ ಉತ್ತರ-ಜ್ಞಾನ ಸಂಪಾದನೆಯ ಕೆಲಸವನ್ನು ಬರಿಯ ಹಣವನ್ನೆಣಿಸುವ ಕೋಮಟಿಗಳ ಕೈಗೆ ಒಪ್ಪಿಸಕೂಡದೆಂದು. ಅದನ್ನು ನೆನೆದಾಗ ನಮ್ಮ ವಿಶಾಲ ರಾಷ್ಟ್ರದ ನೆನಪು ನನಗಾಗದೆ ಇರಲಿಲ್ಲ. ನಮ್ಮ ಸಾಂಸ್ಕೃತಿಕ ಪೂರ್ವ ಪರಂಪರೆ ಬಲು ದೊಡ್ಡದು; ಆದಿವಾಸಿಗಳ ಗುಂಪೂ, ಮತ ಸಂಪ್ರದಾಯಗಳ ಪರಂಪರೆಯೂ ವಿಶೇಷ. ಆದರೆ ಆ ವಿಷಯದಲ್ಲಿ ನಾವು ನಡೆಯಿಸಿದ ಅಭ್ಯಾಸ, ಸಂಗ್ರಹ, ನಮ್ಮ ಸರಕಾರ ತೋರುತ್ತಿರುವ ಆಸಕ್ತಿ-ನಾಮಪೂರ್ತಿ! ಮಾತಿಗೆ ಬಂದರೋ "ಸಂಸ್ಕೃತಿಯ ತುತ್ತೂರಿ"ಯೇ ನಮ್ಮ ಬಾಯಲ್ಲಿ; ಕೃತಿಯಲ್ಲಿ ಶೂನ್ಯರು ನಾವು. ನಿಜವೆಂದರೆ —ಎಷ್ಟೇ ಮುಖ್ಯವಾದ ಇತರ ಪ್ರಶ್ನೆಗಳಿರಲಿ, ನಮ್ಮ ಹಿರಿಮೆಯ ಮಾತು ಒಣಜಂಭಕ್ಕಿಂತ ಹೆಚ್ಚಿನ ಮೂರ್ತ ಸ್ವರೂಪವನ್ನು ಇನ್ನೂ ತಾಳಿಲ್ಲ. ಡೆನ್ಮಾರ್ಕಿನಂತಹ ಸಣ್ಣ ದೇಶವೊಂದು ಮಾಡಿರುವ ಕೆಲಸದ ನೂರನೆಯ ಒಂದಂಶವನ್ನೂ ನಾವು ಮಾಡಿದವರಲ್ಲ—ಎನಿಸುತ್ತದೆ. ಅದಕ್ಕೆ ಅವರ ಈ ಒಂದು ಮ್ಯೂಸಿಯಮ್ ಸಾಕ್ಷಿಯಾಗಿದೆ.

ಈ ಮ್ಯೂಸಿಯಮಿನ ನಾಲ್ಕು ಅಂತಸ್ತುಗಳಲ್ಲಿ ತಿರುಗಾಡಿ ನೋಡಿ, ದಣಿದು ಐದನೆಯದನ್ನು ನೋಡತೊಡಗಿದೆ. ಅದರ ಒಂದು ಮಗ್ಗುಲಲ್ಲಿ ಡೆನ್ಮಾರ್ಕಿನ ಜಾನಪದ ಕಲಾ ವಸ್ತುಗಳ ಸಂಗ್ರಹವಿತ್ತು. ಅದಕ್ಕೂ ಮುಂಚಿತವಾಗಿ ಬೇರೊಂದು ಕೊಟಡಿಯಿತ್ತು. ಅಲ್ಲಿ ನಿಂತಿದ್ದ ಕಾವಲಿನವನು "ಇದನ್ನು ದಯವಿಟ್ಟು ನೋಡುವಿರಾ?" ಎಂದು ಅವನಾಗಿಯೇ ಕರೆದು ಕೇಳಿದ. "ಏನದು?" ಎಂದು ಪ್ರಶ್ನಿಸಿದೆ. "ಡೆನ್ಮಾರ್ಕಿನ ಸ್ವಾತಂತ್ರ್ಯ ಹೋರಾಟ" ಎಂದ ಅವನು. ಕಳೆದ ಮಹಾ ಯುದ್ಧದಲ್ಲಿ ಆ ದೇಶ ಮೂಕವಾಗಿ ಜರ್ಮನರಿಗೆ ಶರಣಾಗತವಾಯಿತು—ಎಂಬುದು ನನ್ನ ತಿಳಿವು. ಈ

ಪ್ರದರ್ಶನ ಭಾಗವನ್ನು ಕಾಣಕಾಣುತ್ತ ಮನಸ್ಸು ಬದಲಿಸಬೇಕಾಯಿತು. ಹಿಟ್ಲರನ ದೈತ್ಯಸೇನೆಯನ್ನು ಕ್ಷಣಕಾಲವೂ ತಡೆಯಲು ಶಕ್ತಿಯಿಲ್ಲದ ಆ ದೇಶ ಶರಣಾಗತವಾಯಿತು; ನಿಜ. ಆದರೆ ಅದು ಮನವೊಪ್ಪಿದ ಶರಣಾಗತಿಯಾಗಿರಲಿಲ್ಲ. ಜರ್ಮನರು ಅಲ್ಲಿನ ವಾಹನ, ಸಂಬಂಧ, ಉದ್ಯಮಗಳನ್ನೆಲ್ಲ ವಶಪಡಿಸಿಕೊಂಡರು. ಸ್ವದೇಶಪ್ರಿಯರಾದ ಅನೇಕರು ಭೂಗತರಾದರು. ಜರ್ಮನಿಯ ಎದುರಿಗೆ ಹಲವು ವಿಧ್ವಂಸಕ ಚಟುವಟಿಕೆಗಳನ್ನು ಕೈಗೊಂಡರು. ಈ ಪ್ರದರ್ಶನ ಇದರ ವಿಸ್ತಾರವಾದ ಚಿತ್ರವನ್ನು ತೋರಿಸುತ್ತದೆ.

ಈ ಕೆಲಸದಲ್ಲಿ ಭಾಗಿಗಳಾದ ಅನೇಕ ದೇಶಭಕ್ತರನ್ನು ಜರ್ಮನರು ಕೊಲ್ಲಿಸಿದರು; ಉಪವಾಸ ಸಾಯಿಸಿದರು. ಅಂಥವರ ಕೆಲವು ಭಾವ ಚಿತ್ರಗಳಿವೆ. ಅವನ್ನು ನೋಡುವಾಗ ಮನಸ್ಸು ಕರಗುತ್ತದೆ. ಈ ಜನರು ಅಡಗಿಕೊಂಡಿದ್ದು, ಉಪಾಯವಾಗಿ ಸ್ವೀಡನಿನಿಂದ ಬರಿಯ ಕಬ್ಬಿಣದ ಸರಳುಗಳನ್ನು ತರಿಸಿಕೊಂಡು, ಕೈಯಿಂದಲೇ ಕೋವಿ, ಮೆಶಿನ್‌ಗನ್ ಮೊದಲಾದ ಉಪಕರಣಗಳನ್ನು ಮಾಡಿಕೊಂಡು ಕಾದಾಡಿದರು. ಚಿಕ್ಕ ಮುದ್ರಣ ಯಂತ್ರಗಳಿಂದ— ಅನೇಕ ಪ್ರಚಾರ ಪತ್ರಿಕೆಗಳನ್ನು ಹೊರಡಿಸಿ, ತಮ್ಮ ವಿಧ್ವಂಸಕ ಚಳವಳಿಗೆ ಸ್ವಾತಂತ್ರ್ಯ ಪ್ರೇಮಿಗಳನ್ನು ಹುರಿಗೊಳಿಸಿದರು. ಆಗಿನ ದಿನದ ಈ ಗುಪ್ತ ಪತ್ರಿಕೆಗಳು, ಅವನ್ನು ಮುದ್ರಿಸಿದ ಚಿಕ್ಕ ಯಂತ್ರಗಳು—ಎಲ್ಲೆಲ್ಲಿ ಏನೇನು ವಿಧ್ವಂಸ ಕಾರ್ಯ ಮಾಡಿದರೆಂಬ ನಕ್ಷೆ— ಇವನ್ನೆಲ್ಲ ಕಾಣುವಾಗ ನಿಸ್ಸಹಾಯರಾದ ಆವರ ಕೆಚ್ಚನ್ನು ಪ್ರಶಂಸಿಸಲೇ ಬೇಕೆನಿಸುತ್ತದೆ.

ಡೆನ್‌ಮಾರ್ಕಿಗೆ ಬಂದ ನನಗೆ, ಈ ಎರಡು ಸಂಗ್ರಹಾಲಯಗಳನ್ನು ಕಂಡ ಮೇಲೆ—ನಾನಿಲ್ಲಿಗೆ ಬಾರದಿರುತ್ತಿದ್ದರೆ ಎಷ್ಟೊಂದು ಅಮೂಲ್ಯ ಸಂಪತ್ತನ್ನು ಕಾಣದೆ ಹೋಗುತ್ತಿದ್ದೆ—ಎನಿಸಿತು. ಅವನ್ನು ಕಂಡು ಮನೆಗೆ ಹೋಗಿ ವಿರಮಿಸಿದೆ. ಆ ದಿನಕ್ಕೆ ಮತ್ತೇನೂ ಬೇಡವೆನಿಸಿತು.

ಸಂಜೆಯಾಗುವಾಗ ದಾರಿಯಲ್ಲಿ ನೋಡಿದ ಇನ್ನೊಂದು ಹೆಸರಿನ ನೆನಪಾಯಿತು. ಗ್ಲಿಪ್ಟೊಟೇಕಿಗೆ ಸಮೀಪವಾಗಿದ್ದ ಸ್ಥಳ. ಹೆಸರು 'ಟಿವೊಲಿ' ಎಂದು; ಅದು ವಿಲಾಸಿಗಳ ಸ್ವರ್ಗ. ಹೋಗುವ ತನಕ— ಹೊರಗಣ ವಿದ್ಯುದ್ದೀಪಮಾಲಿಕೆಗಳು, ಕೆಲವೊಂದು ಉದ್ಯಾನ ಭಾಗಗಳಷ್ಟೆ ಕಾಣುತ್ತಿದ್ದುವು. ಒಳಗೆ ಹೋದರೋ— ಎಳೆಯರು, ಮುದುಕರು, ಮುಕ್ತ ಮನಸ್ಕರಾಗಿ ಪ್ರಪಂಚವನ್ನು ಮರೆತು ವಿಹರಿಸುವ ಉದ್ಯಾನವನವಾಗಿ ಕಂಡಿತು. ಸಂಜೆ

ಆರು ಘಂಟೆಯಿಂದ ರಾತ್ರಿ ಹನ್ನೆರಡರ ತನಕವೂ ಇಲ್ಲಿ ಜನಜಂಗುಳಿ. ನಮ್ಮ ಊರಿಗೆ ಬರುವ ನೂರು 'ಕಾರ್ನಿವಲ್' ಹಾಕಿದರೂ ಒಂದು ಟಿವೊಲಿಯಲ್ಲ. ಇದನ್ನು ನಡೆಯಿಸುತ್ತಿರುವುದು ಒಂದು ಕಂಪೆನಿ. ಈ ಉದ್ಯಾನದಲ್ಲಿ-ನಿಮ್ಮಿಷ್ಟಕ್ಕೆ ಕೊಳ, ಹೂದೋಟಗಳನ್ನು ಕಾಣುತ್ತ ತಿರುಗಾಡಬಹುದು. ಇಲ್ಲಿನ ಹಲವು ಉಪಾಹಾರ ಗೃಹಗಳಲ್ಲಿ ವಿರಮಿಸಿ ಕುಡಿಯಬಹುದು, ತಿನ್ನಬಹುದು. ಇನ್ನೂ ಬೇಕಾದರೆ ಹಲವು 'ಆಟಗಳಿವೆ'. ನೆಲದಲ್ಲೋಡುವ ವಾಮನಾಕೃತಿಯ ರೈಲುಗಳಿವೆ–ಸಂಚರಿಸಿ. ನಿಮ್ಮ ಮಗುವಿಗೆ ಅರಸುತನ ಕೊಡುವ ಪ್ರಯತ್ನಮಾಡಿರಿ. ಅವನನ್ನು ಒಂದು ಸಾಲಂಕೃತ ಕುದುರೆ ಗಾಡಿಯಲ್ಲಿ ಕುಳ್ಳಿರಿಸಿ. ಅರಮನೆಯ ವೈಭವದಿಂದ ಅಲಂಕೃತರಾದ ಕಿರಿಯ ಮಕ್ಕಳು, ಸವಾರರುಗಳು ಆ ಮಗುವನ್ನು ಮೆರವಣಿಗೆಗೆ ಒಯ್ಯುತ್ತಾರೆ.

ಇನ್ನೊಂದು ಕಡೆ, ಚಿಕ್ಕದೊಂದು ಕೊಳವಿದೆ. ಅದರಲ್ಲಿ ಹತ್ತೆಂಟು ಸಣ್ಣ ಗಾತ್ರದ ಮೋಟರು ದೋಣಿಗಳಿವೆ. ಅವುಗಳಲ್ಲಿ ಹತ್ತೆಂಟು ಜನ ಒಮ್ಮೆಗೇ ಕುಳಿತು, ಒಬ್ಬರನ್ನೊಬ್ಬರು ನೂಕಿಸಿಕೊಂಡು ಜಲಕ್ರೀಡೆಯಾಡಿ. ಬೇರೊಂದೆಡೆ ಒಂದು ವಿಚಿತ್ರವಾದ ಕಾಲುವೆಯಿದೆ. ಎರಡು ಮೂರಡಿ ಅಗಲದ ಈ ಕಾಲುವೆಯಲ್ಲಿ, ಸುರಂಗಮಾರ್ಗದಲ್ಲಿ, ವಿಚಿತ್ರ ಗತಿಯಲ್ಲಿ ನೀರು ಹರಿಯುತ್ತದೆ. ಅದರೊಳಕ್ಕೆ ದೋಣಿಯಂತಹ ಪಾತ್ರೆಗಳಲ್ಲಿ ಕುಳಿತು ಎಲ್ಲೆಲ್ಲೋ ಹೋಗಿ ಬನ್ನಿ.

ಒಂದೆರಡು ಸಾಮಾನ್ಯ ಕೊಟಡಿಗಳಲ್ಲಿ–ಹತ್ತಿಪ್ಪತ್ತು ಟ್ರಾಮುಗಳಿವೆ; ಇಲ್ಲವೆ ಮೋಟರುಗಳಿವೆ. ಎಲ್ಲವೂ ಆಟದ ಮೋಟರುಗಳ ಗಾತ್ರದುವು. ಆದರೆ ಕುಳಿತಿರುವಂಥವು. ವಿದ್ಯುತ್ತಿನ ಬಲದಿಂದ ಓಡುವಂಥವು. ಅವುಗಳಲ್ಲಿ ಹತ್ತಿಪ್ಪತ್ತು ಮಂದಿ ಒಬ್ಬೊಬ್ಬರಿಗೆ ಕುಳಿತು, ಆ ಇಕ್ಕಟ್ಟಿನಲ್ಲಿ ಓಡಾಡತೊಡಗಿದರೆ–ಎಂಥ ಜಂಜಾಟವಾದೀತೆಂದು ನೋಡಿ!

ಇಂಥ ನೂರಾರು ಬಗೆಯ ಆಟಗಳಿವೆ. ಆರೆಂಟು ವರ್ಷದ ಕೂಸುಗಳಿಂದ ಹಿಡಿದು, ಅವರ ಅಜ್ಜ ಅಜ್ಜಿಯರೂ ಈ ಮರುಳಾಟಕ್ಕೆ ಬಲಿಯಾಗಿ ಆಡುತ್ತಿರುವುದನ್ನು ಕಂಡರೆ–ಪ್ರಪಂಚ ಮರೆಯಲು ಎಂಥ ಉಪಾಯ ಅನಿಸುತ್ತದೆ! ಇದಲ್ಲದೆ ಅನೇಕ 'ಜುಗಾರಿನ' ವಿಧಾನಗಳೂ ಇವೆ. ಗೊಂಬೆಯಾಟದ ಒಂದು ನಾಟಕ ಮಂದಿರವೂ ಅಲ್ಲಿತ್ತು. ಆದರೆ ನಾನು ಹೋದ ದಿವಸ ಅಲ್ಲಿ ಯಾವ ಪ್ರಯೋಗವಿದ್ದಿರಲಿಲ್ಲವಾದುದರಿಂದ ನಿರಾಶೆಗೊಂಡು

ಬಂದೆ. ಹಿರಿಯರ ವಿಚಾರ ಏನೇ ಇರಲಿ—ನಮ್ಮ ಕಿರಿಯರನ್ನು ಆಡಿಸಲು ಇಂಥ ಒಂದೊಂದು ಸ್ಥಳವನ್ನು ನಿರ್ಮಿಸಿದೆವಾದರೆ, ಅವರ ಗೆಲುವು ಎಷ್ಟು ಹೆಚ್ಚೀತು! ಅದು ತುಂಬ ಹಣ, ವೈಜ್ಞಾನಿಕ ಸಲಕರಣೆಗಳಿಂದ ಮಾಡುವ ಕೆಲಸವಾದರೂ, ವ್ಯಾಪಾರದ ದೃಷ್ಟಿಯಿಂದಲೂ ಯಶಸ್ವಿಯಾದೀತು. ಪೆರಿಸಿನ ಒಂದು ಭಾಗದಲ್ಲಿ–ವಿದ್ಯುತ್ ಟ್ರಾಮು, ಮೋಟರುಗಳೆರಡನ್ನೇ ಬಳಸಿ ಈ ಬಗೆಯ ಆಟದ ಮನೆ ನಡೆಸುತ್ತಿದ್ದುದನ್ನು ನಾನು ಕಂಡೆ. ಅಂತು ಟಿವೋಲಿಯ ನೆನಪು ಬಂದರೆ—ಅದೊಂದು 'ದೀಪೋತ್ಸವ; ಹುಚ್ಚರ ಸಂತೆ'ಗಳ ವಿಚಿತ್ರಮೇಳವಾಗಿ ಕಾಣಿಸುತ್ತದೆ ಮನಸ್ಸಿಗೆ.

ಆ ಸಂಜೆ ತುಂಬ ಉಲ್ಲಾಸದ ಮನಸ್ಸಿನಿಂದ ಡಾಕ್ಟರ್ ಬೊರೂಪರವರಿಗಾಗಿ ಕಾದುಕುಳಿತಿದ್ದೆ. ವೇಳೆಗೆ ಸರಿಯಾಗಿ ಅವರೂ ಬಂದರು. ಇಬ್ಬರೂ ಜತೆಗೂಡಿ ಇನ್ನೊಮ್ಮೆ ಟಿವೋಲಿಯ ದರ್ಶನಕ್ಕೆಂದು ಹೊರಟೆವು. ನಾವು ಹೋಗುವ ವೇಳೆಗೆ ಅಲ್ಲಿ ಇನ್ನಷ್ಟು ಜನಸಂದಣಿ ಹೆಚ್ಚಿತ್ತು. ಅಲೆದಾಡುತ್ತ ಅನೇಕ ವಿಷಯಗಳನ್ನು ಚರ್ಚಿಸಿದೆವು. ಅನಂತರ ರಾತ್ರಿಯ ಊಟಕ್ಕೆ ಅಲ್ಲಿನ ದೊಡ್ಡ ಹೊಟೇಲೊಂದನ್ನು ಹೊಕ್ಕೆವು. ಬೊರೂಪರು ನನಗೇನೇನು ಶಾಖಾಹಾರ ದೊರೆಯಬಹುದೆಂದು ತಾವೇ ಯೋಚಿಸಿ, ತಯಾರಿಸ ಹೇಳಿದರು. ಅತಿ ಮೆಲ್ಲಗೆ ಒಂದೊಂದೇ ಮೇಜಿನ ಮೇಲೆ ಬರತೊಡಗಿತು. ನಮ್ಮ ಭೋಜನ ಮಾತುಕತೆಗಾಗಿಯೇ ಏರ್ಪಟ್ಟುದರಿಂದ ನಾವು ಅದನ್ನೇ ಗಮನಿಸುತ್ತಿದ್ದೆವು.

ಬೊರೂಪರವರ ಸಂಭಾಷಣೆ ತತ್ವಜ್ಞಾನದ ಕಡೆಗೂ, ಆದಿವಾಸಿಗಳ ಮತ ಸಂಪ್ರದಾಯಗಳ ಕಡೆಗೂ ಹರಿಯಿತು. ಅವರು ನನ್ನೊಡನೆ ಒಮ್ಮೆಗೇ "ನಿಮ್ಮ ಅಭಿಪ್ರಾಯವೇನು? ಭಾರತೀಯ ತತ್ವಜ್ಞಾನವನ್ನು ತಿಳಿದವರಲ್ಲಿ ಡಾ। ರಾಧಾಕೃಷ್ಣನ್‌ರವರು ಅತ್ಯಂತ ದೊಡ್ಡವರೇ ಹೇಗೆ?" ಎಂದು ಕೇಳಿದರು. ನಾನು ಅವರ ಬರಹಗಳನ್ನು ಓದಿದ್ದೇ ಕಡಿಮೆ; ಅಲ್ಲದೆ ತತ್ವಜ್ಞಾನ ನನ್ನ ವಿಷಯವೂ ಅಲ್ಲವೆಂಬುದರಿಂದ, ನನ್ನೊಬ್ಬ ವಿದ್ವಾಂಸ ಮಿತ್ರರು ಹೇಳಿದ ಅಭಿಪ್ರಾಯವನ್ನು ಹೇಳಿದೆ. ಕೂಡಲೆ ಅವರು "ನಿಜ, ಅವರ ಪಾಂಡಿತ್ಯಕ್ಕಿಂತ ನನಗೆ ಡಾ। ದಾಸಗುಪ್ತರದು ಹಿರಿದೆಂದು ಕಾಣುತ್ತದೆ" ಎಂದರು. ಅನಂತರ ಅವರು "ನಮ್ಮ ತತ್ವಜ್ಞಾನಕ್ಕೂ—ನಮ್ಮ ಆದಿವಾಸಿ ಮತ ಸಂಪ್ರದಾಯಗಳಿಗೂ ಯಾವ ಸಂಬಂಧ ಸಂಪರ್ಕಗಳಿವೆ—ಎನ್ನುವುದನ್ನು ಪರಿಶೀಲಿಸಬೇಕು. ಆ ಕುತೂಹಲದಿಂದ ನಾನು ಮುಂದಣ ವರ್ಷ ಉತ್ತರಭಾರತಕ್ಕೆ

ಬರುತ್ತೇನೆ” ಎಂದು ತಿಳಿಸಿದರು.

ಆ ದಿನದ ಟಿವೋಲಿ ಭೋಜನಕ್ಕೆ ಇಬ್ಬರಿಗಾಗಿ ಸುಮಾರು ಮೂವತ್ತು ರೂಪಾಯಿಗಳಿಗಿಂತ ಹೆಚ್ಚಿಗೆ ದಂಡವನ್ನು ನನ್ನ ಮಿತ್ರರು ತೆತ್ತಿರಬೇಕು. ಯುರೋಪಿನಲ್ಲಿ ನಮಗೆ ಬರುವ ತೊಡಕು— ಈ ಹೊಟೇಲಿನದೇ. ಒಂದೊಂದು ಊರಲ್ಲಿ ಒಂದೊಂದು ತೆರ. ಒಂದೇ ಊರಲ್ಲಿ-ಒಂದೇ ವಸ್ತುವಿಗೆ ಒಂದರಿಂದ ಎಂಟರಷ್ಟು ಬೆಲೆ ಹೇಳುವ ಸಂಪ್ರದಾಯ ಹೊಟೇಲುಗಳಲ್ಲಿ. ಹೊಟೇಲಿನ ಕೀರ್ತಿ, ಕೆಲಸಗಾರರ ಸಂಖ್ಯೆ, ಕುರ್ಚಿಮೇಜುಗಳ ವಿಲಾಸ -ಇವೆಲ್ಲ ಊಟ, ಕಾಫಿಗಳ ಬೆಲೆಯನ್ನು ನಿರ್ಧರಿಸುವ ಪ್ರಮಾಣಗಳು. ಹೀಗಾಗಿ ಪ್ರವಾಸಿಯು ತುಂಬ ಎಚ್ಚರದಿಂದ ತನ್ನ ಹೊಟೇಲನ್ನು ಆರಿಸಬೇಕು. ಒಂದು 'ಲಿಮನ್'ಗೆ ನಾನು ಒಂದೇ ಊರಲ್ಲಿ ಎಂಟಾಣೆ ತೆತ್ತುದೂ ಉಂಟು; ಮೂರು ರೂಪಾಯಿ ತೆತ್ತುದೂ ಉಂಟು. ಊಟದ ವಿಚಾರದಲ್ಲೂ ಹಾಗೆಯೆ–ಸಾಮಾನ್ಯ ಒಂದಿಷ್ಟು ಬಟಾಟೆ, ಬಟಾಣಿ ಬೇಯಿಸಿ, ಜತೆಗಿಷ್ಟು ಲೆಟ್ಯೂಸ್ ಎಲೆ, ಟೊಮೆಟೊ ತುಂಡು, ಕಾಫಿ ಕೊಂಡರೆ ಐದು ರೂಪಾಯಿ ಬೆಲೆ ಒಂದು ಕಡೆ; ಇನ್ನೊಂದು ಕಡೆ ಅದಕ್ಕೇನೆ ಅದರ ಮೂರು ಪಾಲು ಬೆಲೆ ತೆರುವ ಪ್ರಸಂಗವೂ ಬರುತ್ತಿತ್ತು. ಬಡವರು ಬಡ ಹೊಟೇಲನ್ನೇ ಹುಡುಕಬೇಕು; ಮಧ್ಯಮ ವರ್ಗದವರು ಅಂಥವನ್ನು ಅರಸಬೇಕು.

ಹೊಟೇಲಿಂದ ಹೊರಗೆ ಬಂದೆವು. ರಾತ್ರಿ ಬಹು ವೇಳೆ ಸರಿದಿತ್ತು. ಮಿತ್ರರು ಬೀಳ್ಕೊಟ್ಟರು, ನಾನು ನನ್ನ ಹೊಟೇಲಿಗೆ ಮರಳಿದೆ. ಮರುದಿನ ಮಧ್ಯಾಹ್ನ ನಾನು ಅಲ್ಲಿಂದ ಹೊರಡುವವನು. ಹೀಗಾಗಿ ಗ್ಲಿಪ್ಟೊಟೇಕ್, ಪಾರ್ಲಿಮೆಂಟ್ ಮಂದಿರ ಮೊದಲಾದುವನ್ನು ಇನ್ನೊಮ್ಮೆ ನೋಡಿಕೊಂಡು ಬಂದೆ. ಸಂಜೆ ಸುಮಾರು ನಾಲ್ಕು ಘಂಟೆಗೆ ಹೊರಡುವ ರೈಲಿನಲ್ಲಿ ಹೊರಡಲು ಕೇಂದ್ರನಿಲ್ದಾಣಕ್ಕೆ ಬಂದೆ. ಅಲ್ಲಿಂದ ನೆಟ್ಟಗೆ ಹೆಂಬರ್ಗ್ ನಗರಕ್ಕೆ ಹೋಗುವ ಬಂಡಿಯೊಂದರಲ್ಲಿ ಹೋಗಿ ಕುಳಿತೆ. ರಾತ್ರಿ ಪಯಣವಿದ್ದುದರಿಂದ ನಾನು ಮಲಗಲು ಸ್ಥಳ ಕಾದಿರಿಸಿದ್ದೆ. ಅದು ಮೂರನೆಯ ಕ್ಲಾಸು ಬಂಡಿಯಾದರೂ ನಮ್ಮೂರ ಎರಡನೇ ತರಗತಿಯಂತೆ-ಹಾಸುಗೆ, ನೀರು ಎಲ್ಲವುಗಳ ಸೌಕರ್ಯವಿತ್ತು. ನಮ್ಮ ಕೊಟಡಿಯಲ್ಲಿ ಇಬ್ಬರೇ ಪ್ರಯಾಣಿಕರು. ನನಗೆ ಬಂಡಿಯ ಗಾಜಿಗೆ ಕಣ್ಣನ್ನಂಟಿಸಿ ನೋಡುವ ಕೆಲಸ.

ಒಂದೇ ಸವನೆ ಡೆನ್‌ಮಾರ್ಕಿನ ಹಸುರು ಹೊಲಗಳು ಹೊರಳುತ್ತಿ

ದ್ದುವು. ವೃಕ್ಷಾವಳಿಗಳು ಕಡಿಮೆ. ಅಲ್ಲಲ್ಲಿನ ಸಾಲುಮರಗಳು ಮಾತ್ರ. ದಾರಿಯಲ್ಲಿ ಅನೇಕ ನಗರಗಳು ಸಿಗುತ್ತವೆ. ಅವೆಲ್ಲ ನಮ್ಮ ಮಂಗಳೂರು ಹಂಚಿನ ಇಳಿಮಾಡಿನ ಮನೆಗಳಂತಿವೆ ನೋಟಕ್ಕೆ. ಹೊಲಗಳೆಂಬುವು–ಬಿಜಾಪುರ ಪ್ರಾಂತದಲ್ಲಿನ ವಿಶಾಲವೂ ಸಮತಟ್ಟೂ ಆಗಿ ಕಾಣಿಸುವ ಹೊಲಗಳಂತಿವೆ; ಆದರೆ ತೀರ ಸಸ್ಯ ಭರಿತವಾದುವು.

ಕಾಪನ್‌ಹೇಗನ್ ನಗರ ಇರುವುದು ದ್ವೀಪವೊಂದರಲ್ಲಿ. ನಮ್ಮ ರೈಲು ದಾರಿಯು ಜಟ್‌ಲೆಂಡ್ ಭೂಶಿರವನ್ನು ಹಾದು, ಮುಂದಿನ ಜರ್ಮನ್ ನಗರವಾದ ಹೆಂಬರ್ಗಿಗೆ ಹೋಗುವಂಥದು. ದ್ವೀಪದ ಕೊನೆಯು ಬಂದಿತು. ನಮ್ಮ ರೈಲು ಒಂದು ಸ್ಟೇಶನಿನಲ್ಲಿ ಬಂದು ನಿಂತಿತು. ನಮ್ಮ ಬಂಡಿ ನಿಂತಲ್ಲಿಯೇ ಎದುರಿಂದ ಸ್ಟೇಶನಿನೊಳಗಡೆಯೆ ಒಂದು ಸಾಲು ಮೋಟರುಗಳ ಪ್ರವಾಹ ಬರುವುದನ್ನು ಕಂಡು ಆಶ್ಚರ್ಯಗೊಂಡೆ. ಏನೆಂದು ನೋಡಿದರೆ–ನಿಲ್ದಾಣದ ಪ್ಲಾಟಫಾರ್ಮಿಗೆ ತಾಗಿ ಹಡಗೊಂದು ಬಂದು ನಿಂತಿತ್ತು—ಅದರ ಗರ್ಭದಿಂದ ಜಟ್‌ಲೆಂಡಿನಿಂದ ಕಡಲು ದಾಟಿ ಬಂದ ನೂರಾರು ಮೋಟರು ವಾಹನಗಳು ಹೊರಗೆ ಬರುತ್ತಿದ್ದುವು. ನಮ್ಮ ರೈಲು ಬಂಡಿಯು ತುಸು ಹೊತ್ತಿನಲ್ಲಿ–ರೈಲ್ವೆ ನಿಲ್ದಾಣದ ಇನ್ನೊಂದು ಭಾಗಕ್ಕೆ ತಾಗಿ ನಿಂತ ಹಡಗೊಂದರ, ತೆರೆದ ಮೂತಿಯೊಳಕ್ಕೆ ಹೊಕ್ಕುಬಿಟ್ಟಿತು. ಕುಳಿತ ನಾವು ಬಂಡಿಯಲ್ಲಿದ್ದೇವೆ. ನಮ್ಮ ಬಂಡಿ ಹಡಗಿನ ಉದ್ದಕ್ಕೂ ನಿಂತರೆ–ಅದರ ಆಚೀಚೆ ಇನ್ನೆರಡು ಗೂಡ್ಸುಗಾಡಿಗಳಿದ್ದುವು. ಈ ಮೂರೂ ಬಂಡಿಗಳನ್ನು ತುಂಬಿಸಿಕೊಂಡು, ಹಡಗು ನಿಲ್ದಾಣವನ್ನು ಬಿಟ್ಟು ಕಡಲಿನಲ್ಲಿ ಚಲಿಸತೊಡಗಿತು. ನಾವು ರೈಲಿಂದಿಳಿದು, ಹಡಗಿನ ಮೇಲೆ ಬಂದು, ಅಡ್ಡಾಡಿ ತಿರುಗಿ ನಮ್ಮ ಸ್ಥಾನ ಸೇರಿದೆವು. ಒಂದೂವರೆ ತಾಸಿನ ಅವಧಿಯಲ್ಲಿ ನಮ್ಮ ಹಡಗು ಆಚೆಯ ದಂಡೆಗೆ ಹೋಗಿ, ನೆಲವನ್ನು ನಾಟಿ ನಿಂತಿತು. ಒಳಗಿಂದ ಬಂಡಿಗಳೊಂದೊಂದಾಗಿ ಹೊರಕ್ಕೆ ಬಂದುವು. ನಮ್ಮ ಪಯಣ ಮುಂದುವರಿಯಿತು. ಇನ್ನು ನಮಗೆ ಸಿಗುವುದು ಗಡಿ; ಅನಂತರ ಪಶ್ಚಿಮ ಜರ್ಮನಿ. ರಾತ್ರಿ ರೈಲಿನವರೇ ಬಂದು ನಮಗೆಲ್ಲ ಮಲಗಲು ಹಾಸುಗೆ ಹಾಕಿದರು; ಬೆಚ್ಚಗಿನ ಹಚ್ಚಡ ಇರಿಸಿಹೋದರು, ನಾವು ಒರಗಿಕೊಂಡೆವು. ಆದರೆ ದಾರಿಯಲ್ಲಿ ನಾಲ್ಕು ನಾಲ್ಕು ಬಾರಿ—ಡೆನ್‌ಮಾರ್ಕ ಮತ್ತು ಜರ್ಮನಿಗಳ ಸುಂಕದವರ, ಪಾಸುಪೋರ್ಟಿನವರ ಪ್ರವೇಶ, ತನಿಖಿಗಳಿಂದಾಗಿ–ನಿದ್ರೆ ಚೆನ್ನಾಗಿ ಬರಲಿಲ್ಲ.

## ೧೧. ಹೆಂಬರ್ಗ್ ನಗರದಲ್ಲಿ

ಮಹಾಯುದ್ಧದ ಮೊದಲಿನಿಂದಲೂ ಒಂದು ಬಗೆಯ ಅಭಿಮಾನ ನನಗೆ ಜರ್ಮನ್ ಜನಸಾಮಾನ್ಯರ ವಿಚಾರವಾಗಿತ್ತು. ಅವರು ನಾಜಿ ತತ್ತ್ವವನ್ನು ಅವಲಂಬಿಸಿ, ಹಿಟ್ಲರನ ಕೆಳಗೆ ಯುದ್ಧಕ್ಕೆ ಧುಮುಕಿ, ಪ್ರಪಂಚವನ್ನು ಹಾನಿಗೆ ಗುರಿಪಡಿಸಿದುದು ನಿಜವಾದರೂ–ಜರ್ಮನಿಯ ಜನ ಸಾಮಾನ್ಯರೆಲ್ಲ ಯುದ್ಧಾಸಕ್ತರು ಎಂಬ ಭಾವನೆ ನನಗಾಗಿಲ್ಲ. ಯಂತ್ರ ವಿಜ್ಞಾನ, ವಿಜ್ಞಾನದ ಕ್ಷೇತ್ರಗಳಲ್ಲೂ, ಸಂಸ್ಕೃತ ಮೊದಲಾದ ಭಾರತೀಯ ಭಾಷೆಗಳ ಸಂಶೋಧನೆಯ ವಿಚಾರದಲ್ಲೂ ಜರ್ಮನ್ ಪಂಡಿತರು ನಡೆಯಿಸಿದ ಕೆಲಸವು ನನ್ನ ಅಭಿಮಾನಕ್ಕೆ ಕಾರಣವಾಗಿತ್ತು. ಆದುದರಿಂದ–ಯುರೋಪಿಗೆ ಹೋದರೆ, ಜರ್ಮನಿಯನ್ನು ನೋಡಬೇಕೆಂದು ನಿಶ್ಚಯಿಸಿದ್ದೆ. ಲಂಡನಿನಲ್ಲಿ ದೊರೆತ ಒಬ್ಬಿಬ್ಬರು ಮಿತ್ರರು ಆಗತಾನೇ–ಮ್ಯೂನಿಕ್, ಫ್ರಾಂಕಫರ್ಟ್, ಕೊಲೋನ್ ಮೊದಲಾದ ನಗರಗಳನ್ನು ಸಂದರ್ಶಿಸಿ ನಿರಾಶರಾಗಿ ಮರಳಿಬಂದಿದ್ದರು. 'ಆ ನಗರಗಳಿನ್ನೂ ಯುದ್ಧದ ಹಾನಿಯಿಂದ ಮಸಣ ಸದೃಶವಾಗಿವೆ; ಅವನ್ನೇನು ನೋಡುವುದು?' ಎಂಬ ಅಭಿಪ್ರಾಯವನ್ನು ಕೊಟ್ಟಿದ್ದರು. ಗೆಳೆಯರಾದ ಪಿಳ್ಳೆಯವರು ಯುದ್ಧಾನಂತರ ಎರಡೆರಡು ಬಾರಿ ಆ ಎಲ್ಲ ಪ್ರದೇಶಗಳನ್ನು ತಿರುಗಿ ಬಂದವರಾದುದರಿಂದ "ಏನೋ, ಹೆಂಬರ್ಗ್ ನಗರ ಚೇತನಗೊಂಡಿದೆಯಂತೆ. ಆದುದರಿಂದ ನೀವು ಡೆನ್‌ಮಾರ್ಕಿನಿಂದ ಹಾಲೆಂಡಿಗೆ ಬರುವಾಗ ನಿಂತು ನೋಡಿ ಬನ್ನಿ" ಎಂದು ಸಲಹೆ ಕೊಟ್ಟಿದ್ದರು.

ಹೆಂಬರ್ಗ್ ಪ್ರದೇಶ ಅಮೇರಿಕದ ಅಧೀನವಾಗಿತ್ತು ಯುದ್ಧಾನಂತರ. ಮೊದಲಿನ ದಿನಗಳಲ್ಲಿ ಜರ್ಮನಿಗೆ ಹೋಗುವವರು ಜರ್ಮನ್ ಭಾಷೆಯನ್ನು ತಿಳಿದೇಹೋಗುವುದು ಅವಶ್ಯವೆಂದಿದ್ದರೂ, ಅಮೇರಿಕನ್ ಜನಗಳ ಆಕ್ರಮಣದಿಂದಾಗಿ ಈಗಣ ಜನತೆಗೆ ಇಂಗ್ಲಿಷಿನ ಪರಿಚಯ ಚೆನ್ನಾಗಿದೆ–ಎಂದು ತಿಳಿದುಕೊಂಡಿದ್ದೆ. ಮಿತ್ರರಾದ ಡಾ। ಬಾಕೆಯವರು ಹೆಂಬರ್ಗಿನಲ್ಲಿ ವಾಸಿಸುತ್ತಿರುವ ಮಿಸೆಸ್ ಎಲಿಸಬೆತ್ ಶುಕ್ಟ್ ಎಂಬ ಗ್ರಂಥಕರ್ತಳಿಗೆ ಪರಿಚಯ ಪತ್ರಕೊಟ್ಟುದಲ್ಲದೆ, ಮುಂಚಿತವಾಗಿ ಬರೆದೂ ಇದ್ದರು. ಆದುದರಿಂದ ನಾನು ಅಧಿಕ ನಿರೀಕ್ಷೆಯಿಂದಲೇ ಈ ನಗರವನ್ನು ಸಂದರ್ಶಿಸಿದೆ.

ಮೊದಲರಾತ್ರಿಯೇ ನಾವು ಡೆನ್‌ಮಾರ್ಕಿನ ಗಡಿಯನ್ನು ದಾಟಿದ್ದೆವು.

ನಮ್ಮ ರೈಲು ಬಂಡಿ ಬೆಳಗಾಗುವಾಗ ಹೆಂಬರ್ಗಿಗೆ ಸಮೀಪವಾಗಿ ಚಲಿಸಿತ್ತು. ಸಮೀಪವಾದಂತೆ, ಅಲ್ಲಲ್ಲಿ ಅನೇಕ ಸಣ್ಣ ಪುಟ್ಟ ನಗರಗಳು ಕಾಣಿಸತೊಡಗಿದುವು. ತೀರ ಹತ್ತಿರಕ್ಕೆ ಬಂದಂತೆ ಅನೇಕ ಕಾರ್ಖಾನೆಗಳೂ ಕಾಣಿಸತೊಡಗಿದುವು. ಅಲ್ಲಲ್ಲಿ, ಇಂಗ್ಲೆಂಡಿನಲ್ಲಿ ಕಂಡುದಕ್ಕಿಂತ ಹೆಚ್ಚಾಗಿ, ಬಾಂಬಿನ ಆಘಾತದಿಂದ ಮುರಿದಂಥ ಕಟ್ಟಡ, ಮನೆಗಳ ಚಿತ್ರ ಕಾಣಿಸುತ್ತಲೇ ಇತ್ತು. ಹೆಂಬರ್ಗಿನ ದೂರದ ವಿಸ್ತರಣಗಳಿಗೆ ಬರುವಾಗಲೂ ಈ ಕುರುಹು ಇನ್ನಷ್ಟು ಸ್ಪಷ್ಟವಾಗಿತ್ತು. ಸುಮಾರು ಬೆಳಗಿನ ಎಂಟು ಘಂಟೆಗೆ-ಬಂಡಿ ಹೆಂಬರ್ಗ್ ಅಲ್ಟೊನಾ ಎಂಬಲ್ಲಿಗೆ ಬಂದು ತಂಗಿತು. ನಾನು ಅದರಿಂದಿಳಿದು ಹೊರಕ್ಕೆ ಬಂದೆ. ಆದರೆ ವಿಚಾರಿಸಿದಲ್ಲಿ—ಹೆಂಬರ್ಗ ನಗರ ಬೇರೆಯಂತೆ; ಹೆಂಬರ್ಗ್ ಅಲ್ಟೊನಾ ಬೇರೆಯಂತೆ! ಎರಡು ಹರದಾರಿಯ ದೂರ ಒಂದರಿಂದೊಂದಕ್ಕೆ —ಎಂಬುದು ತಿಳಿಯಿತು. ತಿರುಗಿ ಬಂದು ಇನ್ನೊಂದು ಬಂಡಿಯನ್ನೇರಿ ಹೆಂಬರ್ಗ್ ನಗರಕ್ಕೆಬಂದೆ. ನನ್ನ ಪೆಟ್ಟಿಗೆ ಹಿಡಿದುಕೊಂಡು ನಾನು ಇಳಿದಾಗ ಜನ ಇರಲಿಲ್ಲ. ಇಬ್ಬಿಬ್ಬರು ಆಳುಗಳು ಮುಂದೆ ಬಂದು ನನ್ನ ಪೆಟ್ಟಿಗೆಯನ್ನು ಹೆಚ್ಚಿಗೆ ಹೊರಲು ಸಿದ್ಧರಾದರು. ಅಲ್ಲಿಯ ತನಕ ತಾನಾಗಿ ಮುಂದೆ ಬರುವ ರೈಲ್ವೆ ಕೂಲಿಗಳನ್ನು ನಾನು ಆ ದೇಶದಲ್ಲೆಲ್ಲೂ ಕಂಡಿರಲಿಲ್ಲ. ನಮ್ಮ ಸಾಮಾನನ್ನು ತಾವೇ ಹೊತ್ತುಕೊಂಡು ಬರುವುದು ವಾಡಿಕೆಯಾಗಿತ್ತು. ಹಾಗೆ ಕರೆದರೆ ಒಬ್ಬಿಬ್ಬರು ಸಿಗಬಹುದು. ಹೊರತು ತಾವಾಗಿ ಮುಂದೆ ಓಡಿ ಬರುವವರಿಲ್ಲ.

ಮೇಲಿನ ಚಾವಡಿಗೆ ಬಂದೆ; ಅಲ್ಲಿನ ವಿನಿಮಯ ಕಚೇರಿಯಲ್ಲಿ ನನ್ನ ಚೆಕ್ಕುಗಳನ್ನು ಬದಲಿಸಿ, ಜರ್ಮನ್ ನೋಟು, ನಾಣ್ಯಗಳನ್ನು ಸಂಗ್ರಹಿಸಿದೆ. ಇನ್‌ಫರ್ಮೇಶನ ಆಫೀಸಿಗೆ ಹೋಗಿ—ಹೊಟೇಲು ಗೊತ್ತುಪಡಿಸಿ, ವಿಶೇಷ ಮಾಹಿತಿ ಪತ್ರಗಳನ್ನು ದೊರಕಿಸಿಕೊಂಡೆ. ಆಳು ನನ್ನ ಚೀಲವನ್ನು ಹೊರಗೆ ತಂದಿರಿಸಿದ. ನಾನು ಕೊಟ್ಟ ಒಂದೂವರೆ ಮಾರ್ಕ್ (ರೂ. 1-10-0) ಕೊಂಡು ಹಸನ್ಮುಖಿಯಾಗಿ ತೆರಳಿದ. ಅಷ್ಟಕ್ಕೆ ಇನ್ನೊಬ್ಬನು ಬಂದು ನನ್ನ ಚೀಲವನ್ನು ನನ್ನ ಹೊಟೇಲಿನ ತನಕ ಎತ್ತಿಕೊಂಡು ಬಂದ; ಅವನಿಗೂ ಒಂದೂವರೆ ಮಾರ್ಕು ಕೊಟ್ಟಾಗ ಸಂತೋಷದಿಂದಲೇ ಮರಳಿದ.

ಹೊಟೇಲಿನ ಎರಡನೆಯ ಮಹಡಿಯಲ್ಲಿ ವಿಶಾಲವಾದ, ಚೊಕ್ಕವಾದ ಒಂದು ಕೊಟಡಿಯಿತ್ತು. ಮುಖ ತೊಳೆದು, ಉಡುಗೆ ಬದಲಿಸಿ, ಅಲ್ಲಿಯೇ ಉಪಾಹಾರ ಮುಗಿಸಿ, ಹೊಟೇಲಿನ ಆಫೀಸು ನಡೆಸುತ್ತಿದ್ದವಳೊಡನೆ—

ಮಿಸೆಸ್ ಶುಕ್ಸ್ಟರವರ ಫೋನ್ ನಂಬರವನ್ನು ಹುಡುಕಿಕೊಡಲು ಕೇಳಿದೆ. ಆಕೆಗೆ ಅಲ್ಪ ಸ್ವಲ್ಪ ಇಂಗ್ಲಿಷು ಬರುತ್ತಿತ್ತು. ಅವಳ ಸಹಾಯದಿಂದ-ಫೋನ್ ಸಂಬಂಧ ದೊರೆಯಿತು. ಮಿಸೆಸ್ ಶುಕ್ಟರವರಿಂದ "ನಾನು ಬಿದ್ದು ಕಾಲು ಮುರಿದುಕೊಂಡು ಇನ್ನೂ ಮನೆಯಲ್ಲಿದ್ದೇನೆ. ನೀವು ಮನೆಗೇನೆ ಬನ್ನಿ. ನೀವು ಬರುವಿರೆಂದು ತಿಳಿದು ನನ್ನೊಬ್ಬ ಸ್ನೇಹಿತರನ್ನು ಬರಹೇಳಿದ್ದೇನೆ. ಅವರು ನಿಮಗೆ ನಗರವನ್ನೆಲ್ಲಾ ತೋರಿಸುತ್ತಾರೆ" ಎಂಬ ಮಾತು ಬಂದಿತು.

ಅವರ ಮನೆಗೆ ಹೋದೆ. ವಿಶಾಲವಾದ ನಗರದ ಬೀದಿಗಳನ್ನು ದಾಟಿ, ಒಂದು ಸರೋವರದಂತಿರುವ ಜಲಾಶ್ರಯದ ಮಗ್ಗುಲಿಗಿರುವ ದಾರಿಯಿಂದ ಹೋದೆ. ದಾರಿಯ ಇಕ್ಕಡೆಗಳಲ್ಲೂ—ಸಾಲು ಮರಗಳು; ಆಚೀಚೆ ಉದ್ಯಾನ ವುಳ್ಳ ಮನೆಗಳಿದ್ದುವು. ಸುಮಾರು ನಾಲ್ಕೈದು ಮೈಲು ದೂರ ದಾರಿಯನ್ನು ಸಾಗಿ, ಡಾಕ್ಟರ್ ಶುಕ್ಟರವರ ಮನೆಯನ್ನು ಸೇರಿದೆ.

ಮಿಸೆಸ್ ಶುಕ್ಟರವರೇ ಬಂದು ಕದ ತೆರೆದರು; ನನ್ನನ್ನು ತಮ್ಮ ಕೊಟಡಿಗೆ ಕರೆದೊಯ್ದು ಕುಳ್ಳಿರಿಸಿದರು; ಚಹಾ ತರಹೇಳಿದರು. ಆಚೀಚಿನ ಆವರಣ, ಆಸನಗಳೆಲ್ಲ ಸಿರಿವಂತಿಕೆಯ ಲಕ್ಷಣವನ್ನು ಸಾರುತ್ತಿದ್ದುವು. ಅವರೂ ಅವರ ಗಂಡನೂ ಅದೇ ಮನೆಯಲ್ಲಿದ್ದಾರೆ. ಅವರ ಮಗನು ಬೇರೆಯಾಗಿ ವಾಸಿಸುತ್ತಿದ್ದಾನೆ. ಅವರ ಗಂಡ ಹಿಂದೆ ಜರ್ಮನಿಯ ಪ್ರಸಿದ್ಧವಾದೊಂದು ಬ್ಯಾಂಕಿನ ಡಿರೆಕ್ಟರರಾಗಿದ್ದರು. ಇವರಿಬ್ಬರೂ ಹೆಸರಾದ ವ್ಯಕ್ತಿಗಳು. ಅವರ ಪೂರ್ವದ ನೆಲೆ ಬರ್ಲಿನ್ ನಗರದಲ್ಲಿ. ಅದು ರಶ್ಯನರ ವಶವಾಯಿತು; ಇವರ ಸರ್ವಸ್ವವೂ ಹೋಯಿತು; ಅಲ್ಲಿ ಅವರಿಗೆ ಸೆರೆಮನೆಯ ಸುಖವೂ ದೊರೆಯಿತು. ಹಾಗೂ ಹೀಗೂ ತಪ್ಪಿಸಿಕೊಂಡು ಬಂದು ಈಗ ಹೆಂಬರ್ಗಿನಲ್ಲಿ ವಾಸಿಸತೊಡಗಿದ್ದಾರೆ. ಅವರ ಹಿಂದಿನ ಸ್ಥಿತಿಯು ಈಗಿಗಿಂತ ಎಷ್ಟೋ ಪಾಲು ಉತ್ತಮವಾಗಿತ್ತು.

ಅವರು ಜರ್ಮನಿಯಲ್ಲಿ ಸಾಕಷ್ಟು ಹೆಸರನ್ನು ಗಳಿಸಿದವರು. ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಪೌರ್ವಾತ್ಯ ದೇಶಗಳ ವಿಷಯವಾಗಿಯೂ ಬಲ್ಲವರು; ಸಂಚರಿಸಿದವರು. ಇಂಡೋನೇಸ್ಯ ಸಂಸ್ಕೃತಿಯ ವಿಚಾರದಲ್ಲೊಂದು ಗ್ರಂಥ ಬರೆದಿದ್ದಾರೆ. ಒಮ್ಮೆ ಗಾಂಧಿಜೀಯವರು ಅವರನ್ನು ಆಮಂತ್ರಿಸಿದ್ದರು. ಆ ವೇಳೆಗೇನೆ ಅವರ ಆರೋಗ್ಯ ಕೆಟ್ಟು ಅವರು ಸ್ವದೇಶಕ್ಕೆ ಮರಳುವಂತಾಯಿತು. ನಾನು ಬಂದ ಸಂದರ್ಭವನ್ನು ಕಂಡು, ತನ್ನ ಬೀರುವಿನಿಂದ

ಒಂದು ಟೈಪ್ ಬರಹದ ಪುಸ್ತಕ ತೆಗೆದರು. ಅದು ಪೂರ್ವ ಬಂಗಾಲದಲ್ಲಿ ಅವರು ಸಂಗ್ರಹಿಸಿದ ಜಾನಪದ ಕವನಗಳ ಇಂಗ್ಲಿಷ್ ಅನುವಾದ. ಈ ಅನುವಾದ ಮಾಡಿದ ಮಹನೀಯರು ಅನೇಕ ಹಿಂದೀ ಪದಗಳನ್ನು, ಮೂಲದಲ್ಲಿದ್ದಂತೆ ಬಳಸಿದ್ದರು. ಮತ್ತು ಅನೇಕ ತರ್ಜುಮೆಗಳು ಇಂಗ್ಲಿಷಿನಲ್ಲಿ ಅರ್ಥವಾಗುವಂತಿರಲಿಲ್ಲ. ಹೀಗಾಗಿ ನಮ್ಮ ಸಂಭಾಷಣೆಯು ಎಡೆ ಎಡೆಯಲ್ಲಿ— "ಅಗರು" "ಕುಂಕುಮ ಸವರಿದ ಬೈತಲೆ" ಮೊದಲಾದ ನಮ್ಮ ದೇಶದ ವಸ್ತು ಮತ್ತುರೀತಿಗಳ ಅರ್ಥವನ್ನುಕೇಳಿ ಬರೆದುಕೊಂಡರು. ಅವರ ಜೀವ,ಮನಸ್ಸುಗಳೆರಡೂ ತುಂಬ ಮಿದುವಾದುವು; ವಿವೇಕದಿಂದ ತುಂಬಿದುವು. ನಾವು ವಿರಾಮವಾಗಿ ಮಾತನಾಡಲು ಆ ರಾತ್ರಿ ಊಟಕ್ಕೆ ಬರಬೇಕೆಂದು ಅವರು ತಿಳಿಸಿದರು. ಅಷ್ಟರಲ್ಲಿ ಅವರ ಕರೆಯನ್ನು ಮನ್ನಿಸಿ ಅವರ ಮಿತ್ರರಾದ ಡಾ। ಫ್ಲೆಮಿಂಗ್ ಎಂಬವರು ಬಂದರು. ಅವರು ಸುಮಾರು ನಾಲ್ವತ್ತು ವಯಸ್ಸಿನ ಯೌವನಸ್ಥರು. ಅನೇಕ ಹೆಂಬರ್ಗ್ ಪತ್ರಿಕೆಗಳಿಗೆ ಕಲಾವಿಮರ್ಶಕರಾಗಿ ಲೇಖನಗಳನ್ನು ಬರೆಯುತ್ತಿದ್ದಾರೆ. ಅದರಂತೆ ವಿದೇಶದ ಪತ್ರಿಕೆಗಳು ಅವರನ್ನು ಜರ್ಮನ್ ಗ್ರಂಥಗಳ ವಿಮರ್ಶೆಗಾಗಿಯೂ ಕೇಳುತ್ತಿವೆ. ಪ್ರಥಮದಿನ ತಮ್ಮ ನಗರದ ವಿವಿಧ ಭಾಗಗಳ ಪರಿಚಯ ಮಾಡಿಕೊಡುವ ಹೊಣೆ ಅವರದ್ದಿತ್ತು. ಸಮಾನಾಭಿರುಚಿಯ ಒಬ್ಬರು ದೊರೆತುದಕ್ಕಾಗಿ ನನಗೆ ತುಂಬಾ ಸಂತೋಷವಾಯಿತು. ನಾವಿಬ್ಬರೂ ಶುಕ್ಟರವರನ್ನು ಬೀಳ್ಕೊಟ್ಟು ನಗರ ಸಂಚಾರಕ್ಕಾಗಿ ಹೊರಟೆವು.

ಅವರ ಮನೆಗೆ ತೀರ ಸಮೀಪದಲ್ಲೊಂದು ಕಾಲುವೆಯಿತ್ತು. ಅಲ್ಲಿಗೆ ಬಂದು ಮೋಟರ ಲಾಂಚು ಹಿಡಿಯಬೇಕು. ಲಾಂಚು ಕಾಲುವೆಯುದ್ದಕ್ಕೂ ಸಂಚರಿಸುವಂಥದು. ಈ ಕಾಲುವೆಯು ಎಲ್ಬ್ ನದಿಗೆ ಕೂಡುತ್ತಿದೆಯಾದರೂ, ಸಿಹಿ ನೀರಿನ ಕಾಲುವೆಯಾಗಿದೆ. ಸುಮಾರು ಎರಡು ಮೂರು ಮೈಲು ಕಾಲುವೆಯಲ್ಲಿಯೇ ನಾವು ಸಾಗಿದರೆ-ಹೆಂಬರ್ಗಿನ ಕೇಂದ್ರಭಾಗಕ್ಕೆ ಬರುತ್ತೇವೆ. ಅಲ್ಲಲ್ಲಿ ನಿಂತು,ದಂಡೆಗೆ ತಾಗಿ,ಜನಗಳನ್ನು ಇಳಿಸಿಕೊಂಡು, ಲಾಂಚು ಸಾಗುತ್ತದೆ. ಕಾಲುವೆಯ ಇಕ್ಕಡೆಯ ನೋಟ ತೀರ ರಮಣೀಯವಾಗಿತ್ತು. ಆಚೀಚಿನ ದಂಡೆಗಳಲ್ಲೆಲ್ಲ ಮರಗಳು; ಖಾಸಗಿ ಮನೆಗಳು, ತೋಟಗಳು. ದಂಡೆಯ ಮರಗಳಲ್ಲಿ ವಿಲ್ಲೋ ಮರಗಳೇ ಹೆಚ್ಚು. ಅವು ಬಾಗಿ, ತಮ್ಮ ತೂಕಡಿಸುವ ತೆಳ್ಳಗಿನ ಎಲೆಗಳನ್ನು ಇಳಿಯ ಬಿಟ್ಟು, ಗಾಳಿಗೆ ತೂಗುವಾಗ

ಚವರಿ ಬೀಸುವಂತೆ ಕಾಣುತ್ತದೆ. ಪಾಶ್ಚಾತ್ಯರು ಏಕೋ ಏನೋ ಈ ಮರಕ್ಕೆ "ಅಳುವ ವಿಲ್ಲೊ" (Weeping willow) ಎಂದು ಕರೆದಿದ್ದಾರೆ. ಅದರ ಕೊಂಬೆ, ರೆಂಬೆ, ಎಲೆಗಳಿಗೆ ಲಲಿತವಾದ ರೂಪವಿದೆ. ಅದರ ರೇಖೆಗಳೆಲ್ಲ ನೆಲಕ್ಕೆ ಮುಖಮಾಡುವುದರಿಂದ—ದುಃಖ ಸೂಚನೆಯೆಂದು ಹಾಗೆ ಕರೆದರೋ ಏನೋ. ವಿಲ್ಲೋ ತುಂಬ ದೊಡ್ಡ ಮರವಾಗಿ ಬೆಳೆಯುತ್ತದೆ.

ಸುಮಾರು ಅರ್ಧತಾಸಿನಲ್ಲಿ–ನಾವು ನಗರದ ನಡುವಣ ಭಾಗಕ್ಕೆ ಬಂದೆವು. ಭವ್ಯವಾದ ಕಟ್ಟಡಗಳ ಸಾಲುಗಳು, ವಾಹನ ಸಂಚಾರ,ಹಿರಿಯ ಅಂಗಡಿಗಳು ತುಂಬಿಕೊಂಡಂತಹ ಭಾಗವದು. ರೈಲುದಾರಿಯಲ್ಲಿ ನಾನು ನನ್ನ ಕನ್ನಡಕವನ್ನು ಕಳೆದುಕೊಂಡಿದ್ದುದರಿಂದ, ಒಬ್ಬ ಕನ್ನಡಕ ವ್ಯಾಪಾರಿಯಲ್ಲಿಗೆ ಹೋಗಿ ಹೊಸ ಕನ್ನಡಕದ ಆಯ್ಕೆಮಾಡಿಕೊಂಡು, ಅದು ದೊರೆಯುವ ತನಕ ಅಲೆದಾಡಿದೆವು. ದಾರಿಯ ಅಂಗಡಿಗಳಲ್ಲಿ ವಸ್ತ್ರ ಬಟ್ಟೆಗಳ ಹಲವು ಅಂಗಡಿಗಳಿದ್ದುವು. ಅವುಗಳ ಬಣ್ಣ, ಚಿತ್ರಕೆಲಸಗಳೆಲ್ಲ–ಜರ್ಮನ್ ಕಸುಬುದಾರರ ಕೃತಿಗಳು; ಪರದೇಶದವರ ಅನುಕರಣೆಗಳಲ್ಲ. ಬೆಲೆಯನ್ನು ನೋಡಹೋದರೆ-ಇಂಗ್ಲೆಂಡಿಗಿಂತ ಎಷ್ಟೋ ಪಾಲು ಅಗ್ಗವಾಗಿಯೂ ಕಾಣಿಸಿದುವು. ಅಂಗಡಿಗಳಲ್ಲಿ ಬಟ್ಟೆಗಳನ್ನು ಪ್ರದರ್ಶಿಸುವ ರೀತಿಯಲ್ಲೂ ಜರ್ಮನರು ತೋರುವ ಓರಣ ಬೇರೆಯೇ ಉಳಿದವರದು ಬೇರೆಯೇ ಆಗಿ ಕಾಣಿಸುತ್ತವೆ. ಸ್ವಲ್ಪ ಅಲೆದಾಡಿದ ಬಳಿಕ—ಅಲ್ಲಿನ ದೊಡ್ಡದೊಂದು ಉಪಾಹಾರ ಮಂದಿರಕ್ಕೆ ಹೋದೆವು. ಅದು ಶಾಖಾಹಾರಿಗಳ ಸಲುವಾಗಿರುವ (-ತತ್ತಿಯೊಂದನ್ನು ಬಿಟ್ಟು) ಮಂದಿರ. ಅಲ್ಲಿ ನಾಲ್ಕಾರು ಬಗೆಯ ತಿನಿಸನ್ನುಕೊಂಡು ಊಟಕ್ಕೆ ಕುಳಿತೆವು.ಶಾಖಾಹಾರವನ್ನು ವಿವಿಧ ರುಚಿ,ರೀತಿಗಳಿಂದ ಮಾಡುವ ಕಲೆ ಅವರಿಗೆ ಚೆನ್ನಾಗಿ ತಿಳಿದಂತಿತ್ತು. ಈ ಹೊಟೇಲನ್ನು ಸಂದರ್ಶಿಸುವವರ ಸಂಖ್ಯೆಯೂ ಬಹುವಾಗಿತ್ತು. ಅಲ್ಲಿಯೂ, ದಾರಿಯಲ್ಲಿಯೂ ನಾನು ಕಂಡ ನೋಟದಲ್ಲಿ ಒಂದು ಸಂಗತಿ ಮಾತ್ರ ತೀರ ಸ್ಪಷ್ಟವಾಗಿ ಕಾಣುತ್ತಿತ್ತು–ಅದೇನೆಂದರೆ, ಜರ್ಮನ್ ಸ್ತ್ರೀಯರು ದಾರಿಗರಲ್ಲಿ ಅರ್ಧದಷ್ಟು ಅಥವಾ ಹೆಚ್ಚಿಗೆ ಸಂಖ್ಯೆಯಲ್ಲಿ ಕಾಣಿಸಿದರೂ, ಅವರ ಉಡುಗೆ ತೊಡುಗೆಗಳು ಸಾದಾ ತೆರನವು. ಇತರ ಯುರೋಪಿನ ಸ್ತ್ರೀಯರ ಉಡುಗೆಗಳಲ್ಲಿ ಕಾಣಿಸುವ—ವರ್ಣವೈಪರೀತ್ಯ,ಅಬ್ಬರದ ಚಿತ್ರಗಳೊಂದೊಂದೂ ಕಾಣಿಸಲಿಲ್ಲ. ನಮ್ಮ ಹೊಟೇಲಿನಲ್ಲಿ ಮೇಲ್ತರಗತಿಯ ಜನರೇ ಬಂದು ಕುಳಿತಿದ್ದರಾದರೂ, ಅಲ್ಲಿನ ಸ್ತ್ರೀ

ಯರ ಉಡುಗೆಗಳಲ್ಲಿ — ಸೌಮ್ಯವರ್ಣಗಳ ಬಳಕೆ ಹೆಚ್ಚಾಗಿತ್ತು. ತೀಕ್ಷ್ಣ ವಾದ, ಒರಟಾದ ಬಣ್ಣಗಳ ಮೇಲಿನ ಮಮತೆ ಕಾಣಿಸಲಿಲ್ಲ. ಸಾಮಾನ್ಯ ಜರ್ಮನರ ಸೌಮ್ಯ ಮನೋಭಾವವನ್ನು ಇದು ಪ್ರಕಟಿಸುತ್ತದೆಯೆಂದೇ ನನಗನಿಸಿತು.

ನಮ್ಮ ಊಟವನ್ನು ಮುಗಿಸಿಕೊಂಡು, ಕನ್ನಡಕದವನಲ್ಲಿಗೆ ಹೋಗಿ, ಅದನ್ನು ಕೊಂಡು, ನನಗೆ ಅನುಕೂಲವಾಗಿದೆಯೆಂದು ದೃಢಪಡಿಸಿಕೊಂಡಾದ ಬಳಿಕ, ಅಲ್ಲಿಂದ "ಬಾಲಿಂಡಮ್" ಎಂಬ ದಾರಿಯ ಮಗ್ಗುಲಿಂದ ಸರಿದೆವು. ಆ ದಾರಿಯ ಒಂದು ಮಗ್ಗುಲಲ್ಲಿ–ಸರೋವರದಂಥ ಜಲಾಶ್ರಯ; ಇನ್ನೊಂದು ಕಡೆ— ದೊಡ್ಡ ವ್ಯವಹಾರ ಮಂದಿರಗಳ ಕಾರ್ಯಾಲಯಗಳಿದ್ದುವು. ಅಲ್ಲೊಂದು ಕಡೆ–ಜರ್ಮನ್ ಮೋಟರು ವಾಹನಗಳ ಪ್ರದರ್ಶನವಿತ್ತು. ಹಿಟ್ಲರ್ ಅಗ್ಗವಾಗಿ ಜನತೆಗೆ ಒದಗಿಸಬೇಕೆಂದಿದ್ದ "ಜನತಾ ಮೋಟರ್"ನ ಮಾದರಿಯೊಂದಿತ್ತು. ಅದು ಈ ವರ್ಷವೇ ಉತ್ಪನ್ನಕ್ಕೆ ಬಂದಿದೆ. ನಾಲ್ವರು ಕುಳಿತಿರುವ ಆ ಮೋಟರಿಗೆ (ಸುಮಾರು 12-H. P. ಯದು)ಐದು ಸಾವಿರ ರೂಪಾಯಿಗಳ ಬೆಲೆಯಾಗುತ್ತದೆ. ಅಂಥ ಕೆಲವು ಜರ್ಮನ್ ಉದ್ಯಮದ ಉತ್ಪನ್ನಗಳನ್ನು ಕಂಡು ಮುಂದುವರಿದೆವು. ನನಗೆ ಕಲೆಗಳಲ್ಲಿ ಅಭಿರುಚಿಯೆಂದು ತಿಳಿದ ಡಾ। ಫ್ಲೆಮಿಂಗ್‌ರವರು ಆ ಸಂಜೆ ಮೂರು ಸ್ಥಳಗಳಿಗೆ ಕರೆದೊಯ್ಯಲು ನಿರ್ಧರಿಸಿದ್ದರು. ಮೊದಲನೆಯದು ಹೆಂಬರ್ಗಿನ ಆರ್ಟ ಗೆಲರಿ; ಎರಡನೆಯದು ಅದೇ ಮಂದಿರದ ಸಮೀಪ ನಡೆಯುತ್ತಿದ್ದ ಆಧುನಿಕರ ಚಿತ್ರ ಕಲಾ ಪ್ರದರ್ಶನ; ಮೂರನೆಯದು ಕಟ್ಟಡಗಳ ಮಾದರಿ ಪ್ರದರ್ಶನ.

ಮೊದಲು ಜರ್ಮನ್ ಚಿತ್ರ ಕಲಾವಿದರ ಪ್ರದರ್ಶನಕ್ಕೆ ಹೋದೆವು. ಸಾಮಾನ್ಯವಾದ ಮೂರು ನಾಲ್ಕು ಕೊಟಡಿಗಳಲ್ಲಿ — ಈಗಿನ ಕಲಾವಿದರು ಗೋಡೆಯ ಅಲಂಕಾರಕ್ಕಾಗಿ ರೂಪಿಸಿದ (Mural decorations) ಚಿತ್ರಗಳ ಸಾಲುಗಳಿದ್ದುವು. ಅವೆಲ್ಲ— ಫ್ರಾನ್ಸಿನಿಂದ ಪ್ರೇರಿತವಾದ ಆಧುನಿಕ ಕ್ರಾಂತಿಯುಗದ ಪ್ರತಿರೂಪಗಳು. ಆ ಪ್ರತಿರೂಪಗಳಲ್ಲಿ ಆಕೃತಿಗಳ ವೈವಿಧ್ಯ, ತೀಕ್ಷ್ಣತೆಯಿದ್ದುವಾದರೂ ಬಳಸಿದಂಥ ಬಣ್ಣಗಳು ತೀರ ಕಡುಪಿನವು. "ಇಂಥ ಕಡುಪಿನ ಬಣ್ಣಗಳಿಂದ ಗೋಡೆಗಳನ್ನು ಮುಚ್ಚಿದರೆ–ಅವು ಬೆಳಕನ್ನೆಲ್ಲ ಹೀರಿ, ವಾಸದ ಮನೆಯನ್ನು ಕತ್ತಲುಕೋಣೆಯಾಗಿ ಮಾಡಲಾರವೇ"

ಎಂದೆ. ಫ್ಲೆಮಿಂಗರವರು ನಕ್ಕರು. ಇನ್ನು ಆ ರೀತಿಯ ಬಣ್ಣದ ಬೊಟ್ಟು, ತ್ರಿಕೋಣಾದಿ ವಿಚಿತ್ರ ಆಕೃತಿಗಳಿಗೆ ಹೊಂದಿಸುವಂತೆ-ಆಸನ, ಬೀರು ಮೊದಲಾದುವನ್ನು ಹೇಗೆ ನಿರ್ಮಿಸಬೇಕು–ಎಂಬುದೂ ಒಂದು ಸಮಸ್ಯೆ.ಆದರೂ ಒಂದೆರಡು ಅಲಂಕಾರದ ಮಾದರಿಗಳು ತುಂಬ ಆಕರ್ಷಕವಾಗಿದ್ದುವು.

ಅಲ್ಲಿಂದ ಇನ್ನೊಂದು ಕಿರಿಯ ಕೋಣೆಗೆ ಬಂದೆವು. ಅಲ್ಲಿ ಸುಮಾರು ಇಪ್ಪತ್ತು ಮೂವತ್ತು ಜರ್ಮನ್ ಚಿತ್ರಕಾರರು ಬರೆದ ಚಿತ್ರಗಳಿದ್ದುವು. ಅವು ತೀರ ಆಧುನಿಕವಾದುವು;ಫ್ರಾನ್ಸಿನ ಗಾಳಿಗೆ ಬಲಿಯಾದುವು."ಎಬ್‌ಸ್ಟ್ರಾಕ್ಟ್" ಚಿತ್ರಗಳು. ಆ ಸಮುದಾಯದಲ್ಲಿ ಮೂರುನಾಲ್ಕು ಚಿತ್ರಗಳಲ್ಲಿ ಮಾತ್ರ ಕೇವಲ ಶಾಸ್ತ್ರೀಯ ಚಮತ್ಕೃತಿಯಲ್ಲದೆಯೇ–ಏನೋ ಭಾವ ಪ್ರಕಟಣೆಯ ಗುರಿಯೂ ಕಾಣುತ್ತಿತ್ತು.ಅವುಗಳೊಳಗಣ ಒಂದು ಚಿತ್ರ-ಎಮೆಜಾನ್ ನದೀ ತೀರದ ಸಸ್ಯವರ್ಗದ್ದು; ಇನ್ನೊಂದು ಕಡಲ ಅಲೆ, ದೋಣಿಯೊಂದರದ್ದು. ಆ ಎರಡರಲ್ಲೂ–ಟರ್ನರನ ಚಿತ್ರಗಳಿರುವಂತೆ ಭಾವಪ್ರೇರಣೆ ಶಕ್ತಿಯಿತ್ತು. ಸಸ್ಯದ ಚಿತ್ರದಲ್ಲಿ ಕಾಣಿಸಿದ ಬರಿಯ ನಾಲ್ಕಾರು ಎಲೆಗಳಿಂದಲೇ–ಕಾಡಿನ ದಟ್ಟಣಿ, ಉಷ್ಣವಲಯದ ಹೊಳೆಯುವ ಬಣ್ಣ ಬೆಡಗುಗಳು ಬಹು ಚೆನ್ನಾಗಿ, ತರಂಗಮಯವಾಗಿ ರಂಜಿಸುತ್ತಿದ್ದುವು. ಇದರಂತೆಯೆ ಇನ್ನೂ ಒಂದೆರಡು ಮೆಚ್ಚಿಕೆಗೆ ತಕ್ಕ ಚಿತ್ರಗಳಿದ್ದುವು. ಅವನ್ನು ಬರೆದ ಒಬ್ಬ ಚಿತ್ರಕಾರನ ಬಳಿಗೆ ಹೋಗೋಣ ಎಂದು ಡಾ। ಫ್ಲೆಮಿಂಗರು ತಿಳಿಸುತ್ತಲೇ 'ಆಗಲಿ' ಎಂದೆ.

ಇನ್ನೊಂದು ಪ್ರದರ್ಶನ ಆಧುನಿಕ ಕಟ್ಟಡಗಳ ವಾಸ್ತುಶೈಲಿಯನ್ನು ತೋರಿಸುವಂಥದು. ಅಲ್ಲಿ ಸಾಮಾನ್ಯ ಗುಡಿಸಲು, ಮಧ್ಯಮ ತರಗತಿಯ ಮನೆ, ಆಡಂಬರದ ನಿವಾಸ–ಇವನ್ನು ತೋರಿಸುವ ಪ್ರಯತ್ನಮಾಡಿದ್ದರು. ಶೈಲಿ ಆಧುನಿಕವಾದುದು-ಗಾಜು,ಸಿಮೆಂಟುಗಳನ್ನು ಬಳಸುವ ಮಾರ್ಗದ್ದು. ಆದರೆ ಕಾಣಿಸಿದ ವಾಸ್ತುವಿನ ರೇಖೆಗಳು ಸ್ವತಂತ್ರವಾದುವು; ಅನ್ಯದೇಶಗಳ ಅನುಕರಣೆಯಲ್ಲ; ಪ್ರಾಚೀನ ಮಾರ್ಗದುವೂ ಅಲ್ಲ. ಎಲ್ಲಕ್ಕಿಂತ ಮೇಲಾಗಿ ಅವನ್ನು ಸುಲಭದಲ್ಲಿ ಪ್ರದರ್ಶಿಸಿದ ಬಗೆ ಸೊಗಸಾಗಿತ್ತು. ಅಂಥ ಕಟ್ಟಡ, ಮನೆಗಳ, ಫೋಟೋ ತೆಗೆದು, ಕಟ್ಟಡದ ಆ ಫೋಟೋಗಳನ್ನು ವಿಶಾಲಿಸಿ, ಕಟ್ಟಡದ ರಚನೆಯಂತೆಯೇ ಇಲ್ಲಿ ತಂದು ಜೋಡಿಸಿದ್ದಾರೆ. ಇದು ತೀರ ಸುಲಭ ಕೆಲಸವೆಂದು ಅನಿಸಿದರೂ, ವಾಸ್ತುಶೈಲಿಯನ್ನು ತೋರಿಸುವುದಕ್ಕೆ ತುಂಬ ಪರಿಣಾಮಕರವಾದ ದಾರಿಯೂ ಅಹುದು.

ಹೆಂಬರ್ಗಿನ ಕಲಾ ಸಂಗ್ರಹಾಲಯ ಬಹು ದೊಡ್ಡ ಕಟ್ಟಡ. ಅದು ರೈಲ್ವೆ ನಿಲ್ದಾಣಕ್ಕೆ ಅಂದರೆ ನನ್ನ ನಿವಾಸದ ಹೊಟೇಲಿಗೆ ತೀರ ಸಮೀಪ ವಾಗಿತ್ತು. ಆದರೆ ಇಂದು ಆ ಸಂಗ್ರಹ ತೀರ ಬರಿದಾದಂತೆ ಕಾಣುತ್ತದೆ. ಅಲ್ಲಿನ ಹಲವು ಯುರೋಪೀಯ ಚಿತ್ರಗಳು ಮಾಯವಾಗಿವೆ. ಬದಲು-ಹದಿ ಮೂರನೆಯ ಶತಮಾನದಿಂದ ಹದಿನಾರು ಹದಿನೇಳನೆಯ ಶತಮಾನದ ತನಕ ಚಿತ್ರ ಬರೆದ ಜರ್ಮನ್ ಚಿತ್ರಕಾರರ ಚಿತ್ರಗಳಷ್ಟೇ ಉಳಿದಿವೆ. ಯುದ್ಧದ ಕಾಲದಲ್ಲಿ ಹಿಟ್ಲರನ ಬಳಗದವರು, ಆಕ್ರಮಿತ ರಾಷ್ಟ್ರಗಳ ಕಲಾ ಸಂಪತ್ತನ್ನು ಕೊಳ್ಳೆಹೊಡೆದಂತೆ, ಈ ಮಂದಿರದ ಚಿತ್ರಗಳನ್ನು ಯಾರೋ ಕೊಳ್ಳೆಹೊಡೆ ದಿರ ಬಹುದು. ಜರ್ಮನ ಚಿತ್ರಕಾರರಲ್ಲಿ ಹೆಸರಾದ ಆಲ್ಬರ್ಟ ಡ್ಯೂರರನ ಒಂದೋ ಎರಡೋ ಚಿತ್ರಗಳು ಮಾತ್ರ ನನಗೆ ಕಾಣಸಿಕ್ಕಿದುವು. ಹದಿನಾಲ್ಕ ನೆಯ ಶತಮಾನದ ಚಿತ್ರಗಳಲ್ಲಿ ಮಿಸ್ಟರ್ ಫ್ರಾಂಕೆ ಬರೆದ 'ಕ್ರಿಸ್ತ ಜನನ' ಎಂಬುದು ಒಂದು ಸುಂದರವಾದ ಚಿತ್ರ. ಫನ್‌ಹಾಪ್ ಎಂಬಾತ ಬರೆದ "ಮೆಡೋನಾ" ಬಲು ಚೆನ್ನಾಗಿದೆ. ಕಡುಪು ಹಸುರಿನ ಗೌನ್ ಧರಿಸಿ ನಿಂತ ಮುಗ್ಧ ಮೇರಿಯು ಮುಖ, ಆಕೆಯ ಪಾವಿತ್ರ್ಯವನ್ನು ಬಹು ಚೆನ್ನಾಗಿ ಚಿತ್ರಿಸುತ್ತಿತ್ತು.

ಮಂದಿರದ ಶಿಲ್ಪ ಭಾಗವು ಕಿರಿದು. ಹಳೆಯ ಶಿಲ್ಪಗಳ ಸಂಖ್ಯೆಯೂ ಕಡಿಮೆಯಾಗಿತ್ತು. ಆದರೆ ಅನೇಕ ಆಧುನಿಕ ಶಿಲ್ಪಿಗಳು ಕಂಚು, ಆವೆಮಣ್ಣು ಗಳಲ್ಲಿ ಮಾಡಿದ ಹಲವು ಪ್ರತಿಮೆಗಳಿದ್ದುವು. ಅವುಗಳಲ್ಲಿ ಆರೆಂಟು ಪ್ರತಿಮೆ ಗಳು, ಇಬ್ಬರು ಮೂವರು ಶಿಲ್ಪಿಗಳದು. ಜಗತ್ತಿನ ಶಿಲ್ಪಿಗಳ ಸಾಲಿನಲ್ಲಿ ನಿಲ್ಲ ಬಹುದಾದ ಸ್ವಂತ ಶೈಲಿ, ಸ್ವಂತ ಸ್ಫೂರ್ತಿಯುಳ್ಳ ಜನರದ್ದಾಗಿ ಕಾಣಿಸಿತು. ಯಾವುದೇ ಕಲಾಮಂದಿರದಲ್ಲಿ ಅಲೆದಾಡತೊಡಗಿದರೆ ಕಾಲ ಸರಿದುದು ಗೊತ್ತಾಗುವುದಿಲ್ಲ; ಕಾಲು ನೋಯುವುದು ಮಾತ್ರ ಕಾಣುತ್ತದೆ. ಹಾಗೆಯೇ ನನ್ನ ಕಾಲುಗಳೂ ನಡೆನಡೆದು ದಣಿದಿದ್ದವು. ನಾವು ಹೊರಗೆ ಬಂದೆವು. "ಇನ್ನೆಲ್ಲಿಗೆ?" ಎಂದು ಕೇಳಿದೆ. "ಹಾಗಾದರೆ ಒಬ್ಬ ಕಲಾವಿದ ಮಿತ್ರನಿದ್ದಾನೆ-ಹೋಗುವ" ಎಂದರು.

ಒಂದು ಟೇಕ್ಸಿಯನ್ನೇರಿ ಹೊರಟೆವು. ದಾರಿಯಲ್ಲಿ ನಾವು ಬಾಂಬಿನಿಂದ ನಾಶವಾದ ನಗರದ ಕೆಲವೇ ತುಣುಕುಗಳನ್ನು ಕಂಡೆವು. ಆದರೆ ಹೆಚ್ಚಿನ ಗಾಯಗಳು ಮಾಸಿವೆ. ಬರಿದಾದ ಅನೇಕ ಕಡೆಗಳಲ್ಲಿ ಮೊದಲಿಗಿಂತಲೂ

ಉನ್ನತವಾದ ಮಂದಿರಗಳು ಏಳತೊಡಗಿವೆ. ಅಂಥದೊಂದು ತಾವಿಗೇನೇ ಹೋಗಿ ಇಳಿದೆವು. ಸುಮಾರು ಎರಡು ಮೂರು ಎಕ್ರೆ ಭೂಮಿಯಲ್ಲಿ, ಹಿಂದೆ ನಾಶವಾದ ಕಟ್ಟಡಗಳನ್ನು ತೆಗೆದು ಚೊಕ್ಕಟಮಾಡಿದ್ದಾರೆ. ಅಲ್ಲಿ ಈಗ ಅತ್ಯಾಧುನಿಕ ಅಮೇರಿಕನ್ ಶೈಲಿಯ ಗಗನಚುಂಬಕಗಳು ಮೇಲಕ್ಕೆ ಎದ್ದಿವೆ. ಸುಮಾರು ಇಪ್ಪತ್ತು ಇಪ್ಪತ್ತು ಮಹಡಿಗಳ ಮನೆಗಳು, ಹೊರಗೆಲ್ಲ ಗಾಜಿನ ಗೋಡೆ, ಒಳಗೆ ಉಕ್ಕಿನ ಅಸ್ಥಿಪಂಜರ. ಅಂಥ ಕಟ್ಟಡವೊಂದರ ತುತ್ತುದಿಯಲ್ಲಿ–ಒಬ್ಬ ಸುದ್ಯೆವಿ ಚಿತ್ರಕಾರನಿಗೆ ಸರಕಾರ, ಇರಲು ಅವಕಾಶ ಕೊಟ್ಟಿದೆ. ನಾವು ಲಿಫ್ಟಿನ ಸಹಾಯದಿಂದ ಮೇಲೇರಿದೆವು. ತೀರ ತುತ್ತುದಿಯ ಕೊಟಡಿಯಲ್ಲಿ ಆತನಿದ್ದ. ಮಧ್ಯವಯಸ್ಕ; ಕೆದರಿದ ಕೂದಲು; ತೀರ ಸಾಮಾನ್ಯ ಉಡುಗೆ. ಫ್ಲೆಮಿಂಗರವರು ಪರಿಚಯಮಾಡಿಕೊಟ್ಟರು–ಆತ ತನ್ನ ಕೊಟಡಿ, ಮನೆ ತೋರಿಸಿದ. ಅನಂತರ ಯಾವ ಜಂಬವೂ ಇಲ್ಲದೆಯೆ, ತಾನು ಬರೆದ ಅನೇಕ ಆಧುನಿಕ ಶೈಲಿಯ ಚಿತ್ರಗಳನ್ನು ತೋರಿಸಿದ. ಆ ಚಿತ್ರಗಳು ನನಗೆ ಅಷ್ಟು ಮೆಚ್ಚಿಗೆಯಾಗಲಿಲ್ಲವಾದರೂ, ಆ ಕಲಾವಿದನ ತೀರ ಸರಳ ಸ್ವಭಾವ ಮೆಚ್ಚದೆ ಹೋಗಲಿಲ್ಲ. ನಾವಿರುವಾಗ ಇನ್ನಿಬ್ಬರು ಕಲಾವಿದರು ಅಲ್ಲಿಗೆ ಬಂದರು. ಎಲ್ಲರೂ ಫ್ಲೆಮಿಂಗರವರಿಗೆ ಪರಿಚಿತರು, ಹೀಗಾದುದರಿಂದ ಅಂದಿನ "ಬಿಸಿ ಬಿಸಿ" ವಾರ್ತೆಗಳ ಚರ್ಚೆಗೆ ತೊಡಗಿತು. ಆ ನಗರದಲ್ಲಿ ಪ್ರದರ್ಶನವಾಗುತ್ತಿರುವ ಅಮೇರಿಕನ್ ಚಲಚ್ಚಿತ್ರಗಳ "ಪೋಸ್ಟರು"ಗಳ ವಿಚಾರದಲ್ಲಿ ಆ ನಗರದಲ್ಲಿ ಆಗ ತಾನೇ ಚರ್ಚೆ ತೊಡಗಿತ್ತು. ಅಂಥ ಅಸಭ್ಯ (ಕಲಾದೃಷ್ಟಿಯಿಂದಲೂ, ನೀತಿ ದೃಷ್ಟಿಯಿಂದಲೂ) ಪೋಸ್ಟರುಗಳನ್ನು ಅಂಟಿಸಬಾರದು–ಎಂದು. ಆ ಬಗೆಯ ಚಿತ್ರಗಳು ತಮ್ಮ ಜನಗಳ ಕಲಾಭಿರುಚಿಯನ್ನು ಕೆಡಿಸುತ್ತವೆ ಎಂದು ಅವರು ಚರ್ಚಿಸತೊಡಗಿದರು. ಹಾಲಿವುಡ್ ಚಲಚ್ಚಿತ್ರಗಳ ವಿಚಾರದಲ್ಲಿಯೂ ಈ ತೆರನ ಅಭಿಪ್ರಾಯ ಅಲ್ಲಿನ ಬರಹಗಾರರು, ವಿಮರ್ಶಕರುಗಳಲ್ಲಿ ಉಂಟಾಗಿದೆ. ಈ ಮಾತಿನ ಸವಿಯನ್ನೆಲ್ಲ ಹೀರಿ–ನಾವಿಬ್ಬರೂ ಅಲ್ಲಿಂದ ಹೊರಟೆವು.

ಈಗ ನಮ್ಮ ಗುರಿ–ನಗರದ ಮತ್ತೊಂದು ವಿಸ್ತರಣದಲ್ಲಿರುವ ಡಾಕ್ಟರ ಫ್ಲೆಮಿಂಗರವರ ಕೊಟಡಿಗೆ. ಅಲ್ಲಿಯೇ ಅವರ ಮಡದಿಯೂ ಬಂದು ಕಾದಿರಲು ಏರ್ಪಾಟಾಗಿತ್ತು. ಆಕೆ ಊರ ಹೊರಗೆ ವಾಸಿಸುತ್ತಿದ್ದಾಳೆ; ಇವರು ತಮ್ಮ ಉದ್ಯೋಗದ ಸಲುವಾಗಿ ಈಯೊಂದು ಕೊಟಡಿಯನ್ನು ಇರಿಸಿಕೊಂಡಿ

ದ್ದಾರೆ. ಆ ತಾವು ಬಹು ದೂರವಿರಲಿಲ್ಲ. ಅಲ್ಲದೆಯೆ ನಗರ ಸಂಚಾರ ನನಗೆ ಬೇಕೆನಿಸಿತ್ತು. ಆ ದಾರಿಯ ಹಳೆಯ, ಹೊಸಮನೆಗಳನ್ನೆಲ್ಲ ನೋಡುತ್ತ, ಸಾಲುಮರಗಳ ನೆರಳಲ್ಲಿ ಅಲೆದಾಡಿಕೊಂಡು ಅವರ ಮನೆಗೆ ಹೋದೆವು. ಹೆಂಬರ್ಗಿನ ವಿಸ್ತರಣಗಳೂ, ಬೀದಿಗಳೂ ಬಹು ಸುಂದರವಾಗಿ ಕಾಣಿಸಿದುವು. ಅಲ್ಲದೆ ಈ ನಗರವು ಯುದ್ಧಾಘಾತದಿಂದ ಸಂಪೂರ್ಣವಾಗಿ ಚೇತರಿಸಿಕೊಂಡಂತೆ ಕಂಡಿತು.

ದಾರಿಯಲ್ಲಿನ ನೋಟ ನೋಡುತ್ತ ಮುಂದುವರಿದು ಡಾ। ಫ್ಲೆಮಿಂಗರವರ ಕೊಟಡಿಗೆ ಬಂದೆವು. ಅದೊಂದು ಯುದ್ಧಾನಂತರ ಕಟ್ಟಿದ ಕಟ್ಟಡದ ಭಾಗವಾಗಿತ್ತು. ಹೊಸ ಶೈಲಿಯ, ಸರಳ ರೀತಿಯ ಮನೆ. ನಮಗಾಗಿ ಕೊಟಡಿಯಲ್ಲಿ ಫ್ಲೆಮಿಂಗರವರ ತರುಣ ಪತ್ನಿ ಕಾದಿದ್ದಳು. ಆಕೆ ವಾಸಿಸುವುದು ಊರ ಹೊರಗೆ; ಆಗಷ್ಟೆ ಅಲ್ಲಿಗೆ ಬಂದಿದ್ದಳು. ಬೆಳ್ಳಗಿನ, ಕುಳ್ಳಗಿನ ಶರೀರ, ಎಳೆತನದ ಸರಳ ಮುಖ. ಉಡುಗೆ ತೊಡುಗೆಗಳು ತೀರಾ ಸಾದಾ ತೆರನವು. ನಮಗಾಗಿ ಚಾ ತಯಾರಿಸಿ ಕೊಟ್ಟಳು, ಬಿಸ್ಕಿಟು ತಂದಿಟ್ಟಳು. ಅಲ್ಲಿ ಸ್ವಲ್ಪ ಹೊತ್ತು ಜರ್ಮನ್ ಚಿತ್ರಕಾರರ ವಿಚಾರವಾಗಿ ಮಾತನಾಡುತ್ತ ಕುಳಿತೆವು. ಡಾಕ್ಟರವರ ಕಿರಿಯ ಕೋಣೆಯ ನಾಲ್ಕು ಸುತ್ತಲೂ ಪುಸ್ತಕಗಳ ರಾಶಿಯಿತ್ತು. ಎಲ್ಲವೂ ಜರ್ಮನ್ ಕಲಾವಿಷಯದವು. ಅವರು ಕೆಲವು ಜರ್ಮನ ಆಧುನಿಕ ಚಿತ್ರಕಾರರ–ಚಿತ್ರಗಳುಳ್ಳ ಒಂದೆರಡು ಮುದ್ರಿತ ಗ್ರಂಥ ತೋರಿಸಿದರು. ಹೊರದೇಶಗಳಲ್ಲಿ ವಿಶೇಷ ಕೀರ್ತಿ ಪಡೆಯದವರಾದರೂ, ತಮ್ಮ ಚಿತ್ರಕಾರರ ಚಿತ್ರಗಳನ್ನೆಲ್ಲ ಅತ್ಯಾಧುನಿಕ ರೀತಿಯಿಂದ ಅಚ್ಚು ಹಾಕಿಸಿದ ಗ್ರಂಥಗಳನ್ನು ಕಂಡೆ. "ಇಂಥವು ಮಾರುತ್ತವೆಯೇ?" ಎಂದು ಕೇಳಿದೆ. "ಅವನ್ನು ಹೆಚ್ಚಿನ ಸಂಖ್ಯೆಯಲ್ಲಿ ಅಚ್ಚುಹಾಕುವುದಿಲ್ಲ; ಮಾರಾಟದ ಕೆಲಸವೂ ಸುಲಭವಲ್ಲ. ಬೆಲೆಯೂ ಹೆಚ್ಚಾಗಿರುತ್ತದೆ. ಆದರೆ ಕೆಲವು ಪ್ರಕಾಶಕರು ಈ ಸಾಹಸ ಮಾಡುತ್ತಾರೆ. ಇತರ ಪುಸ್ತಕಗಳಿಂದ ದೊರೆತ ಲಾಭವನ್ನು ಇದಕ್ಕಾಗಿ ಬಳಸುತ್ತಾರೆ" ಎಂದರು.

ಎಂಟು ಘಂಟೆಗೆ ಸಮನಾಗಿ ನಾವು ಮೂವರೂ ಕೂಡಿ ಶುಕ್ಟರವರ ಮನೆಗೆ ಹೋದೆವು. ಇನ್ನೊಮ್ಮೆ ಸ್ವಾಗತವಾಯಿತು. ಶುಕ್ಟರವರ ಪತಿಯೂ ನಮ್ಮನ್ನು ಕೂಡಿಕೊಂಡರು. ಮಿ। ಶುಕ್ಟರವರಿಗೆ ಅರುವತ್ತೈದಕ್ಕೆ ಮಿಕ್ಕಿದ ವಯಸ್ಸು. ಇನ್ನೂ ಹಿಂದಿನ ಯುಗದಲ್ಲಿಯೇ ಮನಸ್ಸು ತೇಲಾಡುತ್ತಿತ್ತು.

ಜರ್ಮನಿಯಲ್ಲಿ ಉಂಟಾದ ಆಧುನಿಕ ವಾತಾವರಣವನ್ನು ಮನಸ್ಸು ಸ್ವೀಕರಿಸ ಲಾರದೆಯೇ ಕುಳಿತಿದೆ. ಹಿಂದೆ ಅವರು ಒಳ್ಳೆಯ ಸ್ಥಿತಿಯಲ್ಲಿದ್ದಾಗ—ಅನೇಕ ಪ್ರಾಚೀನ ಕಲಾ ಸಂಪತ್ತುಗಳನ್ನು ಕೊಂಡು ಕೂಡಿಸಿದವರು; ಚೀನ, ಟಿಬೆಟ್, ಜಪಾನುಗಳ ಹಲವು ಪಿಂಗಾಣಿ, ತಾಮ್ರದ ಪಾತ್ರೆಗಳು, ಚಿತ್ರಗಳು ಅವರ ಸಂಗ್ರಹದಲ್ಲಿ ಇಂದಿಗೂ ಉಳಿದಿರುವುದನ್ನು ತೋರಿಸಿದರು. ಅಲ್ಲಿಂದ ಭೋಜನಕ್ಕೆ ಕುಳಿತೆವು. ನನಗಾಗಿ ಕೆಲವು ಶಾಖಾಹಾರಿ ಪದಾರ್ಥಗಳನ್ನು ಒದಗಿಸಿದ್ದರು. ನಡು ನಡುವೆ ಮಿತ್ರರಿಗಾಗಿ—ನಾನಾ ಬಗೆಯ ಅಮೂಲ್ಯ ಮದ್ಯ ಪಾನೀಯಗಳನ್ನು ಶುಕ್ಟರವರು ಆಸಕ್ತಿಯಿಂದ ಬಟ್ಟಲಲ್ಲಿ ತುಂಬಿಸು ತ್ತಿದ್ದರು. ನನಗಾಗಿ ಒಂದಿಷ್ಟು ಸೇಬಿನ ರಸವೂ ಮುಂದೆ ಬಂದಿತು. ಮಾತು, ಊಟಗಳು ಸುಮಾರು ಮೂರು ಘಂಟೆಗಳ ಕಾಲದ ತನಕ ನಡೆ ದುವು. ಕೊನೆಗೆ ಆ ನಗರದಲ್ಲಿರುವ ಇನ್ನೊಬ್ಬ ಗ್ರಂಥಕಾರರೂ ಬಂದು ಕೂಡಿ ಕೊಂಡರು. ಅವರು ನಾಟಕಕಾರರು; ಹೆಂಬರ್ಗಿನ ಯಶಸ್ವೀ ಬರಹಗಾರರ ಲ್ಲೊಬ್ಬರಂತೆ. ನಾವಿಷ್ಟು ಮಂದಿಯಲ್ಲಿ—ಆವೇಶಭರಿತವಾದ ಚರ್ಚೆಗಳು ನಡೆದುವು. ಆಧುನಿಕ ಜರ್ಮನಿ, ಭಾರತಗಳನ್ನು ಕುರಿತಾದ ಅನೇಕ ವಿಷಯ ಗಳು ಚರ್ಚಿತವಾದುವು. ಅನೇಕ ವಿಷಯಗಳನ್ನು ಚೆನ್ನಾಗಿ ಮನನಮಾಡಿದ ಮಿಸೆಸ್ ಶುಕ್ಟರವರ ಮಾತುಗಳನ್ನು ಕೇಳುವುದಕ್ಕೆ ಹಿತವಾಗಿತ್ತು. ಬರಿದೆ ಮಾತಿಗಾಗಿ ಮಾತು, ವಾದಕ್ಕಾಗಿ ವಾದಮಾಡುವ ಸ್ವಭಾವ ಅವರದ್ದಲ್ಲ. ಭಾವನೆಯನ್ನು ಹಿಂಬಾಲಿಸದಂಥ ಒಣಮಾತುಗಳಿಲ್ಲ. ಮಿದುವಾಗಿ ಆಡು ತ್ತಿದ್ದ ಅವರ ಮಾತುಗಳು ಜೀವನದ ನಡುಗಾಲದ ಅನುಭವ, ಚಿಂತನಗಳ ಫಲವಾಗಿ ಮೂಡಿದುವು. ನನ್ನ ಪ್ರವಾಸದಲ್ಲಿಯೇ ಅಂತಹ ವಿಚಾರ ವಿನಿ ಮಯವನ್ನು ನಾನು ಬಹು ಕಡೆಗಳಲ್ಲಿ ಕಂಡಿರಲಿಲ್ಲ. ಅವನ್ನೆಲ್ಲ ತುಸು ವಿವರವಾಗಿ ಬರೆಯಲು ಪ್ರಯತ್ನಿಸುತ್ತೇನೆ.

*     *     *     *     *

ಹೆಂಬರ್ಗ್ ನಗರದ ಈಗಣ ಜನಸಂಖ್ಯೆ, ಚಟುವಟಿಕೆಗಳ ವಿಚಾರ ಮಾತು ಬಂದಿತು. ಮೊದಲು ಒಂದು ಮಿಲಿಯ ಜನಬಾಹುಳ್ಯವುಳ್ಳ ಈ ನಗರ ಇಂದು ಎರಡೂವರೆ ಮಿಲಿಯ ಜನ ಸಂಖ್ಯೆಯಿಂದ ತುಂಬಿದೆ. ಬರ್ಲಿನ್ ನಗರ ರಸ್ಯ ಮತ್ತು ಮಿತ್ರ ರಾಷ್ಟ್ರಗಳ ವಶವಾದ ಬಳಿಕ, ರಸ್ಯದ ಭಾಗದಿಂದ ತಪ್ಪಿಸಿಕೊಂಡು ಬಂದವರನೇಕರು ಈ ನಗರಕ್ಕೆ ಬಂದರು. ಯುದ್ಧದ ಹಾನಿ

ಯಿಂದ ನಿರಾಶ್ರಿತರಾದ ಅನೇಕಾನೇಕ ಜರ್ಮನ್ ಕುಟುಂಬಗಳೂ ಇಲ್ಲಿ ಬಂದು ನೆಲಸಿದುವು. ಹೀಗಾಗಿ ಇಂದು ಪಶ್ಚಿಮ ಜರ್ಮನಿಯಲ್ಲೇ ಹೆಂಬರ್ಗ್ ಅತಿ ಹಿರಿಯ ನಗರವಾಗಿದೆ. "ಆ ನಗರದಲ್ಲಿ ಯುದ್ಧದ ಘಾಸಿ ಕಾಣಿಸುತ್ತಲಿಲ್ಲ; ಹೇಗೆ ನೀವಿದನ್ನೆಲ್ಲಾ ತಿರುಗಿ ಕಟ್ಟಿಕೊಂಡಿರಿ?" ಎಂದು ನಾನು ಪ್ರಶ್ನಿಸಿದೆ. ಅದಕ್ಕೆ ಶುಕ್ಟರವರು "ನಮ್ಮ ಉದ್ಯಮ ಶೀಲತೆಯಿಂದ; ಅಮೇರಿಕದ ಧನಸಹಾಯದಿಂದ" ಎಂದರು. ಅಮೇರಿಕ ಯುದ್ಧಾನಂತರ ಈ ಜರ್ಮನರನ್ನು ಒಲಿಸಲು ಎಷ್ಟು ಹಣ ಚೆಲ್ಲಿದೆಯೆನ್ನುವಂತಿಲ್ಲ. ಇಂಗ್ಲೆಂಡಿನಂತಹ ರಾಷ್ಟ್ರಗಳಲ್ಲಿ ಈಗಲೂ ಕಾಣಿಸುತ್ತಿರುವ ಹಲವಾರು ಹತೋಟಿಗಳನ್ನು ಇಲ್ಲಿನವರು ಹೊರಿಸದೆಯೆ ಸಹಾಯ ಮಾಡಿದರು. ಆದರೂ ಅವರ ನಾಡನ್ನು ಆಕ್ರಮಿಸಿದ ಅಮೇರಿಕನರ ವಿಷಯದಲ್ಲಿ ಜನಕ್ಕೆ ಅಸಮಾಧಾನ ಇದ್ದೇ ಇತ್ತು. ಅವರು ಮಾಡಿದ ಉಪಕಾರವನ್ನು ಮರೆಯುವಂತಹ ಅಸಮಾಧಾನ ಅದಲ್ಲ. ಈ ಅಸಮಾಧಾನಕ್ಕೆ ಜರ್ಮನಿಯನ್ನು ಒಡೆದು ಹಂಚಿದುದೂ ಒಂದು ಕಾರಣವಾಗಿದೆ.

ಯುದ್ಧ ಮುಗಿದ ಆರೇಳು ವರ್ಷಗಳಲ್ಲಿ ಜರ್ಮನಿಯ ಹಳ್ಳಿಗಳೂ ಚೇತನಗೊಂಡಿವೆ. ನಾನು ಹೆಂಬರ್ಗಿನಿಂದ ಹಾಲೆಂಡಿಗೆ ಹೋಗುವ ನೂರಿನ್ನೂರು ಮೈಲು ದಾರಿಯಲ್ಲಿ ಕಂಡ ಮನೆಮಠಗಳಲ್ಲಿ, ಹಳತು ಒಂದಾದರೆ ಹೊಸತು ಎಂಟು. ಅವರ ಮನೆಗಳು ಮಂಗಳೂರು ಹಂಚಿನವು; ಹೀಗಾಗಿ ಹೊಸ ಮನೆಯ ಮಾಡುಗಳು ಹೊಸ ಮಡಿಕೆ ಬಣ್ಣ ತಾಳಿರುವುದು ಕಾಣುತ್ತದೆ. 'ಇದು ಹೇಗೆ ಸಾಧ್ಯ?' ಎಂಬ ನನ್ನ ಪ್ರಶ್ನೆಗೆ ಶುಕ್ಟರವರ ಉತ್ತರ "ನಮ್ಮ ಉದ್ಯಮ ಶೀಲತೆ" ಎಂದು. ಇದು ನಿಜ, ಯುದ್ಧ ಕೊನೆಗೊಂಡ ಮರುದಿನವೇ ತಿರುಗಿ ನೆಲ ಚೊಕ್ಕಮಾಡಿದರು; ಮುರಿದ ಕಟ್ಟಡಗಳನ್ನು ಕಿತ್ತರು; ಹೊಸ ಕಟ್ಟಡ ಕಟ್ಟಿದರು. ದಿನಕ್ಕೆ ಸಾಮಾನ್ಯ ಒಂಬತ್ತರಿಂದ ಹತ್ತು ಘಂಟೆಯ ತನಕ ಅವರು ಇಂದಿಗೂ ದುಡಿಯುತ್ತಿದ್ದಾರೆ. ದುಡಿಮೆಯಲ್ಲಿ ಈ ಜನಗಳನ್ನು ಬಿಟ್ಟರಿಲ್ಲ. ಪೂರ್ವ ಜರ್ಮನಿಯಲ್ಲಿ ಹಿಂದೆ ನೆಲಸಿದ್ದಂಥ, ಯುದ್ಧದಿಂದ ನಾಶಗೊಂಡ ಅನೇಕ ಕಾರ್ಖಾನೆಗಳ ಒಡೆಯರು, ಇವತ್ತು ಪಶ್ಚಿಮ ಜರ್ಮನಿಗೆ ಬಂದಿದ್ದಾರೆ. ಅಲ್ಲಿ–ಮೂಲ ಕಾರ್ಖಾನೆಗಳ ಕಸವು ಸಹ ಅವರ ಕೈಗೆ ಬಂದಿಲ್ಲವಾದರೂ, ಅಡಗಿರಿಸಿದ ಯಂತ್ರಗಳ ನಕ್ಷೆಗಳಿಂದ, ತಿರುಗಿ ಯಂತ್ರನಿರ್ಮಾಣಮಾಡಿ–ಮೊದಲಿನ ಬಿರುಸು, ಪೈಪೋಟಿಗಳಿಂದ ತಮ್ಮ ಉದ್ಯಮ

ಗಳನ್ನು ನಡೆಯಿಸುತ್ತಾ ಬಂದಿದ್ದಾರೆ. ಈ ದೃಷ್ಟಿಯಿಂದ ನಮಗೂ ಅವರಿಗೂ ಎಷ್ಟು ಅಂತರ! ನಮಗೆ ಯುದ್ಧಕಾಲದಲ್ಲಿ ನೇರಾದ ಹಾನಿಯಾಗಿಲ್ಲ; ಅನಂತದರ ಅವಕಾಶದಿಂದ ನಾವು ಸೇಕಡ ೧೦೦ರಷ್ಟು ಉದ್ಯಮ ಬೆಳೆಯಿಸಿದ್ದೇವೆಯೋ–ಎಂಬುದೂ ಅನುಮಾನ.

ಅನಂತರ ನಮ್ಮ ಮಾತು–ಒಡೆದ ಜರ್ಮನಿ, ಕಮ್ಯೂನಿಸಮಿನ ವಿಚಾರ ಹರಿಯಿತು. ನೇರಾಗಿ ಅದರ ಸವಿಯನ್ನುಂಡ ಡಾ। ಶುಕ್ಟರವರ ಮುಖ ವ್ಯಥೆಗೊಂಡಿತು. "ನಿಮಗೆ ನಮ್ಮ ಪಾಡು ತಿಳಿಯದು; ಭಯ ತಿಳಿಯದು; ನಮ್ಮ ಊರಿನ 30 ಮೈಲು ದೂರದೊಳಗೇನೆ ರಶ್ಯದ ಗಡಿಯಿದೆ. ನನ್ನ ಹೃದಯವೇ ಬರ್ಲಿನಿನಲ್ಲಿದೆ" ಎಂದರು. ನಾನು ಯುರೋಪಿನಲ್ಲಿ ಭೇಟಿಯಾದ ಯಾವನೊಬ್ಬನೂ ಕಮ್ಯೂನಿಸಮಿನ ವಿಚಾರದಲ್ಲಿ ಒಂದಿಷ್ಟು ಆದರವುಳ್ಳವನಾಗಿಲ್ಲ. ಅಲ್ಲಿನ ಉಕ್ಕಿನ ತೆರೆಯೊಳಗೆ ಏನೇನು ನಡೆಯುತ್ತಿದೆ; ವ್ಯಕ್ತಿಸ್ವಾತಂತ್ರ್ಯದ ಪಾಡೇನು–ಎಂದು ಈ ಜರ್ಮನರು ಬಲ್ಲರು. ಅಮೇರಿಕದ ಮೇಲೆ ಮಮತೆಯುಳ್ಳವರಾಗಿಲ್ಲವಾದರೂ, ರಶ್ಯದ ನೆರಳನ್ನು ಕ್ಷಣಕ್ಕೂ ಸ್ಮರಿಸಲಾರರು.

ನಮ್ಮ ಮಾತು ಯುದ್ಧಾನಂತರದ ಕೆಲವು ಸಾಮಾಜಿಕ ಪ್ರಶ್ನೆಗಳ ಕಡೆಗೆ ಹರಿಯಿತು. ಆ ವಿಚಾರದಲ್ಲೂ, ನಮ್ಮ ಗೆಳೆಯರು ಅನೇಕ ಬಗೆಯಿಂದ ವ್ಯಥೆಯನ್ನು ತೋಡಿಕೊಂಡರು. ಮುಖ್ಯತಃ ಅದು ಜನತೆಯ ನೀತಿಯನ್ನು ಕೆಡಿಸಿದ ವಿಚಾರದಲ್ಲಿ.

"ನೋಡಿ–ಮೊದಲು ಜರ್ಮನ್ ಸಂಸ್ಕೃತಿಯೆಂಬುದು ಮಧ್ಯಮ ವರ್ಗದವರ ಒಂದು ಸಂಸ್ಕೃತಿಯಾಗಿತ್ತು. ನಮ್ಮಲ್ಲಿ ತೀರ ಬಡವರೂ ಇರಲಿಲ್ಲ; ಅತಿ ದೊಡ್ಡ ಶ್ರೀಮಂತರೂ ಹೆಚ್ಚಾಗಿರಲಿಲ್ಲ. ಯಾವುದೇ ಒಂದು ಸಂಸ್ಕೃತಿಯ ನೆಲೆಗಟ್ಟು ಈ ಮಧ್ಯಮ ವರ್ಗ. ಯುದ್ಧ ಕಳೆದು, ನಮ್ಮ ಮೇಲೆ ಅಮೇರಿಕದ ಭಂಡವಳಗಾರಿಕೆಯು ಎಂದು ಬಂದು ತನ್ನ ವರ್ಚಸ್ಸನ್ನು ಇಲ್ಲಿ ಹೂಡಿತೋ-ಆಮೇಲಿನ ಪಾಡು ಬೇರೆಯೇ. ಕಳ್ಳಸಂತೆಯಿಂದ ಒಂದು ರಾತ್ರಿ, ಬೆಳಗಿನಲ್ಲಿ ಕೋಟ್ಯಾಧಿಪತಿಗಳಾದವರು ಉಂಟಾದರು. ಹಿಂದೆ ನಾವು ಕನಸಿನಲ್ಲೂ ಎಣಿಸಿರದ ಸಂಖ್ಯೆಯಲ್ಲಿ ಇವತ್ತು ಹೆಂಬರ್ಗಿನಲ್ಲಿ ಈ ಶ್ರೀಮಂತ ಮೊಟ್ಟೆಗಳಿದ್ದಾವೆ. ಕಷ್ಟವಿಲ್ಲದೆಯೆ ಹಣ ಸಂಪಾದಿಸಿ ಕೊಬ್ಬಿದವರು. ಇವರ ದೆಸೆಯಿಂದ-ವಿಲಾಸ, ಅನೀತಿ, ಡಾಂಭಿಕತೆ ಬೆಳೆಯುತ್ತಿದೆ. ನಮ್ಮ ನಾರಿಯರ ನೈತಿಕ ಭಾವನೆ ಸಡಿಲಾಗುತ್ತಿದೆ. ಮೊದಲೇ–ಯುದ್ಧ ಕಾಲದಲ್ಲಿ, ರಶ್ಯನರ

ಆಘಾತವಾದಲ್ಲಿ, ಗಂಡಂದಿರನ್ನು ಕಳೆದುಕೊಂಡರು; ಮಾನಭಂಗಕ್ಕೀಡಾ ದರು. ಯುದ್ಧಾನಂತರದ ಆಕ್ರಮಣವೂ ಅಂಥದಕ್ಕೆ ಅವಕಾಶ ಹೆಚ್ಚಿಸಿತು. ಈಗ—ಈ ಹೊಸಬೆಡಗಿನ ಮುಂದೆ, ವಿಲಾಸ ಅನೀತಿಗಳು ಬೆರತು ಆಕ ರ್ಷಕ ವಸ್ತುವಾಗಿವೆ. ನಮ್ಮ ಮಹಿಳೆಯರೆಂದೂ ಸುಲಭ ನೀತಿಯುವರಾಗಿರ ಲಿಲ್ಲ. ನಮ್ಮ ದಾಂಪತ್ಯದಲ್ಲಿ ಹೆಚ್ಚಿನ ಭದ್ರತೆಯಿರುತ್ತಿತ್ತು. ಇಂದಿನ ಸ್ಥಿತಿ ಯಲ್ಲಿ ಅದೂ ಚಿಂತೆಗೀಡಾಗಿದೆ" ಎಂದರು. ಅನ್ನುವಾಗ ಪರಿಚಯದ ಕೆಲವು ಉದಾಹರಣೆಗಳು ಬಂದುವು. ಒಬ್ಬರಿಗೆ ಒಬ್ಬ ಗಂಡು ಮಗ; ಇನ್ನೊಬ್ಬಳು ಹೆಣ್ಣು ಮಗಳು. ಈ ಮಗಳು ಸ್ವೀಡನಿಗೆ ಮದುವೆಯಾಗಿ ಹೋಗಿದ್ದಾಳೆ. ಮಗನು ಊರಲ್ಲೇ ಮದುವೆಯಾಗಿ ನೆಲಸಿದ್ದಾನೆ. ಕಳೆದ ತಿಂಗಳಲ್ಲೇ ಆ ಎರಡೂ ದಾಂಪತ್ಯಗಳೂ ಮುರಿಯುವ ಪ್ರಮೇಯ ಬಂದಿದೆ. ಎದುರಾದ ಸಮಸ್ಯೆಗಳು ಇವು–"ಹುಡುಗಿಗೆ ತಾಯಿಯಾಗುವ ಆಸೆ. ಮಕ್ಕಳಾಗಬಾರ ದೆಂದು ಅವಳ ಗಂಡನ ಹಟ. ಹೀಗಾಗಿ ಮದುವೆಯೊಡೆದು ಆಕೆ ಜರ್ಮನಿಗೆ ಮರಳಿ ಬರಬೇಕಾಗಿದೆ."

"ಮದುವೆಯಾದ ಅವಳ ಅಣ್ಣನ ಪಾಡು ಇನ್ನೊಂದು. ಅವನ ಹೆಂಡ ತಿಯೂ ಅವನೂ ಕೂಡಿ ಒಂದು ವರ್ಷದ ಕಾಲ ತೃಪ್ತ ಜೀವನ ನಡೆಯಿಸಿ ದರು. ಅನಂತರ ಹೆಂಡತಿಯಾದವಳು-ಇನ್ನೊಬ್ಬ ಸೊಗಸುಗಾರನ ಸ್ನೇಹಕ್ಕೆ ಬಲಿಯಾದಳು...ಮೊದಲಿನವನನ್ನು ಬಿಡುವ ಯೋಜನೆಮಾಡಿದಳು...ಇದ ನ್ನೆಲ್ಲ ಎಣಿಸುವಾಗ ನಿಮ್ಮ ನಾಡಿನ ದಾಂಪತ್ಯ ವಿಧಾನವೇ ಲೇಸೆಂದು ನನಗೆ ಕಾಣುತ್ತದೆ. ಪ್ರೀತಿ, ಹೊಣೆಗಳು ಬೆಳೆಯದ ಸಂಸಾರ ಇದ್ದರೇನು, ಇಲ್ಲದಿದ್ದ ರೇನು?" ಎಂದರು ಒಬ್ಬರು. "ನಮ್ಮದು ಇನ್ನೊಂದು ತೆರ; ಗಂಡಹೆಂಡಿರಲ್ಲಿ ಬೆರಕೆ ಬಾರದೆ ಹೋದರೆ, ಯಾವಜ್ಜೀವ ಸೆರೆಯಂತೆಯೇ ಬದುಕಬೇಕು" ಎಂದೆ ನಾನು. "ಅದೂ ಅಹುದು" ಎಂದರು ಶುಕ್ಬರವರು.

ಅಲ್ಲಿಂದ ಮಾತಿನ ವಿಷಯವು ಚಲಚ್ಚಿತ್ರ, ನಾಟಕಗಳ ಕಡೆಗೆ ಹರಿ ಯಿತು. "ನಮ್ಮಲ್ಲಿಯೂ ನಾಟಕದ ಪುನರುಜ್ಜೀವನವಾಗುತ್ತಿದೆ. ಆದರೆ ಇಲ್ಲಿ ಥಿಯೇಟರುಗಳಲ್ಲಿ ಆಗಾಗ ಫ್ರೆಂಚ್, ಇಟಾಲಿಯನ್ ನಾಟಕಗಳು ಬರುತ್ತವೆ. ಅವು ಬಹು ಉತ್ತಮ ಮಟ್ಟದುವು. ಚಲಚ್ಚಿತ್ರಗಳಲ್ಲಿ ಹಿಂದೆ ಜರ್ಮನಿ ಬಹು ಮುಂದುವರಿದಿತ್ತು. ಇವತ್ತು ಅಸಹ್ಯ, ಅಸಭ್ಯ ಅಮೇರಿ ಕನ್ ಚಿತ್ರಗಳೇ ನಮಗೆ ಆದರ್ಶವಾಗಿವೆ. ನಾನಂತು ಈ ದಾರಿಯನ್ನು ತುಳಿ

ಯುವ ಜರ್ಮನ್ ಚಿತ್ರಗಳನ್ನು ನೋಡುತ್ತಲಿಲ್ಲ. ನಿಮಗೆ ಕಲೆಯ ದೃಷ್ಟಿಯಿಂದ ಉತ್ತಮ ಚಿತ್ರಗಳು ಬೇಕಾದರೆ—ಇಟಲಿ ಮತ್ತು ಫ್ರಾನ್ಸಿನ ಚಿತ್ರಗಳನ್ನು ನೋಡಬೇಕು" ಎಂದರು ಡಾ। ಫ್ಲೆಮಿಂಗರವರು. ಡಾ। ಫ್ಲೆಮಿಂಗರವರು ಫ್ರಾನ್ಸಿನ ಕಲೆಗಳ ಭಕ್ತರು. ಸಾಮಾನ್ಯವಾಗಿ ಯುರೋಪಿನ ಕಲಾವಿದರಿಗೆ ಪೆರಿಸ್ ನಗರವೆಂಬುದು ಮಕ್ಕಾ ನಗರವೇ.

ಫ್ರಾನ್ಸಿನ ಮಾತು ಬರುತ್ತಲೆ ಫ್ಲೆಮಿಂಗರವರು-ಫ್ರೆಂಚ್ ವಸಾಹತುಗಳ ವಿಷಯವಾಗಿ ಮಾತನಾಡಿದರು. ಅವರೆಂದರು "ನಾನು ಅನೇಕ ಫ್ರೆಂಚ್ ಬರಹಗಾರರು, ಕಲಾವಿದರು,ಜನಸಾಮಾನ್ಯರುಗಳನ್ನುಮಾತನಾಡಿಸಿದ್ದೇನೆ. ಅವರೊಬ್ಬರೂ ಈ ವಿದೇಶೀಯ ವಸಾಹತುಗಳ ವಿಚಾರದಲ್ಲಿ ತಮ್ಮ ಸರಕಾರದ ಧೋರಣೆಯನ್ನು ಸಮರ್ಥಿಸುವುದಿಲ್ಲ. ಜನತೆಯ ಮನಸ್ಸಿಗೂ ಫ್ರೆಂಚ್ ವಿದೇಶಾಂಗ ನೀತಿಗೂ ಸಂಪರ್ಕವಿಲ್ಲ" ಎಂದರು.

ಅಷ್ಟಕ್ಕೆ ಭಾರತದೊಳಗಿನ ಪಾಂಡುಚೇರಿಯ ವಿಚಾರವೂ ಬಂದಿತು. "ಇಷ್ಟು ಸಣ್ಣ ತುಣುಕನ್ನಿರಿಸಿಕೊಂಡು ಫ್ರಾನ್ಸಿಗೆ ಏನು ಲಾಭ?" ಎಂದೆ. ಆಗೊಬ್ಬರು "ನಿಮಗೆ ತಿಳಿಯದು—ಮೂರು ಬಲವಾದ ಶಕ್ತಿಗಳು ಪಾಂಡುಚೇರಿಯು ಭಾರತಕ್ಕೆ ಸೇರದಂತೆ ಕೆಲಸಮಾಡುತ್ತಿವೆ. ಒಂದು ಫ್ರೆಂಚ್ ಮದ್ಯವ್ಯಾಪಾರಿಗಳ ತಂಡ; ಮತ್ತೊಂದು ಯುದ್ಧದ ಇಲಾಖೆ; ಮೂರನೆಯ ಪ್ರಬಲ ಶಕ್ತಿ ಅಲ್ಲಿನ ಅರವಿಂದಾಶ್ರಮ" ಎಂದರು. ದೂರದ ಹೆಂಬರ್ಗ್ ನಗರದಲ್ಲಿ ನಾನು ಆಮಾತನ್ನು ಕೇಳಿದಾಗ ನನಗೆ ವಿಸ್ಮಯವಾಯಿತು.

ಅಲ್ಲಿಂದ ನಮ್ಮ ಮಾತಿನ ಸೆರಗು ಭಾರತದ ಕಡೆಗೆ ಹೊರಳಿತು. ಶುಕ್ಬರವರು ತಾನು ಕಂಡ ಭಾರತವನ್ನೂ, ಮೆಚ್ಚಿದ ವಸ್ತು ಮತ್ತು ಕಲೆಗಳನ್ನೂ ತುಂಬ ಹೊಗಳಿದರು. ಅಲ್ಲಿನ ಕಸಬುದಾರರಿಗೆ, ಅದರಲ್ಲಿಯೂ ನೆಯ್ಗೆಯವರಿಗೆ ಕಲಾಭಿರುಚಿ ಹೆಚ್ಚೆಂದು ಹೊಗಳಿ, ಥಟ್ಟನೆ ಒಳಗೆ ಹೋದರು. ತಮಗೆ ಯಾರೋ ಮಿತ್ರರು ಕೊಟ್ಟ ಎರಡು ಬನಾರಸ್ ಸೀರೆಗಳನ್ನು ತಂದು ಮಿಸೆಸ್ ಫ್ಲೆಮಿಂಗರವರ ಕೈಯ್ಯಲ್ಲಿರಿಸಿದರು. ಅದರ ಚೆಲುವು, ಬಟ್ಟೆಯ ಸೊಗಸು, ಅಂಚು, ಮೈಗಳ ಹೊಂದಿಕೆಯನ್ನು ಎಳೆ ವಯಸ್ಸಿನ ಆಕೆ ಕಂಡು ತಾಳಿದ ಆಸೆ, ಮೆಚ್ಚುಗೆ ಅಷ್ಟಿಷ್ಟಲ್ಲ. ನಿಜಕ್ಕೂ ಈಚೆಗಿನ ಕೆಲವು ವರ್ಷಗಳಲ್ಲಿ-ನಮ್ಮ ಸೀರೆಗಳ ತಯಾರಿಯಲ್ಲಿ ನಡೆದ ಕ್ರಾಂತಿ ವಿಶೇಷವಾದುದೇ. ಅನೇಕ ವಿಚಿತ್ರ, ವಿಕಾರ ಸೀರೆ, ಅಂಚು, ಮುದ್ರಣಗಳನ್ನು ನಾವು ಕಾಣುವೆವಾದರೂ—ನಮ್ಮ

ದೇಶದಲ್ಲಿ ತಯಾರಾಗುತ್ತಿರುವ ಹತ್ತಿ ಮತ್ತು ರೇಶ್ಮೆ ಸೀರೆಗಳಲ್ಲಿ—ನೊದ ಲೆಂದೂ ಕಾಣಸಿಗದ ಸೌಮ್ಯವರ್ಣಗಳ ಲಲಿತ ಮೇಳಗಳನ್ನು, ಸೊಗಸಿನ ಅಂಚು ಸೆರಗುಗಳನ್ನು ಸಹ ಇಂದು ನಾವು ಕಾಣಬಹುದಾಗಿದೆ.

ನಮ್ಮ ಮಾತಿನ ಸರಣಿಯು ವಿಷಯದಿಂದ ವಿಷಯಕ್ಕೆ ಹಾರುತ್ತಲೇ ಇತ್ತು; ನನಗೆ ಕಾಲ ಸರಿದುದೇ ತಿಳಿದಿರಲಿಲ್ಲ. ಘಂಟೆ ಹನ್ನೆರಡಕ್ಕೆ ಸಮೀಪಿಸಿತು. ನಾನು ಶುಕ್ಸ್‌ರವರ ಅಪ್ಪಣೆಯನ್ನು ಕೊಂಡೆ. ಅವರ ಗೆಳೆಯರಿಗೂ ವಂದನೆಯನ್ನು ಹೇಳಿ ಹೊರಟೆ. ಹೊರಡುತ್ತ—ಶುಕ್ಸ್‌ರವರು "ನಾಳೆ ಫ್ಲೆಮಿಂಗ್‌ರವರಿಗೆ ಬಿಡುವಾಗದು. ಆದರೆ ನಿಮ್ಮ ಸಹಾಯಕ್ಕಾಗಿ ಒದಗಲು ನನ್ನ ಮಗನಿಗೆ ಹೇಳುತ್ತೇನೆ. ಆತ ತತ್ವಜ್ಞಾನದಲ್ಲಿ ಡಾಕ್ಟರನಾಗಿದ್ದಾನೆ. ಹೆಂಬರ್ಗ್ ವ್ಯಾಪಾರ ಮಂಡಲದ ಕಾರ್ಯದರ್ಶಿಯಾಗಿದ್ದಾನೆ. ಬೆಳಗ್ಗೆ ಅವ ನನ್ನು ಅಲ್ಲಿಯೇ ಭೇಟಿಯಾಗುವಿರಂತೆ" ಎಂದರು. ಅವರಿಗೆ ವಂದನೆಯನ್ನು ಸಲ್ಲಿಸಿ ನಾನು ಹೊರಬಿದ್ದೆ. ನನ್ನ ಹೊಟೇಲನ್ನು ಸೇರುವಾಗ ಹದಿನೆರಡು ಘಂಟೆ ಕಳೆದಿತ್ತು. ಆದರೆ ಯುರೋಪಿನ ಹೊಟೇಲುಗಳು ಒಂದು ಘಂಟೆಯ ತನಕವೂ ತೆರೆದಿರುತ್ತವೆ.

ಎರಡನೆಯ ದಿವಸ ಅಂಗಡಿ ಬೀದಿಗಳನ್ನು ಸುತ್ತಾಡುವ ಕೆಲಸ ನನಗೆ. ನನ್ನ ನಿವಾಸದ ಹೊಟೇಲಿನ ಸಮೀಪದಲ್ಲಿನ ಅನೇಕ ಅಂಗಡಿಗಳ ದೇಖಾವೆ ಕೋಣೆಗಳಲ್ಲಿ (Show room) ಯಂತ್ರ ಸಲಕರಣೆಗಳಿದ್ದುವು. ಅವನ್ನೆಲ್ಲ ನೋಡುತ್ತ ಸರಿದೆ. ಇಲ್ಲಿಗೆ ಬರುವ ಮುಂಚೆಯೇ, ಜರ್ಮನ್ ಯಂತ್ರೋದ್ಯಮದ ಡಿರೆಕ್ಟರಿಯೊಂದನ್ನು ಕಂಡಿದ್ದೆ. ಯುದ್ಧ ಪೂರ್ವದಂತೆಯೇ—ಅವರು ಹೇಗೆ ಯಂತ್ರನಿರ್ಮಾಣದಲ್ಲಿ ಮುಂದುವರಿದಿದ್ದಾರೆಂದು ಅದು ಹೇಳುತ್ತಿತ್ತು. ನಾನು ಹೆಂಬರ್ಗಿನಲ್ಲಿ ಪ್ರತ್ಯಕ್ಷವಾಗಿ ಕಂಡ ಅಂಗಡಿಗಳನೇಕವು ಆ ಸತ್ಯವನ್ನೇ ತಿರುಗಿ ಹೇಳುತ್ತಿದ್ದುವು.

ನನಗೆ ಜರ್ಮನಿಗೆ ಹೋದಾಗ ಒಂದು ಕೆಮೆರಾ ಕೊಳ್ಳುವ ಆಸೆಯಾಗಿತ್ತು. ಆದುದರಿಂದ—ಅಲ್ಲಿನ ವಾಣಿಜ್ಯ ಸಂಘದ ಕಾರ್ಯದರ್ಶಿಗಳಾಗಿದ್ದ ಡಾ। ಶುಕ್ಸ್ (ಎಲಿಸಬೆತ್ ಶುಕ್ಸ್‌ರವರ ಮಗ)ರನ್ನು ಭೇಟಿಯಾದೊಡನೆಯೇ, ಈ ಆಸೆಯನ್ನು ತಿಳಿಸಿದೆ. ಕೆಲವು ಯಂತ್ರೋದ್ಯಮಗಳ ಮಾಹಿತಿ ಬೇಕೆಂದೂ ಹೇಳಿದೆ. ಅವರು ನನ್ನನ್ನು ಒಂದು ಕೆಮರಾ ಮಾರುವ ಅಂಗಡಿಗೆ ಕರೆದೊಯ್ದರು. ಕೆಮರಾ ತಯಾರಿಯಲ್ಲಿ ಹೆಸರಾದ "ಜೈಸ್ ಐಕಾನ"ರ

ಒಂದು ಚಿಕ್ಕ ಕೆಮರಾ ಕೊಂಡಾದ ಬಳಿಕ, ಅವರು ನನ್ನನ್ನು "ಆರ್ನಾಲ್ಡ್ ಮಯರ್" ಎಂಬ ಒಂದು ರಫ್ತಿನ ಕಂಪೆನಿಗೆ ಕರೆದೊಯ್ದರು. ಅಲ್ಲಿ ನಾನು-ಕೆಲವೊಂದು ಯಂತ್ರೋಪಕರಣದ ವಿಚಾರಗಳನ್ನು ಚರ್ಚಿಸಿದೆ; ಅವರು ವಿರಾಮವಾಗಿ ನನಗೆ ಬೇಕಾದ ಮಾಹಿತಿಗಳನ್ನು ಸಂಗ್ರಹಿಸಿಕೊಡುವುದಾಗಿ ಭರವಸೆಯನ್ನಿತ್ತರು. ಈ ಭರವಸೆಯು ಮಾತ್ರ ಬರಿಯ ಭರವಸೆಯಾಗಿಯೇ ಉಳಿಯಿತು. ಇಂಗ್ಲೆಂಡಿನ ಉದ್ಯಮ ಸಂಸ್ಥೆಗಳಿಂದ ನನಗೆ ಮಾಹಿತಿ ಪತ್ರಗಳು ಬಂದಂತೆ ಅವರಿಂದ ಬರಲೇ ಇಲ್ಲ.

ಉದ್ಯೋಗದಲ್ಲಿದ್ದ ಡಾ। ಶುಕ್ಟ್ಟರವರನ್ನು ಬರಿದೆ ನಿಲ್ಲಿಸಿಕೊಳ್ಳಬಾರದೆಂದು ಬೀಳ್ಕೊಟ್ಟೆ. ಹಾಗೆ ಮಾಡುವ ಮೊದಲು, ಅವರು ಆ ದಿನ ರಾತ್ರಿ ವಿರಾಮವಾಗಿ ಮಾತನಾಡಲು ತಮ್ಮ ಮನೆಗೆ ಆಮಂತ್ರಿಸಿದರು. ಅದನ್ನು ಒಪ್ಪಿಕೊಂಡು ಹೊಟೇಲಿಗೆ ಮರಳಿದೆ. ಸಂಜೆ ಮೂರು ತಾಸಿಗೆ, ನನಗೆ ಇಲ್ಲಿನ ಪ್ರಸಿದ್ಧ ಮೃಗಾಲಯವಾದ "ಹೆಗನ್‌ಬೇಕ್ ಜೂ"ವಿನ ನೆನಪಾಯಿತು. ಹೆಗನ್‌ಬೇಕ್ ಎಂಬವ ಆಧುನಿಕ ಮೃಗಾಲಯ ಸ್ಥಾಪಿಸಿದವರಲ್ಲಿ ಮೊದಲಿಗ. ಅವನ ಸಂತತಿಯವರು ಈಗಲೂ ಅದೇ ಉದ್ಯಮವನ್ನು ಹೆಂಬರ್ಗಿನಲ್ಲಿ ನಡೆಯಿಸಿಕೊಂಡು ಬಂದಿದ್ದಾರೆ. ಕಳೆದ ಯುದ್ಧದ ತನಕ-ಅವರು ಪ್ರಪಂಚದ ಸರ್ಕಸು ಕಂಪೆನಿಗಳಿಗೆ ಶಿಕ್ಷಿತ ಹುಲಿ, ಸಿಂಹ ಮೊದಲಾದ ಪ್ರಾಣಿಗಳನ್ನು ಒದಗಿಸುತ್ತಿದ್ದರು. ಆ ಹೆಸರಿನ ನೆನಪಿನಿಂದ ಟ್ರಾಮು ಹತ್ತಿ ಹೊರಟೆ. ನಗರದ ತೀರ ಹೊರಗಡೆ ಈ ಮೃಗೋದ್ಯಾನವಿತ್ತು. ಕೆಮರಾ ಕೈಯಲ್ಲಿ ಹಿಡಿದು ಅಲ್ಲಿ ಎರಡು ಮೂರು ತಾಸುಗಳ ಕಾಲ ಅಲೆದಾಡಿದೆ. ಪ್ರಾಣಿಗಳನ್ನು ಸಂಗ್ರಹಿಸಿ, ಅವುಗಳಿಗೆ ನಿರ್ಬಂಧವಿಲ್ಲದ ಆವರಣವನ್ನೂ, ಹಿನ್ನೆಲೆಯ ಚಿತ್ರವನ್ನೂ ಕೊಡುವ ಪದ್ಧತಿ ತೊಡಗಿದವರಲ್ಲಿ ಮೊದಲಿಗನು-ಹೆಗನ್ ಬೇಕ್. ಅವನ ಅನುಕರಣೆಯನ್ನು ಇಂದು ಅಮೇರಿಕ, ಫ್ರಾನ್ಸು, ಬ್ರಿಟನ್ ದೇಶಗಳವರು ಮಾಡಿದ್ದಾರೆ.

ಈ ಮೃಗಾಲಯ ಯುದ್ಧಕಾಲದಲ್ಲಿ ತುಂಬ ನಷ್ಟಗೊಂಡಿತ್ತು. ಹೆಗನ್‌ಬೇಕ್‌ನ ಮೊಮ್ಮಕ್ಕಳು, ಯುದ್ಧ ತೊಡಗುತ್ತಲೇ, ತಮ್ಮ ಪ್ರಾಣಿಗಳನೇಕವನ್ನು ತಟಸ್ಥ ಸ್ವೀಡನಿಗೆ ಸಾಗಿಸಿದರು. ಅಲ್ಲಿನ ಸರಕಾರದವರು ಅದನ್ನು ವಶಪಡಿಸಿಕೊಂಡರು. ಹೀಗೆ ಯುದ್ಧದಿಂದ ಬರಿದಾದ ಈ ಮೃಗಾಲಯವನ್ನು ತಿರುಗಿ ಊರ್ಜಿತಗೊಳಿಸುವ ಪ್ರಯತ್ನ ತೊಡಗಿದೆಯಷ್ಟೆ. ಈಗಿರುವ ಪ್ರಾಣಿ

ಗಳು ಮೊದಲಿನಷ್ಟಿಲ್ಲವಾದರೂ–ಸಾಕಷ್ಟು ಇವೆ. ಅವುಗಳಲ್ಲಿ ಜಿಬ್ರಾ, ಕಪಿ, ಸಿಂಹ, ಕಾಡಾಡು ಮೊದಲಾದುವಕ್ಕೆ ಸ್ವಾಭಾವಿಕ ಆವರಣ, ಗುಹೆ, ಗುಡ್ಡ ಗಳಂತಹ ಹಿನ್ನಲೆಗಳನ್ನು ರಚಿಸಿದ್ದಾರೆ. ಉಳಿದ ಕಡೆಗಳಲ್ಲಿ ಕಾಣದ ಒಂದೆ ರಡು ಸಂಗತಿಗಳನ್ನಿಷ್ಟೇ ನಾನಿಲ್ಲಿ ಬಣ್ಣಿಸುತ್ತೇನೆ.

ಇಲ್ಲಿನ ಜಲಚರಗಳ ಸಂಗ್ರಹದಲ್ಲಿ–ಸೀಲ್, ವಾಲ್ರಸ್, ಕಡಲು ದನ ಮೊದಲಾದುವುಗಳನ್ನು ಕೆರೆಗಳಲ್ಲಿ ತಂದು ಸಾಕಿದ್ದಾರೆ. ಅವು ಸದಾ ನೀರಲ್ಲಿ ಮುಳುಗೇಳುತ್ತ, ಸುತ್ತಿ ಸುಳಿಯುವಂಥ ಲೀಲೆ ಆಕರ್ಷಕವಾಗಿವೆ. ಸೀಲು ಗಳಂತು-ಮನುಷ್ಯನನ್ನು ಕಂಡರೆ ಆಹಾರವನ್ನು ಬೇಡಿಬರುವ ಸ್ವಭಾವದವು. ನಾನು ಹೋದ ದಿನ ಸಂಜೆ, ಅಲ್ಲಿನ ಸರ್ಕಸ್ಸು ಮಂದಿರದಲ್ಲಿ–ಸೀಲುಗಳಿಂದ ಅನೇಕ ಆಟಗಳನ್ನು ಆಡಿಸಿ ತೋರಿಸಿದರು. ಸೀಲಿಗೆ ಹಿಂಗಾಲು, ಮುಂಗಾ ಲುಗಳ ಬದಲು ತೊಳೆಯಂತಿರುವ ಪುಕ್ಕಗಳಿವೆ; ಹಿಂದೆ ದಪ್ಪನಾದ ಬಾಲ! ಅದು ನೆಲದ ಮೇಲೆ ನಡೆದು ಬರುವಂಥ ನೋಟ ಒಳ್ಳೆಯ ವಿಕಟವಿನೋದ. ಅವುಗಳ ಮೂತಿಗಳ ಮೇಲೆ, ಸೀಸೆ, ಚಂಡು, ಬಿಡಿಸಿದ ಕೊಡೆ— ಏನನ್ನು ಕೊಟ್ಟರೂ, ಅವನ್ನು ತೋಲವಾಗಿ ಹಿಡಿದು ಅವು ಆಚೀಚೆ ನಡೆಯುತ್ತವೆ. ವಸ್ತುಗಳನ್ನು ಬೀಳಿಸದೆಯೇ ಏಣಿಗಳನ್ನು ಹತ್ತಿ, ಇಳಿಯುತ್ತವೆ. ಅದನ್ನು ನೋಡಿದಷ್ಟು ವಿಸ್ಮಯಪೂರಿತ ನಗುಬರುತ್ತದೆ.

ಈ ಮೃಗಾಲಯದಲ್ಲಿ—ಬಹಳ ಹಿಂದೆಯೇ ಪ್ರಾಚೀನ ಯುಗದ ಪ್ರಾಣಿಗಳ ರೂಪವನ್ನು ಸಿಮೆಂಟಿನಲ್ಲಿ ಮೂಲಪ್ರಮಾಣದಲ್ಲಿ ಮಾಡಿರಿಸಿ ದ್ದಾರೆ. ನೋಟಕ್ಕೆ ಅವು ನಿಜವಾದ ಪ್ರಾಣಿಗಳಂತೆಯೇ ಕಾಣುತ್ತವೆ. ಆಚೀಚೆ ಸಸ್ಯಗಳ ಹಿನ್ನೆಲೆಯೂ ಇದೆ. ಹೀಗಾಗಿ ಪ್ರಾಚೀನ ಯುಗದ ಖಡ್ಗಮೃಗ, ಬ್ರೊಂಟಾಸುರನ್, ಡಿನಾಸುರಸ್‌ಗಳ ಅಗಾಧ ಗಾತ್ರ, ರೂಪಗಳು, ಈಗಿರುವ ಮೃಗಗಳ ಕುಂಠಿತ ಶರೀರಗಳೊಡನೆ ಇರುವ ತಾರತಮ್ಯ ಸೂಚಿಸುತ್ತವೆ.

ಮೃಗಾಲಯವನ್ನು ನೋಡಿಕೊಂಡು ನಗರಕ್ಕೆ ಮರಳಿದೆ. ಅಲ್ಲಿ,ಇಲ್ಲಿ, ರೈಲ್ವೆ ನಿಲ್ದಾಣದಲ್ಲಿ ಹೊತ್ತನ್ನು ಕಳೆದೆ. ಅನಂತರ ರಾತ್ರಿಯ ಎಂಟು ಘಂಟೆಗೆ ಸಮನಾಗಿ ಡಾಕ್ಟರ ಶುಕ್ಟರವರ ಮನೆಗೆ ಹೋದೆ. ಹೊಸ ಮನೆ; ಎರಡು ಅಂತಸ್ತಿನ ಮಹಡಿಯ ಮನೆ. ಎರಡನೆಯ ಅಂತಸ್ತಿನ ವಿಭಾಗವೊಂದರಲ್ಲಿ ಡಾಕ್ಟರವರ ವಸತಿಯಿತ್ತು. ನಾನು ಹೋದಾಗ ಅವರೊಬ್ಬರೇ ಇದ್ದರು. ದಿವಾನಖಾನೆಯಂತೆ ಸುಸಜ್ಜಿತವಾದ ಒಂದು ಕೊಟಡಿಯಲ್ಲಿ ಇಬ್ಬರೂ

ಕುಳಿತುಕೊಂಡೆವು. ಆಚೀಚೆ ಸಾಕಷ್ಟು ಗ್ರಂಥಗಳು ಉರುಳಾಡುತ್ತಿದ್ದುವು. ಅವರು ನನ್ನ ಮುಂದೆ ಉಪಾಹಾರ ತಂದಿರಿಸಿದರು. "ನಾನು ಒಂದಿಷ್ಟು ಬಿಯರ್ ಸೇವಿಸಿದರೆ ನಿಮ್ಮ ಆಕ್ಷೇಪವಿಲ್ಲವಷ್ಟೆ"ಎಂದರು. "ಆಗಲಿ"-ಎಂದೆ.

ಡಾಕ್ಟರವರೊಡನೆ–ಆ ದೇಶದ ಆರ್ಥಿಕ ಪರಿಸ್ಥಿತಿ, ತೆರಿಗೆಗಳ ವಿಚಾರ ಮಾತನಾಡಿದೆ; ಕೆಲಸ ವಿಶ್ರಾಂತಿಗಳನ್ನು ಕುರಿತು ಮಾತನಾಡಿದೆ. ಅವರೆಂದುದರಲ್ಲಿ ಒಂದೆರಡು ಸಂಗತಿಗಳನ್ನಷ್ಟೆ ಹೇಳುತ್ತೇನೆ. "ನೋಡಿ-ನಮಗೆ ವಿರಾಮ ಕಡಿಮೆ; ಬೆಳಗಿನ ಎಂಟು ಘಂಟೆಗೆ ಹೋದರೆ ನಾವು ಮರಳುವಾಗ ಸಂಜೆಯ ಆರು ಘಂಟೆಯಾಗುತ್ತದೆ. ಅಲ್ಲಿಂದ ಊಟ ಮುಗಿಸಿ, ಮಿತ್ರರಾದವರು ಕಲೆಯುವುದು, ತಿರುಗಾಡುವುದು ನಮ್ಮ ವಾಡಿಕೆ. ರಾತ್ರಿ ಒಂದು ಘಂಟೆಯ ತನಕವೂ ನಮ್ಮ ನಿತ್ಯದ ಸಂಭಾಷಣೆ ಮಾತುಕತೆಗಳು ನಡೆಯುತ್ತವೆ.

"ಚಳಿಗಾಲದಲ್ಲಿ?"

"ಚಳಿಗಾಲ, ಸೆಕೆಗಾಲವೆಲ್ಲ ಒಂದೇ ....... ತೆರಿಗೆಯ ವಿಚಾರ ಕೇಳುತ್ತೀರಿ, ನಮ್ಮಲ್ಲಿಯೂ ತೆರಿಗೆ ಕಡಿಮೆಯಾಗಿಲ್ಲ. ನಾನೀಗ ತಿಂಗಳಿಗೆ 1300ರ ಮಾರ್ಕು(1500ರೂಪಾಯಿ)ಪಡೆಯುವ ನೌಕರ;ಅದರ ಸೇಕಡಾ 40ರಷ್ಟುತೆರಿಗೆಯಾಗಿ ಕೊಡುತ್ತಿದ್ದೇನೆ;ಅದಿಲ್ಲದೆ ದೇಶವೂ ನಡೆಯಲಾರದು" ಎಂದರು. ಸಾಮಾನ್ಯವಾಗಿ ಪಾಶ್ಚಾತ್ಯ ಜನಗಳಲ್ಲಿ ಆದಾಯ ತೆರಿಗೆ ತಪ್ಪಿಸುವ ಕದಿಮರು ಕೆಲವರಿರಬಹುದಾದರೂ, ಸಾಮಾನ್ಯರು ತೆರಿಗೆ ಕೊಡಲು ತಪ್ಪಿಸಿಕೊಳ್ಳುವ ಸ್ವಭಾವದವರಲ್ಲ.

ಡಾಕ್ಟರವರಿಗೆ ನಮ್ಮ ದೇಶದ ವಾಸ್ತು ವಿಶೇಷಗಳನ್ನು ನೋಡುವ ಕುತೂಹಲ.ಆ ವಿಷಯವಾದ ಗ್ರಂಥಗಳನ್ನು ಓದಿಕೊಂಡಿದ್ದರು.ಪೌರ್ವಾತ್ಯ ದೇಶಗಳಲ್ಲಿ ಅಲೆದಾಡಿ ಬಂದ ಅವರ ತಾಯಿಯೂ ಅವರಿಗೆ ಆ ವಿಷಯವಾಗಿ ಪ್ರೋತ್ಸಾಹಿಸಿದ್ದಳು. ಹೀಗಾಗಿ–ಈ ವಾಸ್ತುವಿಶೇಷಗಳನ್ನು ಕುರಿತಾಗಿ ದೀರ್ಘಚರ್ಚೆ ನಡೆಯಿಸಿದರು; ಸ್ಥಳ, ದೂರ ಮೊದಲಾದುವನ್ನು ಭಾರತದ ನಕ್ಷೆಯಲ್ಲಿ ಗುರುತಿಸಿಕೊಂಡು, ಅಲ್ಲಲ್ಲಿನ ದೂರಗಳನ್ನೂ ಸಂಚಾರದ ವಿಧಾನವನ್ನು ಬರೆದುಕೊಂಡರು.

ಅವರ ಪ್ರೀತಿಯ ವಿಷಯವು–ತತ್ವಜ್ಞಾನ. ಭಾರತೀಯ ತತ್ವಜ್ಞಾನವನ್ನೂ ಅವರು ಓದಿಕೊಂಡಿದ್ದಾರೆ. ಅದರಲ್ಲಿಯೂ 'ಅನುಭಾವಿಕತೆ'ಯ ಮೇಲೆ ಅವರಿಗೆ ಹೆಚ್ಚಿನ ಒಲವಿದ್ದಂತೆ ಕಾಣುತ್ತಿತ್ತು. ಡಾ। ಚೊಪ್ರಾ ಎಂಬ

ವರು ಬರೆದೊಂದು ಗ್ರಂಥದಲ್ಲಿ ಹೆಸರಿಸಿದ ಕೆಲವು ಆಧುನಿಕ ಸಾಧುಸಂತರ ವಿಷಯದಲ್ಲಿ ನನ್ನೊಡನೆ ಪ್ರಶ್ನೆ ಕೇಳಿದರು. ಅರವಿಂದರು, ರಮಣಮಹರ್ಷಿಗಳು, ಮೆಹರ್ ಬಾಬ–ಇವರೆಲ್ಲರುಗಳ ವಿಚಾರ ಮಾತುಗಳು ಬಂದುವು. ಈ ಕ್ಷೇತ್ರದಲ್ಲಿ ಕೆಲವೊಂದು ಸಾಧುಗಳನ್ನು ಕಂಡ, ಅವರನ್ನು ಕುರಿತು ಕೇಳಿದ, ನನ್ನ ಮನಸ್ಸು ಚೋಪ್ರಾರವರ ಅಭಿಪ್ರಾಯಗಳಿಂದ ಭಿನ್ನವಾಗಿತ್ತು. "ನನಗೆ ಧರ್ಮ, ಮತ, ತತ್ವಜ್ಞಾನ, ಮಾನಸಿಕ ಪಾಂಡಿತ್ಯಗಳೆನಿಸುವುದಿಲ್ಲ. ನಮ್ಮಲ್ಲಿ ಉಪನಿಷತ್ತುಗಳಂಥ ಗ್ರಂಥಗಳಲ್ಲಿ ಅತಿ ಹೆಚ್ಚಿನ ಬೆಳಕನ್ನು ಬೀರಿದ್ದಾರೆ. ಅವೇ ಮಾತನ್ನು ಇಂದು ನಾವು ನಮ್ಮದೆಂದೂ ಹೇಳಬಹುದು.ಆದರೆ ಆಡುವ ಅಂಥ ಮಾತಿಗೂ, ಪ್ರತ್ಯಕ್ಷವಾಗಿ ಕೆಲವರು ಆಧುನಿಕ ಸಾಧುಗಳು ನಡೆಸುತ್ತಿರುವ ಜೀವನಕ್ಕೂ ಹೊಂದಿಕೆ ಕಾಣುತ್ತಿದೆಯೇ-ಎಂದರೆ, ಆ ವಿಷಯದಲ್ಲಿ ನನಗೆ ನಿರಾಶೆಯಾಗಿದೆ" ಎನ್ನಬೇಕಾಯಿತು ನಾನು. ಅನಂತರ ನಾನು ಇತ್ತೀಚೆಗೆ ಆಗಿಹೋದ ಸಾಧಕರೂ, ಅನುಭಾವಿಗಳೂ, ಭಕ್ತರೂ ಏಕಕಾಲದಲ್ಲಿ ಆಗಿದ್ದ, ಆದರ್ಶ ಜೀವನವನ್ನು ನಡೆಯಿಸಿದ ಶ್ರೀ ರಾಮಕೃಷ್ಣ ಪರಮಹಂಸರ ವಿಚಾರವಾಗಿ ಹೇಳಿದೆ. ನನಗೆ ಅನುಭಾವಿಗಳಾಗಿ ಕಂಡ ಸಾಧು ವಸ್ವಾನಿಯವರ ವಿಚಾರದಲ್ಲಿಯೂ ನಾನು ತಿಳಿದ ಕೆಲವೊಂದು ವಿಷಯಗಳನ್ನು ಹೇಳಿದೆ.

ಹೃದಯ ಮನಸ್ಸು ಕಾರ್ಯಗಳು ಏಕತ್ರಗೊಳ್ಳದ "ಧರ್ಮ" ಧರ್ಮವಲ್ಲ ಎಂಬ ಅಭಿಪ್ರಾಯವನ್ನು ಅವರೂ ಪುಷ್ಟೀಕರಿಸಿದರು.ಅವರು ಯೌವನದಲ್ಲಿ ಕಾಲಿರಿಸಿದ ತರುಣರು. ಅವರ ಮನಸ್ಸು ಅನೇಕ ಪ್ರಾಪಂಚಿಕ ಸಮಸ್ಯೆಗಳಿಂದ ನೊಂದಿತ್ತು. ಅದೇ ಬಗೆಯಲ್ಲಿ-ಮನಸ್ಸಿಗೆ ಕೇವಲ ಲೌಕಿಕ ವಾದವು ಒಗ್ಗದಂಥ ಅನೇಕ ಮೇಧಾವಿಗಳೂ,ಸತ್ಯಶೋಧಕರೂ ಪಾಶ್ಚಾತ್ಯರಲ್ಲಿದ್ದಾರೆ. ಅವರು ಒಂದೊಂದು ಮತಕ್ಕೆ ಅಂಟಿದ ಮನಸ್ಸುಳ್ಳವರಾಗಿರದೆ, ವಿಶ್ವಸ್ಥವಾದ ಧರ್ಮಜಿಜ್ಞಾಸುಗಳಾಗಿದ್ದಾರೆ. "ಸತ್ಯ"ಯಾವೆಡೆಯಿಂದ ಬಂದರೂ ಸ್ವೀಕರಿಸುವ, ತಿಳಿಯುವ ಹಂಬಲವುಳ್ಳವರಾಗಿದ್ದಾರೆ. ಡಾ। ಶುಕ್ಲರವರ ನಿಸ್ಪೃಹ, ಸರಳ ಮನಸ್ಸು ಈ ತೆರನಾದುದು. ಹೀಗಾಗಿ ಅವರೊಡನೆ ಮಾತನಾಡುವಾಗ ಅಲ್ಪಕಾಲದ ಪರಿಚಯವಾದರೂ ತೀರ ಆತ್ಮೀಯ ಮಾತುಕತೆಗಳಿಗೆ ಅವಕಾಶವಾಗಿತ್ತು.

ನಾನು ಆಗಾಗ ಗಡಿಯಾರ ನೋಡುತ್ತಿದ್ದೆ. 'ಅವಸರವೇನು!' ಎಂದು

ಅವರು ತಡೆದು ಹಿಡಿಯುತ್ತಿದ್ದರು. ಅವರ ಮನೆಯನ್ನು ಬಿಡುವಾಗ ರಾತ್ರಿಯ ಹನ್ನೆರಡು ಘಂಟೆಯಾಗಿತ್ತು. ಊರಲ್ಲಿ ಸಂಜೆಗೇ ಗೂಡು ಸೇರುವ ಹಕ್ಕಿ ನಾನಾದುದರಿಂದ ನನ್ನ ಮನಸ್ಸು ಹಾಗೆ ಚಡಪಡಿಸುತ್ತಿತ್ತು. ಅವರು ತುಸು ದೂರ ನಡೆದು ಬಂದು, ಟೇಕ್ಸಿಯೊಂದರಲ್ಲಿ ಕುಳ್ಳಿರಿಸಿ ಕಳುಹಿಸಿಕೊಟ್ಟರು. ನಮ್ಮ ದೇಶಕ್ಕೂ ಒಂದು ಭೇಟಿಯಾಗುವೆನೆಂದಿದ್ದಾರೆ. ಹಾಗೆ ಬಂದಾರು, ಬರಬೇಕು–ಎಂಬ ಆಸೆ ನನಗೆ. ಯುರೋಪಿನ ಅನೇಕ ನಗರಗಳಲ್ಲಿ ನಾನು ಸಂಧಿಸಿದ ವ್ಯಕ್ತಿಗಳ ಸಂಖ್ಯೆಯು ಕಿರಿದಾದರೂ, ಅವರ ವಿಚಾರದಲ್ಲಿ ನನಗೆ ಉಂಟಾದ ಗೌರವ ಕಿರಿದಲ್ಲ.

ಮೂರನೆಯ ದಿವಸ ಮಧ್ಯಾಹ್ನ ಒಂದು ಘಂಟೆಗೆ ನಾನು ಹೆಂಬರ್ಗ್ ನಗರ ಬಿಟ್ಟು, ಹಾಲೆಂಡಿನ ಲ್ಯೆಡನ್ ನಗರವನ್ನು ಸೇರುವವನು. ಆ ಬೆಳಗ್ಗೆ ನನಗೆ ತೀರ ವಿರಾಮವಿತ್ತು. ಹೊಟೇಲಿನಿಂದ ಹೊರಬಿದ್ದೆ; ತೀರ ಸಮೀಪದ ಕಾಲುವೆಯ ಜಲಾಶಯವೊಂದರ ಬಳಿ ಹೋಗಿ ಕುಳಿತೆ . . . . . ಆಚೀಚೆ ಮಕ್ಕಳನ್ನಾಡಿಸುವ ಒಬ್ಬಿಬ್ಬರು ತಾಯಂದಿರಿದ್ದರು; ಕೆಲಸವಿಲ್ಲದ ಒಬ್ಬಿಬ್ಬರು ನಿರುದ್ಯೋಗಿಗಳಿದ್ದರು. ಕಣ್ಣೆದುರಿನ ನೀಲ ಜಲದಲ್ಲಿ, ಬಿಳಿ ಹಾಯಿಗಳನ್ನು ಬಿಡಿಸಿ ಓಡಾಡುವ ಹಲವು ಯಾಟ್ (yacht)ಗಳಿದ್ದುವು. ದೂರದ ಬಾನಂಚು ಮರಗಿಡಗಳ ಹಸುರಿಂದ, ದೂರದ ಕಟ್ಟಡಗಳ ರೇಖೆಗಳಿಂದ ಸುಂದರವಾಗಿತ್ತು.

ತಾಸೆರಡು ತಾಸು ಮೆಲುಕಾಡುತ್ತ–ತುಸು ದೂರ ನಡೆದು, ಆ ಕಾಲುವೆಯೊಂದಕ್ಕೆ ಹೊಸತಾಗಿ ಕಟ್ಟುತ್ತಿರುವ ಸೇತುವೆಯ ಕೆಲಸವನ್ನು ನೋಡುತ್ತ ನಿಂತೆ. ಬಾನಿನಲ್ಲಿ ಏನೋ ಧ್ವನಿಯಾಯಿತು. ನಾಲ್ಕಾರು ಜೆಟ್ ವಿಮಾನಗಳು ಹೊಗೆಯ ರಂಗವಲ್ಲಿಯನ್ನು ಬಾನಂಗಣದಲ್ಲಿ ಬರೆದು ಮಾಯವಾದುದು ಕಂಡಿತು. 'ಒಂದು ಯುದ್ಧ ಕಳೆಯಿತು . . . ಮುಂದಿನ ಯುದ್ಧದ ಕಾರ್ಮುಗಿಲು ದಟ್ಟಣಿಸುತ್ತಿದೆಯಲ್ಲ' ಎಂದನಿಸಿತು. ತಿರುಗೊಮ್ಮೆ ಬೀದಿಗಳನ್ನು ಸುತ್ತಿ, ಸುಳಿದು, ಹೊಟೇಲಿಗೆ ಮರಳಿದೆ. ವೇಳೆಗೆ ಸಮನಾಗಿ ರೈಲು ನಿಲ್ದಾಣವನ್ನು ಸೇರಿದೆ. ಹಾಲೆಂಡಿಗೆ ಹೊರಡುವ ಗಾಡಿಯೊಂದು ಬಂದೊಡನೆಯೇ ಹೋಗಿ ಬಂಡಿಯನ್ನೇರಿ ಕುಳಿತೆ. ಬಂಡಿ ಹೊರಡುವ ವೇಳೆಗೆ–ಒಬ್ಬ ಹಿಂದೀಯರು ಕಾಣಿಸಿದ್ದರು. ವಂದಿಸಿದೆ. ಅವರು ತಮ್ಮೊಬ್ಬ ಪರಿಚಿತೆಯನ್ನು ದಕ್ಷಿಣ ಆಫ್ರಿಕಕ್ಕೆ ಕಳುಹಿಸುವ ಸಲುವಾಗಿ ಬಂದಿದ್ದರು. ನನಗೆ ಪ್ರತಿವಂದನೆ

ಸಲ್ಲಿಸಿ ತಮ್ಮ ವಿಳಾಸವನ್ನು ಕೊಟ್ಟರು. ನನ್ನ ವಿಳಾಸವನ್ನೂ ಕೊಟ್ಟೆ. ಬಂಡಿ ಹೊರಟಿತು. ಅವರ ಹೆಸರು 'ಕುಲಕರ್ಣಿ ಪಂಡಿತ' ಎಂದು ಓದಿಕೊಂಡೆ. ಊರಿಗೆ ಮರಳಿದಾಗ ಅವರಿಂದ ಪತ್ರ ಬಂದಿತ್ತು. ಕೊಲ್ಹಾಪುರದವರವರು. ಹೆಂಬರ್ಗಿನಲ್ಲಿ ಈಗ ಬರಹಗಾರರಾಗಿ ಜೀವನ ಸಾಗಿಸುತ್ತಿದ್ದಾರೆ.

ನಮ್ಮ ಬಂಡಿ ಹೊರಟಿತು. ಜರ್ಮನಿಯ ಬಯಲು ಭೂಮಿಯ ತಗ್ಗು ತೆವರುಗಳನ್ನು ವೇಗವಾಗಿ ದಾಟುತ್ತ ಮುಂದೆ ಸರಿಯಿತು. ಎಲ್ಲೆಲ್ಲೂ ಕೃಷಿಗೊಂಡ ನೆಲ, ನಟ್ಟ ಕಾಡು, ಚೊಕ್ಕಟವಾದ ಹಳ್ಳಿಯ ಮನೆಗಳು. ಕೆಲವೊಂದು ಹಳ್ಳಿಯ ರಸ್ತೆಗಳಷ್ಟೆ ಜಲ್ಲಿಕಲ್ಲು ಹಾಕಿಮಾಡಿದುವು; ಮುಖ್ಯ ರಸ್ತೆಗಳೆಲ್ಲವೂ ಸಿಮೆಂಟಿನಿಂದ ನಿರ್ಮಿತವಾದುವು. ತುಸು ಮುಂದುವರಿದ ಬಳಿಕ ಒಬ್ಬ ಯುನೈಟೆಡ್ ಸ್ಟೇಟ್ಸ್ ತರುಣ ನಮ್ಮ ಕೊಠಡಿಯಲ್ಲಿ ಬಂದು ಕುಳಿತ. ಸಿಗರೆಟ್ ಧ್ವಂಸಮಾಡುವುದರಲ್ಲಿ ನನಗಿಂತ ಅವನು ನಿಸ್ಸೀಮ. ಇನ್ನೊಂದು ನಿಲ್ದಾಣದಲ್ಲಿ ಹಾಲೆಂಡಿಗೆ ಹೋಗುವ ಒಬ್ಬ ತರುಣಿಯೂ, ಒಬ್ಬಳು ಪ್ರಾಯಸ್ಥ ಸ್ತ್ರೀಯೂ ಬಂದು ಸೇರಿದರು. ಆ ತರುಣ, ರಜೆಯನ್ನು ಪಡೆದು ವಿಹಾರಕ್ಕಾಗಿ ಹಾಲೆಂಡಿಗೆ ಹೋಗುವ ಯೋಧನಾಗಿದ್ದ. ನಿರರ್ಗಳವಾಗಿ ಮಾತನಾಡುತ್ತಿದ್ದ. ಹೀಗಾಗಿ ನಮ್ಮ ಪಯಣವು ಮಾತು, ವಿನೋದ, ಸಿಗರೇಟಿನ ಹೊಗೆ, ಪೆಪ್ಪರಮಿಂಟು — ಇವುಗಳ ಸಿಹಿಗಳಿಂದ ಕೂಡಿ ಮುಂದುವರಿಯಿತು. ಗಡಿ ಬರುವ ಮುಂಚೆಯೇ — ಜರ್ಮನಿಯ ಸುಂಕದವರೂ, ಪಾಸುಪೋರ್ಟು ತನಿಖೆಮಾಡುವವರೂ ಬಂದರು. ನಮ್ಮ ಪಾಸುಪೋರ್ಟುಗಳಿಗೆ ಮುದ್ರೆಯನ್ನೊತ್ತಿದರು. "ನಿಮ್ಮ ವೀಸ ಇಲ್ಲಿಗೆ ಮುಕ್ತಾಯವಾಯಿತು" ಎಂದು ಒಬ್ಬ ಅಧಿಕಾರಿ ನನಗೆ ಹೇಳಿದ; "ಹೂಂ" ಎಂದೆ ನಾನು.

ಅನಂತರ ನಮ್ಮ ಯೋಧ ಮಿತ್ರ, "ಇನ್ನು ಹಾಲೆಂಡಿನವರು ಬರುತ್ತಾರೆ. ಜರ್ಮನ್ ಮಾರ್ಕುಗಳನ್ನು ತೆಗೆದಿರಿಸುವ" ಎಂದು ತನ್ನಲ್ಲಿರುವ ಹಲವು ಮಾರ್ಕುಗಳ ನೋಟುಗಳನ್ನು ಸೊಂಟದ ದಟ್ಟಿಗೆ ಸೇರಿಸಿಕೊಂಡ. ನನಗೆ ಅರ್ಥವಾಯಿತು. ಒಂದು ದೇಶದ ನೋಟುಗಳನ್ನು, ಇನ್ನೊಂದು ದೇಶಕ್ಕೆ ಇಂತಿಷ್ಟೇ ಮಿತಿಗಿಂತ ಒಯ್ಯಕೂಡದೆಂಬ ನಿಯಮವಿದೆ. ಹೆಚ್ಚಿನವನ್ನು ಗಡಿಯಲ್ಲಿರುವ ಅಧಿಕೃತ ನೌಕರರ ಮೂಲಕ ವಿನಿಮಯಮಾಡಬೇಕು. ಆದರೆ ಅವರು ಕೊಡುವ ಅಧಿಕೃತ ವಿನಿಮಯ ಬೆಲೆಗಿಂತ, ಖಾಸಗಿಯಿಂದ ಮಾರಿದರೆ ಹೆಚ್ಚಿನ ಲಾಭ ಬರುತ್ತದೆಯಂತೆ. ಹೀಗಾಗಿ ಫ್ರಾನ್ಸ್,

ಹಾಲೆಂಡ್ ಮೊದಲಾದ ಜರ್ಮನ್ ಗಡಿನಾಡುಗಳಲ್ಲಿ ಕಾಯಿದೆಗೆ ಹೊರಗಾದ, ಈ ವಿನಿಮಯದ ಆಟ ಬಹುವಾಗಿ ನಡೆಯುತ್ತದೆಯಂತೆ. ಅಂಥ ಒಂದು ನಿದರ್ಶನವನ್ನು ಕಂಡಂತಾಯಿತು.

ಜರ್ಮನ್ ಗಡಿಯ ಕೊನೆಯ ಬಾನಹೋಫ್ (ರೈಲ್ವೆ ನಿಲ್ದಾಣಕ್ಕೆ ಜರ್ಮನ್ ಹೆಸರು) ಬಂದಿತು. ಆ ಸುಂಕದವರು ಇಳಿದರು. ಅಲ್ಲಿಂದ ಡಚ್ ಅಧಿಕಾರಿಗಳೂ, ಸುಂಕದವರೂ ನಮ್ಮ ಬಂಡಿಯನ್ನೇರಿದರು.

# ೧೨. ಹಾಲಿನ ನಾಡು, ಹಾಲೆಂಡ್

ಹಾಲು ಹಯನುಗಳು ತುಂಬಿದಂಥ ದೇಶ ಹಾಲೆಂಡು. ಯುರೋಪಿನಲ್ಲೇ ಅತ್ಯಂತ ಜನ ಸಾಂದ್ರತೆಯುಳ್ಳ ದೇಶ. ಅದರ (ನೆದರ್‌ಲೆಂಡ) ಹತ್ತು ಮಿಲಿಯ ಜನಸಂಖ್ಯೆಯು ೧೩,೦೦೦ ಚದರ ಮೈಲು ಭೂಮಿಯಲ್ಲಿ ವಾಸಿಸಿಕೊಂಡಿದೆ. ಚಳಿಗಾಲ ಬಿಟ್ಟರೆ–ಇಡಿಯ ದೇಶವೇ ಒಂದು ಬಯಲುಗಾವಲಾಗಿ ಕಾಣಿಸುತ್ತದೆ; ತೀರ ಸಮತಟ್ಟಾದ ಭೂಮಿ. ಅದರ ಎಷ್ಟೋ ಭಾಗ, ನಮಗೆ ತಿಳಿದಿರುವಂತೆ ಕಡಲಮಟ್ಟಕ್ಕಿಂತಲೂ ತಗ್ಗಾಗಿದೆ. ಆ ಕಡಲನ್ನು ಜಯಿಸಿ, ಅಲ್ಲಿನ ಪರಶುರಾಮರು ನೆಲವಾಗಿ ಮಾಡಿಕೊಂಡಿದ್ದಾರೆ. ಈ ದೇಶದೊಳಗೆ ಉತ್ತರ ಸಮುದ್ರದ ಕಡಲಿನ ಒಂದು ಕೊಲ್ಲಿ ಜುಯಿಡರ್‌ಜ್ಸೀ–ಎಂಬುದು ಚಾಚಿಕೊಂಡಿದೆ. ಅದರ ಭಾಗಕ್ಕೇನೆ ಒಡ್ಡು ಕಟ್ಟಿದರು. ಉಸುಕಿನ ಒಡ್ಡುಗಳ ಮೇಲೆ, ಹುಲ್ಲು ಬೆಳೆಯಿಸಿ ಅವು ಕುಸಿಯದಂತೆ ಮಾಡಿದರು. ಆಗ ಸರೋವರವೊಂದಾಯಿತು. ಪಂಪುಗಳ ಸಹಾಯದಿಂದ ಅದರ ನೀರನ್ನು ಕಾಲುವೆಗಳ ಮೂಲಕ ಹರಿಯಿಸಿ ಕಡಲಿಗೆ ಚೆಲ್ಲಿದರು. ನೆಲವನ್ನು ಕೃಷಿ ಯೋಗ್ಯವನ್ನಾಗಿ ಮಾಡಿದರು. ಈಗ ಆ ದೇಶದಾದ್ಯಂತವಾಗಿ ಹಸುರು ಹೊಲಗಳ ನಡುವೆ ಅಸಂಖ್ಯಾತ ಕಾಲುವೆಗಳಿವೆ. ಅಲ್ಲಲ್ಲಿ ಡಚ್ ದೃಶ್ಯಗಳನ್ನು ಮನೋಹರವಾಗಿ ತೋರಿಸುವ "ಗಾಳಿ ಗಿರಣಿ" (Wind mill) ಗಳಿವೆ. ಇವುಗಳಿಗೆ ಸಾಮಾನ್ಯವಾಗಿ–ಭೂಮಿಯ ಒರತೆ ನೀರನ್ನು ಎತ್ತಿ ಕಾಲುವೆಗಳ ಮೂಲಕ ಸಾಗಿಸಿ ಕಡಲಿಗೆ ತಳ್ಳುವುದೇ ಕೆಲಸ.

ಇಂಥ ಸಮತಟ್ಟಾದ ನೆಲ, ಚಳಿಗಾಲದಲ್ಲಿ ಹಿಮದ ಹಾಳೆಯಾಗುತ್ತಿದ್ದಿರಬೇಕು. ಉಳಿದಾಗೆಲ್ಲ ಹಚ್ಚಹಸುರಿನ ಹೊಲವಾಗಿರುತ್ತದೆ. ಉಳುವ ಭೂಮಿ; ಬರಿಯ ಹುಲ್ಲುಗಾವಲುಗಳೂ ವಿಶಾಲ. ಹಾಲು ಹಯನಿನ ಉದ್ಯೋಗ ಇಲ್ಲಿ ವಿಶೇಷವಾಗಿ ಬೆಳೆದು ಬಂದಿದೆ. ಹಾಲನ್ನು ಹಳ್ಳವಾಗಿ ಹರಿಯಿಸಬಲ್ಲ ಶಕ್ತಿ ಇಲ್ಲಿನ ದನಗಳಿಗಿದೆ.

ಈ ದೇಶವನ್ನು ನಾನು ಬಹು ದಿನಗಳಿಂದಲೂ ನೋಡಲು ಬಯಸಿದ್ದೆ. ಅದಕ್ಕೆ ಕಾರಣ–ರೆಂಬ್ರಾಂಡ್, ಫ್ರಾನ್ಸ್ ಹಾಲ್ಸ್, ವರ್ಮೀರ್‌ರಂಥ ಹೆಸರಾದ ಈ ದೇಶದ ಚಿತ್ರಕಾರರು. ಈ ದೇಶದ ರಾಜಧಾನಿಯಾದ ಎಮ್ಸ್ಟರ್‌ಡಾಮಿಗೆ ನಾನು ಹೋಗಲು ನಿರ್ಧರಿಸಿದ್ದೆ; ನಾಲ್ಕು ದಿನಗಳ ಕಾಲ ಅಲ್ಲಿ

ನಿಲ್ಲಲು ಯೋಚಿಸಿದ್ದೆ. ನನ್ನ ಮಿತ್ರರಾದ ಡಾ। ಬಾಕೆ ದಂಪತಿಗಳು ಈ ದೇಶದವರು. ಅವರ ಸ್ವಭಾವವೇ ಈ ದೇಶೀಯರ ಸ್ವಭಾವ–ಎಂದು ನನ್ನ ಮನಸ್ಸು ಹೇಳುತ್ತಿತ್ತು. ರಸಿಕ ಮನಸ್ಸು, ಶಾಂತ ಶೀಲ, ದೈತ್ಯ ಕರ್ತೃತ್ವ ಶಕ್ತಿಗಳ ಮೇಳ; ತುಂಬ ಸಾಮಾಜಿಕ ಸ್ನೇಹಪರತೆ–ಇವನ್ನೆಲ್ಲ ನನ್ನ ಗೆಳೆಯರಲ್ಲಿ ಕಂಡಿದ್ದೆ. ಅವರ ಊರಿಗೆ ಹೋಗುವೆನೆಂದು ಅವರಿಗೆ ಹೇಳಿದಾಗ–ನನ್ನ ಮೇಲೆ ಒಂದು ಪ್ರೀತಿಯ ನಿರ್ಬಂಧವನ್ನು ಹೊರಿಸಿದರು. "ಲೈಡನ್ ನಮ್ಮ ಹುಟ್ಟಿದ ಊರು. ಅಲ್ಲಿಂದ ಎಮಸ್ಟರ್‌ಡಾಮ್, ರೋಟರ್‌ಡಾಮ್ ನಗರಗಳಿಗೆ ಹೋಗಲು ಅರ್ಧತಾಸಿನ ವೇಳೆ. ಹೀಗಾಗಿ ನೀವು ನಮ್ಮ ಊರಿನಲ್ಲಿಯೇ ಇದ್ದು, ಆಚೀಚೆ ನಗರಗಳಿಗೆ ಹೋಗಿಬನ್ನಿ" ಎಂದರು. ತಮ್ಮ ಸೋದರಿಯವರನ್ನು ಲೈಡನ್‌ನ ಅವರ ಮನೆಯಲ್ಲಿ ನೋಡಲು ಹೇಳಿದರು. ತಮ್ಮ ಆಪ್ತರಾದ ಡಾ। ಯನ್‌ಬಾಲ ಎಂಬವರ ಮನೆಯಲ್ಲಿರಲು ಅವರೇನೆ ಏರ್ಪಡಿಸಿ, ಅವರಿಗೆ ಮುಂಚಿತವಾಗಿ ಕಾಗದ ಬರೆದರು. ನನಗೆ ಎಲ್ಲಾದರೇನು! ಅವರ ಪ್ರೀತಿಯ ಊರು ನನಗೂ ಪ್ರೀತಿಯದೇ ಆದೀತೆಂದು ಅನಿಸಿತು. ಅಲ್ಲದೆ–ಲೈಡನ್ ವ್ಯಾಪಾರಕ್ಕೆ, ವಿದ್ಯೆಗೆ–ಹಳೆಗಾಲದ ಕೀರ್ತಿಯನ್ನು ಗಳಿಸಿದೆ. ಒಂದು ಕಾಲದಲ್ಲಿ ಲೈಡನ್ ವಿಶ್ವವಿದ್ಯಾನಿಲಯದವರೇ ಡಾಕ್ಟರ್ ಬಾಕೆಯವರನ್ನು ಸಂಶೋಧನೆಗಾಗಿ ನಮ್ಮ ನಾಡಿಗೆ ಕಳಹಿಸಿಕೊಟ್ಟಿದ್ದರು. ಹೀಗಾಗಿ ಹಾಲೆಂಡನ್ನು ನೋಡಲು ನಾನು ಆತುರನಾಗಿದ್ದೆ.

ಹೆಂಬರ್ಗಿನಿಂದ ಎಂಥ ಸವಿಗನಸಿನಿಂದ ಹೊರಟೆನೋ; ದಾರಿಯಲ್ಲಾದೊಂದು ಪ್ರಸಂಗ ಅಷ್ಟೇ – ತಾಪದಾಯಕವೂ ನಿರಾಶಾದಾಯಕವೂ ಆಗಿ ಪರಿಣಮಿಸಿತು. ರಾತ್ರಿ 11 ಘಂಟೆಗೆ ಬರುವೆನೆಂದು ನಾನು ಲೈಡನಿನ ಡಾ। ಯಾನ್‌ಬಾಲರವರಿಗೆ ಆ ಬೆಳಗ್ಗೇನೆ ತಂತಿ ಕೊಟ್ಟು ಹೊರಟಿದ್ದೆ. ಆದರೆ ಅದೇನೆ ಅನುಮಾನಕ್ಕೆ ಗುರಿಯಾಯಿತು. ಜರ್ಮನಿಯ ಅಧಿಕಾರಿಗಳು ನನ್ನ ಪಾಸ್‌ಪೋರ್ಟಿಗೆ ಮೊಹರೊತ್ತುವಾಗ-"ಇಲ್ಲಿನ ಅವಧಿ ಮುಗಿಯಿತು"ಎಂದಿದ್ದರು. ಮುಂದೆ ಬಂಡಿಯನ್ನೇರಿದ ಅಧಿಕಾರಿಗಳು ನನ್ನ 'ವೀಸಾ' ನೋಡಿದರು; ತಮ್ಮೊಳಗೆ ಏನೋ ಗುಸು ಗುಸು ಮಾತನಾಡಿಕೊಂಡರು. ನಾನೇನೋ ಹಾಲೆಂಡಿನೊಳಗೆ ಬಂದಾಯಿತು. ನನ್ನ ವೀಸಾದಂತೆ–ನಾನು ಆ ತಿಂಗಳಿಗೆ ಮುಂಚೆಯೇ ಬರಬೇಕಿತ್ತಂತೆ! "ಈಗ ನೀವು ಮರಳಿ ಹೋಗಬೇಕಾಗುತ್ತದೆ" ಎಂದರು. ಅಂದರೆ ಜರ್ಮನಿಯ ವೀಸಾ ಅವಧಿ ಮುಗಿದಿತ್ತು; 'ಇಲ್ಲಿಗೆ ಬರ

ಕೂಡದು' ಎಂದರ್ಥ. ನಾನು ಜರ್ಮನ್ ಹಾಲೆಂಡ್ ಗಡಿಯಲ್ಲಿ ತ್ರಿಶಂಕು ವಾಗಿ ನಿಂತಿರುವ ಪ್ರಮೇಯ!

ಈ ವೀಸಾಗಳ ಮುದ್ರೆ, ವಿವರಗಳೆಲ್ಲವು, ಹೆಚ್ಚಾಗಿ ಆಯಾಯ ದೇಶ ಭಾಷೆಗಳೊಳಗೆ ಇರುತ್ತವೆ. ಅವನ್ನೆಲ್ಲ ಲಂಡನಿನ ಥಾಮಸ್ ಕುಕ್ ಕಂಪೆ ನಿಯವರಿಗೆ ತೋರಿಸಿ, ಓದಿ ನೋಡಿಸಿ-ಎಲ್ಲಪತ್ರಗಳಲ್ಲೂ ಪ್ರವೇಶದ ಮಿತಿ, ಇರುವ ಕಾಲದ ಮಿತಿ,ತಾರೀಕುಗಳು ಸರಿಯಲ್ಲವೇ ಎಂದು ಕೇಳಿಕೊಂಡಿದ್ದೆ. ಅವರು "ಸರಿಯಾಗಿವೆ"ಎಂದಿದ್ದರು. ಅಲ್ಲೇನೆ ತಿಳಿದಿದ್ದರೆ ಮೇಲಿನ ದೋಷ ತಿದ್ದಿಕೊಳ್ಳಬಹುದಿತ್ತು. ಅಂತು ನನಗವರು "ಮುಂದಿನ ಸ್ಟೇಶನಿನಲ್ಲಿ ಕೆಳಗೆ ಇಳಿದು ಬಿಡಿ" ಎಂದರು. ಆಗ ನನ್ನ ಮನಸ್ಸಿನ ಸ್ಥಿತಿ ವಿಚಿತ್ರವಾಗಿತ್ತು.

ಮುಂದೆ ಅರ್ಧತಾಸಿನ ಬಳಿಕ ಒಂದು ಸ್ಟೇಶನ್ ಬಂದಿತು; ಇಳಿದೆ. ಒಂದು ಮಂಚದಲ್ಲಿ ಹೋಗಿ ಕುಳಿತೆ. ಮಿಲಿಟರಿ ಅಧಿಕಾರಿಗಳು ನನ್ನನ್ನು ಅರಸಿಕೊಂಡು ಬಂದರು. "ಬನ್ನಿ" ಎಂದು ತಮ್ಮ ಕೊಟಡಿಗೆ ಕರೆದೊಯ್ದರು. ಯಾವೊಂದು ಬಗೆಯ ದೌಲತ್ತು, ಅಧಿಕಾರಗಳನ್ನು ಪ್ರದರ್ಶಿಸಲಿಲ್ಲ. ಒಂದು ಕುರ್ಚಿಯನ್ನು ಕೊಟ್ಟು, "ನೋಡಿ ನಮ್ಮ ಮುಖ್ಯ ಕಚೇರಿಗೆ ತಿಳಿಸುತ್ತೇವೆ. ನೀವು ಎಷ್ಟು ದಿವಸ ಹಾಂಲೆಂಡಿನಲ್ಲಿರಲು ಬಯಸುತ್ತೀರಿ?" ಎಂದು ಕೇಳಿ ದರು. "ನಾಲ್ಕು ದಿನ ಮಾತ್ರ. ಅನಂತರ ನಾನು ಬೆಲ್ಜಿಯುಮಿನ ಮೂಲಕ ಫ್ರಾನ್ಸಿಗೆ ಹೋಗುತ್ತೇನೆ"ಎಂದೆ. "ಅಲ್ಲಿಂದ ಅನುಮತಿ ಬಂದರೆ ಒಳಿತು-ಇಲ್ಲ ವಾದರೆನೀವು ಹಿಂದಿರುಗಬೇಕು" ಎಂದರು. ನಾನು ಸುಮ್ಮನಿದ್ದೆ. "ಹೇಗ್" ನಗರದಲ್ಲಿರುವ ತಮ್ಮ ಕಚೇರಿಗೆ ಫೋನ್ ಮಾಡಿ ಸಂಗತಿ ತಿಳಿಸಿದರು. ಒಂದು ತಾಸಿನಲ್ಲಿ ನನ್ನ ವೀಸಾ ದುರಸ್ತಿಪಡಿಸಿ, ನನ್ನ ನಾಲ್ಕು ದಿನಗಳ ಇರುವಿಕೆಗೆ ಅನುಮತಿ ಬಂದಿತು. ಇನ್ನೊಮ್ಮೆ ವೀಸಾವನ್ನು ಕೊಟ್ಟ ಬಗ್ಗೆ ಏಳು ಗಿಲ್ಡರ್ ಮೌಲ್ಯವನ್ನು ತೆತ್ತೆ. 'ಒಮ್ಮೆ ಪಾರಾದೆ' ಎನಿಸಿತು.

ನಾನು ಬಂದ ಬಂಡಿಯಂತು ಹೊರಟುಹೋಗಿತ್ತು. ಇನ್ನು ಆ ರಾತ್ರಿ ಯೆಲ್ಲ ಅಲ್ಲಿಯೇ ಚಳಿಯಲ್ಲಿ ಕಳೆಯಬೇಕಲ್ಲ – ಎಂದು ಯೋಚಿಸುತ್ತಿದ್ದೆ. ಅವರನ್ನು "ನನಗೆ ಲೈಡನ್ ಇಲ್ಲವೆ ಎಮುಸ್ಟರ್‌ಡಾಮಿಗೆ ಹೋಗುವ ಟ್ರೈಲು ಸಿಕ್ಕೀತೇ?" ಎಂದು ಕೇಳಿದೆ. ಒಬ್ಬ ನೌಕರನನ್ನು ನನ್ನ ಜತೆಗೆ ಕೊಟ್ಟು ಕಳು ಹಿಸಿದರು. ಆತ ಈ ಪ್ಲೇಟ್‌ಫಾರ್ಮಿನಲ್ಲಿ ಇನ್ನು ಹತ್ತು ನಿಮಿಷಗಳೊಳಗೆ ಬಂಡಿ ಬರುತ್ತದೆ"ಎಂದು ಹೇಳಿದ. ಬಂಡಿ ಬಂತೇ ಬಂತು. ಹೋಗಿ ಕುಳಿತೆ.

ಬಂಡಿಯ ಹೊರಗಡೆ III ಕ್ಲಾಸು ಎಂದು ಬರೆದಿತ್ತು. ಒಳಗೆ ಹೆಚ್ಚಿನ ಜನರಿದ್ದಿರಲಿಲ್ಲ. ರಾತ್ರಿಯ ಒಂಬತ್ತು ಘಂಟೆಯಾಗಿತ್ತು. ಒಳಗೆ ಹೋಗಿ ಕುಳಿತರೆ 'ಇದು ಮೂರನೆಯ ಕ್ಲಾಸು ಇರಲಾರದು' ಎಂದನಿಸಿತು. ಅಷ್ಟು ಸೊಗಸಾದ ಆಸನಗಳು, ಆಕಾರ, ಶುಚಿಯಾದ ಸ್ಥಳ! ತಿರುಗಿ ಹೊರಕ್ಕೆ ಬಂದು, ಅದು ಮೂರನೆಯ ತರಗತಿಯದೇ ಡಬ್ಬಿ ಎಂದು ಖಾತ್ರಿಮಾಡಿಕೊಂಡು ಕುಳಿತಿರಬೇಕಾಯಿತು. ಅಲ್ಲಿಂದ-ಗಾಜಿನ ಕಿಟಿಕಿಗಳಿಗೆ ಕಣ್ಣಿಟ್ಟು ನೋಡತೊಡಗಿದೆ.

ವೇಗವಾಗಿ ರೈಲು ಬಂಡಿ ಓಡುತ್ತಿತ್ತು. ಆಚೀಚೆ, ದಾರಿಯುದ್ದಕ್ಕೂ ಎಂಬಷ್ಟು ವಿದ್ಯುದ್ದೀಪಗಳ ಸಾಲುಗಳಿದ್ದುವು. ನಗರಗಳು, ವಿಸ್ತರಣಗಳು, ನಗರಗಳು! ಅವೇ ಬೆಳಕಿನ ಮಾಲೆಗಳು ಕೊನೆ ಕೊನೆಗೆ ಹೆಚ್ಚುತ್ತ ಬಂದುವು. ನೆಲದ ಬೆಳಕುಗಳು ನೀರಲ್ಲಿ ಹಬ್ಬಿದಂತೆ ಪ್ರತಿಫಲಿಸತೊಡಗಿದುವು. ಕತ್ತಲಲ್ಲಿ ನಗರಗಳ ಸೊಗಸು, ವಿವರಗಳು ಕಾಣಿಸದಾದರೂ-ಎಲ್ಲೆಲ್ಲಿಯೂ ದೀಪಮಾಲಿಕೆಗಳ ಒನಪು ವಯ್ಯಾರ ಹೇಳಲಾರದ್ದು. ಎಮ್‌ಸ್ಟರ್‌ಡಾಮ್ ಬಂದೇ ಬಂದಿತು. ಕೇಳಿ ಇಳಿದೆ; ಲೈಡನ್ ನಗರವನ್ನು ಸೇರುವ ಬದಲೊಂದು ಗಾಡಿಯಲ್ಲಿ ಹೋಗಿ ಕುಳಿತೆ. ಅರೆತಾಸಿನಲ್ಲಿ ಅದೂ ಹೊರಟಿತು. ಅದರ ತುಂಬ ಜನರಿದ್ದರು. ಹಾರ್ಲೆಮ್,ಲೈಡನ್,ಹೇಗ್,ರೋಟರಡಾಮ್‌ಗಳಿಗೆ ಹೋಗುವ ಜನಗಳವರು. ತಂತಮ್ಮ ಕೆಲಸ, ವಿನೋದಗಳನ್ನು ಮುಗಿಸಿಕೊಂಡು ಮನೆಗೆ ಮರಳುವವರು. ಈ ಅವೇಳೆಯಲ್ಲಿ ರಾತ್ರಿ ನಾನೆಲ್ಲಿಗೆ ಹೋಗಲಿ ಎಂಬ ಚಿಂತೆ ನನ್ನನ್ನು ಕಾಡುತ್ತಿತ್ತು.

ಲೈಡನ್ ನಿಲ್ದಾಣ ಬರುತ್ತಲೇ ಇಳಿದೆ. ನನ್ನ ಪೆಟ್ಟಿಗೆ ಹಿಡಿದುಕೊಂಡು ಹೊರಗೆ ಬಂದೆ. ಟೇಕ್ಸಿಯೊಂದು ಕಾದಿತ್ತು. "ನ್ಯೂಸ್ಟೀಗ್ ಬೀದಿಯಲ್ಲಿರುವ ಡಾ। ಯಾನ್ ಬಾಲರ ಮನೆಗೆ" ಅಂದೆ. ಬಂಡಿ ಹೊರಟು ಅರೆತಾಸಿನಲ್ಲಿ ಅವರ ಮನೆಗೆ ಮುಟ್ಟಿತು. ಆ ಬೀದಿಗೆ ಬೀದಿಯೇ ಮಲಗಿತ್ತು. ಎಲ್ಲಿಯೂ ದೀಪವಿದ್ದಿರಲಿಲ್ಲ....ಮನೆಯವರನ್ನು ಕರೆಯುವ ಘಂಟೆಯನ್ನು ಬಾರಿಸಿದೆ.... ಸದ್ದಿಲ್ಲ....ಕೊನೆಗೊಬ್ಬ ಹುಡುಗನು ಬಂದು ಕದವನ್ನು ತೆರೆದ. 'ಇದು ಯಾನ್‌ಬಾಲರವರ ಮನೆಯೇ?' ಎಂದು ಕೇಳಿದೆ.

'ಅಹುದು, ಅವರು ಮಲಗಿದ್ದಾರೆ'.

'ನಾನು ೧೧ ಘಂಟೆಗೆ ಬರುತ್ತೇನೆಂದು ತಿಳಿಸಿದ್ದೆ. ಕಾರಣಾಂತರದಿಂದ ತಡವಾಯಿತು'.

'ನಿಲ್ಲಿ, ಒಳಗೆ ನಿಮಗಾಗಿ ಸಜ್ಜುಗಿರಿಸಿದ ಕೋಣೆಯಿದೆಯೋ ಎಂದು ನೋಡಿಬರುತ್ತೇನೆ' ಎಂದು ಒಳಕ್ಕೆ ಹೋದ; ತೀವ್ರವೇ ಮರಳಿ ಬಂದು ನನ್ನ ಪೆಟ್ಟಿಗೆಗೆ ಕೈಕೊಟ್ಟು ಅದನ್ನು ಒಯ್ದ. "ಈ ಕೊಟಡಿಯಲ್ಲಿ ಹಾಸುಗೆ ಹಾಕಿರಿಸಿದ್ದಾರೆ. ಪ್ರಾಯಶಃ ಅದು ನಿಮಗಾಗಿ ಇರಬೇಕು" ಎಂದು ಹೇಳಿ ಹೊರಟು ಹೋದ. ನಾನು ಕದವನ್ನಿಕ್ಕಿ ಒಳಗೆ ಬಂದೆ. ಅಂಗಿ ಕಳಚಿದೆ. ನನ್ನ ನಿರೀಕ್ಷೆಯಿಂದ–ಹಾಸುಗೆ, ಟವೆಲು, ಸಾಬೂನು ಪ್ರತಿಯೊಂದನ್ನೂ ಸಿದ್ಧಮಾಡಿಟ್ಟಿದ್ದರು. ಮುಖವನ್ನು ತೊಳೆದುಕೊಂಡು, ನನ್ನ ಉಡುಗೆಯನ್ನು ಬದಲಿಸಿ, ಹೋಗಿ, ಹಾಯೆಂದು ಮಲಗಿಕೊಂಡೆ. ಮನೆಯವರೊಡನೆ ಭೇಟಿ ಮರುದಿನ ಬೆಳಿಗ್ಗೇನೆ.

ಮರುದಿನ ಬೆಳಿಗ್ಗೆ ಮನೆಯೊಡತಿಯ ದರ್ಶನವಾಯಿತು. ಮನೆಯವರಿಗೆ ಇಂಗ್ಲಿಷ್ ಚೆನ್ನಾಗಿ ಬರುತ್ತಿತ್ತು. ಮಿಸೆಸ್ ಯಾನ್‌ಬಾಲರವರು ನನ್ನನ್ನು ಊಟದ ಮನೆಗೆ ಕರೆದೊಯ್ದರು. ಅಲ್ಲಿ ಯಜಮಾನ ಯಾನ್‌ಬಾಲರವರ ಭೇಟಿಯಾಯಿತು. ಅವರ ಸಂಸಾರ ಬಹುಕಾಲದಿಂದಲೂ ಲೈಡನಿನಲ್ಲಿಯೇ ವಾಸವಾಗಿದ್ದುದು. ಡಾ। ಯಾನ್‌ಬಾಲರವರ ಪತ್ನಿ ಮನೆ ನೋಡಿಕೊಂಡಿರುತ್ತಾಳೆ. ಅವರಿಗೆ ಕೆಲವು ಬಾಡಿಗೆಯ ಮನೆಗಳೂ ಇವೆ. ಮನೆಯಲ್ಲೇ ಕೆಲವು ವಿದ್ಯಾರ್ಥಿಗಳು ವಸತಿಮಾಡಿಕೊಂಡಿದ್ದಾರೆ. ಆಕೆಯೂ ಚೆನ್ನಾಗಿ ಓದಿಕೊಂಡವಳು. ಅವರ ಇಬ್ಬರು ಗಂಡು ಮಕ್ಕಳಲ್ಲಿ ಒಬ್ಬ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದಾನೆ; ಮತ್ತೊಬ್ಬನು ಒಂದು ಎಂಜಿನಿಯರಿಂಗ್ ಸಂಸ್ಥೆಯಲ್ಲಿ ಅಭ್ಯಸಿಸುತ್ತಿದ್ದಾನೆ. ಮಗಳೊಬ್ಬಳು ಮದುವೆಯಾಗಿ ಹೋಗಿದ್ದಾಳೆ–ಡಾ। ಬಾಕೆಯವರ ಕುಟುಂಬಕ್ಕೆ. ಈ ಬಾಂಧವ್ಯದಿಂದಾಗಿ ಬಾಕೆಯವರು ನನಗೆ ಅಲ್ಲಿ ವಸತಿಯ ಏರ್ಪಾಟನ್ನು ಮಾಡಿದ್ದರು. ಅದೇನೆ ಮೊದಲ ಬಾರಿ ನಾನು ಒಂದು ಕುಟುಂಬದ ಮನೆಯಲ್ಲಿ ಅತಿಥಿಯಾಗಿ ಹೋಗಿ ವಾಸಿಸಿದ್ದು. ಸಂಪೂರ್ಣ ಊಟ, ವಸತಿಗಳ ಏರ್ಪಾಟು ಅಲ್ಲಿತ್ತು. ನಮ್ಮ ವಿದ್ಯಾರ್ಥಿಗಳನೇಕರು ಹೊರ ದೇಶಗಳಲ್ಲಿ ವಾಸಿಸುವಾಗ ಹೀಗೆ ಅನುಕೂಲತೆಯನ್ನು ಮಾಡಿಕೊಂಡು ವಾಸಿಸುತ್ತಾರೆ. ಈ ರೀತಿಯು ಸುಖಕರವೂ ಅಹುದು; ಆರ್ಥಿಕ, ಸಾಮಾಜಿಕ ದೃಷ್ಟಿಗಳಿಂದಲೂ ತುಂಬ ಅನುಕೂಲವಾದ ಏರ್ಪಾಡು.

ಡಾ। ಯಾನ್‌ಬಾಲರವರು ಬೆಳಗಿನ ಎಂಟು ಘಂಟೆಗೇನೆ ಹೊರಟು ಹೋದರು. ಅನಂತರ ಅವರ ಮಡದಿ ನನ್ನನ್ನು ಕರೆದು, ನನ್ನ ಕಾರ್ಯಕ್ರಮ

ಗಳೇನೇನು, ಎಂದು ಕೇಳಿಕೊಂಡಳು. ಅದರಂತೆ ನಾನು ಭೇಟಿಯಾಗಬೇಕಾಗಿದ್ದ ಸ್ನೇಹಿತರಿಗೆಲ್ಲಾ ಟೆಲಿಫೋನ್ ಮಾಡಿ, ವೇಳೆಯನ್ನು ನಿಶ್ಚಯಿಸಿದಳು. ಅನಂತರದ ಎರಡು ದಿನಗಳಲ್ಲಿ ಹೆಚ್ಚುಕಡಿಮೆ ನನ್ನೊಡನೆಯೇ ಇದ್ದು, ನಗರವನ್ನೂ, ಹತ್ತಿರದ ಒಂದು ಹಳ್ಳಿಯನ್ನೂ ತೋರಿಸಿಕೊಂಡು ಬಂದರು.

ಲೈಡನ್ ಎಂಬುದು ಹಳೆಗಾಲದ ಊರು. ಆ ನಗರದ ಎಲ್ಲೆಲ್ಲೂ ಹರಿಯುವ ಕಾಲುವೆಗಳಿವೆ. ಆ ಕಾಲುವೆಗಳನ್ನು ಸರಕು ಸಾಗಿಸಲು ಇಂದಿಗೂ ಉಪಯೋಗಿಸುತ್ತಾರೆ. ಸಾಮಾನ್ಯ ಜನಗಳ ಓಡಾಟ ಸೈಕಲುಗಳ ಮೇಲೆ. ಊರಲ್ಲಿ ಟ್ರಾಮುಗಳೂ ಇವೆ. ಇದು ಒಂದು ಲಕ್ಷ ಸುಮಾರು ಜನವಸತಿಯುಳ್ಳ ನಗರವಾದರೂ ಕೇವಲ ಹಳ್ಳಿಯೆಂಬಷ್ಟು ಶಾಂತವೂ ಗದ್ದಲವಿಲ್ಲದ ಆವರಣವೂ ಆಗಿದೆ. ನಾವು ಮೊದಲು ಹೋದುದು ಅಲ್ಲಿನ ಬೇಂಕ್ ಒಂದಕ್ಕೆ-ನನಗೆ ಬೇಕಾದಷ್ಟು ಪೌಂಡ್‌ಗಳ ಚೆಕ್ ವಿನಿಮಯಮಾಡಿ ಡಚ್ ಗಿಲ್ಡರನ್ನು ಪಡೆಯಲು. ಅನಂತರ ಅಲ್ಲಿನ ಹಿಂದಿನ ಕಾಲದ ವ್ಯಾಪಾರ ಸಂಘದ ಮಂದಿರಕ್ಕೆ ನಾವು ಹೋದೆವು. ಇದು ಮೂರು ನಾಲ್ಕು ಶತಮಾನಗಳ ಹಿಂದೆ ಕಟ್ಟಿದ ಒಂದು ದೊಡ್ಡದಾದ ಕಟ್ಟಡ. ನೋಟಕ್ಕೆ ಸಾಮಾನ್ಯವಾಗಿತ್ತು. ಅಲ್ಲಿ ಒಂದು ಚಿತ್ರಶಾಲೆಯನ್ನು ಸ್ಥಾಪಿಸಿದ್ದಾರೆ. ಸ್ಥಳಿಕರಿಗೆ ಹೆಮ್ಮೆಗೆ ಕಾರಣನಾದ ಹದಿನೈದನೆಯ ಶತಮಾನದ ಚಿತ್ರಕಾರ ಲೂಕಾಸಿನ ಅನೇಕ ಚಿತ್ರಗಳಲ್ಲಿದ್ದುವು. "ಲೂಕಾಸ್ ಒಫ್ ಲೈಡನ್" ಎಂಬ ಕೀರ್ತಿ ಅವನಿಗೆ. ಅವನ ಚಿತ್ರಶೈಲಿ ಮಧ್ಯಯುಗದ ಶೈಲಿ. ಹಿಂದಿನವರ ಚಿತ್ರಪರಂಪರೆಯನ್ನು ಅನುಸರಿಸುವ ಶೈಲಿಯದು. ಆತ-ಕಿಸ್ತ್ರಜನನ, ಪುರಾಣಗಳ ವಿಷಯದ ಹಲವು ಚಿತ್ರಗಳನ್ನು ಬರೆದಿದ್ದಾನೆ. ಅಂಥ ಚಿತ್ರಗಳಲ್ಲಿ ಒಂದು ದೊಡ್ಡದಾದ ಚಿತ್ರವನ್ನು ಗೆಂಟ್ ನಗರದ ಸೈಟ್ ಬಾಫ್ ಇಗರ್ಜಿಯಲ್ಲಿ ನಾನು ಅನಂತರ ನೋಡಿದೆ. ಹೇಗ್, ಎಮ್‌ಸ್ಟರ್‌ಡಾಮ ನಗರಗಳಲ್ಲೂ ಅವನ ಹಲವಾರು ಚಿತ್ರಗಳಿವೆ.

ಈ ಸ್ಥಳವನ್ನು ನೋಡಿಕೊಂಡು ಅಲೆದಾಟಕ್ಕೆ ಹೋದಾಗ, ನಮ್ಮೊರಲ್ಲಿ "ಇವತ್ತು ದನಕರುಗಳ ಸಂತೆ" ಎಂದರು ಅವರು. ಹಾಲೆಂಡಿನ ದನಗಳನ್ನು ನೋಡುವ ಕುತೂಹಲ ನನಗೆ. "ಹಾಗಾದರೆ ಅಲ್ಲಿಗೆ ಹೋಗೋಣ" ಎಂದೆ. ದೊಡ್ಡದೊಂದು ಆವರಣದಲ್ಲಿ ಹಳ್ಳಿಯ ರೈತರು ವಿಕ್ರಯಿಸಲು ತಂದಂಥ ಸುಮಾರು ಆರೇಳು ನೂರು ದನಗಳು ನೆರೆದಿದ್ದುವು. ಎಲ್ಲವೂ ಫ್ರೀಸಿಯನ್ ಜಾತಿಯ ದನಗಳು. ಅವು ವಿಶ್ವದಲ್ಲೇ ಹಾಲಿಗೆ ಹೆಸರಾದುವು.

ಅವುಗಳ ಮೈಯ್ಯ ಗಾತ್ರ, ಚೆಲುವುಗಳು ಅಷ್ಟು ಸುಂದರವಾಗಿದ್ದು, ಇಳಿದು ತೂಗುವ ಕೆಚ್ಚಲುಗಳು ವಿಸ್ಮಯ ಹುಟ್ಟಿಸುತ್ತಿದ್ದುವು. ಒಬ್ಬ ರೈತನೊಡನೆ ಬೆಲೆ ವಿಚಾರಿಸಿದೆ. ಹಾಲೆಷ್ಟೆಂದು ಕೇಳಿದೆ. ಹಾಲು ದಿನದ ಸರಾಸರಿ 48ರಾತ್ಲುಗಳಷ್ಟು; ಅದರ ಬೆಲೆಯಾದರೂ ಬಹು ಹೆಚ್ಚು ಅನಿಸಲಿಲ್ಲ, 700 ಗಿಲ್ಡರ್. (800ರೂಪಾಯಿಗಳಷ್ಟು). ನಮ್ಮ ದೇಶದಲ್ಲಿ ಸರಾಸರಿ 10ರಾತ್ಲು15ರಾತ್ಲುಗಳಷ್ಟು ಹಾಲು ಕೊಡುವ ಸಿಂಧಿಯ ಹಸುವಿಗೆ ಆ ಬೆಲೆಯಿದೆ. ಎರಡು ವರ್ಷಗಳ ಹಿಂದೆ-ಇಲ್ಲಿನ ಒಂದು ದನವು ಸರಾಸರಿ 125ರಾತ್ಲು ಹಾಲನ್ನು ಕೊಟ್ಟು, ಪ್ರಪಂಚದ ಸ್ಪರ್ಧೆಯಲ್ಲಿಯೇ ಗೆದ್ದು ಬಂದಿತ್ತು. ಆ ದನಗಳನ್ನೆಲ್ಲ ಕಣ್ಣು ತುಂಬ ನೋಡಿದಷ್ಟೂ ಸಾಲದಾಯಿತು. ಅವುಗಳ ಮಗ್ಗುಲಿಗೇನೇ-ರೈತರು ವಿಕ್ರಯಕ್ಕೆ ತಂದ ಆರೆಂಟು ಹಂದಿಯ ಮಂದೆಗಳಿದ್ದುವು. ಇನ್ನೊಂದೆಡೆ ಬಾತುಕೋಳಿಗಳಿದ್ದುವು. ಈ ಹಂದಿಗಳ ಗಾತ್ರವೂ ಅಷ್ಟು ವಿಶೇಷ. ಆಗಲೇ ನಾನು ಮಿಸೆಸ್ ಯಾನ್‌ಬಾಲರೊಡನೆ, ನನಗೆ ಯಾವನಾದರೊಬ್ಬ ಗೋಪಾಲಕನ ಮನೆಗೆ ಹೋಗಬೇಕೆಂದಿದೆ—ಎಂದೆ. ಅವರು 'ಆಗಲಿ' ಎಂದರು. ಅಲ್ಲಿಂದ ನಾನೊಬ್ಬನೇ ಅಲೆದಾಡಿಕೊಂಡು ಹೊರಟೆ; ಒಂಟಿಯಾಗಿಯೇ ಮನೆಗೆ ಮರಳಿದೆ. ಅವರು ತಮ್ಮ ಕೆಲಸಕ್ಕೆ ಹೋದರು.

ಆ ಮಧ್ಯಾಹ್ನ-ಇಲ್ಲಿನ ಪ್ರಸಿದ್ಧ ರಿಕ್ಸ್ ಮ್ಯೂಸಿಯಮ್ ನೋಡಲು ನಿಶ್ಚಯಮಾಡಿಕೊಂಡಿದ್ದೆ. ಲೈಡನ್, ಎಮ್‌ಸ್ಟರ್‌ಡಾಮ್, ಹೇಗ್ ಈ ಮೂರು ನಗರಗಳೊಳಗಿನ ದೂರವು ಬರಿಯ ಇಪ್ಪತ್ತು ಮೂವತ್ತು ಮೈಲುಗಳಾದರೂ,ಒಂದೊಂದು ಊರಿನಲ್ಲೇ ಒಂದೊಂದು ಮ್ಯೂಸಿಯಮ್ ಸ್ಥಾಪಿಸಿದ್ದಾರೆ.ಇಲ್ಲಿನ ರಿಕ್ಸ್‌ಮ್ಯೂಸಿಯಂ-ಸಂಸ್ಕೃತಿಗೆ ಸಂಬಂಧಿಸಿದ ವಸ್ತುಸಂಗ್ರಹಾಲಯ. ಅದರೊಳಗಿನ ಸಂಗ್ರಹ-ಭಾರತ, ಚೀನಾ, ಜಪಾನು, ವಿಶೇಷತಃ ಜಾವಾ, ಬಾಲಿ, ಸುಮಾತ್ರಾ ದ್ವೀಪಗಳಿಗೆ ಅನ್ವಯಿಸುವಂತಹದು. ಹಾಲೆಂಡಿನ ವಸಾಹತುಗಳಲ್ಲೊಂದಾದ ದಕ್ಷಿಣ ಅಮೇರಿಕದ ಸುರಿನಾಮ್ ಭಾಗವನ್ನೂ ಅದು ಚಿತ್ರಿಸುತ್ತದೆ.

ಭಾರತದಿಂದಲೇ ಪೂರ್ವದೇಶಗಳಿಗೆ ಪಸರಿಸಿದ ಸಂಸ್ಕೃತಿ-ಇಂಡೋನೇಸ್ಯಾದ್ದು. ಇಂದಿಗೆ ೧೨೦೦ ವರ್ಷಗಳ ಹಿಂದೆಯೆ, ನಮ್ಮ ಜನರು ಬಾಲಿ, ಜಾವಾ ದ್ವೀಪಗಳಿಗೆ ಹೋಗಿ-ನಮ್ಮ ದೇಶದ ಬ್ರಾಹ್ಮಣ, ಬೌದ್ಧ ಧರ್ಮಗಳನ್ನು ಪ್ರಚಾರಗೊಳಿಸಿದರು-ಎಂಬುದನ್ನು ಕೇಳಿದ್ದೇವೆ. ಈ ಸಾಂಸ್ಕೃತಿಕ

ದಿಗ್ವಿಜಯದ ಪರಿಣಾಮವೆಂಥದು ಎಂಬುದನ್ನು ಕಾಣುವುದಕ್ಕೆ ಇಲ್ಲಿಗೋ, ಅಥವಾ ಎಮ್‌ಸ್ಟರ್‌ಡಾಮು ನಗರಕ್ಕೋ ಹೋಗಿಯೇ ನೋಡಬೇಕು. ಅಲ್ಲಿ ನಮ್ಮ ಬುದ್ಧ ಜಾತಕ, ಹಿಂದೂ ಪುರಾಣಗಳಿಗೆ ಸಂಬಂಧಿಸಿದಂಥ ದೇವತೆಗಳ ಅನೇಕ ಪ್ರತಿಮೆಗಳಿವೆ. ಅವುಗಳಲ್ಲಿ ಒಂದು ಅತಿ ಭವ್ಯವಾದ ವೀರಭದ್ರನ ಪ್ರತಿಮೆಯನ್ನು ಕಂಡೆ. ಗಣೇಶ, ಬ್ರಹ್ಮ, ದುರ್ಗಾ, ಮಹಾಕಾಲ, ಭೈರವ, ಭಾರತ ಗುರು ಮೊದಲಾದ ಶಿಲ್ಪ ಕೃತಿಗಳು ಶೈಲಿಯಲ್ಲಿ ಇನ್ನೂ ಭಾರತೀಯ ವಾಗಿಯೇ ಉಳಿದಿವೆ. ಮರದ ಕೆತ್ತನೆಗಳಲ್ಲಿ ಮಾತ್ರ ಶಿಲ್ಪಶೈಲಿ ಬದಲಿಸುತ್ತದೆ. ಮರದಿಂದ ಕೆತ್ತಿದ ಅನೇಕ ಚೆಲುವಿನ ಬಣ್ಣದ ಗೊಂಬೆಗಳಲ್ಲಿ-ಗರುಡವಾಹನ ವಿಷ್ಣು,ಆಂಜನೇಯ, ಭೀಮ,ರಾವಣರಿದ್ದಾರೆ...ಈ ಗೊಂಬೆಗಳ ಚಿತ್ರಶೈಲಿ, ಕೆತ್ತನೆಗಳು, ಕಲ್ಪನೆ ಊಹೆಗಳಿಂದ ಉಂಟಾದ ದೇವಲೋಕವನ್ನು ಅತಿ ಸುಂದರವಾಗಿ ಚಿತ್ರಿಸುತ್ತವೆ. ಇಲ್ಲಿನ ಸಂಗ್ರಹ ಬಹು ದೊಡ್ಡದಾಗಿದೆ.

ಹಾಗೆಯೇ ಚೀನ, ಜಪಾನು ದೇಶಗಳ–ಅರಿವೆಗಳು, ಆಯುಧಗಳು, ಅಲಂಕಾರದ ಒಡವೆಗಳು ನೂರಾರಿವೆ. ಬೌದ್ಧಧರ್ಮ ಪಸರಿಸಿ ಅಲ್ಲಿನ ಜನ ಗಳ ಸ್ಫೂರ್ತಿಯನ್ನು ಕೆರಳಿಸಿ ಉಂಟಾದ ಸುಂದರವಾದ ಬುದ್ಧನ ಪ್ರತಿಮೆ ಗಳಿವೆ. ಒಂದು ಹಿರಿಯ ಕೋಣೆಯನ್ನು ಬುದ್ಧನ ಐದು ಕಂಚಿನ ಪ್ರತಿಮೆಗಳಿ ಗಾಗಿ ಕಾದಿರಿಸಿದ್ದಾರೆ. ಆ ಕೊಟಡಿಯ ನಾಲ್ಕು ಸುತ್ತಲೂ ಕಂದು ಬಣ್ಣದ ಅರಿವೆಗಳ ಜಾಲರಿಗಳನ್ನು ತೂಗಿದ್ದಾರೆ. ಎದುರಿಗೂ ಹಾಗೆಯೇ ಮಾಡಿ, ಒಂದು ಹಿರಿಯ ಕಂಡಿಯನ್ನಷ್ಟೆ ಉಳಿಸಿದ್ದಾರೆ. ಅದರ ಮುಂದೆ–ಐದು ದೊಡ್ಡ ಬುದ್ಧ ವಿಗ್ರಹಗಳನ್ನು ಕುಳ್ಳಿರಿಸಿ,ದೇವಾಲಯಗಳಲ್ಲಿ ಬೆಳಗುವ ಕ್ಷೀಣ ದೀಪಗಳ ಬೆಳಕಿನಂತೆ, ಕ್ಷೀಣ ಬೆಳಕನ್ನು ಚೆಲ್ಲಿದ್ದಾರೆ. ಎದುರಿಗೆ ಕುಳಿತು ನೋಡುವವನ ಸಲುವಾಗಿ ಸುಖಾಸನವಿದೆ. ಒಬ್ಬನೇ ಹೋಗಿ ಕುಳಿತೆ; ಎವೆ ಯಿಕ್ಕದೆ ಧ್ಯಾನಿ ಬುದ್ಧರೈವರನ್ನೂ ನೋಡಿದೆ. ದೇವಮಂದಿರಗಳಲ್ಲೂ ಕಾಣ ಸಿಗದಂಥ ಶಾಂತಿ,ರಮಣೀಯತೆಗಳು ಅಲ್ಲಿ ನೆಲಸಿದ್ದವು! ಈ ವಿಗ್ರಹಗಳನ್ನು ಬರಿಯ ಪ್ರತಿಮೆಗಳನ್ನಾಗಿ ಅವರು ತೋರಿಸಬಹುದಿತ್ತು. ಬದಲು 'ಬುದ್ಧ'ನ ಮಹಿಮೆಯೇನೆಂದು ತೋರಿಸಲು ಅಲ್ಲಿ ಪ್ರಯತ್ನಿಸಿದ್ದಾರೆ. ಇದನ್ನು ಮಾಡಿದ ಮ್ಯೂಸಿಯಮ್ ಡಿರೆಕ್ಟರನ ಸಾಂಸ್ಕೃತಿಕ ಅರಿವು ವಿಶೇಷವೆನಿಸುತ್ತದೆ.

ಸುಮಾತ್ರಾ ದೇಶದ ಅರಿವೆಗಳು, ಒಡವೆಗಳು ಅಲ್ಲಿವೆ. ಅದರಂತೆ ಇನ್ನೂ ಆದಿವಾಸಿಗಳಾಗಿ ಉಳಿದಿರುವ ಕೆಲವೊಂದು ಮಾನವ ಬಳಗದವರ

ತದ್ರೂಪ ಆಕಾರಗಳನ್ನೂ ಆವರಣಗಳನ್ನೂ ಚಿತ್ರಿಸಿದ್ದಾರೆ.

ಒಂದು ಕಡೆ–ಜಾವಾ ದೇಶದಲ್ಲಿ ಪ್ರಚಾರದಲ್ಲಿರುವ ವಿವಿಧ ನಾಟಕ, ನೃತ್ಯಗಳಲ್ಲಿ ಬಳಸುವಂಥ ಮನೋಹರವಾದ ಉಡುಗೆಗಳು, ಆಭರಣಗಳು, ವಾದನಗಳು, ಛಾಯಾ ಗೊಂಬೆಗಳು ಪ್ರದರ್ಶನಕ್ಕಿವೆ.

ಒಂದು ಸಣ್ಣ ವಿಭಾಗದಲ್ಲಿ–ಆಧುನಿಕ ಇಂಡೋನೇಸ್ಯಾದ ಕೆತ್ತನೆಯ ಕೆಲಸಗಳನ್ನು ಪ್ರತ್ಯೇಕವಾಗಿ ತೋರಿಸಿದ್ದಾರೆ. ದಂತ, ಗಂಧ ಮೊದಲಾದ ಕೆಲಸಗಳಲ್ಲಿ ಅವರು ತುಂಬ ಮುಂದುವರಿದವರು. ಅವರ ಶಿಲ್ಪ, ಅಲಂಕಾರ ಗಳಲ್ಲಿ ಕಂಡು ಬರುವ ರೇಖೆಗಳ ಲಾವಣ್ಯವೇ ಒಂದು ತೆರ. ಅಲ್ಲಿನ ಆಧುನಿ ಕರಲ್ಲಿ ಕೆಲವರು ಈ ಶೈಲಿಯನ್ನು ಕುರುಡಾಗಿ ಅನುಸರಿಸದೆಯೆ, ಕಾಲಕ್ಕೆ ತಕ್ಕಂತೆ ಬೆಳೆಯಿಸಿಕೊಂಡು ಬಂದಿದ್ದಾರೆ.

ಈ ಮಂದಿರಕ್ಕೆ ನಾನು ಎರಡು ಬಾರಿ ಹೋಗಿದ್ದೆ, ಅಲ್ಲಿನ ಕೆಲವು ವಿಗ್ರ ಹಗಳ ಚಿತ್ರ ಸಂಗ್ರಹಿಸುವ ಕುತೂಹಲ ನನಗೆ. ಇಲ್ಲಿ ಮೊನ್ನೆಯ ತನಕ ಕೆಲಸ ಮಾಡಿಕೊಂಡಿದ್ದ ಡಾಕ್ಟರ್ ಫರ್ವೆಯವರನ್ನು ನಾನು ಭೇಟಿಯಾಗಬೇಕೆಂದು ನನ್ನ ಕಲಾವಿದ ಮಿತ್ರರಾದ ಹೆಬ್ಬಾರರವರು ತಿಳಿಸಿದ್ದರು. ಅದೇ ಸಂಜೆ ಅವರು ಡಾ। ಯಾನ್ ಬಾಲರವರ ಮನೆಗೇನೆ ಬಂದರು. ಅವರು ಸ್ವದೇಶವನ್ನು ಬಿಟ್ಟು 'ಸುರಿನಾಮು'ಕ್ಕೆ ಸಂಶೋಧನೆಗೆ ಹೊರಡುವ ಗಡಿಬಿಡಿಯಲ್ಲಿದ್ದರು; ಆದರೂ ಬಂದು ತುಸು ಹೊತ್ತು ಮಾತನಾಡಿ ಹೋದರು. ನಮ್ಮ ನಾಡಿನ ಜಾನಪದ ಕಲೆ ಗಳ ಪರಿಚಯಮಾಡಿಕೊಳ್ಳುವ ಆತುರ ಅವರಿಗೆ. ಇನ್ನೊಮ್ಮೆ ಅದಕ್ಕಾಗಿ ಸಮಯ ಗೊತ್ತುಮಾಡಿದರು; ಬರುವುದಾಗಲಿಲ್ಲ. ಅನಂತರ ತನಗೆ ಬೇಕಾದ ಅನೇಕ ಸಂಗತಿಗಳನ್ನು ಕುರಿತು ದೀರ್ಘವಾದೊಂದು ಕಾಗದ ಬರೆದಿದ್ದಾರೆ.

ಎರಡನೆಯ ದಿನ, ನಾನು ಹಾಲೆಂಡಿನ ರಾಜಧಾನಿಯಾದ ಎಮ್‌ಸ್ಟರ್ ಡಾಮನ್ನು ಸಂದರ್ಶಿಸಿಕೊಂಡು ಬರಲು ಹೋದೆ. ಲೈಡನ್ ನಗರದಿಂದ ಬರಿಯ ಹದಿನೈದು ಮೈಲು ದೂರ ಅಲ್ಲಿಗೆ. ರೈಲು ದಾರಿಯ ಆಚೀಚಿನ ಮಗ್ಗುಲುಗಳಲ್ಲಿ ಸಮತಟ್ಟಾದ ಹಸುರು ಹೊಲಗಳು ಕಾಣಿಸುತ್ತಿದ್ದುವು. ಅಲ್ಲಲ್ಲಿ, ಅವುಗಳ ಎಡೆಯಲ್ಲಿ, ವಿಶಾಲವಾದ ಹೊಲಗಳಲ್ಲಿ ಒಂದೊಂದೇ ಜಾತಿಯ ಹೂ ಗಿಡಗಳನ್ನು ನಟ್ಟಿದ್ದರು. ನಾನು ಹೋದಾಗ ಹೂವುಗಳ ಸುಗ್ಗಿ ಮುಗಿದಿದ್ದರೂ ಅಳಿದುಳಿದ ಹೂವುಗಳ ಸಾಲುಗಳು ತುಂಬ ಮನೋಹರ ವಾಗಿಯೆ ಕಾಣಿಸುತ್ತಿದ್ದುವು. ವಸಂತ ಋತುವಿನಲ್ಲಿ ಬಂದಿದ್ದರೆ, ಈ ಹೊಲ

ಗಳಲ್ಲಿ, ಹರದಾರಿ ಹರದಾರಿ ದೂರದ ತನಕ ಟ್ಯೂಲಿಪ್ ಹೂಗಳ ರತ್ನಗಂಬಳಿ ಹಾಸಿರುತ್ತದಂತೆ; ನಾನು ಹೋದುದು ಜೂನ್ ತಿಂಗಳ ಆರಂಭದಲ್ಲಿ. ಈ ಸುಗ್ಗಿಯ ಅವಶಿಷ್ಟವಷ್ಟೇ ನನಗೆ. ಬಂಡಿಯಲ್ಲಿ ಕುಳಿತ ಮೂವತ್ತು ನಿಮಿಷಗಳಲ್ಲಿ, ಕೆಲವೊಂದು ಕಾಲುವೆಗಳನ್ನು ಹಾದು, ಸುಂದರ ಮನೆ, ಮಠಗಳಿಂದ ಕೂಡಿದ ಎಮ್‌ಸ್ಟರ್‌ಡಾಮ್ ಬಂದೇ ಬಂದಿತು. ರೈಲ್ವೆಯಿಂದ ಇಳಿದವನೇ ಹೊರಕ್ಕೆ ಬಂದೆ. ಅಲ್ಲಿ ಮನೋಹರವಾದ ಕಾಲುವೆಯೊಂದಿತ್ತು. ಆಚೀಚೆ ಹಿರಿದಾದ ಕಟ್ಟಡಗಳಿದ್ದುವು.ರೈಲ್ವೆ ನಿಲ್ದಾಣದ ವಾಸ್ತುವೂ ವಿಶೇಷವಾಗಿತ್ತು. ಅವನ್ನೆಲ್ಲ ವಿರಾಮವಾಗಿ ನೋಡೋಣವೆಂದು ಯೋಚಿಸಿ, ಟ್ರಾಮ್ ಬಂಡಿಯಲ್ಲಿ ಕುಳಿತೆ. ಹೋಗಿ ಇಳಿದುದು ಅಲ್ಲಿನ ಪ್ರಸಿದ್ಧ "ಟ್ರೊಪೆನ್" ಮ್ಯೂಸಿಯಮಿನ ಇದಿರಿಗೆ. ಈ ಸಂಗ್ರಹಾಲಯವು ಭೂಮಧ್ಯ ರೇಖೆಯ ಪ್ರಾಂತ್ಯಗಳ (Tropics) ಸಂಸ್ಕೃತಿಗೆ ಮೀಸಲಾದುದು. ಅಲ್ಲಿನ ಡಿರೆಕ್ಟರ ಡಾ। ಕುನ್ಸ್ಟ್ ಎಂಬವರಿಗೆ ಮಿತ್ರರಾದ ಬಾಕೆಯವರು ಪತ್ರ ಕೊಟ್ಟಿದ್ದರು. ಅವರು ವಯಸ್ಸಾದವರು; ಜಾವಾ ಸಂಸ್ಕೃತಿಯ ವಿಚಾರದಲ್ಲಿ ತುಂಬ ಸಂಶೋಧನೆಯನ್ನು ನಡೆಸಿದವರು.ಆಗಷ್ಟೆ ಜಾವಾದಿಂದ ಬಂದ ಒಂದು ಕಲಾಮಂಡಳದೊಡನೆ ಯಾವುದೋ ಒಂದು ಚರ್ಚೆಯನ್ನಿಟ್ಟುಕೊಂಡು ವೇಳೆ ಕಾಯುತ್ತಿದ್ದರು. ನನ್ನನ್ನು ಸ್ವಾಗತಿಸಿದರು.ತನಗೆ ವಿರಾಮವಿಲ್ಲದ ನಿಮಿತ್ತ ತಮ್ಮ ಸಹಾಯಕರೊಬ್ಬರನ್ನು ನನ್ನ ಜತೆಗೆ ಕೊಟ್ಟರು. ಅವರೂ ಪೌರ್ವಾತ್ಯ ಸಂಸ್ಕೃತಿಯ ವಿದ್ವಾಂಸರು. ಅವರು ನನ್ನನ್ನು ಕರೆದುಕೊಂಡು ಸುಮಾರು ಎರಡು ತಾಸು ಅವಧಿಯ ತನಕ ಸಂಗ್ರಹಾಲಯದ ಸುತ್ತ ಅಲೆದಾಡಿದರು. ಜಾವಾದ ಬತಿಕ್ ವಸ್ತ್ರಗಳ ವಿಭಾಗಕ್ಕೆ ನನ್ನನ್ನು ಕೊಂಡೊಯ್ದರು. ವಸ್ತ್ರವನ್ನು ಬಣ್ಣ, ಮಯಣಗಳ ಸಹಾಯದಿಂದ ಚಿತ್ರ ವಿಚಿತ್ರವಾಗಿ ಅಲಂಕರಿಸುವ ಬಗೆ ಆ ದೇಶದಕ್ಕೇನೆ ವಿಶೇಷವಾದುದು. ಇಂಡೋನೇಸ್ಯದ ನೂರಾರು ಬಗೆಯ ವಸ್ತ್ರಾಲಂಕಾರಗಳನ್ನು ಅಲ್ಲಿ ಸಂಗ್ರಹಿಸಿರಿಸಿದ್ದಾರೆ. ಅವುಗಳ ಮಗ್ಗುಲಲ್ಲೇ ಸುಮಾತ್ರಾ ದ್ವೀಪದಲ್ಲಿ ಇಂದಿಗೂ ಆದಿವಾಸಿಗಳಾಗಿ ವಾಸಿಸುತ್ತಿರುವ ಜನರ ಬತಿಕ್ ಕೆಲಸದ ಮಾದರಿಗಳಿದ್ದುವು.ಆ ಚಿತ್ರಕೆಲಸ,ಅದಕ್ಕುಪಯೋಗಿಸುವ ನೇರಳೆಕಪ್ಪು ಬಣ್ಣಗಳು, ನಮ್ಮ ದೇಶದ ಕಾಥಿಯಾವಾಡದ "ಕಚ್ಛಿ"ಜನಗಳ ವಸ್ತ್ರದ ಅಲಂಕಾರವನ್ನು ಹೋಲುತ್ತಿರುವುದನ್ನು ಕಂಡೆ. ಆ ಅನುಮಾನವನ್ನು ಜತೆಯಲ್ಲಿರುವ ಡಾ। ಲೆಂಗ್ವಿಸ್‌ರವರಿಗೆ ಹೇಳಿದಾಗ, ಅವರು ಅದನ್ನು ಸಮರ್ಥಿಸಿದರು. ಭಾರತದ

ಅನಾದಿಕಾಲದ ವ್ಯಾಪಾರ ಮಾತ್ರವಲ್ಲ, ಧರ್ಮ ಮಾತ್ರವಲ್ಲ, ಕಸುಬುಗಾರಿಕೆ ಸಹ ಈ ದೂರ ಪ್ರಾಚ್ಯಕ್ಕೆ ಪ್ರವಹಿಸಿದ ಬಗೆಯು ನನ್ನನ್ನು ವಿಸ್ಮಯಗೊಳಿಸಿತು.

ಲೈಡನ್‌ನಲ್ಲಿ ನಾನು ಕಂಡ ವಸ್ತುಸಂಗ್ರಹದ ವಿಸ್ತಾರವಾದ ವಿಶೇಷ ಆವೃತ್ತಿಯು ಇಲ್ಲಿಯೂ ಇದೆ. ಜಾವಾನಿಯರ ಉಡುಗೆ ತೊಡುಗೆ, ಗೀತವಾದ್ಯ ಗಳು, ಲೋಕಪಾಲ, ಪ್ರಜ್ಞಾಪಾರಮಿತ, ವೀರಭದ್ರ ಮೊದಲಾದ ವಿಗ್ರಹ ಗಳು–ಇಲ್ಲೂ ಇದ್ದವು. ಜಾವಾ ದೇಶದ ಸಂಸ್ಕೃತಿಯು–ಒಂದು ಕಡೆಯಿಂದ ಭಾರತದ ವರ್ಚಸ್ಸಿಗೂ, ಇನ್ನೊಂದು ಕಡೆಯಿಂದ ಚೀನದ ಪ್ರಭಾವಕ್ಕೂ ಹೇಗೆ ಒಳಗಾಯಿತು–ಎಂಬುದನ್ನು ನಾವು ಇಲ್ಲಿ ಕಾಣಬಹುದಾಗಿದೆ. ಮತ ಧರ್ಮಗಳ ದೃಷ್ಟಿಯಿಂದ, ಕಲೆ ಕಸಬುಗಾರಿಕೆಗಳ ದೃಷ್ಟಿಯಿಂದ ಜಾವಾ, ಬಾಲಿ ದ್ವೀಪಗಳು ಎಷ್ಟೊಂದು ಮುಂದುವರಿದಿವೆಯೋ ಅಷ್ಟೇ ಹಿಂದುಳಿದ ಜನವರ್ಗವನ್ನೂ ಅಲ್ಲಿ ಕಾಣಬಹುದು. ಸುಮಾತ್ರಾ, ಸೆಲೆಬಿಸ್, ಬೋರ್ನಿ ಯೋಗಳ ಡಯಾಕ್ ಮೊದಲಾದ ಆದಿವಾಸಿಗಳ ಕುಲ, ಸಂಸ್ಕೃತಿ ಮೊದಲಾ ದುವನ್ನು ಇಲ್ಲಿ ಬಹು ಚೆನ್ನಾಗಿ ಚಿತ್ರಿಸಿದ್ದಾರೆ. ಡಾ। ಕುನ್ಸ್ಟ್ ಮೊದಲಾ ದವರು ಈ ಪ್ರಾಂತಗಳ ಜಾನಪದ ಕಲೆ, ಆದಿವಾಸಿ ಮತ, ಧರ್ಮ ಮೊದಲಾ ದವಕ್ಕೆ ಸಂಬಂಧಿಸಿದ ವಸ್ತುಗಳ ಸಂಗ್ರಹಮಾಡಿದ್ದಾರೆ. ಒಂದು ಕಾಲದಲ್ಲಿ ಭಾರತ ಸಂಸ್ಕೃತಿಯ ವರ್ಚಸ್ಸು, ವ್ಯಾಪಾರದ ಸುಲಿಗೆ ಇಲ್ಲದೆಯೆ ಸಾಮ್ರಾಜ್ಯ ವಿಸ್ತಾರದ ಬಯಕೆ ಇಲ್ಲದೆಯೆ, ಎಷ್ಟು ಪ್ರಭಾವಶಾಲಿಯಾಗಿ ಮೆರೆಯಿತು– ಎಂಬುದನ್ನು ನಾವಿಲ್ಲಿ ಕಾಣಬಹುದಾಗಿದೆ. ಈ ಮ್ಯೂಸಿಯುಮಿನಲ್ಲಿ ಆಗಾಗ ಜಾವಾ, ಬಾಲಿ ದ್ವೀಪಗಳ ನೃತ್ಯ, ಗೀತ, ನಾಟಕ ಮೊದಲಾದುವುಗಳ ಪ್ರದರ್ಶನ ವನ್ನು ಮಾಡಿ ಪ್ರೋತ್ಸಾಹಿಸುತ್ತಿದ್ದಾರೆ. ಹಾಲೆಂಡಿನ ಜನಗಳಿಗೆ ಇಂಡೋನೇ ಸ್ಯದೊಡನೆ ಉಂಟಾದ ನಿಕಟ ಸಂಬಂಧದ ದೆಸೆಯಿಂದ ಅವರು ಪೌರ್ವಾತ್ಯ ಕಲೆಗಳನ್ನು ಮೆಚ್ಚುವುದಕ್ಕೆ ಕಲಿತಿದ್ದಾರೆ. ಎಷ್ಟೋ ಜನರು ಅಲ್ಲಿನವರನ್ನು ಮದುವೆಯಾಗಿದ್ದಾರೆ; ವರ್ಣದ್ವೇಷದ ಸುಳಿವು ಈ ನಾಡಿನಲ್ಲಿ ಕಾಣುವುದಿಲ್ಲ.

ಡಾ। ಲೆಂಗ್ವಿಸ್‌ರವರನ್ನು ಬೀಳ್ಕೊಟ್ಟು, ನಾನು ಸಮೀಪದ ರಿಕ್ ಮ್ಯೂಸಿಯುಮಿಗೆ ಹೊರಟು ಬಂದೆ. ಇದೊಂದು ಪ್ರಸಿದ್ಧವಾದ ಚಿತ್ರಶಾಲೆ. ಹಾಲೆಂಡಿನ ಕಲಾವಿದರ ಚಿತ್ರಸಂಪತ್ತನ್ನು ಕಾಣುವುದಕ್ಕೆ ಇಲ್ಲಿಗೋ ಹೇಗ್ ನಗರದ ಚಿತ್ರಶಾಲೆಗೋ ನಾವು ಹೋಗಬೇಕು. ರೆಂಬ್ರಾಂಡ್ ವಾನ್ ಜಿನ್, ವರ್ಮೀರ್, ಫ್ರಾನ್ಸ್ ಹಾಲ್ಸ್ ಇವರ ಅನೇಕ ಮೂಲಕೃತಿಗಳು ಇಲ್ಲಿವೆ. ಬಹು

ದೊಡ್ಡದಾದ ಚಿತ್ರಮಂದಿರವಿದು. ಮೊದಲ ಮಹಡಿಯನ್ನೇರುತ್ತಲೇ ನಮ್ಮ ಕಣ್ಣಿಗೆ ನಾಲ್ಕೆಂಟುಸ್ಟೈಂಡ್‌ಗ್ಲಾಸ್ ಕಿಟಿಕಿಗಳು ಕಾಣಿಸುತ್ತವೆ.ಮೇರಿ ಮತ್ತು ಇತರ ಸಂತರ ಬಹು ಸುಂದರವಾದ ಬಣ್ಣದ ಗಾಜಿನ ಚಿತ್ರಗಳನ್ನು ಅಲ್ಲಿ ಕಾಣ ಬಹುದು. ಹಾಗೆಯೇ ಎಡಬಲಕ್ಕೆ ತಿರುಗಿದರೆ, ಬಹು ವಿಶಾಲವಾದ, ನೀಳ ವಾದ ಕೊಟಡಿಗಳು ಬರುತ್ತವೆ. ಅವುಗಳ ಗೋಡೆಗಳ ಮೇಲೆ ತೂಗಿದ ಬೃಹ ದಾಕೃತಿಯ ಚಿತ್ರಗಳನೇಕ ಕಾಣುತ್ತವೆ. ಗೋಡೆಗಳಿಗೆ ಮುಸುಕು ಬಣ್ಣದ ತೆರೆ ಗಳನ್ನು ಮುಚ್ಚಿ, ಒಂದೊಂದು ಚಿತ್ರವನ್ನೇ ನೋಡುವುದಕ್ಕೆ ಆವರಣವನ್ನು ಕಲ್ಪಿಸಿದ್ದಾರೆ. ರೆಂಬ್ರಾಂಡ್‌ನ ಹಲವು ಕೃತಿಗಳಿವೆ. ಅವನ ಮಗ ಟೈಟಸ್‌ನ ಚಿತ್ರ, ಮಡದಿಯ ಚಿತ್ರ, ಕೆಲವು ಯಹೂದ್ಯರ ಚಿತ್ರ ಇಂಥವೆಲ್ಲ ಇವೆ. ಜೆರು ಸಲೇಮ್ ನಷ್ಟಗೊಂಡಾಗ ಅದರ ಪತನವನ್ನು ಕುರಿತು ಶೋಕಿಸುವ ವೃದ್ಧ ಜೆರೇಮಿಯನ ಒಂದು ಭವ್ಯ ತೈಲ ಚಿತ್ರವಿದೆ. ನೆಲ್ಲಿನ ಬಣ್ಣ, ಕಂದು ಬಣ್ಣ ಮೊದಲಾದ ವಿವಿಧ ಶಾಂತ, ಉಷ್ಣವರ್ಣಗಳ ವಿಚಿತ್ರವಾದ ಒಂದು ಹವೆ ಅವನ ಚಿತ್ರಗಳಲ್ಲಿ ಕಾಣುತ್ತದೆ. ಚಿತ್ರಗತ ವ್ಯಕ್ತಿಗಳ ಆತ್ಮಗಳೇ ಅವರವರ ಮುಖಗಳಲ್ಲಿ ಹೊಮ್ಮುವಂತಿವೆ. ಮಾನವನ ಅಂತರಂಗದಲ್ಲಿ ಹುದುಗಿದ ಸ್ವಭಾವವನ್ನು ಅವನಿಗೆ ತಿಳಿಯದಂತೆ ಕಿತ್ತು ತೆಗೆದು ತೋರಿಸುವ ಅದ್ಭುತ ಶಕ್ತಿ ರೆಂಬ್ರಾಂಡನದು.

ವರ್ಮೀರನ ಕೆಲವೇ ಚಿತ್ರಗಳು ಇಲ್ಲಿವೆ. ವರ್ಮೀರ್ ಸಂಸಾರದಲ್ಲಿ ನಲಿದಾಡುವ ಜನ ಸಾಮಾನ್ಯರ ಚಿತ್ರ ಬರೆದವ. ಬಡವರ ಮನೆಯ ಒಂದು ಹೆಂಗಸನ್ನೊ, ಕೆಲಸದವಳನ್ನೊ ಚಿತ್ರಿಸಿದವ. ಸಣ್ಣ ಎಲ್ಲವೂ ಚಿತ್ರಗಳು. ಪ್ರಪಂಚದಲ್ಲೇ ಇವತ್ತು ನಾಲ್ವತ್ತಕ್ಕೆ ಮೇಲ್ಪಟ್ಟು ಅವನ ಚಿತ್ರಗಳು ಸಿಗ ಲಾರವಂತೆ. ಆದರೆ ಒಂದೊಂದು ಚಿತ್ರಕ್ಕೂ ಲಕ್ಷಗಟ್ಟಲೆ ರೂಪಾಯಿಗಳನ್ನು ತೆರಬೇಕು. ಹೂಜಿಯಿಂದ ಹಾಲು ಸುರಿಯುವ ಒಬ್ಬಾಕೆಯ ಸಣ್ಣ ಚಿತ್ರ ವೊಂದನ್ನು ಈ ಮ್ಯೂಸಿಯಮಿನವರು ಸುಮಾರು ಹತ್ತು ಲಕ್ಷ ರೂಪಾಯಿ ಗಳಷ್ಟು ಬೆಲೆ ಕೊಟ್ಟು ಕೊಂಡಿದ್ದಾರೆ. ವರ್ಮೀರನು ಬಳಸಿದ ನೀಲವರ್ಣದ ವೈಖರಿಯನ್ನು ಇನ್ನೂ ಮೀರಿಸಿದವರಿಲ್ಲ ಎನ್ನುತ್ತಾರೆ. ಅಂಥ ವರ್ಮೀರ್ ಬದುಕಿದ್ದಾಗ ಹೆಸರಿಲ್ಲದೆಯೆ ಸತ್ತ. ಒಂದೆರಡು ಶತಮಾನಗಳ ತನಕ ಅವನು ಕೊಲೆಗಡುಕನೆಂಬ ಸುಳ್ಳು ಆಪಾದನೆಗೆ ಗುರಿಯಾಗಿ, ಇತಿಹಾಸದ ಅಪಮಾನ ವನ್ನೂ ತಾಳಿದ. ಅವನಿಂದ ಕೊಲ್ಲಲ್ಪಟ್ಟ ಮನುಷ್ಯನು ಸತ್ತುದು ವರ್ಮೀರ್

ಸತ್ತಮೇಲೆ–ಎಂದಾದ ಬಳಿಕವೇ, ಆತನ ಕೀರ್ತಿಗೆ ಮುಕ್ತಿ ದೊರಕಿತು.

ಹಾಲೆಂಡಿನ ಇನ್ನೊಬ್ಬ ಹೆಸರಾದ ಚಿತ್ರಗಾರನೆಂದರೆ ಫ್ರಾನ್ಸ್‌ಹಾಲ್ಸ್. ತನ್ನ ಕಾಲದ ಹಲವು ಶ್ರೀಮಂತರ, ಯೋದ್ಧರ ಚಿತ್ರಗಳನ್ನು ಬರೆದು ಆತ ಹೆಸರಾದನು. ಅವನ ಹಲವು ಚಿತ್ರಗಳು ಇಲ್ಲಿವೆ.

ಜೂಡಿತ್ ಲಿಸ್ಟರ್ ಎಂಬವನು ಮಧ್ಯಯುಗದ ಇನ್ನೊಬ್ಬ ಚಿತ್ರಕಾರ. ಆತ ಬರೆದ "ದಿ ಸೆರನೇಡ್" ಎಂಬೊಂದು ಸುಂದರ ಚಿತ್ರ ಇಲ್ಲಿದೆ. ಪ್ರಣಯಿಯೊಬ್ಬ ತನ್ನ ಹಿಂದೆ ಸಂಗೀತಗಾರರ ಮೇಳವನ್ನು ಇಟ್ಟುಕೊಂಡೋ, ಅಥವಾ ತಾನೊಬ್ಬನಾಗಿಯೋ ಗಿತಾರದಂಥ ವಾದ್ಯ ನುಡಿಸಿಕೊಂಡು ಪ್ರೇಯಸಿಯ ಮನೆಯ ಮುಂದೆ ನಿಂತು, ಅವಳನ್ನು ಒಲಿಸುವ ಪದ್ಧತಿಗೆ 'ಸೆರೆನೇಡ್' ಅನ್ನುತ್ತಾರೆ. ಲಿಸ್ಟರ್‌ನ ಈ ಚಿತ್ರದಲ್ಲಿ ಅಂಥ ಪ್ರಣಯಿಯೊಬ್ಬನ ಮುಖ, ಅರ್ಧ ಮೈ, ಬೆಂಜೋ ಇಷ್ಟೇ ಕಾಣುತ್ತವೆ. ಉಡುಗೆಯ ಬಣ್ಣ ಬೆಡಗುಗಳು ಮುಖದ ತುಂಟ ಬಯಕೆಗೆ ಪೂರಕವಾಗಿವೆ. ಚಿತ್ರದಲ್ಲಿ ಈ ಪ್ರಣಯಿಯ ಕಣ್ಣು, ನಗುದುಟಿ, ತಂತಿಯನ್ನು ಮೀಟುವ ಬೆರಳುಗಳೆಲ್ಲವೂ ಅವನ ಅಂತರಂಗದ ತುಂಟ ವಿಜಯವನ್ನು ಸಾರುತ್ತಿವೆ.

ಬೇಟೆ, ಚಳಿಗಾಲದ ಹಿಮ, ಹಾಲೆಂಡಿನ ಕಡಲು, ಇವನ್ನೆಲ್ಲ ಚಿತ್ರಿಸುವ ದೇಶೀಯ ಚಿತ್ರಕಾರರ ಅನೇಕಾನೇಕ ಸುಂದರ ಚಿತ್ರಗಳಿವೆ.

ಹೊರ ದೇಶದ ಚಿತ್ರಗಳಲ್ಲಿ ಫ್ರಾನ್ಸಿನ ವಿನ್ಸೆಂಟ್ ವೇನ್‌ಗಫ್‌ನ 'ದಾರಿಯಲ್ಲಿನ ಸೈಪ್ರಸ್ ವೃಕ್ಷ' ಎಂಬ ಒಂದು ಚಿತ್ರವಿದೆ. ಈ ಚಿತ್ರಗಾರನ ಬಾಳು ತುಮುಲ ಪೂರಿತವಾಗಿದ್ದಂತೆಯೇ ದೃಷ್ಟಿಕೋನವೂ ತುಮುಲಪೂರಿತವಾಗಿತ್ತು. ನಿಸರ್ಗದಲ್ಲಿ-ನೆಲ, ನೀರು, ಗಿಡ, ಮರ, ನೆಳಲು, ಬೆಳಕು ಅರ್ಥಾತ್ ಜಡ ಚೇತನ ವಸ್ತುಗಳೆಲ್ಲ ತಂತಮ್ಮ ಬಾಳ್ವೆಯ ಹೋರಾಟವನ್ನು ಮಾಡುತ್ತವೆ-ಎಂಬುದೇ ಅವನ ನೋಟದ ಬಗೆ. ಹೀಗಾಗಿ ಅವನ ನಿಸರ್ಗದ ಈ ಚಿತ್ರಗಳಲ್ಲಾಗಲಿ ಇತರ ಚಿತ್ರಗಳಲ್ಲಾಗಲಿ–ಒಣ ಹುಲ್ಲು, ಹರಿಯುವ ನೀರು, ಸ್ಥಿತ ನೆಲ, ಥಳಿಸುವ ಬಾನು, ಪ್ರತಿಯೊಂದೂ ಚೇತನಮಯ ಶಕ್ತಿ. ಒಂದರ ಇದಿರು ಇನ್ನೊಂದು ಸದಾ ಹೋರಾಡುತ್ತಲೇ ಇರುವಂತಿವೆ. ಆ ಹೋರಾಟದಲ್ಲಿ ಒಂದು ಬಗೆಯ ತೋಲವಿದೆ; ಸಮತೆ, ಶಾಂತಿಗಳೂ ಇವೆ. ಇಂದಿನ ವಿಜ್ಞಾನ ಹೇಳುತ್ತಿರುವ ಈ ತತ್ವವನ್ನು ವೇನ್‌ಗಫ್ ನಿಸರ್ಗದೊಡನೆ ತನಗೆ ಉಂಟಾದ ಅನುಭಾವದಿಂದ ತೋರಿಸಿಕೊಟ್ಟ.

ಈ ಮ್ಯೂಸಿಯುಮಿನಲ್ಲಿ ಸಂಗ್ರಹಿತವಾಗಿರುವ ಅನೇಕ ಚಿತ್ರಗಳ ತ್ರಿವರ್ಣರಂಜಿತ ಪ್ರತಿಗಳನ್ನು ಇಲ್ಲಿ ಮಾರುವುದಕ್ಕಿಟ್ಟಿದ್ದರು. ಕೆಲವನ್ನು ಆರಿಸಿ 'ನನ್ನೂರಿಗೆ ಕಳುಹಿಸಿ' ಎಂದು ಹೇಳಿ, ದುಡ್ಡು ಕೊಟ್ಟು ಬಂದಿದ್ದೆ. ಅವೆಲ್ಲವು ನಾನು ಊರಿಗೆ ಬರುವ ವೇಳೆಗೆ ಸಮನಾಗಿ ಬಂದಿದ್ದವು. ಮ್ಯೂಸಿಯುಮಿನಲ್ಲಿಯೇ ಸೊಗಸಾದ ಒಂದು ರೆಸ್ಟೋರಾಂಟ್ ಇತ್ತು. ಅಲ್ಲಿ ಉಪಾಹಾರವನ್ನು ಮುಗಿಸಿ, ನೇರಾಗಿ ರೈಲು ನಿಲ್ದಾಣದ ಬಳಿಗೆ ಬಂದೆ. ಅಲ್ಲಿನ ಕಾಲುವೆಯಲ್ಲಿ ನಗರ ಪ್ರವಾಸದ ಅನೇಕ ಮೋಟರ್ ದೋಣಿಗಳು ಕಾದಿದ್ದುವು. ಈ ನಗರವನ್ನು ನೆಲದ ಮೇಲೆ ಸಂಚರಿಸಿ ನೋಡುವಷ್ಟೇ ಸುಲಭ, ದೋಣಿಯಲ್ಲಿ ತೇಲಿ ನೋಡುವುದು. ಇಲ್ಲಿ ಎಷ್ಟು ರಸ್ತೆಗಳಿವೆಯೋ, ಅಷ್ಟೇ ಕಾಲುವೆಗಳಿವೆ. ಕಾಲುವೆಗಳಲ್ಲಿ ಚಲಿಸಿ ನೋಡುವವನಿಗೆ ಅದರ ಸೊಗಸು ಇಮ್ಮಡಿಸಿ ಕಾಣುತ್ತದೆ. ಬಿಂಬ ಪ್ರತಿಬಿಂಬಗಳಿಂದ ಬಾನಿನ, ಮುಗಿಲಿನ, ಕಟ್ಟಡಗಳ ಬಣ್ಣಗಳು ನೀರಲ್ಲಿ ಕಾಣಿಸುವಾಗ ಅವಕ್ಕೊಂದು ಚೆಲುವು ಬೇರೆ. ಐದಾರು ಶತಮಾನಗಳಿಂದಲೂ ಕಟ್ಟಿಕೊಂಡು ಬಂದಿದ್ದ ಹಲವು ಹಳೆಗಾಲದ ಚರ್ಚುಗಳು, ವ್ಯಾಪಾರ ಮಂದಿರಗಳು ನಮಗೆ ಕಾಣುತ್ತವೆ. ಮೋಟರ್ ದೋಣಿ ಅನೇಕ ಸೇತುವೆಗಳ ಕೆಳಗಿಂದ ಹಾದು ಸರಿಯುತ್ತದೆ. ನಮ್ಮ ಗೈಡ್ ದೇಶೀಯ ಹೆಮ್ಮೆಯಿಂದ "ನಮ್ಮ ನಗರವನ್ನು ಉತ್ತರದ ವೇನಿಸ್ ಎಂದು ಕರೆಯುತ್ತಾರೆ; ಅದು ತೀರ ತಪ್ಪು. ವೇನಿಸನ್ನು ದಕ್ಷಿಣದ ಎಮ್‌ಸ್ಟರ್ ಡಾಮ್ ಅನ್ನಬೇಕು" ಎಂದು ಅಂದಾಗ ನಮಗೆಲ್ಲ ನಗುಬಂದಿತು. ದಾರಿಯಲ್ಲಿ ಹೋಗುತ್ತ ನಮ್ಮ ಮಾರ್ಗದರ್ಶಕಿಯು, ಒಂದು ಹದಿನೈದನೇ ಶತಮಾನದ ಮನೆಯನ್ನು ತೋರಿಸಿ "ಇದು ರೆಂಬ್ರಾಂಡನ ಮನೆ" ಎಂದಳು. ಸ್ಟ್ರೇಫರ್ಡಿನ "ಎನ್ನಾ ಹಾತವೇ"ಯ (ಶೇಕ್ಸ್‌ಪಿಯರನ ಮಡದಿಯ) ಗುಡಿಸಲನ್ನು ಇಂಗ್ಲಿಷರು ಗೌರವಿಸುವಂತೆ ಈ ಜನರು ರೆಂಬ್ರಾಂಡನ ಮನೆಯನ್ನು ಗೌರವಿಸುತ್ತಿದ್ದಾರೆ. ಅಂಥ ಗೌರವಕ್ಕೆ ಅದು ತಕ್ಕುದೇ ಆಗಿದೆ.

ನಮ್ಮ ಮೋಟರ್ ದೋಣಿ ಕಾಲುವೆಗಳನ್ನೆಲ್ಲ ಸುತ್ತಿಕೊಂಡು ವಿಶಾಲವಾದ ರೇವಿನ ಭಾಗಕ್ಕೆ ಬಂದಿತು. ಅಲ್ಲಿನ ದಂಡೆಯಲ್ಲಿ ಗೋದಾಮುಗಳು, ವ್ಯಾಪಾರ ಮಂದಿರಗಳು, ಸುಂಕದ ಮನೆಗಳು ಇನ್ನಷ್ಟು ಭವ್ಯವಾಗಿ ಕಾಣಿಸುತ್ತಿದ್ದುವು. ಪ್ರಪಂಚದ ಅನೇಕ ಭಾಗಗಳಿಂದ ಹಡಗುಗಳು ಬಂದು ನಿಂತಿದ್ದವು. ಕಡಲಿನಲ್ಲಿ ಎರಡು ದೊಡ್ಡದಾದ ತೇಲುವ ಧಕ್ಕೆಗಳು[Docks]ನಿಂತಿ

ದ್ದುವು. ಅವುಗಳೊಳಗೆ ಎರಡು ಹಡಗುಗಳನ್ನು ನಿಲ್ಲಿಸಿದ್ದರು. ಹಾಗೆಯೇ ಮುಂದುವರಿದೆವು. ಕಡಲಿನ ಮುಖ ಕಾಣತೊಡಗಿತು. ದೂರದ ದಂಡೆಯಲ್ಲಿ ಹುಲ್ಲು ಬೆಳೆದ ಮರಳಿನ ದಂಡೆಯೊಂದು ಕಾಣುತಿತ್ತು. ಅದೇನೆ ಕಡಲ ನೀರನ್ನು ತಡೆಯಲು ಕಟ್ಟಿದ್ದ ದಂಡೆ (Dyke)ಯಂತೆ.

ಈ ಜಲಯಾನವನ್ನು ಮುಗಿಸಿ ನಾನು ಬೇಗನೆ ರೈಲ್ವೆ ನಿಲ್ದಾಣಕ್ಕೆ ಬಂದೆ. ಅಲ್ಲಿಂದ ಅವಸರದಿಂದ ಲೈಡನಿಗೆ ಧಾವಿಸಿದೆ. ಸಂಜೆಯ ಆರು ಘಂಟೆಗೆ ಮಿಸ್. ಬಾಕೆಯವರ ಮನೆಗೆ ಬರುವೆನೆಂದು ಹೇಳಿದ್ದೆ. ಹಾಗಾಗಿ ನನ್ನ ಆತುರ. ಹಳೆಗಾಲದ ಒಂದು ಚರ್ಚಿನ ಹಿಂದುಗಡೆ ಅವರ ಮನೆ ಯಿತ್ತು. ಇಂಗ್ಲಿಷಿನ ಚರ್ಚ್‌ಪದ ಹೊಲ್ಲೆಂಡಿನಲ್ಲಿ ಕರ್ಕ್. ಹಳೆಯ ಮನೆ ಯೊಂದರ ಮುಂದೆ ನಿಂತು ಒಂದು ಗುಂಡಿ ಒತ್ತಿದೆ. ಮಹಡಿಯಲ್ಲಿ ಘಂಟೆಯ ಸದ್ದಾಯಿತು. ವೃದ್ಧೆಯೊಬ್ಬಳು ಮಹಡಿಯಿಂದ ಇಳಿದು ಬಂದು ನನ್ನನ್ನು ಸ್ವಾಗತಿಸಿದಳು. "ಅಣ್ಣನಿಂದಲೂ ನನಗೆ ಕಾಗದ ಬಂದಿತ್ತು. ನಿಮಗಾಗಿಯೆ ಕಾದು ಕುಳಿತಿದ್ದೆ; ಬನ್ನಿ" ಎಂದು ಕರೆದುಕೊಂಡು ಹೋದಳು. ಆಕೆಗೆ ಸುಮಾರು ಎಪ್ಪತ್ತು ವಯಸ್ಸಿರಬಹುದು. ಬಾಕೆಯವರ ಕುಟುಂಬದ ಮನೆ ಯಲ್ಲಿ ಅವಳೊಬ್ಬಳೇ ವಾಸಿಸುತ್ತಿದ್ದಾಳೆ. ಅವಳ ಬಂಧುಗಳಲ್ಲಿ ಕೆಲವರು ಯುದ್ಧಕಾಲದಲ್ಲಿ, ಜಾವಾದಲ್ಲೂ ಹಾಲೆಂಡಿನಲ್ಲೂ ತೀರಿಕೊಂಡರು. ಈಕೆ ತುಂಬ ದೇಶಸಂಚಾರ ಮಾಡಿದವಳು. ಯುರೋಪ್, ಜಪಾನ್, ಇಂಡೋ ನೇಸ್ಯಗಳನ್ನೆಲ್ಲ ಸುತ್ತಿದ್ದಾಳೆ. ಅವಳು ಚಿತ್ರಗಾರ್ತಿಯೆಂದು ಅವಳ ಸೋದರ ನನಗೆ ಹೇಳಿದ್ದರು. ನಾವು ಮೇಲಕ್ಕೆ ಹೋದೆವು. ಒಂದು ಕೊಟಡಿಯಲ್ಲಿ ಮಿರಮಿಸಿದೆವು. ಅಲಂಕರಿಸಿದ ದಿಂಬುಗಳು ಕುರ್ಚಿಗಳ ಮೇಲಿದ್ದುವು. ಅವಳು ಮಾಡಿದ ಬತಿಕ್‌ಕೆಲಸದ ವಸ್ತ್ರ ಮೇಜಿನ ಮೇಲಿತ್ತು. ಬತಿಕ್ ತೆರೆ ಗಳು ಬಾಗಿಲಲ್ಲಿ ತೂಗುತಿದ್ದವು. ನಾನು ಹೋದೊಡನೆಯೇ ಒಂದು ಚಿತ್ರ ತೋರಿಸಿ "ಇದು ನಿಮ್ಮ ಹೆಂಡತಿ ಮಕ್ಕಳ ಚಿತ್ರವಲ್ಲವೇ? ನನಗೆ ನನ್ನ ತಮ್ಮ ಕಳುಹಿಸಿದ್ದ. ಅಲ್ಲದೆ ನೀವು ಶಾಖಾಹಾರಿಗಳೆಂದೂ ಬರೆದಿದ್ದಾನೆ. ಹೀಗಾಗಿ ಅದನ್ನೇ ತಯಾರಿಸಿದ್ದೇನೆ. ಮೊದಲಿಗೆ ಕಾಫಿಯನ್ನು ಕುಡಿಯುತ್ತೀರಾ ಹೇಗೆ?" ಎಂದು ಕೇಳಿದಳು. ಕಾಫಿ ಪಾನೀಯ ಬಂದಿತು. ಮೆಲ್ಲಗೆ ಊಟ ಉಪ ಚಾರವೂ ಆಯಿತು. ನ್ನನ್ನ ಕಣ್ಣು ಕೋಣೆಯನ್ನೆಲ್ಲ ಸುತ್ತಿ ಸುಳಿಯುತ್ತಿತ್ತು. ಆಕೆ ಸಂಗ್ರಹಿಸಿಟ್ಟಿದ್ದ ಹಳೆಗಾಲದ ಪಿಂಗಾಣಿಗಳನ್ನು, ಚೀನಿ, ನೇಪಾಲಿ,

ಟಿಬೇಟಿಯನ್ ವಿಗ್ರಹಗಳನ್ನೆಲ್ಲ ಕಾಣುತ್ತಿದ್ದೆ. ಮಗ್ಗುಲಿನ ಅರೆಯಲ್ಲಿ ಪುಸ್ತಕ ಗಳು ರಾಶಿಯಾಗಿದ್ದವು."ನೀವು ಚಿತ್ರಬರೆಯುತ್ತೀರಂತೆ. ನೋಡಬಹುದೇ?" ಎಂದು ಕೇಳಿದೆ.

ಆಕೆ ಆ ಚಿತ್ರಗಳ ಇತಿಹಾಸ ಹೇಳಿದಳು. ಜರ್ಮನರು ಹಾಲೆಂಡ್ ಆಕ್ರಮಿಸಿದ್ದರು. ಪ್ರತಿಯೊಬ್ಬ ಧೃಢಕಾಯನನ್ನೂ ತಮ್ಮ ಅಂಕೆಯಲ್ಲಿರಿಸಿ ಕೊಂಡು ತಮ್ಮ ಕೆಲಸಕ್ಕೆ ನಿಯೋಜಿಸಿದ್ದರು. ವಾಹನ ಸಂಚಾರವೆಲ್ಲ ಅವರ ಕೈಯಲ್ಲಿತ್ತು.ಜೀವನದ ಮಾರ್ಗ ಅವರ ಕೈಯಲ್ಲಿತ್ತು.ಹೀಗಾಗಿ ಅವರ ಕೈಯ ಕೆಳಗೆ ದುಡಿದವರಿಗೆ ಮಾತ್ರ ಒಂದಿಷ್ಟು ಒಣ ರೊಟ್ಟಿಗೆ ದಾರಿ. ಇವಳಿಗೆ ಆ ದಾಸ್ಯ ಒಪ್ಪಿಗೆಯಾಗಲಿಲ್ಲ. ಅನಾರೋಗ್ಯದ ನೆಪ ಹೇಳಿ, ವಯಸ್ಸಿನ ನೆಪ ಹೇಳಿ, ಕುಳಿತುಕೊಂಡಳು. ವಾರಕ್ಕೆ ಒಂದು ತುಂಡು ರೊಟ್ಟಿಯೂ ಸಿಗುವು ದಕ್ಕೂ ಕಷ್ಟವಿತ್ತು; ಚಳಿಗಾಲವನ್ನೆಲ್ಲ ಕಲ್ಲಿದ್ದಲು ಇಲ್ಲದೆಯೇ ನರಳಿ ಕಳೆಯ ಬೇಕಾಗಿತ್ತು. ಹಾಗಿದ್ದರೂ ಅವಳು ಹಸಿದು ಸ್ವಂತಂತ್ರಳಾಗಿ ದುಡಿದಳು. ಅವಳಿಗೆ ಪ್ರಿಯವಾದ ಚಿತ್ರಕಲೆಯನ್ನು ಸಾಧಿಸಿದಳು. ತುಸು ದೂರದಲ್ಲಿದೆ- ಲೈಡನ್ ವಿಶ್ವವಿದ್ಯಾಲಯದ ಸಸ್ಯೋದ್ಯಾನ. ಯುದ್ಧಕಾಲದಿಂದ ಇಂದಿನ ತನಕ ಅವಳು ಆ ಸಸ್ಯೋದ್ಯಾನಕ್ಕೆ ನಿತ್ಯವೂ ಹೋಗಿ ಅಲ್ಲಿನ ವಿವಿಧ ಹೂವು ಗಳ ಚಿತ್ರ ಬರೆಯುತ್ತಿದ್ದಾಳೆ. ಹಾಗೆ ಬರೆದ ಸುಮಾರು ಐನೂರು ಚಿತ್ರ ಗಳ ರಾಶಿಯನ್ನು ನನ್ನ ಮುಂದಿರಿಸಿದಾಗ ನನಗೆ ವಿಸ್ಮಯವಾಯಿತು. ಪ್ರತಿ ಯೊಂದನ್ನೂ ತೆರೆದು ನೋಡಿದ್ದೇನೆ. ಎಲ್ಲ ಚಿತ್ರಗಳೂ ವಿವಿಧ ಸಸ್ಯ ಜಾತಿಯ ಹೂ ಗೊಂಚಲಿನವುಗಳವು. ಸೂಕ್ಷ್ಮದರ್ಶಿಯಿಂದ ನೋಡುವಷ್ಟು ವಿವರ ವಾಗಿ, ಬಿಡಿಯಾಗಿ, ಅವುಗಳ ಗೊಂಚಲನ್ನು ಚಿತ್ರಿಸಿದ್ದಾಳೆ. ಒಂದೊಂದು ಹೂ, ಅದರ ಪಟಲ, ಕೇಸರ, ಎಲೆ ಅಷ್ಟು ನೈಜವಾಗಿದೆ; ಮೋಹಕವಾಗಿದೆ. ಒಂದೊಂದು ಚಿತ್ರವೂ ಹತ್ತೆಂಟು ದಿನಗಳ ಶ್ರಮವನ್ನಾದರೂ ಕೊಂಡಿರ ಬೇಕು. ಒಂದಲ್ಲ! ಸುಮಾರು ಐನೂರು ಚಿತ್ರಗಳ ಈ ಕಲಸಕ್ಕೆ ಆಗ ದೊರೆತ ಪ್ರತಿಫಲ–ಹಸಿವು. ಅದನ್ನು ಬಿಟ್ಟರೆ ಆತ್ಮ ತೃಪ್ತಿ. ಇಂದೇನೋ ಲೈಡನ್ ವಿಶ್ವವಿದ್ಯಾಲಯದವರು ಅವುಗಳಿಂದ ನೂರು ಚಿತ್ರಗಳನ್ನಾಯ್ದು ಪ್ರಕಟಿಸು ವುದಕ್ಕೊಪ್ಪಿದ್ದಾರಂತೆ. ಆದರೂ ಹಣದ ರೀತಿಯಿಂದ ಪ್ರತಿಫಲ ಬಯಸು ವಂತಿಲ್ಲ.

ಜರ್ಮನರ ಆಕ್ರಮಣ ಕಾಲದಲ್ಲಿ ಈ ದೇಶದ ಜನರು ಎಂಥ ಪಾಡು

ಪಟ್ಟರು ಎಂದು ಹೇಳುವುದಕ್ಕಿಲ್ಲ. ಅವಳು ಅಂಥ ಕೆಲವು ದಾರುಣ ಚಿತ್ರಗಳನ್ನು ಕೊಟ್ಟಳು. ಯಾವುದೋ ಸಂದರ್ಭದಲ್ಲಿ ಮಾತನಾಡುತ್ತ "ನೋಡಿ, ಈಗ ನನ್ನಿಂದ ಹೆಚ್ಚು ನಡೆಯುವುದಕ್ಕಾಗುವುದಿಲ್ಲ. ಯುದ್ಧಕಾಲದಲ್ಲಿ ಹೇಗ್‌ನಲ್ಲಿರುವ ನನ್ನ ಅಣ್ಣನ ಮನೆಗೆ ನಡೆದುಕೊಂಡೇ ಹೋಗಿದ್ದೆ. ನನ್ನ ಮನೆಯಲ್ಲಿ ಒಂದಿಷ್ಟು ತರಕಾರಿಯನ್ನು ಬೆಳೆಸಿದ್ದೆ. ನಾವು ಬೆಳೆದುದನ್ನೆಲ್ಲ ಅಪಹರಿಸುವವರು ಜರ್ಮನರು. ಹೇಗ್‌ನಲ್ಲಿದ್ದ ನನ್ನ ಅಣ್ಣ, ನನ್ನಂತೆ ಹಸಿದಿರ ಬೇಕಾಗಿತ್ತು. ಅವನ ನೆನಪಾಗಿ, ಒಂದು ದಿನ ನಾನು ಬೆಳೆದ ತರಕಾರಿಗಳನ್ನು ಕೊಡುವುದಕ್ಕೆ ಹೊರಟೆ. ಹೇಗಿಗೆ ಹದಿನೈದು ಮೈಲುಗಳ ದೂರ; ನಡೆದು ಹೋಗಬೇಕು. ರೈಲಿನಲ್ಲಿ ಖಾಸಗಿ ಜನಗಳನ್ನು ಬಿಡುವಂತಿಲ್ಲ. ಮಕ್ಕಳ ತೊಟ್ಟಿಲು ಗಾಡಿಯೊಂದರಲ್ಲಿ ತರಕಾರಿಯನ್ನು ತುಂಬಿಸಿ, ಮಗುವೆಂದು ಭ್ರಮೆ ಬರುವ ಹಾಗೆ ಮುಚ್ಚಿ, ಹೇಗ್ ತನಕವೂ ನಡೆದು ಹೋಗಿ ಕೊಟ್ಟು ಬಂದಿದ್ದೆ" ಎಂದಳು.

ಈ ಬಗೆಯಲ್ಲಿ ಆಗಿನ ದುರ್ದಿನಗಳ ಕಥೆಯನ್ನೆಲ್ಲ ಹೇಳುತ್ತ, ಅದರ ಇಂದಿನ ಚಿತ್ರವೊಂದನ್ನು ಬಣ್ಣಿಸಿದಳು. ನಾವೂ ಅದನ್ನು ಚಿಂತಿಸಬೇಕಾದ ವಿಷಯ. "ನೋಡಿ, ಆಗ ನಮ್ಮ ಹುಡುಗರಿಗೆ ವಿಧ್ವಂಸಕ ಚಟುವಟಿಕೆಗಳ ಹುಚ್ಚು. ನಮ್ಮ ದೇಶ ಆಕ್ರಮಣವಾದ ಸಿಟ್ಟಿನಿಂದ, ಜರ್ಮನರು ಇರಿಸಿದ್ದನ್ನು ಹಾಳುಮಾಡುವುದು, ಅವರ ಸಂಗ್ರಹಗಳನ್ನು ಲೂಟಿಮಾಡುವುದು, ಕದಿಯುವುದು–ಇವೆಲ್ಲ ದೇಶಪ್ರೇಮದ ಕೆಲಸಗಳೆನಿಸಿದ್ದುವು. ನಾವು ಅಂಥವರನ್ನು ವೀರರೆಂದು ಕೊಂಡಾಡಿದೆವು. ಈಗ ಆ ಭಾವನೆಯ ಪ್ರತಿಕ್ರಿಯೆ ಅನುಭವಿಸುತ್ತಿದ್ದೇವೆ. ಅಂಥವರಲ್ಲಿ ಕೆಲವು ತರುಣರು, ಇಂದು ನಿತ್ಯಜೀವನಕ್ಕಾಗಿ ಈ ವಿದ್ಯೆ ಉಪಯೋಗಿಸುತ್ತಿದ್ದಾರೆ. ಸಮಾಜ ವಿಘಾತಕ ಚಟುವಟಿಕೆಗಳನ್ನು ತಮ್ಮ ಉದ್ಯೋಗವಾಗಿ ಕೈಕೊಂಡಿದ್ದಾರೆ" ಎಂದು ನೋವಿನಿಂದ ಹೇಳಿದಳು. ನಮ್ಮ ಕರ್ನಾಟಕದಲ್ಲಿ ನಡೆದ ಕೆಲವು ವಿಧ್ವಂಸಕ ಚಟುವಟಿಕೆಗಳಿಗೆ ಇಂಥ ಮುಖವೂ ಬಂದಿತ್ತು. ಶ್ರೀಮಂತರ ಮೇಲಿನ ದ್ವೇಷವನ್ನು ಬೆಳೆಯಿಸಿ ಸ್ವಲಾಭಕ್ಕಾಗಿ ಸುಲಿಗೆಮಾಡುವ ಚಟವೂ ದೇಶದಲ್ಲುಂಟಾಗಿದೆ. ಹೀಗಿರುತ್ತ ನಮ್ಮ ಗುರಿ ಒಳ್ಳೆಯದಿದ್ದರೆ ಸಾಕೇ? ಅದನ್ನು ಸಾಧಿಸುವ ಬಗೆ ನ್ಯಾಯವಾಗಿರಬೇಕೇ ಬೇಡವೇ–ಎಂಬ ದೊಡ್ಡ ಪ್ರಶ್ನೆ ಬರುತ್ತದೆ.

ಯಾಕೋ ಮಾತು ಆಚೀಚೆ ಸುಳಿಯಿತು. ಇನ್ನೊಂದು ಪ್ರಸಂಗ

ದಲ್ಲಿ ಅವರಿಗೆ ತೋರಿಸಲು ಕೊಂಡುಹೋಗಿದ್ದ "ಭೂತ" ಮೊದಲಾದ ನೃತ್ಯಗಳ, ನನ್ನ ಚಿತ್ರ ಸಂಗ್ರಹವನ್ನು ತೋರಿಸಿದೆ. ಭೂತಗಳಿಂದ ಪ್ರೇತಗಳ ಕಡೆಗೆ ವಿಷಯ ಸರಿಯಿತು. ಈ ವಿಚಾರದಲ್ಲಿ ಅವಳು ಕುತೂಹಲಕಾರಿಯಾದ ಒಂದು ಘಟನೆಯನ್ನು ಹೇಳಿದಳು. "ನಾನೂ ನನ್ನ ಬಂಧು ಒಬ್ಬನೂ ಒಂದು ಹಳ್ಳಿಯ ಮನೆಯಲ್ಲಿದ್ದೆವು. ಆ ಮನೆಯಲ್ಲಿ ಪ್ರೇತಭಾದೆ ಇತ್ತೆಂದು ವದಂತಿ. ನಮಗೆ ಆ ಮನೆಯಲ್ಲಾಗುವ ಸದ್ದಿನಿಂದ ಎಷ್ಟೋ ಬಾರಿ ಎಚ್ಚರವಾಗುತಿತ್ತು ಆಗಾಗ ಬಡಿಯುವ ಸದ್ದು, ನಡೆಯುವ ಸದ್ದು, ಏನೇನೋ ಕೇಳಿಸುತ್ತಿದ್ದುವು. ನನ್ನ ಬಂಧು ಒಂದು ದಿನ ಧೈರ್ಯಮಾಡಿ ಮಹಡಿಯ ಮೇಲಕ್ಕೆ ಹೋದ. ಅವನೆದುರಿಗೆ ಮೇಜಿನ ಮೇಲಿನ ಒಡವೆಗಳು ಚಲಿಸುವುದು ಕಾಣಿಸಿತು. ಆತ ಕುತೂಹಲದಿಂದ ಕೆಮೆರಾ ಹಿಡಿದುಕೊಂಡು ಮೇಜಿನ ಭಾಗದ ಫೋಟೋವನ್ನು ತೆಗೆದಿದ್ದಾನೆ. ಅದನ್ನು ತೊಳೆದಾಗ ಅದರಲ್ಲಿ ಮಸುಕಾದ ಒಂದು ಆಕಾರವು ಮೂಡಿ ಬಂದಿದೆ" ಎಂದರು. ಭೂತ, ಪ್ರೇತಗಳು ನಮ್ಮ ದೇಶವನ್ನು ಮಾತ್ರವಲ್ಲ, ಲೋಕವನ್ನೇ ಕಾಡುತ್ತಿವೆಯಲ್ಲವೆ! ಅವುಗಳ ಇರವ ವಿಷಯದಲ್ಲಿ ಅನುಮಾನ ಗ್ರಸ್ತವಾದ ಪ್ರಶ್ನೆಗಳಿರಬಹುದಾದರೂ ಮಾನವ ದೃಗ್ಗೋಚರ ಜೀವಿಗಳು ಇರಬಾರದೆಂದಿಲ್ಲ-ಇದ್ದೂ ಇರಬಹುದು. ಮನುಷ್ಯನಿಗೆ ಹೇಗೆ ಅತಿನೇರಳೆ, ಅಲ್ಪಾರುಣ (Ultra-violet and infra-red) ಬೆಳಕುಗಳು ಕಾಣಿಸುವುದಿಲ್ಲವೋ, ಹಾಗೆಯೇ ನಮ್ಮ ವರ್ಣ ಸಪ್ತಕದಿಂದ ಹೊರಗಿರುವ ವಸ್ತುಗಳ ಪರಿಚಯವು ಕಣ್ಣಿಗಾಗಲಾರದು.

ಮಿಸ್ ಬಾಕೆಯವರಲ್ಲಿಗೆ ಮೊದಲ ಬಾರಿ ಹೋದಾಗ ಮೂರುತಾಸಿಗಿಂತ ಹೆಚ್ಚಿಗೆ ಸಮಯವನ್ನು ಆತ್ಮೀಯವಾಗಿ ಕಳೆಯುವುದಕ್ಕಾಯಿತು. ಆ ಮೇಲೂ ಒಂದೆರಡು ಬಾರಿ ಹೋಗಿದ್ದೆ. ಒಮ್ಮೆ ಅವರು ನನ್ನನ್ನು ಸಸ್ಯೋದ್ಯಾನಕ್ಕೂ ಕರೆದೊಯ್ದರು. ಅವರ ಚಿತ್ರ ಕಲಾಭಿರುಚಿ, ಬಿಡುವೇಳೆಯಲ್ಲಿ ಮಾಡುತ್ತಿದ್ದ ಬತಿಕ್ ಕೆಲಸ, ಅಲಂಕಾರಿಕ ಬ್ಯಾಡಿಂಗ್ ಕೆಲಸ, ಇವನ್ನೆಲ್ಲ ವಿವರವಾಗಿ ನೋಡುವ ಅವಕಾಶ ನನಗೆ ದೊರೆಯಿತು. ಇಂಥವರು ವಯಸ್ಸಿನ ನೆಪ ಹೇಳದೆಯೇ ದುಡಿಯುತ್ತಿರುವ ಬಗೆಯನ್ನು ನೋಡಿದರೆ ತುಂಬ ಆಶ್ಚರ್ಯವಾಗುತ್ತದೆ; ಅಭಿಮಾನವಾಗುತ್ತದೆ.

# ೧೩. ಹಾಲೆಂಡಿನಲ್ಲಿ ಇನ್ನೆರಡು ದಿನ

ಮೂರನೆಯ ದಿನ ಮಧ್ಯಾಹ್ನ ನಾನು ಮಿಸೆಸ್ ಯಾನ್‌ಬಾಲ್‌ರವರ ಜೊತೆಯಲ್ಲಿ ಸಮೀಪದ ಹಳ್ಳಿಯೊಂದಕ್ಕೆ ದನಕರುಗಳ ಸಂಪತ್ತು ನೋಡುವುದಕ್ಕಾಗಿ ಹೋಗಲು ನಿಶ್ಚಯಿಸಿದ್ದೆ. ಬೆಳಗ್ಗೆ ಮಾಡುವ ಕೆಲಸವೇನಿರಲಿಲ್ಲ. ಹೀಗಾಗಿ ಒಬ್ಬರೊಡನೆ, ನಾನು ಬೆಳಗ್ಗೆ ಯೂಟರೆಕ್ಟ್ ಎಂಬಲ್ಲಿರುವ "ಎವಿಫಾನ್" ಎಂಬ ಪಕ್ಷಿಮಂದಿರ ನೋಡಲುಹೋಗಲೇ-ಎಂದು ಕೇಳಿದೆ. ಈ ಪಕ್ಷಿಮಂದಿರದ ವಿಚಾರವಾಗಿ 'ರೀಡರ್ಸ್ ಡೈಜೆಸ್ಟ್' ಪತ್ರಿಕೆಯಲ್ಲಿ ಒಂದು ಲೇಖನವನ್ನೋದಿದ್ದೆ. ಒಬ್ಬಾತ–ವಿವಿಧ ಪಕ್ಷಿಗಳನ್ನು ತಂದು ಸರಳಿಲ್ಲದ ಪಂಜರದೊಳಗೆ ಇರಿಸಿ ಸಾಕುತ್ತಿದ್ದಾನಂತೆ. ಅಂದರೆ ಬೆಳಕು ಬೀಳುವ ಒಂದು ಕೊಟಡಿಯಲ್ಲಿ ಪಕ್ಷಿಗಳಿರುತ್ತವೆ. ಈ ಕೊಟಡಿಯ ಆಚೆಗೆ ಗೋಡೆಯಿಲ್ಲ, ಸರಳಿಲ್ಲ, ಬಲೆಯಿಲ್ಲ; ಕತ್ತಲಿನ ಕೃತಕ ಗೋಡೆಯೊಂದು ನಾಲ್ಕು ಸುತ್ತಲೂ ಇದೆ. ಒಳಗಿನ ಹಕ್ಕಿಗಳು ಬೆಳಕಿಂದ ಕತ್ತಲಿನ ಗಡಿಯ ತನಕ ಹಾರಿ ಬಂದು ಮರಳುತ್ತವೆಯೇ ಹೊರತು ಇತರ ಯಾವ ವಿವಿಧ ತಡೆಗಳಿಲ್ಲದಿದ್ದರೂ ಹಾರಿಹೋಗುವುದಿಲ್ಲ. "ಏನಿದೆ ಅಲ್ಲಿ!" ಎಂದರು ಆ ಸ್ನೇಹಿತರು! ಅವರ ಅಭಿಪ್ರಾಯವನ್ನು ವಿವರವಾಗಿ ಕೇಳಿದಾಗ ಹೇಳಿದರು: "ಅಂಥವರನ್ನು ಪ್ರೋತ್ಸಾಹಿಸಬಾರದು; ಆತ ಕೇವಲ ಹಣ ಮಾಡುವುದಕ್ಕಾಗಿ ಹೊರಟವನು. ಅಲ್ಲಿ ವೈಜ್ಞಾನಿಕ ವಿಶೇಷತೆಯೇನಿಲ್ಲ. ಆತ ಹಣ ಗಳಿಸಿದ ಬಗೆಯೂ ಗೌರವದ್ದಲ್ಲ. ಯುದ್ಧದ ಲಾಭದಿಂದ" ಎಂದು ತಮ್ಮ ತಿರಸ್ಕಾರ ಬುದ್ಧಿಯನ್ನು ತೋರಿದರು. ಕಳ್ಳಸಂತೆಯಲ್ಲಿ ಶ್ರೀಮಂತರಾದವರ ವಿಚಾರದಲ್ಲಿ ಇಂಗ್ಲೆಂಡಿನಲ್ಲಿ, ಜರ್ಮನಿಯಲ್ಲಿ ಇದೇ ತೆರನ ತಿರಸ್ಕಾರ ಬುದ್ಧಿಯನ್ನು ಜನರಲ್ಲಿ ಕಂಡಿದ್ದೇನೆ. ಹಾಗಾಗಿ ಅವರ ಇಷ್ಟದಂತೆ ನಾನು ಅಲ್ಲಿಗೆ ಹೋಗಲಿಲ್ಲ. ಬದಲು ಬೆಳಗಿನ ವೇಳೆಯನ್ನು, ಊರು ಸುತ್ತುವುದರಲ್ಲಿ, ಇನ್ನೊಮ್ಮೆ ರಿಕ್ಸ್ ಮ್ಯೂಸಿಯಮಿಗೆ ಹೋಗುವುದರಲ್ಲಿ ಕಳೆದೆ.

ಆ ಮಧ್ಯಾಹ್ನ ಊರ ಹೊರಗಿರುವ, ಹಳ್ಳಿಯಾದ ಔಡ್ ವೆಟರಿಂಗ್, ಎಂಬಲ್ಲಿಗೆ ಮಿಸೆಸ್ ಯಾನ್‌ಬಾಲ್‌ರು ನನ್ನನ್ನು ಕರೆದುಕೊಂಡು ಹೋದರು. ಬಿಸಿಲು, ಮಳೆಗಳು ಆವೃತ್ತಿಯಿಂದ ಕಣ್ಣುಮುಚ್ಚಾಲೆಯಾಡುತ್ತಿದ್ದುವು. ಸುಮಾರು ಹದಿನೈದು ಮೈಲು ದೂರದ ಹಾದಿಯುದ್ದಕ್ಕೂ ಸಮತಟ್ಟಾದ

ಹುಲ್ಲುಗಾವಲಿತ್ತು. ಅಲ್ಲಲ್ಲಿ ದೈತ್ಯಾಕೃತಿಯಲ್ಲಿ ನಿಂತ ಗಾಳಿಗಿರಣಿಗಳಿದ್ದುವು. ದಾರಿಯಲ್ಲಿ ಸಿಕ್ಕಿದ ಚಿಕ್ಕ ಊರುಗಳಲ್ಲೂ ವಿದ್ಯುತ್ತು ಇತ್ತು; ಟೆಲಿಫೋನ್ ಇದ್ದಿತ್ತು. ಹಳ್ಳಿಯ ಅಂಗಡಿಗಳಲ್ಲಿ ಅತ್ಯಾಧುನಿಕ ವಸ್ತುಗಳೆಲ್ಲ ವಿಕ್ರಯಕ್ಕಿದ್ದುವು. ಪೇಟೆಗೂ ಹಳ್ಳಿಗೂ ವ್ಯತ್ಯಾಸವಿರಲಿಲ್ಲ.

ನಾವು ಮೊದಲೇ ತಿಳಿಸಿದಂತೆ, ಒಬ್ಬನ ಮನೆಯ ಮುಂಗಡೆ ಹೋಗಿ ನಿಂತೆವು. ಒಬ್ಬ ಮುದುಕ ಬಂದು ಕದವನ್ನು ತೆರೆದು ನಮ್ಮನ್ನೊಳಗೆ ಕರೆದು ಕೊಂಡು ಹೋದ. ಆತನ ಹೆಸರು ರತೆವೀಲ್ ಎಂದು. ಆತನಿಗೇನಾದರೂ ಎಪ್ಪತ್ತಕ್ಕೆ ಮಿಕ್ಕಿದ ವಯಸ್ಸು. ನಾನು ಅವನ ದನಕರುಗಳನ್ನು ಕಾಣುವುದಕ್ಕೆ ಬಂದುದನ್ನು ಕಂಡು "ನಿಮ್ಮ ದೇಶದ ಸರಕಾರದ ಪರವಾಗಿ ಬಂದಿರಾ?" ಎಂದು ಕೇಳಿದ. 'ಇಲ್ಲ' ಎಂದೆ. ವಿಚಿತ್ರ ಪ್ರಶ್ನೆ! ನಾನು ಹೋದಲ್ಲೆಲ್ಲ ಇದೇ ಪ್ರಶ್ನೆಯನ್ನು ಹಲವರು ಕೇಳಿದ್ದರು. ಪ್ರಾಯಶಃ ಭಾರತ ಸರಕಾರದ ಅಗ್ಗದ ದುಡ್ಡಿನಿಂದ ಊರು ತಿರುಗುವವರನ್ನು ಕಂಡು, ಈ ಮಾತನ್ನು ಆತ ಆಡಿರಬೇಕೆಂಬ ಊಹೆಯಾಯಿತು. ಆತ ನಮಗೆ ಚಾ ತಂದುಕೊಟ್ಟ; ಸಿಗರೇಟು ಒಪ್ಪಿಸಿದ. ಅನಂತರ ತನ್ನ ಮನೆಯ ಹಿಂದಿನ ಬಯಲುಗಾವಲಿಗೆ ಕರೆದೊಯ್ದ. ಮನೆಯ ಹಿಂದಿನ ಅಂಗಣ, ನೆಲ, ದಾರಿಗಳೆಲ್ಲ ಕೆಸರಿಂದ ತುಂಬಿದ್ದುವು. ಆತ ಮರದ ಬೂಟ್ಸುಗಳನ್ನು ತೊಟ್ಟು ನೇರಾಗಿ ನಡೆದುಹೋದ. ನಾವು ಸರಿಗೆಯ ಮೇಲೆ ನಡೆಯುವವರ ಹಾಗೆ ಅಳುಕುತ್ತ ಬಳುಕುತ್ತ ಅವನನ್ನು ಹಿಂಬಾಲಿಸಿದೆವು. ಸಂಜೆಯ ನಾಲ್ಕು ಘಂಟೆಯಾಗಿತ್ತು. ಮನೆಯ ಹಿಂಗಡೆಯ ಒಂದು ಆವರಣದಲ್ಲಿ ಸುಮಾರು ನೂರರಷ್ಟು ಕೊಬ್ಬಿದ ದನಕರುಗಳು ನಿಂತಿದ್ದುವು. ಅವಕ್ಕೆಲ್ಲ ಬಿಳಿ, ಕಪ್ಪುಬಣ್ಣ; ದಷ್ಟಪುಷ್ಟವಾದ ಶರೀರ. ಎಲ್ಲವೂ ಫ್ರೀಸಿಯನ್ ದನಗಳು. ಹೆಚ್ಚಿನವು ಹಾಲು ಕೊಡುವಂಥವು. ನಾಲ್ವರು ಗಂಡಸರು ಅಲ್ಲಿ ಕುಳಿತು ಹಾಲು ಹಿಂಡುತ್ತಲೇ ಇದ್ದರು. ಒಂದೊಂದು ಕಾಲಿನ ಸ್ಟೂಲಿನ ಮೇಲೆ ಕುಳಿತು, ದೊಡ್ಡದೊಡ್ಡ ಬಾಲ್ದಿಗಳಲ್ಲಿ ಹಾಲು ಕರೆಯುತ್ತಿದರು. ಒಂದು ಘಂಟೆಯೊಳಗೆ ಎಲ್ಲ ದನಗಳ ಹಾಲನ್ನೂ ಕರೆದಾಗುತ್ತದೆ. ಅವರ ಮನೆಗೇನೆ ಸಹಕಾರಿ ಸಂಘದ ಮೋಟರುಗಳು ಬಂದು ಆ ಹಾಲನ್ನೊಯ್ಯುತ್ತವೆ. ಮಾರುವ ಕೆಲಸ ಅವರದ್ದಲ್ಲ. ಒಂದೊಂದು ದನವು ಸರಾಸರಿಯಿಂದ ದಿನಕ್ಕೆ ಐವತ್ತು ರಾತ್ಲು ಹಾಲುಕೊಡುತ್ತದಂತೆ. ಹಾಲು ಕರೆಯುವವರು ಬಂದರೆಂದರೆ, ಕರೆಯುವವರ ಮುಂದೆ

ದನಗಳು ತಾವಾಗಿ ಬಂದು, ಹಾಲು ಇಳುಗಿ ಹೋಗುತ್ತವೆ. ಹಾಲು ಹಿಂಡು ವುದೂ ಅಷ್ಟು ಚಮತ್ಕಾರದ ಕೆಲಸ! ನಾನು ಗೋ ಪಾಲನೆಯ ವಿಚಾರದಲ್ಲಿ ಕೇಳಿದ ಪ್ರತಿಯೊಂದು ಪ್ರಶ್ನೆಯನ್ನೂ ರತೆವೀಲ್ ಸ್ಪಷ್ಟವಾಗಿ ಉತ್ತರಿಸಿದ. ನಮ್ಮನ್ನು ತನ್ನ ಮನೆಯ ಪ್ರತಿಯೊಂದು ಮೂಲೆಗೂ ಕರೆದೊಯ್ದು ತೋರಿಸಿದ.

ಅವನ ದನಗಳು ಬತ್ತುವ ಕಾಲ ಬರಿಯ ಎರಡು ತಿಂಗಳಂತೆ. ಅದೂ-ದನಕ್ಕೆ ವಿಶ್ರಾಂತಿ ಸಿಗಲಿ ಎಂದು ಬೇಕೆಂದೇ ಕೈಬಿಡುವ ಕಾಲ. ಚಳಿಗಾಲಕ್ಕಾಗಿ ದೊಡ್ಡದೊಂದು ಹುಲ್ಲಿನ ಬಣವೆ ಅಲ್ಲಿತ್ತು. ಆದರೆ ವರ್ಷದ ಎಂಟು ತಿಂಗಳ ಮೇವು, ವಾಸಗಳು-ಎರಡೂ ಬಯಲಿನಲ್ಲೇ. ಆವರಣ ಹಾಕಿದ್ದ ಸುಮಾರು ಐವತ್ತು ಎಕ್ರೆ ಬಯಲುಗಾವಲು ಅವನದು. ಅಲ್ಲಿ ಸೊಂಪಾಗಿ ಹುಲ್ಲು ಬೆಳೆದಿದೆ. ಒಂದು ಎಕ್ರೆಗೆ ಎರಡೇ ಎರಡು ಜಾನುವಾರುಗಳಂತಿವೆ! ಅವುಗಳ ಮುಖ್ಯವಾದ ಆಹಾರ ಹುಲ್ಲೇನೆ. ಹಟ್ಟಿಯ ಗೊಬ್ಬರವೆಲ್ಲವೂ ಹುಲ್ಲಿನ ಬೆಳೆಗೆ. ಅದರ ಜೊತೆಗೆ ಕೆಲವೊಂದು ಲವಣಗಳನ್ನು ಪೂರಕವಾಗಿ ಹಾಕುವುದುಂಟು.

'ಪೌಷ್ಟಿಕ ಆಹಾರ ಏನು ಹಾಕುತ್ತೀರಿ?' ಎಂದು ಕೇಳಿದೆ. ನಮ್ಮೂರಿನಲ್ಲಿ ಹಿಂಡಿಯನ್ನು ಹಾಕುವಂತೆ ಅವರೇನು ಹಾಕುತ್ತಾರೆ-ಎಂದು ತಿಳಿಯುವ ಕುತೂಹಲದಿಂದ. 'ಹುಲ್ಲೇ ಮುಖ್ಯ ಆಹಾರ; ಜತೆಗೆ ಅದನ್ನು ಹಾಕುತ್ತೇವೆ' ಎಂದು ಸಮೀಪದಲ್ಲಿ ರಾಶಿಯಾಗಿ ಬಿದ್ದಿದ್ದ ಗರಗಸದ ಪುಡಿಯಂತಿರುವ ಏನೋ ಒಂದು ವಸ್ತುವನ್ನು ತೋರಿಸಿದ. ಅದು ಬಟಾಟೆಯಿಂದ ಪಿಷ್ಟಭಾಗವನ್ನು ತೆಗೆದು ಉಳಿದಂಥ ಕಚ್ಚಾ ವಸ್ತು. ಇನ್ನು, ದೊರೆತಾಗ, ಸಕ್ಕರೆಯ ಕಾರ್ಖಾನೆಯವರು ಎಸೆಯುವ ಕಾಕಂಬಿ(Molass)ಯನ್ನು ಹಾಕುವುದೂ ಉಂಟಂತೆ. ಜತೆಗೆ ಕೆಲವೊಂದು ಲವಣಗಳನ್ನು ಆಹಾರದಲ್ಲಿ ಬೆರಸಿಕೊಡುವ ಕ್ರಮವೂ ಉಂಟು. ಹೊರತು—ಹಿಂಡಿಯಂತಹ ಬೆಲೆಬಾಳುವ ಯಾವ ಪೌಷ್ಟಿಕ ವಸ್ತುವೂ ಅವಕ್ಕಿಲ್ಲ. ನಮ್ಮ ದೇಶದಲ್ಲಿಯೂ ಗೋವಿನ ಅಭಿವೃದ್ಧಿಯ ಕೂಗನ್ನು ಕೂಗುತಿದ್ದಾರೆ. ಸಂತತಿ ಉತ್ತಮಗೊಳಿಸುವ ಪ್ರಯತ್ನವೂ ನಡೆದಿದೆ. ಆದರೆ ಮೇವಿನ ಪ್ರಶ್ನೆಯನ್ನು ನಾವು ಬಗೆಹರಿಸಿಯೇ ಇಲ್ಲ. ಮೇವಿನ ಸ್ಥಳವಿರುವುದಕ್ಕಿಂತಲೂ ನೂರು ಪಾಲು ಹೆಚ್ಚಿಗೆ ದನಕರುಗಳು ನಮ್ಮವು. ಮೇವಿಗಾಗಿಯೇ ಮೇವನ್ನು ಬೆಳೆಯುವ ಪರಿಪಾಠವಾಗಲೀ,

ಹಸುರು ಹುಲ್ಲನ್ನು ಬೆಳೆಯುವ ಪರಿಪಾಠವಾಗಲೀ ನಮ್ಮಲ್ಲಿಲ್ಲ. ಪೌಷ್ಟಿಕ ವಸ್ತುವೆಂದರೆ ಹಿಂಡಿ, ಹತ್ತಿಯ ಕಾಳು. ಊಟಕ್ಕಿಲ್ಲದ ರೈತ ತಾನೇನು ತಿಂದಾನು, ದನಕರುಗಳಿಗೇನು ಕೊಟ್ಟಾನು?

ರತೆವೀಲನಲ್ಲಿ ಇರುವ ದನಗಳಲ್ಲಿ ಅತಿ ಹೆಚ್ಚಿಗೆ ಹಾಲು ಕೊಡುವ ದನವೆಂದರೆ ದಿನಕ್ಕೆ ಸರಾಸರಿ ಎಂಬತ್ತು ರಾತ್ಲುಗಳಷ್ಟು ಹಾಲು ಕೊಡುವಂಥದು. ಆತ ಒಂದು ಫ್ರೀಸಿಯನ್ ಗೂಳಿಯನ್ನೂ ಸಾಕಿದ್ದಾನೆ. ಅದೋ! ಕಾಡುಕೋಣದಷ್ಟು ಗಾತ್ರವಾಗಿತ್ತು; ಉಗ್ರವೂ ಆಗಿತ್ತು. ಈ ರೈತ ತನ್ನ ನಾಲ್ವರು ಕೆಲಸಗಾರರನ್ನು ಕಟ್ಟಿಕೊಂಡು ಇಷ್ಟು ಕೆಲಸಮಾಡುತಿದ್ದಾನಲ್ಲದೆ, ಒಂದು ಹಂದಿಯ ಮಂದೆಯನ್ನೂ ಸಾಕಿದ್ದಾನೆ. ಅನೇಕ ಕೋಳಿಗಳೂ ಇವೆ. ಅಲ್ಲದೆ ಒಂದು ತರಕಾರಿ ತೋಟವಿದೆ. ಚೀಸ್ ತಯಾರಿಸುವ ಯಂತ್ರವಿದೆ. ಅವನ ಸಹಾಯಕ್ಕೆ ಹೆಚ್ಚಿನ ಜನರೆಂದರೆ ಮಗಳೊಬ್ಬಳು. ಅವಳಿಗೆ ಆರೇಳು ಮಂದಿ ಎಳೆಯ ಮಕ್ಕಳಿದ್ದಾರೆ. ಹಾಲು ತುಂಬಿದ ಮನೆಯ ಸೊಂಪೆಲ್ಲ ಆ ಮುದ್ದು ಮಕ್ಕಳ ಮುಖದಲ್ಲಿ ಕಾಣುತ್ತಿದೆ.

ದನಕರುಗಳ ಸಂಗತಿಯನ್ನು ಕುರಿತು ಹೇಳುವಾಗ ಇನ್ನೊಂದು ಮುಖ್ಯ ವಿಷಯವನ್ನು ಗಮನಿಸಬೇಕು. ಜರ್ಮನರ ಆಕ್ರಮಣ ಕಾಲದಲ್ಲಿ ಹಾಲೆಂಡಿನ ದಕ್ಷಿಣ ಭಾಗದ ಯಾವತ್ತು ದನ, ಕರು, ಹಂದಿ ಮೊದಲಾದುವುಗಳನ್ನು ಜರ್ಮನರು ಕೊಂದು ತಿಂದು ಮುಗಿಸಿದ್ದರೆಂದು ಮಿಸ್. ಬಾಕೆಯವರು ನನಗೆ ಹೇಳಿದ್ದರು. "ಹಾಗಿದ್ದರೆ ನೀವು ಮೊದಲಿನಂತೆಯೇ ಹಾಲು ಮಾರುವ ಉದ್ಯಮವನ್ನು ಇಷ್ಟು ಬೇಗ ಸಾಧಿಸುವುದು ಹೇಗೆ ಸಾಧ್ಯವಾಯಿತು?" ಎಂದು ಕೇಳಿದಾಗ, "ಜೂಯಿಡರ್‌ಜೀ"ಯ ಉತ್ತರ ಭಾಗದಲ್ಲಿ ಸುದೈವಕ್ಕೆ ಅಷ್ಟು ಹಾನಿಯಾಗಿರಲಿಲ್ಲ. ಅಲ್ಲಿನ ದನಗಳ ಪೀಳಿಗೆಯಿಂದ ನಾವು ತಿರುಗಿ ದನಕರುಗಳ ಸಂಪತ್ತನ್ನು ಬೆಳೆಸಿಕೊಂಡಿದ್ದೇವೆ" ಎಂದರು. ರತೆವೀಲನನ್ನು ಪ್ರಶ್ನಿಸಿದಾಗ, ಆತ, ತಮ್ಮ ದನಗಳು ಮೂರು ವರ್ಷಕ್ಕೇನೆ ಕರು ಹಾಕುತ್ತವೆ ಎಂದಿದ್ದ. ಆದುದರಿಂದಲೇ ಇವತ್ತು ಹಾಲೆಂಡ್ ಸಮೃದ್ಧವಾದ ಹಾಲು ಹಯನಿನ ದೇಶವಾಗಿದೆ. ಯುದ್ಧವು ಮುಗಿದ ಏಳು ವರ್ಷಗಳ ಅವಧಿಯೊಳಗೆ, ಈ ಜನರು ಯುದ್ಧದಿಂದ ನಷ್ಟವಾದ ದನಕರುಗಳ ಸಂಪತ್ತನ್ನು ತಿರುಗಿ ದೊರಕಿಸಿಕೊಳ್ಳಲು ಎಷ್ಟೆಲ್ಲ ಶ್ರಮಿಸಿರಬಹುದು ಎಂಬುದನ್ನು ನಾವೇ ಊಹಿಸಬಹುದು.

ಈ ರೈತನ ಹಂದಿಯ ಮಂದೆಯನ್ನು ನೋಡಿದೆ. ಐವತ್ತು ಅರುವತ್ತು ಹಂದಿಗಳಿದ್ದವು. ಅವೂ ಪುಷ್ಟಿಯಾಗಿ ಬೆಳೆದ ಜೀವಿಗಳು. ಅವನು ಸಾಕಿರುವ ಫ್ರೀಸಿಯನ್ ಗೂಳಿಯೂ ಒಂದು ದೈತ್ಯಾಕಾರದ ಪ್ರಾಣಿ. ಅದೊಂದೇ ಈ ವರ್ಷ ಕೃತಕ ಗರ್ಭದಾನದಿಂದ ಹತ್ತು ಸಾವಿರ ಕರುಗಳಿಗೆ ತಂದೆಯಾಗಿದೆಯಂತೆ. ಅನಂತರ ಆತನು ನಮಗೆ ಬೆಣ್ಣೆ ತೆಗೆಯುವ ಯಂತ್ರಗಳನ್ನು, ಚೀಸ್ ಮಾಡುವ ಯಂತ್ರಗಳನ್ನು, ಚಳಿಗಾಲದಲ್ಲಿ ದನಗಳನ್ನು ಕಟ್ಟುವ ಶುಚಿಯಾದ ಕೊಟ್ಟಿಗೆಗಳನ್ನೆಲ್ಲ ತೋರಿಸಿದ. ಹಾಲೆಂಡಿನ ಒಬ್ಬ ಸಾಮಾನ್ಯ ರೈತ ನಮ್ಮ ಗೋತಜ್ಞರು ನಡೆಸುತ್ತಿರುವ ಕೆಲಸಕ್ಕಿಂತ ವಿಶೇಷ ಕೆಲಸವನ್ನು ಪ್ರತ್ಯಕ್ಷವಾಗಿ ತೋರಿಸಿಕೊಟ್ಟ. ಅವನಿಗೆ ವಂದನೆಯನ್ನು ಸಲ್ಲಿಸಿ ಹೊರಟೆವು.

ಆ ಸಂಜೆ ಅಲ್ಲಿನ ಕರ್ನ್ ಇನ್‌ಸ್ಟಿಟ್ಯೂಟಿನ ಡಾ। ಫರ್ವೆಯವರು ನನ್ನನ್ನು ನೋಡುವುದಕ್ಕೆ ಬಂದಿದ್ದರು. ನಾವಿಬ್ಬರೂ ಡಾ। ಯಾನ್‌ಬಾಲರವರ ಅಭ್ಯಾಸದ ಕೊಟಡಿಯಲ್ಲಿ ಕುಳಿತು ಒಂದು ತಾಸಿನ ತನಕ ಮಾತನಾಡಿದೆವು. ಈ ಕೊಟಡಿ ಸುಮಾರು ಇಪ್ಪತ್ತಡಿ ಉದ್ದಗಲದ, ಹನ್ನೆರಡು ಅಡಿ ಎತ್ತರದ ಕೋಣೆ. ಅದರ ನಾಲ್ಕು ಸುತ್ತಲೂ ನೆಲದಿಂದ ಮುಚ್ಚಿಗೆಯ ತನಕವೂ ಪುಸ್ತಕಗಳ ರಾಶಿಯಿತ್ತು! ಈ ಗ್ರಂಥಗಳೆಲ್ಲ ಕಲೆಗೆ ಸಂಬಂಧಿಸಿದವು; ಡಾ. ಯಾನ್‌ಬಾಲರ ಖಾಸಗಿ ಗ್ರಂಥ ಸಂಗ್ರಹ. ಡಾಕ್ಟರವರ ಉದ್ಯೋಗವೇನೆಂದು ನಾನು ಆಗ ವಿಚಾರಿಸಬೇಕಾಯಿತು. ಅವರು ಯುರೋಪಿನ ಕಲೆಗಳ ಇತಿಹಾಸಜ್ಞರು ಎಂದು ಅರಿತು ಕೊಂಡೆ.

ಡಾ।ಫರ್ವೆಯವರಿಗೂ ನನಗೂ ನಡೆದ ಭೇಟಿ ಅಲ್ಪ ಕಾಲದ್ದು. ಅವರು ಹಿಂದುಸ್ಥಾನಕ್ಕೆ ಬರುವ ಆಸೆಯಿಂದ ಈಗಾಗಲೇ ಹಿಂದೀ ಭಾಷೆಯನ್ನು ಬರೆಯುವುದಕ್ಕೆ, ಮಾತನಾಡುವುದಕ್ಕೆ ಕಲಿತು ಕೊಂಡಿದ್ದರು. ನಮ್ಮ ಮಾತುಗಳು-ಭಾರತ ದೇಶದ ಗೊಂಬೆಯಾಟ, ತೊಗಲು ಗೊಂಬೆಯಾಟ, ಛಾಯಾ ನಾಟಕಗಳ ಕುರಿತಾಗಿ ನಡೆದವು. ಅವರು ಅನಂತರವೂ ನನಗೊಂದು ಪತ್ರ ಬರೆದಿದ್ದಾರೆ. ಅದರಲ್ಲಿ ತಮ್ಮ ನಗರದ ರಿಕ್ಸ್ ಮ್ಯೂಸಿಯಮಿಗೆ ಮೈಸೂರಿನ ತೊಗಲು ಗೊಂಬೆಗಳನ್ನು ಅವಶ್ಯವಾಗಿ ದೊರಕಿಸಿಕೊಡಬೇಕೆಂದು ಬರೆದಿದ್ದಾರೆ. ಅಲ್ಲದೆ ಅವುಗಳ ಆಟದ ವಿಚಾರದಲ್ಲಿ ಲೇಖನಗಳನ್ನು ಒದಗಿಸಬೇಕೆಂದಿದ್ದಾರೆ. ನನ್ನ ಪ್ರಯತ್ನ ಇನ್ನೂ ಸಫಲವಾಗಲಿಲ್ಲ. ಇಂಥ ವಿಷಯಗಳಲ್ಲಿ ಆ ತರುಣ ವಿದ್ವಾಂಸರಿಗಿದ್ದ ಉತ್ಸಾಹ ಹೇಳತೀರದು.

ಮರುದಿನ ನಾನು ಹದಿನೈದು ಮೈಲು ದೂರದ ಹೇಗ್ ನಗರವನ್ನು ನೋಡಲು ಹೋದೆ. ಇಂಗ್ಲಿಷಿನಲ್ಲಿ ಅದಕ್ಕೆ ಹೇಗ್ ಎಂಬ ಹೆಸರಿದೆ; ಡಚ್ ಭಾಷೆಯಲ್ಲಿ "ಡೆನ್ ಹಾಗ್" ಎಂದು ಕರೆಯುತ್ತಾರೆ. ಅಂತರ್ರಾಷ್ಟ್ರೀಯ ನ್ಯಾಯಾಲಯ ಇರುವುದು ಅಲ್ಲಿಯೇ. ಲೋಕಪ್ರಸಿದ್ಧ ಹೇಗ್ ಕನ್ವೆನ್‌ಷನ್ ನಡೆದುದು ಅಲ್ಲಿಯೇ. ಅದು ಸುಂದರವಾದ ನಗರ. ಅಲ್ಲಲ್ಲಿ ಕಾಲುವೆಗಳಿವೆ. ಭವ್ಯ ಕಟ್ಟಡಗಳು ತುಂಬಿಕೊಂಡಿವೆ. ಜನ ಸಂದಣಿಯೂ ಮಿತವಾದುದು. ನಾನು ಮೊದಲು ಹೇಗ್‌ನ್ಯಾಯಾಲಯದ ಕಟ್ಟಡವನ್ನು ನೋಡೋಣವೆಂದು ಯೋಚಿಸಿ ಅಲ್ಲಿಗೆ ಹೋದರೆ, ಆ ದಿನವೇ ಇರಾನಿನ ಡಾ। ಮುಸಾದಿಕರ ಎಣ್ಣೆ ವಿವಾದದ ನ್ಯಾಯವು ತನಿಖೆಗೆ ಬಂದಿತ್ತು. ಕೋರ್ಟಿನ ಸುತ್ತಲೂ ಮಿಲಿಟರಿ ಪಹರೆ ಇತ್ತು. ಹಾಗಾಗಿ ದೂರದಿಂದಲೇ ಆ ಕಟ್ಟಡ ನೋಡಿ ಮರಳಿ ಬಂದೆ. ಅನಂತರ ಹೋದುದು-ಅಲ್ಲಿನ ಪ್ರಸಿದ್ಧವಾದ ಮಾರ್ಟಿಸ್‌ಮ್ಯೂಸಿಯುಮಿಗೆ. ಈ ಚಿತ್ರಶಾಲೆ ಚಿಕ್ಕದಾದರೂ, ಮಧ್ಯಯುಗದ ಅತ್ಯಮೂಲ್ಯ ಚಿತ್ರಗಳನೇಕವಿವೆ. ರೆಂಬ್ರಾಂಡ್, ಫ್ರಾನ್ ಹಾಲ್ಸ ಮೊದಲಾದವರ ಹಲವು ಭವ್ಯ ಕೃತಿಗಳಿವೆ. ರೆಂಬ್ರಾಡ್‌ನ "ಪೌರ್ವಾತ್ಯನೊಬ್ಬನ ಚಿತ್ರ"ಬಲು ಸುಂದರವಾದುದು. ಬಲು ಗಂಭೀರವಾದ ಮುದುಕನೊಬ್ಬನ ಚಿತ್ರವದು. ಮೈಬಣ್ಣ, ಆಕಾರ, ಉಡುಗೆಗಳಿಂದ ಆತ ಇರಾನಿನವನೋ ತುರ್ಕಿಯವನೋ ಆಗಿ ಕಾಣಿಸುತ್ತಾನೆ. ತಲೆಗೆ ಬಹು ದೊಡ್ಡ ರುಮಾಲಿದೆ. ಅದರ ಮೇಲೆ ಚಿನ್ನ,ರತ್ನಗಳಿಂದ ಬಿಗಿದೊಂದು ಸರಪಣಿಯಿದೆ. ಅವನ ಇನ್ನೊಂದು ಚಿತ್ರವು"ದೇವಾಲಯದಲ್ಲಿ ಸೈಮನ್" ಎಂಬುದು.

ಹಳೆಗಾಲದ ದೇವಾಲಯದ ಮುಂದೆ ಬಾಲ ಯೇಸು, ಮೇರಿ ಕುಳಿತಿದ್ದಾರೆ. ದೈವತ್ವದ ಬೆಳಕು ಸುತ್ತಲೂ ಪ್ರಸಿರಿಸಿದೆ. ನೇರಳೆ ನಿಲುವಂಗಿ ತೊಟ್ಟ ಸೈಮನನು ವಿಸ್ಮಯ, ಗೌರವಗಳಿಂದ ಸೆರಗೊಡ್ಡಿ ನಿಂತಿದ್ದಾನೆ. ರೆಂಬ್ರಾಂಡನ 'ಸ್ಟಿಲ್‌ಲೈಫ್'(ಸ್ಥಿತ ಜೀವಗಳ) ಚಿತ್ರಗಳು ಅನೇಕ ಇವೆ. ಇವತ್ತು ಈ ಮಾತನ್ನು ಜಡವಸ್ತುಗಳ ಗುಂಪಿಗೆ ಹೇಳುತ್ತಾರಾದರೂ ಆಗಿನ ಬಳಕೆಯಲ್ಲಿ--ತರಕಾರಿ, ಕೊಂದ ಪ್ರಾಣಿಗಳು-ಇಂಥವುಗಳ ಚಿತ್ರಕ್ಕೆ ಮಾತ್ರ ಆ ಹೆಸರಿತ್ತು. ರೆಂಬ್ರಾಂಡ್‌ನ ಚಿತ್ರಗಳಲ್ಲಿ-ಪಕ್ಷಿ, ತರಕಾರಿ, ವಿವಿಧ ಹಣ್ಣುಗಳ ಸಮೂಹಗಳನ್ನು ಕಾಣಬಹುದು. ಅದರಲ್ಲಿಯೂ ನವಿಲಿನ ಮೈಯ ಲಲಿತ ರೇಖೆಗಳನ್ನೂ ಬಣ್ಣಗಳನ್ನೂ ಆತ ಚಿತ್ರಿಸಿದ ಬಗೆಯು ಅನುಪಮವಾಗಿದೆ.

ಅಲ್ಲಿನ ಇನ್ನೂ ಕೆಲವು ಚಿತ್ರಗಳನ್ನು ಕಂಡಾಗ, ರೆಂಬ್ರಾಂಡನಿಗೆ ಶರೀರ ರಚನೆಯ ವಿಚಾರದಲ್ಲಿ ಇದ್ದ ಜ್ಞಾನ ಅದ್ಭುತವೆಂದು ತಿಳಿಯಿತು. ಅಂಥ ಎರಡು ಚಿತ್ರಗಳಿವೆ. ಎರಡರಲ್ಲೂ ಮೃತ ಶರೀರವನ್ನು ವೈದ್ಯರು ಕತ್ತರಿಸಿ ನೋಡುತ್ತಿದ್ದಾರೆ. ನಾಲ್ಕು ಸುತ್ತಲೂ ಕುತೂಹಲಭರಿತರಾದ ವೈದ್ಯರುಗಳು ನಿಂತಿದ್ದಾರೆ. ಪ್ರತಿಯೊಬ್ಬನ ಮುಖದಲ್ಲೂ ವೈಜ್ಞಾನಿಕ ಕುತೂಹಲವಿದ್ದಂತೆ ಯೇ, ಶಸ್ತ್ರ ಚಿಕಿತ್ಸೆಯ ವಿಚಾರದಲ್ಲಿ ಆಗಿನ ಚರ್ಚುಗಳಿಂದ ಬಂದ ಪ್ರತಿ ಭಟಿಯ ಪರಿಣಾಮವಾಗಿ ಉಂಟಾದ ಭಯ ಭೀತಿಗಳೂ ಕಾಣುತ್ತಿವೆ.

ಈ ಮಂದಿರದಲ್ಲಿ ಸ್ವಲ್ಪ ಹೊತ್ತನ್ನು ಕಳೆದು ಊರಲ್ಲಿ ಅಡ್ಡಾಡಿದೆ. ಅನಂತರ ರೈಲು ಬಂಡಿಯನ್ನೇರಿ ಲೈಡನ್ನಿಗೆ ಮರಳಿ ಬಂದೆ. ಹೆಚ್ಚುಕಡಿಮೆ ಈ ದೇಶದಲ್ಲಿ ನಾನು ನೋಡಬೇಕೆಂದಿದ್ದ ಮುಖ್ಯ ಸಂಗತಿಗಳನ್ನು ನೋಡಿ ದಂತಾಯಿತು. ಈ ಸಂದರ್ಭದಲ್ಲಿ ನನ್ನ ನಿವಾಸದ ಒಡತಿಯಾದ ಮಿಸೆಸ್ ಯಾನ್‌ಬಾಲರ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬಹುದು. ನಮ್ಮ ದೇಶದ ಬಡತನವನ್ನು ಕುರಿತು ಚರ್ಚಿಸುವಾಗ ಅವರು ತುಂಬಾ ಸಹಾನುಭೂತಿಯಿಂದ ಕೇಳುತ್ತಿದ್ದರು. "ನಿಜ, ಹಸಿವೇನೆಂದು ನಮಗೆ ಚೆನ್ನಾಗಿ ತಿಳಿಯುತ್ತದೆ. ಹಿಂದೆ ನಮ್ಮ ಜನರಿಗೆ ಅದರ ಅರಿವಿಲ್ಲದಿದ್ದರೂ ಜರ್ಮನರು ಬಂದು ನಮಗೆ ಅದನ್ನು ಚೆನ್ನಾಗಿ ಕಲಿಸಿದ್ದಾರೆ" ಎಂದರು;ತಮ್ಮ ನಾಡಿನ ಆರ್ಥಿಕ ವಿಚಾರದಲ್ಲಿ ವಿವೇಕಪೂರ್ಣ ಸಂಭಾಷಣೆ ನಡೆಯಿಸಿದರು. ಅವರಿಗಾಗಲೀ ನನ್ನ ಸ್ನೇಹಕ್ಕೆ ದೊರೆತ ವಿದೇಶೀಯ ಮಿತ್ರರಿಗಾಗಲೀ ಭಾರ ತದ ವಿಷಯದಲ್ಲಿ ತುಂಬಾ ಸಂದೇಹ."Will India go Communist?" ಎಂದು ಕೇಳುವವರೇ ಎಲ್ಲ. ನೆಹರೂರವರ ತಾಟಸ್ಥ್ಯನೀತಿ ಅವರೊಬ್ಬರಿಗೂ ಅರ್ಥವಾಗುವಂತಿಲ್ಲ. ಅಲ್ಲದೆ ಮಹಾ ಚುನಾವಣೆಯಲ್ಲಿ ಅನೇಕ ಕಮ್ಯು ನಿಸ್ಟರು ನಮ್ಮ ದೇಶದಲ್ಲಿ ಎಸೆಂಬ್ಲಿಗೆ, ಕೇಂದ್ರ ಪಾರ್ಲಿಮೆಂಟಿಗೆ ಆರಿಸಿ ಬಂದ ವಾರ್ತೆಯಿಂದಾಗಿ ಅವರಿಗೆ ಬೆದರಿಕೆ. ಮೂರನೆಯ ಮಹಾಯುದ್ಧ ಬಂದಲ್ಲಿ, ಯಾವೊಂದು ದೇಶವೂ ತಟಸ್ಥವಾಗಿ ಉಳಿಯಲು ಶಕ್ಯವಿಲ್ಲ— ಎಂಬುದು ಅವರ ಭಾವನೆ. ಕಮ್ಯುನಿಸ್ಟ್ ರಾಷ್ಟ್ರಗಳಿಗೂ ಉಳಿದವರಿಗೂ ಯುದ್ಧ ಪ್ರಾಪ್ತವಾದಲ್ಲಿ ಪಶ್ಚಿಮ ಯೂರೋಪು ಎಂದೂ ರಶ್ಯವನ್ನು ಸೇರ ಲಾರದು. ಭಾರತದ ಅಪಾರ ಜನ ಸಂಖ್ಯೆಯು ರಶ್ಯದ ಹತೋಟಿಗೆ ದೊರಕಿ ದಲ್ಲಿ ಮಾತ್ರ, ಪ್ರಪಂಚದ ರಾಷ್ಟ್ರಗಳ ಶಕ್ತಿಯ ತೋಲನವು, ಪ್ರಜಾಪ್ರಭುತ್ವ

ರಾಷ್ಟ್ರಗಳಿಗೆ ಪ್ರತಿಕೂಲವಾದೀತು. ಅಲ್ಲದೆ, ರಶ್ಯವು ಯುದ್ಧದಲ್ಲಿ ಗೆದ್ದರೂ ಪೌರ್ವಾತ್ಯ ರಾಷ್ಟ್ರಗಳ ತಾಟಸ್ಥ್ಯ ನೀತಿಯು ಕ್ಷಣಕಾಲವೂ ಉಳಿಯಲಾರದು ಎಂಬುದು ಅವರ ವಿಚಾರಸರಣಿಯೆನಿಸುತ್ತದೆ.

ಯಾನ್ ಬಾಲ್ ರವರ ಮನೆಯಲ್ಲಿ, ಲೈಡನ್ ನಗರದಲ್ಲಿ, ನಾನು ಕಳೆದ ನಾಲ್ಕು ದಿನಗಳು ಶಾಂತಿ, ಆನಂದದ ದಿನಗಳಾಗಿದ್ದವು. ಮಿಸೆಸ್ ಯಾನ್ ಬಾಲರವರ ವಿದ್ಯೆ ಸಂಸ್ಕಾರಗಳು ಹೆಚ್ಚಿನವು. ಸಂಗೀತ, ಸಾಹಿತ್ಯ ಕಲೆಗಳಲ್ಲೆಲ್ಲ ಹೆಚ್ಚಿನ ಅಭಿರುಚಿ ಅವರಿಗೆ. ಆರ್ಥಿಕ ವಿಚಾರಗಳಲ್ಲೂ ರಾಜನೀತಿಯ ವಿಚಾರದಲ್ಲೂ ಅವರು ಸಾಕಷ್ಟು ತಿಳಿದವರು. ಬಾಕೆಯವರು ಕನ್ನೂರು ಎಂದು ಮಮತೆಯಿಂದ ಲೈಡನ್ ವಿಚಾರದಲ್ಲಿ ಹೇಳಿದ್ದ ಮಾತುಗಳ ಅಭಿಮಾನದ ಮಾತುಗಳಾದರೂ, ನಿಜವಾದ ಮಾತುಗಳೆನಿಸಿದುವು.

# ೧೪. ಬೆಲ್ಜಿಯಮಿನಲ್ಲಿ

ಲೈಡನ್ ನಗರದಿಂದ ಬೆಲ್ಜಿಯಮಿನ ರಾಜಧಾನಿಯಾದ ಬ್ರಸೆಲ್ಸಿಗೆ ಮೂರು ತಾಸುಗಳ ಹಾದಿ. ಬೆಳಗಿನ ಎಂಟೂವರೆ ಘಂಟೆಗೆ ಹೊರಟ ನಾನು ಮಧ್ಯಾಹ್ನ ಹದಿನೆರಡಕ್ಕೆ ಮುಂಚಿತವಾಗಿ ಬ್ರಸೆಲ್ಸ್-ಲಕ್ಸೆಂಬರ್ಗ್ ಸ್ಟೇಶನನ್ನು ಸೇರಿದೆ. ಲೈಡನ್ ಸರಿದ ಬಳಿಕ ಹೇಗ್, ರೋಟರ್‌ಡಾಮ್ ನಗರಗಳು ಒಂದ ಕ್ಕೊಂದು ಹೊಂದಿಕೊಂಡೇ ಕಾಣಿಸುತ್ತವೆ. ಅನಂತರ ನಮ್ಮ ದಾರಿ ಅನೇಕ ಹೊಲ, ಮನೆಗಳನ್ನೂ ಸುಂದರವಾದ ನಗರಗಳನ್ನೂ ಹಾದುಹೋಗುತ್ತದೆ. ಒಂದು ತಾಸಿನ ಒಳಗೆ ಬೆಲ್ಜಿಯಮಿನ ಗಡಿನಾಡೂ ಬರುತ್ತದೆ. ಅನಂತರವೂ ಜನ ನಿಬಿಡವಾದ ದೇಶಭಾಗ ಕಾಣಿಸುತ್ತದೆ. ಎಲ್ಲೆಲ್ಲಿಯೂ ಸಸ್ಯಭರಿತವಾದ ಹೊಲಗಳು, ಹಾದಿಗಳು, ಸಾಲು ಮರಗಳು, ನಗರಗಳು, ನಗರ ವಿಸ್ತರಣ ಗಳು. ಸಣ್ಣ ದೊಡ್ಡ ಊರುಗಳಲ್ಲೆಲ್ಲ ಅನೇಕ ಬಗೆಯ ಕಾರ್ಖಾನೆಗಳನ್ನು ದಾರಿಯುದ್ದಕ್ಕೂ ಕಾಣಬಹುದು. ನಮಗೆ ದಾರಿಯಲ್ಲಿ ಸಿಗುವ ಒಂದು ದೊಡ್ಡ ನಗರ ಎಂಟ್‌ವರ್ಪ್. ಎಂಟ್‌ವರ್ಪ್ ಈ ದೇಶದ ಒಂದು ದೊಡ್ಡ ರೇವೂ ಅಹುದು. ದಾರಿಯ ನಗರಗಳಲ್ಲಿ ಹಳೆಯ ಶೈಲಿಯ ದೊಡ್ಡ ದೊಡ್ಡ ಚರ್ಚುಗಳು ಕಾಣಸಿಗುತ್ತವೆ. ಬ್ರಸೆಲ್ಸ್, ಗೆಂಟ್ ಮೊದಲಾದ ನಗರಗಳು ಪ್ರಾಚೀನ ಕೆಥೋಲಿಕ್ ಚರ್ಚು ಕಟ್ಟಡಗಳಿಗೆ ಹೆಸರಾದುವು. ನಾನು ಈ ಎರಡು ನಗರಗಳನ್ನು ನೋಡುವುದಕ್ಕಷ್ಟೆ ಸಂಕಲ್ಪಿಸಿದ್ದೆ.

ಬ್ರಸೆಲ್ಸ್ ಸೇರಿದವನೇ, ಸಮೀಪದ ಹೋಟೆಲೊಂದರಲ್ಲಿ ಸ್ಥಳ ಗೊತ್ತು ಮಾಡಿ, ಊಟ ಮುಗಿಸಿ ಅಲೆದಾಡತೊಡಗಿದೆ. ಹಾಲೆಂಡಿನ ಹವೆಗೂ ಇಲ್ಲಿನ ಹವೆಗೂ ತುಂಬಾ ವ್ಯತ್ಯಾಸವಾಗಿತ್ತು. ಮಧ್ಯಾಹ್ನದ ಬಿಸಿಲಿನ ತಾಪ ಜೋರಾ ಗಿಯೇ ಇತ್ತು. ಬೆಲ್ಜಿಯಮಿನ ರಾಜಧಾನಿಯಾದ ಈ ನಗರ, ಬಹು ವಿಶಾಲವಾ ದುದು. ದೇಶ ಕಿರಿದು. ಜನರ ದಟ್ಟಣಿ ಹೆಚ್ಚು. ಹದಿನೆರಡು ಸಾವಿರ ಚದರ ಮೈಲು ಭೂಮಿಯಲ್ಲಿ ಎಂಟೂವರೆ ಮಿಲಿಯ ಜನ ವಾಸಿಸುತಿದ್ದಾರೆ. ಸು ಮಾರು ಒಂದು ಮಿಲಿಯದಷ್ಟು ಜನರು ಬ್ರಸೆಲ್ಸ್ ನಗರ ಒಂದರಲ್ಲೇ ವಾಸಿ ಸುತ್ತಾರೆ. ನಗರದ ಬೀದಿಗಳು ತುಂಬ ಅಗಲವಾದುವು. ಅವುಗಳ ಮಗ್ಗು ಲಲ್ಲಿ ಅನೇಕ ಮಧ್ಯಯುಗದ ಮತ್ತು ಪುರಾತನ ಕಟ್ಟಡಗಳಿವೆ. ನಗರದ ಭೂಭಾಗ ಸಮತಟ್ಟಾಗಿಲ್ಲ. ಕೆಲವು ತಗ್ಗು, ಕೆಲವು ಏರು ಆಗಿರುವುದರಿಂದ

ಎತ್ತರದ ಪ್ರದೇಶದಲ್ಲಿ ಹೋಗಿನಿಂತರೆ, ನಗರದ ವಿಸ್ತಾರ, ವೈಭವ ಕಾಣಿಸು ತ್ತದೆ. ನಾನು ಕಾಲ್ನಡೆಯಿಂದಲೇ ಎರಡು ದಿನಗಳ ಕಾಲವನ್ನು ಗೊತ್ತುಗುರಿ ಇದ್ದೋ ಇಲ್ಲದೆಯೋ ಎಂಬಂತೆ ಅಲೆದಾಡಿದೆ. ಇಲ್ಲಿನ ಪ್ರೇಕ್ಷಣೀಯ ಮಂದಿರ ಗಳಲ್ಲಿ ಅನೇಕ ಕಟ್ಟಡಗಳಿವೆ ಎಂದೆ. ನಗರ ಮಧ್ಯದಲ್ಲಿರುವ "ಪೇಲೇಸ್ ಓಫ್ ಜಸ್ಟೀಸ್" ಅಂಥವುಗಳಲ್ಲೊಂದು. ಅಲ್ಲಿಗೆ ಹೋಗುವ ಹಾದಿ ಬೀದಿ ಗಳು ತೀರ ವಿಶಾಲವಾದವು. ಈ ಮಂದಿರದ ಎದುರಿಗೆ ಬಹು ದೊಡ್ಡದಾದ ಒಂದು ಅಂಗಣವಿದೆ. ಅಂಗಣದ ಒಂದು ಭಾಗದಲ್ಲಿ ತಗ್ಗು ಭೂಮಿ. ಹೀ ಗಾಗಿ ಅಲ್ಲಿಂದ ಕಾಣಿಸುವ ನಗರದ ವಿಹಂಗಮ ನೋಟ ರಮಣೀಯವಾ ದುದು. ಅನೇಕ ಚರ್ಚುಗಳ ಕೊತ್ತಳಗಳು ಉಳಿದ ಕಟ್ಟಡಗಳಿಗಿಂತ ಎತ್ತರ ವಾಗಿ ತಲೆಯೆತ್ತಿಕೊಂಡು ಈ ದೇಶದ ಇತಿಹಾಸದಲ್ಲಿ ಕೆಥೋಲಿಕ್ ಧರ್ಮದ ವರ್ಚಸ್ಸು, ಪೋಪರ ವರ್ಚಸ್ಸು ಎಷ್ಟೊಂದು ಇದ್ದಿರಬೇಕು ಎಂದು ತೋರಿ ಸುತ್ತವೆ. "ಪೇಲೇಸ್ ಒಫ್ ಜಸ್ಟಿಸ್" ಇಲ್ಲಿನ ವರಿಷ್ಠ ನ್ಯಾಯಾಲಯ. ಅದು ವಿಶಾಲವಾದ, ಉನ್ನತವಾದ ಕಟ್ಟಡ. ಇದಿರಿನ ಸ್ತಂಭಗಳು ದೆವ್ವನಂತವು. ಈ ಉನ್ನತ ಮಂದಿರದ ಮೇಲೆ ರಂಜಿಸುವ ಗೋಲಾಕೃತಿಯ ಶಿಖರ ನಗರದ ಯಾವಾವ ಮೂಲೆಯಿಂದಲೂ ಕಾಣಿಸುತ್ತದೆ. ಮಂದಿರವನ್ನು ಹೊಕ್ಕೊಡ ನೆಯೇ ವಿಶಾಲವಾದ ಚಾವಡಿಯೊಂದು ಎದುರಾಗುತ್ತದೆ. ಆ ಚಾವಡಿಯಲ್ಲಿ ಗ್ರೀಸ್ ಶಾಸನ ಕರ್ತರ ಭವ್ಯ ಪ್ರತಿಮೆಗಳಿವೆ. ಒಳಗೆ ಹೋಗಲು ಇರುವ ಮಹಾದ್ವಾರ ಮಹಾ ದ್ವಾರವೇ ಆಗಿದೆ. ಅದರೊಳಕ್ಕೆ ಕಾಲಿಟ್ಟರೆ ಬಹು ವಿಶಾಲವೂ ಉನ್ನತವೂ ಆದ ಸಭಾಸದನ ಬರುತ್ತದೆ. ಬರಿದಾದ ಸಭಾಸದನ! ಚೌಕವಾದ ಸ್ತಂಭಗಳಸಾಲುಗಳಿವೆ. ಒಂದೊಂದು ಸ್ತಂಭವೂ ನಾಲ್ಕಾರು ಅಡಿ ದಪ್ಪ; ಅಂತಹ ನಾಲ್ವತ್ತು ಐವತ್ತು ಅಡಿ ಉನ್ನತವಾಗಿ ಸ್ತಂಭಗಳು ಮೇಲಿನ ಅಂತಸ್ತನ್ನು ಎತ್ತಿ ಹಿಡಿಯುತ್ತವೆ. ಸಭಾಸದನದ ಮಧ್ಯ ನಿಂತರೆ ಶಿಖರದ ಗೋಲಕದ ಗಾಜಿನಿಂದ ಆಕಾಶ ಕಾಣಿಸುತ್ತದೆ. ನೆಲವನ್ನೆಲ್ಲ ಹಾಲು ಗಲ್ಲಿನಿಂದ ಹಾಸಿದ್ದಾರೆ. ಆ ಮಂದಿರದಲ್ಲಿ ಒಮ್ಮೆ ಹೊಕ್ಕು ನಿಂತುದಾದರೆ— "ಇದು ನ್ಯಾಯದ ಮನೆ. ನ್ಯಾಯ ದೊಡ್ಡದು. ಅದರ ಮುಂದೆ ನಮ್ರರಾಗಿ ರುವ" ಎನ್ನುವ ಬೋಧೆ ಆಗುವಂತಿದೆ ಈ ಸಭಾಂಗಣದಿಂದ ಮುಂದು ವರಿದು ಸರಿದಲ್ಲಿ, ನಮ್ಮ ಎಡ ಬಲಗಳಲ್ಲಿ ಇನ್ನಷ್ಟು ವಿಶಾಲ ಚಾವಡಿಗಳು ಬರುತ್ತವೆ. ಬೆಲ್ಜಿಯಮಿನ ಹೈಕೋರ್ಟು ಮೊದಲಾದ ನ್ಯಾಯ ಸಂಸ್ಥೆಗಳು

ಕೆಲಸಮಾಡುವ ಮಂದಿರದ ಭಾಗಗಳಿವೆ.

ಈ ನ್ಯಾಯಾಲಯಕ್ಕೆ ತುಸು ಸಮೀಪವಾಗಿ "ಡೊಮೆ ಸಬಲಾನ್" ಎಂಬ ಗಾಥಿಕ್ ಶೈಲಿಯ ಒಂದು ಪುರಾತನ ಇಗರ್ಜಿ ಇದೆ. ಅದರ ದ್ವಾರಗಳು, ಕಮಾನುಗಳು, ಇಳಿಮಾಡುಗಳು ಹಳೆಗಾಲದ ವಾಸ್ತು ಶೈಲಿಯ ಸೌಂದರ್ಯವನ್ನು ತೋರಿಸುತ್ತವೆ. ಒಳಗಡೆ ಹೋಗಿ ನಿಂತರೆ ಮಂದಿರವು ಅಷ್ಟೊಂದು ವಿಶಾಲವಾಗಿಲ್ಲವಾದರೂ, ನಾಲ್ಕು ಕಡೆಗಳಲ್ಲಿ ನಟ್ಟಿರುವ ಸ್ಟೈಂಡ್ ಗ್ಲಾಸ್ ಗಾಜಿನ ಕಿಟಕಿಗಳು ರಮಣೀಯವಾಗಿ ಕಾಣುತ್ತವೆ. ಒಂದೊಂದೂ ನೋಡುವುದಕ್ಕೆ ಅಷ್ಟೊಂದು ಚೆಲುವಿನ ವರ್ಣವರ್ಣದ ಪ್ರತಿರೂಪಗಳನ್ನು ತೋರಿಸುತ್ತದೆ.

ಇಲ್ಲಿನ ಇನ್ನೊಂದು ಪ್ರೇಕ್ಷಣೀಯ ಚರ್ಚ-ಸೇನ್ ಮಿಶೇಲ್. ಈ ಇಗರ್ಜಿಯನ್ನು ಬಹು ಎತ್ತರವಾದ ಪಾಯದ ಮೇಲೆ ಕಟ್ಟಿದ್ದಾರೆ. ಎದುರಿಗೆ ವಿಶಾಲ ಅಂಗಣವಿದೆ. ಅಲ್ಲಿಂದ ಮಂದಿರದ ಮುಂಭಾಗಕ್ಕೆ ಹೋಗಲು ಅಗಲವಾದ ನಾಲ್ವತ್ತು-ಐವತ್ತು ಸೋಪಾನಗಳುಳ್ಳ ಮಾರ್ಗ. ಈ ಕಟ್ಟಡದ ಮುಂಭಾಗವು ಪೇರಿಸ್‌ನ ನೋಟರ್‌ಡಾಮ್ ಚರ್ಚಿಗಿಂತಲೂ ಲಲಿತವಾಗಿ ಕಾಣಿಸುತ್ತದೆ. ಎದುರಲ್ಲಿ-ಆ ಕಡೆ ಈ ಕಡೆ, ಸುಮಾರು ಇನ್ನೂರು ಅಡಿಗಳಷ್ಟು ಎತ್ತರವಾಗಿರುವ ಎರಡು ಕೊತ್ತಳಗಳಿವೆ. ಅವುಗಳ ನಡುವೆ ಹಾಯುವ ನೀಳವಾದೊಂದು ಮಾಡು ಅವನ್ನು ಕೂಡಿಸಿ ಹಿಡಿಯುತ್ತದೆ. ಕಟ್ಟಡದ ಅಲಂಕಾರಕ್ಕಾಗಿ ಬಳಸಿದ ಲಂಬರೇಖೆಗಳು, ಕಿಟಕಿ ಬಾಗಿಲುಗಳಿಗೆ ಬಳಸಿದ ಗಾಥಿಕ್ ಕಮಾನುಗಳು, ತ್ರಿಕೋಣಾಕೃತಿಯ ಮಾಡು-ಬಹುವಾಗಿ ಮೇಳವಿಸುತ್ತವೆ. ಕಟ್ಟಡದ ಎದುರಿಗೆ ತುಸು ದೂರ ಹೋಗಿ ನಿಂತು ನೋಡಿದರೆ, ವಿಶಾಲವಾದ ಸುಂದರ ಬಾನು ಅದರ ಹಿನ್ನಲೆಯಾಗುತ್ತದೆ. ನಾನು ಹೋದ ವೇಳೆಗೆ ಅದರ ಹೊರ ಮಗ್ಗುಲಿನ ದುರಸ್ತಿ ನಡೆಯುತ್ತಿತ್ತು. ಕದವನ್ನಿಕ್ಕಿಕೊಂಡಿದ್ದರು. ಒಳಗೆ ಹೋಗುವುದಾಗದೆ ಹೊರಗಿನಿಂದಲೇ ಸುಳಿದಾಡಿದೆ. ಇಲ್ಲಿನ ಸ್ಟೈಂಡ್ ಗ್ಲಾಸ್ ಕಿಟಕಿಗಳು ಇನ್ನಷ್ಟು ಗಾತ್ರದುವು; ರಮಣೀಯತೆಯುಳ್ಳವು. ಹೊರಗಿಂದ ಕಂಡ ನನಗೆ ಅವುಗಳ ಪೂರ್ಣ ಸೊಗಸು ತಿಳಿಯುವಂತಿರಲಿಲ್ಲ.

ಇನ್ನು ಹಾಗೆಯೇ-ನನ್ನ ಅಲೆದಾಟದಲ್ಲಿ ಊರ ಅರಮನೆಯನ್ನು ಕಂಡೆ. ಎರಡು ಮೂರು ಸುಂದರವಾದ ಉದ್ಯಾನಗಳನ್ನು ನೋಡಿದೆ. ಅವುಗಳಲ್ಲಿ

ಎರಡು ಉದ್ಯಾನಗಳು, ಸಮತಟ್ಟಿಲ್ಲದ ನೆಲದ ಮೇಲೆ ಮಾಡಿದುವು. ಗುಡ್ಡದ ಮಗ್ಗುಲನ್ನು ಕಡಿದು, ಅಂತರ ಅಂತರವಾಗಿ ಮಾಡಿ, ವಿವಿಧ ಅಂತರಗಳನ್ನು ಗಿಡ ಮರಗಳಿಂದ ಚೆಲುವುಗೊಳಿಸಿದ್ದಾರೆ. ಅಂಥ ಒಂದು ತೋಟದಲ್ಲಿ ಆಲಸಿಯಾಗಿ ಎರಡು ತಾಸನ್ನು ಕಳೆದೆ. ಅಲ್ಲಿ ಗಿಡಗಳ ಚೆಲುವಿಗೆ ಹೊಂದು ವಂತೆ, ಕಾರಂಜಿಗಳೂ ಶಿಲ್ಪಗಳೂ ಇವೆ.

ಈ ದೇಶದ ಪ್ರಸಿದ್ಧ ಇನ್ನೊಂದು ಚರ್ಚ್‌ನ್ನು ಬಣ್ಣಿಸುತ್ತೇನೆ. ಇದು ಬ್ರಸೆಲ್ಸ್ ನಗರದ್ದಲ್ಲ. ಬ್ರಸೆಲ್ಸ್‌ನಿಂದ ಸುಮಾರು ಇಪ್ಪತ್ತು ಮೂವತ್ತು ಮೈಲು ದೂರದಲ್ಲಿರುವ ಗೆಂಟ್ ಎಂಬ ನಗರ ಎಷ್ಟೋ ಶತಮಾನಗಳಿಂದ ರೋಮನ್ ಕೆಥೋಲಿಕ್ ಧರ್ಮದ ಕೇಂದ್ರವಾಗಿ ಬಂದಿದೆ. ಬ್ರಸೆಲ್ಸ್‌ನಿಂದ ಅಲ್ಲಿಗೆ ಮುಕ್ಕಾಲು ತಾಸಿನ ರೈಲು ದಾರಿ. ಆ ಊರಿನಲ್ಲಿರುವ ಚರ್ಚುಗಳು ಒಂದೆರಡಲ್ಲ; ಹಲವು. ಅವುಗಳಲ್ಲಿ ಮುಖ್ಯವಾದುದು ಸೈಂಟ್‌ಬಾಫ್ಸ್. ಇದನ್ನು ಹದಿಮೂರನೆಯ ಶತಮಾನದಲ್ಲಿ ಕಟ್ಟಿದರು. ಇದು ಗಾಥಿಕ್ ಶೈಲಿಯ ಒಂದು ಗಂಭೀರ ಕಟ್ಟಡವಾಗಿದೆ. ಆಕಾರ ಸುಮಾರಿಗೆ, ಡೂಮೆ ಸಬಲಾನ್‌ನಂತಿದೆ. ಇದರೊಳಗೆ ಅನೇಕ ಶಿಲ್ಪಗಳೂ, ಚಿತ್ರಗಳೂ ಇವೆ– ಎಂಬುದನ್ನು ಕೇಳಿ, ಅಲ್ಲಿಗೆ ಹೋಗಿ, ಬೆಳಗಿನ ಹನ್ನೊಂದು ಘಂಟೆಯಿಂದ ಮಧ್ಯಾಹ್ನದ ಎರಡು ತಾಸಿನ ತನಕವೂ ಕಾದು ಕುಳಿತಿದ್ದೆ. ಅಷ್ಟು ಹೊತ್ತಿಗೇನೆ ಅದರ ಕದ ತೆರೆಯುವುದು. ನಾನು ಕುಳಿತಿದ್ದಲ್ಲಿಗೆ ಇಬ್ಬರು ಡಚ್ ವಿಹಾರಿ ಗಳು ಬಂದರು. ಎಮ್‌ಸ್ಟರ್‌ಡಾಮ್ ನಗರದ ಟ್ರಾವ್ ಎಂಬವರು ಮತ್ತು ಅವರ ಹೆಂಡತಿ. ಹೀಗಾಗಿ ಮಾತುಕತೆಗೆ ಅವಕಾಶವಾಯಿತು; ಮಾತನಾಡು ತ್ತಲೇ ಕುಳಿತ್ತಿದ್ದೆವು. ಮನಸ್ಸೆಲ್ಲ ಚರ್ಚಿನೊಳಗೆ ಹೋಗಿತ್ತು. ಬಾಗಿಲನ್ನು ತೆರೆಯುವವರಿಲ್ಲ. ಸಮಯವಾಗಲು ಎದುರಿನ ಮೂರು ಬಾಗಿಲುಗಳಲ್ಲಿ, ಮಗ್ಗುಲಿನ ಒಂದು ಕಿರಿಯ ಬಾಗಿಲನ್ನು ತೆರೆದರು. ಒಳಗೆ ಹೋದೆವು. ಇದೊಂದು ಮಹಾದೇವಾಲಯ. ಅದರೊಳಗೆ ಮರಿ ದೇವಾಲಯಗಳೆಷ್ಟೋ. ನಡುವೆ ವಿಶಾಲವಾದ ಪ್ರಾರ್ಥನಾಲಯವಿದೆ. ಅದರ ಮುಂಗಡೆ ವೇದಿಕೆ (Altar)ಯಿದೆ; ಎಡಬಲಕ್ಕೂ, ಹಿಂದೆ ವರ್ತುಲವಾಗಿಯೂ ಹರಿಯುವ ಚಾವಡಿ ಇದೆ. ಆ ಚಾವಡಿಯಲ್ಲಿ ಅನೇಕ ಸಣ್ಣ ದೇವಾಲಯಗಳಿವೆ. ಕೆಲವು ಸಮಾಧಿಗಳಿವೆ. ಈ ಮಂದಿರದ ಅಲ್ಲಲ್ಲಿ ವಿಶೇಷ ಅಲಂಕಾರಿಕವಾದ ಶಿಲ್ಪ ಗಳನ್ನಿಟ್ಟಿದ್ದಾರೆ. ಈ ಕಿರಿಯ ಮಂದಿರಗಳಲ್ಲಿ ಮಧ್ಯಯುಗದ ಪ್ರಸಿದ್ಧ ಚಿತ್ರ

ಕಾರರ ಹಲವು ತೈಲ ಚಿತ್ರಗಳಿವೆ. ಲೈಡನಿನ ಲೂಕಾಸ್ ಬರೆದೊಂದು ಚಿತ್ರ ಇದೆ. ಪ್ರಸಿದ್ಧ ಪೀಟರ್ ಪಾಲ್ ರೂಬೆನ್ಸ್ ಬರೆದ ಬಹು ದೊಡ್ಡ ಚಿತ್ರಗವೆ. ಸುಮಾರು ಹತ್ತಿಪ್ಪತ್ತು ದೊಡ್ಡ ತೈಲಚಿತ್ರಗಳಿವೆ. ಕಟ್ಟಡದ ಎಡ, ಬಲ, ಹಿಂದುಗಡೆಗಳಲ್ಲಿ ಗೋಡೆಗಳ ಮೇಲೆ ನಟ್ಟ ಸ್ಟೈಂಡ್ ಗ್ಲಾಸ್ ಕಿಟಿಕಿ ಗಳಂತು ಅನುಪಮವಾಗಿವೆ. ಎಲ್ಲವೂ ಒಂದೇ ಶೈಲಿಯವುಗಳಲ್ಲ. ಒಂದೊಂ ದು ಶತಮಾನದಲ್ಲಿ ಸೇರಿಸಿಕೊಂಡ ಹೊಸ ಹೊಸ ಸಂಗ್ರಹಗಳಂತೆ ಅವು ಕಾಣಿಸುತ್ತವೆ. ಅವುಗಳಲ್ಲಿ ವೇದಿಕೆಯ ಹಿಂದಿರುವ ಬಹು ದೊಡ್ಡ ಸ್ಟೈಂಡ್ ಗ್ಲಾಸ್ ಚಿತ್ರವನ್ನು ಆ ದೇಶದ ಹೆಸರಾದ ಚಿತ್ರಕಾರರಾದ ಜಾನ್ ವಾನ್ ಇಕ್ ಮತ್ತು ಅವನ ಸೋದರನಾದ ಹರ್ಬರ್ಟ ವಾನ್ ಇಕ್ ಮಾಡಿದುದಾ ಗಿದೆ. ಅನೇಕ ಯಾತ್ರಾರ್ಥಿಗಳು ಈ ಸ್ಟೈಂಡ್ ಗ್ಲಾಸ್ ಕಿಟಿಕಿಗಳನ್ನು ನೋಡುವ ಹುಚ್ಚಿನಿಂದಲೇ ಇಲ್ಲಿಗೆ ಬರುತ್ತಾರೆ. ಈ ಊರಲ್ಲಿ ಎಲ್ಲಿ ಅಲೆದಾಡಿ ದರೂ ಕ್ರೈಸ್ತ ಪಾದ್ರಿಗಳ, ಮಾದ್ರಿಗಳ ತಂಡ ಕಾಣಿಸುತ್ತದೆ.

ಬೆಲ್ಜಿಯಮ್ ಅನೇಕ ಚಿತ್ರಕಾರರಿಗೆ ಹೆಸರಾದ ದೇಶ. ಅಂಥವರಲ್ಲಿ ಪೀಟರ್ ಪಾಲ್ ರೊಬೆನ್ಸ್ ಹೆಸರಾದ ವ್ಯಕ್ತಿ. ಚಿತ್ರಗಳಲ್ಲಿ ತೈಲವರ್ಣಗಳ ಉಪಯೋಗವನ್ನು ಯುರೋಪಿನಲ್ಲಿ ತೊಡಗಿದವನೇ ಅವನಂತೆ. ಆತನು ಬರೆದ ಚಿತ್ರಗಳು ಎಷ್ಟೆಷ್ಟೋ ಇವೆ. ಅನೇಕ ಚರ್ಚುಗಳನ್ನವು ಅಲಂಕರಿ ಸಿವೆ; ಅರಮನೆಗಳನ್ನು ಅಲಂಕರಿಸಿವೆ; ಕಲಾ ಶಾಲೆಗಳನ್ನು ಬೆಳಗಿವೆ. ಅಂಥವ ಬದುಕಿ ಕೆಲಸಮಾಡಿದ ದೇಶವಿದು. ಆತ ಆರಿಸದ ವಿಷಯವಿಲ್ಲ. ನಿಸರ್ಗ ಚಿತ್ರಿಸಿದ್ದಾನೆ, ಬೇಟೆ ಚಿತ್ರಿಸಿದ್ದಾನೆ, ಕ್ರಿಸ್ತ ಪುರಾಣಗಳನ್ನು ಬರೆದಿ ದ್ದಾನೆ. ಆತ ಪ್ರಪಂಚವನ್ನು ನೋಡಿದ ಬಗೆ ಸಾಂಪ್ರದಾಯಿಕವಲ್ಲ. ಸ್ವತಂತ್ರ ವಾದುದು. ಮಾನವನ ಬದುಕಿನ ಸರಸ, ವಿರಸಗಳನ್ನು ಕಂಡು ಮೆಚ್ಚಿದಷ್ಟೇ ಪರಿಹಾಸದಿಂದಲೂ ಕಂಡಿದ್ದಾನೆ. ಅವನ ಚಿತ್ರಾದರ್ಶರು ಮೈಯ್ಯ ಕೊಬ್ಬಿ ಮಾಂಸಗಳನ್ನು ನೋಡಿ ನಾಚಿದವರಲ್ಲ. ಟೈಟನನ ಗಂಡಸು ಹೆಂಗಸರಂತೆ ಅವರು ಮಾಂಸಪುಷ್ಟ ವ್ಯಕ್ತಿಗಳು. ಇಂಥವನ ಚಿತ್ರಗಳಿರುವ ಚಿತ್ರಶಾಲೆ ಯನ್ನು ನೋಡುವ ಹಂಬಲ ನನಗಿದ್ದುದರಲ್ಲಿ ಆಶ್ಚರ್ಯವಿಲ್ಲ. ಹೀಗಾಗಿ ಅವರ ಪ್ರಾಚೀನ ಕಲಾಮಂದಿರ (Musee-d-Art ancient) ಚಿತ್ರಶಾಲೆಯನ್ನು ನೋಡಹೋದೆ. ಸ್ವದೇಶೀಯನಾದ ಚಿತ್ರ ಕಲಾ ಆಚಾರ್ಯ ಪೀಟರ್ ಪಾಲ್ ರೂಬೆನ್ಸನಿಗೆ ಸಲುವ ಗೌರವವೆಲ್ಲವೂ ಅಲ್ಲಿ ಸಂದಿತ್ತು. ಆ ಚಿತ್ರಶಾಲೆ

ಯಲ್ಲಿ ಬಹು ದೊಡ್ಡ ಕೊಟಡಿಗಳಲ್ಲಿ ಎರಡು ಮೂರನ್ನು ಅವನೊಬ್ಬನ ಚಿತ್ರಗಳಿಗಾಗಿಯೇ ಮೀಸಲಾಗಿರಿಸಿದ್ದಾರೆ. ಈತ ಸಣ್ಣ ಪುಟ್ಟ ಚಿತ್ರಗಳಿಂದ ತೃಪ್ತನಲ್ಲವೆಂದು ಕಾಣುತ್ತದೆ. ಇಪ್ಪತ್ತು ಮೂವತ್ತಡಿ ಗಾತ್ರದ ಕೆನ್ವಾಸುಗಳ ಮೇಲೆ ಚಿತ್ರ ಬರೆದವನು.

ಅವನು ಅಭ್ಯಾಸಕ್ಕಾಗಿ ಬರೆದ ಅನೇಕ ಚಿತ್ರಗಳು ಇಲ್ಲಿವೆ. ಒಂದು ಚಿತ್ರದಲ್ಲಿ ನೀಗ್ರೋ ಒಬ್ಬನ ಆರೆಂಟು ಮುಖ ಭಾವಗಳನ್ನು ಚಿತ್ರಿಸಿದ್ದಾನೆ.

ಒಂದು ಕೊಟಡಿಯಲ್ಲಿ ಜಾಕೋಬ ಜೋರ್ಡೆನ್ ಬರೆದ ಚಿತ್ರಗಳಿವೆ. ಈತನು ಇಲ್ಲಿನವನಿರಬೇಕು. ತುಂಬು ಮಾಂಸದ ನರನಾರಿಯರು ಅವನವರು. ಅವನ ಚಿತ್ರಗಳಲ್ಲಿ 'ಎಲಿಗರೀ ಲಾ ಫಿಕಂಡಿಟಿ' ಎಂಬೊಂದು ದೊಡ್ಡ ಚಿತ್ರದಲ್ಲಿ ಎರಡುಮೂರು ಜನಾಂಗದವರ ಮುಖಗಳನ್ನು ತೋರಿಸಿದ್ದಾನೆ. ಕುದುರೆ ಕಾಲಿನ ದೈತ್ಯರು ಕೆಲವರಿದ್ದಾರೆ. ಹಣ್ಣುಹಂಪಲುಗಳಲ್ಲಿ ಉರುಳಾಡುವ ನಾರಿಯರಿದ್ದಾರೆ. ಒಂದು ಮುಖ ರಾಕ್ಷಸ ಮುಖ. ಅದು ಅವನು ಬರೆದ ನೀಗ್ರೊ ಮುಖದ ಚಿತ್ರಗಳಿಂದ ಆಯ್ದುದಾಗಿದೆ. ಇಂಥ ಬೈಬಲ್ ಕಥೆಗಳ ಇನ್ನೂ ಕೆಲವು ಚಿತ್ರಗಳು ಅವನದಿವೆ.

ಚರ್ಚ್ ಅಲಂಕಾರಕ್ಕಾಗಿ ಬರೆಯಿಸಿದ ಎರಡು ಚಿತ್ರಗಳಲ್ಲಿ, ಹದಿನಾಲ್ಕನೇ ಶತಮಾನದ ಲಾ ಕಾಂಚ್ ಎಂಬ ಚಿತ್ರಕಾರನು ಬರೆದ ಆದಮ್ ಮತ್ತು ಈವ್ ಬಹು ಮನೋಹರವಾಗಿವೆ.

ರೆಂಬ್ರಾಂಡನ ಮೃತ್ಯುಶಯ್ಯೆಯಲ್ಲಿ ಮಲಗಿದ ನಾರಿಯೊಬ್ಬಳ ಚಿತ್ರ ಬಹು ಮನೋವೇಧಕವಾಗಿ ಚಿತ್ರಿಸಲ್ಪಟ್ಟಿದೆ. ಹದಿನಾಲ್ಕು, ಹದಿನೈದು, ಹದಿನಾರು ಶತಮಾನಗಳ ಅನೇಕ ಫ್ಲೆಮಿಷ್ ಚಿತ್ರಕಾರರ ಮತ್ತು ಡಚ್ ಚಿತ್ರಕಾರರ ಚಿತ್ರಗಳನ್ನು ಇಲ್ಲಿ ಕಾಣಬಹುದಾಗಿದೆ. ಆಯಾಯ ದೇಶದ ಚಿತ್ರ ವೈಭವ ಕಲಾವೈಭವಗಳನ್ನು ಆ ದೇಶಗಳಿಗೇ ಹೋಗಿ ನೋಡಬೇಕು ಎಂಬ ಮಾತು ಸಾಧುವಾದರೆ, ಈ ಮ್ಯೂಸಿಯುಮಿನ ಸಂದರ್ಶನ ಸಾರ್ಥಕವೇ ಸರಿ.

ಬೆಲ್ಜಿಯಮ್ ನಗರದ ಕೇಂದ್ರಭಾಗದಲ್ಲಿ ಎರಡು ಖಾಸಗಿ ಚಿತ್ರಕಲಾ ಪ್ರದರ್ಶನಗಳೂ ನನಗೆ ಕಾಣಲು ದೊರಕಿದುವು. ಅವು ಹೆಚ್ಚು ಕಡಿಮೆ ಸ್ಥಳಿಕ ಚಿತ್ರಕಾರರ ಚಿತ್ರಗಳನ್ನು ಮಾರುವ ಅಂಗಡಿಗಳೆಂದರೂ ಸಲ್ಲುತ್ತದೆ. ಒಂದೊಂದು ಅಂಗಡಿಯಲ್ಲಿ ನಾಲ್ವತ್ತು ಐವತ್ತು ಚಿತ್ರಗಳು ವಿಕ್ರಯಕ್ಕಿದ್ದವು. ಈ ಚಿತ್ರಕಾರರು ನಿತ್ಯ ಜೀವನದಿಂದ ವಸ್ತುಗಳನ್ನಾಯ್ದುಕೊಂಡವರು. ನಿಸ

ರ್ಗದ ಬಣ್ಣ ಬೆಡಗುಗಳ ಕಡೆಗೆ ಹೆಚ್ಚಾಗಿ ಕಣ್ಣಿಟ್ಟವರು. ಚಿತ್ರಶೈಲಿಯು ಆಧುನಿಕವಾದರೂ ಅರ್ಥವಾಗದ್ದಲ್ಲ. ಅವರು ನಾರಿಯರನ್ನು ನೋಡುವ ಕಣ್ಣಿನಲ್ಲೂ ನಿಸರ್ಗ ನೋಡುವ ಕಣ್ಣಿನಲ್ಲೂ ಹೊರಗಿನ ತೊಗಟೆಯನ್ನು ಕಂಡು ಸಂತೋಷಿಸುವಷ್ಟು ಒಳಗಿನ ತಿರುಳನ್ನು ನೋಡುವ ಹಂಬಲವುಳ್ಳವರಾಗಿ ನನಗೆ ಕಾಣಿಸಲಿಲ್ಲ. ಆದರೆ ಕಲಾವಿದರು ವ್ಯಾವಹಾರಿಕ ಜೀವನದಲ್ಲಿ ಯಶಸ್ವಿಯಾಗುವುದಕ್ಕೆ, ಬಹು ಮಂದಿ ಈ ದಾರಿಯನ್ನು ಹಿಡಿಯದೆ ಉಪಾಯವಿಲ್ಲ ಎಂಬ ಮಾತೂ ನಿಜ.

ನಾನು ಬ್ರಸೆಲ್ಸಿಗೆ ಹೋಗುವಾಗ ಇಬ್ಬರು ವ್ಯಕ್ತಿಗಳಿಗೆ ಪರಿಚಯ ಪತ್ರ ಕೊಂಡೆಯಿದ್ದೆ. ಡಾ. ವಿಗ್ನಿ ಎಂಬವರೊಬ್ಬರು. ಡಾ. ಕಾಲರ್ ಎಂಬವರಿನ್ನೊಬ್ಬರು. ಡಾ. ವಿಗ್ನಿಯವರು ಒಂದು ಅಂತರ್ರಾಷ್ಟ್ರೀಯ ಅಭ್ಯಾಸ ಸಂಸ್ಥೆಯ ಮುಖಂಡರಾಗಿದ್ದಾರೆ. 'ಇನ್ಸೀಡಿ' ಎಂದು ಅದರ ಹೆಸರು. ಎಂದರೆ ಅಂತ:ರಾಷ್ಟ್ರೀಯ ಹಿನ್ನೆಲೆಯಲ್ಲಿ ಭಿನ್ನ ವರ್ಣದವರಲ್ಲಿ ಉಂಟಾಗುತ್ತಿರುವ ವಿವಿಧ ಪ್ರಭಾವಗಳನ್ನು, ಅವುಗಳ ಪ್ರತಿ ಕ್ರಿಯೆಗಳನ್ನು ಅಭ್ಯಸಿಸಲು ಪ್ರಯತ್ನಿಸುವ ಸಂಸ್ಥೆ. ನಾನು ಹೋದ ವೇಳೆ ವಿಗ್ನಿಯವರು ಫ್ಲಾರೆನ್ಸ ನಗರದಲ್ಲಿ ನಡೆಯುತ್ತಿದ್ದ ಒಂದು ಸಮ್ಮೇಳನಕ್ಕೆ ಹೋಗಿದ್ದುದರಿಂದ ಅವರನ್ನು ಕಾಣುವುದಕ್ಕೆ ಆಗಲಿಲ್ಲ. ಅವರ ಕಾರ್ಯದರ್ಶಿಯು ನನಗೆ ಅನಂತರ ಈ ಸಂಸ್ಥೆಯು ಪ್ರಕಟಿಸಿದ ಕೆಲವೊಂದು ಅಮೂಲ್ಯ ಲೇಖನಗಳನ್ನು ಕಳುಹಿಸಿ ಕೊಟ್ಟಳು. ಈ ವಿಧದ ಪ್ರಯತ್ನವು ಹಿಂದುಳಿದ ಜನಾಂಗಗಳ ದೃಷ್ಟಿಯಿಂದ ಬಹು ಅವಶ್ಯವೆಂದು ನನಗೆ ಕಾಣಿಸುತ್ತದೆ. ಶ್ರೀ ಕೋದಂಡರಾಯರಂಥ ಭಾರತೀಯರು ಈ ಸಂಸ್ಥೆಯೊಡನೆ ಸಹಕರಿಸುತ್ತಿದ್ದಾರೆಂಬುದು ಸಂತೋಷದ ಸಂಗತಿ.

ನನ್ನ ಇನ್ನೊಂದು ಭೇಟಿ, ಬೆಲ್ಜಿಯಂ ರೇಡಿಯೋ ಕೊರ್ಪೊರೇಶನಿನ ಅಧಿಕಾರಿಗಳಾದ ಡಾ. ಕಾಲರ್‌ರೊಡನೆ. ಭೇಟಿಯಾಗುವ ಎರಡು ತಾಸುಗಳ ಮೊದಲಷ್ಟೆ, ಅವರೊಡನೆ ಫೋನ್ ಮೂಲಕ ವೇಳೆಯನ್ನು ನಿಶ್ಚಯಿಸಿದೆ. ಕಾರ್ಪೊರೇಶನಿನ ಮಂದಿರವನ್ನು ಹುಡುಕಿಕೊಂಡು ಹೋದೆ. ಡಾ। ಬಾಕೆಯವರು ಕೊಟ್ಟ ಕಾಗದವನ್ನು ತೋರಿಸಿದೆ. ಅವರು ಬಿಡುವಿಲ್ಲದಿದ್ದರು. ಆದರೆ ತಮ್ಮ ಸಹಾಯಕರೊಬ್ಬರನ್ನು ಕೊಟ್ಟು ನನ್ನ ಆಸಕ್ತಿಯನ್ನು ತಣಿಸುವುದಕ್ಕೆ ನೆರವಾದರು. ಈ ಮಿತ್ರರು ನನ್ನನ್ನೊಂದು ಕೊಟಡಿಗೆ ಕೊಂ

ಡೊಯ್ದು ಸುಮಾರು ಎರಡು ತಾಸುಗಳ ಅವಧಿಯ ತನಕ, ನನ್ನ ಮುಂದೆ ಬೆಲ್ಜಿಯಮ್ ಜಾನಪದ ಗೀತಗಳನ್ನು ಹಾಡಿಸಿ, ತೋರಿಸಿದರು. ಈ ಹಾಡುಗಳ ಗುಂಪಿನಲ್ಲಿ-ಅಲ್ಲಲ್ಲಿ ಚರ್ಚುಗಳಲ್ಲಿ, ಹಬ್ಬ ಹುಣ್ಣಿಮೆಗಳಲ್ಲಿ, ಹಳ್ಳಿಯ ನಿತ್ಯಜೀವನದಲ್ಲಿ ಇಂದಿಗೂ ಬಳಸುತ್ತಿದ್ದ ಅನೇಕ ಹಾಡುಗಳಿದ್ದವು. ಅವರು ಒಂದೊಂದು ಹಾಡನ್ನೂ ಯಂತ್ರಗಳಿಂದ ನುಡಿಸಿ, ಅವುಗಳ ಬೆಲ್ಜಿಯನ್ ಸಾಹಿತ್ಯವನ್ನು ಇಂಗ್ಲಿಷಿಗೆ ಪರಿವರ್ತಿಸಿ ನನಗೆ ಹೇಳಿದರು. ಈ ಹಾಡುಗಳ ತರಂಗಿತತೆ, ಹಿನ್ನೆಲೆಗಳನ್ನು ಬಣ್ಣಿಸಿದರು. ಪ್ರಪಂಚದ ವಿವಿಧ ಭಾಗಗಳ ಜಾನಪದ ಗೀತೆಗಳು, ಸರಳವಾದ ತರಂಗಲಹರಿಗಳಾಗಿವೆ. ಮಾರ್ದವ (Melody)ವೇ ಅವುಗಳ ದಾರಿ. ಅವುಗಳನ್ನೆಲ್ಲ ಇಲ್ಲಿ ಬಣ್ಣಿಸಲಾರೆನಾದರೂ ಕೇಳಿದ ಒಂದು ಜಾನಪದ ಗೀತದ ಕಥಾಭಾಗವನ್ನು ಮಾತ್ರ ಹೇಳುತ್ತೇನೆ–

ಒಂದೂರಿನಲ್ಲಿ ಒಬ್ಬ ಅರಸನಿದ್ದ. ಆತ ಏಳು ಮಂದಿಯನ್ನು ಮದುವೆಯಾಗಿ ಅವರೊಬ್ಬೊಬ್ಬರನ್ನು ಕೊಂದು ಮುಗಿಸಿದ. ಅನಂತರ ಇನ್ನೊಂದು ಮದುವೆಯಾಯಿತು. ಆ ಎಂಟನೆಯ ಹುಡುಗಿ ತವರು ಮನೆಯಿಂದ ಪತಿಯನ್ನು ಕೂಡುವುದಕ್ಕೆ ಹೊರಟಿದ್ದಾಳೆ. ಅಲ್ಲಿಂದ ಕಥಾನಕ ತೊಡಗುತ್ತದೆ. ಅರಸನ ಇಚ್ಛೆಗೆ ತಲೆವಾಗಿ, ಹೆಣ್ಣು ಕೊಟ್ಟ ತಂದೆ ಮಗಳನ್ನು ಕಳುಹಿಸುವಾಗ ಕಣ್ಣೀರಿಡುತ್ತಾನೆ. "ಮಗಳೇ ಹೋಗಬೇಡ. ಏಳು ಮಂದಿ ಹೆಂಡಿರನ್ನು ಕೊಂದ ಅವನು ನಿನ್ನನ್ನುಳಿಸುತ್ತಾನೆಯೇ"ಎಂದು ಅವಳನ್ನು ತಡೆಯುತ್ತಾನೆ. ದಿಟ್ಟೆಯಾದ ಅವಳು ಗಂಡನ ಮನೆಗೆ ಹೋಗಿಯೇ ಹೋಗುತ್ತಾಳೆ. ಮುಂದೊಂದು ದಿನ ಅರಸನೂ ಈ ಹೊಸ ರಾಣಿಯೂ ಸೇರಿ ಕುದುರೆಗಳ ಮೇಲೆ ಕುಳಿತುಕೊಂಡು ವಿಹಾರಕ್ಕಾಗಿ ಹೊರಡುತ್ತಾರೆ. ದಾರಿಯಲ್ಲಿ ರಾಣಿಗೆ ಏಳು ಮರಗಳು ಕಾಣಿಸುತ್ತವೆ. ಆ ಏಳು ಹೆಣಗಳನ್ನು ತೂಗಿಸಿದ್ದು ಕಾಣುತ್ತದೆ. ಆಕೆ ತನ್ನ ಗಂಡನಿಗೆ ಆ ದೃಶ್ಯದ ಕಡೆಗೆ ಬೆರಳುಮಾಡಿ ತೋರಿಸುತ್ತಾಳೆ. ತಾನು ಅಡಗಿಸಿ ಇಟ್ಟಿದ್ದ ಈಟಿಯನ್ನು ತೆಗೆದು, ಅಲ್ಲಿಯೇ ಅವನನ್ನು ಕೊಂದುಬಿಡುತ್ತಾಳೆ. ಈ ಸೇಡು ತೀರಿಸುವುದಕ್ಕಾಗಿಯೇ ಆಕೆ ಒತ್ತಾಯದ ಮದುವೆಗೆ ತಲೆಯೊಡ್ಡಿ ಬಂದಿದ್ದಳು; ಇನ್ನೆಷ್ಟೋ ಕನ್ನೆಯರ ಜೀವ ಉಳಿಸಿದ ವೀರ ರಮಣಿಯಾದಳು.

ಈ ಮಿತ್ರರು ತಮ್ಮ ಹಳೆಯ ಗೀತಗಳಲ್ಲಿ ಬೆರೆತುಕೊಂಡ ಸಾಂಸ್ಕೃ

ತಿಕ ಹಿನ್ನೆಲೆಯನ್ನು ಸುಂದರವಾಗಿ ವಿವರಿಸಿ, ನನ್ನನ್ನು ಬೀಳ್ಕೊಟ್ಟರು. ಮೂರು ದಿನಗಳ ಕಾಲ ನಾನು ಈ ನಗರದ ಹಾದಿಬೀದಿಗಳಲ್ಲಿ, ಉದ್ಯಾನದಲ್ಲಿ ಅಲೆದಾಡಿಕೊಂಡು ನಾಲ್ಕನೆಯ ದಿನ ಫ್ರಾನ್ಸಿಗೆ ಹೊರಟೆ.

------

# ೧೫. ಉನ್ಮತ್ತ ನೀಸಿನಲ್ಲಿ

ನನ್ನ ಪ್ರವಾಸದಲ್ಲಿ ಕಡ್ಡಾಯವಾಗಿ ನಾನು ನೋಡಲೇ ಬೇಕೆಂದಿದ್ದ ರಾಷ್ಟ್ರಗಳಲ್ಲಿ ಇಂಗ್ಲೆಂಡ್, ಫ್ರಾನ್ಸ್, ಇಟಲಿ ದೇಶಗಳು ಮುಖ್ಯವಾಗಿದ್ದುವು. ಅದಕ್ಕೆ ಕಾರಣವೆಂದರೆ-ಆ ದೇಶಗಳ ಪೂರ್ವ ಇತಿಹಾಸ. ಅಲ್ಲದೆ ಪ್ರಪಂಚದಲ್ಲಿ ಅವು ಅನೇಕ ಕಾರಣಗಳಿಂದ ಪಡೆದಿರುವ ಮನ್ನಣೆ. ಪಾಶ್ಚಾತ್ಯ ರಾಷ್ಟ್ರಗಳಿಗೆ ಫ್ರಾನ್ಸ್ ವಿಲಾಸಭೂಮಿಯೂ ಅಹುದು; ಅನೇಕ ಆದರ್ಶಗಳ ದೇವಾಲಯವೂ ಅಹುದು. ದೇಶ ವಿದೇಶಗಳಿಂದ ಅಲ್ಲಿಗೆ ಬರತಕ್ಕ ಜನಸಂಖ್ಯೆಯೂ ಬಹು ಹೆಚ್ಚಿಗೆ. ಫ್ರಾನ್ಸ್, ಸಂಸ್ಕಾರವಂತರೆಲ್ಲರು ಬಂದು ನೋಡಲೇಬೇಕಾದ ದೇಶ, ಎಂಬುದು ಪಾಶ್ಚಾತ್ಯರಲ್ಲಿನ ಭಾವನೆ. ಹೀಗಾಗಿ ಸಾಹಿತ್ಯಪ್ರೇಮಿಗಳು ಫ್ರೆಂಚ್ ಸಾಹಿತ್ಯದ ಹಿರಿಮೆಯನ್ನು ಎಣಿಸಿಕೊಂಡು ಬರುತ್ತಾರೆ. ಕಲಾವಿದರು ಹಿಂದಿನಿಂದ ಇಂದಿಗೂ ಆ ದೇಶವು ಕಲೆಗಳಿಗೆ ಕೊಡುತ್ತಿರುವ ಪ್ರೋತ್ಸಾಹವನ್ನು ಎಣಿಸಿಕೊಂಡು ಬರುತ್ತಿದ್ದಾರೆ. ಅಲ್ಲಿರುವ ಕಲಾ ವಸ್ತುಗಳನ್ನು, ಕಲಾವಿದರನ್ನು ನೆನೆದು ಯಾತ್ರಾರ್ಥಿಗಳಾಗಿ ಬರುತ್ತಿದ್ದಾರೆ. ಇತಿಹಾಸಪ್ರಿಯರು ಫ್ರಾನ್ಸ್ ದೇಶದಲ್ಲಿ ಜನತೆಯು ಎಬ್ಬಿಸಿದ ಮಹಾ ಕ್ರಾಂತಿಯನ್ನು ನೆನೆದು, ಅದರಿಂದ ಉದ್ದೀಪನವಾದಂಥ ವ್ಯಕ್ತಿ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯ ಮೊದಲಾದ ಹಿರಿಯ ಆದರ್ಶಗಳ ನೆನಪನ್ನು ಹೊತ್ತುಕೊಂಡು ಬರುತ್ತಾರೆ. ವಾಲ್ಟೇರ್, ಬಾಲ್‌ಜಾಕ್, ಎನಾತೋಲ್ ಫ್ರಾನ್ಸ್, ಗಿ. ದಿ. ಮೋಪಾಸಾ, ಜೋಲಾ-ಇವರೆಲ್ಲ ಸಾಹಿತಿಯ ಮನಸ್ಸನ್ನು ಅರಳಿಸಿದರೆ ವಾಲ್ಟೇರ್, ಕಾರ್ಲ ಮಾರ್ಕ್ಸ, ಯೂಜಿನ್‌ಸೂ, ರೋಸು ಮೊದಲಾದವರು ಕ್ರಾಂತಿಪ್ರಿಯರ ಮನಸ್ಸನ್ನು ಅರಳಿಸಿದ್ದಾರೆ. ಶ್ರೀಮಂತರ ಸೆರೆಯಲ್ಲಿ ಸಿಕ್ಕಿದ ಕಲಾಭಿರುಚಿಯನ್ನು ನಿಶ್ಶೃಂಖಲ ಶಕ್ತಿಯನ್ನಾಗಿ ಮಾಡಿದ ವಾನ್‌ಗಘ್, ಸಿಜಾನ್, ಗಾಗಿನ್, ರೆನಾಯರ್, ಪಿಕಾಸೋ ಮೊದಲಾದವರ ಚಿತ್ರಗಳು ಆಧುನಿಕ ಕಲಾಪ್ರಪಂಚಕ್ಕೆ ಪ್ರೇರಕವಾಗಿವೆ. ಆ ದೇಶದಲ್ಲಿ ಮಹಾ ಸಾಹಿತಿಗಳು ಇದ್ದರು, ಇದ್ದಾರೆ; ಚಿತ್ರಕಾರರಿದ್ದರು, ಇದ್ದಾರೆ; ಶಿಲ್ಪಿಗಳಿದ್ದರು, ಇದ್ದಾರೆ–ಎಂಬ ವಿಶೇಷವಾದ ಕನಸುಗಳಿಗೆ ಎಡೆ ಕೊಡುತ್ತಿರುವ ದೇಶ ಫ್ರಾನ್ಸ್.

ಸುಮಾರು ಇನ್ನೂರ ಹದಿನೆರಡು ಸಾವಿರ ಚದರ ಮೈಲುಗಳಷ್ಟು

ವಿಸ್ತಾರವಾದ ಈ ನಾಡಿನಲ್ಲಿ ನಲ್ವತ್ತು ಮಿಲಿಯ ಜನಸಂಖ್ಯೆ ವಾಸವಾಗಿದೆ. ರಾಜಧಾನಿಯಾದ ಪೇರಿಸ್ ನಗರ ಒಂದರಲ್ಲಿಯೆ ಇಪ್ಪತ್ತೇಳು ಲಕ್ಷ ಜನವಿದೆ. ಇಲ್ಲಿಗೆ ಆಗಾಗ, ವರ್ಷಂಪ್ರತಿ ಬಂದು ಹೋಗುತ್ತಿರುವ ಜನಸಾಂಖ್ಯೆಯನ್ನು ಲಕ್ಷ ಗಟ್ಟಲೆಯಿಂದಲೆ ಎಣಿಸ ಬೇಕು. ಹೀಗಿರುತ್ತ ಯಾತ್ರಾರ್ಥಿಯಾಗಿ, ನಾನೂ ಒಬ್ಬ ಅತಿ ನಿರೀಕ್ಷೆಯಿಂದ ಆ ದೇಶಕ್ಕೆ ಹೋಗಿದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ.

ಈ ದೇಶದಲ್ಲಿ ನಾನು ಸುಮಾರು ಹದಿನೆರಡು ದಿನಗಳನ್ನು ಕಳೆದೆ-ಒಂದು ವಾರ ಪೇರಿಸಿನಲ್ಲಿ; ಮೂರು ದಿನ ನೀಸ್‌ನಲ್ಲಿ; ಉಳಿದ ದಿನ-ಹೆಚ್ಚು ಕಡಿಮೆ ಸಂಚಾರದಲ್ಲಿ. ಕಳೆದಂಥ ಕಾಲ ಸಾಲದಾದರೂ, ದೊರೆತ ಅನುಭವ ಅಪೂರ್ಣವಾದರೂ, ಕಂಡದ್ದನ್ನಾದರೂ ಬಣ್ಣಿಸ ಬೇಕಲ್ಲ. ಈ ದೇಶದ ಭೂಸ್ವರೂಪದಲ್ಲಿ ಕೆಲವು ಮಟ್ಟಿನ ವೈವಿಧ್ಯವಿದೆ. ಪಶ್ಚಿಮ ಕರಾವಳಿ ಎಟ್ಲಾಂಟಿಕ್ ಸಮುದ್ರದಿಂದಾವರಿಸಲ್ಪಟ್ಟಿದೆ. ಅದರ ಆಗ್ನೇಯ ಮೂಲೆಯಲ್ಲಿ ಭೂಮಧ್ಯ ಸಮುದ್ರ ಬಂದು ಇದರ ನೆಲವನ್ನು ತೊಳೆಯುತ್ತದೆ. ಪೂರ್ವದ ಮಗ್ಗುಲಲ್ಲಿ ಆಲ್ಪ್ಸ್ ಪರ್ವತಗಳ ಸೆರಗು ಹಾದರೆ, ದಕ್ಷಿಣದಲ್ಲಿ ಅಷ್ಟೊಂದು ಸುಂದರವಲ್ಲ ದಿದ್ದರೂ ಉನ್ನತವಾದ ಪಿರನೀಸ್ ಪರ್ವತಗಳು ನಿಂತಿವೆ. ನಾನು ಬ್ರಸೆಲ್ಸ್ ನಿಂದ ಹೊರಟವನು, ಪೇರಿಸ್ ಮೂಲಕ, ದೇಶವನ್ನು ಕತ್ತರಿಸುವ ಅತಿ ಉದ್ದದ ರೈಲುದಾರಿ ಹಿಡಿದು ನೀಸಿಗೆ-ಹೋಗಿ ಮರಳಿದೆ. ಇನ್ನೊಮ್ಮೆ ಪೇರಿಸ್ ನಿಂದ ನೇರಾಗಿ ಪೂರ್ವದಲ್ಲಿರುವ ಬಾಸೆಲ್ ನಗರ ದಾಟಿ ಸರಿದೆ. ಈ ದೇಶಕ್ಕೆ ಕಾಲಿರಿಸಿದೊಡನೆಯೇ ಹಸುರಿನಿಂದ ಕವಿದ ಸುಂದರವಾದ ಗುಡ್ಡಗಾಡುಗಳು ಕಾಣಸಿಗುತ್ತವೆ. ಇಂಗ್ಲೆಂಡಿನಲ್ಲಿ ಕಂಡಷ್ಟೇ ತಗ್ಗು, ತೆವರುಗಳು ಕಣ್ಣಿನ ಮುಂದೆ ಹಾಯತೊಡಗುತ್ತವೆ. ಆದರೆ ಇಂಗ್ಲೆಂಡಿನಲ್ಲಿ ಕಂಡಷ್ಟು ನೀರಿನ ವಿಲಾಸ-ಹಳ್ಳ, ತೊರೆ, ತೋಡುಗಳನ್ನು ಅಷ್ಟೇ ಸಂಖ್ಯೆಯಿಂದ ಇಲ್ಲಿ ಕಾಣುವುದಕ್ಕಿಲ್ಲ. ಸೀನ್, ರೋನ್‌ಗಳಂಥ ಕೆಲವೊಂದು ಮುಖ್ಯ ನದಿಗಳು, ಉಪ ನದಿಗಳು ದೇಶದ ಆದ್ಯಂತ ಹರಿದರೂ, ಇಂಗ್ಲೆಂಡಿನ ಪ್ರಕೃತಿಗಿರುವ ಚೆಲುವಿಲ್ಲ; ಹಸುರಿಗಿರುವ ಸೊಂಪಿಲ್ಲ. ಇಂಗ್ಲೆಂಡಿನಲ್ಲಿ ದೇಶದ ಆದ್ಯಂತವಾಗಿ ಬೆಳೆಯಿಸಿದ ವೃಕ್ಷಾವಳಿಯ ಸೊಂಪನ್ನು ಇಲ್ಲಿ ಕಾಣಲಾರೆವು. ಫ್ರಾನ್ಸ್ ದೇಶದ ಪೂರ್ವಾಗ್ನೇಯ ಭಾಗವೆಲ್ಲ ಪರ್ವತ ಪ್ರದೇಶವಾದರೆ, ಉಳಿದ ಪ್ರದೇಶಗಳು ಸಾಮಾನ್ಯ ಏರುತಗ್ಗಿನ ನೆಲ; ರೈತನಿಗೆ ಉಪಯುಕ್ತವಾದ ಭೂಮಿ. ರೈಲು

ದಾರಿಯಾಗಿ ಪೇರಿಸಿಗೆ ಬರುವಾಗ, ಅನಂತರ ಪೂರ್ವಕ್ಕಿರುವ ಲಿಯೋನ್ ನಗರವನ್ನು ಸೇರುವ ತನಕ, ಒಂದೇ ತೆರನ ನಿಸರ್ಗವಿದೆ. ಸಾಮಾನ್ಯ ತಗ್ಗು ತೆವರುಗಳು;ಉತ್ತುಬಿತ್ತಿದ ಹೊಲಗಳು ಎಲ್ಲೆಲ್ಲೂ ಹಾಸಿಕೊಂಡಿವೆ. ನಗರ ನಗರಗಳೊಳಗೆ, ಹಳ್ಳಿ ಹಳ್ಳಿಗಳೊಳಗೆ ಸಾಕಷ್ಟು ದೂರವಿದೆ. ಪೇರಿಸಿನ ಇಪ್ಪತ್ತು ಮೂವತ್ತು ಮೈಲುಗಳ ಸುತ್ತಲು ಮಾತ್ರ ಜನರ ವಟ್ಟಣಿ ಹೆಚ್ಚಾಗಿದೆ. ಮನುಷ್ಯ ವಸತಿಯಿಂದಾಗಿ ಕೃಷಿಯೂ ಹೆಚ್ಚಾಗಿದೆ; ಉದ್ಯಾನ, ಸಾಲುಮರ, ಕಾಡು ಮೊದಲಾದವುಗಳ ಸೊಂಪೂ ಹೆಚ್ಚಾಗಿದೆ.

ರೋನ್, ಸೀನ್ ಮೊದಲಾದ ನದಿಗಳ ನೀರನ್ನು ಬಳಸಿಕೊಂಡು, ದೇಶದ ತುದಿಯಿಂದ ತುದಿಯ ತನಕ,ಸುಂದರವಾದ ಕಾಲುವೆಗಳನ್ನು ಮಾಡಿದ್ದಾರೆ. ನೂರಾರು ಮೈಲುಗಳ ತನಕ ಈ ಕಾಲುವೆಗಳನ್ನು ಬಳಸಿ ಸಾಮಾನುಗಳ ಸಾಗಾಟಕ್ಕೆ ಅವಕಾಶ ಮಾಡಿಕೊಂಡಿದ್ದಾರೆ.ಅವುಗಳ ಮಗ್ಗುಲಲ್ಲಿ ಯಾವಾಗಲೂ ಹುಲ್ಲಿದೆ; ಗಿಡಮರಗಳ ಸೊಂಪಿದೆ; ಹೊಲಗಳ ಸಮೃದ್ಧಿ ಕಂಡೇ ಕಾಣುತ್ತದೆ. ಲಿಯೋನ್‌ನಿಂದ ನಾವು ಪೂರ್ವಕ್ಕೆ ಮತ್ತೂ ಸರಿದಂತೆ ಈ ಸಸ್ಯ ಸಂಪತ್ತು ಹೆಚ್ಚಾಗಿ ಕಾಣುತ್ತದೆ. ಮುಂದೆ ಸ್ವಿಸ್ ನಿಸರ್ಗದೊಡನೆ ಅದು ಬೆರೆಯುವುದರಿಂದ, ಸಾಮಾನ್ಯ ಸೊಬಗಿನಿಂದ ಬೆಳೆಬೆಳೆದು, ಅತಿ ಮೋಹಕ ರೂಪಕ್ಕೆ ಅದು ಪರಿವರ್ತನೆಗೊಳ್ಳುತ್ತದೆ. ಪೇರಿಸಿನಿಂದ ಲಿಯೋನ್ ನಗರವು ಆಗ್ನೇಯಕ್ಕಿದೆ. ಅಲ್ಲಿಂದ ಮಾರ್ಸೇಲ್ಸ್ ನಗರ ದಕ್ಷಿಣಕ್ಕಿದೆ ಪೇರಿಸ್‌ನಿಂದ ಹೊರಟ ವ್ಯಕ್ತಿಗೆ ಮೊದಲು ಸೀನ್ ನದಿಯ ಶಾಖೆಗಳು, ಕಾಲುವೆಗಳು ಕಾಣಿಸತೊಡಗಿದರೆ, ಲಿಯೋನ್‌ನಿಂದ ಮುಂದುವರಿದು ಮಾಡುವ ಪಯಣಕ್ಕೆ ಸೋನ್ ಮತ್ತು ರೋನ್ ನದಿಗಳ ಸಂಗಾತಿ ದೊರೆಯುತ್ತದೆ. ಒಮ್ಮೆ ಹಗಲಲ್ಲಿ, ಒಮ್ಮೆ ರಾತ್ರಿಯಲ್ಲಿ, ಹೀಗೆ ಎರಡೆರಡು ಬಾರಿ ಈ ದಾರಿಯಾಗಿ ಪಯಣಮಾಡಿವೆ. ರೋನ್ ನದಿಯು ಕಡಲನ್ನು ಸೇರುವ ಮುಖಕ್ಕೆ ಸಮೀಪವಾಗಿಯೆ ಮಾರ್ಸೇಲ್ಸ್ ರೇವು ಇದೆ. ಈ ನದಿ ಮುಖವಷ್ಟೆ ಸಮತಟ್ಟಾದ ಭೂಮಿಯೆನ್ನಬೇಕು. ನೆಲ ಅಷ್ಟೊಂದು ಸಾರವತ್ತಾಗಿಲ್ಲದಿದ್ದರೂ, ವಿಸ್ತಾರವಾಗಿ ನಟ್ಟ ದ್ರಾಕ್ಷಾ ತೋಟಗಳನ್ನು ಕಾಣುತ್ತೇವೆ. ನಾನು ಹೋಗುವಾಗ ಈ ದ್ರಾಕ್ಷೆಯ ಬಳ್ಳಿಗಳು ಇನ್ನೂ ಚಿಗುರೊಡೆದು ಸೊಂಪನ್ನು ಬೀರಬೇಕಷ್ಟೆ. ಈ ಬಯಲು ಭೂಮಿಯ ಆಚೀಚೆಗೆ ಎತ್ತರವಾದ ಗುಡ್ಡಗಳಿವೆ; ಅಲ್ಲಿನ ನೆಲ ತೀರ ಕಗ್ಗಾಗಿದೆ. ಆದರೆ ಅವುಗಳಲ್ಲೆಲ್ಲ ದ್ರಾಕ್ಷೆಯ ತೋಟಗಳು

ಕಾಣ ಸಿಗುತ್ತವೆ. ಹರದಾರಿ ಹರದಾರಿಗಳ ದೂರ ಒಂದೇ ಬಗೆಯ ದೃಶ್ಯ ವನ್ನು ನೋಡಿ ದಣಿದ ನಮ್ಮ ಕಣ್ಣಿಗೆ, ಮಾರ್ಸೇಲ್ಸ್ ನಗರ ಬಂತೆಂದರೆ, ನಿಸರ್ಗದಲ್ಲಿ ಇನ್ನೊಂದು ಬಗೆಯ ವೈವಿಧ್ಯ ಕಾಣತೊಡಗುತ್ತದೆ. ಉನ್ನತ ವಾದ ಬೆಟ್ಟಗಳು ಒಂದು ಕಡೆ, ದಕ್ಷಿಣ ದಿಸೆಯಲ್ಲಿ ನೀಲವಾದ ಭೂಮಧ್ಯ ಸಮುದ್ರದ ನೀರು ಮತ್ತೊಂದು ಕಡೆ. ಕಡಲು ಪರ್ವತಗಳ ನಡುವಣದಲ್ಲಿ ರುವ ಭೂಮಿ ಸಮತಟ್ಟಾಗಿಲ್ಲ. ಕೆಂಗಲ್ಲು, ಶಿಲೆ, ಕೆಮ್ಮಣ್ಣು ತುಂಬಿದ ಈ ಪರ್ವತಗಳು ಬಹು ಉನ್ನತವಾಗಿ ತಲೆಯೆತ್ತಿ ನಿಂತು ಸೂರ್ಯನ ಬಿಸಿಲಿಗೆ ಕಂದು, ನೇರಳೆ, ಕಿತ್ತಳೆ ಬಣ್ಣಗಳ ವಿಚಿತ್ರವಾದ ವಿಲಾಸವನ್ನು ಹೊಮ್ಮಿಸು ತ್ತವೆ. ಅಂಥ ಬೆಟ್ಟಗಳ ವೈಯ್ಯಾರ ಬರಿದಾಗಿ ಕಾಣಿಸುವುದಿಲ್ಲ. ಅವುಗಳ ಬುಡ ದಲ್ಲಿ ದ್ರಾಕ್ಷೆಯ ತೋಟಗಳಿವೆ; ಮೇಲೆ ಇಪ್ಪೆಯ (Olive) ತೋಟಗಳಿವೆ. ಅದಕ್ಕೂ ಮೇಲೆ ಪೈನ್ ವೃಕ್ಷಗಳು ಬದುಕಬೇಕೆಂಬ ಹಟದಿಂದ ನಿಂತು ಕೊಂಡಿವೆ. ಕಡಲ ಕರಾವಳಿಯೆಲ್ಲ ಅಂಕು ಡೊಂಕು. ನೂರಾರು ಗುಡ್ಡಗಳು ನೀಲ ಕಡಲನ್ನು ಮುದ್ದಿಸಲು ಬಂದಿವೆ. ಮಾರ್ಸೇಲ್ಸಿನಿಂದ ಕಡಲ ಸೆರಗನ್ನು ಹಿಡಿದು ಮೂಡಣಕ್ಕೆ ಹೋದರೆ; ರೈಲು ಹಾದಿಯುದ್ದಕ್ಕೂ ಅಸಂಖ್ಯಾತ ಸಣ್ಣ ಪುಟ್ಟ ಕೊಲ್ಲಿಗಳೂ, ಆಖಾತಗಳೂ ಇವೆ. ಈ ದಾರಿಯಲ್ಲೆಲ್ಲ ಯೂರೋಪಿಗೆ ಪರದೇಶಿಯಾದ ಖರ್ಜೂರದ ಮರವು 'ತಾನು ಬಂದಿದ್ದೇನೆ' ಎಂದು ಕರೆದು ಹೇಳುವಂತೆ ಕಾಣಿಸುತ್ತದೆ. ಫ್ರಾನ್ಸಿನ ಜನಗಳೇ ಅವನ್ನು ತಂದು ನಟ್ಟರೋ, ಸ್ಪೈನ್ ನನ್ನು ಹಿಂದೆ ಅಧಿಕರಿಸಿದ ಮುಸ್ಲಿಮ್ ರಾಷ್ಟ್ರಗಳು ತಮ್ಮ ಅಧಿಕಾರದ ಸಂಕೇತವಾಗಿ ಅವನ್ನು ತಂದು ನಟ್ಟರೋ ಯಾರು ಬಲ್ಲ?

ಈ ಕಡಲಿನ ಕರಾವಳಿಯಲ್ಲಿ ಸುಖವಾಗಿರುವುದಕ್ಕೆ ಸಮತಟ್ಟಾದ ಭೂಮಿಯೆಂಬುದಿಲ್ಲ. ಆದರೆ ಚಳಿ ದೇಶದ ಹವೆಯ ಜನಗಳಿಗಿರುವ ಬಿಸಿಲಿನ ಮೋಹವನ್ನು ಹಿಂಗಿಸುವುದಕ್ಕೆ ಇಲ್ಲಿಗೇನೆ ಬರಬೇಕಾಗಿದೆ. ಇಲ್ಲಿನ ಕಡಲು, ಇಲ್ಲಿನ ಉಷ್ಣತೆ, ಇಲ್ಲಿನ ನಿಸರ್ಗದ ಒರಟು ಬಣ್ಣ ಬೆಡಗು, ಅವರಿಗೆ–ಶೆರ್ರಿ, ಶೇಂಪೈನುಗಳಂತೆ ಅಮಲುಣಿಸುತ್ತವೆ. ಮಾರ್ಸೇಲ್ಸ್ ದಾಟಿದರೆ ಟುಲೋನ್ ಬಂದರು ಬರುತ್ತದೆ. ಅಲ್ಲಿಂದ ಪ್ರತಿ ಅಂಗುಲ ನೆಲವೂ ವಿಲಾಸಿಗಳ, ಪ್ರಣಯಿ ಗಳ ನಂದನವನವಾಗುತ್ತದೆ. ಕೇನ್ಸ್, ಎಂಟಿಬಿಸ್, ನೀಸ್, ಮೊಂಟಿ ಕಾರ್ಲೋ, ಅಲ್ಲಿಂದ ಮುಂದೆ ಇಟೆಲಿಯ ಸಾನ್ ರೋಮಿಯೋ-ಇವೆಲ್ಲವೂ ಅವರ 'ರಿವೇರಾ'ಗಳು; ಕಡಲು ತಡಿಯ ವಿಲಾಸ ತಾಣಗಳು. ಈ ದಾರಿಯು

ದ್ದಕ್ಕೂ ಬೆಟ್ಟ, ಕಡಲು, ಮನುಷ್ಯ–ಮೂವರೂ ಕೂಡಿಯೇ ಬುದ್ಧಿ ಕಳೆದು ಕೊಂಡಂತೆ ಕಾಣುತ್ತದೆ. ಬೆಟ್ಟದ ಆಕಾರಗಳೋ ವಿಚಿತ್ರ. ಅವು ಕಡಲಿಗೆ ಚಾಚುವ ತೋಳು, ಕೈ, ಬೆರಳುಗಳು-ಅವೂ ವಿಚಿತ್ರ ಆಕೃತಿಯವು. ಕಡಲೂ ಉನ್ಮತ್ತ. ನೀಲವಾಗಿ ಸೊಕ್ಕಿ ಈ ಕೆಂಬಣ್ಣ ಹೊಂಬಣ್ಣಗಳನ್ನು ಚುಂಬಿಸಲು ಬಂದ ಜಲಕನ್ಯೆಯರಂತೆ, ಮತ್ತಮೋಹದಲ್ಲಿ ಸಿಲುಕಿದವರಂತೆ ನಗು, ನಲಿವುಗಳಲ್ಲಿ ಮೈಮರೆತವರಂತೆ ಕಾಣುತ್ತದೆ. ಅದರ ದಂಡೆಯಲ್ಲಿ ನೂರು ಗಜ ನೆಟ್ಟಗಿನ ಜಾಗ ಸಿಗುವುದೂ ಕಷ್ಟ. ನಮ್ಮೂರ ದಂಡೆಗಳಲ್ಲಿ ಕಾಣಿಸುವ ಶುಭ್ರ ಮರಳಿನ ದಿನ್ನೆ ಕಾಣಿಸುವುದೇ ಇಲ್ಲ. ನೆಲವೆಲ್ಲ ಉರುಟುರುಟು ಕಲ್ಲು ಗಳಿಂದ, ಹರಳುಗಳಿಂದ ತುಂಬಿಕೊಂಡಿದೆ. ಕಡಲ ಸೆರಗಿನ ಉದ್ದಕ್ಕೂ, ಬೆಳಗಿಂದ ಸಂಜೆಯ ತನಕವೂ ಒಂದೊಂದು ಕಲ್ಲಿಗೊಂದೊಂದು ಮಂದಿಯಂತೆ ಕಾಣಿಸಬೇಕೇ? ಅಲ್ಲಿ ಬಂದು ವಿಹರಿಸುವ ಜನಗಳ ಉಡುಗೆತೊಡುಗೆಗಳಲ್ಲಿ ಓಕುಳಿಯಾಟದ ವಿಚಿತ್ರ ಬಣ್ಣಗಳೆಲ್ಲ ಕಾಣುತ್ತವೆ. ಎಳೆಯರಿಂದ ಮುಪ್ಪಿನವರ ತನಕ, ಗಂಡು ಹೆಣ್ಣೆನ್ನದೆ ಅತಿ ಕಡಿಮೆ ವಸ್ತ್ರಕ್ಕೆ ಅಂಟಿಕೊಂಡು ನಲಿದಾಡುವ ಮಹಾನುಭಾವರೇ ಬಹಳ. ಇಲ್ಲಿನ ಮನೆಗಳ ಬಳಿಯಲ್ಲಿ ನಟ್ಟು ಬೆಳೆಯಿಸಿದ ತೋಟಗಳಲ್ಲಿ ಗುಲಾಬಿ ಮೊದಲಾದ ಹೂಗಳ ಸೊಂಪೋ-ಅತ್ಯಧಿಕ! ಕುಡಿದ ಕೋತಿಗೆ ಚೇಳು ಕಚ್ಚಿಸಿದಷ್ಟು ತುಂಬ ವಿಪರೀತ. ಇಲ್ಲಿ ನನಗೆ, ಈ ನಿಸರ್ಗವನ್ನು ಕಂಡು ಮುನಿದು ಚಿಂತಿಸುತ್ತಿದ್ದ ಋಷಿಗಳಂತೆ ಕಾಣಿಸಿದ ಒಂದೇ ಒಂದು ನೋಟ, ಪೈನ್ ವೃಕ್ಷಗಳದು. ಅಲ್ಲಲ್ಲಿ ಅವುಗಳ ಸಾಲುಗಳಿವೆ, ಕಾಡುಗಳಿವೆ. ಅವುಗಳ ನೆರಳಲ್ಲಿ ಅಸಂಖ್ಯಾತ ಜನವರ್ಗ ಕೊರವಂಜಿಗಳಂತೆ ಬೀಡು ಬಿಟ್ಟುಕೊಂಡಿರುತ್ತಾರೆ ಆದರೂ ಅವು ಮಾತ್ರ ಇಲ್ಲಿನ ನಿಸರ್ಗಕ್ಕೆ, ರಸೋದ್ವೇಗಕ್ಕೆ, ಪ್ರತಿಯಾದ ಜಡಸಾಕ್ಷಿಗಳಾಗಿ ನಿಂತಿವೆ. ಅವುಗಳ ಬಣ್ಣವೂ ಜಡ ಹಸುರು!

ಕೇನ್ಸ್ ದಾಟಿ ಮುಂದಕ್ಕಿರುವುದೇ ನಾನು ಹೋಗಬೇಕಾದ ನೀಸ್ ನಗರ. ಅದೊಂದು ವಿಶ್ವವಿದ್ಯಾನಿಲಯದ ಕೇಂದ್ರ. ಮೆಡಿಟರೇನಿಯನ್ ಸಂಸ್ಕೃತಿಯನ್ನು ಕಾಯಲು ನಿಂತಂಥ ತಾಣ. ಆ ಸಂಸ್ಕೃತಿಯ ಸಾರವೆಲ್ಲ ನಗರದ ಕಡಲ ಕರಾವಳಿಯಲ್ಲಿ, ಬೀದಿಗಳಲ್ಲಿ, ಮಾನವ ವ್ಯಕ್ತಿಗಳಿಂದ ತುಂಬಿ ತುಳುಕುತ್ತದೆ. ಅದೊಂದು ಗಂಧರ್ವ, ಕಿನ್ನರ ಲೋಕ! ಇಲ್ಲಿಂದ ಇನ್ನೂ ಮೇಲಕ್ಕೆ ಹೋದರೆ, ಕಡಲು ಪರ್ವತಗಳ ವಿಚಿತ್ರವಿಲಾಸ ಮತ್ತೂ ಹೆಚ್ಚು

ತ್ತದೆ. ಬೆಟ್ಟದ ಸೆರಗುಗಳು ಆರೇಳು ಸಾವಿರ ಅಡಿಗಳಷ್ಟು ಒಮ್ಮೆಗೇ ಮೇಲ ಕ್ಕೆದ್ದು, ನೆಟ್ಟಗೆ, ಥಟ್ಟನೆ, ಕಡಲಿಗೆ ತಮ್ಮ ತೋಳುಗಳನ್ನದ್ದುತ್ತವೆ. ಒಂದು ಬಗೆಯ ದೈತ್ಯ ಸೌಂದರ್ಯ ಅವಕ್ಕೆ. ಈ ಬೆಟ್ಟದ ಸೆರಗುಗಳನ್ನು ಮಳೆ ಗಾಳಿಗಳು ಕೊರೆದ ಬಗೆ, ಕಡಲು ಸೊಕ್ಕಿ ನುಂಗಿದ ಬಗೆ, ಅಲ್ಲಲ್ಲಿ ಕಡಲಿನಲ್ಲಿ ವಿಚಿತ್ರ ಆಕೃತಿಯಿಂದ ತೇಲುವ ನೀಲ ಹಸುರು ರತ್ನಗಳಂತೆ ಕಾಣಿಸುವ ದ್ವೀಪಗಳ ಸೌಂದರ್ಯ-ಇವೆಲ್ಲ ಮನಸ್ಸನ್ನು ಹುಚ್ಚುಗೊಳಿಸುತ್ತವೆ. ಆದರೆ ಬೇಸಾಯಮಾಡಿ ಬದುಕಬೇಕು ಎಂದು ಬಯಸುವ ರೈತನಿಗೆ ಇಲ್ಲಿ ತಾವಿಲ್ಲ. 'ವಿಶ್ರಾಂತಿ' ಎಂದು ಅನೇಕ ಜನ ಇಲ್ಲಿಗೆ ಬರುವರಾದರೂ, ಈ ವಿಶ್ರಾಂತಿಯ ದಾರಿ ಬೇರೆ. ಇಲ್ಲಿಯ ಜನಗಳ ಜೀವನೋಪಾಯ ಸಾಗುವುದೇ ವಿಲಾಸ ದಿಂದ. ವಿಲಾಸವೇ ಮುಖ್ಯ ವ್ಯಾಪಾರ. ಅವುಗಳಿಗೆ ನೃತ್ಯ, ಗೀತ, ಮದ್ಯ, ಜೂಗಾರು-ಇವುಗಳೇ ಸಾಧನ, ಪರಿಕರಗಳು. ನೀಸ್ ನಗರದ ಬಳಿಕ ಸಿಗುವ ಮೊಂಟೆಕಾರ್ಲೋ ಲೋಕಕ್ಕೇನೆ ಹೆಸರಾದ ಜೂಗಾರಾಟದ ಕೇಂದ್ರ. ಸಾನ್ ರೋಮಿಯೋ ಇನ್ನೊಂದು ಅಂಥ ಸ್ವರ್ಗ. ಎಷ್ಟೊಂದು ಜನ ಭಿಕ್ಷಾಪಾತ್ರೆ ಹಿಡಿದು ಇಲ್ಲಿಂದ ತಮ್ಮ ಮನೆಗೆ ಮರಳಿದ್ದಾರೋ ಯಾರಿಗೆ ಗೊತ್ತು? ನಮ್ಮ ಅಂತರಾಷ್ಟ್ರೀಯ ಬರಹಗಾರರ ಸಮ್ಮೇಳನ ನೀಸ್ ನಗರದಲ್ಲಿ ಒಂದು ವಾರ ಕಾಲ ನಡೆಯಿತು. ನಾನು ಹೋಗಿ ಮೂರುನಾಲ್ಕು ದಿನಗಳಿದ್ದು, ನೋಡಿ ಮರಳಿದೆ.

ಇದು ರಿವೇರಾ ಭಾಗವಾದುದರಿಂದ ಬೇಸಿಗೆಯಲ್ಲಿ ಯುರೋಪ್, ಅಮೇರಿಕಾ ಮೊದಲಾದ ದೇಶಗಳಿಂದ ವಿಲಾಸಕ್ಕಾಗಿ ಜನ ಬಂದು ನೆಲೆಸು ತ್ತಾರೆ. ಹೀಗಾಗಿ ತಿಂಗಳಿಗೆ ಮುಂಚಿತವಾಗಿ ಹೊಟೇಲನ್ನು ಕಾದಿರಿಸಿದ್ದೆ. ಹೆಸರಿಗೆ ನನ್ನದು ಎರಡನೆಯ ತರಗತಿಯ ಹೋಟೆಲು. ಸುಮಾರು ಮುನ್ನೂರು ಬಹು ದೊಡ್ಡ ಕೊಟಡಿಗಳಿರುವ ಮಂದಿರ. ನಾವು ಮಲಗುವ ಮಂಚವೇ ಎಂಟಡಿ, ಆರಡಿ ಗಾತ್ರದ್ದು. ವಾಸದ ಕೊಟಡಿ, ಸ್ನಾನಗೃಹ, ಕಿರುಮನೆ, ಇವೆ ಲ್ಲ ಸೇರಿ ಸುಮಾರು ಮೂವತ್ತು ಮೂವತ್ತಡಿ ವಿಶಾಲವಾಗುತ್ತದೆ. ಒಳ್ಳೆಯ ಸೌಕರ್ಯಗಳಿಗೇನೂ ಕೊರತೆಯಿಲ್ಲ. ನಿವಾಸದ ಬಾಡಿಗೆ-ದಿನಕ್ಕೆ ಇಪ್ಪತ್ತು ರೂಪಾಯಿ. ಉಳಿದ ವೆಚ್ಚ ಅದರ ಇಮ್ಮಡಿ. ಭೋಜನಮಾಡಿದರೆ ಹದಿನೈದು ರೂಪಾಯಿಗಳಾದರೂ ಬೇಕು. ಎಲ್ಲದಕ್ಕೂ ಒಂದಕ್ಕೆ ಎಂಟರ ಬೆಲೆ. ನಾಲ್ಕಾ ಣೆಯ ಒಂದು ಹಣ್ಣಿಗೆ ಮೂರು ರೂಪಾಯಿ ಬೆಲೆ! ಇದೇ ಮಾದರಿಯಲ್ಲಿ

ಉಳಿದ ವಸ್ತುಗಳ ಮೌಲ್ಯ. ಅರಮನೆಯ ಸಂಪತ್ತಿದ್ದವರಿಗೆ ಮಾತ್ರ ಈ ಊರು ಸಲುತ್ತದೆ. ಊರೇನೋ ಬಹು ಸುಂದರವಾಗಿದೆ. ಅಗಲವಾದ ದಾರಿಗಳು; ಸಾಲು ಮರಗಳು; ನಿಡಿದಾದ ಕಡಲು ಕಿನಾರೆ. ಅದರ ಉದ್ದಕ್ಕೂ ತಾಳೆಯ ಮರದ ಸಾಲುಗಳಿವೆ. ಇಲ್ಲಿನ ಕಡಲ ದಂಡೆ ಎರಡು ಮೈಲುಗಳಷ್ಟು ಉದ್ದವಾಗಿದೆ. ಅದರ ದಂಡೆಯಲ್ಲಿ ಒಂದಕ್ಕಿಂತ ಇನ್ನೊಂದು ವಿಲಾಸಪೂರ್ಣವಾದ ಹೊಟೇಲುಗಳಿವೆ. ಹಗಲಿನಲ್ಲಿ ಬಿಸಿಲು ಕೊರೆಯುವಂಥದು. ಇಲ್ಲಿನ ಸೆಕೆ ಕಂಡು ನಮ್ಮೂರ ಬೇಸಗೆಯ ನೆನಪಾಯಿತು ನನಗೆ. ಅಲ್ಲಿನವರು ತಮ್ಮ ಬಿಳಿದೊಗಲಿಗೆ ಕಂದು ಬಣ್ಣ ತಂದುಕೊಳ್ಳುವುದಕ್ಕೆ, ಇಲ್ಲಿಯ ದಂಡೆಯಲ್ಲಿ ಬಿಸಿಲಿಗೆ ಬಂದು ಮೈಒಡ್ಡುತ್ತಾರೆ. ಏನು ಭ್ರಮೆಯೋ! ತೊಗಲಿನ ಚರ್ಮ, ಬಿಸಿಲಿಗೆ ಸುಟ್ಟು ಹಾಳೆಯಾಗಿ ಒಚ್ಚಿಹೋಗುವುದುಂಟಂತೆ. ಇಲ್ಲಿ ನನಗಿಂತ ಕಂದು ಬಣ್ಣ ತಾಳಿದವರು ಅನೇಕರನ್ನು ಕಂಡೆ. ಇಲ್ಲಿ ಬರುವ ಜನಕ್ಕೆ ಬಟ್ಟೆಗಳ ಮೇಲೆ ಏನೇನೂ ಆದರವಿಲ್ಲ. ಕಡಲ ದಂಡೆಯ ತುಂಬ, ಅರ್ಧ ನಗ್ನಾವಸ್ಥೆಯ ಮಾನವ ಲೋಕ ಇಲ್ಲಿನದು. ವಯಸ್ಸಿನ ಅಂತರವಿಲ್ಲದೆಯೆ ನೂರಾರು ತೆರನ ಜಲಕ್ರೀಡೆಗಳಲ್ಲಿ ಜನ ಮಗ್ನರಾಗಿರುತ್ತಾರೆ. ಈ ಊರು ಅಂತಃರಾಷ್ಟ್ರೀಯ ವಿಹಾರ ಮಂಟಪ. ಇಲ್ಲಿಗೆ ಬಂದವರು ಹೊಸ ದಾಂಪತ್ಯ ಪಡೆದು ಹೋದರೆ, ಇನ್ನೊಂದು ವರ್ಷ ಬಂದಾಗ, ಅವರೇ ದಂಪತಿಗಳನ್ನು ತಿರುಗಿ ಕಾಣುತ್ತೇವೆ ಎನ್ನುವ ಧೈರ್ಯವಿಲ್ಲ.

ಕತ್ತಲಾಯಿತೆಂದರೆ ನಗರವೆಲ್ಲವೂ ಒಂದು ದೀಪೋತ್ಸವ. ಕಡಲ ದಂಡೆಯ ಅಂಚಿನಲ್ಲಿರುವ ನೂರಾರು ಉಪಾಹಾರ ಗೃಹಗಳು ಶ್ರೀಮಂತರಾದ ವಿಲಾಸಿಗಳಿಂದ ಕಿಕ್ಕಿರಿಯುತ್ತದೆ. ಸಂಗೀತ,ನೃತ್ಯಗಳ ಅಮಲಿನಲ್ಲಿ ಕುಡಿತದ ಅಮಲನ್ನು ಸೇರಿಸಿ ಜನ ಮೈಮರೆಯುವುದು ಕಾಣುತ್ತದೆ. ಉತ್ಕೃಷ್ಟ ಪಾಶ್ಚಾತ್ಯ ಸಂಗೀತವನ್ನೂ ಇಲ್ಲಿ ಕೇಳಬಹುದು. ಸುರ ಸುಂದರಿಯರನ್ನೂ ಇಲ್ಲಿ ಕಾಣಬಹುದು. ಆದರೆ ಈ ಊರಿನಲ್ಲಿ ಸದಾ ಬೀಸುತ್ತಿರುವ ಉನ್ಮತ್ತ ಮಾರುತಕ್ಕೆ ಬಲಿಯಾಗದೆ ಮರಳುವವರೆಷ್ಟು ಜನ?

ಇಂಥ ಚೆಲುವಿನ ಅಮರಾವತಿಯನ್ನು ನಮ್ಮ ಸಮ್ಮೇಳನಕ್ಕಾಗಿ ಗೊತ್ತುಮಾಡಿದ್ದರು. ಮೆಡಿಟರೇನಿಯನ್ ವಿಶ್ವವಿದ್ಯಾಲಯದ ಕಟ್ಟಡವನ್ನು ಅದಕ್ಕಾಗಿ ಬಿಟ್ಟುಕೊಟ್ಟಿದ್ದರು. ನಾನು ಹೋದೊಡನೆಯೆ ಈ ಸಂಸ್ಥೆಯ ಕಾರ್ಯದರ್ಶಿಯರಾದ ಡೇವಿಡ್ ಕಾರ್ವರನ್ನು ವಿಚಾರಿಸಿದೆ. ಅವರಿದ್ದರ

ಲಿಲ್ಲ. ಅಲ್ಲಿ ಇದ್ದವರಿಗೆ ಇಂಗ್ಲಿಷ್ ಬರುತ್ತಿರಲಿಲ್ಲ. ಫ್ರಾನ್ಸಿನಲ್ಲಿ ಸಂಚರಿಸು ವವರಿಗೆ ಇಂಗ್ಲಿಷ್ ಯಾವ ಪ್ರಯೋಜನಕ್ಕೂ ಬಾರದು. ಮಾತ್ರವಲ್ಲ,ಮಾತ ನಾಡಿದರೆ ಒಂದು ಬಗೆಯ ತಿರಸ್ಕಾರವೋ ಎಂಬ ಒಂದು ಬಗೆಯ ಸಂಶಯ, ಹೋದ ನಮ್ಮಲ್ಲಿ ಉಂಟಾಗುತ್ತದೆ. ನಲ್ವತ್ತೆರಡು ರೂಪಾಯಿ ಪ್ರವೇಶಧನ ವನ್ನು ಕೊಟ್ಟು ನನ್ನ ಹೆಸರಿನಲ್ಲಿ ಬರೆದಿರಿಸಿದ್ದ ಪುಸ್ತಕ, ಕಾಗದ, ಕಾರ್ಯ ಕ್ರಮ, ಆಮಂತ್ರಣ, ಬೇಜ್ ಪಡೆದಾಯಿತು. ಯಾವುದನ್ನು ತೆರೆದು ನೋಡಿ ದರೂ ಫ್ರೆಂಚ್‌ಭಾಷೆಯೇ! ಕಾರ್ಯಕ್ರಮ ಸಹ ಇಂಗ್ಲಿಷಿನಲ್ಲಿರಲಿಲ್ಲ. ಅದು ಕೇವಲ ಫ್ರೆಂಚ ಸಾಹಿತ್ಯ ಸಮ್ಮೇಳನವಾಗುವ ಭರವಸೆ ನನಗೆ ಆಗಲೇ ಆನಿ ಸಿತು. ಪ್ರಪಂಚದಲ್ಲಿ ಅನ್ಯಭಾಷೆಗಳೂ ಇದ್ದಾವೆ ಎಂಬ ಭಾವನೆಯು ಇಲ್ಲಿನ ಜನರಿಗೆ ಆಗಿಯೇ ಇಲ್ಲ. ನನ್ನಮನಸ್ಸು ಉದ್ವಿಗ್ನಗೊಂಡಿತ್ತು. ಆಗಷ್ಟೆ ಬಂದು ಸೇರಿಕೊಂಡ ಇಂಗ್ಲಿಷ್ ತಿಳಿಯಬಲ್ಲ ಒಬ್ಬನೊಡನೆ "ನಾನು ನಾಳೆಯ ಬಂ ಡಿಗೆ ಮರಳಬಹುದೆಂದು ಕಾಣುತ್ತದೆ. ಫ್ರೆಂಚ್ ಭಾಷೆ ತಿಳಿಯದವರಿಗೆ ಇಲ್ಲಿ ಅವಕಾಶವಿರುವಂತೆ ಕಾಣಿಸುವುದಿಲ್ಲ" ಎಂದೆ. "ಇಲ್ಲ, ಉಪನ್ಯಾಸಗಳನ್ನು ಭಾಷಾಂತರಿಸುತ್ತಾರೆ" ಎಂದ ಆತ. ಹಿಂದಿನ ಸಮ್ಮೇಳಗಳಲ್ಲಿ ಹಾಗೆ ಮಾಡಿ ದ್ದಾರೆ. ಇಲ್ಲಿಯೂ ಮಾಡಬಹುದು ಎಂಬ ನಿರೀಕ್ಷೆ ನನಗೆ. ಆದರೆ ನಾನಿದ್ದ ಮೂರು ದಿನಗಳ ಕಾಲದಲ್ಲಿ ಯುನೈಟೆಡ್ ಸ್ಟೇಟ್ಸ್, ಇಂಗ್ಲೆಂಡ್ ದೇಶದ ಒಬ್ಬಿಬ್ಬರು ಪ್ರತಿನಿಧಿಗಳನ್ನು ಬಿಟ್ಟರೆ ಉಳಿದವರೆಲ್ಲರೂ ಫ್ರೆಂಚ್ ಭಾಷೆ ಯಲ್ಲೇ ಮಾತನಾಡಿದರು. ಅದನ್ನು ತಿಳಿಯದವರು ಮೂಕವಾಗಿರುತ್ತಿದ್ದರು. ಇಲ್ಲವೆ ಆಗಾಗ ಅಲ್ಲಿಂದೆದ್ದು ಹೋಗುತ್ತಿದ್ದರು. ನರಿಯೊಂದು ಕೊಕ್ಕರೆ ಯನ್ನು ತನ್ನ ಮನೆಗೆ ಊಟಕ್ಕೆ ಕರೆದ ಕತೆಯ ನೆನಪಾಯಿತು ನನಗೆ.

ಮೊದಲ ದಿನ ರಾತ್ರಿ ಎಂಟು ಘಂಟೆಗೆ ಪ್ರತಿನಿಧಿಗಳ "ಸ್ವೋರಿ" ಎಂದು ನಿಶ್ಚಯವಾಗಿತ್ತು. ಅದು ಸ್ವಾಗತ ಕೂಟವೋ, ಪರಿಚಯ ಸಮಾರಂಭವೋ ಏನೋ ಇರಬೇಕೆಂದು ನನ್ನ ಊಹೆ. ಸಂಜೆ ಹೋಗಿದ್ದೆ. ನಾರ್ವೆ, ಸ್ವೀಡನ್, ಫ್ರಾನ್ಸ್ ಮೊದಲಾದ ಯುರೋಪಿನ ರಾಷ್ಟ್ರಗಳಿಂದ, ಅಮೇರಿಕ, ಕೆನಡಾ, ಚಿಲಿ, ಬ್ರೆಜಿಲ್ ಮೊದಲಾದ ಅಮೇರಿಕನ್ ರಾಷ್ಟ್ರಗಳಿಂದ, ಭಾರತ, ಜಪಾನ್, ಲೆಬೆನಾನ್, ಆಫ್ರಿಕ ಮೊದಲಾದ ಇತರ ದೇಶಗಳಿಂದ ಇನ್ನೂರು ಮಂದಿಯಷ್ಟು ಪ್ರತಿನಿಧಿಗಳು ಬಂದಿದ್ದರು. ಅನೇಕರು ದಂಪತಿಯುಕ್ತರಾಗಿ ಆಗಮಿಸಿದ್ದರು. ಎಲ್ಲರೂ ಒಂದು ವಿಶಾಲವಾದ ಸ್ವಾಗತದ ಕೊಟಡಿಯಲ್ಲಿ

ಸೇರಿದೆವು. ಕುಳಿತಿರುವ ಅವಕಾಶ ಅಲ್ಲಿರಲಿಲ್ಲ ನಿಂತೇ ನಮ್ಮ ಕೆಲಸ. ಅದೇನೆಂದರೆ–ನಿಮ್ಮ ವ್ಯೆಯನ್ನು ಹಾದ ಒಬ್ಬ ಪ್ರತಿನಿಧಿಯನ್ನು ಕಂಡು 'ನಿಮ್ಮ ವೇಶ?' ಎಂದು ಕೇಳುವುದು. ಆತನು ಇಂಗ್ಲಿಷ್ ಬಿಟ್ಟು ಅನ್ಯ ಭಾಷೆಯನ್ನು ಮಾತನಾಡಿದರೆ, ಕೈಯಿಂದ ಭರತ ನಾಟ್ಯಮಾಡಿ, ಅವನನ್ನು ಬೀಳ್ಕೊಡುವುದು. ಪೂರ್ವಪರಿಚಯ ಇದ್ದವರು ಸರಸ ಸಂಭಾಷಣೆ ತೊಡಗಿದರು. ನಮ್ಮ ಎದುರಿಗಿದ್ದ ಸೀಳವಾದ ಮೇಜಿನ ಮೇಲೆ ಗಾಜಿನ ದಾನಿಗಳನ್ನು ತಂದಿರಿಸಿದರು. ಹತ್ತಾರು ಬಗೆಯ ಮದ್ಯಗಳನ್ನು ತಂದು ಸುರಿಯ ತೊಡಗಿದರು. ನೀರು, ಬೀರು, ಸೋಡಾ ಮೊದಲಾದುವೆಲ್ಲಕ್ಕೂ ಅಲ್ಲಿ ಬಹಿಷ್ಕಾರವಿತ್ತು. ಯಾವ ಸ್ವಾಗತ ಭಾಷಣವೂ ಇದ್ದಿರಲಿಲ್ಲ. ಪರಿಚಯದ ಮಾತುಗಳೂ ಇದ್ದಿರಲಿಲ್ಲ. ಸುಮಾರು ನಾನ್ನೂರು ಸೀಸೆಗಳು ಬರಿದಾದುವು. ಪೆಟ್ಟಿಗೆಗಳು ಕಾಲಿ ಸೀಸೆಗಳಿಂದ ತುಂಬಿದುವು. ಬಂದವರು ಗೊತ್ತಿದ್ದವರೊಡನೆ ಗೊತ್ತಿದ್ದಷ್ಟು ಮಾತನಾಡಿ ಚದರುತ್ತಲೇ, ತನ್ನಂತೆ ಈ ಪ್ರಥಮಾಧಿವೇಶನ ಕೊನೆಗೊಂಡಿತು.

ಮರುದಿವಸ ಹತ್ತು ಘಂಟೆಗೆ ನಮ್ಮ ಅಧಿವೇಶನದ ಪ್ರಾರಂಭ. ನಾನು ತುಸು ಮುಂಚಿತವಾಗಿ ಹೋಗಿದ್ದೆ. ಭಾರತದ ಸಿ. ಪಿ. ರಾಮಸ್ವಾಮಿಯವರೂ ಬಂದಿದ್ದರು. ಅವರ ಗುರುತು ಮಾಡಿಕೊಂಡು ಬಿಸಿಲಲ್ಲಿ ಹರಟುತ್ತ ನಿಂತೆ. ಹತ್ತೂಕಾಲರ ತನಕ ಮಂದಿರದ ಬಾಗಿಲನ್ನು ತೆರೆಯುವವರಿದ್ದಿಲ್ಲ. ಸಮ್ಮೇಳನದ ಆರಂಭ ಹತ್ತೂವರೆಗೆಂದು ಪುರವಣಿಗರಿಗೆ ಆಮಂತ್ರಣವಿತ್ತಂತೆ; ಪ್ರತಿನಿಧಿಗಳಿಗೆ ಹತ್ತು ಘಂಟೆಗೆ ಎಂಬ ಆಮಂತ್ರಣ! ಹತ್ತೂವರೆಗೆ ನಾವೆಲ್ಲ ಒಂದು ಹಿರಿಯ ಸಭಾ ಸದನದಲ್ಲಿ ಸೇರಿದೆವು. ಪ್ರಾರಂಭದಲ್ಲಿ ಫ್ರೆಂಚ್ P E. N. ಅಧ್ಯಕ್ಷರಾದ ಸೊರೂವಾರವರು ನಿಂತು ಸ್ವಾಗತಭಾಷಣ ಮಾಡಿದರು. ಮೇಲಿನ ವೇದಿಕೆಯಲ್ಲಿ ಎಂಡ್ರೂ ಮುಲ್ವಾ, ಸೊರೂವಾ, ಸ್ವೀಡನಿನ ಫ್ರಿನ್ಸ್ ವಿಲಿಯಮ್ ಮೊದಲಾದ ಪ್ರಮುಖರು ಕುಳಿತಿದ್ದರು. ಅವರಲ್ಲಿ ಇಬ್ಬರು ಮೂವರು ಮಂದಿ ಫ್ರೆಂಚ್ ಭಾಷೆಯಲ್ಲಿಯೆ ಭಾಷಣಮಾಡಿದರು. ಅವೆಲ್ಲ ಸ್ವಾಗತದ ಮಾತುಗಳಿರಬೇಕು ಎಂದು ನಾವು ಊಹಿಸಿಕೊಂಡೆವು.

ಅನಂತರ ಬೆಳಿಗ್ಗೆ, ಮಧ್ಯಾಹ್ನ, ಬೇರೆ ಬೇರೆ ಅಧ್ಯಕ್ಷರ ಕೆಳಗೆ, ಒಂದು ಚರ್ಚಾ ಕೂಟವು ಆ ವಾರವೆಲ್ಲ ನಡೆಯಿತು. ಅದರ ಕೆಲವು ಸಭೆಗಳು ಬೇರೆ ಸ್ಥಳಗಳಲ್ಲೂ ಆದವು. ಒಂದು ಸಭೆ ಮಾಂಟೆ ಕಾರ್ಲೋವಿನಲ್ಲಾಯಿತು.

ಅದಕ್ಕೂ ನಾನು ಹೋಗಿದ್ದೆ. ಫ್ರೆಂಚ್ ಸಾಹಿತಿಗಳಾದ ಎಂಡ್ರೂ ಮುರ್ವಾರೆವರು "ತರುಣರು ಮತ್ತು ಸಾಹಿತ್ಯ" ಎಂಬ ವಿಚಾರದಲ್ಲಿ ಚರ್ಚೆಯ ಪ್ರಾರಂಭವನ್ನು ಮೊದಲ ದಿವಸ ಮಾಡಿದರು. ಅನೇಕರು ಅದರಲ್ಲಿ ಭಾಗವಹಿಸಿದರು. ಕೆಲವೇ ಇಂಗ್ಲಿಷ್ ಮತ್ತು ಅಮೇರಿಕನ್ ವಕ್ತಾರರ ವಾದಸರಣಿ ಇಂಗ್ಲಿಷ್‌ನಲ್ಲಿ ನಡೆದುದರಿಂದ, ಚರ್ಚೆಯ ಮುಖ್ಯ ಪ್ರವಾಹ ಹೇಗಿತ್ತು ಎಂದು ನಾನು ಊಹಿಸಿಕೊಳ್ಳುವುದು ಸಾಧ್ಯವಾಯಿತು. ಮುರ್ವಾರೆನವರು-ಆಧುನಿಕ ತರುಣ ಸಾಹಿತಿಗಳಿಗೆ ಆವೇಶ, ಅನುರಕ್ತಿ ಬಲುವಾಗಿದ್ದು ವಾಸ್ತವಿಕತೆಯ ಅರಿವಿಲ್ಲದೆ ಹೋಗಿದೆ-ಎಂದು ವಾದ ಮಂಡಿಸಿದ್ದರಂತೆ. ಅದರ ಹಲವು ಮುಖಗಳನ್ನು ಕುರಿತು ಅಲ್ಲಿ ಚರ್ಚೆಗಳಾದುವು. ಅವರ ವಾದವನ್ನು ಖಂಡಿಸಿದವರನೇಕ. ಯುದ್ಧಾನಂತರದ ಪರಿಸ್ಥಿತಿಯಿಂದ ಉಂಟಾದ ನಿರಾಶಾದಾಯಕ ವಾತಾವರಣದಿಂದ ತರುಣರ ಮನಸ್ಸು ಹಲವಾರು ನಿರಾಶೆಗಳಿಗೆ ಸಿಕ್ಕಿದೆ ಎಂದು ಕೆಲವರು ವಾದಿಸಿದರು. 'ಯಶಸ್ಸನ್ನು ದೊರಕಿಸಿಕೊಂಡ ಮುರ್ವಾರಂಥ ವೃದ್ಧ ಸಾಹಿತಿಗಳಿಗೆ, ಬದುಕಿನ ಹೋರಾಟ ನಡೆಸುವ ತರುಣ ಸಾಹಿತಿ ಕಷ್ಟವೇ ತಿಳಿಯಲಾರದು' ಎಂದರು ಕೆಲವರು. ಒಂದು ದಿನದ ಸಭೆಗೆ ಪ್ರಿನ್ಸ್ ವಿಲಿಯಮ್ ರವರೂ ಅಧ್ಯಕ್ಷರಾಗಿದ್ದರು. ಇನ್ನೊಂದು ದಿವಸ, ಸರ್ ಸಿ. ಪಿ. ಯವರು ಅಧ್ಯಕ್ಷರಾಗಿದ್ದರು. ಸಿ. ಪಿ. ಯವರ ಭಾಷಣವು ನಾಲ್ಕನೆಯ ದಿನ ನಡೆದಿರಬೇಕು ಆಗ ನಾನಿದ್ದಿರಲಿಲ್ಲ. ಪ್ರಿನ್ಸ್ ವಿಲಿಯಮ್‌ರವರದು ನೀಳವಾದ ಕಾಯ, ಸಾದಾ ಉಡುಗೆ. ಎಲ್ಲರಲ್ಲಿಯೂ ಬೆರೆಯುವ ಸ್ವಭಾವದವರು. ಅವರಿದ್ದ ದಿನದ ಸಭೆ—ಮಾಂಟೆ ಕಾರ್ಲೋವಿನಲ್ಲಾಯಿತು. ಸಭಾಪ್ರಾರಂಭ—ಕಾರ್ಯಕ್ರಮದಲ್ಲಿ ಮೂರು ಘಂಟೆಗೆ ಎಂದು ಬರೆದಿತ್ತು. ಆಗ ಅದರ ವ್ಯವಸ್ಥಾಪಕ ವರ್ಗವೇ ಕಾಣುವುದಕ್ಕಿರಲಿಲ್ಲ. ಸಭೆಯು ತೊಡಗಿದುದು ನಾಲ್ಕು ಘಂಟೆಗೆ. ನಮ್ಮೂರಿನ ಗಾಳಿ ಫ್ರಾನ್ಸಿಗೂ ಚೆನ್ನಾಗಿ ಬೀಸಿದೆ ಎನ್ನುವ ಅನುಭವ ನನಗಾಯಿತು. ಸೇರಿದ ಪ್ರತಿನಿಧಿಗಳನ್ನು, ವಿವಿಧ ಕಾರ್ಯಕ್ರಮಗಳಿಗಾಗಿ ನಾನಾ ಕಡೆಗಳಿಗೆ ಬಸ್ಸುಗಳಲ್ಲಿ ಒಯ್ಯುವ ಏರ್ಪಾಟನ್ನೇನೋ ಮಾಡಿದ್ದರು. ಆದರೆ ಕಾರ್ಯಕ್ರಮದ ವಿವರ, ಸ್ಥಳ, ಕಾಲ, ಎಲ್ಲಿಗೆ ಹೋಗಬೇಕು, ಎಲ್ಲಿಗೆ ಬರಬೇಕು—ಎಂದು ತಿಳಿಸುವ ವ್ಯವಸ್ಥೆ ಇಷ್ಟಿಷ್ಟೂ ಇದ್ದಿರಲಿಲ್ಲ. ಸಾಹಿತಿಗಳು ಹೇಗೂ ಸ್ವತಂತ್ರರು; ನಮ್ಮನ್ನು ಸ್ವಾಗತಿಸಿದ ಫ್ರೆಂಚ್ ಸಾಹಿತಿಗಳು ಇನ್ನಷ್ಟು ಹಾಗೆ.

ಈ ಪ್ರದರ್ಶನಕ್ಕೆ ಬಂದವರಲ್ಲಿ ಕಮ್ಯುನಿಸ್ಟ್ ರಾಷ್ಟ್ರಗಳಿಂದ ಯಾವನೊಬ್ಬ ಪ್ರತಿನಿಧಿಯೂ ಬಂದಿರಲಿಲ್ಲ. ಆದರೆ ಬಂದವರಲ್ಲಿ--ಪೋಲೆಂಡ್, ಜೆಕೊಸ್ಲೊವೋಕಿಯಾ, ಹಂಗೆರಿ, ಪೂರ್ವ ಜರ್ಮನಿ ಮೊದಲಾದ ಭಾಗಗಳಿಂದ ತಪ್ಪಿಸಿಕೊಂಡು ಬಂದು, ಯುರೋಪಿನ ಸ್ವತಂತ್ರರಾಷ್ಟ್ರಗಳಲ್ಲಿ ಆಶ್ರಯ ಪಡೆದಿರುವ ಮೂವತ್ತು ಮಂದಿಯಷ್ಟು ಪ್ರತಿನಿಧಿಗಳು ಇದ್ದರು. ಅಂಥವರಲ್ಲಿಯೂ ಉಳಿದವರಲ್ಲಿಯೂ ಕೆಲವೊಂದು ಸದಸ್ಯರ ಪರಿಚಯಕ್ಕೆ ಅವಕಾಶ ದೊರಿತುದರಿಂದ, ಉಕ್ಕಿನ ಫರದೆಯ ಒಳಗೆ ಸ್ವತಂತ್ರ ಮನಸ್ಕನಾದ ಸಾಹಿತಿಗಾಗಲಿ ಕಲಾವಿದನಿಗಾಗಲಿ ಯಾವ ಬಗೆಯ ಅನುಭವಗಳಾಗಿವೆ-ಎಂಬುದನ್ನು ತಿಳಿಯುವುದಕ್ಕೆ ಅವಕಾಶವಾಯಿತು. ಅಲ್ಲಿ ವ್ಯಕ್ತಿ ಸ್ವಾತಂತ್ರ್ಯವನ್ನು ಕಾಣದೆ ಇದ್ದುದರಿಂದಲೇ ಈ ಜನರು ಸ್ವದೇಶದಿಂದ ತಲೆಮರಿಸಿಕೊಂಡು, ಗುಪ್ತದಾರಿಯಿಂದ ಪರದೇಶಗಳಿಗೆ ಹೋಗಿ ಹೇಗೋ ಜೀವನ ನಡೆಯಿಸುತ್ತಿದ್ದಾರೆ. ನಾನು ಆ ಊರನ್ನು ಬಿಡುವ ಮುಂಚಿನ ದಿನ ಹಂಗೆರಿಯ ಒಬ್ಬ ಕಲಾನಿದೆ ನೀಸಿಗೆ ಬಂದಿದ್ದಳು. ಆಕೆ ತರುಣ ವಯಸ್ಕಳು. ಉತ್ಸಾಹ ಶಾಲಿ ಚಿತ್ರಗಾರ್ತಿ. ಅವಳಿಗೂ ತನ್ನದೇಶ ಸಹನೆಯಾಗದೆ ಫ್ರಾನ್ಸಿಗೆ ಓಡಿ ಬಂದಿದ್ದಳು. ಸ್ಟೆಡ್ರಿ ಎಂಬ ಒಬ್ಬ ಜೆಕೋಸ್ಲೊವೋಕಿಯನ್ ಬರಹಗಾರ ತನ್ನ ದೇಶದ ದಾರುಣ ಸ್ಥಿತಿಯನ್ನೆಲ್ಲ ಬಣ್ಣಿಸಿದ. "ಹಾಗಿದ್ದರೆ ನಿಮ್ಮ ಜನರು ಏತಕ್ಕೆ ಹೊರಬೀಳುವುದಿಲ್ಲ?" ಎಂದು ಪ್ರಶ್ನಿಸಿದುದಕ್ಕೆ "ಹಾಗೆ ತಲೆ ತಪ್ಪಿಸಿಕೊಂಡು ಬರುವುದು ಸುಲಭವಲ್ಲ. ಮಿಲಿಟರಿ ಕಾವಲನ್ನು ತಪ್ಪಿಸಿ ಬರುವಾಗ ಜೀವಕ್ಕೂ ಸಂಚಕಾರವಿದೆ. ನಾನಂತು ತಪ್ಪಿಸಿಕೊಂಡು ಬಂದೆ. ದಿನಕ್ಕೆ ಒಬ್ಬರಂತಾದರೂ ಅನೇಕ ಉಪಾಯಗಳಿಂದ ಜನ ಹೊರಬೀಳುತ್ತಿದ್ದಾರೆ" ಎಂದು ಆತ ಉತ್ತರವಿತ್ತ. ಹೆಂಬರ್ಗಿನಲ್ಲಿ ನಾನು ಕೇಳಿದ ಸುದ್ದಿಗಳಿಗೂ ಇವಕ್ಕೂ ಹೊಂದಿಕೆಯಿತ್ತು. ನಾನೂ, ಸ್ಟೆಡ್ರಿಯವರೂ ಒಂದು ಕೊಟಡಿಯಲ್ಲಿ ಕುಳಿತು ಖಾಸಗಿ ಮಾತನಾಡುತ್ತಿದ್ದಾಗ ಯಾವುದೋ ಕೆಲಸಕ್ಕಾಗಿ ಎಂಡ್ರ್ಯೂ ಮುರ್‍ವ್ರಾರವರು ಅಲ್ಲಿಗೆ ಬಂದರು. ನನ್ನ ಮಿತ್ರ ಬಂದ ಅವರನ್ನು ತಡೆದು "ಮುರ್‍ವ್ರಾರವರೇ, ನನಗೆ ಒಂದು ಪ್ರಶ್ನೆ ಕೇಳಬೇಕೆನಿಸುತ್ತದೆ; ಕೇಳಲೇ?" ಎಂದ.

"ಆಗಲಿ" ಎಂದರವರು.

"ಮತ್ತೇನಿಲ್ಲ; ಯುರೋಪಿನ ಸ್ವತಂತ್ರ ರಾಷ್ಟ್ರಗಳ ಸಾಹಿತ್ಯ ಗ್ರಂಥ

ಗಳಾದರೂ ಉಕ್ಕಿನ ಘಟದೆಯೊಳಗೆ ವಾಸಿಸುವ ನಮ್ಮ ಜನಗಳಿಗೆ ದೊರಕು ವಂತೆ ಮಾಡುವ ಉಪಾಯ ಹೇಳುತ್ತೀರಾ?"

ಮುರ್ರಾರವರು ಆ ವಿಚಾರದಲ್ಲಿ ತಮ್ಮ ಅಸಹಾಯಕತೆಯನ್ನು ಸೂಚಿಸಬೇಕಾಯಿತು. ಕಮ್ಯುನಿಸ್ಟರಿಂದ ಅಧಿಕೃತವಾದ ರಾಷ್ಟ್ರಗಳೊಳಗೆ ಪಾಶ್ಚಾತ್ಯಸಾಹಿತ್ಯಕ್ಕೂ ಪ್ರವೇಶವಿಲ್ಲ ಎಂಬುದನ್ನು ತಿಳಿದಾಗ ನನ್ನ ಆಶ್ಚರ್ಯ ವಿಶೇಷವಾಯಿತು. ಅಲ್ಲಿನ ಸಾಹಿತ್ಯ, ಕಲೆಗಳೆಲ್ಲ ಅಲ್ಲಿನ ರಾಜಕೀಯ ಆದರ್ಶ ಗಳ ಪ್ರತಿಪಾದನೆಯ ಕೆಲಸವನ್ನು ಮಾಡಬೇಕು. ಮಾಡದಂತಹ ಬರಹಗಾರ ರಿಗೆ, ಸ್ವತಂತ್ರ ಮನಸ್ಕರಾದವರಿಗೆ ಅಲ್ಲಿ ಸ್ಥಾನವೇ ಇಲ್ಲ. ಇನ್ನೊಂದು ಕಡೆಗೆ ಹೋದಾಗ, ಒಬ್ಬ ಗಣಿತ ಪ್ರಾಧ್ಯಾಪಕರ ಪಾಡನ್ನು ಕೇಳಿದೆ. ಅವರು ತಲೆ ತಪ್ಪಿಸಿಕೊಂಡು ಸ್ವಿಜರ್‌ಲೆಂಡಿನಲ್ಲಿ ಇದ್ದಾರೆ. ಅವರ ಮಗನೊಬ್ಬ ಉಕ್ಕಿನ ತೆರೆಯೊಳಗೆ ಉಳಿದಿದ್ದಾನೆ. ಅವನಿಗೆ ಬೌದ್ಧಿಕ ಶಿಕ್ಷಣ ಕೊಡುವುದಕ್ಕೆ ನಿರಾ ಕರಿಸಿ, ಕಬ್ಬಿಣ ಕಾರ್ಖಾನೆಯ ಕೆಲಸಗಾರನನ್ನಾಗಿ ಮಾಡಿದ್ದಾರಂತೆ. ಅದಕ್ಕೆ ಕಾರಣ "ಬುದ್ಧಿಶಾಲಿಗಳ ಪರಂಪರೆ(Intellectual class)"ಬೆಳೆದೀತೆಂಬ ಭಯವಂತೆ. ಹಂಗೆರಿ ದೇಶದಿಂದ ಬಂದ ಮತ್ತೊಬ್ಬರು ಸ್ನೇಹಿತರು ನನಗೆ ದೊರೆತರು. ಅವರು ಭಾರತೀಯ ವೈದ್ಯರು. ವಿಯನ್ನಾ ನಗರದ ವೈದ್ಯ ಶಾಲೆಗಳನ್ನು ಅವರು ತುಂಬಾ ಹೊಗಳಿದರು. ಆದರೆ ವ್ಯಕ್ತಿ ಸ್ವಾತಂತ್ರ್ಯವನ್ನು ಕುರಿತು ಮಾತನಾಡುವಾಗ 'ಗುರುತಿನ ಚೀಟುಗಳಿಲ್ಲದೆ ಯಾವೊಬ್ಬ ಪ್ರಜೆ ಯೂ ಅಲ್ಲಿ ಅಲೆದಾಡುವಂತಿಲ್ಲ. ಸೆನ್ಸರ್ ಆಗದೆಯೆ ಯಾರಿಗೂ ಕಾಗದ ಗಳು ಬರುವಂತಿಲ್ಲ' ಎಂದರು.

ನನ್ನ ನೀಸ್ ನಗರದ ಪ್ರವಾಸ-ಸಮ್ಮೇಳನದ ದೃಷ್ಟಿಯಿಂದ ನಿರಾಶೆ ಗೊಳಿಸಿದ್ದು ನಿಜವಾದರೂ, ಬೇರೊಂದೆರಡು ಲಾಭದಾಯಕ ಪ್ರಸಂಗಗಳು ಜರುಗಿದುವು. ಆ ವೇಳೆಯಲ್ಲಿ 'ರಿನಾಯರ್' ಎಂಬ ಫ್ರೆಂಚ್ ಚಿತ್ರ ಕಲಾ ವಿದನ ಉತ್ತಮ ಚಿತ್ರ ಪ್ರದರ್ಶನವನ್ನು ನಡೆಸಿದ್ದರು. ರಿನಾಯರ್ ಕ್ರಾಂತಿ ಯುಗದ ಕಲಾವಿದ. ಚಿತ್ರಗಳಲ್ಲಿ ರೇಖೆಗಳಿಲ್ಲದೆಯೆ ಬರೆದವ. ವೇನ್ ಗಫ ನಂತೆ ಉಜ್ವಲ ವರ್ಣಗಳನ್ನು ಬಳಸಿದರೂ, ಕುಚ್ಚಿನ ಪ್ರಯೋಗ ಮಿದುವಾ ದುದು. ಕಾಮನ ಬಿಲ್ಲಿನ ಬಣ್ಣಗಳನ್ನು ತೋರಿಸುವಂಥದು. ಬಿಸಿಲಿನಲ್ಲಿ ಆವಿಯಾಗುತ್ತವೆಯೋ ಎನ್ನುವಂಥ ಘನ ರೂಪಗಳು ಅವನವು. ನೈಸರ್ಗಿಕ ದೃಶ್ಯಗಳನ್ನೂ, ಉದ್ಯಾನಗಳನ್ನೂ, ಫ್ರೆಂಚ್ ಜನತೆಯನ್ನೂ ತನ್ನ ಕಾಮನ

ಬಿಲ್ಲಿನ ಕನ್ನಡಕದಿಂದ ಕಂಡು ಆತ ಚಿತ್ರಿಸಿದ್ದಾನೆ.

ನಮ್ಮ ಸಮ್ಮೇಳನದ ಪ್ರತಿನಿಧಿಗಳನ್ನು ಒಂದು ದಿವಸ ಮಾಂಟಿ ಕಾರ್ಲೋ, ಮೊನಾಕೋ ನಗರಗಳಿಗೆ ಕರೆದೊಯ್ದಿದ್ದರೆಂದೆ. ಸುಮಾರು ಇಪ್ಪತ್ತು ಮೈಲುಗಳ ಕಡಿದಾದ ಘಟ್ಟದ ಹಾದಿಯದು. ಐದಾರು ಸಾವಿರ ಅಡಿ ಎತ್ತರದ ಪರ್ವತಗಳ ಮಗ್ಗುಲಿಂದ ಅಂಕುಡೊಂಕಾಗಿ ದಾರಿ ಹೋಗುತ್ತದೆ. ಕೆಳಗೂ ಮೇಲೂ ಸುಂದರವಾದ ನಗರಗಳು, ಕಣಿವೆಗಳು ಎಲ್ಲೆಲ್ಲೂ ತುಂಬಿದ ಜನಸಾಂದ್ರತೆಯನ್ನು ಸೂಚಿಸುತ್ತವೆ. ಬೆಟ್ಟದ ಮೈ, ಕುಡಿಗಳಲ್ಲೆಲ್ಲ ವಿಶ್ರಾಂತಿಧಾಮಗಳಿವೆ; ವಿಲ್ಲಾಗಳಿವೆ. ಇಂಥ ಏರಿ ಇಳಿಯುವ ಅಂಕುಡೊಂಕಾದ ದಾರಿಯಲ್ಲಿಯೂ ಹುಚ್ಚು ವೇಗದಿಂದ ಮೋಟಾರುಗಳು ಓಡಾಡುತ್ತವೆ. ಮೊನಾಕೋ ಸೇರುವ ತನಕ ಅಡಿಗಡಿಗೂ ರಮಣೀಯ ನೋಟ ನಮಗೆ. ತಗ್ಗಿನಲ್ಲಿ ಕಾಣಿಸುವ ಕಡಲಿನ ಸೆರಗು ವಿಚಿತ್ರ ಆಕಾರದ್ದು. ಕಡಲನ್ನು ಸೇರುವ ಬೆಟ್ಟದ ಮೈಗಳು ಕಡಿದಾದವು; ಅಂಕು ಡೊಂಕಾದವು. ನಡುನಡುವೆ ರತ್ನಗಳಂತೆ ಕಡಲಲ್ಲಿ ಉನ್ನತವಾದ ನಡುಗಡ್ಡೆಗಳಿವೆ. ಮೊನಾಕೋ ಒಂದು ಪ್ರಿನ್ಸಿಪಾಲಿಟಿ. ಒಬ್ಬ ರಾಜಕುವರನ ಕಿರಿಯ ದೇಶ. ಯುದ್ಧ ಕಾಲದಲ್ಲಿ ಅದು ತಟಸ್ಥವಾಗಿತ್ತು. ಇಟಲಿಗೂ ಫ್ರಾನ್ಸಿಗೂ ನಡುವೆ ಅದಿದೆ. ಈ ರಾಜ್ಯದ ಮುಖ್ಯ ನಗರವಾದ ಮಾಂಟಿಕಾರ್ಲೋ, ಚಿಕ್ಕ ನಗರ. ಅದರಷ್ಟೆ ಚಿಕ್ಕ ರಾಜ್ಯ ಮೊನಾಕೋ. ಒಂದು ಕಡೆ ಕಡಲು, ಇನ್ನೊಂದು ಕಡೆ ಬೆಟ್ಟ ಸೇರಿ ಒಂದು ರಾಜ್ಯವಾಗಿದೆ. ಅನೇಕ ಬಗೆಯ ಹೂಗಿಡಗಳನ್ನು ಬೆಳೆಯಿಸುವ ಉದ್ಯಾನದಂತಿದೆ. ಮೊದಲು ಮಾಂಟಿಕಾರ್ಲೋವಿನ ಒಡೆತನ, ವ್ಯವಹಾರ ಆಡಳಿತೆ, ಒಬ್ಬ ಬಲ್ಗೇರಿಯ ಶ್ರೀಮಂತನ ಅಧೀನವಿತ್ತು. ಈಗ ಅದು ಒಂದು ಅಂತರ್ರಾಷ್ಟ್ರೀಯ ವ್ಯಾಪಾರದ ಸಂಸ್ಥೆಗೆ ಸೇರಿದೆ. ಇಲ್ಲಿನ ಸಿನೆಮಾಗಳ, ನಾಟಕ ಮಂದಿರಗಳ, ನೈಟ್ ಕ್ಲಬ್ಬುಗಳ, ಜುಗಾರು ಮನೆಗಳ ಯಾವತ್ತೂ ಒಡೆತನ, ಲಾಭ ಈ ಕಂಪೆನಿಯದು. ಅದರ ಸೇಕಡಾ ಮೂವತ್ತರಷ್ಟು ಅಂಶ ಮೊನಾಕೋ ಪ್ರಿನ್ಸಿಪಾಲಿಟಿಗೆ ಸಲುತ್ತದೆ. ಇಲ್ಲಿನ ಯಾವತ್ತು ಜನಗಳ ಉದ್ಯೋಗ, ಸಂಪಾದನೆಗಳು ಕುಡಿತ, ಕುಣಿತ, ಜುಗಾರುಗಳನ್ನು ಹೊಂದಿಕೊಂಡಿವೆ. ಯುರೋಪಿನ ಅಮರೋದ್ಯಾನ ಇದು.

ನಾವು ಅಲ್ಲಿನ ರಾಜಕುಮಾರನ ಅರಮನೆಯನ್ನು ನೋಡಹೋದೆವು. ಬೆಟ್ಟದ ಕಡಿದಾದ ಒಂದು ಕಿಬ್ಬದಿಯ ಮೇಲೆ ಸುಂದರವಾದ ಈ ಅರಮನೆ

ಇದೆ. ಹದಿಮೂರು-ಹದಿನಾಲ್ಕನೆಯ ಶತಮಾನ ಕಾಲದ ಕಟ್ಟಡ. ಅರಮನೆಯ ಕಾವಲುಗಾರರು ನಮ್ಮನ್ನು ಸ್ವಾಗತಿಸಿ ಒಳಕ್ಕೆ ಕರೆದೊಯ್ದು ತೋರಿಸಿದರು. ಅಲ್ಲಿ ಒಂದು ಸುಂದರವಾದ ಚೇಪೆಲ್ ಇದೆ. ಅರಮನೆಯ ಪ್ರತಿಯೊಂದು ಕೋಣೆಯೂ ಚಿತ್ರಗಳಿಂದ, ಅಮೂಲ್ಯ ಆಸನ, ಅಲಂಕಾರಗಳಿಂದ ಸಜ್ಜಾದುದು.

ಫ್ರಾನ್ಸಿನ ದೊರೆಗಳಿಗೂ ಇಲ್ಲಿನ ಅರಸರಿಗೂ ಸಂಬಂಧವಿತ್ತು. ಹೀಗಾಗಿ ಹದಿನಾಲ್ಕನೆಯ ಲೂಯಿ, ಮೇರಿ ಎಂಟೋನಿಯೆನೆಟ್ ಇವರ ಮತ್ತು ಅನಂತರದ ಅನೇಕ ಶ್ರೀಮಂತರ ಚಿತ್ರಗಳು ಇಲ್ಲಿವೆ. ಅರಮನೆಯ ಮುಂದಿಂದ ಕಾಣುವ ಕಡಲಿನ ನೋಟಕ್ಕೆ ನಮ್ಮ ಮನಸ್ಸು ಮಂಕುಗೊಳ್ಳುತ್ತದೆ. ಅಲ್ಲಿಂದ ನೆಟ್ಟಗೆ ಕೆಳಗಡೆ, ಒಂದು ಸುಂದರವಾದ ಹಡಗು ನಿಲ್ದಾಣ ಕಾಣಿಸುತ್ತದೆ.

ಆ ಸಂಜೆ ಈ ಪ್ರಿನ್ಸಿಪಾಲಿಟಿಯವರು ನಮಗೆಲ್ಲ ಒಂದು ಉದ್ಯಾನದಲ್ಲಿ ಭೋಜನವನ್ನು ಏರ್ಪಡಿಸಿದ್ದರು. ಅದೂ ಕಡಿದಾದ ಬೆಟ್ಟದ ಮಗ್ಗುಲಲ್ಲಿದೆ. ಅಂತರೆ ಅಂತರವಾಗಿ ಕಡಿದು ಮಾಡಿದ 'ಟೆರೇಸ್‌ಗಾರ್ಡನ್.' ಅಲ್ಲಿಂದ ಈಶಾನ್ಯ ದಿಕ್ಕಿಗೆ, ಮೂರು ಸಾಲು ಉನ್ನತ ಪರ್ವತಗಳು ಭೂಮಧ್ಯ ಸಮುದ್ರಕ್ಕೆ ಚಾಚಿಕೊಂಡಿರುವುದು ಕಾಣುತ್ತದೆ. ಮೂರನೆಯ ಸಾಲಿನಲ್ಲಿಯೇ ಸಾನ್ ರೋಮಿಯೋ ಎಂಬ ಇಟೇಲಿಯನ್ ರಿವೇರಾ ಇದೆ. ನಮ್ಮ ದಕ್ಷಿಣಕ್ಕೆ-ತೀರ ಆಳದಲ್ಲಿ ಮನೋಹರವಾದ ಅರ್ಧ ಚಂದ್ರಾಕೃತಿಯ ಕಡಲಿನ ಸೆರಗಿದೆ. ಅದರ ಆಚೀಚೆ ಚಾಚಿರುವ ಬೆಟ್ಟದ ಸೆರಗಿನ ಮೇಲೆ ಹಲವು ಮನೆಗಳು, ಸೌಧಗಳು, ಉದ್ಯಾನಗಳು ಕಾಣಿಸುತ್ತವೆ. ಈ ಸ್ಥಳದ ರಮಣೀಯತೆಯನ್ನು ಮರೆಯುವುದಕ್ಕಿಲ್ಲ.

ನಮಗಾಗಿ ಸುಮಾರು ಇನ್ನೂರು ಕುರ್ಚಿ ಮೇಜುಗಳನ್ನಿಟ್ಟಿದ್ದರು. ಒಂದು ಕಡೆ ಜಾನಪದ ನೃತ್ಯಗಳ ಏರ್ಪಾಟಾಗಿತ್ತು. ದಕ್ಷಿಣ ಫ್ರಾನ್ಸಿನ ಜಾನಪದ ಉಡುಗೆ ತೊಟ್ಟ, ಹಲವು ತರುಣ ತರುಣಿಯರು ಸುಮಾರು ಎರಡು ತಾಸು ಅವಧಿಯ ತನಕ ಹಾಡಿ, ಕುಣಿದರು. ಅವರ ಹಿಮ್ಮೇಳಕ್ಕೆ ಇಂಪಾದ ಸಂಗೀತವಿತ್ತು. ಸ್ಪೇನಿಷ್ ಸಂಗೀತಕ್ಕೆ ಅದು ಹೆಚ್ಚಿನ ಹೋಲಿಕೆಯುಳ್ಳುದಿತ್ತು. ಆರ್ಕೆಸ್ಟ್ರಾದಲ್ಲಿ ಸುಮಾರು ಆರೆಂಟು ಗಿತಾರಗಳು ಸೇರಿಕೊಂಡಿದ್ದುವು. ಆ ಹಿಮ್ಮೇಳಕ್ಕೆ ಸಮನಾಗಿ ತೀರ ಸರಳವೂ ಲಲಿತವೂ ಆದ

ಕುಣಿತವನ್ನು ತೋರಿಸಿದರು. ಕುಣಿತಗಳಲ್ಲಿ ಸ್ಪೇನಿಷ್ ನೃತ್ಯಗಳ ತೀವ್ರತೆ, ಭಾವಾವೇಶಗಳು ಕಾಣಿಸಲಿಲ್ಲವಾದರೂ, ಲಲಿತವಾಗಿದ್ದವು. ನಮ್ಮ ಭೋಜನ ಕೂಟವೂ ಚೆನ್ನಾಗಿತ್ತು. ಐಸ್ ಕ್ರೀಮಿನಂತಹ ಒಂದೆರಡು ಸಿಹಿ ಪದಾರ್ಥಗಳಿದ್ದುವು. ಕಿತ್ತಳೆ ಹಣ್ಣಿನ ರಸವನ್ನು ಒದಗಿಸಿದ್ದರು. ಅದು ಬೇಕೆಂದು ಬಯಸಿದ ನನ್ನಂಥ ಬಡಪಾಯಿಗಳಿಗೆ ಮಾತ್ರ ಉಳಿದ ಹೆಚ್ಚಿನವರು ಪ್ರಸಿದ್ಧ ಫ್ರೆಂಚ್‌ವೈನ್, ಶಿಂಪೈನ್, ಬರ್ಗೆಂಡಿಗಳಲ್ಲಿ ತೇಲಾಡಿದರು. ಇಂಥ ಭೋಜನ ಕೂಟಗಳಿಂದ ವೇಳೆ ಎಷ್ಟು ಸರಿದರೂ, ಏಳುವ ಮನಸ್ಸೇ ಬರದು ಜನಕ್ಕೆ.

ಹಿಂದಣ ದಿನ ರಾತ್ರಿ ನೀಸ್ ಮುನ್‌ಸಿಪಾಲಿಟಿಯವರು ನಮಗೆ ಅಂಥ ಒಂದು ಭೋಜನವನ್ನು ಏರ್ಪಡಿಸಿದ್ದರು. ಆಮಂತ್ರಣ ಪತ್ರಿಕೆಯ ಅಂಚಿನಲ್ಲಿ "ರಾತ್ರಿ ಉಡುಗೆಯನ್ನು ಹಾಕಿಕೊಂಡು ಬರಬೇಕು" ಎಂಬ ವಿನಂತಿ ಇದ್ದುದರಿಂದ ನಾನು ಹೋಗಿರಲಿಲ್ಲ. ನನ್ನೊಬ್ಬ ಸ್ಕಾಚ್ ಮಿತ್ರ ಹೋಗಿದ್ದ. ಆತ ನನ್ನೊಡನೆ "ನಾನು ಹೀಗೇ ಹೋಗಿದ್ದೆ-ಇದೇ ಉಡುಗೆಯಲ್ಲಿ. ನೀವು ಬರಬಹುದಿತ್ತಲ್ಲ?" ಎಂದುದರಿಂದ ಎರಡನೆಯ ದಿನ ಹೋಗಲು ನಾನು ಧೈರ್ಯ ಮಾಡಿದೆ. ಆದರೆ ಆ ಸ್ಕಾಚ್ ಮಿತ್ರನ ಗೋಳನ್ನು ನೋಡಿದಾಗ ಇಂಥ ಭೋಜನಗಳು ಅತ್ಯಂತ 'ಪರಿಣಾಮಕಾರಿ' ಎಂದೆನಿಸದಿರಲಿಲ್ಲ. ಹಿಂದಣ ದಿನದ ಭೋಜನಕ್ಕೆ ಆತ ತನ್ನೊಬ್ಬ ಸ್ಕಾಚ್ ಗೆಳೆಯನನ್ನು ಕರೆದುಕೊಂಡು ಹೋಗಿದ್ದ. ಆತ ಮರುದಿನದ ಸಂಜೆಯ ತನಕವೂ ತನ್ನ ಗೆಳೆಯನ ಕಾವಲನ್ನು ಬಿಟ್ಟೇಳುವುದಕ್ಕಿರಲಿಲ್ಲ. ಆ ಕುರಿತು ಹೇಳುತ್ತಿದ್ದ: "ನನ್ನ ಸ್ನೇಹಿತ ನಿನ್ನೆ ತನ್ನ ಅಳತೆಗಿಂತಲೂ ಹೆಚ್ಚಾಗಿ ಕುಡಿದುಬಿಟ್ಟ. ಇನ್ನೂ ಗುಂಗು ಇಳಿದಿಲ್ಲ. ಹೀಗಾಗಿ ಅವನನ್ನು ಬಿಟ್ಟು ನಾನು ಇಚ್ಛೆ ಬಂದಂತೆ ತಿರುಗಾಡುವುದಕ್ಕೆ ಅವಕಾಶವಿಲ್ಲದಾಗಿದೆ" ಎಂದು. ಅಲ್ಲಿಗೆ ಬಂದುದಕ್ಕೆ ಫ್ರೆಂಚ್ ಆತಿಥ್ಯ ವಿಧಾನವನ್ನೂ ಕಂಡುದಾಯಿತು. ಭೋಜನಾನಂತರ ನಾವು ಬಸ್ಸುಗಳಲ್ಲಿ ಕುಳಿತು ನೀಸ್ ನಗರಕ್ಕೆ ಮರಳಿದೆವು. ಕತ್ತಲಿನಲ್ಲಿ, ದಾರಿಯುದ್ದದ ಹಾದಿ ಬೀದಿಗಳಿಗೂ ನೀಸ್ ನಗರದ ಕಡಲಕಿನಾರೆಗೂ ಇರುವ ಮೋಹಕತೆ ವಿಶೇಷವಾದುದು. ಅಲ್ಲಿನ ಹವೆಯೇ ಮಾದಕವಾದುದು ಎಂದರೂ ತಪ್ಪಿಲ್ಲ.

## ೧೬. ವೈಭವಶಾಲಿ ಪೇರಿಸ್

ನಮ್ಮ ಪರಿಷತ್ತು ಏಳು ದಿನಗಳ ಕಾಲದ್ದು. ಆದರೆ ಫ್ರೆಂಚ್ ಭಾಷೆಯ ಪರಿಚಯವಿಲ್ಲದ ನಾನು, ಅಷ್ಟೆಲ್ಲ ಹಣ ವ್ಯಯಿಸಿ ಅಲ್ಲಿ ನಿಲ್ಲುವುದು ವ್ಯರ್ಥ ವೆಂದು ತಿಳಿದು, ನಾಲ್ಕನೆಯ ದಿನ ಬೆಳಿಗ್ಗೆ ನೀಸ್ ನಗರದಿಂದ ಪೇರಿಸಿಗೆ ಪಯಣ ಬೆಳೆಸಿದೆ. ಅಲ್ಲಿಗೆ ಹೋಗುವ ಮುಂಚೆ ಕೆ. ವಿ. ಅಯ್ಯ ಎಂಬ ಒಬ್ಬ ಮೈಸೂರು ಸ್ನೇಹಿತರ ಮುಖಾಂತರವಾಗಿ ಒಂದು ಹೋಟೇಲನ್ನು ಗೊತ್ತು ಪಡಿಸಿದ್ದೆ. ಅವರು ಗೊತ್ತುಪಡಿಸಿದ ಹೊಟೇಲು ಪೇರಿಸ್ ವಿಶ್ವವಿದ್ಯಾಲಯಕ್ಕೆ ತೀರ ಸಮೀಪವಾಗಿತ್ತು. ಗೊತ್ತುಪಡಿಸಿದ ಅವರು ಮಾತ್ರ ಅನಾರೋಗ್ಯ ದಿಂದ ಬೋರ್ಡೋ ನಗರಕ್ಕೆ ಹೋಗಿದ್ದರು. ನಾನು ಬೆಳಿಗ್ಗೆ ನೀಸ್ ಬಿಟ್ಟ ವನು, ಬಂದ ಹಾದಿಯಿಂದಲೇ ಪೇರಿಸ್ ನಗರ ಸೇರಿದೆ. ನಗರ ಸೇರುವಾಗ ರಾತ್ರಿ ಒಂಬತ್ತು ಘಂಟೆಯಾಗಿತ್ತು. ನನ್ನ ಹೊಟೇಲಿನ ಬೀದಿ Rue de la Tombe Issoire. ಅದನ್ನು ಉಚ್ಚರಿಸಹೋದರೆ ಟೇಕ್ಸಿಯವನಿಗೆ ತಿಳಿ ಯಬೇಕೇ? ಆತನಿಗೆ ವಿಳಾಸ ಬರೆದು ತೋರಿಸಿದೆ. ಅತ "ಟೂಂಬ್ ಇಸ್ವಾ" ಎಂದ. ಇಸೋಯರ್ ಎಂದು ನಾನು ಓದಿದ ಅಕ್ಷರಗಳು 'ಇಸ್ವಾ' ಆದಂತೆ ಫ್ರೆಂಚ್ ನಾಮಪದಗಳ ಉಚ್ಚಾರದ ರೀತಿ ಇದ್ದುದರಿಂದ, ಮುಂದೆ ಎಲ್ಲೆ ಲ್ಲೂ ಬಾಯಿ ತೆರೆಯುವ ಬದಲು, ಬರೆದು ತೋರಿಸುವ ಪರಿಪಾಠವನ್ನಿಟ್ಟು ಕೊಂಡೆ. ಫ್ರೆಂಚ್ ಶಬ್ದಗಳು-ನಾಲ್ಕಾರು ವ್ಯಂಜನ ಐದಾರು ಸ್ವರಾಕ್ಷರ ಗಳುಳ್ಳವಾದರೂ, ಉಚ್ಚರಿಸುವಾಗ ಎರಡು ವ್ಯಂಜನ ಎರಡು ಸ್ವರಾಕ್ಷರ ಗಳಲ್ಲಿ ಅಂತ್ಯವಾಗುತ್ತದೆ. ಹೀಗಾಗಿ ಅಲ್ಲಿನ ಬೀದಿ, ಕಟ್ಟಡಗಳ ಹೆಸರು ಗಳನ್ನು ಓದಿಕೊಂಡರೂ ಬಾಯಿತೆರೆಯುವ ಧೈರ್ಯ ಬರುವುದಿಲ್ಲ.

ಹೊಟೇಲ್ "ರುಂಡ್ ಪಾಂಟ್"ನಲ್ಲಿ ನನ್ನ ವಸತಿ. ಅಲ್ಲೊಂದು ಚಿಕ್ಕ ದಾದ ಕೋಣೆ ನನಗೆ ದೊರೆಯಿತು. ಇತರ ಯಾವ ಅನುಕೂಲತೆಗಳಿರಲಿಲ್ಲ. ಹಸಿವಾಗಿತ್ತು. ಅವರ ಉಪಾಹಾರ ಗೃಹ ಮುಚ್ಚಿದ್ದರು. "ಕಫೆ" ಎಲ್ಲಿ ಸಿಗು ತ್ತದೆ ಎಂದು ಕೇಳಿದ್ದಕ್ಕೆ ಎದುರಿನ, ರೆಸ್ಟೋರಾಂಟ್ ಒಂದನ್ನು ತೋರಿಸಿ ದ್ದರಿಂದ ಅಲ್ಲಿಗೆ ಹೋದೆ. 'ಕಫೆ'ಅಂದೆ. ಕೊಟ್ಟರು. ಆದರೆ ಆಚೀಚಿನ ಜನ ಗಳಿಲ್ಲ-ನನ್ನ ಉಡುಗೆಯನ್ನು ನೋಡಿಯೂ ಅಲ್ಲ, ಮೈ ಬಣ್ಣವನ್ನು ನೋಡಿ ಯೂ ಅಲ್ಲ, ಹತ್ತು ಗಂಟೆ ರಾತ್ರಿಗೆ ಕಾಫಿ ಕುಡಿಯುವ ಬೆಪ್ಪತನ ನೋಡಿ-

ನಗುವಂತಿತ್ತು. ಅಲ್ಲಿದ್ದ ಪ್ರತಿಯೊಬ್ಬರೂ ನಿಂತೋ ಕುಳಿತೋ ವಿಧವಿಧದ ಮದ್ಯ ಬರಿದುಮಾಡುತ್ತಿದ್ದರು. ಹೆಚ್ಚುಕಡಮೆ ಪೇರಿಸ್‌ನಲ್ಲಿ ನಿಮಗೆ ಕಾಫಿ ಬೇಕಾದರೂ ಹೆಂಡದಂಗಡಿಗೆ ಹೋಗಿ ಕುಡಿಯಬೇಕು. ಬೆಳಗ್ಗೆ ನಿತ್ಯವೂ ನನ್ನ ಹೋಟೇಲಿನಲ್ಲಿ ಕಾಫಿ ಕುಡಿಯುತ್ತಿದ್ದೆ. ಆಗಲೂ ಆಚೀಚೆಗೆ ಕುಳಿತವರು ವೈನ್ ಅಥವಾ ಇನ್ನೇನಾದರೂ ಮಾದಕ ಪಾನೀಯ ಕುಡಿಯುವರಾದರೂ, ಕಾಫಿ ಕುಡಿಯುವಂತೆಯೇ ಕಾಣಿಸಲಿಲ್ಲ.

ಆಗಿಂದಾಗಲೇ ರುಚಿಕರವಾದ, ಕಟುವಾದ ಕಾಫಿಯನ್ನೇನೋ ಮಾಡಿ ಕೊಡುತ್ತಾರೆ. ಸಕ್ಕರೆಯನ್ನು ಕೇಳಿ ಹಾಕಿಸಿಕೊಳ್ಳಬೇಕು. ಹಾಲೂ ಕೇಳಿಯೇ. 'ಮಿಲ್ಕ್' ಎಂಬ ಮಾತು ಅರ್ಥವಾಗುವುದಿಲ್ಲ. 'ಶುಗರ್' ಅರ್ಥವಾಗುವುದಿಲ್ಲ. ಪೇರಿಸ್ ಅಂತರ್‍ರಾಷ್ಟ್ರೀಯ ನಗರವಾದರೇನು? ಅಲ್ಲಿ ಫ್ರೆಂಚ್‌ಬಾರದವನ ಗತಿ ದೇವರೇ ಬಲ್ಲ. ಉಳಿದ ದೇಶಗಳಲ್ಲಿ ನಾನು ಕಂಡ ಸಹಾಯಕ ಮನೋವೃತ್ತಿಯೂ ಇಲ್ಲಿ ಹೆಚ್ಚಾಗಿ ಕಾಣಿಸಲಿಲ್ಲ. "ಇಂಗ್ಲಿಷ್ ಬರುತ್ತದೆಯೋ" ಎಂದು ಪ್ರಶ್ನಿಸಿದರೆ 'Nno' ಎಂದು ಒತ್ತಕ್ಷರ ಸೇರಿಸಿ 'ನ್ನೋ' ಅನ್ನುವಾಗ ಆ ಒರಟುತನ ಕಂಡು ಅಳುಕುಂಟಾಗುತ್ತದೆ. ಫ್ರೆಂಚ್ ಶಿಷ್ಟಾಚಾರ ಬಹಳ ನಯವಾದುದು ಅನ್ನುತ್ತಾರೆ. ನನಗೆ ಈ 'ನ್ನೋ'ಗಳ ಧ್ವನಿ ನಯದ ವಿಪರೀತವಾಗಿ ಕಾಣಿಸುತಿತ್ತು.

ಹೋದ ಮರುದಿನವೇ ನಾನಿದ್ದ ಹೋಟೇಲಿನಲ್ಲಿ ವಾಸವಾಗಿದ್ದ ಒಬ್ಬ ಹಿಂದೀ ತರುಣ ನನಗೆ ಭೇಟಿಯಾದ. ಆತನನ್ನು ಕಂಡು ನನಗೆ ಸಂತೋಷವಾಯಿತು. ಆದರೆ ನನ್ನನ್ನು ಕಂಡು ಆತನಿಗೆ ಆಗಲಿಲ್ಲ ಎನ್ನುವುದು ಖಂಡಿತ. ಯಾಕೋ ಆ ಮಹಾನುಭಾವ "ಏನೋ, ಈ ಪೀಡೆ ತೊಲಗಿದರೆ ಸಾಕು". ಎನ್ನುವ ಬಗೆಯಲ್ಲಿ ವರ್ತಿಸಿದ. ಅದೂ ವಿಚಿತ್ರವಾಗಿಯೆ ಕಾಣಿಸಿತು. ನಾನು ಮುಂಚಿತವಾಗಿ, ಯುನೆಸ್ಕೋದಲ್ಲಿರುವ ನನ್ನ ಹಳೆಯ ಮಿತ್ರರಾದ ಜಿರಾಡ್ ಈಗಲ್‌ಟನ್‌ರವರಿಗೆ, ಪತ್ರ ಬರೆದಿದ್ದೆ. ಅವರಿಂದ ಮರು ಕಾಗದ ಬರುವ ತನಕ ನನ್ನ ಮನಸ್ಸು ತುಂಬ ಅಸ್ವಸ್ಥವಾಗಿತ್ತು. ಅಲ್ಲಿನ ಎಂಬೆಸಿಗೂ, ಇತರ ಕೆಲವು ಮಿತ್ರರಿಗೂ ನನ್ನಲ್ಲಿ ಪರಿಚಯ ಪತ್ರಗಳಿದ್ದುವಾದರೂ ಅವುಗಳನ್ನು ಬಳಸುವ ಮನಸ್ಸಾಗಲಿಲ್ಲ. ನಮಗೇನು ಬೇಕಾದರೂ, ಯಾರನ್ನಾದರೂ ಮಾತನಾಡಿಸಿದರೆ, ಅವರಿಗೆ ಫ್ರೆಂಚ್ ಮಾತನಾಡದವರ ವಿಚಾರದಲ್ಲಿ ಸಹನೆ ಇದ್ದಂತೆ ಕಾಣಿಸಲಿಲ್ಲ. ಇದು ನನ್ನೊಬ್ಬನ ಅನುಭವವಿರಬಹುದೇ ಎಂದರೆ

ಹಾಗಲ್ಲ–ನೋರ್ವೆ, ಯುನೈಟೆಡ್ ಸ್ಟೇಟ್ಸ್, ಫಿಲಿಪ್ಪೈನ್ಸ್‌ಗಳಿಂದ ಬಂದ, ನನಗೆ ಅನಂತರ ಭೇಟಿಯಾದ, ಜನಗಳಿಗಾದ ಅನುಭವ ಇಂಥದೆಂದೇ ಹೇಳಿದರು. ಈ ನಡುವೆ, ಲೂವ್ರ್ ಚಿತ್ರಶಾಲೆಯಲ್ಲಿ ಒಬ್ಬ ಹಿಂದೀ ಮಿತ್ರರು ನನಗೆ ಸಿಕ್ಕಿದರು. ಅವರ ಮನಸ್ಸು ಈ ಅನುಭವದಿಂದ ಉದ್ವಿಗ್ನಗೊಂಡಿತ್ತು. ಅವರು ಮೂರು ನಾಲ್ಕು ದಿನ ನನ್ನೊಡನೆಯೇ ತಿರುಗಾಡಿದರು. ಅವರು ಮಾತ್ರ ಹೋದ ಹೋದಲ್ಲಿ ಫ್ರೆಂಚರು ಸಿಕ್ಕಿದರೆ, ಹಿಂದುಸ್ತಾನಿ ಹಾರಿಸತೊಡಗಿದರು. ಅವರ ವ್ಯವಸಾಯ ವೈದ್ಯವೃತ್ತಿ; 'ಚಿಂತೆಯಿಲ್ಲ- ಈ ಡಾಕ್ಟರರು ಈ ಫ್ರೆಂಚ ಬೇನೆಗೆ ಒಳ್ಳೇ ಮದ್ದು ಕಲಿತಿದ್ದಾರೆ' ಎಂದುಕೊಂಡೆ.

ಇಷ್ಟಿದ್ದರೂ ಹೆಚ್ಚಿನ ಸಹಾಯ ಇಲ್ಲದೆಯೆ, ನಾನು ಕೈಯ್ಯಲ್ಲಿದ್ದ ಗೈಡ್ ಪುಸ್ತಕದ ಬಲದಿಂದ, ನಗರ ಸಂಚಾರವನ್ನೆಲ್ಲ ಮಾಡಿದೆ. ಲಂಡನಿನಂತೆ ಇಲ್ಲಿಯೂ ಟ್ಯೂಬ್ ರೈಲ್ವೆಗಳಿವೆ. ಅವುಗಳ ಮೂಲಕ ಬಹು ಅಗ್ಗವಾಗಿ ಪ್ರತಿಯೊಂದು ಮುಖ್ಯ ಸ್ಥಳಕ್ಕೂ ನಾವು ಹೋಗಬಹುದೆಂದು ಕಲಿತುಕೊಂಡೆ. ನಾನು ಹೋದ ಮರು ದಿನವಲ್ಲ, ಆ ಮರುದಿನ, ಈಗಲ್‌ಟನ್‌ರವರಿಂದ ನನಗೆ ಕರೆ ಬಂದಿತು. ಅನಂತರ ಈ ಡಾಕ್ಟರ್ ಸ್ನೇಹಿತರು ಸಿಕ್ಕಿದರು. ಸಂಚಾರಕ್ಕೆ ಮನಸ್ಸು ಹಗುರಾಯಿತು. ಊಟಕ್ಕೆ ತಾಪತ್ರಯ ಇದ್ದೇ ಇತ್ತು. ಏಳು ದಿನಗಳಕಾಲ ಒಂದೇ ಊರಿನಲ್ಲಿದ್ದುದರಿಂದ, ಅಂಗಡಿಗಳನ್ನು ಹುಡುಕಿ, ಬಿಸ್ಕತು, ಜಾಮ್, ಹಣ್ಣು ಹಂಪಲುಗಳನ್ನು ತೆಗೆದಿರಿಸಿಕೊಂಡು ಕಾಲಯಾಪನೆ ಮಾಡತೊಡಗಿದೆ. ಯಾವ ದೃಷ್ಟಿಯಿಂದಲೇ ಇರಲಿ— ಯುರೋಪ್ ದೇಶ ಸಂದರ್ಶಿಸುವವನು, ಪೇರಿಸ್‌ನಲ್ಲಿ ಎಂಟು ದಿನಗಳನ್ನು ಕಳೆದರೂ ಅದು ತೀರ ಸ್ವಲ್ಪವೇ. ಅಲ್ಲಿ ಎಲ್ಲ ದೃಷ್ಟಿಗಳಿಂದಲೂ ನೋಡತಕ್ಕಂತಹ ಸಂಗತಿಗಳು ಅನೇಕವಾಗಿವೆ.

ಪೇರಿಸಿನ ನಗರ ರಚನೆ ಅಸ್ತವ್ಯಸ್ತವಾದುದಲ್ಲ. ಅನೇಕ ಶತಮಾನಗಳಿಂದಲೂ ಫ್ರೆಂಚ್‌ಸಾಮ್ರಾಟರು ತಮ್ಮ ರಾಜಧಾನಿಯನ್ನು ಅಲ್ಲಿ ನಡೆಯಿಸಿಕೊಂಡು ಬಂದುದರಿಂದ, ವ್ಯವಸ್ಥಿತವಾದ ಆಕಾರ, ಹಾದಿ, ಬೀದಿ, ಸಾಲುಮರಗಳು, ನಗರ ಚೌಕಗಳು, ಉದ್ಯಾನಗಳು ಮೊದಲಾದುವನ್ನು ಯೋಜಿಸಿ, ರಚಿಸಿಕೊಂಡು ಬಂದಿರುವುದರಿಂದ, ಈ ನಗರ ಎಷ್ಟೇ ಬೆಳೆದುಬಂದಿದ್ದರೂ ಅಯಗೆಟ್ಟು ಬೆಳೆದು ಬಂದಿಲ್ಲ. ಯುರೋಪಿನ ಮಧ್ಯಯುಗದ ಅನೇಕಾನೇಕ ಸುಂದರ ಉದ್ಯಾನ, ಚರ್ಚ್, ಸೌಧ, ಮಹಾದ್ವಾರ, ಅರಮನೆಗಳನ್ನು ಇಲ್ಲಿ

ಕಾಣಬಹುದಾಗಿದೆ. ಅವುಗಳಲ್ಲಿ ದೇಶೀಯ ವಾಸ್ತು ಶೈಲಿ, ಗಾಥಿಕ್ ವಾಸ್ತು ಶೈಲಿಯೊಡನೆ ಸುಂದರವಾಗಿ ಬೆಳೆದು ಬಂದಿದೆ. ನಗರ ಮಧ್ಯದಿಂದ ಸೀನ್ ನದಿಯು ಹಾದುಹೋಗುತ್ತದೆ. ಈ ನದಿ ಅಷ್ಟೇನೂ ಅಗಲವಾಗಿಲ್ಲವಾದರೂ ನಗರಕ್ಕೆ ಹೆಚ್ಚಿನ ಸೊಬಗನ್ನುಂಟುಮಾಡುತ್ತದೆ. ಆ ನದಿಯ ಮಧ್ಯದಲ್ಲಿ ಎರಡು ಪುಟ್ಟ ದ್ವೀಪಗಳಿವೆ. ಈ ನಗರದ ಕಲ್ಪನೆಯಾಗಲು ಅದರ ಸೌಂದರ್ಯದ ಸ್ವರೂಪವನ್ನು ದೊರಕಿಸಿಕೊಳ್ಳಲು, ಸೀನ್ ನದಿಯ ದಂಡೆಯ ಮೇಲಿರುವ ಪ್ರಸಿದ್ಧ ಎಫಿಲ್ ಟವರ್ ಎಂಬ ಕೊತ್ತಳವನ್ನು ಏರಿ ನೋಡಬೇಕು. ಪೇರಿಸಿಗೆ ಹೋದವರೆಲ್ಲ, ಈ ಕೊತ್ತಳವನ್ನು ಏರದಿದ್ದರೆ ತಮ್ಮ ಪ್ರವಾಸ ಅಪೂರ್ಣ ಎಂದು ತಿಳಿಯುವುದರಲ್ಲಿ ಆಶ್ಚರ್ಯವಿಲ್ಲ.

ಇದು ಕಳೆದ ಶತಮಾನದಲ್ಲಿ ಫ್ರೆಂಚ್ ಇಂಜಿನಿಯರುಗಳು ಸೇರಿ ಕಟ್ಟಿದ್ದೊಂದು ಉನ್ನತ ಉಕ್ಕಿನ ಕೊತ್ತಳ. ನಾಲ್ಕು ಕಾಲುಗಳ ಮೇಲೆ ನಿಂತ ಈ ಕೊತ್ತಳ ಗಗನದಲ್ಲಿ 984 ಅಡಿ ಉನ್ನತವಾಗಿ ತಲೆ ಎತ್ತಿಕೊಂಡಿದೆ. ಜಗತ್ತಿನ ಉಕ್ಕಿನ ರಚನೆಗಳಲ್ಲಿ ಇದೊಂದು ಅದ್ಭುತರಚನೆ ಎಂದು ಒಪ್ಪಿಕೊಂಡಿದ್ದಾರೆ. ಇದನ್ನು ಕಟ್ಟುವುದಕ್ಕೆ ಆಗಿನ ಕಾಲದಲ್ಲಿ ಎಂಟು ಮಿಲಿಯ ಚಿನ್ನದ ಫ್ರಾಂಕುಗಳು ಖರ್ಚಾದುವಂತೆ. ಬುಡದಲ್ಲಿ ಈ ಕೊತ್ತಳ ಮೂವತ್ತು ಸಾವಿರ ಚದರ ಅಡಿ ಜಾಗವನ್ನಾವರಿಸುತ್ತದೆ. ತುತ್ತುದಿಯಲ್ಲಿ ಅದು ಮುನ್ನೂರು ಚದರ ಅಡಿಯಾಗುತ್ತದೆ. ಅದನ್ನೇರುವುದಕ್ಕೆ ಮೂರು ಅಂತರಗಳಿವೆ. ಕೆಳಗಿನ ಒಂದು ಅಂತರವನ್ನು ಇಳುಕಲು ದಾರಿಯಾಗಿ ಹೋಗುವ ವಿದ್ಯುತ್ ಬಂಡಿಗಳಲ್ಲಿ ಏರಬಹುದು. ಮುಂದಿನ ಎರಡು ಅಂತರಗಳನ್ನು ನೆಟ್ಟಗೆ ಏರುವಂಥ ಲಿಫ್ಟುಗಳಲ್ಲಿ ಏರಬೇಕು. ಆದರೆ ನಡೆದು ಹೋಗುವವರು ಮೆಟ್ಟಲು ಹತ್ತಿ ತುದಿಯತನಕವೂ ಹೋಗಬಹುದು. ಬುಡದಲ್ಲಿ, ನಡುವೆ, ಶಿರ ತುತ್ತುದಿಯಲ್ಲಿ—ಉಪಾಹಾರ ಮಂದಿರಗಳಿವೆ; ಕೆಲವು ಅಂಗಡಿಗಳಿವೆ. ಅಲ್ಲಿಂದ ನೋಡಿದರೆ, ಸುಮಾರು ಅರ್ವತ್ತು ಮೈಲುಗಳಷ್ಟು ದೂರದ ನೋಟ ನೋಡಲು ಸಿಗುತ್ತದೆ. ನಗರ ಮಧ್ಯದಲ್ಲಿ ಹಾಯುವ ಸೀನ್ ನದಿ, ಅದನ್ನು ದಾಟುವ ಅನೇಕಾನೇಕ ಸೇತುವೆಗಳು, ಗಾವುದ ಗಾವುದ ಚಾಚಿರುವ ರಸ್ತೆಗಳು, ನಗರದ ಮನೆ ಮಠಗಳು, ಸೌಧಗಳು—ಅನುಪಮವಾದ ನೋಟವನ್ನೆಸಗುತ್ತವೆ. ದೊಡ್ಡದೊಡ್ಡ ಕಟ್ಟಡಗಳೆಲ್ಲವು ಮಕ್ಕಳ ಆಟದ ಮನೆಗಳಂತೆ ಕಾಣುತ್ತವೆ. ಮೇಲಕ್ಕೇರಿದ ಪ್ರೇಕ್ಷಕನಿಗೆ ಕೆಳಕ್ಕಿಳಿಯುವುದಕ್ಕೆ ಮನಸ್ಸಾಗುವುದಿಲ್ಲ.

ನಗರದ ಒಂದು ಕೇಂದ್ರಭಾಗ ಇಟ್ವಾಲ್ ಎಂಬುದು. ಅಲ್ಲಿ ಮೊದಲನೆಯ ಮಹಾಯುದ್ಧದ ಸ್ಮಾರಕವಾಗಿ ಒಂದು ಮಹಾದ್ವಾರವನ್ನು ರಚಿಸಿದ್ದಾರೆ. ಮಿತ್ರ ರಾಷ್ಟ್ರಗಳು ಮಾಡಿದ ಯುದ್ಧ ತ್ಯಾಗದ ನೆನಪಿಗಾಗಿ-ಕೆಳಗಡೆ ಒಂದು ಅಗ್ನಿಕುಂಡ ರಚಿಸಿದ್ದಾರೆ. ಅಲ್ಲಿ ಅಂದು ಹೊತ್ತಿಸಿದ ಉರಿ ಇಂದಿಗೂ ಉರಿಯುತ್ತಿದೆ. ಈ ಮಹಾದ್ವಾರದ ಸುತ್ತಲೂ ಬಹು ದೊಡ್ಡ ವೃತ್ತ ರಚಿಸಿದ್ದಾರೆ. ಅಲ್ಲಿಂದ ಸೂರ್ಯಕಿರಣಗಳಂತೆ ಹದಿನೆರಡು ವಿಶಾಲ ಬೀದಿಗಳು ದಶ ದಿಶೆಗೆ ವಿಸ್ತರಿಸುತ್ತವೆ. ಸಂಜೆ ಅಲ್ಲಿ ಒಂದು ನಿಂತರೆ— ಪ್ರವಹಿಸುವ ಮೋಟರ್ ವಾಹನಗಳ ಸಂಖ್ಯೆ ನಮ್ಮನ್ನು ಬೆರಗುಗೊಳಿಸುತ್ತದೆ. ಅವುಗಳ ಅವಿರತ ಪ್ರವಾಹದಲ್ಲಿ ಸಿಲುಕಿಕೊಂಡ ಮನುಷ್ಯ ಏನಾಗುತ್ತಾನೋ ಎಂಬ ಭಯ ಹುಟ್ಟುತ್ತದೆ. ಒಮ್ಮೆ ಮಿತ್ರರಾದ ಈಗಲ್‌ಟನ್‌ರವರು ಈ ವೃತ್ತದ ನಡುವಣದಿಂದ ಹಾಯುವಾಗ ಜತೆಗಿದ್ದ ನನ್ನನ್ನು ಅಕ್ಷರಶಃ ಎಳೆದುಕೊಂಡೇ ಹೋದರು. "ನೀವೇನೂ ಗಾಬರಿಯಾಗಬೇಡಿ. ನಮ್ಮನ್ನು ಕೊಲ್ಲದೆ ಮುಂದೆ ಸಾಗುವ ಹೊಣೆ ಇಲ್ಲಿನ ಮೋಟರ್ ಡ್ರೈವರ್‌ಗಳಿಗಿದೆ" ಎಂದು ಪರಿಹಾಸ್ಯ ಮಾಡಿದರು. ಆದರೂ ಮೋಟರಿನ ಕೆಳಗೆ ಬಿದ್ದು ಸಾಯುವ ಭವಿಷ್ಯ ಯಾವನಿಗೂ ಸಂತೋಷವನ್ನು ಹುಟ್ಟಿಸಲಾರದು.

ನಾನು ಇಲ್ಲಿನ ಹಳೆಗಾಲದ ಚರ್ಚುಗಳಲ್ಲಿ ಎರಡು ಮೂರು ಮುಖ್ಯವಾದುವನ್ನು ಮಾತ್ರ ನೋಡ ಹೋಗಿದ್ದೆ. ಅವುಗಳಲ್ಲಿ ಅತಿ ಪ್ರಸಿದ್ಧವಾದುದು 'ನೋಟರ್‌ಡಾಮ್ ಕೆಥೆಡ್ರಲ್' ಈ ಚರಿತ್ರಾರ್ಹವಾದ ಕಟ್ಟಡ ಹನ್ನೊಂದರಿಂದ ಹದಿಮೂರನೆಯ ಶತಮಾನಗಳ ತನಕ ರಚನೆಗೊಂಡಿತು. ಅದು ಸುಂದರವಾದ ಗಾಥಿಕ್ ಶೈಲಿಯ ಕಟ್ಟಡ; ಎದುರಿನಲ್ಲಿ ಎರಡು ಕೊತ್ತಳಗಳಿವೆ. ಶಿಲ್ಪಾಲಂಕೃತವಾದ ಮೂರು ಮಹಾದ್ವಾರಗಳಿವೆ. ಕಟ್ಟಡದ ಎತ್ತರ ನೂರೈವತ್ತು ಅಡಿ ಇದ್ದರೆ, ಅದರ ನಡುವಣ ಶಿಖರವು ಮೂನ್ನೂರ ಹದಿನೆರಡು ಅಡಿ ಎತ್ತರವಾಗಿದೆ. ಕಟ್ಟಡದ ಎಲ್ಲೆಲ್ಲೂ ಶಿಲ್ಪಗಳಿವೆ; ಅಲಂಕಾರಗಳಿವೆ. ಹಿಂದಿನ ಯುಗದಲ್ಲಿ ಇಲ್ಲಿನ ಕ್ರಿಸ್ತ ಧರ್ಮಗುರುಗಳು ಫ್ರೆಂಚ್ ದೊರೆಗಳಿಗೆ ಕಿರೀಟವನ್ನೇರಿಸುತಿದ್ದ ಸ್ಥಾನ ಇದಂತೆ. ರಾಜಕೀಯವನ್ನು ಚರ್ಚ್ ಗೆದ್ದ ದಿನಗಳವು.'ಹಂಚ್ ಬೇಕ್ ಓಫ್ ನೋಟರ್‌ಡೇಮ್'ಎಂಬ ಕಥೆಯನ್ನು ಓದಿದವರಿಗೆ, ಫ್ರೆಂಚ್ ಮಹಾ ಕ್ರಾಂತಿಯ ಭೀಕರ ಚಿತ್ರಗಳ ನೆನವರಿಕೆ ಈ ಮಂದಿರವನ್ನು ನೆನೆದಾಗ ಉಂಟಾಗುತ್ತದೆ. ಮಂದಿರದ ಒಳಕ್ಕೆ

ಹೋದಾಗ, ಸುಮಾರು ಮೂವತ್ತಡಿ ವ್ಯಾಸದ ಒಂದು ಸ್ಟೈಂಡ್ ಗ್ಲಾಸ್ ಕನ್ನಡಿಯನ್ನು ನೋಡಿದೆವು. ಅದರ ಸೊಬಗು ಮಂದಿರದ ಸೊಬಗಿಗೆ ಅನ್ವರ್ಥವಾಗಿತ್ತು. ಅಲ್ಲಿನ ಒಂದು ಕೊಟಡಿಯಲ್ಲಿ ಇಲ್ಲಿನ ಕಾರ್ಡಿನಲರು ಬಳಸುತಿದ್ದ ಉಡುಗೆ, ಕಿರೀಟಾದಿ ಅಲಂಕಾರಗಳಿದ್ದುವು. ದೊಡ್ಡ ದೊಡ್ಡ ವಜ್ರಗಳಿಂದ ಕೂಡಿದ ಎರಡು ಮೂರು ಕಿರೀಟಗಳಿವೆ. ಅವನ್ನು ಕಂಡಾಗ-'ಅರಸಾಗಿ ಹುಟ್ಟುವುದಕ್ಕಿಂತ ಬಿಷಪ್ ಆಗಿ ಹುಟ್ಟುವುದು ಲೇಸೆ'ನಿಸಿತು. ನಾವು ಹೋದ ವೇಳೆ ಪೂಜೆ ನಡೆಯುತಿತ್ತು. ಸಂಪೂರ್ಣ ಜರತಾರಿ ಗೌನನ್ನು ಧರಿಸಿದ ಒಬ್ಬ ಬಿಷಪ್, ಸಮರೂಪ ಧರಿಸಿದ ಆರೆಂಟು ಹುಡುಗರೊಡನೆ ವೇದಿಕೆಯ ಬಳಿಗೆ ಬರುತಿದ್ದ. ಅವನದು ಕಡಿಮೆ ತೆರನ ರಾಜ ವೈಭವವಲ್ಲ. ಆ ಕಾಲದಲ್ಲಿ ನಡೆದ ಚರ್ಚ ಕೋಯರ್ ಸಂಗೀತ ಮಾತ್ರ ತುಂಬ ಇಂಪಾಗಿತ್ತು; ಭಕ್ತಿಭಾವ ಪೂರ್ಣವಾಗಿತ್ತು. ಅದನ್ನು 'ಕೇಳುವ, ಇನ್ನೂ ಕೇಳುವ' ಎಂಬಾಸೆ ಹುಟ್ಟಿಸುತಿತ್ತು.

ಇಲ್ಲಿಂದ ತುಸು ದೂರದಲ್ಲಿಯೆ ಕೋರ್ಟು ಮಂದಿರಗಳ ಭವ್ಯವಾದ ಕಟ್ಟಡವಿದೆ (Palais De Justice). ಇದು ಫ್ರಾನ್ಸಿನ ಮೊದಲಿನ ಹನ್ನೆರಡು ಅರಸುಗಳ ಅರಮನೆಯಾಗಿತ್ತು. ಈಗ ನ್ಯಾಯಾಲಯವಾಗಿದೆ. ಇದಕ್ಕೆ ಹೊಂದಿಕೊಂಡೇ ಸ್ಯೆಂಟ್ ಚೆಪೇಲ್ ಎಂಬ ಹದಿನೆರಡನೆಯ ಶತಮಾನದ ಒಂದು ಚರ್ಚಿದೆ. ಇದು ಎರಡು ಉಪ್ಪರಿಗೆಗಳ ರಚನೆ. ಕೆಳಗೆ ಮೇಲೆ ಎರಡೆರಡು ಚೇಪಲ್‌ಗಳಿವೆ. ಈಗ ಅಲ್ಲಿ ಪೂಜೆ ನಡೆಯುತ್ತಲಿಲ್ಲ. ವರ್ಷಕ್ಕೊಮ್ಮೆ ನ್ಯಾಯಾಲಯದ ಬೆರಿಸ್ಟರುಗಳನ್ನು ಸೇರಿಸಿ ಮಾಸ್ ನಡೆಸುತ್ತಾರೆ. ಇಲ್ಲಿ ಅನೇಕಾನೇಕ ಸ್ಟೈಂಡ್ ಗ್ಲಾಸ್ ಕಿಟಿಕಿಗಳಿವೆ. ಅವನ್ನೇನೇ ನೋಡುವುದಕ್ಕೆ ನಾವು ಈ ಯಾತ್ರೆ ಕೈಕೊಳ್ಳಬಹುದಾಗಿದೆ.

ಇಲ್ಲಿನ ಇನ್ನೊಂದು ಸುಂದರವಾದ ಚರ್ಚ್ 'ಮೆಡಲೀನ್'ಎಂಬುದು. ಮೆಗ್ದಲೀನ್ ಎಂಬ ಪದ ಮೆಡಲೀನ್ ಆಗಿದೆ. ಇದರ ಶೈಲಿ ಗ್ರೀಕ್ ದೇವಾಲಯದ ಮಾದರಿಯಲ್ಲಿದೆ. ಎದುರಿಗೆ ಒಂದು ಸಾಲು ಗ್ರೀಕ್ ಮಾದರಿಯ ಸ್ತಂಭಗಳಿವೆ. ಅದರ ಮೇಲೆ ತ್ರಿಕೋಣಾಕೃತಿಯ ಗೋಡೆಯಿದೆ. ಅದರ ತುಂಬಾ ಶಿಲ್ಪಗಳಿವೆ. ಹಿಂದುಗಡೆಯಲ್ಲಿ ಈ ಗ್ರೀಕ್ ರಚನೆಯ ಮೇಲೆ ಸ್ಯೆಂಟ್ ಪಾಲ್ಸ ಅಥವಾ ಸ್ಯೆಂಟ್ ಪೀಟರ್ ಚರ್ಚುಗಳಲ್ಲಿ ಇರುವಂತೆ ಗೋಲಾಕಾರದ ಗೋಪುರವನ್ನು ಮಾಡಿದ್ದಾರೆ. ಇದು ಬಲು ಹಿಂದೆ ಗ್ರೀಕ್

ದೇವಾಲಯುವೇ ಆಗಿತ್ತಂತೆ. ನೇಪೋಲಿಯನ್ ಅದನ್ನು ಕೆಥೊಲಿಕ್ ದೇವಾಲಯುವನ್ನಾಗಿ ಪರಿವರ್ತಿಸಿದನಂತೆ.

ಮಧ್ಯಯುಗದ ವಾಸ್ತು ಸೌಂದರ್ಯವನ್ನು ತೋರಿಸುವ ಕಟ್ಟಡಗಳು ಇಲ್ಲಿ ಒಂದೆರಡಲ್ಲ. ಅವರ ಗೀತ ನಾಟಕಗಳ ಕೇಂದ್ರ 'ಓಪೇರಾ ಹೌಸ್' ಒಂದು ಸುಂದರವೂ ವಿಶಾಲವೂ ಆದ ಮಂದಿರ. ಮೂರೆಕರೆ ಎಕ್ರೆ ವಿಶಾಲವಾದ ಈ ಮಂದಿರದಲ್ಲಿ ಎರಡು ಸಾವಿರದಷ್ಟು ಜನ ಕುಳಿತಿರಬಹುದಾಗಿದೆ. ಇಲ್ಲೊಂದು ಗೀತ ನಾಟಕವನ್ನು ನೋಡಬೇಕೆಂಬ ನನ್ನ ಹಟ ಮಾತ್ರ ವ್ಯರ್ಥವಾಯಿತು. ತಿಂಗಳಿಗೆ ಮುಂಚೆ ನಾಟಕದ ಟಿಕೇಟುಗಳು ಮಾರಿ ಹೋಗುವ ಆ ಊರಿನಲ್ಲಿ ನನ್ನ ಒಂದು ವಾರದ ಪ್ರಯತ್ನ ಸಫಲವಾಗಲಿಲ್ಲ.

ನನ್ನ ನಿವಾಸದ ಮನೆಗೆ ಹತ್ತಿರವಾಗಿ ಲಕ್ಸಂಬರ್ಗ್ ಅರಮನೆ ಇತ್ತು. ಈ ಭಾಗವನ್ನು ಲೆಟಿನ್ ಕ್ವಾರ್ಟರ್ ಎಂದು ಕರೆಯುವುದು ವಾಡಿಕೆ. ಈ ಭಾಗದಲ್ಲಿ ಲೆಟಿನ್ ಸಂಸ್ಕೃತಿಯ ಅನೇಕ ಹಳೆಗಾಲದ ಮಂದಿರಗಳಿವೆ. ವಿಜ್ಞಾನ ಮಂದಿರಗಳು, ವಿದ್ಯಾಮಂದಿರಗಳು, ಸಸ್ಯೋದ್ಯಾನಗಳು, ವಿಶ್ವವಿದ್ಯಾನಿಲಯದ ಕೇಂದ್ರ—ಎಲ್ಲವೂ ಇವೆ.

ಇಲ್ಲಿನ ಒಂದು ಪ್ರೇಕ್ಷಣೀಯ ಮಂದಿರ ಪೇಂಥಿಯಾನ್. ಇದು ಗ್ರೀಕ್ ಶೈಲಿಯ ಕಟ್ಟಡ. ಇದು ಅನೇಕ ಫ್ರೆಂಚ್ ಸಾಹಿತಿಗಳನ್ನು ಸಮಾಧಿ ಮಾಡಿದ ಸ್ಥಾನವಾಗಿದೆ. ಅಂಥವರಲ್ಲಿ ವಾಲ್ಟೈಯರ್, ವಿಕ್ಟರ್ ಹ್ಯೂಗೋ, ರೋಸೂ, ಎಮಿಲ್ ಜೋಲಾ ಮೊದಲಾದವರು ಕೆಲವರು. ಒಂದು ದಿನ ಸಂಜೆ ಈಗಲ್‌ಟನ್‌ರವರು ನನ್ನನ್ನು ಕರೆದುಕೊಂಡು ಇಟ್ವಾಲಿಂಡ ಮೂರು ಮೈಲು ದೂರುವಿರಬಹುದಾದ ಈ ಭಾಗಕ್ಕೆ ನಡೆದೇ ಕರೆದು ತಂದರು. ಈ "ಲೆಟಿನ್ ಭಾಗ ಫ್ರಾನ್ಸಿನ ಹೆಮ್ಮೆಯಾಗಿ ಉಳಿದಿದೆ. ಅದನ್ನು ನೋಡ ತಕ್ಕದ್ದು. ನಿಮಗೆ ಇಲ್ಲಿನ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಜೀವನವನ್ನೂ ನೋಡಿದಂತಾಗುತ್ತದೆ." ಎಂದರು.

ನಾವು ಸಂಜೆ ಸುಮಾರು ಎಂಟು ಘಂಟೆಯ ವೇಳೆ ಅಲ್ಲಿಗೆ ತಲುಪಿದೆವು. ಒಂದು ಮೈಲು ಉದ್ದಕ್ಕೂ ಹಾದಿಯ ಇಕ್ಕಡೆಗಳಲ್ಲೂ ಹೊಟೇಲುಗಳಿದ್ದಂತಿತ್ತು. ದಾರಿಯ ಕಾಲ್ನಡೆಗಳ ಮೇಲೆ ಸಾಲು ಸಾಲಾಗಿ ಕುರ್ಚಿಗಳಿದ್ದುವು. ಸಂಜೆಯಾಯಿತೆಂದರೆ ಯಾವತ್ತು ವಿದ್ಯಾರ್ಥಿ ಸಮುದಾಯ ಇಲ್ಲಿ ಕಲೆಯುತ್ತದೆ. ಹುಡುಗರು, ಹುಡುಗಿಯರು, ಅರಬರು, ಫ್ರೆಂಚರು

ಇನ್ನೆಷ್ಟೋ ಜನಾಂಗದವರು ಇಲ್ಲಿ ಕುಳಿತು ಉಣ್ಣುತ್ತ, ತಿನ್ನುತ್ತ, ಕುಡಿಯುತ್ತ, ಹರಟೆ ಹೊಡೆಯುತ್ತ ಸಮಯ ಕಳೆಯುತ್ತಾರೆ. ಫ್ರಾನ್ಸಿನ ಹೋಟೆಲುಗಳೆಲ್ಲಾ ಕ್ಲಬ್ಬುಗಳಿದ್ದಂತೆ. ಸಂಜೆಯ ಆರು ಘಂಟೆಗೆ ಬಂದು ಕುಳಿತವರು ಹೊರಗಿರಿಸಿದ ಈ ಕುರ್ಚಿಗಳಿಂದ ಏಳುವುದೆಂಬುದೇ ಇಲ್ಲ. ಚರ್ಚೆಗಳು, ಸಂಭಾಷಣೆಗಳು, ಒಲುಮೆ, ಶೃಂಗಾರಗಳು ಮಧ್ಯ ರಾತ್ರಿಯನ್ನು ಮೀರುವ ತನಕವೂ ನಡೆಯುತ್ತಿರುತ್ತವೆ. ಉಪಹಾರವನ್ನು ಒದಗಿಸಿದರೆ ಎರಡುಮೂರು ತಾಸು ಕಳೆದರೂ ಬಿಲ್ ಕೊಡುವವರಿಲ್ಲ. ನಾವೇ ಕೇಳಿ, ಬಿಲ್ ತರಿಸಿ, ಹಣ ಕೊಡಬೇಕು. ಜನ ಸಂದಣಿ ಅದ್ಭುತ. ಇಂಥ ವಿದ್ಯಾರ್ಥಿ ವಾತಾವರಣದಲ್ಲಿ ಶಿಸ್ತು ಅಭ್ಯಾಸಗಳೆರಡನ್ನು ಬಿಟ್ಟರೆ ಉಳಿದ ಕೆಲಸ ಏನೂ ಆಗಬಹುದು. ನಾವು ಸುಮಾರು ಎರಡೂವರೆ ಘಂಟೆ ಕಾಲ ಈ ಸ್ವಾತಂತ್ರ್ಯ ಉದ್ಯಾನವನ್ನು ಕಂಡು ಅನಂತರ ಹೊರಬಿದ್ದೆವು. 'ಕೊನೆಗೂ ಪೇರಿಸು ವಿದ್ಯಾವಂತರ ಸ್ವರ್ಗ; ವಿಲಾಸಿಗಳ ಅಮರಾವತಿ' ಎಂದುಕೊಂಡೆ.

ಇದೇ ಭಾಗದಲ್ಲಿರುವ ಇನ್ನೊಂದು ಸುಂದರ ಪ್ರದೇಶ ಲಕ್ಸಂಬರ್ಗ್ ಅರಮನೆ ಮತ್ತು ಉದ್ಯಾನ. ಈ ಅರಮನೆಯ ವಾಸ್ತು ಶೈಲಿಯು ಮಧ್ಯಯುಗದ್ದು. ನೋಟಕ್ಕೆ ಬಹು ಸುಂದರವಾದ ಭವ್ಯವಾದ ಈ ಅರಮನೆಯಲ್ಲಿ ಈಗ ವಿಶ್ವವಿದ್ಯಾನಿಲಯದ ಕಚೇರಿ ಇದೆ. ಈ ಅರಮನೆಯ ಎದುರಿಗೆ ಅರುವತ್ತೆರಡು ಎಕ್ರೆ ವಿಸ್ತಾರವಾದ ಬಹು ಸುಂದರವಾದ ಉದ್ಯಾನವಿದೆ. ಇಂಗ್ಲಿಷಿನ 'ಗಾರ್ಡನ್' ಎಂಬ ಪದವು ಫ್ರೆಂಚಿನಲ್ಲಿ Jardine ಎಂದಾಗುತ್ತದೆ. ಅದರ ಉಚ್ಚಾರ ಮಾತ್ರ 'ಜಾರ್‌ದಾಂ.' ಈ ಹಳೆಗಾಲದ ಉದ್ಯಾನದಲ್ಲಿ ಸುಂದರವಾದ ಕಾರಂಜಿಗಳಿವೆ. ಅನೇಕ ಶಿಲ್ಪಮೂರ್ತಿಗಳಿವೆ. ಶಿಲ್ಪಗಳಲ್ಲಿ ನಗ್ನ ಸ್ತ್ರೀಮೂರ್ತಿಗಳೇ ಅಧಿಕ.

ಪೇರಿಸಿನಲ್ಲಿ ಉದ್ಯೋಗವಿಲ್ಲದೆಯೆ ಅಲೆದಾಡುವ ಮಹಾನುಭಾವನಿಗೆ ಸ್ಥಳಗಳು ಎಷ್ಟಿವೆ; ಎಷ್ಟಿಲ್ಲ! ಇಟ್ವಾಲ್‌ನಿಂದ ಒಂದು ಮಾರ್ಗ ಲೂವ್ರ ಅರಮನೆಗೆ ಬರುತ್ತದೆ. ಅದು ಬರುವ ಮುಂಚೆ ಕೊಂಕಾರ್ಡ್ ಎಂಬ ಬಹು ವಿಶಾಲವಾದ ಚೌಕ ಸಿಗುತ್ತದೆ. ಇಟ್ಟಿಗೆ ಹಾಕಿದ ಈ ಚೌಕ ಹತ್ತಿಪ್ಪತ್ತು ಎಕ್ರೆಯಾದರೂ ವಿಸ್ತೀರ್ಣವಾಗಿದ್ದೀತು. ಅಲ್ಲಿನ ವಾಹನ ಸಂಚಾರವೂ ಅತ್ಯಧಿಕ. ಈ ಸ್ಥಳದ ನಡುವೆ ಫ್ರೆಂಚ್ ದೊರೆಗಳು ತಮ್ಮ ವಿಭವದ ಚಿಹ್ನೆಯಾಗಿ ತಂದಿರಿಸಿದ, ಈಜಿಪ್ಟಿನ ಒಂದು ವಿಜಯ ಸ್ತಂಭವಿದೆ. ಇದು ಪರೋವರ

ಕಾಲದ್ದು. ಪ್ರಾಚೀನ ಈಜಿಪ್ಟಿನ ಚಿತ್ರಲೇಖನ ಈ ಸ್ತಂಭದ ಮೇಲಿದೆ. ರೋಮನರು, ಫ್ರೆಂಚರು, ಕಟ್ಟಕೊನೆಗೆ ಇಂಗ್ಲಿಷರು–ಈಜಿಪ್ಟಿನ ಎಷ್ಟೋ ಐತಿಹಾಸಿಕ ಸ್ಮಾರಕಗಳನ್ನು ಸುಲಿದು ತಮ್ಮ ದೇಶಕ್ಕೆ ತಂದು ಹಾಕಿಕೊಂಡಿದ್ದಾರೆ. ಈ ಮಾದರಿಯ ಸ್ತಂಭಗಳಿಗೆ 'ಒಬ್ಲೀಸ್ಕ್' ಅನ್ನುತ್ತಾರೆ. ರೋಮಿನ ಚರ್ಚುಗಳ ಮುಂದೆ ಇವಕ್ಕೂ ಹಿರಿದಾದ ಇಂಥ ಶಿಲಾ ಸ್ತಂಭಗಳಿವೆ. ಅವೆಲ್ಲ ತಮ್ಮ ಕಾಲದ ಐತಿಹಾಸಿಕ ವಿಜಯ ಸ್ತಂಭಗಳಾಗಿದ್ದುವು. ಕೊಂಕಾರ್ಡಿಗೆ ಬರುವ ದಾರಿಗೆ ಶಾಂಪ್ಸಿ ಎಂದು ಹೆಸರು. ಇದು ಪೇರಿಸ್‌ನಷ್ಟೆ ಪ್ರಸಿದ್ಧವಾದ ಮಾರ್ಗ. ನಾಟಕ ಶಾಲೆಗಳು, ವಿಲಾಸ ಗೃಹಗಳು, ಸಾಲುಮರಗಳು ತುಂಬಿರುವ ಈ ರಸ್ತೆಯ ಹೆಸರನ್ನು ನಾವು ಇಂಗ್ಲಿಷಿನಲ್ಲಿ ಓದಿದರೆ 'ಚೇಂಪ್ಸ ಎಲ್ಸೀಸ್' ಎಂದಾಗುತ್ತದೆ. ಫ್ರೆಂಚ್ ಉಚ್ಚಾರ 'ಶಾಮ್ಸಿ'. ಪೆರಿಸಿಗೆ ಹೋದುದಕ್ಕೆ ಅಷ್ಟಾದರೂ ಫ್ರೆಂಚ್ ಭಾಷೆ ನನಗೆ ಬಂತು. ಈ ಬೀದಿಯಲ್ಲಾಗಲಿ, ಇನ್ನಿತರ ಮುಖ್ಯ ನಗರ ಕೇಂದ್ರಗಳಲ್ಲಾಗಲಿ ಸಂಜೆ, ರಾತ್ರಿಗಳಲ್ಲಿ ಜನರ ಗದ್ದಲ, ನೂಕುನುಗ್ಗಲು ಹೇಳಿತೀರದ್ದು. ಜನ ಇರುವುದೇ ಬೀದಿಯ ಮೇಲೆ ಎನ್ನುವ ಭಾವನೆ ಬರುತ್ತದೆ. ಅಂಗಡಿ ನೋಡುತ್ತಾ ಅಲೆಯುವುದು, ಉದ್ಯೋಗವಿಲ್ಲದೆಯೇ ಅಲೆಯುವುದು, ಇನಿಯೆ ಇಸಿಯರಿಗಾಗಿ ಅಲೆದಾಡುವುದು ಇಲ್ಲಿನ ವೈಶಿಷ್ಟ್ಯ. ಪಶ್ಚಿಮ ಯುರೋಪಿನ ಇತರ ನಗರಗಳಲ್ಲಿ ಕಾಣುವ ಮಿತಿ, ಸಂಯಮಗಳು ಇಲ್ಲಿ ಕಾಣುವುದಿಲ್ಲ. ತೆರತೆರನ ಜನ ಸಿಗುತ್ತಾರೆ; ಕರೆದು ನಿಲ್ಲಿಸಿ ಮಾತನಾಡುತ್ತಾರೆ. 'ಪೆರಿಸ್ ನಗರದ ದೃಶ್ಯಗಳು ಬೇಕೇ' ಎಂದು ಮಾತಿಗೆ ಪ್ರಾರಂಭ. 'ಬೇಡ' ಎಂದು ತಲೆಯಲ್ಲಾಡಿಸಿದರೆ "ಇವು ಬೇಕೇ?" ಎಂದು ಅರ್ಧ ಮುಷ್ಟಿಯಲ್ಲಿ ಹಿಡಿದ ನಗ್ನ ಭೋಗ ದೃಶ್ಯಗಳನ್ನು ತೋರಿಸುತ್ತಾರೆ. ಅದೂ ಬೇಡವೆಂದರೆ 'ಡಾಲರ್ ಬದಲಿಸಬೇಕೇ?' 'ಪೌಂಡ್ ಬದಲಿಸಬೇಕೇ?' ಎಂದು ಆತ ಬೇಂಕರನಾಗುತ್ತಾನೆ. ಇದು ವಿನಿಮಯದ ಕಳ್ಳ ಸಂತೆ. ಕೊಂಡವ ಮೋಸ ಹೋಗುವುದೇ ಹೆಚ್ಚು. ಅದರಲ್ಲಿಯೂ ಫ್ರೆಂಚ್ ನೋಟುಗಳ ಗೋಳನ್ನು ಹೇಳಿತೀರದು. ಇಪ್ಪತ್ತು ಫ್ರಾಂಕಿಗೊಂದು ನೋಟು. ಅದರ ಬೆಲೆ ಐದಾಣೆ. ಆ ಹೊಲಸು, ಹರಕು ನೋಟುಗಳನ್ನು ಹಿಡಿಯುವುದಕ್ಕೇ ಅಸಹ್ಯವಾಗುತ್ತದೆ. ಅವುಗಳನ್ನೆಣಿಸಿ ಕೊಡುವಾಗ ಮಡಿಸಿ ಇರಿಸಿದ ನೋಟುಗಳನೇಕ. ಮಡಿಸಿದ ಕಡೆಯಿಂದ ಎಣಿಕೆಮಾಡಿಕೊಟ್ಟರೆ ನೀವು ಮನೆಗೆ ಹೋಗಿ ಎಣಿಸಿದಾಗ ಎಣಿಸಿದ

ಸಾವಿರ ಫ್ರಾಂಕುಗಳಿಗೆ ಬಂದಿರುವುದು ಏಳನೂರು ಫ್ರಾಂಕುಗಳು ಮಾತ್ರ. ಈ ಉದ್ಯಮದಲ್ಲಿ ಸ್ಪೇನಿಷ್ ತರುಣರು ನಿರತರಾಗಿರುವುದನ್ನು ಎಲ್ಲೆಲ್ಲಿಯೂ ಕಾಣಬಹುದು. ಒಮ್ಮೆ ಸಿಕ್ಕಿದ ಒಬ್ಬಿಬ್ಬರು ತರುಣರನ್ನು ಮಾತನಾಡಿಸಿದೆವು. ಅವರು ವಿಶ್ವವಿದ್ಯಾಲಯದ ಪದವೀಧರರಂತೆ! "ಏನಯ್ಯಾ, ಈ ಹೊಲಸು ಚಿತ್ರಮಾರಿ ಜೀವನಮಾಡುತ್ತೀರಲ್ಲ-ನಾಚಿಕೆಯಾಗುವುದಿಲ್ಲವೇ?" ಎಂದು ಕೇಳಿದರೆ ಅವರು ನಗುತ್ತ "ಬೇರೆ ಉದ್ಯೋಗವೆಲ್ಲಿ!" ಎಂದು ಕೇಳಿದರು.

ಇನ್ನು ವಿಷಯ ವಿಲಾಸಕ್ಕೆ ಬರುವಂಥ ಜನಗಳಿಗೆ ಇಲ್ಲಿ ಮಿತಿ ಇಲ್ಲ ವೆಂಬಂತೆ ಕಾಣುತ್ತದೆ. ಹೋಟೇಲುಗಳಲ್ಲಿ, ಬೀದಿಗಳಲ್ಲಿ ಅಲೆದಾಡುವ ತರುಣಿಯರ ಹಾವಳಿಯಿಂದ ಹೊಸಬರು ತಪ್ಪಿಸಿಕೊಳ್ಳುವುದೇ ಕಷ್ಟ. ಅವ ರಾಗಿ ಸ್ನೇಹಕ್ಕೆ ಮುಂದೆ ಬರುತ್ತಾರೆ. ರೆಸ್ಟೋರಾಂಟುಗಳಿಗೆ ಕರೆದೊಯ್ಯು ತ್ತಾರೆ. ನಿಮಗೆ ಕುಡಿಸಿ, ತಾವೂ ಕುಡಿದಂತೆ ನಟಿಸಿ ಕಿಸೆ ಬರಿದುಮಾಡಿ ಕಳು ಹಿಸುತ್ತಾರೆ. ನಾನೊಂದು ಸಂಜೆ ಇಟ್ಯಾಲ್ ಹತ್ತಿರ ಒಂದು ಥಿಯೇಟರಿಗೆ ಹೋಗಬೇಕಾಗಿತ್ತು. ಇನ್ನೂ ವೇಳೆ ಇದೆಯೆಂದು ಒಂದು ಉಪಹಾರಗೃಹ ವನ್ನು ಹೊಕ್ಕೆ. ನನ್ನ ಸಮೀಪದ ಮೇಜಿನಲ್ಲಿ ಇಬ್ಬರು ಇಂಗ್ಲಿಷ್ ತರುಣರು ಕುಳಿತಿದ್ದರು. ತರುಣರೇನು? ಹದಿನಾರು ವರ್ಷದ ಹುಡುಗರು. ಮೇಜಿನ ಮೇಲೆ ಪುಟ್ಟ ರೇಡಿಯೋ ಸೆಟ್ ಇಟ್ಟುಕೀಲಿ ತಿರುಗಿಸಿದರು. ಏನೋ ಸಂಗೀತ ವಾಯಿತು. ನನ್ನಹಿಂದುಗಡೆ ಮೇಜಿನಲ್ಲಿ ಕುಳಿತಿದ್ದ ಒಬ್ಬಳು ಹುಡುಗಿ ನಕ್ಕಳು. ಸರಿ, ನಾನು ಉಪಹಾರ ಮಾಡಿ ಹೊರಬರುವಾಗ ಆ ಮೂವರ ಸ್ನೇಹ ಸಫಲ ವಾಗಿತ್ತು. ಯುರೋಪಿನ ಇತರ ದೇಶಗಳ ಒಲುಮೆ ಶೃಂಗಾರಗಳಲ್ಲಿ ಒಂದು ಬಗೆಯ ಶಿಸ್ತು, ಸಂಯಮ ಇದೆ. ಇಲ್ಲಿ ಅವೆಲ್ಲ ನೀರುಪಾಲು. ಕಾಲ್ನಡೆ (Pavement) ಯಲ್ಲಿರಲಿ, ಜನ ತುಂಬಿದ ಬೀದಿಯಲ್ಲಿರಲಿ, ಉದ್ಯಾನದಲ್ಲಿ ರಲಿ-- ಒಬ್ಬರಿನೊಬ್ಬರನ್ನು ತಬ್ಬಿಕೊಂಡು ಗಳಿಗೆಗಳಿಗೆಗಳ ತನಕ ನಿರ್ಭೀತ ರಾಗಿ ನಿಂತಿರುತ್ತಾರೆ. ಆ ಶೃಂಗಾರಿಗಳಿಗೆ ಪ್ರಪಂಚದ ಲಕ್ಷ್ಯವಿಲ್ಲ. ಬೇಕಾ ದರೆ ದಾರಿಗರು ಕಣ್ಣುಮುಚ್ಚಿಕೊಂಡು ಹೋಗಬೇಕು.

ಕೊಂಕಾರ್ಡ ಚೌಕದ ಸಮೀಪದಲ್ಲೇ ಲೂವ್ರ್ ಚಿತ್ರಶಾಲೆ ಇದೆ. ಚಿತ್ರಶಾಲೆಗೆ ಹೋಗುವ ಮುಂಚೆ ಟುಲೀರ್ ಎಂಬ ಸುಂದರವಾದ ಉದ್ಯಾನ ಕಾಣಸಿಗುತ್ತದೆ. ಅಲ್ಲಿ ಚೆಲುವಿನ ಕಾರಂಜಿಗಳೂ ಶಿಲ್ಪಗಳೂ ಹಲವಿವೆ. ಅನಂತರ ಬರುವ ಲೂವ್ರ ಚಿತ್ರಶಾಲೆ ಒಂದು ಕಾಲದಲ್ಲಿ ಫ್ರೆಂಚ್ ಅರಮನೆ

ಯವಾಗಿತ್ತು. ಅದರ ಗಾತ್ರ, ವೈಶಾಲ್ಯಗಳು ನಮ್ಮನ್ನು ಬೆರಗುಗೊಳಿಸುತ್ತವೆ. ಹೆಚ್ಚುಕಡಿಮೆ ಇಂಗ್ಲಿಷಿನ H ಅಕ್ಷರದ ಆಕೃತಿಯಲ್ಲಿ ಕಟ್ಟಿದ ಈ ಭವ್ಯ ಕಟ್ಟಡವು ಎಷ್ಟು ದೊಡ್ಡದೆಂದು ಹೇಳುವಂತಿಲ್ಲ. ಅದರ ವಾಸ್ತು ಶೈಲಿಯು ಬೇರೆ ಬೇರೆ ಕಾಲಗಳಲ್ಲಿ ಕಟ್ಟಿದ್ದರಿಂದ, ಭಿನ್ನ ಭಿನ್ನ ತೆರನಾಗಿದೆ. ಅದು ನಾಲ್ಕಾರು ಶತಮಾನಗಳಲ್ಲಿ ಕಟ್ಟಿ ಮುಗಿಸಿದ ಕಟ್ಟಡ. ಕಟ್ಟಡವೂ ಮತ್ತು ಅದರ ಅಂಗಣಗಳೂ ಕೂಡಿ ನಾಲ್ವತ್ತು ಎಕ್ರೆ ವಿಸ್ತೀರ್ಣವಾಗುತ್ತವೆ. ಇಂಥ ಸ್ಥಳಗಳನ್ನು ಬಣ್ಣಿಸುವುದು ಅಸಾಧ್ಯ. ಮಾತಿನ ಬಣ್ಣನೆ ಕಣ್ಣಿನ ನೋಟವಾದೀತೇ?

ಈ ನಗರ ಸಂಚಾರದ ಕಾಲದಲ್ಲಿ, ಒಂದು ದಿನ ಸಂಜೆ, ನಗರದ ಹೊರಭಾಗದಲ್ಲಿದ್ದ ಇಲ್ಲಿನ ಮೃಗಾಲಯಕ್ಕೆ ಹೋಗುವ ಮನಸ್ಸಾಯಿತು. ಈ ಭಾಗವು ಬಹಳ ರಮಣೀಯವಾದ ಪ್ರದೇಶವಾಗಿದೆ. ಬಹು ಅಗಲವಾದ ಬೀದಿಗಳಿದ್ದವು. ದಾರಿಯಲ್ಲಿ ನಗರ ಮುಗಿದ ಸುಮಾರು ಒಂದು ಮೈಲಿನ ತನಕವೂ ಉದ್ಯಾನಗಳಿದ್ದವು. ಅಲ್ಲಿ ಎಲ್ಲೆಲ್ಲಿಯೂ ಹಸುರು ಹಚ್ಚೆ ದಪ್ಪನಾಗಿ ಬೆಳೆದಿತ್ತು. ನಡುನಡುವೆ ಅನೇಕ ಮರಗಳಿದ್ದವು. ಆ ಉದ್ಯಾನಗಳನ್ನು ದಾಟಿದೊಡನೆ ಮೃಗೋದ್ಯಾನ ಬರುತ್ತದೆ. ಸುಮಾರು ಐವತ್ತು ಎಕ್ರೆ ವಿಶಾಲವಾದ ಈ ಮೃಗಾಲಯ, ಗಿಡ ಮರಗಳಿಂದ ನೋಟಕ್ಕೆ ಸುಂದರವಾಗಿತ್ತು. ಅಲ್ಲಲ್ಲಿ ಕೃತಕ ಕೊಳಗಳಿದ್ದವು; ಸಿಮೆಂಟಿಂದ ಉನ್ನತವಾಗಿ ರಚಿಸಿದ ಬೆಟ್ಟಗಳೂ ಇದ್ದುವು. ಕೆಲವು ಕಡೆ ಕೃತಕವಾಗಿ ರಚಿಸಿದ ದೊಡ್ಡ ದೊಡ್ಡ ಗುಹೆಗಳಿದ್ದವು. ಗುಹೆಗಳ ಮುಂಗಡೆ ವಿಶಾಲ ಹುಲ್ಲುಗಾವಲು; ಮರಗಿಡಗಳು. ಅವುಗಳ ಮುಂದೆ ಆಳವಾದ ಕಂದಕ. ಇಂಥ ಆವರಣದಲ್ಲಿ ಸ್ವಚ್ಛಂದವಾಗಿ ವಿಹರಿಸುವ ಹುಲಿ, ಸಿಂಹಗಳಿವೆ. ಹಿಂದೆ ಹೇಳಿದ ಬೆಟ್ಟದಲ್ಲಿ ಗುಡ್ಡಗಾಡಿನ ಆಡುಗಳಿವೆ. ಆದಷ್ಟು ಹೆಚ್ಚಿಗೆ ವನ್ಯಮೃಗ ಪಕ್ಷಿಗಳಿಗೆ ನೈಸರ್ಗಿಕ ಆವರಣ ಕಲ್ಪಿಸಲು ಪ್ರಯತ್ನಿಸಿದ್ದಾರೆ. ವಿವಿಧ ಕಪಿಗಳಿಗೆ, ಕರಡಿಗಳಿಗೆ ತಕ್ಕುದಾದ ಹಿನ್ನೆಲೆಗಳನ್ನು ಕೊಟ್ಟಿದ್ದಾರೆ. ರಾಜಹಂಸ(Flamingo) ಮೊದಲಾದ ಪಕ್ಷಿಗಳನ್ನು ಪಂಜರವಿಲ್ಲದೆ ಕೊಳಗಳಲ್ಲಿ ಸಾಕಿದ್ದಾರೆ. ಇಲ್ಲಿನ ಸಂಗ್ರಹದಲ್ಲಿ ಪೌರ್ವಾತ್ಯ ನವಿಲುಗಳನ್ನು ನೋಡುವುದಕ್ಕೆ ಸೇರುವ ಜನ ವಿಶೇಷ. ಅಪೂರ್ವ ಪ್ರಾಣಿಗಳ ಸಂಗ್ರಹದಲ್ಲಿ–ಸೀಲ್ ಮತ್ತು ಒಕ್ಪಾಯಿ ಇವೆ. ಒಕ್ಪಾಯಿ ಎಂಬುದು ದಕ್ಷಿಣ ಆಫ್ರಿಕದಲ್ಲಿ ಸಿಗುವ ಅತ್ಯಪೂರ್ವ

ವಾದ ಒಂದು ಮೃಗ. ಅದು ನೋಟಕ್ಕೆ ನೀಲಗಾಯಿಯಷ್ಟು ಗಾತ್ರ, ಬೆನ್ನಿನ ಮೇಲೆ ಜೀಬ್ರಾಗಳಿಗಿರುವ ಕಪ್ಪು ಗೆರೆಗಳಿವೆ; ಕತ್ತು ಬೆನ್ನುಗಳ ಆಕಾರವು ಜಿರಾಫೆಯನ್ನು ಹೋಲುತ್ತದೆ. ಈ ಮೃಗೋದ್ಯಾನವು ಬಹು ವಿಶಾಲವಾದ ಸುಂದರವಾದ ಉದ್ಯಾನ ಎನ್ನಬಹುದು.

ನಾನು ಹೆಚ್ಚಾಗಿ ಸಮಯ ಕಳೆದದ್ದು ಇಲ್ಲಿನ ಚಿತ್ರಶಾಲೆಗಳನ್ನೂ ಮ್ಯೂಸಿಯಮ್‌ಗಳನ್ನೂ ನೋಡುವುದರಲ್ಲಿ. ಒಂದು ದಿನ ಈ ನಗರದಿಂದ ತುಸು ದೂರದಲ್ಲಿರುವ ವರ್ಸಲೆ ಅರಮನೆಯನ್ನು ನೋಡುವುದಕ್ಕೆ ಹೋಗಿದ್ದೆ. ಆ ಅರಮನೆಯೂ ಅತ್ಯಂತ ವಿಶಾಲವಾದ ಉದ್ಯಾನವೂ ಫ್ರೆಂಚ್ ವೈಭವದ ಚಿರಸ್ಮರಣೀಯ ಸ್ಮಾರಕಗಳಾಗಿವೆ. ಪೇರಿಸ್‌ನಿಂದ ಅಲ್ಲಿಗೆ ಸುಮಾರು ಇಪ್ಪತ್ತು ಮೈಲುಗಳ ದೂರ. ಈ ಅರಮನೆ ಹದಿನಾಲ್ಕನೇ ಲೂಯಿಯ ರಾಜ ವೈಭವವನ್ನು ಸೂಚಿಸುತ್ತದೆ. ಪ್ರಪಂಚದ ಶ್ರೇಷ್ಠ ಕಲಾವಿದರನ್ನು ಆತ ಕರೆಯಿಸಿ ತನ್ನ ಅರಸುತನದ ಹೆಮ್ಮೆಯನ್ನೆಲ್ಲ ತೀರಿಸಿಕೊಂಡ ಬಗೆಯನ್ನಿಲ್ಲಿ ಕಾಣಬಹುದು. ಫ್ರೆಂಚ್ ವಾಸ್ತು ಮತ್ತು ಅಲಂಕಾರ ಚಿತ್ರಗಳ ಮಾರ್ಗ (Classical) ಶೈಲಿ ಇಲ್ಲಿಂದ ತೊಡಗಿತಂತೆ. ಫ್ರೆಂಚ್ ರಾಷ್ಟ್ರದ ಸಂಘಟನೆಗೆ ಸಂಬಂಧಿಸಿದ ಕಾರ್ಯಕಲಾಪಗಳಾಗುವುದಿದ್ದರೆ, ಅಂದರೆ ಸಂಘಟನೆಯ ತಿದ್ದುಪಡಿಗಳು, ಫ್ರೆಂಚ್ ಅಧ್ಯಕ್ಷನ ಆಯ್ಕೆ, ಇವೆಲ್ಲ ಆಗುವಾಗ ಇಲ್ಲಿ ಬಂದು ಜರಗಿಸುತ್ತಾರೆ. ಮೊದಲನೆಯ ಮಹಾಯುದ್ಧದ ಕೊನೆಗೆ ಜರ್ಮನರಿಗೂ ಮಿತ್ರರಾಷ್ಟ್ರಗಳಿಗೂ ನಡೆದ ಸಂಧಾನಕ್ಕೆ ಸಹಿ ಬಿದ್ದುದು ಇಲ್ಲಿಯೇ.

ಲೂವ್ರ್ ಅರಮನೆಯ ಹಾಗೆ ಬಹು ವಿಶಾಲವಾದ ಎರಡೆರಡು ಮಹಡಿಗಳುಳ್ಳ ಈ ಕಟ್ಟಡ ನೋಡತಕ್ಕುದು. ಅದರ ಎದುರಿನ ಅಂಗಣದಲ್ಲಿ ಹದಿನಾಲ್ಕನೆಯ ಲೂಯಿಯ ಅಶ್ವಾರೋಹಿ ಪ್ರತಿಮೆ ಇದೆ. ಅರಮನೆಯ ಉತ್ತರದ ಕವಲಿನಲ್ಲಿ ಹದಿನಾರನೇ ಶತಮಾನದ ಸುಂದರವಾದ ಒಂದು ಚೇಪೆಲ್ ಇದೆ. ಗ್ರೋಸ್, ರಿನಾಲ್ಡ್, ಹೊರೇಸ್ ವರನೇ ಮೊದಲಾದ ಚಿತ್ರಕಾರರು ಬರೆದ ಚಿತ್ರಗಳುಳ್ಳ ಇನ್ನೊಂದು ದೊಡ್ಡ ಕೊಟಡಿ ಇದೆ. ಸುಮಾರು ಇನ್ನೂರಡಿ ಉದ್ದ, ಐವತ್ತಡಿ ಅಗಲದ ಒಂದು ಕೊಟಡಿಯಲ್ಲಿ ಫ್ರಾನ್ಸಿನ ಐತಿಹಾಸಿಕ ಯುದ್ಧ ಕಥನದ ಚಿತ್ರಗಳಿವೆ. ದೊಡ್ಡ ದೊಡ್ಡ ತೈಲಚಿತ್ರಗಳವು. ಮೂರನೆಯ ಶತಮಾನದಿಂದ ತೊಡಗುವ ಈ ಕಥಾನಕ ನೆಪೋಲಿಯನ್‌ನ ವಿಜಯದಲ್ಲಿ ಕೊನೆಗೊಳ್ಳುತ್ತದೆ. ಹಳೆಗಾಲದ ಕೈ ಕೈ ಕದನದಿಂದ ತೊಡಗಿ

ಹೊಸಯುಗದ ಫಿರಂಗಿ ಯುದ್ಧ ತನಕ ಇರುವ ಚಿತ್ರಗಳಲ್ಲಿ; ಫ್ರಾನ್ಸ್, ನೂರಾರು ಸಮರಗಳಲ್ಲಿ, ದಂಡಯಾತ್ರೆಗಳಲ್ಲಿ, ಹೇಗೆ ಪಾರಾಯಿತು ಎಂಬ ಐತಿಹಾಸಿಕ ನೋಟ ಸಿಗುತ್ತದೆ. ಫ್ರಾನ್ಸಿನ ಸಾಮ್ರಾಜ್ಯ ವೈಭವ ಈ ರಕ್ತಾಭಿಷೇಕಗಳೊಡನೆ ಮೇಳವಿಸಿ ಬಂದಿದೆ ಎಂದು ತೋರಿಯೋ ತೋರುತ್ತದೆ. ಚೇಪೆಲಿನಿಂದ ನಡೆದು ನೋಡುತ್ತ ಹೊರಟರೆ ಒಂದೊಂದೇ ಕೋಣೆಯನ್ನು ಮುಗಿಸಿ ನಮಗೆ ದಣಿವು, ಬೆರಗು ಉಂಟಾಗುತ್ತದೆ. ಅಲಂಕೃತ ನೆಲ, ಗೋಡೆ, ಮುಚ್ಚಿಗೆ; ಎಲ್ಲೆಲ್ಲೂ ದೊಡ್ಡ ದೊಡ್ಡ ಚಿತ್ರಗಳು! ಯಾವಾವ ದೇಶಗಳಿಂದ ತಂದ ಎಲೆಬಾಸ್ಟರ್ ಕಲ್ಲುಗಳನ್ನು ನೆಲಕ್ಕೆ ಹಾಸಿದ್ದಾರೆ. ಗೋಡೆಗೆ ಹೊದೆದ್ದಾರೆ. ಚಿನ್ನದ ಮುಲಮಿಂದ ಚಿತ್ರಗಳನ್ನು ಅಲಂಕರಿಸಿದ್ದಾರೆ. ಅಂಥ ಎಷ್ಟು ಕೊಟಡಿಗಳಿಲ್ಲ! ರಾಣಿಗಷ್ಟು; ರಾಜನಿಗಷ್ಟು. ಇಲ್ಲೇನೇ ಲೂಯಿಯ ಅರಸಿ ಮೇರಿ ಎಂಟಾನಿಯನೆಟ್ ತನ್ನ ಅರಸಿತನದ ಹೆಮ್ಮೆಯಿಂದ ಕೊಬ್ಬಿದ್ದು; ಬಾಳಿದ್ದು. ಈ ಎಲ್ಲ ಅಲಂಕಾರಗಳನ್ನು ಕಾಣುವಾಗ–ಫ್ರೆಂಚ್ ರಾಜರುಗಳ ವೈಭವ ಎಣೆಯಿಲ್ಲದ್ದಾಗಿ ಕಾಣುತ್ತದೆ. ನಮ್ಮ ಆಗ್ರಾ, ದೇಹಲಿಗಳಲ್ಲಿರುವ ಅರಮನೆಗಳಲ್ಲಿ ಯಾವೊಂದು ಚೆಲುವು, ಲಾಲಿತ್ಯ, ಅಭಿರುಚಿಗಳನ್ನು ಕಾಣುತ್ತೇವೋ ಅಂಥ ನಯಗಾರಿಕೆ ಇಲ್ಲಿನ ನನಗೆ ಕಾಣಿಸಲಿಲ್ಲ. ಇಲ್ಲಿ ಕಲೆ-ಚಿತ್ರವಾಗಲೀ ವಾಸ್ತುವಾಗಿರಲೀ, ಧನಮದದೊಂದಿಗೆ ಬೆರೆತಂತೆ ಕಾಣುತ್ತದೆ. ಸಂಪತ್ತಿನ ಥಾಂಬಿಕತೆ ಅಂಗುಲ ಅಂಗುಲಕ್ಕೂ ನಮ್ಮ ಕಣ್ಣನ್ನು ಕುಕ್ಕುತ್ತದೆ. ಅಂಥ ವೈಭವದ ಜೀವನವನ್ನು ನಡೆಯಿಸಿದುದರಿಂದಲೋ ಏನೋ–ಅಷ್ಟೇ ಉಗ್ರವಾದ ತಲೆತೆರಿಗೆಯನ್ನು ಲೂಯಿಯೂ ಅವನ ಪ್ರೇಯಸಿಯು ಕೊಡುವಂತಾಯಿತು. ಆದರೆ ಈ ರಾಜ ವೈಭವಗಳು ಬೀಸಿ ಹೋದ ಬೆಡಗಿನ ಗಾಳಿಯು ಇಂದಿಗೂ ಫ್ರೆಂಚ್ ಹವೆಯಿಂದ ಮಾಯವಾಗಿಲ್ಲ ಎಂದೇ ನನಗೆ ಅನಿಸುತ್ತದೆ.

ಅರಮನೆಯಿಂದ ಹೊರಬಿದ್ದರೆ ಅದರ ಹಿಂದಿನ ಮೂರು ಕಡೆಗಳಲ್ಲಿ ನೆಲವನ್ನು ಅಂತರ ಅಂತರವಾಗಿ ಕಡಿದು, ಬಹು ವಿಶಾಲವಾದ ಮತ್ತು ಸುಂದರವಾದ ಉದ್ಯಾನವನ್ನು ರಚಿಸಿದ್ದಾರೆ. ಅಲ್ಲಲ್ಲಿ ಸುಂದರವಾದ ಕಾರಂಜಿಗಳಿವೆ. ಗ್ರೀಕ್ ದಂತಕತೆಗಳಿಂದ ಆಯ್ದು ಚಿತ್ರಿಸಿದ ಶಿಲ್ಪಗಳಿವೆ. ನೆಟ್ಟಗೆ ಹಿಂಭಾಗದಲ್ಲಿ ಒಂದು ಕಾಲುವೆ ಕಣ್ಣು ಚಾಚುವಷ್ಟು ದೂರ ಹಾದುಹೋಗುತ್ತದೆ. ಅದು ತೊಡಗುವ ಮುಂಚೆ, ವೃತ್ತಾಕಾರದ ಒಂದು ಕೊಳ ಸಿಗುತ್ತದೆ.

ಅದರ ನಡುವೆ ಸುಂದರ ವಿಗ್ರಹಗಳುಳ್ಳ ಚೆಲುವಿನ ಕಾರಂಜಿಯಿದೆ. ಬರಿಯ ಈ ಉದ್ಯಾನವನ್ನೇ ನೋಡಿಕೊಂಡು ಸಂತೋಷದಿಂದ ಸಮಯ ಕಳೆಯ ಬಹುದು. ಇಲ್ಲಿ ನಡೆದೊಂದು ಚಿಕ್ಕ ಪ್ರಸಂಗವನ್ನು ಹೇಳಿದರೆ ಅಪ್ರಾಸಂಗಿಕವಾಗಲಾರದು.

ನಾನೂ ಉತ್ತರ ಹಿಂದುಸ್ಥಾನದ ಒಬ್ಬ ವೈದ್ಯರೂ ಕೂಡಿಯೇ ಇಲ್ಲಿಗೆ ಬಂದಿದ್ದೆವು. ಇಲ್ಲಿ ತುಂಬಿದುದು ಫ್ರೆಂಚ್ ವಾತಾವರಣ. ನೋಡಲು ಬಂದ ನೂರಾರು ಜನಗಳೊಡನೆ ಮಾತನಾಡುತ್ತಿದ್ದ ಗೈಡ್‌ಗಳು ಫ್ರೆಂಚ್ ಭಾಷೆ ಆಡುತ್ತಿದ್ದರು. ಹಾಗಾಗಿ ಅವರ ಬಳಿ ನಾವು ಸುಳಿದು ಲಾಭವಿರಲಿಲ್ಲ. ನಾವು ಇಂಗ್ಲಿಷ್ ಮಾತನಾಡುವುದನ್ನು ಕಂಡು ಒಬ್ಬ ನಾರ್ವೀಜಿಯನ್ ತರುಣ, ಅವನ ಪತ್ನಿ, ಅವಳ ಸಹೋದರಿ ನಮ್ಮನ್ನು ಕೂಡಿಕೊಂಡರು. ಅವರಿಗೆಲ್ಲ ಇಂಗ್ಲಿಷ್ ಬರುತ್ತಿತ್ತು. ನಾವು ಹೊರಗೆ ಬಂದ ಮೇಲೆ ಕಲೆತೆವು. ಬರುವಾಗ ತಂದಿದ್ದ ಹಣ್ಣುಹಂಪಲನ್ನು ಹಂಚಿ ತಿಂದೆವು. ಫ್ರೆಂಚ್-ಇಂಗ್ಲಿಷ್ ವೈಷಮ್ಯವನ್ನು ಕುರಿತು ಮಾತನಾಡಿದೆವು. ಪೇರಿಸ್‌ನಲ್ಲಿ ವಾಡಿಕೆಯಾಗಿದ್ದ 'ಸರ್ವಿಸ್' ಪದ್ಧತಿಯ ಅಣಕವಾಡಿದೆವು. ಪೇರಿಸ್‌ನಲ್ಲಿ-ನಿಂತರೆ, ಕುಳಿತರೆ ಹತ್ತಿರ ನಿಂತವನಿಗೆ, ಇನಾಮು ಕೊಡಬೇಕು. ಹೊಟೇಲಿನ ದಾರಿತೋರಿಸಿದರೆ 'ಸರ್ವಿಸ್'! ಥಿಯೇಟರನ್ನು ಹೊಕ್ಕರೆ ನಿಮ್ಮ ಸ್ಥಳತೋರಿಸಿದಾಕೆ ಕೈಯೊಡ್ಡುತ್ತಾಳೆ-'ಸರ್ವಿಸ್'. ಸ್ಥಳ ನಿಶ್ಚಿತವಾದ ನಂಬರುಳ್ಳದ್ದು. ನೋಡಿ ನೀವೇ ಹೋಗಿ ಕುಳಿತುಕೊಳ್ಳಬಹುದು. ಆದರೆ ನಿಮ್ಮ ಟಿಕೇಟಿನ ಬೆಲೆಯ ಸೇಕಡ ಹತ್ತರಷ್ಟು ಅವಳ ಸರ್ವಿಸಿನ ಬಹುಮಾನವಾಗಿ ಕೊಡಲೇಬೇಕು. ಅದು ನಿಮಗೂ ಗೌರವ. ಕೊಡದವನಿಗೆ ಅಗೌರವ ಪ್ರಾಪ್ತಿಯಾದರೂ ಆಶ್ಚರ್ಯವಿಲ್ಲ. ಹೀಗೆ ಅವರ ಇನಾಮಿನ ಪದ್ಧತಿಯನ್ನು ಕುರಿತು ಚೇಷ್ಟೆ ಮಾಡುತ್ತ ನಿಂತಿದ್ದಾಗ ಇಬ್ಬರು ತರುಣರು ನಮಗೆ ಇದಿರಾದರು. ಅವರಲ್ಲೊಬ್ಬನು ಮುಂದೆ ಬಂದು ತುಸು ಅಳುಕಿನಿಂದ "ನಿಮಗೆ ಫ್ರೆಂಚ್ ಗೊತ್ತೇ?" ಎಂದು ಪ್ರಶ್ನಿಸಿದ. ಆಗ ನಮ್ಮ ನಾರ್ವೇಜಿಯನ್ ಮಿತ್ರ "ಇಲ್ಲ ಇಂಗ್ಲಿಷ್ ಬರುತ್ತದೆ" ಎಂದ. ಅಷ್ಟಕ್ಕೆ ಅವರಿಬ್ಬರೂ ನಿಜಕ್ಕೂ ಜಿಗಿದು ಹಾರಿದರು. ಮುಷ್ಟಿ ಬಿಗಿದ ಕೈಗಳನ್ನು ಮೇಲಿಕ್ಕೆತ್ತಿ; "Thank God! We are from the States"ಎಂದರು. ಫ್ರಾನ್ಸಿಗೆ ಬಂದು, ಫ್ರೆಂಚ್ ತಿಳಿಯದೆ ಒದ್ದಾಡಿಕೊಂಡಿದ್ದ ಈ ಇಬ್ಬರು ಯುನೈಟೆಡ್ ಸ್ಟೇಟ್ಸ್ ತರುಣರು

ಇಂಗ್ಲಿಷ್ ಭಾಷೆ ತಿಳಿದ ನಾವು ನಾಲ್ಕೈದು ಮಂದಿಯನ್ನು ಅಲ್ಲಿ ಕಂಡು ಪಟ್ಟ ಆನಂದ ಹೇಳಿತೀರದು. ಇನ್ನೊಬ್ಬ ಇಂಗ್ಲಿಷ್ ಬಲ್ಲಾತ ನನಗೆ ಸಿಗುವ ತನಕ ನನ್ನ ಪಾಡೂ ಹಾಗೆಯೇ ಆಗಿತ್ತು.

ನಾನು ಪೇರಿಸಿಗೆ ಹೋಗುವ ಪೂರ್ವದಲ್ಲಿ ಪೂರ್ವಪರಿಚಿತರಾದ ಸ್ವಾಮಿ ಸಿದ್ಧೇಶ್ವರಾನಂದ ಎಂಬವರಿಗೆ ಪತ್ರ ಬರೆದಿದ್ದೆ. ಬಹು ಹಿಂದಿನ ಸ್ನೇಹ ನಮ್ಮದು. ಯುದ್ಧಕ್ಕಿಂತ ಮುಂಚಿತವಾಗಿಯೇ ಅವರು ಫ್ರಾನ್ಸಿಗೆ ಹೋಗಿ ಫ್ರಾನ್ಸ್ ಮತ್ತು ಸ್ಪೈನ್ ದೇಶಗಳಲ್ಲಿ ರಾಮಕೃಷ್ಣ ಮಿಶನಿನ ಪರವಾಗಿ ವೇದಾಂತಧರ್ಮವನ್ನು ಪ್ರಚಾರ ಮಾಡುತ್ತಿದ್ದರು. ಗ್ರೆಟ್ಸ್ ಎಂಬಲ್ಲಿ ಅವರು ವಾಸಿಸುತ್ತಿದ್ದುದನ್ನು ತಿಳಿದು ಬರೆದಿದ್ದೆ. ಅವರು 'ಪೇರಿಸಿಗೆ ಬಂದಾಗ ಇಲ್ಲಿಯೇ ಉಳಿದುಕೊಳ್ಳಬೇಕು' ಎಂದು ಬರೆದ ಕಾಗದ ಮಾತ್ರ ನನಗೆ ದೊರೆಯದೆ ಹೋಯಿತು. ಹೀಗಾಗಿ ಆ ನಗರವನ್ನು ಸೇರಿದ ಬಳಿಕ ಟೇಲಿಫೋನ್ ಮೂಲಕ ಅವರ ಸಂಪರ್ಕ ಬೆಳೆಸಿದೆ. ಒಂದು ಆದಿತ್ಯವಾರ ಅವರಿದ್ದ ಊರಿಗೆ ಹೋದೆ.

ಗ್ರೆಟ್ಸ್ ಎಂಬುದು ಸಣ್ಣ ಪಟ್ಟಣ. ಪೇರಿಸಿನಿಂದ ಸುಮಾರು ನಾಲ್ವತ್ತು ಮೈಲುಗಳ ದೂರದಲ್ಲಿದೆ. ಅದರ ಸುತ್ತುಮುತ್ತಲೆಲ್ಲ ಸುಂದರವಾದ ಕಾಡುಗಳಿವೆ; ಊರ ಹೊರಗೆ ರೈಲ್ವೆ ನಿಲ್ದಾಣದಿಂದ ಸುಮಾರು ಒಂದು ಮೈಲು ದೂರದಲ್ಲಿ ಅವರ ಆಶ್ರಮವಿತ್ತು. ಬಹು ದೊಡ್ಡ ಅವರಣ. ಒಬ್ಬ ಸ್ಪೇನಿಷ್ ಮಹಿಳೆ ಸುಮಾರು ಐವತ್ತು ಎಕ್ರೆ ಭೂಮಿಯನ್ನೂ ಎರಡು ಮೂರು ಲಕ್ಷ ಬೆಲೆಬಾಳುವ ಅಲ್ಲಿನ ಕಟ್ಟಡವನ್ನೂ ದಾನವಾಗಿ ಕೊಟ್ಟಿದ್ದಳು. ಪ್ರತಿ ಆದಿತ್ಯವಾರ ಅಲ್ಲಿಗೆ ಹತ್ತಿಪ್ಪತ್ತು ಮಂದಿ ಹೊರಗಿಂದ ಬರುತ್ತಾರೆ. ಶ್ರೀ ರಾಮಕೃಷ್ಣ ಪರಮಹಂಸರಲ್ಲಿ, ವಿವೇಕಾನಂದರಲ್ಲಿ ಭಕ್ತಿಯಿದ್ದವರು, ಭಾರತೀಯ ವೇದಾಂತದಲ್ಲಿ ಅಭಿಮಾನವುಳ್ಳವರು ಅಲ್ಲಿ ಬಂದು ಕಲೆಯುತ್ತಾರೆ. ವಿಚಾರ ವಿನಿಮಯ ಮಾಡುತ್ತಾರೆ. ಆಶ್ರಮದಲ್ಲಿ ಸನ್ಯಾಸಿಗಳಂತೆ ಎರಡು ಮೂರು ಮಂದಿ ಐರೋಪ್ಯರು ವಾಸಿಸುತ್ತಿದ್ದಾರೆ. ನಾನು ಹೋದ ದಿನ ಬೆಲ್ಜಿಯಮಿನಿಂದ, ಪೇರಿಸಿನಿಂದ, ಇತರ ಕಡೆಗಳಿಂದ ಜನ ಬಂದಿದ್ದರು. ಆ ಪ್ರಶಾಂತ ವಾತಾವರಣದಲ್ಲಿ ದಿನವೆಲ್ಲ ಇದ್ದು ಮಾತುಕತೆ ಮುಗಿಸಿ ಹೊರಟು ಹೋದರು. ಸುಮಾರು ಹದಿನೈದು ವರ್ಷಗಳ ಬಳಿಕ ನನಗೂ ಸ್ವಾಮಿಜೀಯವರಿಗೂ ಆದ ಈ ಭೇಟಿಯು ಅತ್ಯಂತ ಸಂತೋಷದಾಯಕವಾಗಿತ್ತು.

ಫ್ರಾನ್ಸಿನ ತೀರ ಭೌತಿಕ ಜೀವನಕ್ಕೂ, ಇಲ್ಲಿಗೂ ತುಂಬ ಅಂತರ. ಆದರೂ ಅಂಥಲ್ಲಿಯೂ ಜ್ಞಾನ ಜಿಜ್ಞಾಸುಗಳು ಇದ್ದಾರೆ; ಇರಬಲ್ಲರು ಎಂಬುದಕ್ಕೆ ಅದೊಂದು ಸಾಕ್ಷಿ ದೊರೆಯಿತು. ಅಲ್ಲಿ ಆದಿನ ಬಂದವರಲ್ಲಿ ಪೇರಿಸ್ ನಗರ ದಲ್ಲಿ ವಾಸಿಸುವ ಡಾ। ಬೆನ್ವಾ ಮತ್ತು ಅವರ ಪತ್ನಿ ಇದ್ದರು. ಡಾ। ಬೆನ್ವಾರವ ರಿಗೆ ಒಂದು ಕಾಲು ಕುಂಟು; ಯುದ್ಧದ ಪರಿಣಾಮ. ಅವರು ಮನಃಶಾಸ್ತ್ರ ತಜ್ಞರು. ಈ ಯುದ್ಧದ ದೆಸೆಯಿಂದ ಗಾಯಗೊಂಡು ತುಂಬ ನರಳಿದವರು. ಅವರು ಮಹಾಯಾನ ಬುದ್ಧ ಧರ್ಮದ ವಿಚಾರದಲ್ಲಿ ಅಮೂಲ್ಯ ಗ್ರಂಥ ವೊಂದನ್ನು ಬರೆದಿರುವರಂತೆ. ಅವರ ಬರಹಗಳ ವಿಚಾರದಲ್ಲಿ, ಗ್ರಂಥದ ವಿಚಾರದಲ್ಲಿ, ಬಂದೊಂದು ವಿಮರ್ಶೆಯನ್ನು ಸ್ವಾಮಿಜೀ ನನಗೆ ತೋರಿಸಿ ದರು. ಫ್ರಾನ್ಸಿನ ಬಹು ದೊಡ್ಡ ಪಂಡಿತರುಗಳು ಅವರ ಕೃತಿಗಳನ್ನು ಮೆಚ್ಚಿ ಕೊಂಡಾಡಿದ್ದಾರೆ. ಬೆನ್ವಾರವರ ನಡೆನುಡಿಗಳು ಎಷ್ಟು ಸರಳವೋ ಮನಸ್ಸು ಅಷ್ಟು ಉನ್ನತ ಮಟ್ಟದಲ್ಲಿ ತೇಲಾಡುತ್ತಿತ್ತು.

ನಾವೆಲ್ಲ ಕುಳಿತಾಗ ಯಾವುದೋ ಮಾತಿಗೆ ನಾನೆಂದೆ: "ನಮ್ಮ ತತ್ವ ಜ್ಞಾನ ಪ್ರಸಾರಕರಲ್ಲಿ ಅತಿ ಹೆಚ್ಚಿನ ಮೇಧಾವಿತನ ಪ್ರದರ್ಶಿಸಿದವರಲ್ಲಿ ಶಂಕ ರಾಚಾರ್ಯರಿಗೆ ಸಮಸಿಲ್ಲ" ಎಂದು. ಆಗ ನನಗೆ ಎದುರಾದ ಉತ್ತರ ಹೀಗಿತ್ತು: "ಶಂಕರಾಚಾರ್ಯರು ಪ್ರತಿಪಾದಿಸಿದ್ದು ಗೌಡಪಾದರ ತತ್ವ ಗಳನ್ನು. ಅವರು ಎತ್ತಿ ಹೇಳಿದ ಶ್ಲೋಕಗಳು ಹೊಸವಲ್ಲ. ಅವುಗಳ ಮೂಲ ಬಹು ಹಿಂದಿನ ಮಹಾಯಾನ ಧರ್ಮದಲ್ಲಿಯೇ ಕಾಣಸಿಗುತ್ತದೆ"ಎಂದಾಗ ನನಗೆ ವಿಸ್ಮಯವಾಯಿತು. ಪಾಶ್ಚಾತ್ಯ ದೇಶಗಳಲ್ಲಿ ನಮ್ಮ ಭಾರತೀಯ ತತ್ವ ಜ್ಞಾನಗಳನ್ನು ಹೀಗೆ ಆಳವಾಗಿ ಅಭ್ಯಸಿಸಿ ತಿಳಿದುಕೊಳ್ಳುವ ಕುತೂಹಲ ಇದೆಯಲ್ಲ—ಎಂಬ ಆಶ್ಚರ್ಯವಾಯಿತು.

ನಾನು ನನ್ನ ಮತ್ತು ಸ್ವಾಮೀಜಿಯವರ ಭೆಟ್ಟಿಯನ್ನು ಕುರಿತಾಗಲೀ ಗ್ರೆಟ್ಸ್ ಆಶ್ರಮವನ್ನು ಕುರಿತಾಗಲೀ ಹೆಚ್ಚಿಗೆ ಹೇಳಕೂಡದು ಎಂದು ಸ್ವಾಮಿ ಜೀಯವರ ಇಷ್ಟವಾಗಿತ್ತು. ಆದರೆ ಪೇರಿಸಿನಿಂದ ಬಂದ ನನಗೆ ಅಲ್ಲಿ ಕಳೆದ ಕೆಲವು ತಾಸುಗಳು ಅಮೃತ ಪ್ರಾಯವಾಗಿದ್ದವು ಎಂದೆನ್ನದಿರಲಾರೆ. ಅವರ ಸ್ನೇಹಮಯ ಆದರಕ್ಕೆ ವಂದನೆ ಸಲ್ಲಿಸಿ, ಪೇರಿಸಿಗೆ ಮರಳಿ ಬರುತ್ತಿರುವ ಡಾ। ಬೆನ್ವಾರವರ ಮೋಟರ್‌ನಲ್ಲಿಯೇ ಕುಳಿತುಕೊಂಡು ನಗರಕ್ಕೆ ಮರಳಿದೆ. ಮರುದಿನವೇ ಅಲ್ಲಿಂದ ಸ್ವಿಜರ್‌ಲೇಂಡಿಗೆ ಪ್ರಯಾಣ ಮಾಡಿದೆ.

— — — — — —

## ೧೭. ಕಲಾ ವೈಭವ

ಒಂದೆರಡು ವರ್ಷಗಳ ಹಿಂದೆ ಇಬ್ಬರು ಮಿತ್ರರು, ಇಬ್ಬರೂ ಚಿತ್ರಕಾರರೇ, ಫ್ರಾನ್ಸ್ ದೇಶಕ್ಕೆ ಹೋಗಿದ್ದರು. ಅವರಲ್ಲೊಬ್ಬ ಪೇರಿಸ್‌ನಲ್ಲಿ ಕೆಲವೇ ದಿನ ಕಳೆದು ಇಂಗ್ಲೆಂಡಿಗೆ ಹೋದ ಮೇಲೆ ತನ್ನ ಮಿತ್ರನಿಗೆ ಬರೆದ ಪತ್ರದಲ್ಲಿ "ಏನಿದೆ ಪೇರಿಸಿನಲ್ಲಿ!" ಎಂದು ತಾತ್ಸಾರದಿಂದ ಬರೆದಿದ್ದರು. ಇನ್ನೊಬ್ಬ ಮಿತ್ರ-ಅದೇ ಪೇರಿಸ್ ನಗರಕ್ಕೆ ಹೋಗಿ ಒಂದೂವರೆ ವರ್ಷ ಕಾಲಕ್ಕಿಂತ ಹೆಚ್ಚಿಗೆ ಅಲ್ಲಿದ್ದು ಚಿತ್ರಕಲೆಯ ಅಭ್ಯಾಸಮಾಡಿ ಊರಿಗೆ ಮರಳಿ ಬಂದ ಮೇಲೆ ನನ್ನೊಡನೆ ಹೇಳಿದ ಮಾತಿದು: "ಇಷ್ಟು ಕಲಿತರೂ, ಅಲ್ಲಿ ಹೋಗಿ ನೆಲಸಿದವನಿಗೆ ತಾನು ಕಲಿತದ್ದು ಸಾಲದು; ಎಷ್ಟು ಕಲಿತರೂ ಉಂಟು." ನೋಡುವ ಕಣ್ಣುಗಳೇ ಬೇರೆ. ನಾವು ಫ್ರಾನ್ಸಿನ ವಿಚಾರದಲ್ಲಿ, ಅಲ್ಲಿಯ ಜನಗಳನ್ನು ಕುರಿತಾಗಿ ಅವರ ಮಾನವೀ ಸಹಜವಾದ ಕೊರತೆಗಳನ್ನು ಕಾಣಬಹುದಾದರೂ, ಕಲೆಯ ಒಂದು ವಿಷಯದಲ್ಲಿ ಆ ದೇಶಕ್ಕೆ ವಂದನೆಯನ್ನು ಸಲ್ಲಿಸಲೇಬೇಕಾಗುತ್ತದೆ. ಆ ಜನಗಳು ಉದ್ವೇಗಭರಿತರು, ಭಾವನಾಶೀಲರು; ಆದುದರಿಂದಲೋ ಏನೋ-ಕಲೆಯ ಅನೇಕ ಮುಖಗಳಲ್ಲಿ ಅವರು ಮುಂದುವರಿದಿದ್ದಾರೆ. ಚಿತ್ರ ಕಲೆಯಲ್ಲಂತು ವಿಶೇಷವಾಗಿ; ಸಾಹಿತ್ಯದಲ್ಲಿಯೂ ಹಾಗೆಯೇ.

ಪೇರಿಸ್ ನಗರದಲ್ಲಿರುವ ಚಿತ್ರ ಶಾಲೆಗಳು ಒಂದೆರಡಲ್ಲ. ನಾನು ಬರಿಯ ಎರಡನ್ನಷ್ಟೆ ನೋಡಿದೆ. ಅದರಲ್ಲಿ ಪ್ರಪಂಚದಲ್ಲಿಯೇ ಅತ್ಯಂತ ಹಿರಿದೆಂದು ಹೇಳಿಸಿಕೊಂಡಿರುವ ಕಲಾ ಸಂಗ್ರಹ ಲೂವ್ರ್. ದಿನ ಒಂದಕ್ಕೆ ನಾಲ್ಕೈದು ಸಾವಿರ ಮಂದಿಯ ತನಕ ಅದನ್ನು ಕಾಣಲು ಜನ ಬರುತ್ತಾರೆ. ಪ್ರಪಂಚದ ಪ್ರತಿಯೊಂದು ದೇಶದಿಂದಲೂ ದಿನ ನಿತ್ಯ ಜನರು ಬಂದು ನೋಡಿ ಹೋಗುತ್ತಾರೆ. ಹಳೆಗಾಲದ ಫ್ರೆಂಚ್ ಅರಮನೆಯಾಗಿದ್ದ ಈ ಮಂದಿರವು ನೋಟಕ್ಕೂ ಚೆನ್ನಾಗಿದೆ. ವಿಸ್ತೃತಿಯಲ್ಲೂ ವಿಶೇಷವಾಗಿದೆ. ಸಮನಾಗಿ ಒಂದು ವಾರ ಕಾಲವೆಲ್ಲ ಅಲ್ಲಿ ಇದ್ದರೂ—ನೋಡಿ ಮುಗಿಸಿದೆ ಎನ್ನುವ ಭಾವನೆ ಉಂಟಾಗುವುದಿಲ್ಲ.

ನಾನು ಈ ಮಂದಿರವನ್ನು ಹೊಕ್ಕವನೇ ಮೂರು ತಾಸುಗಳ ಕಾಲ ಅಲ್ಲಿನ ಪ್ರಾಚೀನ ಶಿಲ್ಪಗಳನ್ನು ಕಾಣುವುದರಲ್ಲಿ ಕಳೆದೆ. ಮೊದಲಿಗೆ ಈಜಿ

ಪ್ಟಿನ ಶಿಲ್ಪ ಸಂಗ್ರಹ ಬರುತ್ತದೆ. ಬಾಸಾಲ್ಟ್ ಶಿಲೆಯಲ್ಲಿ ಕೆತ್ತಿದ ಪರೋವರು, ಅವರ ಅರಸಿಯರು, ಪ್ರಸಿದ್ಧ ನಾಯಕರು ಶಿಲ್ಪದಲ್ಲಿ ರೂಪಿತರಾಗಿದ್ದಾರೆ. ಬ್ರಿಟಿಷ್ ಮ್ಯೂಸಿಯಮಿನಷ್ಟೇ ವಿಶೇಷ ಸಂಗ್ರಹ ಇದು. ಅನಂತರ ಗ್ರೀಕರ ಪ್ರಭಾವದಿಂದ ಬೆಳೆದ ಬಹು ದೊಡ್ಡ ಶಿಲ್ಪ ಭಾಗ ಬರುತ್ತದೆ. ಗ್ರೀಕ್ ಬಾಲಕರು, ಯೋಧ್ಧರು, ಪ್ರಸಿದ್ಧ ವ್ಯಕ್ತಿಗಳು, ವೀನಸ್ ಮೊದಲಾದ ಪ್ರಾಚೀನ ದೇವತೆಗಳು ಕಾಣಸಿಗುತ್ತಾರೆ. ತಾಸು ತಾಸು ನೋಡಿದರೂ ಮನದಣಿಯಲಾರದಂಥ ಮೂರ್ತಿಗಳಿವೆ. ಮುಂದೆ-ಗ್ರೀಕರಿಂದ ಶಿಲ್ಪಕಲೆಯನ್ನು ಕಲಿತು ಸಾಧಿಸಿದ ರೋಮನರ ಶಿಲ್ಪಸಂಪತ್ತು ಕಾಣಸಿಗುತ್ತದೆ. ಇಷ್ಟೆಲ್ಲ ಸಂಗ್ರಹ ಇಂದಿನದಲ್ಲ. ಬಹು ಹಿಂದಿನಿಂದಲೇ ಅವು ಫ್ರಾನ್ಸ್ ದೇಶವನ್ನು ಸೇರಿರಬೇಕು. ಗ್ರೀಸಿನ ವೈಭವ ಕಳೆಯಿತು; ಈಜಿಪ್ಟಿನ ವೈಭವ ರೋಮನ್‌ರಿಂಪ ಸುಲಿಗೆಗೊಂಡಿತು. ಫ್ರೆಂಚ್ ಸಾಮ್ರಾಟರಿಂದ ಅದು ಇಲ್ಲಿಗೆ ಬಂದು ಸೇರಿತು. ಇವನ್ನು ಕಾಣುವಾಗ ಫ್ರೆಂಚ್ ಮನೋವೃತ್ತಿಯ ಒಂದು ಹಿನ್ನೆಲೆ ಹೊಳೆಯದಿರದು-ನೆಪೋಲಿಯನನ ತನಕ ಅವರ ನಾಡನ್ನು ಮೆರೆಯಿಸಿದ ರಾಜ್ಯಲಕ್ಷ್ಮಿಯು ಇಂದಿಗೂ ತಮ್ಮದು, ತಾವು ಪ್ರಪಂಚದಲ್ಲಿ ಮೆರೆಯ ಬಲ್ಲವರು-ಎಂಬ ಪ್ರಾಚೀನ ವೈಭವದ ಹೆಮ್ಮೆಯು ಪ್ರೇತರೂಪಿಯಾಗಿ ಆಧುನಿಕ ಜನಗಳ ಮನಸ್ಸನ್ನು ಕಾಡುತ್ತಿರುವಂತೆ ಕಾಣುತ್ತದೆ.

ಇವನ್ನು ನೋಡಿಕೊಂಡು ಚಿತ್ರಕಲೆಯ ವಿಭಾಗಕ್ಕೆ ಬಂದರೆ, ಒಂದರ ಅನಂತರ ಇನ್ನೊಂದಾಗಿ ಬರುವ ವಿಶಾಲ ಕೋಣೆಗಳಿಗೆ ತುದಿಮೊದಲೆಂಬುದಿಲ್ಲ. ಫ್ರೆಂಚ್ ವೈಭವದ ಕಾಲದಲ್ಲಿ, ಆಶ್ರಯಕ್ಕಾಗಿ ಈ ನಗರಕ್ಕೆ ಬಂದು, ಅರಸರ ಹೆಮ್ಮೆಯನ್ನು ತಣಿಸಿದ ಕಲಾವಿದರೆಷ್ಟೋ ಜನ. ಅರಸರು ಸೂರೆ ಮಾಡಿರಬಹುದಾದ ಕಲಾಸಂಪತ್ತೂ ಇದೆ. ಇಟಲಿಯ ಲಿಯನಾರ್ಡೋ ಡ ವಿನ್ಸಿಯ 'ಮೋನಾ ಲೀಸಾ' ಚಿತ್ರ ಈ ಶಾಲೆಯಲ್ಲಿದೆ. ನಾನು ಹೋದಾಗ ಅವನ ಐದನೆಯ ಶತಮಾನೋತ್ಸವ ಇಲ್ಲಿಯೂ ನಡೆಯುತ್ತಿತ್ತು. ಇಲ್ಲಿನ ಚಿತ್ರಗಳನ್ನೆಲ್ಲ ಬಣ್ಣಿಸುವುದು ತುಂಬ ದುಡುಕಿನ ಮಾತು. ಕೆಲವನ್ನು ನೆನಪಿಂದಷ್ಟೆ ಹೇಳುತ್ತಿದ್ದೇನೆ.

ಟೊಸಿಪಿ ಎಂಬವನದು ಒಂದು ಚಿತ್ರ "ವೀನಸ್ ಮತ್ತು ಕ್ಯುಪಿಡ್" ಇಲ್ಲಿದೆ. ವೀನಸ್ ನಮ್ಮ ರತಿಯ ಪ್ರತೀಕ; ಕ್ಯುಪಿಡ್ ಮನ್ಮಥ ಸಮಾನ. ಈ ಎರಡು ವ್ಯಕ್ತಿಗಳು ಪ್ರಪಂಚದ ಶೃಂಗಾರ ಕಾವ್ಯಗಳನೇಕವಕ್ಕೆ ಚಿರಂ

ತನ ಸ್ಫೂರ್ತಿಗಳಾಗಿದ್ದಾರೆ. ಹಾಗೆಯೇ ಟೊಸಿಪಿಗೂ ಅವರು ಸ್ಫೂರ್ತಿ ಕೊಟ್ಟರು. ಇಲ್ಲಿ ಮೈ ಬಿಟ್ಟು ಮಲಗಿದ ಕೋಮಲ ಕಾಯೆಯಾದ ರತಿಯು ಯಾವುದೋ ಸುಂದರ ಸ್ವಪ್ನದಲ್ಲಿ ತೇಲುತ್ತಿದ್ದಾಳೆ. ಮನ್ಮಥ ಅವಳ ಸ್ವಪ್ನದಿಂದಲೇ ರೂಪುಗೊಂಡಿದ್ದ ತುಂಟ ಹುಡುಗನಂತೆ, ಅವಳ ಹಾಸಿಗೆಯನ್ನು ಬಿಟ್ಟೋಡುತ್ತಿದ್ದಾನೆ. ಸ್ತ್ರೀ ಪುರುಷರ ಶರೀರದ ಚೆಲುವುಗಳೆಲ್ಲ ಈ ಚಿತ್ರದಲ್ಲಿ ಅತ್ಯಂತ ಮಧುರವಾಗಿ, ಮನೋಹರವಾಗಿ ಚಿತ್ರಿತವಾಗಿವೆ.

ಅದರ ಮಗ್ಗುಲಲ್ಲಿ ಇನ್ನೊಂದು ಚಿತ್ರವಿದೆ; ಹೆಸರು ಮರೆತಿದ್ದೇನೆ–ಹಡಗೊಂದರ ಮೇಲೆ ನಡೆಯುತ್ತಿರುವ ಕೈಕೈಕಾಳಗದ ಚಿತ್ರವದು. ಬಾನಿನ ಹೊಂಬಣ್ಣಕ್ಕಿದಿರಾಗಿ ಈ ಕದನ ನಡೆಯುತ್ತಿದೆ. ನಡೆಸುವವರು ಇಪ್ಪತ್ತು ಮೂವತ್ತು ಯೋಧರುಗಳು. ಅಲ್ಲಿ ಬಿದ್ದವರು, ಬೀಳುವವರು, ಬೀಳಿಸುವವರು, ಗೆದ್ದವರು, ಸೋತವರು ಎಲ್ಲರೂ ಅಷ್ಟು ಮೇಳವಾಗಿ ಸೇರಿದ್ದಾರೆ. ಒಂದೇ ಒಂದು ಚಿತ್ರ ರೇಖೆಯು ತೋಲಗೆಟ್ಟುದಾಗಿ ಕಾಣಿಸದಂಥ ಸುಂದರ ಪ್ರಬಂಧವಾಗಿದೆ. ಚಿತ್ರದಲ್ಲಿನ ಕದನದ ಆವರಣವು ಕಂದು, ಕೆಂಪು, ಕಿತ್ತಳೆ, ಮಾಂಸ ವರ್ಣ, ಕೆನ್ನೀರಿಳೆ ಬಣ್ಣಗಳಿಂದ ತುಳುಕಾಡುತ್ತಿದೆ. ಆ ಬರಿಯ ಬಣ್ಣಗಳೇನೆ ಕದನದ ಕ್ರೌರ್ಯವನ್ನು ತೋರಿಸುವ ಕೆಲಸವನ್ನು ಮಾಡುತ್ತಿವೆ.

ಇಲ್ಲಿನ ಇನ್ನೊಂದು ಚಿತ್ರ-ಮೃತಿಯನ್ನೈದಿದ ಒಬ್ಬಳನ್ನು ಕ್ರಿಸ್ತ ಸನ್ಯಾಸಿನಿಯರು ಎತ್ತಿ ಹಿಡಿದ ಚಿತ್ರ. ಮೃತಳ ಮುಂಗಡೆಯಲ್ಲಿ ಅಲ್ಪ ಉಡುಗೆಯಲ್ಲಿರುವ ಒಬ್ಬ ಯೋಧ, ಆಕೆಯ ಪ್ರಣಯಿ ಇರಬಹುದು, ತಲೆಯನ್ನು ತಗ್ಗಿಸಿಕೊಂಡು ತನ್ನ ದುಃಖವನ್ನೆಲ್ಲ ತೋಡಿಕೊಳ್ಳುತ್ತಿದ್ದಾನೆ. ಮೃತ್ಯು ಸಂತಾಪವನ್ನು ಚಿತ್ರಿಸಿದ ಕೆಲವು ಅದ್ಭುತ ಚಿತ್ರಗಳಲ್ಲಿ ಇದೊಂದು ಎನ್ನಬಹುದು.

ವೇನ್‌ಗಫ್, ಸಿಸಾನ್, ಸುಸಾನ್, ಎಂಡ್ರೇ ಡಿರೈನ್, ರಿನಾಯರ್, ಗಾಗಿನ್ ಮೊದಲಾದ ಕ್ರಾಂತಿಯುಗದ ಚಿತ್ರಕಾರರ ಚಿತ್ರಗಳನೇಕ ಇಲ್ಲಿವೆ. ಡಿರೈನನ ಒಂದು ಹಳ್ಳಿಯ ಚಿತ್ರವು ಸಂಜೆ ಬಿಸಿಲು, ನೆಲ, ಮನೆಮಾಡುಗಳ ಹೊಂಬಣ್ಣವನ್ನು ಅಪ್ರತಿಮವಾಗಿ ಚಿತ್ರಿಸುತ್ತದೆ.

ಹೆನ್ರಿ ರೋಸೂ ಬರೆದ—'ಹಾವಾಡಿಗ' ಎಂಬೊಂದು ಚಿತ್ರವಿದೆ, ಫ್ರೆಂಚ್ ಕ್ರಾಂತಿ ಶೈಲಿಯನ್ನೇ ತಪ್ಪಿಸಿ, ಪೌರ್ವಾತ್ಯ ಶೈಲಿಯೋ ಎಂಬ ಭ್ರಮೆ

ಹುಟ್ಟಿಸುವಂತೆ ಬರೆದ ಈ ಚಿತ್ರದ ಮುಕ್ಕಾಲು ಭಾಗ ಹಸುರು ಕಗ್ಗಾಡಿಂದ ತುಂಬಿದೆ. ನಿಡುಗೇಶದ ಕಪ್ಪು ಹೆಂಗಸೊಬ್ಬಳು, ಒಂದು ನದಿ ದಂಡೆಯ ಮೇಲೆ ನಿಂತು, ಕೊಳಲೂದುತ್ತಿದ್ದಾಳೆ. ಅವಳ ಭುಜದ ಮೇಲೆಯೇ ಒಂದು ಹಾವು ಆಡುತ್ತಿದೆ. ಆಚೀಚೆ–ಹುಲ್ಲಿಂದ, ಗಿಡಗಳಿಂದ ಇತರ ಹಾವುಗಳು ಒಂದೊಂದಾಗಿ ಅವಳ ಕೊಳಲಗಾನವನ್ನು ಕೇಳಿ ಬರುತ್ತಿವೆ.

· ಚಿತ್ರಪ್ರಿಯರಾದವರಿಗೆ ಒಳ್ಳೆಯ ಮುದ್ರಣದಿಂದ ಕೂಡಿದ ಚಿತ್ರ ಪ್ರತಿಗಳನ್ನು ಮಾರುವ ಬಹು ದೊಡ್ಡ ವ್ಯವಸ್ಥೆ ಇಲ್ಲಿದೆ. ಇಷ್ಟೊಂದು ದೊಡ್ಡ ಏರ್ಪಾಟು ಇನ್ನೆಲ್ಲಿಯೂ ನನಗೆ ಕಾಣಸಿಗಲಿಲ್ಲ.

ಒಂದು ದಿನ ನಾನು ಇಲ್ಲಿನ ಟೆಪೆಸ್ಟ್ರಿಗಳನ್ನು ಕಾಣುವುದಕ್ಕೆ ಹೋಗಿದ್ದೆ. ಯೂರೋಪಿನ ಪೂರ್ವ ಕಾಲದ ರತ್ನಗಂಬಳಿ(ಗೋಡೆಗೆ ತೂಗುವ)ಗಳ ಬಹು ದೊಡ್ಡ ಸಂಗ್ರಹ ಇಲ್ಲಿದೆ. ಪ್ರಾಚೀನ ಚಿತ್ರಕಾರರು ತೈಲವರ್ಣಗಳಿಂದ ದೊಡ್ಡದೊಡ್ಡ ಚಿತ್ರಗಳನ್ನು ಬರೆದಂತೆಯೇ,ಅವಕ್ಕೆ ಸರಿಸಾಟಿಯಾದ ಬಣ್ಣದ ನೂಲುಗಳಿಂದ, ಕಂಬಳಿಯ ಮೇಲೆ ನೈಯ್ಗೆಯಿಂದ ಚಿತ್ರ ಪೂರೈಸಿದ್ದಾರೆ. ತೀರ ಸಮೀಪಕ್ಕೆ ಹೋಗಿ ಕಂಡರೂ ಇದು ನೂಲಲ್ಲ, ನೈಯ್ಗೆಯಲ್ಲ-ಎಂಬ ಭ್ರಮೆ ಬರುತ್ತದೆ ನಮಗೆ. ಅವುಗಳಲ್ಲಿ ಹಲವು ಪ್ರಸಿದ್ಧ ಚಿತ್ರಕಾರರ ತೈಲ ಚಿತ್ರಗಳ ನೆಯ್ಗೆಯ ಅನುಕರಣೆಗಳೂ ಇವೆ. ಮೂಲ ಚಿತ್ರಗಳಲ್ಲಿ ನಾವು ಕಾಣುವ ಛಾಯಾ ತೇಜಗಳನ್ನು ಅಷ್ಟೇ ವಿಚಕ್ಷಣೆಯಿಂದ, ನೈಯ್ಗೆಯಲ್ಲಿ ಹೇಗೆ ಸಾಧಿಸಿದರೋ ತಿಳಿಯದು. ಇಂಥ ಕಂಬಳಿಗಳು ಒಂದೆರಡಲ್ಲ, ನೂರಾರು ಕಾಣಸಿಗುತ್ತವೆ.

ಇನ್ನೊಂದು ಬಹು ದೊಡ್ಡ ಕೊಟಡಿಯಲ್ಲಿ-ಫ್ರೆಂಚ್ ಸಾಮ್ರಾಟರುಗಳ ಕಿರೀಟಗಳನ್ನೂ, ರತ್ನಖಚಿತ ಖಡ್ಗಗಳನ್ನೂ, ಉಡುಗೆಗಳನ್ನೂ ಪ್ರದರ್ಶಿಸಿದ್ದಾರೆ. ಕಿರೀಟಗಳ ನೀಲ, ವಜ್ರ ಮೊದಲಾದ ರತ್ನಗಳು, ಆಡುವ ಗೋಲಿಗಿಂತ ದೊಡ್ಡದಾಗಿದ್ದುದುಂಟು. ಇವೆಲ್ಲ ಇಂದು ಕೋಟಿಗಟ್ಟಲೆ ರೂಪಾಯಿ ಬೆಲೆ ಬಾಳಬಹುದು. ಇಂಥ ಕಣ್ಣು ಕುಕ್ಕುವ ವೈಭವ, ಮೇರೆ ಮೀರಿದ ವಿಲಾಸಗಳನ್ನು ಕಂಡ ಫ್ರೆಂಚ್ ಜನತೆಯು, ಒಂದು ದಿನ ಸಿಟ್ಟಿಗೆದ್ದು, ಮಹಾ ಕ್ರಾಂತಿ ಎಬ್ಬಿಸಿದುದರಲ್ಲಿ ಆಶ್ಚರ್ಯವೇನಿಲ್ಲ.

ಒಂದು ದಿನ ಫ್ರೆಂಚ್ ಆಧುನಿಕ ಚಿತ್ರಕಾರರ ಚಿತ್ರಗಳನ್ನು ನೋಡುವ ಸಲುವಾಗಿ, ನಾನು ಸೀನ್ ನದಿ ದಂಡೆಯ ಮೇಲಿದ್ದ ಮೋಡರ್ನ ಆರ್ಟ

ಗೆಲರಿಯನ್ನು ನೋಡುವುದಕ್ಕೆ ಹೋಗಿದ್ದೆ. ಈ ಮಂದಿರವು ಕೇವಲ ಆಧುನಿಕ ಶೈಲಿಯ ವಾಸ್ತುವಾಗಿದೆ. ಹೊರಗಡೆಯ ಗೋಡೆಗಳಲ್ಲಿ ಬಹು ಸುಂದರವಾದ ಆಧುನಿಕ ಚಿತ್ರಗಳನ್ನು ಕೆತ್ತಿದ್ದಾರೆ. ನಾನು ಹೋದ ವೇಳೆ ಅಲ್ಲಿನ ಸ್ಥಳೀಕ ಚಿತ್ರವಿಭಾಗ ಮುಚ್ಚಿತ್ತು. ಬದಲು, ವಿಶೇಷ ಪ್ರದರ್ಶನವಾಗಿ, ಮೇಕ್ಸಿಕೋ ದೇಶದ ಪ್ರಾಚೀನ ಮತ್ತು ಅರ್ವಾಚೀನ ಚಿತ್ರ ಮತ್ತು ಶಿಲ್ಪಗಳನ್ನಿರಿಸಿದ್ದರು. ಮೇಕ್ಸಿಕೋದಿಂದ ಇದಕ್ಕಾಗಿಯೇ ತಂದ—ಮಾಯಾ ನಾಗರಿಕತೆ, ಎಜೆಟಿಕ್ ನಾಗರಿಕತೆ, ಹತ್ತಿರ ಹತ್ತಿರವಾಗಿ ಬೆಳೆದ ಪ್ರಾಚೀನ ನಾಗರಿಕತೆಗಳಿವು. ಅವುಗಳಿಗೆ ಸಂಬಂಧಿಸಿದ ದೇವತೆಗಳ ವಿಗ್ರಹಗಳು, ಶಿಲಾ ಮುಖಗಳು, ಯುಗ ಪುರುಷರ ಚಿತ್ರಗಳು, ಸುಂದರ ಶಿಲ್ಪಗಳಲ್ಲದಿದ್ದರೂ ಭವ್ಯವೂ ವೀರಾಕಾರ ಉಳ್ಳವೂ ಆಗಿವೆ. ಇದೇ ವೇಳೆಯಲ್ಲಿ ಮೆಕ್ಸಿಕನ್ ಆಧುನಿಕರ ಚಿತ್ರಗಳನ್ನು ನಾಲ್ಕೆಂಟು ದೊಡ್ಡ ಕೊಟಡಿಗಳಲ್ಲಿ ಪ್ರದರ್ಶಿಸಿದ್ದರು. ಚಿತ್ರ ಶೈಲಿಯಲ್ಲಿ ಆಧುನಿಕ ಯುರೋಪಿನ ಗಾಳಿಯೆಲ್ಲ ಮೇಕ್ಸಿಕೋ ದೇಶಕ್ಕೆ ಬೀಸಿದೆ. ಆದರೆ ಅಲ್ಲಿ ಪ್ರದರ್ಶನ ಮಾಡಿದ ಯಾರೊಬ್ಬರೂ—ಪಿಕಾಸೋ, ಡಾಲಿ, ಸಿಸಾನ್ ಮೊದಲಾದವರ ಶೈಲಿಗಳ ಅಂಧಾನುಕರಣೆ ಮಾಡಿಲ್ಲ. ಸ್ವಂತವಾದ ಚಿತ್ರಶೈಲಿಯನ್ನು ನಿರ್ಮಿಸಿಕೊಂಡು ಚಿತ್ರ ಲೇಖನ ಶಾಸ್ತ್ರಕ್ಕೆ ಪ್ರಾಧಾನ್ಯ ಕೊಡದೆ, ಭಾವನೆಗಳಿಗೆ ಪ್ರಾಧಾನ್ಯ ಕೊಟ್ಟಿದ್ದಾರೆ. ಚಿತ್ರಲೇಖನ ತೀರ ಸ್ವತಂತ್ರವಾದದ್ದು. ವಿಷಯ-ಯುದ್ಧ, ಜನ ಜೀವನ, ಬಡತನ ಮೊದಲಾದುವುಗಳು. ತಮ್ಮ ಉದ್ದೇಶವನ್ನು ಹೇಳುವುದರಲ್ಲಿ ಅವರು ಯಶಸ್ವಿಯಾಗಿದ್ದಾರೆ. ಅಂಥವರಲ್ಲಿ ಡೀಗೋ ರಿವೇರಾ, ಡಿ. ಏ. ಸಿಕೇರಾ ಎಂಬಿಬ್ಬರನ್ನು ಇಲ್ಲಿ ಹೆಸರಿಸಬಹುದು. ಉಳಿದ ಹೆಸರುಗಳಿಲ್ಲವೆಂದಲ್ಲ. ನನಗೆ ನೆನಪಿಲ್ಲ. ರಿವೇರಾ ಪ್ರಾಚೀನ ಕಾಲದ ಸಂತೆಯ ಒಂದು ಕಾಲ್ಪನಿಕ ಚಿತ್ರ ಬರೆದಿದ್ದಾನೆ. ಅದರಲ್ಲಿ ಪೂರ್ವದ ಮಾಯಾ ನಾಗರಿಕತೆ ಎದ್ದು ಕಾಣುತ್ತದೆ.

"ಬಡವರ ರಾತ್ರಿ" ಎಂಬುದು ಅವನ ಇನ್ನೊಂದು ಚಿತ್ರ. ರಾತ್ರಿಯ ಕತ್ತಲಿಲ್ಲ, ಉಷ್ಣವಲಯದ ಹೊಂಬೆಳಕು ತುಂಬಿಕೊಂಡಿದೆ. ಇಕ್ಕಟ್ಟಿನಲ್ಲಿ ಮಲಗಿದ ತಾಯಿಯ ಇಲ್ಲವೆ ತಂದೆಯ ತೊಡೆ, ಕಾಲುಗಳಿಗೆ ತೂಗಿಕೊಂಡು ನಿದ್ರಿಸುತ್ತಿರುವ ನಾಲ್ಕೆಂಟು ಮಕ್ಕಳ ಮುಖಗಳು ನಮ್ಮಲ್ಲಿ ಕರುಣೆಯನ್ನು ಹುಟ್ಟಿಸುತ್ತವೆ. ಬರ್ನಿಂಗ್ ಜೂಡಾಸ್, ಬಲಿದಾನ (ಸಿಕೇರಾ) ಎಂಬ ಇನ್ನೆರಡು ಚಿತ್ರಗಳು ನಿರಂಕುಶ ಪ್ರಭುತ್ವ, ಆಧುನಿಕ ಯುದ್ಧಸ್ವರೂಪ

ಗಳನ್ನು ಅತಿ ಸ್ವಲ್ಪ ವಸ್ತುಗಳಿಂದ ಅತಿ ವಿಶೇಷವಾಗಿ ತೋರಿಸುವ ಎರಡು ಚಿತ್ರಗಳಾಗಿವೆ.

ಪೌರ್ವಾತ್ಯರ ದೃಷ್ಟಿಯಿಂದ ತೀರ ವಿಶೇಷವಾದೊಂದು ಮ್ಯೂಸಿಯಮ್ ಇಲ್ಲಿದೆ–ಅದು 'ಮ್ಯೂಸಿ ಗಿಮೆ.' ಇಲ್ಲಿ ನಾವು–ಕಾಂದಹಾರ, ಭಾರತ, ಬರ್ಮ, ಸಯಾಮ್, ಇಂಡೋ ಚೀನಾಗಳ ಚಿತ್ರ, ಶಿಲ್ಪಗಳನ್ನೂ ಚೀನ ಜಪಾನುಗಳ ಕಲಾಸಂಪತ್ತನ್ನೂ ಕಾಣಬಹುದು. ಈ ಸಂಸ್ಥೆಯ ಪಂಡಿತರು ಪೌರ್ವಾತ್ಯ ದಂತ ಕಥೆ, ಪುರಾಣ (Myths and legends) ಗಳನ್ನು ಕುರಿತಾಗಿ ತುಂಬ ವಿಷಯ ಸಂಗ್ರಹ ಮಾಡಿದ್ದಾರೆ. ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಪ್ರಾಚೀನ ಭಾರತದ ಮೇಲೆ ಈ ಸಂಸ್ಥೆಯವರು ಬೀರಿದಂತಹ ಬೆಳಕು ಅತ್ಯಂತ ವಿಶೇಷವಾಗಿದೆ. ನಮ್ಮ ದೇಶದ ಬೌದ್ಧ ಧರ್ಮ, ಸಂಸ್ಕೃತಿಗಳ ಪ್ರಭಾವವು ನೆರೆಕರೆಯ ನಾಡುಗಳಲ್ಲಿ ಹೇಗೆ ವಿಸ್ತರಿಸಿತು, ಎಷ್ಟು ಪ್ರಭಾವಶಾಲಿಯಾಗಿ ಕೆಲಸಮಾಡಿತು–ಎಂಬುದನ್ನು ಇಲ್ಲಿ ಬಂದು ತಿಳಿದುಕೊಳ್ಳಬಹುದಾಗಿದೆ. ಬುದ್ಧ ಧರ್ಮವು ಸಾಯಮಿನ ಮೂಲಕವಾಗಿ ಕಾಂಭೋದಿಯಾ, ಅನ್ನಮ್ ಮೊದಲಾದ ದೇಶಗಳಿಗೆ ಪ್ರವಹಿಸಿತು. ಹತ್ತು ಹದಿನೆರಡನೆಯ ಶತಮಾನದಲ್ಲಿ ಖ್ಮೇರ್ ನಾಗರಿಕತೆ ಎಂಬ ಒಂದು ಹೊಸ ನಾಗರಿಕತೆಯ ಹುಟ್ಟಿಗೆ ಕಾರಣವಾಯಿತು. ಯಾವುದೋ ಒಂದು ಅರಸು ವಂಶದ ಪ್ರಭಾವದಿಂದಾಗಿ ಬಹು ದೊಡ್ಡ ಜನಜೀವನ ಇಲ್ಲಿ ಬೆಳೆಯಿತು. ಖ್ಮೇರ್ ಅರಸುಗಳು ಹನ್ನೊಂದು ಹನ್ನೆರಡನೆಯ ಶತಮಾನಗಳಲ್ಲಿ ಅನೇಕ ದೇವಾಲಯಗಳನ್ನು ಕಟ್ಟಿಸಿದರು. ಅಂಕೋರ್‌ವಾಟ್ ಎಂಬಲ್ಲಿನ ಪ್ರಾಚೀನ ವಾಸ್ತು ವಿಶೇಷಗಳು ಭಾರತದ ಶಿಲ್ಪ, ವಾಸ್ತು ಶೈಲಿಗಳ ಮೇಲೆ ಚೀನಾ ದೇಶದಿಂದುಂಟಾದ ಪ್ರಭಾವ ತೋರಿಸುತ್ತವೆ. ಇಲ್ಲಿನ ಮತ್ತು ಸುತ್ತುಮುತ್ತಲಿನ ಪ್ರದೇಶಗಳಲ್ಲಿ ದೊರೆತ ಶಿಲ್ಪಗಳಲ್ಲಿ ಬೌದ್ಧ, ಬ್ರಾಹ್ಮಣ ದೇವತೆಗಳೆಲ್ಲ ಇದ್ದಾರೆ. ಸರ್ಪಾರಾಧನೆ ತೀರ ಹೆಚ್ಚಿನ ವೈಶಿಷ್ಟ್ಯ ಪಡೆಯಿತು. ಮ್ಯೂಸಿ ಗಿಮೆಯಲ್ಲಿ ಅಲ್ಲಿಂದ ತಂದಿರಿಸಿದಂತೆ ಶಿಲ್ಪಗಳು ನಮ್ಮನ್ನು ಬೆರಗುಗೊಳಿಸುತ್ತವೆ. ತ್ರಿಮೂರ್ತಿಯ ಬಹು ಸುಂದರವಾದೊಂದು ಮುಖವಿದೆ. ಅದರ ನಡುವಣ ಮುಖ ವಿಷ್ಣುವಿನದು. ಆ ಮುಖದಲ್ಲಿ ಆತ್ಮಾನಂದ ಹೊಡೆದು ಕಾಣುತ್ತದೆ. ಒಬ್ಬ ಖ್ಮೇರ್ ಅರಸನ ಪ್ರತಿಮೆಯಿದೆ. ಅದು ಹುಲಿಯನ್ನು ಹೊಯ್ಯಲು ಹೋದ ಸಳನಿಗಿಂತ (ವಿಷ್ಣು ವರ್ಧನ) ಸುಂದರವಾದ, ವೀರವಾದ ಮೂರ್ತಿ

ಯಾಗಿ ಕಾಣುತ್ತದೆ. ಇನ್ನೊಂದು ತ್ರಿಮುಖಿಯಾದ ಮೂರ್ತಿಯಿದೆ-ಲೋಕೇಶ್ವರನೆಂದು ನಾಮಕರಣ. ಅದರ ನಡುವಣ ಮುಖ ವಿಷ್ಣುವಿನದಲ್ಲ; ಶಿವನದು. ಹಣೆಯ ನಡುವೆ ಕಣ್ಣಿದೆ. ಅದರ ತುಟಿಯಲ್ಲಿ(ಮದರಾಸ್ ಮ್ಯೂಸಿಯಮಿನ) ನಟರಾಜ ಮೂರ್ತಿಯ ವೈಖರಿಯೆಲ್ಲ ಕಾಣುತ್ತದೆ. ತಾರಾ ಎಂಬ ಇನ್ನೊಂದು ಸ್ತ್ರೀ ವಿಗ್ರಹವಿದೆ. ಮೊಣಕಾಲೂರಿದ ಈ ದೇವತೆಯ ಉಡುಗೆ ಪ್ರಾಚೀನ ಈಜಿಪ್ಟಿನ ಉಡುಗೆಯಂತಿದೆ. ಕಿವಿ, ಮುಖಗಳೆಲ್ಲ ಮಂಗೋಲಿಯನ್ ಛಾಯೆ ತೋರಿಸುತ್ತವೆ. ಇನ್ನೊಂದು ಶಿಲ್ಪ ವಿಗ್ರಹ ಲಾಸ್ಯವಾಡುವ ಒಬ್ಬ ನರ್ತಕನದು. ಇದು ಉತ್ಕೀರ್ಣ ಶಿಲ್ಪ. ಹೊಯ್ಸಳರ ಕಾಲದ ನರ್ತಕಿಯರ ಮೂರ್ತಿಗಳಂತೆ ಅತ್ಯಾಭರಣಗಳಿಲ್ಲ. ಮೈಯ ಲಲಿತವಾದ ರೇಖೆಗಳು ನರ್ತಕನ ಆನಂದ ಲಹರಿಯನ್ನು ತೋರಿಸುತ್ತವೆ. ಈ ದೇಶದ ಏಳು ಹೆಡೆಯ ನಾಗರು ಮಹಾಶೇಷನ ಪ್ರತೀಕಗಳು. ಅವುಗಳ ಶಿಲ್ಪವಿಲಾಸ ಇನ್ನಷ್ಟು ವಿಶೇಷವಾದದ್ದು. ಇದರಂತೆಯೆ-ಹರಿಹರ, ಶಿವ, ಶಕ್ತಿ, ಅಪ್ಸರರು ಎಲ್ಲ ಬಗೆಯ ಭಾರತೀಯ ದೇವಾನುದೇವತೆಗಳಿದ್ದಾರೆ. ರಾಮ ಸುಗ್ರೀವರ ಸಖ್ಯದ ಒಂದು ಚಿತ್ರವಿದೆ. ಸ್ಕಂದ, ಗಣೇಶರು ಸಹ ಈ ದೇಶದ ಚಿತ್ರ ಶಿಲ್ಪಗಳಲ್ಲಿ ಕಾಣಸಿಗುತ್ತಾರೆ.

ಟಿಬೇಟಿನಿಂದ ಸಂಗ್ರಹಿಸಿದ ಅನೇಕ ಕಂಚಿನ ವಿಗ್ರಹಗಳಲ್ಲಿ-ಅವಲೋಕಿತೇಶ್ವರ, ಮೈತ್ರೇಯ, ಶ್ವೇತ ತಾರಾ, ಮಂಜುಶ್ರೀ ಮೊದಲಾದ ಬೌದ್ಧ ಜಾತಕಗಳ ಭಾರತೀಯ ದೇವತೆಗಳಿದ್ದಾರೆ. ಶ್ವೇತ ತಾರೆಯ ಒಂದು ಕಂಚಿನ ಪ್ರತಿಮೆ ಅತ್ಯಂತ ಮನೋಹರವಾಗಿದೆ. ಇದು ಕುಳಿತ ವಿಗ್ರಹ. ಧ್ಯಾನ ಮಗ್ನಳಾದ ತಾರೆ ತ್ರಿಭಂಗಿಯಲ್ಲಿ ಕುಳಿತಿದ್ದಾಳೆ. ಹಾಗೆ ಧ್ಯಾನಕ್ಕೆ ತ್ರಿಭಂಗಿ ಉಪಯೋಗಿಸಿದವರು ವಿರಳ. ಈ ಪ್ರತಿಮೆ ಕಂಚಿನದು. ಇದು ದೈವ ವಿಲಾಸದ ಅತ್ಯಂತ ಸುಂದರ ಚಿತ್ರವನ್ನು ನಮಗೆ ಕೊಡುತ್ತದೆ.

ಬೌದ್ಧ ಧರ್ಮವು ಗಾಂಧಾರ ದೇಶದಲ್ಲಿ ಗ್ರೀಕ್ ಶಿಲ್ಪಶೈಲಿಯೊಡನೆ ಹೇಗೆ ಸಮರಸಗೊಂಡಿತು-ಎಂಬುದನ್ನು ತೋರಿಸುವ ಅನೇಕ ಶಿಲ್ಪಗಳು ಇಲ್ಲಿ ಕಾಣಸಿಗುತ್ತವೆ. ಅಜಂತ ಗುಹಾಲಯಗಳ ಚಿತ್ರಗಳನ್ನು ಪ್ರತಿ ತೆಗೆದು ಇಲ್ಲಿ ಪ್ರದರ್ಶಿಸಿದ್ದಾರೆ. ಭಾರತೀಯ ಸಂಸ್ಕೃತಿಯೇ ಪಸರಿಸಿ ಸಾವಿರಾರು ಮೈಲುಗಳ ದೂರ ಕಾಲ್ನಡೆಯಿಂದಲೂ ಸಾಗಿ, ಏಸ್ಯದ ಸಂಸ್ಕೃತಿಗೆ ಎಂತಹ ಪುಟಕೊಟ್ಟಿತು ಎಂಬುದನ್ನು ಇಲ್ಲಿ ಬಂದರೆ ತಿಳಿಯಬಹುದು. ಈ ವಿಷಯ

ದಲ್ಲಿ ಫ್ರೆಂಚರು ಮತ್ತು ಡಚ್ಚರು ಮಾಡಿದ, ಮಾಡುತ್ತಿರುವ ಕೆಲಸಗಳು ಬಹು ವಿಶೇಷವಾಗಿದೆ. ನಾನು ಹೋದಾಗ–ಪೇರಿಸ್ ಪುಸ್ತಕ ಪ್ರಕಾಶಕನೊಬ್ಬನು ನಮ್ಮ ದೇಶದ ಖಜುರಾಹೋ ಮತ್ತು ಭುವನೇಶ್ವರಗಳಲ್ಲಿನ ಶಿಲ್ಪಗಳ ಒಂದು ಗ್ರಂಥವನ್ನು ಪ್ರಕಟಿಸಿದ್ದ. ಸುಮಾರು ಅರುವತ್ತಕ್ಕೆ ಮೇಲ್ಪಟ್ಟು ಬಹುದೊಡ್ಡ ಗಾತ್ರದ ಶಿಲ್ಪಗಳ ನಕ್ಷಾವಳಿ ಅದರಲ್ಲಿದೆ.ಪುಸ್ತಕದ ಬೆಲೆಯೋ-ಅರ್ವತ್ತು ರೂಪಾಯಿಗಳಷ್ಟು. ಚಿತ್ರಗಳ ಸಂಗ್ರಹ, ಮುದ್ರಣಗಳೆರಡೂ ಅತಿ ಸುಂದರವಾಗಿವೆ. ನಮ್ಮ ನಾಡಿನಲ್ಲಿ ಖಜುರಾಹೋವಿನ ಶಿಲ್ಪ ಮತ್ತು ವಾಸ್ತು ಸಂಪತ್ತನ್ನು ಕುರಿತು ಕೇಳಿದ ಜನಗಳೆಷ್ಟಿದ್ದಾರೆ?

ಇಂಗ್ಲಿಷ್‌ನಲ್ಲಿ ಒಂದು ಮಾತುಂಟು "Art is universal" ಎಂದು; ಸೌಂದರ್ಯವನ್ನು ವಿಶ್ವವೇ ಮೆಚ್ಚಬಲ್ಲುದು ಎಂಬ ಅರ್ಥ ಅದಕ್ಕೆ. ಕಲಾ ಪ್ರಿಯನಾದವನಿಗೆ ಸೌಂದರ್ಯ ಮೆಚ್ಚುವುದಕ್ಕೆ ದೇಶಗಳ ಅಡೆತಡೆಯಿಲ್ಲ. ಆ ದೃಷ್ಟಿಯಿಂದಲೇ ಪಾಶ್ಚಾತ್ಯರು ಪೌರ್ವಾತ್ಯ ಪ್ರಾಚೀನ ಕಲೆಗಳ ವಿಚಾರದಲ್ಲಿ ಅಷ್ಟು ಪರಿಶ್ರಮ, ಪ್ರೇಮ ತೋರಿಸುತ್ತಿದ್ದಾರೆ. ಹಾಗಿರುತ್ತ ನಮ್ಮ ಜನ ತಮ್ಮದೇ ಆದ ಕಲೆಗಳನ್ನು ತಿಳಿದು ಮೆಚ್ಚುವ ಪ್ರಯತ್ನಮಾಡಬೇಡವೇ?

ಪೇರಿಸ್ ನಗರದಲ್ಲಿರುವಾಗ ನಾನು ಪಾಶ್ಚಾತ್ಯರ ಕೆಲವಾದರೂ ನೃತ್ಯ, ಗೀತ ನಾಟಕ, ಬಾಲೆಗಳನ್ನು ನೋಡಬೇಕೆಂದು ಎಣಿಸಿಕೊಂಡಿದ್ದೆ. ಮುಂಚಿತವಾಗಿ ಪ್ರವೇಶ ಕಾದಿರಿಸುವುದು ನನಗೆ ಸಾಧ್ಯವಾಗಲಿಲ್ಲ. ಅನಂತರ ಮಾಡಿದ ಅನೇಕ ಪ್ರಯತ್ನಗಳು ವಿಫಲವಾದುವು. ಎಷ್ಟು ದಂಡ ತೆತ್ತಾದರೂ ಕೆಲವಾದರೂ ನಾಟಕಗಳನ್ನು ನೋಡುವ ಆಸೆ ಮಾಡಿದರೂ ಸಫಲವಾಗಲಿಲ್ಲ. ಕೊನೆಗೆ ಒಂದೂವರೆ ಪೌಂಡು ಬೆಲೆ ತೆತ್ತು ಪೇರಿಸಿನ ಪ್ರಸಿದ್ಧ ದೇಖಾವೆ "ಫಾಲಿಸ್ ಬರ್ಜರ್" ನೋಡಲು ಟಿಕೇಟು ದೊರಕಿಸಿಕೊಂಡೆ. ಇದು ನಾಟಕವೂ ಅಲ್ಲ, ನೃತ್ಯವೂ ಅಲ್ಲ, ಗೀತವೂ ಅಲ್ಲ — ಎಲ್ಲವುಗಳನ್ನು ಕೂಡಿಕೊಂಡ ಒಂದು ಅದ್ಭುತ ದೇಖಾವೆ. ಇನ್ನು ಹಾಗೆಯೇ ಸುದೈವದಿಂದ ಆ ನಗರಕ್ಕೆ ಬಂದಿದ್ದ ಸ್ಪೇನಿಷ್ ನರ್ತಕಿಯಾದ ಕಾರ್ಮೆನ್ ಅಮಾಯಾ ಎಂಬವಳ ನೃತ್ಯಗಳನ್ನು ನೋಡುವುದಕೂ ಟಿಕೇಟು ದೊರಕಿಸಿಕೊಂಡೆ. ಅಲ್ಲಿನ "ಇಟ್ವಾಲ್ ಥಿಯೇಟರ್"ನಲ್ಲಿ ಈ ನೃತ್ಯಪ್ರದರ್ಶನ ನಡೆಯಿತು. ಇದನ್ನು ಲಂಡನಿನಲ್ಲೇ ನೋಡಬೇಕೆಂದು ಮಾಡಿದ ನನ್ನ ಪ್ರಯತ್ನ ವಿಫಲವಾಗಿತ್ತು.

ಅಮಾಯಾ ಸುಮಾರು ನಾಲ್ವತ್ತು ವಯಸ್ಸಿನ ಹೆಸರಾದ ಸ್ಪೇನಿಷ್ ನರ್ತಕಿ. ಅವಳ ಜೊತೆಗೆ ಅವಳ ಸೋದರಿಯರು, ಅಲ್ಲದೆ ಇನ್ನೂ ಸುಮಾರು ಇಪ್ಪತ್ತುಮಂದಿ ಇತರ ನರ್ತಕಿಯರಿದ್ದರು. ಅಷ್ಟೇ ಮಂದಿ ತರುಣರೂ ಅವಳ ನರ್ತನದಲ್ಲಿ ಭಾಗ ವಹಿಸುತ್ತಿದ್ದರು. ಹಿಮ್ಮೇಳಕ್ಕೆ ಸ್ಪೇನಿಷ್ ಗೀತ, ವಾದನ ಗಳಿಂದ ಕೂಡಿದ ದೊಡ್ಡ ಆರ್ಕೆಸ್ಟ್ರಾ ಇತ್ತು. ಇವರು ತೋರಿಸಿದ ಸಂಗೀತ, ನೃತ್ಯಗಳಿಗೂ ರಸ್ಯದ ಪ್ರಭಾವದಿಂದ ಬೆಳದು ಬಂದ ಯುರೋಪಿನ ಇತರ ಬಾಲೆಗಳಿಗೂ ತುಂಬಾ ಅಂತರವಿದೆ. ಇವರ ನೃತ್ಯಗಳೆಲ್ಲವೂ ಸ್ಪೇನಿಷ್ ನೃತ್ಯ ಗಳು; ಗೀತವೂ ಹಾಗೆಯೇ. ಯುಗೋಸ್ಲಾವ್ ನೃತ್ಯಗಳಿಗಿಂತ ಇವು ವಿಶೇಷವಾಗಿದ್ದವು. ಸ್ಪೈನಿನ ಜನ ಜೀವನದಲ್ಲಿ ಶೃಂಗಾರಮಯವಾದ,ಲಘು ವಾದ ಮನೋಲಹರಿಗಳು ಶತಮಾನ ಶತಮಾನಗಳಿಂದಲೂ ಹರಿದು ಬಂದಿವೆ. ಅವರು ಸುಲಭದಲ್ಲಿ ಭಾವನಾಪರವಶರಾಗಬಲ್ಲರು. ಬಿಡುವಿನ ಗಳಿಗೆಗಳಲ್ಲಿ ನೃತ್ಯ, ಗೀತಗಳು ತಮ್ಮ ಉಸಿರು ಎನ್ನುವಷ್ಟು ರೂಢಿಯಾಗಿವೆ ಯಾದುದರಿಂದ, ಈ ಜನಗಳ ನೃತ್ಯಕ್ಕೊಂದು ವಿಶೇಷ ಪುಟವಿದೆ.

ನೃತ್ಯದ ಹಿಮ್ಮೇಳದಲ್ಲಿ ಹಲವಾರು ಗಿತಾರುಗಳು ಭಾವನಿರೂಪಣೆ ಮಾಡುವುದರಲ್ಲಿ ಮುಖ್ಯ ಕೆಲಸ ಮಾಡುತ್ತವೆ. ಈ ಗೀತ ಮಾರ್ದವ ಪದ್ಧತಿ ಯದು. ಅದರಲ್ಲಿ ಅರಬ ಸಂಗೀತದ ಛಾಯೆಯೂ ಕಾಣಿಸುತ್ತದೆ. ಪೌರ್ವಾ ತ್ಯರಾದ ನಮಗೆ, ಈ ಗೀತ ಮಾರ್ಗವನ್ನು ಮೆಚ್ಚುವ ಕೆಲಸ ಸುಲಭ. ಅವುಗಳು ಭಾವನೆಗಳನ್ನು ಉದ್ವೇಗಪೂರಿತವಾಗಿ ಹೇಳುವುದರಿಂದ, ಜಡ ವಾದ ಕ್ಷಣಗಳೇ ಕಾಣಿಸುವುದಿಲ್ಲ.

ಈ ನರ್ತಕರ ಉಡುಗೆ ತೊಡುಗೆಗಳೂ ದೇಶೀಯವಾದುವು. ಅವರು ತೊಡುವ ಲಂಗಗಳು, ಕುಪ್ಪಸಗಳು, ಶಾಲುಗಳು, ಸ್ಪೇನಿಷ್ ಬಣ್ಣ ಬೆಡಗು ಗಳನ್ನು, ಚಿತ್ರಕೆಲಸಗಳನ್ನು ತೋರಿಸುತ್ತವೆ. ಗಂಡಸರು ಬಿಗಿಯಾದ ಬಣ್ಣದ ಚಲ್ಲಣ,ಬಿಳಿಯ ಶರ್ಟು ಅದರ ಮೇಲೆ ಬಣ್ಣದ ಕವಚಗಳನ್ನು ಧರಿಸುತ್ತಾರೆ. ಇವುಗಳಲ್ಲಿ ಹೊಮ್ಮುವ ಬಣ್ಣಗಳು ಉಜ್ವಲವಾದವು. ಆ ಜ್ವಲಿಸುವ ಕೆಂಪು ಹಸುರು, ನೀಲಗಳು ಕಣ್ಣು ಕುಕ್ಕುವಷ್ಟು ಬೆಡಗಿನವು. ಪ್ರತಿಯೊಂದೂ ಸ್ಪೈನಿನ ನಿಸರ್ಗದಲ್ಲಿ ಕಾಣುವ ಕೆಂಪು, ಹಳದಿ, ಹಸುರುಗಳ ಚೇತನವನ್ನು ಸೂಸುತ್ತವೆ. ಈ ಪ್ರದರ್ಶನದ ಹತ್ತೆಂಟು ದೃಶ್ಯಗಳಲ್ಲಿ ಅವರು ಹತ್ತೆಂಟು ಬಾರಿ ಉಡುಗೆ ಬದಲಿಸಿ ಬಂದರು. ಪ್ರತಿಯೊಂದೂ ದೇಶೀಯವಾದ ಆಕೃತಿ,

ಚಿತ್ರಕೆಲಸ, ವರ್ಣಗಳಿಂದ ಕೂಡಿದ್ದು ನಾಡಿನ ಬೆಡಗು ತೋರಿಸುತ್ತಿತ್ತು.

ನಾನು ಕಂಡ ಆರೆಂಟು ನೃತ್ಯ ದೃಶ್ಯಗಳನ್ನು ಇಲ್ಲಿ ಒಂದೊಂದಾಗಿ ಬಣ್ಣಿಸುವುದು ಸಾಧ್ಯವಿಲ್ಲ. ನೃತ್ಯದ ಒಟ್ಟು ಪರಿಣಾಮವನ್ನಷ್ಟೇ ಇಲ್ಲಿ ಹೇಳಬಲ್ಲೆ. ಅವರ ನೃತ್ಯ ವಿನ್ಯಾಸಗಳಾಗಲೀ, ಅಂಗ ಭಂಗಿಗಳಾಗಲೀ, ಪದ ಗತಿಗಳಾಗಲೀ ಚೇತನ ಪೂರ್ಣವಾದುವು. ತಾಲ ತರಂಗಗಳನ್ನು ನೆಲವನ್ನು ತುಳಿದು ತೋರಿಸುತ್ತಾರೆ. ಅವುಗಳ ವೇಗ ಹೆಚ್ಚು; ಗತಿ ಸ್ಪಷ್ಟ. ವಿಶೇಷವಾದ ಅಭ್ಯಾಸಬಲದಿಂದ ಅವು ಬರತಕ್ಕವು. ಕೈಗಳಲ್ಲಿ ಒಂದು ಬಗೆಯ ಚಿಟಿಕೆ ಹಿಡಿಯುತ್ತಾರೆ. ಕಾಲು ಎಷ್ಟು ತೀವ್ರವಾಗಿ ನಲಿಯುತ್ತದೋ, ಅಷ್ಟೇ ತೀವ್ರ ಗತಿಯಿಂದ ಕೈಯ ಚಿಟಿಕೆಗಳು ಸದ್ದು ಮಾಡುತ್ತವೆ. ನೃತ್ಯಗಳಲ್ಲಿ ಗಂಡಸರು, ಹೆಂಗಸರು ಗುಂಪಾಗಿ, ಒಂಟಿಯಾಗಿ, ಜತೆ ಜತೆಯಿಂದ ಬಂದು ಕುಣಿದು ಹೋಗುವಾಗ, ರಂಗ ಚಲನೆಯಲ್ಲಿ ತೋರಿಸುವ ರೂಪ ಪ್ರತಿರೂಪಗಳಲ್ಲಿಯೂ ವಿಶೇಷ ವೈವಿಧ್ಯತೆ ಇದೆ; ಅರ್ಥಪೂರ್ಣತೆ ಇದೆ. ಅವೆಲ್ಲ ಪಾಂಡಿತ್ಯ ಪೂರ್ಣವಾದ ಕುಣಿತಗಳು.

ಪ್ರತಿಯೊಂದು ನೃತ್ಯವಸ್ತುವೂ ಶೃಂಗಾರಕ್ಕೆ, ಒಲುಮೆಗೆ ಸಂಬಂಧಿಸಿದುದು. ಗಂಡು ಹೆಣ್ಣನ್ನು ಒಲಿಯುತ್ತದೆ; ಹೆಣ್ಣು ಗಂಡನ್ನು ಒಲಿಸಲು ಪ್ರಯತ್ನಿಸುತ್ತದೆ. ಒಲಿಸುವಾಗ ಪತಂಗದ ಬೆಡಗನ್ನು ತಾಳುತ್ತದೆ; ಭ್ರಮರದ ಕಂಪನ ತೋರಿಸುತ್ತದೆ; ನವಿಲಿನ ಒನಪು ಒಯ್ಯಾರಗಳನ್ನೆಲ್ಲ ಚೆಲ್ಲುತ್ತದೆ. ಸಾಮಾನ್ಯ ಪ್ರೇಮವು ಉದ್ವೇಗಭರಿತವಾದ ಶೃಂಗಾರವಾಗುತ್ತದೆ. ಆಸೆ ಕೈಗೂಡಿದರೆ ಮತ್ತ ನೃತ್ಯದಲ್ಲಿ ಪರಿಣಮಿಸುತ್ತದೆ. ಪ್ರಣಯ ತಿರಸ್ಕೃತವಾದರೆ-ಇನ್ನೊಂದೇ ಚಿತ್ರ-ಮನಸ್ಸಿಗೆ ಸಿಡಿಲು ಬಡಿದಂತಾಗುತ್ತದೆ. ನಿರಾಶೆ ಶೋಕಗಳುಂಟಾಗುತ್ತವೆ. ಹೃದಯದಲ್ಲಿ ದುಃಖವೈಪರೀತ್ಯದ ಕೋಲಾಹಲ ಹುಟ್ಟುತ್ತದೆ. ಅಷ್ಟಕ್ಕೇ ಇದು ನಿಲ್ಲುವುದಿಲ್ಲ. ನಿರಾಶೆಯಿಂದ ಹುಚ್ಚುಗೊಂಡು ಕೆರಳುವುದುಂಟು. ಈ ನಿರಾಶೆ ಸೇಡಿನ ಮುಖ ತಾಳುವುದುಂಟು. ಆಗಲೂ ಭಾವನೆಯ ಅತಿರೇಕವನ್ನೇ ಕಾಣುತ್ತೇವೆ. ಸಿಟ್ಟು ರೌದ್ರ ರೂಪ ತಾಳುತ್ತದೆ. ಮನಸ್ಸು ಉನ್ಮತ್ತ ಭ್ರಮೆಯಲ್ಲಿ ತೇಲುತ್ತದೆ. ಕುಣಿತವು ಪ್ರಳಯ ತಾಂಡವವಾಗುತ್ತದೆ.

ರಂಗಮಂಟಪದಲ್ಲಿ ಮುಖ್ಯ ನರ್ತಕಿ ಅಮಾಯಾ ಬರಲಿ, ಅವಳ ಸರಿಸಾಟಿ ತಂಗಿಯರಾದ ನರ್ತಕಿಯರಿರಲಿ, ಇತರ ಯಾರೇ ಇರಲಿ-ಯಾರೊ

ಬ್ಬರ ಕುಣಿತವೂ ಭಾವವನ್ನು ಬಿಟ್ಟ ಜಡ ನೃತ್ಯಗಳಾಗಿಲ್ಲ. ಉದ್ವೇಗಭರಿತ ಮನಸ್ಸಿಗೂ, ಮೈಯ ವಿನ್ಯಾಸಕ್ಕೂ, ಬೀಸುವ ಶಾಲಿಗೂ, ಬೆರಳುಗಳಲ್ಲಿ ಮಿಡಿಯುತ್ತಿರುವ ಚಿಟಿಕೆಗಳ ಧ್ವನಿಗೂ–ಒಂದೇ ಜೀವತಂತು ಇದ್ದಂತೆ ಕಾಣಿಸುತ್ತದೆ. ರಂಗ ಮಂಟಪಕ್ಕೆ ಬಂದರೆ ಕಾರ್ಮೆನ್ ಅಮಾಯಾ ಸೌಂದರ್ಯದಲ್ಲೂ, ಶಕ್ತಿಯಲ್ಲೂ, ಶೃಂಗಾರ ಮೊದಲಾದ ನವರಸಗಳಲ್ಲೂ ವಿಚಿತ್ರವಾಗಿ ತೇಲಬಲ್ಲ ಒಬ್ಬಳು ಕಲಾವಿದೆ. ಯುರೋಪಿನಲ್ಲಿ ನಾಲ್ಕೆಂಟು ವಿಧಾನದ ನೃತ್ಯಗಳನ್ನು ಕಂಡಿದ್ದೆನಾದರೂ ಭಾವ ಪ್ರದರ್ಶನದಲ್ಲಿ ಅವಳ ಗುಂಪನ್ನು ಬಿಟ್ಟರಿಲ್ಲ ಅನಿಸುತ್ತದೆ. ಅಮಾಯಾಳ ಕೃಶ ಶರೀರದಲ್ಲಿ ಇಂದು ಯೌವನ ಕಾಣಿಸುತ್ತಲಿಲ್ಲ. ಬಾಡಿದ ಮೈ, ಜಗ್ಗಿದ ಕಪೋಲಗಳು; ಈಕೆ ಏನು ಕುಣಿದಾಳು–ಎನಿಸುತ್ತದೆ ಆ ಜೀವ ಕಂಡರೆ. ಆದರೆ ರಂಗಕ್ಕೆ ಇಳಿದಾಗ ನೃತ್ಯದ ಆವೇಶ ಬುಡದಿಂದ ಕೊನೆಯ ತನಕ ಹೊರಸೂಸುತ್ತದೆ. ಆದರೆ ಆ ನೃತ್ಯಗಳನ್ನು ಕಂಡು ಮೆಚ್ಚಿದ ಪೇರಿಸ್ ರಸಿಕರ ಮನೋಭಾವ ತಿಳಿಯುವುದು ನನಗೆ ಕಷ್ಟವಾಯಿತು. ಒಂದು ದೃಶ್ಯದ ಕೊನೆಗೆ ಕರತಾಡನ ಮಾಡುತ್ತಾರೆ. ಆಗ ಅವಳು ಇನ್ನೊಮ್ಮೆ ಬಂದು ನಿಲ್ಲಬೇಕು. ಇನ್ನೊಮ್ಮೆ ಕರತಾಡನವಾಯಿತೆಂದರೆ ಸಂಗೀತದ ನಿರ್ದೇಶಕನೋ ಆಕೆಯ ಸಹಭಾಗಿಯೋ ಬಂದು ನಿಲ್ಲಬೇಕಾಗುತ್ತದೆ. ತಿರುಗಿ ಕರತಾಡನವಾಗುತ್ತದೆ. ಉಳಿದ ನರ್ತಕರು ಬಂದು ಸೇರುತ್ತಾರೆ. ಕೆಲವು ಬಾರಿ ಪ್ರೇಕ್ಷಕರ ಮೆಚ್ಚುಗೆಗಾಗಿ ಇನ್ನೊಮ್ಮೆ ಕುಣಿದುದನ್ನೇ ಕುಣಿದು ತೋರಿಸಬೇಕು. ಆಕೆ ಮೊದಮೊದಲು ಹೆಮ್ಮೆಯಿಂದ, ನಗುನಗುತ್ತ ಬಂದು ಪ್ರೇಕ್ಷಕರಿಗೆ ವಂದನೆ ಸಲ್ಲಿಸುತ್ತಿದ್ದಳು. ಆದರೆ ನರ್ತನದ ಶ್ರಮ ಸ್ವಲ್ಪವಲ್ಲ. ಹಾಗಾಗಿ ತೋಳುಗಳನ್ನೊಡ್ಡಿ 'ಸಾಕು' ಎಂದು ಅಂಗಲಾಚುತ್ತಾಳೆ. ಆದರೆ ಜನ ಮತ್ತು ಮತ್ತೂ ಕರತಾಡನ ಮಾಡಿ, ಹತ್ತು ಹದಿನೈದು ಬಾರಿ ಅವಳನ್ನು ತೆರೆಯ ಮುಂದೆ ಬರುವಂತೆ ಮಾಡುವುದನ್ನು ಕಂಡರೆ ಇದು ಮೆಚ್ಚುಗೆಯಲ್ಲ–ಕ್ರೌರ್ಯ ಎನಿಸುತ್ತದೆ. ಆಕೆ ತೋರಿಸುವ ನೃತ್ಯವಸ್ತು ಸುಖಾಂತದ್ದಾಗಲೀ, ದುಃಖಾಂತದ್ದಾಗಲೀ, ಏನಿದ್ದರೂ, ಪ್ರತಿಬಾರಿಯೂ ಈ ಬಗೆಯಲ್ಲಿ ಕೊಡುವ ಪ್ರಶಂಸೆ ಹಿಂಸೆಯೆಂದೇ ನನಗನಿಸುತ್ತದೆ. ದುಃಖಾಂತ್ಯದಲ್ಲಿಯೂ ಚಪ್ಪಾಳೆ ಹೊಡೆದು ನಗುವ ಜನವನ್ನು ಕಂಡಾಗ–ಇವರು ದುಃಖಭಾವದಲ್ಲಿ ಮುಳುಗಿದಂತಿಲ್ಲ. ಬರಿಯ ಸುಂದರ ನರ್ತಕಿಯೊಬ್ಬಳನ್ನು ಮೆಚ್ಚಿದಂತಿದೆ–ಎನ್ನುವ ಭಾವನೆಯಾಗುತ್ತದೆ. ಪೇರಿಸ್‌ನಂಥ

ಸಂಸ್ಕೃತ ನಗರದಲ್ಲಿ ಇಂಥ ಅಸಂಸ್ಕೃತ ಜನರೂ ಸಾಕಷ್ಟು ಇದ್ದಾರೆ. ತಾವು ಬಲ್ಲವರು, ರಸಿಕರು–ಎಂಬ ಸ್ವಪ್ರತಿಷ್ಠೆಯು ಅವರಿಗೆ ಮುಖ್ಯವೇ ಹೊರತು ರಸಾಸ್ವಾದನೆಯಾಗಲಿ ಅದರಿಂದ ದೊರೆಯುವ ಆತ್ಮಾನಂದವಾಗಲಿ ಮುಖ್ಯ ವಾಗಿಲ್ಲ ಎಂಬುದು ಸ್ಪಷ್ಟ.

ನನಗೆ ಸ್ಪೈನಿಗೆ ವೀಸಾ ದೊರಕಿದ್ದರೂ ಅಲ್ಲಿಗೆ ಹೋಗುವುದಾಗಲಿಲ್ಲ. ಅಲ್ಲಿನ ಸಂಸ್ಕೃತಿಯಲ್ಲಿ ವಿಲಾಸ ವಿಶೇಷ ತುಂಬಿದೆ ಎಂದು ಕೇಳಿದವನಾ ದರೂ ಕಂಡಿರಲಿಲ್ಲ. ಆದರೆ ಕಾರ್ಮನ್ ಅಮಾಯಾಳ ಈ ಪ್ರದರ್ಶನವನ್ನು ಕಂಡಾಗ ಸ್ಪೈನಿನ ಸೊಗಸು ಸೌಂದರ್ಯಗಳೆಲ್ಲ, ಜೀವ ಭಾವಗಳೆಲ್ಲ ನನ್ನ ಮುಂದೆ ಕುಣಿದಾಡಿದಂತೆ ಕಂಡಿತು.

ನಾನು ನೋಡಬೇಕೆಂದು ಉದ್ದೇಶಿಸಿದ ಇನ್ನೊಂದು ಪ್ರದರ್ಶನ "ಫಾಲಿಸ್ ಬರ್ಜರ್". ಆ ದಿನ ಮಧ್ಯಾಹ್ನ, ಮಿತ್ರರಾದ ಜಿರಾಡ್ ಈಗಲ್ ಟನ್‌ರವರನ್ನು ನೋಡುವುದಕ್ಕಾಗಿ ಯುನೆಸ್ಕೋ ಕಚೇರಿಗೆ ಹೋಗಿದ್ದೆ. ಅವರು ಮಾತನಾಡುತ್ತ "ಇವತ್ತು ನ್ಯೂಯಾರ್ಕ್ ಸಿಟಿ ಬಾಲೆಯ ಕೊನೆಯ ಪ್ರದರ್ಶನವಿದೆ; ಟಿಕೆಟ್ ದೊರೆಯುವುದು ಹೇಗೋ. ಬಹು ಚೆನ್ನಾಗಿದೆಯಂತೆ. ಟಿಕೆಟ್ ದೊರೆತರೆ ಹೋಗೋಣ" ಎಂದರು. ಫೋನಿನ ಮೂಲಕ ಟಿಕೆಟುಗಳನ್ನು ದೊರಕಿಸುವ ಪ್ರಯತ್ನಮಾಡಿದರು. ಟಿಕೆಟುಗಳೂ ದೊರೆತವು. ಆ ಸಂಜೆ ಅವರು, ನಾನು, ಅವರ ಮಿತ್ರರಾದ ಜಾನ್ ಬವರ್ಸರ ವರು, ಮಿಸೆಸ್ ಬವರ್ಸರವರು ಈ ಪ್ರದರ್ಶನಕ್ಕೆ ಹೋಗುವ ಏರ್ಪಾಟಾ ಯಿತು. ನನಗೆ ಜಾನ್ ಬವರ್ಸ್‌ರವರ ಪೂರ್ವ ಪರಿಚಯವಾಗಿತ್ತು. ಅವರು ಈಗಲ್‌ಟನ್‌ರವರ ಜತೆಯಲ್ಲಿ ವಿದ್ಯಾಪ್ರಸಾರದ ಕೆಲಸ ಮಾಡುತ್ತಿದ್ದರು. ನಮ್ಮ ದೇಶಕ್ಕೂ ಬಂದವರು. ತುಂಬಾ ಕಲಾಭಿರುಚಿ ಉಳ್ಳವರು. ನಾನು "ಫಾಲಿಸ್ ಬರ್ಜರ್"ಗೆ ಕೊಂಡಿದ್ದ ಟಿಕೇಟನ್ನು ಅಲ್ಲೇ ಯಾರಿಗೋ ಕೊಟ್ಟೆ. ಈ ಗೆಳೆಯರ ಜೊತೆಯಲ್ಲಿ ಮಾತನಾಡುತ್ತ ಅಲೆದಾಟಕ್ಕೆ ಹೊರಟೆ. ಸಂಜೆ ಒಂದು ಉಪಹಾರ ಗೃಹದಲ್ಲಿ ನಾವೆಲ್ಲರೂ ಊಟ ಮುಗಿಸಿದೆವು. ಅನಂತರ ಕೂಡಿಯೇ ಶಾಂಪ್ಸಿ ಬೀದಿಯಲ್ಲಿರುವ ಒಂದು ನಾಟ್ಯ ಶಾಲೆಗೆ ಹೋದೆವು. ಲಂಡನ್‌ನಲ್ಲಿ ಸೇಡ್ಲರ್ ವೆಲ್ಸ್ ನಿರ್ದೇಶಿಸಿದ ಬಾಲೆ ನೋಡಿದ ನನಗೆ ಅಮೇರಿಕದ ನೃತ್ಯನಾಟಕವನ್ನು ನೋಡುವ ಕುತೂಹಲವಾಗಿತ್ತು. ಈ ನಾಟಕಗಳನ್ನು ನಿರ್ದೇಶಿಸಿದಾತ ಜಾರ್ಜ ಬೆಲೆಂಶಿನೆ ಎಂಬವನು. ನಾವು

ಹೋದ ನಾಟಕ ಶಾಲೆ ಬಹು ದೊಡ್ಡದು. ಸುಮಾರು ಎರಡು ಸಾವಿರಕ್ಕಿಂತ ಹೆಚ್ಚಿಗೆ ಜನ ಕುಳಿತಿದ್ದರು. ಒಂದು ಪ್ರದರ್ಶನದಿಂದ ಅವರಿಗೆ ಅರ್ಧಲಕ್ಷ ರೂಪಾಯಿಗಳ ವರಮಾನವಾದರೂ ಉಂಟಾಗಿರಬೇಕು.

ಈ ಪ್ರದರ್ಶನದಲ್ಲಿ ನಾಲ್ಕು ಮುಖ್ಯ ಕಥಾವಸ್ತುಗಳಿದ್ದವು. ಇವನ್ನೆಲ್ಲ ಬೇರೆ ಬೇರೆ ಉಪ ನಿರ್ದೇಶಕರೂ ಸಂಗೀತಗಾರರೂ ಕೂಡಿ ನಿರ್ಮಿಸಿದ್ದರು. ಮೊದಲನೆಯದು "ನಾಲ್ಕು ಮನೋಭಾವಗಳು" (Four Temperaments)ಎಂಬುದು. ಈ ಮನೋಭಾವಗಳಾವುವೆಂದರೆ-ಶೋಕ, ಭ್ರಾಂತಿ, ಆಶಾದಾಯಕತೆ, ಜಡತೆ—ಎಂಬುವು. ಇದರ ಮುಂದಿನ ಕಾರ್ಯಕ್ರಮಗಳಂತೆ ಇವನ್ನು ಅರ್ಥಪೂರ್ಣವಾದ ಸಂಗೀತದ ಹಿನ್ನೆಲೆಯೊಡನೆ ಅನೇಕ ತರುಣ ತರುಣಿಯರು ಸೇರಿ ಕುಣಿದು ಚಿತ್ರಿಸಿದರು. ನಾಲ್ಕು ಬೇರೆ ಬೇರೆ ಗುಂಪುಗಳು ಬಂದು ಈ ಭಾವಗಳನ್ನು ಕುಣಿತದಿಂದಲೂ ಅಂಗವಿನ್ಯಾಸದಿಂದಲೂ ವಿಸ್ತರಿಸಿ ತೋರಿಸಿದರು. ಲಂಡನಿನಲ್ಲಿ ಕಂಡ ಬಾಲೆಗಳಿಗಿಂತ ಇವುಗಳ ಚಲನವಲನಗಳು ಚೆನ್ನಾಗಿದ್ದವು. ನರ್ತಕರ ಗುಂಪಿನಲ್ಲಿರುವ ಕೇಂದ್ರ ಪಾತ್ರಗಳು ಭಾವಪರವಶರಾಗಿಯೆ ಕೆಲಸಮಾಡುತ್ತಿದ್ದರು. ಉಳಿದವರ ಚಲನವಲನಗಳೇನೋ ಸುಂದರ ವ್ಯಾಯಾಮದಂತೆ ಕಾಣಿಸಿದರೂ, ಕೇಂದ್ರವ್ಯಕ್ತಿಗಳಿಂದಲೇ ಭಾವ ಪ್ರದರ್ಶನವಾಗುತ್ತಿತ್ತು. ಆದರೆ ನಿರೂಪಿಸಿದ ನಾಲ್ಕು ಭಾವಗಳಲ್ಲಿ–ಜಡತೆ, ಶೋಕೋನ್ಮಾದ ಅದರಿಂದ ಹುಟ್ಟಿದ ತೀವ್ರ ಅಸಂತೃಪ್ತಿಗಳು ಭಾವಾತಿರೇಕವಾಗಿದ್ದರೂ ನರ್ತನದ ಗತಿಯೆಲ್ಲ ಹೆಚ್ಚು ಕಡಿಮೆ ಒಂದೇ ತೆರನ ವೇಗದಿಂದ ಸಾಗುವಂತೆ ನನಗೆ ಕಾಣಿಸಿತು. ಜಡತೆ, ಉನ್ಮತ್ತತೆಗಳೆರಡನ್ನೂ ಏಕಗತಿಯಲ್ಲಿ ಸೂಚಿಸುವುದು ಸಮವೆನಿಸಲಿಲ್ಲ.

ಅನಂತರದ ದೃಶ್ಯ "ಪಂಜರ" ಎಂಬುದು. ಅದರಲ್ಲಿ–ಸ್ತ್ರೀಯೊಬ್ಬಳು ಹಾಸಿದ ಬಲೆಯೊಳಗೆ ಬಂದಿಯಾಗಿ ಬಿದ್ದಿದ್ದಾಳೆ. ಅದಕ್ಕೆ ಪುರುಷನೇ ಕಾರಣ. ಇನ್ನೊಬ್ಬ ಪುರುಷ ಬಂದು ಈ ಬಂಧನ ಬಿಡಿಸುತ್ತಾನೆ. ಮುಂದೆ ಆ ಸ್ತ್ರೀ ತನ್ನ ಸೇಡನ್ನು ಪುರುಷನ ಮೇಲೆ ತೀರಿಸುತ್ತಾಳೆ. ಈ ಕಥಾವಸ್ತುವನ್ನು ಚಿತ್ರಿಸಿದ ಬಗೆ ಉಜ್ವಲವಾಗಿತ್ತು. ಬಂಧಿತ ಸ್ತ್ರೀಯ ನಿರಾಶೆ, ಬಂಧ ಮುಕ್ತವಾದ ಮೇಲೆ ಪ್ರತೀಕಾರದ ಸ್ವರೂಪವನ್ನು ತೋರಿಸುವ ನೃತ್ಯಗಳ ರೀತಿ ಬಹು ಚೆನ್ನಾಗಿದ್ದುವು. ಇದು ಮೊದಲಿನಂತೆ ಹಲವಾರು ನರ್ತಕ ನರ್ತಕಿಯರಿಂದ ಕೂಡಿದ ಸಾಮೂಹಿಕ ನೃತ್ಯವಾಗಿತ್ತು.

ಮೂರನೆಯ ಚಿತ್ರ—ಫ್ರಾನ್ಸಿನ ಸುಲಭ ಶೃಂಗಾರ, ಒಲುಮೆಗಳ ಒಂದು ಅಣಕವಾಡ. ಇದು ನೃತ್ಯ ಮುಖದಿಂದ ಅಪಹಾಸವನ್ನು ತೋರಿಸುವ ಒಂದು ಯಶಸ್ವಿಯಾದ ಚಿತ್ರವಾಗಿತ್ತು.

ನಾಲ್ಕನೆಯ ಚಿತ್ರಕ್ಕೆ "ಸಿಂಫನಿ ಏನ್ ದೋ" ಎಂದು ನಾಮಕರಣ ಮಾಡಿದ್ದರು. ಇದು ಅವರ ಮಾರ್ಗ ಪದ್ಧತಿಯ ಬಾಲೆ. ಈ ನೃತ್ಯದಲ್ಲಿ ಸುಮಾರು ಅರ್ವತ್ತಕ್ಕಿಂತ ಹೆಚ್ಚು ಮಂದಿ, ಗುಂಪು ಗುಂಪಾಗಿ ಬಂದು ಭಾಗ ವಹಿಸಿದರು. ಇದಕ್ಕೆ ಕಥಾವಿಷಯ ಮುಖ್ಯವಲ್ಲ. ಪರಸ್ಪರ ಹೊಂದಿಕೆಯುಳ್ಳ ನೃತ್ಯಗತಿ ಯಾವುದಾದರೊಂದು ಭಾವದ ವಿವಿಧ ಸ್ವರೂಪಗಳನ್ನು ಚಿತ್ರಿಸುವುದು ಮುಖ್ಯ. ನೂರಾರು ಜನರ ಅಂಗವಿನ್ಯಾಸಗಳಲ್ಲಿ,ಚಲನಗಳಲ್ಲಿ, ನೆಗೆತ ಜಿಗಿತಗಳಲ್ಲಿ, ಕೂಡುವಿಕೆಯಲ್ಲಿ ವಿಶೇಷವಾದ ಮೇಳೈಸುವಿಕೆ ಇರಬೇಕಾಗುತ್ತದೆ. ಒಂದು ಘಂಟೆಯ ಕಾಲ ನಡೆದ ಈ ನೃತ್ಯದಲ್ಲಿ—ಪ್ರಥಮದಲ್ಲಿ ಚಿತ್ರಿಸಿದ ಭಾವ ಉಲ್ಲಾಸ ಮಿಶ್ರಿತ ಉತ್ಸಾಹ. ಸುಂದರವಾದ ಪತಂಗಗಳಂತೆ ಅನೇಕರು ಬಂದು ನಕ್ಕು ನಲಿದು ಹೋದರು. ಅನಂತರ ನೃತ್ಯಗತಿಯು ಮೆಲುವಾಗುತ್ತದೆ. ಲಲಿತವಾದ, ಆದರೂ ಸಾವಕಾಶದ ಚಲನಗಳಿಂದ ಕೂಡಿರುತ್ತದೆ. ಅಲ್ಲಿಂದ ನೃತ್ಯ ಭಾವವು ಮುಂದಿನ ಹೆಜ್ಜೆಗೆ ಸಾಗುತ್ತದೆ. ಉತ್ಸಾಹ ಹೆಚ್ಚುತ್ತದೆ. ಉಲ್ಲಾಸ ಹೊರಹೊಮ್ಮುತ್ತದೆ. ನೃತ್ಯವೂ ಲಘುವಾಗುತ್ತದೆ. ಮೇರೆವಿೂರಿದ ಚೇತನ ಆಹ್ಲಾದಗಳು ಕಾಣಿಸತೊಡಗುತ್ತವೆ. ನಾಲ್ಕನೆಯ ಅಂತರದಲ್ಲಿ ಈ ಭಾವನೆ ಇನ್ನಷ್ಟು ಬಿರುಸುಗೊಳ್ಳುತ್ತದೆ. ನೃತ್ಯಗತಿ, ಚಲನ ವಲನ, ಉನ್ಮತ್ತ ಆನಂದದ ಸ್ವರೂಪವನ್ನು ತಾಳುತ್ತದೆ. ಈ ನೃತ್ಯಭಾವವು ಕೊನೆಗೊಳ್ಳುವಾಗ ರಂಗಮಂಟಪದಲ್ಲಿ ಸುಮಾರು ಅರುವತ್ತು ಎಪ್ಪತ್ತು ಮಂದಿಯಷ್ಟು ನರ್ತಕರು ಕೂಡಿ ಕುಣಿಯುವ ನೋಟ ಅದ್ಭುತವಾಗಿ ಕಾಣಿಸುತ್ತದೆ. ನೃತ್ಯದ ಹಿಮ್ಮೇಳವೂ ಅಷ್ಟೊಂದು ಪರಿಣಾಮಕಾರಿಯಾಗಿ ಕೇಳಿಸುತ್ತದೆ. ಒಟ್ಟಿಂದ ಹೇಳುವಲ್ಲಿ ಈ ನೃತ್ಯ ಮಂಡಲವು, ನಾನು ಇಂಗ್ಲೆಂಡಿನಲ್ಲಿ ಕಂಡ ಬಾಲೆ ನರ್ತಕರ ಗುಂಪಿಗಿಂತ ಕಲಾಪೂರ್ಣವಾಗಿತ್ತು.

ಕೊನೆಗೂ ಪೇರಿಸಿಗೆ ಬಂದು, ಯಾವೊಂದೂ ನಾಟಕ ನೃತ್ಯಗಳನ್ನು ಕಾಣದೆ ಹೋಗುತ್ತೇನೆಯೋ ಎಂಬ ನನ್ನ ನಿರಾಶೆಯು ಈ ಎರಡು ಪ್ರದರ್ಶನಗಳಿಂದ ತೊಲಗಿದಂತಾಯಿತು. ನ್ಯೂಯಾರ್ಕ್ ಬಾಲೆಯನ್ನು ನೋಡಿಕೊಂಡು ನಾನು ಮನೆಗೆ ಮರಳುವಾಗ ರಾತ್ರಿ ಒಂದು ಘಂಟೆಯ ಮೇಲಾ

ಗಿತ್ತು. ನನ್ನ ಹೋಟೇಲಿನ ಕದ ಮುಚ್ಚಿತ್ತು. ಅನುಮಾನಿಸಿ ಹೊರಗಿನ ಗುಂಡಿಯನ್ನು ಒತ್ತಿದೆ; ಬಾಗಿಲು ತನ್ನಂತೆಯೇ ತೆರೆಯಿತು. ಯಾರೊಬ್ಬರಿಗೂ ತೊಂದರೆಕೊಡದೆ, ನಾನು ನನ್ನ ಕೊಟಡಿಯನ್ನು ಸೇರಿ ಮಲಗಿದೆ. ಮರುದಿನವೇ ಅವಸರದಿಂದ ಎದ್ದು ಸ್ವಿಜರ್‌ಲೆಂಡಿಗೆ ಹೊರಡಬೇಕಿತ್ತು. ತುಂಬ ದಣಿವಾಗಿತ್ತು. ಸುಖ ನಿದ್ರೆಯೂ ಬಂದಿತು.

# ೧೮. ಯುರೋಪಿನ ನಂದನವನದಲ್ಲಿ

ಜೂನ್ ೨೪ನೆಯ ತಾರೀಕಿನ ಬೆಳಗ್ಗೆ ಅವಸರ ಅವಸರವಾಗಿ ನನ್ನ ಸಾಮಾನುಗಳನ್ನು ಪೆಟ್ಟಿಗೆಯಲ್ಲಿ ತುಂಬಿಸಿದೆ. ಟೇಕ್ಸಿಯೊಂದನ್ನು ಕರೆದು ಕೊಂಡು ಬಂದೆ. ಹೋಟೆಲಿನವರಿಗೆ ಹಿಂದಣ ದಿವಸವೇ ಅವರ ಬಿಲ್ ಕೊಟ್ಟು, 'ಹೊರಡುತ್ತೇನೆ' ಎಂದಿದ್ದೆ. ಹೀಗಾಗಿ ಅಲ್ಲಿಂದ ಹೊರಟೆ. ಬೆಳಗಿನ ಆರೂವರೆ ಘಂಟೆಯಾಗಿತ್ತು. ಪೇರಿಸಿನ ಹಾದಿ ಬೀದಿಗಳೆಲ್ಲ ತೂಕಡಿಸುತ್ತಿದ್ದುವು. ಅನೇಕ ಬೀದಿಗಳಲ್ಲಿ ಹಣ್ಣು ಹಂಪಲು, ತರಕಾರಿಗಳನ್ನು ತರುವ ನೂರಾರು ಮೋಟರು ವಾಹನಗಳು ಅವುಗಳನ್ನೆಲ್ಲ ಹಲವು ಹೊಟೇಲುಗಳ ಮುಂದೆ ರಾಶಿಹಾಕುತಿದ್ದವು. ನಾನು ರೈಲ್ವೇ ನಿಲ್ದಾಣವನ್ನು ಸೇರಿ ಬಾಸೆಲ್ ನಗರದ ಮೂಲಕವಾಗಿ ಸ್ವಿಜರ್‌ಲೇಂಡಿನ ರಾಜಧಾನಿಯಾದ ಜೂರಿಕ್ಕಿಗೆ ಹೋಗುವ ಬಂಡಿಯಲ್ಲಿ ಕುಳಿತೆ. ನನ್ನ ಕೊಟಡಿಯಲ್ಲಿ ಬರಿಯ ನಾಲ್ಕೈದು ಮಂದಿ ಫ್ರೆಂಚ್ ಪ್ರವಾಸಿಗಳಿದ್ದರು. ಹಾಗಿದ್ದ ಮೇಲೆ ತೀರಿತು—ಮಾತನಾಡುವ ತಂಟೆ ಇರಲಿಲ್ಲ. ಈ ದಾರಿಯ ಅರ್ಧದಷ್ಟು ದೂರ ನಾನು ಮೊದಲು ಪಯಣಮಾಡಿದ ದಾರಿಯಾಗಿತ್ತು—ಎಂದರೆ ಲಿಯೋನ್ ಎಂಬ ಔದ್ಯೋಗಿಕ ನಗರದ ತನಕ. ಅನಂತರ ಬಾಸೆಲ್‌ಗೆ ಹೊರಡುವ ದಾರಿ ಪೂರ್ವಾಭಿಮುಖವಾಗಿ ಹೋಗುತ್ತದೆ. ಅಲ್ಲಿಯ ತನಕವೂ ತಮ್ಮ ದಾರಿಗೆ ತಗಲಿಕೊಂಡ ಕಾಲುವೆಯೊಂದಿತ್ತು. ಹಿಂದೆ ಕಂಡಂಥ ಗುಡ್ಡಗಾಡುಗಳು, ಹಸುರು ಹೊಲಗಳು ಅಡಿಗಡಿಗೆ ಎದುರಾಗುತಿದ್ದವು. ಬಾಸೆಲ್ ಸಮುದ್ರಮಟ್ಟಕ್ಕಿಂತ ಎರಡು ಸಾವಿರ ಅಡಿಗಳಷ್ಟು ಉನ್ನತವಾಗಿರಬಹುದೋ ಏನೋ. ಹೀಗಾಗಿ ಭೂಮಿ ಅಷ್ಟೊಂದು ಏರುತ್ತ ಸರಿಯುವುದು ನಮ್ಮ ಕಣ್ಣಿಗೆ ಕಾಣಿಸಲಿಲ್ಲ. ಹೊರಗಿನ ನೋಟ ಅಷ್ಟೊಂದು ವೈವಿಧ್ಯಪೂರ್ಣವಾಗಿಯೂ ಇರಲಿಲ್ಲ. ಅನಂತರ ಕಾಣುವ ನೋಟ ಮಾತ್ರ ಅಡಿಗಡಿಗೆ ನಮ್ಮ ಮನಸ್ಸನ್ನು ಸೆರೆಹಿಡಿಯುವ ದೃಶ್ಯಗಳಿಂದ ತುಂಬಿಕೊಂಡಿತ್ತು.

ನಮ್ಮ ಬಂಡಿ ಬಾಸೆಲ್ ರೈಲ್ವೇ ನಿಲ್ದಾಣದಲ್ಲಿ ಮಧ್ಯಾಹ್ನ ಮೂರು ಘಂಟೆಗೆ ಹೋಗಿ ನಿಂತಿತು. ನನಗೆ ಊಟ ಉಪಹಾರಗಳಾವುದೂ ಆಗಿರಲಿಲ್ಲ. ನಮ್ಮ ಬಂಡಿ ತಿರುಗಿ ಹೊರಡುವುದಕ್ಕೆ ಇನ್ನೂ ಒಂದು ಘಂಟೆ ಅವಕಾಶವಿತ್ತು. ಆ ನಿಲ್ದಾಣವೇ ಫ್ರಾನ್ಸ್ ಮತ್ತು ಸ್ವಿಜರ್‌ಲೇಂಡ್‌ಗಳ ಗಡಿ

ಯಾಗಿತ್ತು. ಅಲ್ಲಿ ಇಳಿದೆ. ಉಪಹಾರ ಮುಗಿಸಿದೆ. ನನ್ನಲ್ಲಿರುವ ಫ್ರಾಂಕ್ ನೋಟುಗಳನ್ನು ಕೊಟ್ಟು ಸ್ವಿಸ್‌ಫ್ರಾಂಕುಗಳಿಗೆ ಬದಲಾಯಿಸಿದೆ. ಅದಕ್ಕೆ ರೈಲ್ವೇನಿಲಾದ್ದಾಣದಲ್ಲೇ ವಿನಿಮಯದ ಏರ್ಪಾಟಿತ್ತು. ಆಚೀಚೆ ತಿರುಗಾಡಿ, ಒಂದು ತಾಸಿನ ಅವಧಿಯನ್ನು ಕಳೆದು, ತಿರುಗಿ ಬಂಡಿಯಲ್ಲಿ ಹೋಗಿ ಕುಳಿತೆ. ಬಂದಿದ್ದ ಬಂಡಿಯ ಉಗಿ ಎಂಜಿನನ್ನುಕಳಚಿ ಎಲೆಕ್ಟ್ರಿಕ್ ಎಂಜಿನನ್ನು ಜೋಡಿಸಿದರು. ಬಂಡಿ ಹೊರಟಿತು. ಅದು ನಗರಮಧ್ಯದಿಂದ ಹಾದು ಗುಡ್ಡಬೆಟ್ಟಗಳ ಮಗ್ಗುಲನ್ನು ಹಿಡಿದು ಸರಿಯತೊಡಗಿತು. ಇಲ್ಲಿಂದ ಎದುರಿನ ನೋಟ ಸಂಪೂರ್ಣವಾಗಿ ಬದಲಿಸುತ್ತದೆ. ನಮ್ಮ ರೈಲು ಬಹಳ ಎತ್ತರವನ್ನು ಏರುವುದಿಲ್ಲವಾದರೂ ಅದರ ದಾರಿಯ ಆಚೀಚಿನ ಪ್ರದೇಶಗಳು ಪರ್ವತಮಯವಾದುವು. ಎಲ್ಲೆಲ್ಲೂ ಹಸುರು ಹುಲ್ಲಿನಿಂದಲೂ ಪೈನ್ ಕಾಡುಗಳಿಂದಲೂ ಕಣ್ಣಿಗೆ ತಂಪಾಗಿ ಕಾಣಿಸುವ ಪರ್ವತಗಳಿವೆ. ಈ ಪರ್ವತಗಳ ಎಡೆಯ ಕಣಿವೆಗಳಲ್ಲಿ, ಅಲ್ಲಲ್ಲಿ ಎಂಬಂತೆ, ಸ್ವಿಸ್ ಜನಗಳ ವಸತಿಗಳಿವೆ. ಪಟ್ಟಣ ಎಲ್ಲಿ ತೊಡಗುತ್ತದೆ, ಹಳ್ಳಿ ಎಲ್ಲಿ ಕೊನೆಗೊಳ್ಳುತ್ತದೆ—ಎಂದು ಹೇಳುವುದು ಕಷ್ಟ. ಹಾಗೆಯೇ ಬೆಟ್ಟದ ಸೆರಗುಗಳಲ್ಲೂ ಜನವಸತಿಗಳಿವೆ. ಬಹು ಇಳಿಜಾರಾದ ಹಂಚಿನ ಮಾಡುಗಳುಳ್ಳ ಸ್ವಿಸ್ ಮನೆಗಳಿಗೆ ತಮ್ಮದೇ ಆದ ಒಂದು ಚೆಲುವಿದೆ. ಪ್ರತಿ ಮನೆಯ ಸುತ್ತಲೂ ಚೆಲುವಿನ ತೋಟಗಳಿವೆ. ತೋಟಗಳಲ್ಲಿ ಜೊಂಕೆ ಜೊಂಕೆಯಾಗಿ ಹೂದಳೆದಿರುವ ಗುಲಾಬಿ ಬೀಳಲುಗಳು. ನಮ್ಮ ಹಾದಿಯ ಬಹುದೂರದ ತನಕ, ಕೆಳಗಡೆ ಕಣಿವೆಯೊಂದರಲ್ಲಿ ಸೀನ್ ನದಿಯು ಹರಿದು ಹೋಗುವುದು ಕಾಣಿಸುತ್ತದೆ. ರೈಲುದಾರಿ ತನಗೆ ಅಡೆತಡೆಯಾದ ಬೆಟ್ಟಗಳ ನಡುವಣ ಸುರಂಗಗಳನ್ನು ಹಾದು ಪೂರ್ವಕ್ಕೆ ಧಾವಿಸುತ್ತದೆ. ದಾರಿ ಸಾಗಿದಂತೆ ಜನವಸತಿಗಳು ಹೆಚ್ಚಾಗುತ್ತವೆ. ಎಲ್ಲೆಲ್ಲೂ ಮನೆಮಠಗಳನ್ನು ಕಾಣ ತೊಡಗುತ್ತೇವೆ. ಹಲವಾರು ಕಾರ್ಖಾನೆಗಳನ್ನು ಕಾಣುತ್ತೇವೆ. ನಿಲ್ದಾಣಗಳಲ್ಲಿ ಶುಚಿಯೂ ಸುಂದರವೂ ಆದ ಬಟ್ಟೆಗಳನ್ನು ತೊಟ್ಟಿರುವ ಜನರು ಕಾಣಸಿಗುತ್ತಾರೆ. ಚೆಲುವು ತುಂಬಿದ ದೇಶವೊಂದರ ಕಲ್ಪನೆ ಉಂಟಾಗತೊಡಗುತ್ತದೆ. ಬರಿಯ ಎರಡು ತಾಸಿನ ಅವಧಿಯಲ್ಲಿ ನಮ್ಮಬಂಡಿ ಜೂರಿಕ್ ರೈಲ್ವೆ ನಿಲ್ದಾಣವನ್ನು ಹೋಗಿ ಸೇರಿಯೂ ಆಯಿತು. ಅಲ್ಲಿಂದ ಹೊರಗೆ ಬಂದು ಇನ್‌ಫರ್ಮೇಶನ್ ಆಫೀಸಿಗೆ ಹೋದೆ. ಹೊಟೆಲನ್ನು ಗೊತ್ತುಮಾಡಿಕೊಟ್ಟರು. ಜೂರಿಕ್ ನಗರದ ನಕ್ಷೆಕೊಟ್ಟರು. ಕೈತುಂಬ,



ಬ್ರಿಟಿಷ್ ಪಾರ್ಲಿಮೆಂಟ್ ಮಂದಿರ



ಫಿನ್ಸೆ ನಿಲ್ದಾಣದಿಂದ ಕಾಣುವ ಪರ್ವತಗಳು. (ನಾರ್ವೆ)



ಸ್ಟ್ಯಾಕ್‌ಹಾಮ್ ನಗರದ ಒಂದು ನೋಟ.



ಪಾರ್ಲಿಮೆಂಟ್ ಮಂದಿರ—ಕೋಪನ್ ಹೇಗನ್



ಪಿಯೋಡಿಯ ಶಿಲ್ಪ--ಪೊಲಿಕ್ಸೀನಾ ಅಪಹರಣ-(ಫ್ಲಾರೆನ್ಸ್)



ಯುಂಗ್ ಫ್ರೌ ಶಿಖರದಿಂದ ಹಿಮನದಿಯೊಂದರ ನೋಟ



ಪ್ರಾಚೀನ ಈಜಿಪ್ಟಿನ ಶಿಲ್ಪ (ಬ್ರಿಟಿಷ್ ಮ್ಯೂಸಿಯುಮುನಲ್ಲಿ)



ಸೈಂಟ್ ಪೀಟರ್ಸ್ ಬೆಸಿಲಿಕಾ-(ರೋಮ್.)

ಸ್ವಿಸ್ ವಿಹಾರ ಸ್ಥಳಗಳ ಚಿತ್ರಪುಸ್ತಕಗಳನ್ನು ಕೊಟ್ಟರು. ಈ ದೇಶದವರ ಅರ್ಥ ಸಂಪಾದನೆ ಟೂರಿಸ್ಟ್ ಜನಗಳಿಂದ. ಅದಕ್ಕಾಗಿಯೇ ತಮ್ಮ ದೇಶದ ಪ್ರತಿಯೊಂದು ಚೆಲುವಿನ ಮೂಲೆಗೂ ಹೋಗುವ ಅನುಕೂಲತೆ ಮಾಡಿದ್ದಾರೆ. ಹೋಟಿಲು ವಸತಿಗಳಿಲ್ಲದ ಯಾವೊಂದು ಮೂಲೆಯೂ ಇಲ್ಲ. ಅವುಗಳನ್ನು ಕುರಿತು ಅವರು ಮಾಡುತ್ತಿರುವ ಪ್ರಚಾರವೂ ಅದ್ಭುತವಾದುದು. ತಮ್ಮ ದೇಶದ ಸೃಷ್ಟಿಯ ಸೊಬಗನ್ನು ಬಹು ಸುಂದರವಾದ ಬಣ್ಣದ ಚಿತ್ರಗಳಿಂದ ಮುದ್ರಿಸಿ, ವಿವರ ಸಹಿತವಾಗಿ ಪ್ರಕಟಿಸುತ್ತಿದ್ದಾರೆ. ಅವರು ಧರ್ಮಾರ್ಥವಾಗಿ ಒದಗಿಸುವ ಈ ಚಿತ್ರಗಳನ್ನು ಕಂಡೇ ಮರುಳಾಗುವಂತಿದೆ. ಆ ಚಿತ್ರಗಳಲ್ಲಿ ನಿಜಕ್ಕೂ ಅತಿಶಯೋಕ್ತಿಯೇನಿಲ್ಲ. ಹಿಮ ಕವಿದ ಗಿರಿ ಶಿಖರ, ಹಸುರು ಕವಿದ ಪರ್ವತ ಶ್ರೇಣಿ, ಅಲ್ಲಲ್ಲಿ ನಯನ ಮನೋಹರವಾಗಿ ಹರಡಿರುವ ಸರೋವರಗಳು-ಈ ಸಣ್ಣ ಪ್ರದೇಶವನ್ನು ಪ್ರಪಂಚದ ಒಂದು ನಂದನವನವನ್ನಾಗಿ ಮಾಡಿವೆ.

ಊರಿನ ಹೋಟೆಲ್ ಕೆಲಸಗಾರರಿಗೆ ಹಲವು ಭಾಷೆಗಳು ಬರುತ್ತವೆ. ವಸತಿಯ ಕೋಣೆಯಾಗಲೀ ಉಪಹಾರವಾಗಲೀ ಇತರ ಅನುಕೂಲತೆಗಳಾಗಲೀ ಜನರ ನಡವಳಿಕೆಗಳಾಗಲೀ— ಇದು ನಮ್ಮ ಮನೆ ಎಂಬ ಭಾವನೆಯನ್ನು ಪ್ರೇರಿಸುವಂತಿವೆ. ಈ ನಗರದಲ್ಲಿ ತುಂಬ ಚಳಿಯಾಗಬಹುದು ಎಂದು ನಾನೆಣಿಸಿದ್ದೆ. ಆದರೆ ರಾತ್ರಿಯ ಹವೆ ಹಿತಕರವಾಗಿತ್ತು. ನಾರ್ವೆಯ ರಾತ್ರಿಗಳಷ್ಟು ಕಠಿಣವಾಗಿ ಕಾಣಿಸಲಿಲ್ಲ.

ನಾನು ಸ್ವಿಜರ್‌ಲೇಂಡಿಗೆ ಬಂದ ಉದ್ದೇಶ— ಕೇವಲ ಅಲ್ಲಿನ ಸೃಷ್ಟಿ ಸೌಂದರ್ಯವನ್ನು ನೋಡುವುದಕ್ಕೆ ಹೊರತು ಇನ್ನೇನೂ ಅಲ್ಲ. ಈ ದೇಶವು ಹದಿನಾರು ಸಾವಿರ ಚದರ ಮೈಲು ವಿಸ್ತಾರವಾದುದು. ಅದರಲ್ಲಿ ನಾಲ್ಕು ವರೆ ಮಿಲಿಯದಷ್ಟು ಜನರು ವಾಸವಾಗಿದ್ದಾರೆ. ದೇಶದ ಎಲ್ಲೆಲ್ಲೂ ಆಲ್ಪ್ಸ್ ಪರ್ವತಾವಳಿಯ ಸೆರಗುಗಳು ಚಾಚಿಕೊಂಡಿವೆ. ಜನರು ಈ ಪರ್ವತಗಳ ಮಗ್ಗುಲಲ್ಲೋ ನಡುವಣ ಕಣಿವೆಗಳಲ್ಲೋ ವಾಸಮಾಡುತ್ತಾರೆ. ಪರ್ವತಗಳ ಎಡೆಯ ಕಣಿವೆಗಳಲ್ಲಿ ಅನೇಕಾನೇಕ ಸುಂದರ ಸರೋವರಗಳಿವೆ. ಅಂಥ ಹಿರಿಯ ಸರೋವರಗಳ ತಡಿಯಲ್ಲಿಯೇ ಅನೇಕ ಮುಖ್ಯ ಪಟ್ಟಣಗಳು ಬೆಳೆದಿವೆ. ಜೂರಿಕ್, ಬರ್ನ, ಲೂಸಾನ್, ಲುಗಾನೊ, ಜಿನೀವಾ, ಇಂಟರ್‌ಲಾಕನ್ ಮೊದಲಾದುವೆಲ್ಲಾ ಒಂದೊಂದು ಸರೋವರದ ಸುತ್ತಲೂ

ಬೆಳೆದುಕೊಂಡ ನಗರಗಳಾಗಿವೆ. ಈ ಸರೋವರಗಳು ಅಗಲಕಿರಿದಾದವು. ಆದರೆ ಬಹು ನೀಳವಾಗಿ ಅಂಕುಡೊಂಕಾದ ಬೆಟ್ಟಗಳ ಎಡೆಯಲ್ಲಿ ರಂಜಿಸುವುವು. ಅಲ್ಲಿನ ಒಂದೊಂದು ಸರೋವರ ಪ್ರದೇಶವೂ ಆರೋಗ್ಯಧಾಮವಾಗಿದೆ; ಒಂದೊಂದೂ ವಿಶ್ರಾಂತಿಧಾಮವಾಗಿದೆ. ಜೂರಿಕ್ ಸರೋವರವನ್ನು ಅಲ್ಲಿನ ಜನರು ಸಮುದ್ರವೆಂದು ಸಂಬೋಧಿಸುತ್ತಾರೆ. ಇದು ಬರಿಯ ಒಂದೆರಡು ಮೈಲು ಅಗಲವಾಗಿದ್ದು ಸುಮಾರು ಐವತ್ತು ಮೈಲುಗಳಷ್ಟು ನೀಳವಾಗಿದೆ. ಜೂರಿಕ್ ನಗರ ಇದರ ಒಂದು ಮುಖದಲ್ಲಿ ಬೆಳೆದುಬಂದಿದೆ. ಸರೋವರದ ದಂಡೆ ಸಮತಟ್ಟಾಗಿಲ್ಲ. ಅಗಲವೂ ಆಗಿಲ್ಲ. ಅದರ ತಡಿಯಿಂದಲೇ ಉನ್ನತ ಪರ್ವತಗಳು ಇಕ್ಕಡೆಗಳಲ್ಲಿ ಮೇಲಕ್ಕೇಳುತ್ತವೆ. ಆ ಬೆಟ್ಟಗಳ ಸೆರಗೆಲ್ಲವು ಪೈನ್ ವೃಕ್ಷದ ಕಾಡುಗಳಿಂದ ತುಂಬಿಕೊಂಡಿದೆ. ಅವುಗಳ ಹಸುರು ಬಣ್ಣ, ಸರೋವರದ ನೀಲ ಬಣ್ಣದೊಡನೆ ಮೇಳವಿಸುವಾಗ ವಿಚಿತ್ರ ಸೊಬಗು ಉಂಟಾಗುತ್ತದೆ. ಈ ಪರ್ವತದ ಸೆರಗಿನಲ್ಲೆಲ್ಲ ಸುಂದರವಾದ ಮನೆಮಠಗಳಿವೆ. ಮನೆಗಳ ಸುತ್ತಲು, ಹೂದೋಟಗಳು, ಚೆಲುವಿನ ವಿಲ್ಲೋ ವೃಕ್ಷಗಳು ಕಾಣಿಸುತ್ತವೆ. ದೇಶೀಯ ಶೈಲಿಯ ಮನೆಗಳೇ ಅತ್ಯಧಿಕ. ಅವುಗಳ ಇಳಿಮಾಡುಗಳಿಗೂ ಪೈನ್ ವೃಕ್ಷದ ತೇರಿನ ಆಕೃತಿಗೂ ಸೊಗಸಾದ ಹೊಂದಿಕೆಯಿದೆ. ಜೂರಿಕ್ ಸರೋವರದ ಒಂದು ತುದಿಯಲ್ಲಿರುವ ಸಮತಟ್ಟಾದ ಭೂಮಿಯಲ್ಲಿ ನಗರದ ಮುಖ್ಯ ಭಾಗ ಹಾಸಿ ಹರಡಿದೆ. ತೀರ ಶುಚಿಯಾದ ನಗರ; ಅನೇಕ ಆಧುನಿಕ ಕಟ್ಟಡಗಳಿವೆ; ವಿಶೇಷ ವ್ಯಾಪಾರವಿದೆ. ಹೆಸರಾದ ಜೂರಿಕ್ ವಿಶ್ವವಿದ್ಯಾಲಯದ ಕೇಂದ್ರವೂ ಇಲ್ಲಿದೆ. ನಮ್ಮ ದೇಶದ ಹತ್ತಿಪ್ಪತ್ತು ವಿದ್ಯಾರ್ಥಿಗಳು ಇಲ್ಲಿ ಅಭ್ಯಾಸಮಾಡುತ್ತಿದ್ದಾರಂತೆ. ಇದು ಪ್ರಪಂಚದ ಸೌಂದರ್ಯಧಾಮಗಳಲ್ಲಿ ಒಂದೆನಿಸಿಕೊಂಡಿದ್ದರಿಂದ, ಯಾವೆಲ್ಲ ದೇಶದ ಜನಗಳನ್ನೂ ಇಲ್ಲಿನ ಬೀದಿಗಳಲ್ಲಿ ಕಾಣಬಹುದು. ನಾವು ಯಾವ ಅಂಗಡಿಗೆ ಹೋಗಲಿ, ಹೋಟೆಲಿಗೆ ಹೋಗಲಿ-ಸ್ನೇಹಪರರಾದ ವ್ಯಕ್ತಿಗಳನ್ನು ಕಾಣುತ್ತೇವೆ. ತಮ್ಮ ದೇಶದ ಮುಖ್ಯ ವ್ಯಾಪಾರ "ಟೂರಿಸಮ್" ಎಂದು ಬಲ್ಲ ಆ ಜನರು, ತುಂಬ ವಿನಯಶೀಲರಾಗಿ ವರ್ತಿಸುತ್ತಾರೆ. ಈ ಜನಕ್ಕೆ ಇಂಗ್ಲಿಷ್ ಬರುತ್ತದೆ; ಫ್ರೆಂಚ್, ಜರ್ಮನ್, ಇಟಾಲಿಯನ್ ಭಾಷೆಗಳೂ ಬರುತ್ತವೆ. ಹೀಗಾಗಿ ಪ್ರವಾಸಿಯು ನಿಶ್ಚಿಂತನಾಗಿ ಅಲೆದಾಡಬಲ್ಲ.

ದೇಶ ಚಿಕ್ಕದು; ಜನಸಂಖ್ಯೆಯು ಕಡಿಮೆ. ಆದರೆ ಇಲ್ಲಿನ ಜನಗಳ

ಸಾಹಸ ಕಡಿಮೆಯಾಗಿ ಕಾಣಿಸುವುದಿಲ್ಲ. ದೇಶದಲ್ಲಿ ಯಾವ ಬಗೆಯ ಖನಿಜ ಸಂಪತ್ತು ಇಲ್ಲವಾದರೂ, ಅನೇಕ ಉದ್ಯಮಗಳನ್ನು ಬೆಳೆಸಿಕೊಂಡು ಬಂದಿದ್ದಾರೆ. ವಾಚು, ಗಡಿಯಾರಗಳ ನಿರ್ಮಾಣದಲ್ಲಿ ಅವರದು ಪಳಗಿದ ಕೈ. ಹತ್ತು ರೂಪಾಯಿಗೂ ವಾಚನ್ನು ಮಾಡಬಲ್ಲರು. ಹತ್ತು ಲಕ್ಷ ರೂಪಾಯಿ ಕೊಡುತ್ತೇನೆಂದರೂ ಅದಕ್ಕೆ ತಕ್ಕುದಾದ ವಾಚನ್ನು ನಿರ್ಮಿಸಿಕೊಡಬಲ್ಲರು. ವಿದ್ಯುದುತ್ಪನ್ನದ ಯಂತ್ರ ಸಾಮಗ್ರಿಗಳನ್ನು ಮಾಡುವುದರಲ್ಲಿ ಮುಂದುಬಂದಿದ್ದಾರೆ. ಆಧುನಿಕ ಔಷಧಿ ಮತ್ತು ರಸಾಯನಿಕ ವಸ್ತುಗಳ ನಿರ್ಮಾಣದಲ್ಲಿ ಮುಂದುವರಿದಿದ್ದಾರೆ. ಇವಕ್ಕೆಲ್ಲ ಅವರಿಗೆ ಬೆಂಬಲವೆಂದರೆ–ಅಲ್ಲಿನ ಜಲ ಸಂಪತ್ತು. ಬೆಟ್ಟಗಳ ಹಿಮವು ಕರಗಿ, ಜಲಪಾತಗಳಾಗಿ ಬೀಳುವ ನೀರನ್ನು ವಿದ್ಯುತ್ತಾಗಿ ಪರಿವರ್ತಿಸಿ, ನಾಡಿನ ಪ್ರತಿ ಮೂಲೆಗೂ ಒದಗಿಸಿ ಕೊಟ್ಟಿದ್ದಾರೆ. ಹೀಗಾಗಿ ಗೃಹ ಕೈಗಾರಿಕೆಗಳೂ, ದೊಡ್ಡ ಉದ್ಯಮಗಳೂ ಬೆಳೆದು ಬಂದು ಜನಗಳ ಸಂಪತ್ತನ್ನು ಹೆಚ್ಚಿಸಿವೆ. ದುಡಿಮೆಯಲ್ಲಿ ಕುಶಲರು, ಸಾಹಸಿಗಳು. ಹೊರಗಿನ ದೇಶಗಳಿಂದ ಕಚ್ಚಾವಸ್ತುಗಳನ್ನು ತರಿಸಿಕೊಂಡು ತಮ್ಮ ಸಂಪದಭಿವೃದ್ಧಿಯ ಕೆಲಸವನ್ನು ವಿಶೇಷವಾಗಿ ಸಾಧಿಸಿಕೊಂಡಿದ್ದಾರೆ.

ಮೊದಲನೆಯ ದಿನ ನಾನು ಇಲ್ಲಿನ ಸರೋವರದಲ್ಲಿ ಅಲೆದಾಡಿ ಬಂದೆ. ಸರೋವರದ ದಂಡೆಯಲ್ಲಿ ಸುಂದರವಾದ ಉದ್ಯಾನಗಳಿವೆ. ದಂಡೆಯ ಮೇಲೆ ನಿಂತಾಗ ಅನೇಕ ಹಂಸಗಳು ಬಂದು ನಮ್ಮನ್ನು ಮಾತನಾಡಿಸುವುದುಂಟು. ದಂಡೆಯುದ್ದಕ್ಕೂ ಮೈಲು, ಎರಡು ಮೈಲು ದೂರಗಳಲ್ಲಿ ಹಲವು ಕಡವುಗಳಿವೆ. ತಿರುಗಾಡ ಬಯಸುವವನು ಅಲ್ಲಿರುವ ಮೋಟರ್ ಲಾಂಚುಗಳಲ್ಲಿ ಕುಳಿತು ತಾಸೆರಡು ತಾಸು ಕಾಲ ಅಲೆದಾಡಿಕೊಂಡು ಬರಬಹುದು. ಹೋದ ದಿನ ಬೆಳಿಗ್ಗೆ, ಸುಮಾರು ಎರಡು ತಾಸಿನ ಕಾಲ ಜಲವಿಹಾರ ಮಾಡಿಕೊಂಡು ಬಂದೆ. ದಂಡೆಯ ಮಗ್ಗುಲಲ್ಲಿರುವ ಮನೆಗಳನ್ನು, ಉದ್ಯಾನಗಳನ್ನು, ಮರಗಳನ್ನು, ಹಂಸಗಳನ್ನು ಕಾಣುತ್ತ ಹೋದಂತೆ—ವೈಗಳ್ಳನಂತೆ ಅಲ್ಲಿಯೇ ಕುಳಿತಿರುವ ಎಂಬ ಆಸೆಯಾಗುತ್ತದೆ.

ಆ ಸಂಜೆ ಅದೇ ಸರೋವರದ ಬಳಿ ಅಲೆದಾಟಕ್ಕೆ ಹೋದಾಗ ಇಬ್ಬರು ಹಿಂದೀ ತರುಣರು ನನ್ನನ್ನು ಗುರುತಿಸಿದರು; ಮಾತನಾಡಿಸಿದರು. ಒಬ್ಬರು ಮಂಗಳೂರಿನ ಪೇಜಾವರ ವ್ಯಾಸರಾಯರ ಮಕ್ಕಳು. ಇನ್ನೊಬ್ಬರು ಬೆಂಗಳೂರಿನವರು, ಚಿನ್ನಪ್ಪ ಎಂಬ ವಿದ್ಯಾರ್ಥಿ. ನಾವು ಮಾತನಾಡುತ್ತ ನಿಂತಾಗ

ಎದುರಿಗೆ ಪುಟ್ಟಹಡಗೊಂದು ನಿಂತಿತ್ತು. ಅದು ಬೆಳುದಿಂಗಳ ಯಾನಕ್ಕೆ ಹೊರಟದ್ದು. ಈ ಸ್ನೇಹಿತರೊಡನೆ ನಾನು ಇನ್ನೊಮ್ಮೆ ಹಡಗಿನಲ್ಲಿ ಅಲೆದಾಟಕ್ಕಾಗಿ ಹೊರಟೆ. ಸುಮಾರು ಮೂರು ತಾಸುಗಳ ಕಾಲ ಈ ಹಡಗು ಸುಮಾರು ಇಪ್ಪತ್ತು ಮೈಲಿನ ದೂರ ಹೋಗಿ ಮರಳಿ ಬಂದಿತು. ಅದರಲ್ಲಿ ಸಂಗೀತದ ಏರ್ಪಾಟಿತ್ತು. ಆ ಸಂಗೀತ ಮಾತ್ರ ಸಾಮಾನ್ಯದ್ದಾದರೂ ಉತ್ಸಾಹಶೀಲರಾದ ಹಲವು ಸ್ವಿಸ್ ತರುಣರು, ತರುಣಿಯರು, ಯೌವನಸ್ಥರು ತಾಸೆರಡು ತಾಸು ಕಾಲ ಕುಣಿದು ವೇಳೆ ಕಳೆದರು. ಅನೇಕರು ಹಡಗಿನಲ್ಲಿರುವ ಉಪಾಹಾರ ಗೃಹದಲ್ಲಿ ಊಟಮಾಡುತ್ತ ಸಮಯವನ್ನು ಕಳೆದರು. ನಾವು ಆ ಸುಂದರ ಶಾಂತ ಆವರಣದಲ್ಲಿ ಮಾತನಾಡುತ್ತ ಸಮಯ ಕಳೆದು ದಂಡೆಗೆ ಮರಳಿದೆವು.

ಮರುದಿನ ನನ್ನನ್ನರಸಿಕೊಂಡು ನನ್ನ ಹೊಟೇಲಿಗೆ ಒಬ್ಬ ಕನ್ನಡಿಗ ಮಿತ್ರ ಬಂದಿದ್ದ; ಆತನ ಹೆಸರು ಕೇಶವ ಹೆಗ್ಗಡೆ ಎಂದು. ಆತನ ಊರು ತೀರ್ಥಹಳ್ಳಿ. ಗಣಿತ ಶಾಸ್ತ್ರದಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಅಲ್ಲಿಗೆ ಹೊಸತಾಗಿ ಬಂದಿದ್ದ. ಅವನಿನ್ನೂ ಅಲ್ಲಿನ ಸಾಮಾಜಿಕ ಆವರಣಕ್ಕೆ ಪಳಗಿದಂತಿರಲಿಲ್ಲ. ಅಲ್ಲಿನ ವಿದ್ಯಾರ್ಥಿ ಜೀವನವನ್ನು ಬಣ್ಣಿಸುವಾಗ "ಇಲ್ಲಿ ನನ್ನಂಥವರಿಗೆ ತುಂಬ ಸಂಕೋಚ. ಇಲ್ಲಿನ ಸ್ತ್ರೀಯರು ಹೆಚ್ಚಾಗಿ ತರುಣರೊಡನೆ ಅಲೆದಾಡುವವರು; ಗೆಳೆತನ ಬಯಸಿ ಬರುವವರು. ಹಾಗೆ ಬರುವವರೊಡನೆ ನಮ್ಮ ದೇಶದ ತರುಣರು ಸಲುಗೆಯಿಂದ ವರ್ತಿಸುತ್ತಾರೆ; ಅಲೆದಾಡುತ್ತಾರೆ; ನನಗೇಕೋ ಅದು ಮನಸ್ಸಿಗೆ ಅಸಮಾಧಾನ" ಎಂದ. ನನ್ನ ಹಡಗಿನ ಅನುಭವ, ಅನಂತರ ಇಂಗ್ಲೆಂಡ್ ಫ್ರಾನ್ಸ್ ದೇಶಗಳಲ್ಲಿ ಕಂಡ ಕೆಲವೊಂದು ಚಿತ್ರಗಳು ಮನಸ್ಸಿಗೆ ಬಂದುವು. ಪೌರ್ವಾತ್ಯರಾದವರಿಗೆ ಇಲ್ಲಿನ ಸ್ತ್ರೀಪುರುಷರ ಜೀವನವು ವಿಶೇಷ ಸ್ವಾತಂತ್ರ್ಯವುಳ್ಳುದಾಗಿ ಕಾಣಿಸುತ್ತದೆ. ಅದನ್ನು ಕೇವಲ ಸಾಮಾಜಿಕ ಸ್ನೇಹವಾಗಿ ತಿಳಿದು ವರ್ತಿಸುವ ಜನ ಕೆಲವರಾದರೆ ವಿಲಾಸಕ್ಕಾಗಿ ತಿರುಗಿಸಿಕೊಳ್ಳುವ ಜನ ಬಹಳ. ಹೀಗಾಗಿ ತಮ್ಮ ಶೀಲವನ್ನು ಹದ್ದಿನಲ್ಲಿ ಇರಿಸಿಕೊಳ್ಳಲಾರದ ತರುಣರನ್ನು, ಪರದೇಶಕ್ಕೆ ಕಳುಹಿಸುವ ಮುನ್ನ ಹಿರಿಯರು ತುಂಬ ವಿಚಾರಮಾಡಬೇಕಾಗುತ್ತದೆ.

ನಾನು ಈ ನಗರಕ್ಕೆ ಬಂದುದು ಬರಿಯ ಎರಡು ದಿನಗಳ ವಾಸಕ್ಕಾಗಿ. ಆಲ್ಪ್ಸ್ ಪರ್ವತಗಳೂ, ಕೆಲವು ಸರೋವರಗಳೂ ನನ್ನನ್ನು ಸೆಳೆತಂದುವು.

ಜೂರಿಕ್ ಸರೋವರಕ್ಕಿಂತ ಸುಂದರವಾದ ಸರೋವರಗಳನ್ನು ನೋಡುವ ಹಂಬಲ ನನಗೆ. ಇಲ್ಲಿನ ಜನಗಳೇನೂ ನನ್ನನ್ನಾಕರ್ಷಿಸಬೇಕಿರಲಿಲ್ಲ. ಇಲ್ಲಿನ ಸ್ತ್ರೀಯರು ಸ್ವತಂತ್ರರೆಂದೂ, ದಾಂಪತ್ಯ ವಿಚ್ಛೇದನ ಇಲ್ಲಿ ಬಹು ಹೆಚ್ಚೆಂದೂ ಕೇಳಿದ್ದೆ. ಇಷ್ಟೊಂದು ಸ್ವಾತಂತ್ರ್ಯ ಆ ಜನರಿಗಿದ್ದರೂ ಸ್ವಿಸ್ ಸ್ತ್ರೀಯರಿಗೆ ರಾಜಕೀಯದಲ್ಲಿ ಮತದಾನದ ಅಧಿಕಾರವಿಲ್ಲವೆಂದು ಕೇಳಿ ನನಗೆ ಆಶ್ಚರ್ಯವಾಯಿತು. ಈ ನಗರದಲ್ಲಿದ್ದಾಗ ನಡೆದೊಂದು ಸುಂದರ ಅನುಭವವನ್ನು ಕುರಿತು ನಾಲ್ಕು ಮಾತುಗಳನ್ನು ಹೇಳಬೇಕೆನಿಸುತ್ತದೆ.

ನಾನು ಊರಿಗೆ ಬಂದ ಮರುದಿನವೇ ಗಡಿಯಾರ ಮಾರುವ ಒಂದು ಅಂಗಡಿಗೆ ಹೋಗಿದ್ದೆ. ಒಂದು ವಾಚನ್ನು ಕೊಂಡೆ. ನನ್ನ ಹಳೆಯ ವಾಚನ್ನು ದುರಸ್ತಿಮಾಡಲು ಕೊಟ್ಟೆ. ಆ ವೇಳೆಯಲ್ಲಿ ನನ್ನ ಕಿಸೆಯ ಕಾಗದಗಳನ್ನೆಲ್ಲ ತೆಗೆದು ನೋಡಿದಾಗ, ಸ್ವಿಸ್ ಪ್ರವಾಸದ ಸಲುವಾಗಿ ನಾನು ಕೊಂಡಿದ್ದ ರೈಲು ಟಿಕೇಟುಗಳ ಪುಸ್ತಕ ಮಾತ್ರ ಕಾಣೆಯಾಗಿತ್ತು. ನನ್ನ ಮುಖ ನೋಡಿ ವಾಚು ಮಾರಿದಾಕೆ "ಏನು ಗಾಬರಿಗೊಂಡಿರಿ?" ಎಂದು ಕೇಳಿದಳು. "ಇಲ್ಲ, ನನ್ನ ಹೊಲಿಡೇ ಟಿಕೆಟ್ ಪುಸ್ತಕ ಕಳೆದುಹೋಗಿದೆ. ಎಲ್ಲಿ ಕಳೆದುಕೊಂಡೆನೋ ತಿಳಿಯದು" ಎಂದೆ. ಅದಕ್ಕವಳು "ಅಷ್ಟೇಕೆ ಗಾಬರಿಯಾಗುತ್ತೀರಿ? ಅದು ನಿಮಗೆ ಸಿಕ್ಕಿಯೇ ಸಿಗುತ್ತದೆ. ಎಲ್ಲೆಲ್ಲಿಗೆ ಹೋಗಿದ್ದೀರೆಂದು ನೋಡಿ, ವಿಚಾರಿಸಿಕೊಂಡು ಬನ್ನಿ" ಎಂದು ಬೋಧಿಸಿದಳು.

ನಾನು ಹೋಗಿದ್ದ ಒಂದು ಬೇಂಕಿಗೆ ಹೋದೆ. ಅಲ್ಲಿನ ಕದ ಮುಚ್ಚಿತ್ತು. ಆದರೂ ಅವರು ನನಗಾಗಿ ಬಾಗಿಲನ್ನು ತೆಗೆದು, ಹುಡುಕಿ, ಟಿಕೇಟು 'ಇಲ್ಲಿ ಬಿದ್ದಿಲ್ಲ' ಎಂದು ಹೇಳಿದರು. ಅನಂತರ ಹುಡುಕುವುದನ್ನು ಬಿಟ್ಟೆ. ನಾನು ಕುಳಿತ ಮೋಟರ್ ದೋಣಿಯವನನ್ನು ಕೇಳಬೇಕು. ಅವನು ಎಲ್ಲೆಂದು ಅದನ್ನು ಹುಡುಕಲಿ? ನನ್ನ ಹೊಟೇಲಿಗೆ ಹೋದಾಗ ಹೋಟೆಲ್ ಯಜಮಾನಿಯೊಡನೆ ಟಿಕೇಟು ಕಳೆದುಹೋದ ವಿಚಾರ ಹೇಳಿದರೆ "ಏಕೆ ಗಾಬರಿಯಾಗುತ್ತೀರಿ? ಅದು ನಿಮಗೆ ಸಿಕ್ಕಿಯೇ ಸಿಗುತ್ತದೆ"ಎಂದಳು. ಸಂಜೆ ನನ್ನನ್ನು ಭೇಟಿಯಾದ ಇಬ್ಬರು ಮಿತ್ರರೂ ಹಾಗೆಯೇ ಹೇಳಿದರು. "ಇಲ್ಲಿ ಕಳೆದುಹೋದ ವಸ್ತುವೇನಿದ್ದರೂ ಕಳೆದ ವಸ್ತುಗಳ ಕಚೇರಿಗೆ ತಂದು ಕೊಡುತ್ತಾರೆ. ಒಂದೆರಡು ದಿನಗಳಲ್ಲಿ ಅದು ನಿಮಗೆ ಸಿಗಬಹುದು. ಕಳೆದು ಹೋಗಲಾರದು" ಎಂದರೂ ನನಗೆ ಭರವಸೆಯಾಗಲಿಲ್ಲ.

ಗಳೂ ಶಿಖರಗಳೂ ನೀರಿಗೆ ಹೊಂಬಣ್ಣ ಕೊಟ್ಟಿದ್ದುವು. ದೂರಕ್ಕೆ ಕಣ್ಣು ಹಾಯಿಸಿದರೆ— ಈ ಸರೋವರ ಅನೇಕ ಬೆಟ್ಟಗಳ ಎಡೆಯಿಂದ ಮೂರು ನಾಲ್ಕು ಕಡೆಗಳಿಗೆ ತನ್ನ ನೀರಿನ ಹಾಳೆಯನ್ನು ಚಾಚಿಕೊಂಡಿರುವುದು ಕಾಣುತ್ತದೆ. ಬಹುದೂರದ ಗಿರಿ, ಶಿಖರಗಳಲ್ಲಿ ಹಿಮದ ಹೊಳಪೂ ಕಾಣಿಸುತಿತ್ತು.

ವೇಳೆಯಾಗುತ್ತಲೇ ಬಂಡಿಯನ್ನೇರಿ ಮುಂದಕ್ಕೆ ಹೊರಟೆ. ಇಂಟರ್ ಲಾಕನಿಗೆ ಅಲ್ಲಿಂದ ಸುಮಾರು ಮೂರು ತಾಸಿನ ಹಾದಿಯಿದೆ. ಈ ದಾರಿ ಸ್ವಲ್ಪ ದೂರದ ತನಕ ಲೂಸಾನ್ ಸರೋವರದ ಕರೆಯಿಂದಲೇ ಹಾದು, ಮುಂದೆ ಹಲವಾರು ಪರ್ವತಗಳ ಮೂಲಕವೂ, ಮಗ್ಗುಲಿಂದಲೂ ಸರಿಯತೊಡಗುತ್ತದೆ. ಕಣ್ಣೆದುರಿನ ಕಣಿವೆಗಳು ತುಂಬ ಆಳವಾಗಿ ಕಾಣುತ್ತವೆ; ಮಗ್ಗುಲಿನ ಪರ್ವತಗಳು ಬಾನಿಗೆ ಮುಟ್ಟುತ್ತವೆ. ಎದುರಿಗಿರುವ ಪರ್ವತ ಶ್ರೇಣಿಗಳಲ್ಲಿ ಹಿಮದ ವಿಚಿತ್ರವಿಲಾಸ ಕಾಣಿಸುತ್ತದೆ. ಮುಂದಿನ ದಾರಿಯಲ್ಲಿ ಬಂಡಿ ಕಚ್ಚುಗಾಲಿಯ ಸಹಾಯದಿಂದ ಏರಬೇಕಾಗುತ್ತದೆ. ಹಾಗೆಯೇ ಬಹು ದೂರದ ತನಕ ಅದು ಬೆಟ್ಟವನ್ನು ಏರುತ್ತಲೇ ಹೋಗುತ್ತದೆ. ಅಲ್ಲಿನ ಪೈನ್ ವೃಕ್ಷಗಳ ಸೊಬಗನ್ನು ಹೇಳಿತೀರದು. ಮುಂದೊಂದು ಚಿಕ್ಕಊರು ಬಂದಿತು. ಬಂಡಿಯ ಅರ್ಧವನ್ನು ಅಲ್ಲಿಯೇ ಕಳಚಿ ಬಿಟ್ಟರು. ಅಲ್ಲಿ ಬಂಡಿ ಅರ್ಧ ತಾಸು ನಿಲ್ಲುತ್ತದೆ–ಎಂದು ತಿಳಿಯುತ್ತಲೇ ನಾನು ಇಳಿದು ಹೊರಕ್ಕೆ ಬಂದೆ. ಒಂದು ಕಡೆ ಪೈರು ಬೆಳೆದ ಸಮತಟ್ಟಾದ ಹೊಲಗಳಿದ್ದುವು. ತುಂಬ ದೂರ ಕಣ್ಣು ಚಾಚಿದರೆ, ಹಿಮ ಕವಿದ ಬೆಟ್ಟದ ಶ್ರೇಣಿಗಳು ಕಾಣಿಸುತ್ತಿದ್ದುವು. ನನ್ನ ಎಡಕ್ಕೇನೆ ಆ ನಗರದ ಮನೆಮಠಗಳಿದ್ದುದನ್ನು ಕಂಡು, ಅಲ್ಲಿಗೆ ಹೋಗೋಣವೆಂದು ಹೊರಟೆ. ಆ ಪಟ್ಟಣದ ಮಗ್ಗುಲಿಗೇನೇ ಉನ್ನತವಾದೊಂದು ಬೆಟ್ಟವಿತ್ತು. ಅದರಿಂದ ಸುಂದರ ಜಲಪಾತವೊಂದು ಮುನ್ನೂರು ನಾನ್ನೂರು ಅಡಿಗಳ ಮೇಲಿನಿಂದ ಕೆಳಕ್ಕೆ ದುಮುಕುತ್ತಿತ್ತು. ಅಲ್ಲಿ ಹೋಗಿ ತುಸು ಹೊತ್ತು ನಿಂತುಕೊಂಡು,ಮರಳಿ ನನ್ನ ಬಂಡಿಯನ್ನು ಸೇರಿದೆ. ಬಂಡಿ ಹೊರಟ ಅರೆ ತಾಸಿನಲ್ಲಿ ಮೆರಿಂಗನ್ ಎಂಬ ಇನ್ನೊಂದು ನಿಲ್ದಾಣ ಬಂದಿತು. ಅದಿರುವುದು ಒಂದು ಸರೋವರದ ದಂಡೆಯ ಮೇಲೆ. ಈ ಸರೋವರ ಒಂದು ತುದಿಯಲ್ಲಿ ಬೆಟ್ಟಗಳ ಎಡೆಯಲ್ಲಿ ಅದೃಶ್ಯವಾದರೆ, ಅದರ ಇನ್ನೊಂದು ತುದಿಯು ಇಂಟರ್ ಲಾಕನ್ ನಗರದ ತನಕ ಚಾಚುತ್ತದೆ. ಅಲ್ಲಿಂದ ಇಂಟರ್‌ಲಾಕನಿಗೆ ಸುಮಾರು ಮುಕ್ಕಾಲು ತಾಸಿನ ಹಾದಿಯಿತ್ತು. ರೈಲು ದಾರಿಯು ಸರೋವರದ ಒಂದು

ಮಗ್ಗುಲಿಂದ ಅದರ ಅಂಚಿಗೆ ಸಮನಾಗಿ ಹಾದು ಹೋಗುತ್ತಿತ್ತು. ಸರೋವರದ ಆಚೆ ಮಗ್ಗುಲಿಗಿರುವ ಬೆಟ್ಟದ ಸೆರಗಿನಲ್ಲಿ ಕೆಲವು ಸುಂದರ ಜಲಪಾತಗಳು ಕಾಣಿಸುತ್ತಿದ್ದುವು. ಪರ್ವತದ ಸೆರಗಿನ ಬಹು ಎತ್ತರದ ತನಕ ಪೈನ್ ವೃಕ್ಷದ ಹಸುರಿನಿಂದ ಕವಿದಿದ್ದರೂ, ಅದರ ತುತ್ತುದಿಯ ಶಿಖರಗಳು ಬರಿದಾಗಿದ್ದುವು. ಕೆಲವೊಂದು ಕಡೆ ಹಿಮದಿಂದ ಮುಚ್ಚಿಕೊಂಡಿದ್ದುವು. ಈ ಸರೋವರದ ನೀರನ್ನು ನೋಡುವಾಗಲೇ ಮನಸ್ಸು ಹುಚ್ಚುಗಟ್ಟುತ್ತದೆ. ಹಸುರು, ನೀಲ, ಬಿಳುಪುಗಳು ಸೇರಿದ ಒಂದು ಬಗೆಯ ರತ್ನ ನೀಲ ವರ್ಣವಿತ್ತು ಅದಕ್ಕೆ. ಅಷ್ಟೊಂದು ಮನ ಸೆಳೆಯುವ ಶೋಭೆ ಆ ನೀರಿನದು. ಇದರ ಶಾಂತಮಯ ಲಲಿತ ಸೌಂದರ್ಯಕ್ಕೆ ಪ್ರತಿಯಾಗಿ ಮಗ್ಗುಲಿನ ಬೆಟ್ಟಗಳಿವೆ. ಅವುಗಳದು ರಾಜಸಿಕವಾದ ವೈಭವ. ಅವುಗಳ ಕೆಲವೊಂದು ಶಿಖರಗಳನ್ನು ಕಾಣುವಾಗ, ಬೆಡಗಿಗೆ ಪ್ರತಿಯಾದ ಉಗ್ರರೂಪವೂ ಕಾಣುತ್ತದೆ. ಪ್ರಕೃತಿದೇವಿಯು, ತನ್ನ ಲಲಿತ, ರೌದ್ರರೂಪಗಳನ್ನೆಲ್ಲ ಒಂದೇ ಕ್ಷಣದಲ್ಲಿ, ಒಂದೇ ತಾವಿನಲ್ಲಿ ನಲಿದು ನರ್ತಿಸಿ ತೋರಿಸುವ ಲೀಲಾಧಾಮ ಈ ಇಂಟರ್‌ಲಾಕನ್ ಪ್ರದೇಶ.

ದಾರಿಯುದ್ದಕ್ಕೂ ಮನೆಗಳಿವೆ. ಸರೋವರದ ಉದ್ದಕ್ಕೂ ಈ ಸೊಬಗಿಗೆ ಮನಸೋತು ಬಂದ ಜನ ಸಮುದಾಯವಿದೆ. ಅವರಲ್ಲಿ ವಿರಮಿಸುತ್ತಿರುವವರೆಷ್ಟೋ ಮಂದಿ; ಜಲಕ್ರೀಡೆಯಾಡುವವರೆಷ್ಟೋ; ವಿಹರಿಸುತ್ತಿರುವವರೆಷ್ಟೋ ಜನ. ಮನುಷ್ಯ ಇಲ್ಲಿಗೆ ಬಂದು ಮರುಳುಗೊಳ್ಳುವುದರಲ್ಲೇನೂ ಆಶ್ಚರ್ಯವಿಲ್ಲ. ಮುಂದೆ ಈ ಸರೋವರ ಕೊನೆಗೊಂಡು ನಾಲ್ಕು ಸುತ್ತಲೂ ಬೆಟ್ಟಗಳಿರುವಂತೆ ಕಾಣಿಸುವ ಒಂದು ವಿಶಾಲವಾದ ಬಯಲು ಭೂಮಿ ಬರುತ್ತದೆ. ಅದರಲ್ಲಿಯೇ ಇಂಟರ್‌ಲಾಕನ್ ನಗರವಿದೆ. ಇಂಟರ್‌ಲಾಕನ್ ಎಂದರೆ 'ಸರೋವರದ ಮಧ್ಯ' ಎಂದರ್ಥ. ಅದರ ಒಂದು ಕಡೆ ನಾವು ಈಗತಾನೆ ದಾಟಿ ಬಂದ 'ಬ್ರೆಂಜರ್' ಸರೋವರವಿದೆ. ಇನ್ನೊಂದು ಕಡೆ 'ಥೂನರ್' ಸರೋವರವಿದೆ. ಅವುಗಳನ್ನು ಕೂಡಿಸುವ ಅಗಲವಾದ ಒಂದು ಕಾಲುವೆಯಿದೆ. ಅದರಲ್ಲಿ ಸಣ್ಣ ಹಡಗುಗಳು ಸಂಚರಿಸುತ್ತಿರುತ್ತವೆ. ಆ ಕಾಲುವೆಯ ದಂಡೆಯ ಮೇಲೆ ಬೆಟ್ಟಗಳ ತೊಟ್ಟಿಲುಗೂಸಿನಂತೆ ಈ ನಗರ ಬೆಳೆದು ಬಂದಿದೆ. ಇಂಟರ್‌ಲಾಕನ್ ಎಂಬುದು 'ವಿಲಿಯಮ್ ಟೆಲ್' ಎಂಬವನ ಊರಂತೆ. ಬಿಲ್ಲಾಳು ಒಬ್ಬನಿಗೆ ಅವನ ಮಗನ ತಲೆಯ ಮೇಲೆಯೇ

ಒಂದು ನಿಂಬೆ ಹಣ್ಣನ್ನಿರಿಸಿ, ನಿನ್ನ ಕೈಚಳಕ ತೋರಿಸು–ಎಂದು ಪರೀಕ್ಷೆ ಮಾಡಿದ ಒಂಬು ಕತೆಯು ನೆನಪಾಗದೇ? ಆ ಐತಿಹಾಸಿಕ ಘಟನೆ ಈ ನಗರ ದಲ್ಲಿ ನಡೆದುದಂತೆ. ಇಲ್ಲಿನ ಜನರು ಜುಲಾಯಿ ತಿಂಗಳಲ್ಲಿ ಆ ಕಥೆಯನ್ನು ಬಯಲು ನಾಟಕವಾಗಿ (Passion paly) ಇಂದಿಗೂ ಆಡಿತೋರಿಸುತ್ತಾರೆ.

ಆಚೀಚಿನ ಸೊಬಗನ್ನು ನೋಡ ನೋಡುತ್ತ ನಗರ ಬಂದಿತು; ರೈಲು ಬಂಡಿಯಿಂದ ಇಳಿದೆ. ನಮ್ಮ ಬಂಡಿಯಲ್ಲಿ ಜನಗಳೂ ಹೆಚ್ಚಿರಲಿಲ್ಲ. ಹೊರ ಬಿದ್ದೆ. ದಾರಿಯುದ್ದಕ್ಕೂ ಹಲವು ದೊಡ್ಡ ಹೋಟೆಲುಗಳಿದ್ದವು. ಕಣ್ಮುಚ್ಚಿ ಕೊಂಡು 'ಹೊಟೇಲ್ ಬವೇರಿಯಾ' ಎಂಬಲ್ಲಿಗೆ ಹೋದೆ. ದಿನದ ವಾಸಕ್ಕೆ ಹದಿನೆಂಟು ರೂಪಾಯಿಗಳ ಬೆಲೆಯನ್ನು ಹೇಳಿದರು. ಆದರೆ ಆ ಮೌಲ್ಯದಲ್ಲಿ ದಿನದ ಯಾವತ್ತು ಊಟ, ಉಪಹಾರಗಳ ಬೆಲೆಯೂ ಸೇರಿತ್ತು. ಆದುದರಿಂದ ಅದು ಅಗ್ಗವೇ ಆಯಿತೆಂದು ಯೋಚಿಸಿದೆ. ಹೋಟೆಲೇನೋ ಶುಚಿಯಾ ಗಿತ್ತು. ದೊಡ್ಡದೂ ಆಗಿತ್ತು. ಅದರ ಮುಂದೊಂದು ಹೂದೋಟವಿತ್ತು. ಹಿಂದೆ ಅಗಲವಾದ ಕಾಲುವೆ ಹರಿಯುತಿತ್ತು. ಅದರಾಚೆಗೋ – ಎರಡು ಮೂರುಸಾವಿರ ಅಡಿ ಎತ್ತರದ ಉನ್ನತವಾದೊಂದು ಬೆಟ್ಟ ಚಾಚಿಕೊಂಡಿತ್ತು. ಹೋಟೆಲಿನ ಆಳಿನೊಡನೆ ನಾನು 'ಇಂದೆಲ್ಲಿಗೆ ಹೋಗಲಿ? ನಾಳೆಯಂಗ್ ಫ್ರೋ ಪರ್ವತಕ್ಕೆ ಹೋಗಬೇಕು' ಎಂದಾಗ, ಆತ ಆ ಪಯಣದ ರೈಲು ಟಿಕೇಟನ್ನು ಅಲ್ಲಿಯೇ ಒದಗಿಸಿದ. ಅನಂತರ 'ಇವತ್ತೇಕೆ ಸುಮ್ಮನೆ ಕುಳಿತಿರಬೇಕು? ಹೋಟೆಲಿನ ಹಿಂಗಡೆಯಲ್ಲಿಯೇ ಇನ್ನೊಂದು ರೈಲು ನಿಲ್ದಾಣವಿದೆ. ಫ್ಯೂನಿ ಕ್ಯೂಲರ್ ರೈಲಿನಲ್ಲಿ ಕುಳಿತು ಹಿಂದಿನ ಬೆಟ್ಟದ ತುದಿಗೆ ಹೋಗಿ ಬನ್ನಿ' ಎಂದ. ಅಲ್ಲಿಂದ ಹೊರಬಿದ್ದೆ. ಒಂದು ಫರ್ಲಾಂಗಿನೊಳಗೆ ಆ ಬೆಟ್ಟವನ್ನೇರುವ ರೈಲಿನ ದಾರಿಯಿತ್ತು. ಆ ಬೆಟ್ಟದ ಕುಡಿಯ ತನಕ ಇಳುಕಲು ದಾರಿಮಾಡಿದ್ದಾರೆ. ಆ ದಾರಿಯಲ್ಲಿ ಹಾಸಿದ ರೈಲು ಕಂಬಿಗಳ ಮೇಲೆ ಒಂದು ರೈಲು ಬಂಡಿಯು ಕೆಳಕ್ಕಿಳಿಯುವಾಗ, ಇನ್ನೊಂದು ಬಂಡಿಯು ಮೇಲಕ್ಕೇರುತ್ತದೆ. ಬಂಡಿಗಳು ಉಕ್ಕಿನ ಮಿಣಿಗಳ ಸಹಾಯದಿಂದ ಕೆಳಗೂ ಮೇಲಕ್ಕೂ ಹೋಗಿಬರುತ್ತವೆ. ಹಾಗೆ ಅರ್ಧಘಂಟೆಗೊಮ್ಮೆ ಬಂಡಿಗಳು ಮೇಲಕ್ಕೆ ಹೋಗಿಬರುತ್ತವೆ. ಆದ ಕ್ಕೂ ಹೋಟೆಲಿನವರೇ ಟಿಕೇಟು ಕೊಟ್ಟಿದ್ದರು. ಹೋಗಿ ಬಂಡಿಯಲ್ಲಿ ಕುಳಿತೆ. ನಾಲ್ಕೆಂಟು ಮಂದಿ ಇತರರೂ ನನ್ನ ಜತೆಗಿದ್ದರು. ಘಂಟೆ ಬಾರಿಸಿತು. ಬಂಡಿ ಆ ಬೆಟ್ಟದ ಗೋಡೆಯನ್ನೇರತೊಡಗಿತು. ತುಸು ದೂರ ದಾರಿಯು ಕಡಿದಾದ

ಮುಗ್ಗುಲುಗಳು, ಪೈನ್‌ವೃಕ್ಷಗಳು, ನೋಟಕ್ಕೆ ಅಡ್ಡವಾದವು. ಮುಂದೆ ನಮ್ಮ ನೋಟ ತೆರವಾಯಿತು. ವಿಶಾಲವಾದ ಕೆಳಗಿನ ಬಯಲೂ, ಎದುರಿನ ಪರ್ವತಾವಳಿಯೂ ಕಾಣಿಸತೊಡಗಿತು. ಅರೆ ತಾಸಿನ ಪಯಣದಲ್ಲಿ ಬೆಟ್ಟದ ಕುಡಿಯನ್ನು ಸಮೀಪಿಸಿದ್ದಾಯಿತು. ಅಲ್ಲಿಂದ ಇಳಿದು ಒಂದೆರಡು ಫರ್ಲಾಂಗ್ ಮುಂದುವರಿದರೆ, ನೋಡುವುದಕ್ಕೆ ಸುಂದರವಾದ ಒಂದು ತಾವು ಸಿಗುತ್ತದೆ. ಅಲ್ಲೊಂದು ಚೆನ್ನಾದ ಹೋಟೆಲಿದೆ. ನೋಡುವವರ ಸಲುವಾಗಿ ಕುರ್ಚಿಗಳನ್ನು ಹಾಕಿದ್ದಾರೆ; ಟೆಲಿಸ್ಕೋಪುಗಳನ್ನಿರಿಸಿದ್ದಾರೆ. ಎದುರಿಗೆ ಕಾಣುವ ಸೊಬಗನ್ನು ಹೇಳುವುದಕ್ಕಿಲ್ಲ. ಕೆಳಗಿನ ಕಣಿವೆಯಲ್ಲಿ ಇಂಟರ್‌ಲಾಕನ್ ನಗರದ ಬೀದಿಗಳು ಕಾಣಿಸುತ್ತವೆ. ದೂರದಲ್ಲಿ ವಿಮಾನ ನಿಲ್ದಾಣದ ಚಟುವಟಿಕೆಗಳು ಕಾಣುತ್ತವೆ. ಎಡಬಲಗಳಲ್ಲಿ ಬಹು ದೂರದ ತನಕ ನೀಲ ಸರೋವರಗಳೆರಡರ ನೋಟ ಇನ್ನಷ್ಟು ಮುಂಕುಗೊಳಿಸುತ್ತದೆ. ನಾಲ್ಕು ಸುತ್ತಲೂ ಬೆಟ್ಟದ ಸೆರಗುಗಳೇ. ಎರಡು ಸೆರಗುಗಳು ಕೂಡುವಲ್ಲಿ, ಹಿಂದಕ್ಕೆ, ದೂರದ ಮೂರನೆಯ ಸೆರಗೊಂದು ಕಾಣಿಸುತ್ತದೆ. ಅದೆಲ್ಲ ಹಿಮಮಯ. ಆಗ ಸಂಜೆಯಾಗಿತ್ತು. ಮುಗಿಲುಗಳ ಎಡೆಯಲ್ಲಿ ಬಿಸಿಲು ಈ ರಮಣೀಯ ಪ್ರದೇಶವನ್ನು ಅರ್ಧವಾಗಿ, ಪೂರ್ಣವಾಗಿ, ಚಿತ್ರ ವಿಚಿತ್ರವಾಗಿ ಬೆಳಗುತ್ತಲಿತ್ತು. ಬೆಟ್ಟದ ಮೇಲಿನ ಈ ಶೀತವಾದ ಹವೆಯಿಂದ ಮನಸ್ಸು ಶಾಂತವಾಗಿತ್ತು. ಎದುರಿನ ನೋಟವು ಇನ್ನಷ್ಟು ಶಾಂತಿಪ್ರೇರಕವಾಗಿತ್ತು. ಒಂದು ತಾಸಿನ ತನಕ ಇಲ್ಲಿ ನಿಂತು, ಅಲೆದು ನೋಡಿ, ತಿರುಗಿ ಬಂದು ರೈಲನ್ನು ಹತ್ತಿ ಹೋಟೆಲನ್ನು ಸೇರಿದೆ. ಮತ್ತೂ ಕತ್ತಲಾಗಿರಲಿಲ್ಲ. ಹಾಗೆಂದು ಊರ ಹಿಂದಿನ ಬೀದಿಯೊಂದರ ಬಳಿ ಹೋಗಿ, ಅಲ್ಲಿದ್ದ ಆಸನವೊಂದರಲ್ಲಿ ಕುಳಿತೆ. ನನ್ನ ಕಣ್ಣೆದುರಿಗೆ ಶಾಂತವಾದ ಬಯಲು ಹಾಸಿತ್ತು. ಅದರ ಆಚೆ ಎರಡೆರಡು ಪರ್ವತಗಳು ಕೈಕುಲುಕಲು ಬಂದಂತೆ ನಿಂತಿದ್ದವು. ಅದರಾಚೆ ಅತ್ಯಂತ ದೂರದಲ್ಲಿ ಅತ್ಯಂತ ಸುಂದರವಾದೊಂದು ಪರ್ವತಶಿಖರ ಕಾಣಿಸುತಿತ್ತು. ಅದರ ಹಿಮಕಿರೀಟ ಮನಮೋಹಕವಾಗಿತ್ತು. ಅದೇನೇ 'ಯಂಗ್ ಫ್ರೌ' ಅಥವಾ 'ತರುಣ ಕನ್ಯೆ'. ಇದು ಆ ಬೆಟ್ಟದ ಶಿಖರಕ್ಕಿಟ್ಟ ಹೆಸರು. ಈ ಶಿಖರದ ತನಕವೂ ಸ್ವಿಸ್ ಸಾಹಸಿಗಳು ರೈಲ್ವೇ ಹಾದಿಯನ್ನು ನಿರ್ಮಿಸಿದ್ದಾರೆ. ಅದನ್ನು ನೋಡುವುದಕ್ಕೇನೇ ಹೊರಟವ ನಾನು.

ಮರುದಿನ ಬೆಳಿಗ್ಗೆ ಈ ನಗರದಿಂದ ಏಳು ಘಂಟೆಗೇನೆ ಪಯಣ

ಹೊರಟೆ. ಅಲ್ಲಿಗೆ ಎರಡೆರಡು ದಾರಿಗಳಿವೆ. ಎರಡು ಬಂಡಿಗಳು ಹೊರಡಲು ನಿಂತಿದ್ದವು. ಪ್ರತಿ ಅರ್ಧ ಘಂಟೆಗೆ ಒಂದೊಂದು ಗಾಡಿ ರಾತ್ರಿಯ ತನಕವೂ ಅಲ್ಲಿಗೆ ಹೋಗಿ ಬರುತ್ತಿರುತ್ತದೆ. ಎಲ್ಲ ಜನರೂ ಅಲ್ಲಿಗೆ ಹೋಗುವವರು. ಹೋಗುವುದಕ್ಕೆ ಎಲ್ಲ ಸೌಕರ್ಯಗಳೂ ಇವೆ. ಆದರೆ ಪ್ರಕೃತಿ ಒಲಿಯದೆ ಹೋದರೆ, ಏನೂ ಕಾಣಿಸದೆ ಮನೆಗೆ ಮರಳಬೇಕಾದೀತು. ಹೆಚ್ಚಾಗಿ ಬಾನಿನಲ್ಲಿ ಮುಗಿಲು ಕವಿದುಕೊಂಡಿದ್ದರೆ, ಅಲ್ಲಿಗೆ ಹೋದವನು ಬರಿಯ ಮುಗಿಲುಗಳನ್ನು ಕಂಡೇ ಮರಳಬೇಕಾಗುತ್ತದೆ. ಆ ದೃಷ್ಟಿಯಿಂದ ನಾನು ಸುದೈವಿ. ನಾನು ಹೋದ ದಿನ ಬೆಳಗಿಂದ ಸಂಜೆಯ ತನಕವೂ ಆಕಾಶ ಶುಭ್ರವಾಗಿಯೇ ಇತ್ತು. ಅದುದರಿಂದ ನನ್ನ ಪ್ರಯಾಣ ತೀರ ಸಫಲವಾಯಿತು.

ನಮ್ಮ ಬಂಡಿಯು ಮೊದಲು ಮೂರು ಮೈಲುಗಳಷ್ಟು ದೂರ ಸಮತಟ್ಟಾದ ಬಯಲಿನಲ್ಲಿ ಹಾದುಹೋಗುತ್ತದೆ. ಅನಂತರ ಅದರ ದಾರಿ ಅಂಕುಡೊಂಕಾದ ಕೊರಕಲು ಮಾರ್ಗ. ಅದರ ಆಚೀಚೆಗೆ ಅತ್ಯುನ್ನತವಾದ ಪರ್ವತದ ಗೋಡೆಗಳು ನಿಂತಿವೆ. ಈ ಕಣಿವೆಯಲ್ಲಿ ಬ್ರೆಂಜರ್ ಸರೋವರವನ್ನು ಸೇರುವ ನದಿಯೊಂದು ಹರಿಯುತ್ತದೆ. ಈ ಬೆಟ್ಟದ ತೊರೆಯು ಬಿಳುಪು ನೀರಿಂದ ತುಂಬಿದ್ದು ಉದ್ದಕ್ಕೂ ನಕ್ಕು, ನಲಿದು, ಶಿಲೆಯ ದಂಡೆಗಳ ನಡುವಣದಿಂದ ಹಾದು ಹೋಗುತ್ತದೆ. ನಾವು ಹೋಗುತ್ತಿರುವ ಕಣಿವೆಯು ಯುಗಮಾನದಲ್ಲಿ ಹಿಮ ನದಿಗಳು ಹರಿದು ಬಂದು, ಬಂಡೆಗಳನ್ನು ಕೊರೆದು ಮಾಡಿದ ಕಣಿವೆಯಾಗಿರಬೇಕು. ಮಗ್ಗುಲಿನ ಪರ್ವತದ ಗೋಡೆಗಳಲ್ಲಿ ಪೈನ್ ವೃಕ್ಷಗಳ ಹಸುರು ಕಾಣಿಸುವುದುಂಟು; ಕಾಣದೆಯೇ ಕೋಟೆಯ ಗೋಡೆಗಳಂತೆಯೇ ಕೆಲವೆಡೆ ಬೋಳಾಗಿರುವುದುಂಟು. ನಮ್ಮ ದಾರಿಯ ಮುಂದಕ್ಕೆ ಈ ಬೆಟ್ಟದ ಕೊರಕಲು ಅತ್ಯಂತ ಭವ್ಯವಾದ ನೋಟವನ್ನು ತೋರುತ್ತದೆ. ಮೊದಲಿನ ಎರಡು ಘಂಟೆಗಳ ಪಯಣದಲ್ಲಿ ಸಾಮಾನ್ಯವಾಗಿ ದಾರಿ ಏರುತ್ತ ಹೋಗುತ್ತದೆ. ನಾವು ಸುಮಾರು ಎಂಟುನೂರು ಅಡಿ ಎತ್ತರವನ್ನೇರಿ 'ಲೌಟರ್ ಬ್ರುನೆನ್' ಎಂಬ ನಿಲ್ದಾಣಕ್ಕೆ ಬರುತ್ತೇವೆ. ಇದು ಆ ಕಣಿವೆಯೊಳಗಣ ಒಂದು ಸಣ್ಣ ನಗರ. ಇಲ್ಲಿ ಬಂಡಿಯನ್ನು ಬದಲಿಸಬೇಕು. ಬಂದ ಬಂಡಿಗಿಂತಲೂ ಹಗುರವಾಗಿರುವ ಕಚ್ಚುಗಾಲಿಗಳುಳ್ಳ ಬಂಡಿಗಳನ್ನೇರಬೇಕು. ಇಲ್ಲಿಂದ ದಾರಿಯು ಹಸುರಾದ ಬೆಟ್ಟಗಳ ಮಗ್ಗುಲನ್ನೇರಿ 'ವೆಂಗರ್ ಆಲ್ಪ್' ಎಂಬಲ್ಲಿಗೆ ಹೋಗುತ್ತದೆ. ದಾರಿಯಲ್ಲಿ ಕಾಡುಗಳಿವೆ;

ಸುರಂಗಗಳಿವೆ. ಸುಂದರವಾದ ಊರುಕೇರಿಗಳಿವೆ. ಯಾವ ಬೆಟ್ಟದ ಸೆರಗನ್ನು ನೋಡಿದರೂ ಅಲ್ಲಿ ಸ್ವಿಸ್ ಜನಗಳ ಒಂದೊಂದು ಮನೆಯಾದರೂ ಇದೆ. ಅಲ್ಲಲ್ಲಿ ವಿಹಾರಿಗಳಿಗಾಗಿ ಹೊಟೇಲುಗಳೂ ಇವೆ. ವೆಂಗರ್ ಆಲ್ಪಿಗೆ ಬರುವಾಗ ನಾವು ಇಂಟರ್‌ಲಾಕನಿನಿಂದ ನಾಲ್ಕೂವರೆ ಸಾವಿರ ಅಡಿ ಎತ್ತರಕ್ಕೆ ಬಂದಂತೆ ಆಗುತ್ತದೆ. ಈ ದಾರಿಯ ಎದುರಿಗೆ ನಾವು ಈಗ ತಾನೇ ಬಿಟ್ಟು ಬಂದ ಕೊರಕಲಿನ ಸಂಪೂರ್ಣ ದೃಶ್ಯ ಕಾಣುತ್ತದೆ. ಅದರ ಮಗ್ಗುಲಿನ ಬೆಟ್ಟಗಳಿಂದ ಸುಂದರ ಜಲಪಾತಗಳು ಕೆಳಕ್ಕೆ ದುಮುಕುವುದು ಕಾಣುತ್ತದೆ. ಕೆಲವು ಕಡೆ ಬರಿದಾದ ಬೆಟ್ಟದ ಸೆರಗು ದೈತ್ಯ ಗೋಪುರಗಳಂತೆ ಕಾಣಿಸುತ್ತವೆ. ಇನ್ನೂ ದೃಷ್ಟಿಯನ್ನು ನಿಡಿದಾಗಿ ಚಾಚಿದರೆ ಸಂಪೂರ್ಣ ಹಿಮ ಕವಿದ ಬೆಟ್ಟಗಳ ಸಾಲು ಕಾಣಿಸುತ್ತದೆ. ನಮ್ಮ ಬಂಡಿಯು ಇನ್ನೂ ಒಂದೂವರೆ ಸಾವಿರ ಅಡಿ ಮೇಲಕ್ಕೇರುವ ತನಕ ನಿಸರ್ಗದಲ್ಲಿ ಹಸುರು ಕಾಣಿಸುತ್ತದೆ. ಆರು ಸಾವಿರದ ಏಳ್ನೂರು ಅಡಿಗಳ ಎತ್ತರದಲ್ಲಿ ಇನ್ನೊಂದು ರೈಲ್ವೇ ನಿಲ್ದಾಣ ಬರುತ್ತದೆ. ಅಲ್ಲಿ ನಾವು ರೈಲನ್ನು ಇನ್ನೊಮ್ಮೆ ಬದಲಿಸಬೇಕು. ಮತ್ತೂ ಹಗುರವಾದ ರೈಲನ್ನು ಹತ್ತಬೇಕು. ಮುಂದಿರುವುದು ಯಾವದ್ಕಾಲ ಹಿಮ ಕವಿದಿರುವಂಥ ನಾಡು. ರೈಲ್ ಬಂಡಿಯನ್ನು ವಿದ್ಯುತ್ತಿನ ಬಲದಿಂದ ಬೆಚ್ಚಗಾಗಿ ಇರಿಸುತ್ತಾರೆ. ಈ ತಾಣದ ಹೆಸರು 'ಶಿಡೆಗ್' ಎಂದು. ಇದೊಂದು ಬೆಟ್ಟದ ಬೆನ್ನು. ಒಂದು ಕಡೆಯಲ್ಲಿ ಯಂಗ್ ಫ್ರೋ ಮೊದಲಾದ ಹಿಮ ಶಿಖರಗಳಿವೆ. ಅವುಗಳಿಂದ ವಿಚಿತ್ರಾಕೃತಿಯಲ್ಲಿ ಕೆಳಗಿಳಿಯುವ ಹಿಮ ಪ್ರವಾಹಗಳಿವೆ; ಮತ್ತೊಂದು ಕಡೆಯಿಂದ ಬಹು ದೂರದ ತನಕ ಚಾಚಿರುವ ಹಸುರಾದ ಕಣಿವೆ ಇದೆ. ದೂರದಲ್ಲಿ ಗ್ರಿಂಡಲ್ ವಾಲ್ಡ ಎಂಬ ನಗರ ಕಾಣಿಸುತ್ತದೆ. ಇಲ್ಲಿಂದ ಬಂಡಿಯನ್ನು ಬದಲಿಸಿ ಕುಳಿತೆವಾದರೆ, ಸುಮಾರು ಒಂದೆರಡು ಮೈಲುಗಳ ದೂರ ಬೆಟ್ಟದ ಮಗ್ಗುಲಿನಲ್ಲೇ ಬಂಡಿ ಸಾಗುತ್ತದೆ. ಮುಂದೆ ಅದು ಬೆಟ್ಟವನ್ನೇ ಹೊಗ್ಗುತ್ತದೆ. ಯಂಗ್ ಫ್ರೋ ರೈಲ್ವೇ ನಿಲ್ದಾಣಕ್ಕೆ ಇನ್ನೂ ಹದಿನ್ನೊಂದು ಮೈಲು ದೂರವಿದೆ; ಅದರ ಉನ್ನತಿ ೧೧,೩೩೩ ಅಡಿ. ಅಷ್ಟು ಎತ್ತರಕ್ಕೂ, ದೂರಕ್ಕೂ, ಬೆಟ್ಟದ ಶಿಲೆಯೊಳಗೆ ಸುರಂಗಮಾರ್ಗವನ್ನು ಕಡಿದು ವಿಸ್ಮಯಕಾರಿ ಸಾಹಸ ತೋರಿಸಿದ್ದಾರೆ. ಆ ಇಳುಕಲು ದಾರಿಯಲ್ಲಿ ಬಂಡಿಯೇರುತ್ತಿರುವಾಗ, ಆಸನಗಳಿಂದ ನಾವು ಜಾರುವಂತಾಗುತ್ತದೆ. ಚಳಿ ತಡೆಯಲಾರದ್ದು. ದಾರಿಯುದ್ದಕ್ಕೂ ಗವಿಯ ಮಾರ್ಗ. ಅಲ್ಲಿಯೂ ಎರಡು

ಮೂರು ಕಡೆಗಳಲ್ಲಿ ಬಂಡಿಯನ್ನು ನಿಲ್ಲಿಸುತ್ತಾರೆ. ಅಂಥಲ್ಲಿ ಮಗ್ಗುಲು ಸುರಂಗ ಗಳನ್ನು ಕೊರೆದು, ಬೆಟ್ಟದ ಗೋಡೆಯನ್ನು ಭೇದಿಸಿ, ಹೊರಗಿನ ನೋಟ ಕಾಣುವಂತೆ ಮಾಡಿದ್ದಾರೆ. ಜನರು ಮುಗ್ಗುರಿಸಿ ಬೀಳದಂತೆ ಗಾಜಿನ ಗೋಡೆ ಗಳಿವೆ. ನೋಟಕ್ಕೆ ಸಹಾಯವಾಗುವಂತೆ ಟೆಲಿಸ್ಕೋಪುಗಳನ್ನಿಟ್ಟಿದ್ದಾರೆ. ಒಂದೆರಡು ಅದ್ಭುತ ಹಿಮನದಿಗಳ ಪ್ರವಾಹದ ಮೇಲೆಯೇ ನಾವು ನಿಂತು ನೋಡುತ್ತೇವೆ-ಅನಿಸುತ್ತದೆ. ಒಟ್ಟು ನಾಲ್ಕು ಘಂಟೆಯ ಪಯಣದಲ್ಲಿ ನಾವು ಯಂಗ್ ಫ್ರೋ ನಿಲ್ದಾಣಕ್ಕೆ ಬಂದು ಸೇರುತ್ತೇವೆ. ಬಂಡಿಯಿಂದಿಳಿದವರೇ ಹೊರಗೆ ಧಾವಿಸಿ ಬರುತ್ತೇವೆ. ನಿಲ್ದಾಣದ ಹೊರ ಮಗ್ಗುಲಿನ ಕಿರಿ ಚಾವಡಿ ಯೊಂದರ ಮೇಲೆ ಹೋಗಿ ನಿಲ್ಲುತ್ತೇವೆ. ಹಿಮದ ಸಾಮ್ರಾಜ್ಯವದು. ಕೊರೆ ಯುವ ಚಳಿ. ಎದುರಿಗೆ ಸಾವಿರ, ಎರಡು ಸಾವಿರ ಅಡಿಗಳ ಆಳದಲ್ಲಿ ನಮ್ಮ ಕಣ್ಮುಂದೆಯೇ ಹಿಮನದಿಯೊಂದು ಹುಟ್ಟಿ, ದಿಗಂತದ ಅಂಚಿನ ತನಕವೂ ಹರಿಯುವುದು ಕಾಣುತ್ತದೆ. ಅದರ ಆಚೀಚೆಲ್ಲ ಕಗ್ಗಲ್ಲಿನ ಬೆಟ್ಟದ ಸಾಲು ಗಳು ಯುಗ ಯುಗಾಂತರದ ಹಿಮವನ್ನೆಲ್ಲ ಹೊತ್ತುಕೊಂಡು ಶುಭ್ರವಸನ ಧಾರಿಗಳಾಗಿ ನಿಂತ ಋಷಿಗಳಂತೆ ಕಾಣುತ್ತವೆ. ಹಿಮದ ಬಿಳಿ ಬಣ್ಣವನ್ನು ಬಿಸಿಲು ಮಿನುಗಿಸಿತೆಂದರೆ ಕಣ್ಣನ್ನು ತೆರೆದು ನೋಡುವುದೂ ಕಷ್ಟ. ನಮ್ಮೆ ದುರಿಗೇ ಕೆಲವು ಪ್ರವಾಸಿಗಳು ವಿಮಾನವನ್ನೇರಿಕೊಂಡು ಅಲ್ಲಿಯ ತನಕ ಬಂದು ಹೋದರು.

ನಾನು ಹೊರಡುವಾಗಲೇ ನನ್ನ ಹೋಟೆಲಿನವರು ಮಧ್ಯಾಹ್ನ ಮತ್ತು ಸಾಯಂಕಾಲದ ಉಪಾಹಾರವನ್ನು ಕಟ್ಟಿ ಕೊಟ್ಟಿದ್ದರು. ಚಳಿಯಲ್ಲಿಯೇ ನಿಂತು ಅದನ್ನು ತಿಂದು ಮುಗಿಸಿದ್ದಾಯಿತು. ಅನಂತರ ಈ ರೈಲ್ವೇ ನಿಲ್ದಾ ಣದ ಮೇಲಕ್ಕೆ ಕಟ್ಟಿರುವ ಉಪಾಹಾರಗೃಹಕ್ಕೆ ಹೋಗಿ ಕಾಫಿಯನ್ನು ತೆಗೆದು ಕೊಂಡೆ. ಹೊಟೇಲು ಸುಮಾರು ನೂರು ಮಂದಿಯ ವಿಶ್ರಾಂತಿಗೆ ಅನು ಕೂಲವಾದ ಸುಂದರ ಸ್ಥಳವಾಗಿತ್ತು. ರಾತ್ರಿಯನ್ನು ಕಳೆಯಲಿಚ್ಛಿಸುವವ ರಿಗೆ ಅಲ್ಲಿ ವಸತಿಯ ಏರ್ಪಾಟೂ ಇದೆ. ನಾನು ಅಲ್ಲಿಂದ ಇತರ ದೃಶ್ಯಗಳನ್ನು ನೋಡುವುದಕ್ಕಾಗಿ ಹೊರಬಿದ್ದೆ. ನಮ್ಮ ಎಡಬಲಗಳಲ್ಲಿ ಎರಡೆರಡು ಸುರಂಗ ಮಾರ್ಗಗಳಿದ್ದವು. ಒಂದು ಮಾರ್ಗದಲ್ಲಿ ತುಸು ಮುಂದುವರಿದು ಹೋದರೆ ಹಿಮದಲ್ಲೇ ಕೊರೆದು ಮಾಡಿದ ದೊಡ್ಡ ಅರಮನೆ ಸಿಗುತ್ತದೆ. ಇದನ್ನು 'ಐಸ್ ಪೇಲೇಸ್' ಎಂದು ಕರೆಯುತ್ತಾರೆ. ನೆಲ,ಗೋಡೆಗಳೆಲ್ಲ ಶೀತಗೊಂಡ

ಹಿಮದಿಂದ ನಿಂತುವು. ನಾಲ್ಕಾರು ಕೊಟಡಿಗಳಿವೆ; ಒಂದು ನರ್ತನ ಮಂದಿರವಿದೆ. ಕಾಲಿಗೆ ಸ್ಕೇಟ್ಸ್ ಕಟ್ಟಿಕೊಂಡು ಆಡುವುದಕ್ಕೆ ಅವಕಾಶವಿದೆ. ನಡೆಯುವಾಗಲೇ ಜಾಗ್ರತೆಯಿಂದ ಹೋಗಬೇಕು. ಇಲ್ಲವಾದರೆ ಕಾಲು ಜಾರುವುದು ನಿಶ್ಚಯ. ನಾನು ಹೋದದ್ದು ಬೇಸಿಗೆಯಾದರೂ ಇಲ್ಲಿನ ಹವೆ —21°F ಶೀತವಾಗಿತ್ತು. ಅದನ್ನೆಲ್ಲ ನೋಡಿ, ಮೊದಲಿನ ತಾವಿಗೆ ಬಂದು, ಇನ್ನೊಂದು ಸುರಂಗ ಮಾರ್ಗವನ್ನು ಹೊಕ್ಕೆ. ಸುಮಾರು ಅರ್ಧ ಮೈಲು ದೂರ ಹೋದರೆ ಮುಂದೊಂದು ಲಿಫ್ಟ್ ಸಿಗುತ್ತದೆ. ಅದರಲ್ಲಿ ಇನ್ನೂ ಆರ್ನೂರು ಏಳ್ನೂರು ಅಡಿ ಏರಿ ಹೋಗಿ ಬೆಟ್ಟದ ಭುಜಕ್ಕೆ ಬಂದು ನಿಲ್ಲುತ್ತೇವೆ. ಕಿರಿದಾದ ಒಂದು ಅಂಗಣವಿದೆ. ಎರಡು ದಿಕ್ಕುಗಳಲ್ಲಿ ಅಗಾಧ ಕಣಿವೆಗಳಿವೆ. ದೃಷ್ಟಿ ಚಾಚುವ ತನಕ ಎರಡೆರಡು ಹಿಮನದಿಗಳು ಸಾಗಿ ಸರಿಯುವುದು ಕಾಣುತ್ತದೆ. ದೂರದಲ್ಲಿ ಆಲ್ಪ್ಸ್ ಪರ್ವತ ಶ್ರೇಣಿಯ ಹಲವಾರು ಶಿಖರಗಳು ಕಾಣಿಸುತ್ತವೆ. ಅವುಗಳ ರಮಣೀಯತೆಯನ್ನು ಹೇಳಿತೀರದು. ನಾವು ನಿಂತ ತಾವೇ ತುಸು ಇಳಿದು, ಒಮ್ಮೆಗೇ ಏರಿ, ಕಡಿದಾದ ಪರ್ವತ ಶಿಖರವಾಗುತ್ತದೆ.ಅದೇನೇ ಯುಂಗ್ ಫ್ರೋ. ಅದರ ಉನ್ನತಿ 13,642 ಅಡಿ. ಈ ಗಿರಿ ಶೃಂಗದ ನೋಟ ಎಷ್ಟು ಭವ್ಯವೋ ಅಷ್ಟು ಭಯಾನಕವೂ ಆಗಿ ಕಾಣಿಸುತ್ತದೆ. ಅದರದ್ದು ಒಂದು ಬಗೆಯ ದೈತ್ಯ ಸೌಂದರ್ಯವೆನ್ನಬೇಕು. ಮಧ್ಯಾಹ್ನದ ಬಿಸಿಲು ಈ ಗಿರಿ ಶೃಂಗ, ಕಣಿವೆ, ಹಿಮನದಿಗಳನ್ನು ಬೆಳಗುವಾಗ ಪ್ರತಿಫಲಿಸುವ ಪ್ರಕಾಶಕ್ಕೆ ಎಲ್ಲಿಲ್ಲದ ತೀಕ್ಷ್ಣತೆಯಿದೆ; ಸೊಬಗಿದೆ. ಕಣ್ಣನ್ನು ಯಾವ ಕಡೆಗೆ ಹೊರಳಿಸಿದರೂ ಒಂದೊಂದು ಬಗೆಯ ಭವ್ಯ ನೋಟ ನಮ್ಮ ಉಸಿರನ್ನು ತಡೆದು ಹಿಡಿಯುತ್ತದೆ.

ಸ್ವಿಜರ್‌ಲೇಂಡಿನಲ್ಲಿ ಇಂಥ ನೋಟಗಳೆಷ್ಟಿಲ್ಲ! ಅಲ್ಲಿನ ಜನ ಇವುಗಳ ಸದುಪಯೋಗ ಮಾಡಿಕೊಂಡಿದ್ದಾರೆ. ರಮಣೀಯವಾದ ಪ್ರತಿಯೊಂದು ನೋಟ ಕಾಣುವಲ್ಲಿಗೂ ವಿಧವಿಧದ ರೈಲುದಾರಿ ಹಾಕಿದ್ದಾರೆ. ಅದು ಅಸಾಧ್ಯವಾದಲ್ಲಿ ಅಂತರಿಕ್ಷದಲ್ಲಿ ಉಕ್ಕಿನ ಮಿಣಿಗಳನ್ನು ಬಿಗಿದು, ಅವುಗಳಲ್ಲಿ ತೂಗಿ ಸರಿಯುವ ಬಂಡಿಗಳನ್ನಿರಿಸಿದ್ದಾರೆ. ನಿಸರ್ಗಪ್ರೇಮಿಯು ಯಾವೆಡೆಗೆ ಹೋಗಬೇಕೆಂದು ಬಯಸುತ್ತಾನೋ ಅಲ್ಲೆಲ್ಲ ಉತ್ತಮ ತೆರನ ವಸತಿಗೃಹಗಳಿವೆ. ಇದನ್ನು ಕಂಡಾಗ ಇದಕ್ಕಿಂತ ಉನ್ನತವಾದ, ಹಿರಿದಾದ ನಮ್ಮ ಹಿಮಾಲಯದ ನೆನಪಾಗದೆ ಹೋಗದು. ಅದರ ಸೌಂದರ್ಯವನ್ನು ನಮ್ಮ

ಜನಗಳಿಗೆ ಒದಗಿಸಲು ನಾವೇನು ಮಾಡಿದ್ದೇವೆ—ಎಂದು ಪ್ರಶ್ನಿಸಿದರೆ ಮೌನವೇ ಉತ್ತರ. ಹಿಮಶೃಂಗಗಳ ನೋಟವು ದೂರದಲ್ಲಿರುವಾಗ ಒಂದು ತೆರ. ಸಮೀಪವಿರುವಾಗ ಬೇರೆಯೇ ತೆರ. ಸಮೀಪದಿಂದ ನೋಡುವ ಆಸೆಯುಳ್ಳ ಭಾರತೀಯನಿಗೆ ಅಂಥ ದಿವ್ಯ ಹಿಮಾಲಯವಿದ್ದೂ ಇಲ್ಲದಂತಾಗಿದೆ. ಅಲ್ಲಿನ ಉನ್ನತ ಶಿಖರಗಳನ್ನು ಗೆದ್ದು ಬರುವುದಕ್ಕೆ ಸಾಹಸ ಮಾಡುವ ಜನಗಳೂ ಪಾಶ್ಚಾತ್ಯರೇ ಆಗಿದ್ದಾರೆ.

ಈ ಸ್ವಪ್ನಲೋಕದಲ್ಲಿ ಎರಡು ಮೂರು ತಾಸು ಕಾಲಕಳೆದು ತಿರುಗಿ ರೈಲ್ ಬಂಡಿಯನ್ನೇರಿ ಹೊರಟದ್ದಾಯಿತು.ಬಂಡಿಯು ಸಾಗಿ ಬಂದು ಶಿಡೆಗ್ ನಿಲ್ದಾಣವನ್ನು ಸೇರಿತು. ಆಗ ನಮ್ಮ ಸಲುವಾಗಿಯೋ ಎಂಬಂತೆ ಮುಗಿಲುಗಳು ಯಂಗ್ ಫ್ರೋ ಶಿಖರದ ಮೇಲೆ ಕುಣಿದಾಡತೊಡಗಿದವು. ಹಿಮದ ಜಾಜ್ವಲ್ಯ ಪ್ರಕಾಶವನ್ನು ಕುಗ್ಗಿಸಿ, ಕಣ್ಣಿಗೆ ತಂಪುಂಟುಮಾಡಿಕೊಟ್ಟವು. ಯಂಗ್ ಫ್ರೋ ತೀರ ಸಮೀಪಕ್ಕಿರುವಂತೆ ಕಾಣಿಸುತ್ತದೆ. ಅದರ ಕಡಿದಾದ ಕಪ್ಪು ಶಿಲೆಯ ಗೋಡೆಗಳಿಂದ ಹಿಮ ಕೆಳಕ್ಕೆ ತೂಗಿ ನಿಂತಿರುವುದು ಕಾಣುತ್ತದೆ. ಇಳಿಯಲೆತ್ನಿಸುವ ಕಿರಿಯ ಹಿಮ ಪ್ರವಾಹಗಳು ಬಂಡೆಗಳನ್ನು ಕೊರೆದು ನುಣುಪು ಮಾಡಿದ ನೋಟ ಕಾಣುತ್ತದೆ. ಕೆಳಗಿನ ಕಣಿವೆಯೊಳಗೆ ಹರಿಯುವ ಹಿಮನದಿಯ ಹೆಪ್ಪುಗಟ್ಟಿದ ತೆರೆಗಳು, ಗಾಳಿಗೆ ತೇಲಿ, ಬಳಿಕ ಒಮ್ಮೆಗೇ ಸ್ಥಿಮಿತಗೊಂಡ ಜಾಲರಿಗಳಂತೆ ಕಾಣಿಸುತ್ತವೆ. ಕೆಲವು ಕಡೆಗಳಲ್ಲಿ ಹಿಮ ಶೀತವಲಯದಿಂದ ಇಳಿದು, ಕೆಳಗಿನ ಹವೆಯ ಉಷ್ಣದಿಂದ ನೀರನ್ನು ತುಟುಕಿಸುವುದು ಕಾಣುತ್ತದೆ. ಶಿಡೆಗ್ ನಿಂದ ಬೇರೊಂದು ಬಂಡಿಯಲ್ಲಿ ಕಳಿತು ಕೆಳಗಣ ಕಣಿವೆಯಲ್ಲಿರುವ ಲೌಟರ್ ಬ್ರುನೆನ್ ನಿಲ್ದಾಣಕ್ಕೆ ಬಂದೆವು. ಅದೇನೋ ಮೊದಲು ಹೋದ ಹಾದಿಯಾದರೂ, ಒಮ್ಮೆ ಮರೆತ ನೋಟವೆಲ್ಲ ತಿರುಗಿ ಕಣ್ಣಿಗೆ ಕಾಣಿಸುವಾಗ, ಇನ್ನೊಮ್ಮೆ ಸ್ವಪ್ನಸುಖ ಒದಗುತ್ತದೆ. ಗುಡ್ಡದ ಸೆರಗಿನಲ್ಲೇ ಅಲ್ಲಲ್ಲಿ ಊರ ಜನ ಕೆಲಸಮಾಡುತ್ತಿರುವುದು, ಅಲೆದಾಡುತ್ತಿರುವುದು ಆ ಬೆಟ್ಟಗಳ ಹಸುರಿಗೊಂದು ಚೆಲುವನ್ನು ಕೊಡುತ್ತವೆ. ಲೌಟರ್ ಬ್ರುನೆನ್ ನಿಂದ ಮುಂದೆ ರೈಲು ವೇಗವಾಗಿ ಸಾಗಿ ಮೊದಲು ಬಂದ ಹಾದಿಯಲ್ಲೇ ಇಂಟರ್‌ಲಾಕನ್ ನಗರ ಸೇರಿತು. ಹೋಟೆಲಿಗೆ ಮರಳಿದವನೇ ಇನ್ನೊಮ್ಮೆ ಹೊರಬಿದ್ದೆ. ಇಲ್ಲಿನ ಎರಡು ಸರೋವರಗಳನ್ನು ಕೂಡಿಸುವ ಕಾಲುವೆಯ ದಂಡೆಯಲ್ಲಿ ಕುಳಿತು, ಹರಿಯುವ ನೀರನ್ನು ನೋಡುತ್ತ

ವೇಳೆ ಕಳೆದೆ. ಸಂಜೆ ಸಮೀಪಿಸಿತು. ತಿರುಗಿ ಊರಿನ ಬಯಲು ಭೂಮಿಗೆ ಬಂದು ಯಂಗ್ ಫ್ರೋ ಶಿಖರದ ಕೊನೆಯ ದರ್ಶನ ಪಡೆದು ಮರಳಿದೆ.

ನಾನು ಈ ಊರಲ್ಲಿ ಕಳೆದುದು ಎರಡು ರಾತ್ರಿ ಮಾತ್ರ. ಹೋದ ಗಳಿಗೆಯಿಂದ ಬರುವ ತನಕ ಹೋಟೆಲಿನ ಕೆಲಸಗಾರರು ನನ್ನನ್ನು ಕಂಡಾಗಲೆಲ್ಲ ವಂದಿಸುತಿದ್ದರು. "ಊಟವಾಯಿತೇ, ಉಪಾಹಾರ ವಾಯಿತೇ, ಚೆನ್ನಾಗಿ ನಿದ್ದೆಮಾಡಿದಿರಾ ,ಯಂಗ್‌ಫ್ರೋ ನೋಡಿದಿರಾ?"ಎಂದು ಮೊದಲಾಗಿ ಕೇಳುತ್ತಿದ್ದರು. ಇದು ಹೊಟೇಲಲ್ಲ, ಮನೆ-ಎಂಬಷ್ಟು ಹಿತಕರವಾಗಿತ್ತು. ಇಲ್ಲಿನ ಜನ ನಮಗೆ ಕಲ್ಪಿಸುವ ಊಟ, ಉಪಚಾರಗಳಿಗಾಗಿ ಹಣ ಪಡೆಯುತ್ತಾರೆ; ನಿಜ. ಆದರೆ ತಾವು ಬರಿಯ ವ್ಯಾಪಾರಕ್ಕಾಗಿ ಕುಳಿತವರು ಎಂಬ ಭಾವನೆಯನ್ನು ಎಂದಿಗೂ ಹುಟ್ಟಿಸುವುದಿಲ್ಲ.

ಮೂರನೆಯ ದಿನ ಬೆಳಿಗ್ಗೆ ಏಳು ಘಂಟೆಗೇನೇ ಈ ನಗರದಿಂದ ಇಟಲಿಯ ಮಿಲಾನ್ ನಗರಕ್ಕೆ ಪಯಣ ಹೊರಟೆ. ಪಯಣದ ಮೊದಲಿನ ಭಾಗ ಲೂಸಾನಿಗೆ. ದಾರಿಯುದ್ದಕ್ಕೂ ಹಿಂದೆ ನೋಡಿದ ದೃಶ್ಯಗಳನ್ನೇ ನೋಡುತ್ತ ಆ ನಗರವನ್ನು ಸೇರಿದ ಮೇಲೆ, ಅಂತರ್ರಾಷ್ಟ್ರೀಯ ಬಂಡಿಯೊಂದರಲ್ಲಿ ಕುಳಿತು ಮಿಲಾನಿಗೆ ಹೊರಟೆ. ಮೊದಲಿನ ಮೂರು ಘಂಟೆಗಳ ಪಯಣವೆಂಬುದು ಸುರಂಗ ಮಾರ್ಗಗಳಿಂದ ತುಂಬಿದ ದಾರಿ. ಅದರಲ್ಲಿಯೂ ಮೊದಲು ತಾಸು ಕಳೆದ ಬಳಿಕ ನಮ್ಮ ರೈಲು ಹಾದಿ ಗೊಟಾರ್ಡ ಕಣಿವೆಯ ಮೂಲಕ ಇಟಲಿಗೆ ಇಳಿಯುತ್ತದೆ. ಇದು ಅಗಲಕಿರಿದಾದ ಕಣಿವೆ. ಇಕ್ಕಡೆಗಳಲ್ಲೂ ಅತ್ಯುನ್ನತವಾಗಿ ಮೇಲಕ್ಕೇಳುವ ವಿಚಿತ್ರಾಕಾರದ ಪರ್ವತ ಶ್ರೇಣಿಗಳಿವೆ. ಪೈನ್ ಕಾಡುಗಳಿಂದ ತುಂಬಿದ ಬೆಟ್ಟದ ಮಗ್ಗುಲು, ಹಿಮುಕವಿದ ಬೆಟ್ಟದ ಕುಡಿಗಳು ಒಂದೇ ಸಮನೆ ಕಣ್ಮುಂದೆ ಹಾಯುತ್ತವೆ. ಕಣಿವೆಯ ಆಳದಲ್ಲಿ ವಿಚಿತ್ರವೇಗದಿಂದ, ವಿಚಿತ್ರ ಆಕಾರಗಳಿಂದ, ಬೆಟ್ಟದ ತೊರೆಗಳು ವೇಗವಾಗಿ ಸರಿಯುತ್ತವೆ. ರೈಲು ಒಂದು ಬೆಟ್ಟದ ಮೂಲಕ ಕಣಿವೆಯ ಇನ್ನೊಂದು ಮಗ್ಗುಲಿಗೆ ಬಂತೆಂದರೆ, ಅಂಥದೇ ಇನ್ನೊಂದು ವಿಚಿತ್ರ ನೋಟ. ಕಣ್ಣು ಕೀಳುವುದಕ್ಕೆ ಮನಸ್ಸು ಬರುವುದಿಲ್ಲ. ಎಷ್ಟು ನೋಡಿದರೂ ದಣಿವಾಗುವುದಿಲ್ಲ. ನಮ್ಮ ರೈಲು ಸುರಂಗದಿಂದ ಹೊರಗೆ ಬರುವಾಗ ಕಣ್ಣಿಟ್ಟು ನೋಡಿದರೆ, ಮತ್ತೆರಡು ಪರ್ವತಗಳಿಂದ ಇತರ ರೈಲುಗಳು ಸುರಂಗಮಾರ್ಗದಿಂದ ಹೊರಬರುವುದು ಕಾಣುತ್ತದೆ. ಈ ನಾಡಿನವರು ದೂರವನ್ನೂ ಪರ್ವತ

ಗಳನ್ನೂ ಶ್ರಮವನ್ನೂ ಧನವನ್ನೂ ಲೆಕ್ಕಿಸದೆಯೆ ನಾಡಿನ ಪ್ರತಿಯೊಂದು ಮೂಲೆಗೂ ರೈಲು ಹಾಕಿದ ಸಾಹಸ ಅದ್ಭುತವಾದುದೇ ಸರಿ. ಈ ಕಣಿವೆಯ ಭಾಗವೆಲ್ಲ ಬಹು ಕಡಿಮೆ ಜನ ವಸತಿಯುಳ್ಳ ಪ್ರದೇಶವಾಗಿದೆ. ಅಲ್ಲಲ್ಲಿ ಒಂದೊಂದು ಜನವಸತಿಯನ್ನು ಕಾಣಬಹುದು. ಕಣಿವೆಯುದ್ದಕ್ಕೂ ಸಾಗುವ ಡಾಮರು ರಸ್ತೆಗಳನ್ನು ಕಾಣಬಹುದು. ಬೆಟ್ಟದ ಮಗ್ಗುಲುಗಳಿಂದ ಧುಮುಕುವ ಸಣ್ಣ ದೊಡ್ಡ ಅಬ್ಬಿಗಳನೇಕವನ್ನು ಕಾಣಬಹುದು. ಎಂಥ ಬೆಟ್ಟದ ಅಬ್ಬಿಯನ್ನೂ ಅವರು ಹಾಳು ಮಾಡಿದವರಲ್ಲ. ಪ್ರತಿಯೊಂದು ಕಣಿವೆಯ ಮೂಲೆಯಲ್ಲೂ, ಕೊರಕಲಿನ ಸಂದಿನಲ್ಲೂ ಆರೆಂಟು ಇಂಚು ದಪ್ಪದ ನಳಿಗೆಗಳನ್ನು ಬೆಟ್ಟದಿಂದ ಇಳಿಸಿ, ವಿದ್ಯುತ್ತನ್ನು ದೊರಕಿಸುತ್ತಿದ್ದಾರೆ. ನಾರ್ವೆ ದೇಶದವರಂತೆ ಈ ದೇಶದವರು ನಾಡಿನ ಜಲಶಕ್ತಿಯನ್ನೆಲ್ಲ ಸಾರ್ಥಕಪಡಿಸಿಕೊಂಡಿದ್ದಾರೆ.

ಮಧ್ಯಾಹ್ನ ಒಂದು ಘಂಟೆಯಾಗುತ್ತ ಬಂದಿತು. ಕಣಿವೆಯಲ್ಲಿ ಬಹು ದೂರ ಸಾಗಿದ್ದೇವೆ; ಇಳಿಯುತ್ತ ಬಂದಿದ್ದೇವೆ. ಪೈನ್ ವೃಕ್ಷಗಳು ಕ್ರಮೇಣ ಮರೆಯಾಗುತ್ತ ಬಂದುವು. ಕುರುಚಲು ಕಾಡುಗಳುಳ್ಳ ಪ್ರದೇಶಗಳು ಬರತೊಡಗಿದುವು. ಸಸ್ಯ ಸಂಪತ್ತು ಕಡಿಮೆಯಾಗಿ, ಈ ಪರ್ವತ ಪ್ರದೇಶವು ಅಷ್ಟೊಂದು ಸುಖಕರವಲ್ಲದ ನೋಟವನ್ನು ತೋರತೊಡಗುತ್ತದೆ. ಅಲ್ಲಿಗೆ ಇಟಲಿಯ ಗಡಿನಾಡು ಬರುತ್ತದೆ. ಸ್ವಿಜರ್‌ಲೇಂಡಿನ ಕೊನೆಯ ನಿಲ್ದಾಣವಾದ ಲುಗಾನೋ ಬರುತ್ತದೆ. ವಿಚಿತ್ರಾಕಾರದ ಬರಡು ಬೆಟ್ಟಗಳ ಎಡೆಯಲ್ಲಿ ಹಿಮದ ನೀರಿಂದ ಹುಟ್ಟಿದ ಸರೋವರ ಪ್ರದೇಶದಲ್ಲಿ ಲುಗಾನ್ ನಗರ ಬೆಳೆದುಬಂದಿದೆ. ಅದೂ ಒಂದು ಸುಂದರ ವಿಶ್ರಾಂತಿ ಧಾಮ. ಇಲ್ಲಿನ ಹವೆ ತುಸು ಉಷ್ಣ. ಈ ಸರೋವರದಲ್ಲಿ ವಿನೋದಕ್ಕಾಗಿ ಬರುವ ಜನ, ತೇಲುವುದಕ್ಕೆ, ಈಜುವುದಕ್ಕೆ, ಬರುವ ಜನ ಅಸಂಖ್ಯಾತ.

ದಾರಿ ಇದರಂತೆಯೇ ಮುಂದೆ ಸರಿಯುತ್ತದೆ. ಇದೇ ಬಗೆಯ ಬೆಟ್ಟಗಳು ಇದಿರಾಗುತ್ತವೆ. ದಾರಿಯ ಮಗ್ಗುಲಿನ ಮನೆಗಳ ಚೆಲುವಿನಲ್ಲಿ ಅಂತರವಾಗುತ್ತದೆ. ಚೆಲುವಿಲ್ಲದ ಅನೇಕ ಮನೆಮಠಗಳು ಕಾಣಸಿಗುತ್ತವೆ. ಬೆಳೆ ತುಂಬಿದ ಬಯಲುಗಳು ಕಾಣಸಿಗುತ್ತವೆ. ಇನ್ನೊಂದು ಸರೋವರ ಧಾಮ ಇದಿರಾಗುತ್ತದೆ. ಇದು ಇಟಲಿಗೆ ಸೇರಿದ ಸರೋವರ–ಲೇಕ್ ಕೋಮೋ. ಅಲ್ಲಿಂದ ಮುಂದುವರಿದೆವೆಂದರೆ ಸಮತಟ್ಟಾದ ಭೂಮಿಯಲ್ಲಿ ರೈಲು ಓಡ

ತೊಡಗುತ್ತದೆ. ನೆಲದಲ್ಲಿ ಬೆಳೆಯು ತುಂಬಿಕೊಂಡಿದ್ದರೂ, ಅಷ್ಟೊಂದು ಸಾರವತ್ತಾದದ್ದಲ್ಲ. ಗಿಡಮರಗಳಲ್ಲಿ ವೈವಿಧ್ಯ ತೋರುತ್ತದೆ. ದಾರಿಯಲ್ಲಿ ಸಿಗುವ ಪೇಟೆ ಪಟ್ಟಣಗಳು ಅಷ್ಟೊಂದು ಆಕರ್ಷಕವಾಗಿ ಕಾಣಿಸುವುದಿಲ್ಲ. ಬಂದು ಹೋಗುವ ಜನಗಳು ಅಷ್ಟೊಂದು ಶ್ರೀಮಂತಿಕೆಯುವರಾಗಿಯೂ ಕಾಣುವುದಿಲ್ಲ. ಸಂಜೆ ಸುಮಾರು ಐದು ತಾಸು ಹೊತ್ತಿಗೆ ಮಿಲಾನ್ ನಗರ ಬಂದೇ ಬಂದಿತು. ಈ ಬಂಡಿಯಲ್ಲಿ ನನ್ನ ಜತೆಯಲ್ಲೇ ಪ್ರವಾಸ ಮಾಡಿದಂಥ ಒಬ್ಬ ಡೇನಿಷ್ ಮಿತ್ರನ ಗೆಳೆತನ ನನಗಾಗಿತ್ತು. ಆತ ಡೆನ್‌ಮಾರ್ಕಿನಲ್ಲಿ ಪತ್ರಿಕೋದ್ಯೋಗಿ; ಯುಗೋಸ್ಲಾವಿಯಕ್ಕೆ ಹೊರಟವನು. ನಾವಿಬ್ಬರೂ ಕೂಡಿ ಮಿಲಾನ್ ಮತ್ತು ವೇನಿಸ್ ನಗರಗಳನ್ನು ನೋಡಬೇಕೆಂದು ನಿಶ್ಚಯ ಮಾಡಿದ್ದೆವು. ಆತ ಬಂಡಿಯಲ್ಲಿಯೇ ನನಗೆ ಎಚ್ಚರಕೊಟ್ಟ: "ನಾವು ಇಟೆಲಿಗೆ ಬಂದಿದ್ದೇವೆ. ಇದು ಇತರ ದೇಶಗಳಂತಲ್ಲ; ಕಿಸೆ ಮತ್ತು ಪೆಟ್ಟಿಗೆಯ ವಿಷಯದಲ್ಲಿ ಸ್ವಲ್ಪ ಹೆಚ್ಚಿನ ಗಮನಬೇಕು" ಎಂದು ಹೇಳಿದ. ನಿಜ, ಇಟೆಲಿಯ ನೆಲವನ್ನು ತುಳಿದಾಗಲೇ-'ಇದು ಬಡ ದೇಶ. ಬಡತನಕ್ಕೆ ಅಂಟಿಕೊಂಡಿರುವ ಮಾನವೀ ಬೇನೆಗಳೆಲ್ಲ ಇಲ್ಲಿದ್ದೇ ತೀರಬೇಕು' ಎಂದು ನನಗೂ ಅನಿಸಿತು.

## ೧೯ ಇಟಲಿಯ ವಿಹಂಗಮ ನೋಟ

ನಾನು ಈ ತನಕ ನೋಡಿ ಬಂದ ರಾಷ್ಟ್ರಗಳೆಲ್ಲ ಒಂದು ತೆರನಾದರೆ ಇಟಲಿಯೋ ಬೇರೊಂದು ತೆರ. ಇಟಲಿ, ಸ್ಪೈನ್, ಬಾಲ್ಕಾನ್ ದೇಶಗಳೆಲ್ಲ ಐಬೀರಿಯನ್ ಜನಾಂಗದ ಹುಟ್ಟು, ಬೆಳೆಗಳ ಉದ್ಯಾನವಾಗಿತ್ತು. ಇಟಲಿ ದೇಶದ ಬೇಸಿಗೆಯೆಂಬುದು ನಮ್ಮೂರಿನ ಬೇಸಿಗೆಯಂತೆ ಸಾಕೋ ಸಾಕೆನಿಸುತ್ತದೆ. ನಾನಿದ್ದ ಹದಿನೆರಡು ದಿನಗಳಲ್ಲಿ ಸೂರ್ಯನ ತಾಪ 90° Fರಿಂದ 100° Fರ ತನಕ ಓಲಾಡುತಿತ್ತು. ಉಣ್ಣೆಯ ಬಟ್ಟೆ ಬೇಡ. ಹತ್ತಿ ಬಟ್ಟೆಗಳೂ ಹೆಚ್ಚು—ಎನ್ನುವ ಸ್ಥಿತಿ ಬೇಸಗೆಯ ದಿನಗಳಲ್ಲಿ ಬರುತ್ತದೆ. ಭೂಮಧ್ಯ ಸಮುದ್ರದ ಈ ದೇಶ, ಕಡಲಿನಲ್ಲಿ ಚಾಚಿದ ಒಬ್ಬ ಮನುಷ್ಯನ ಕಾಲಿನ ಆಕಾರವಾಗಿದೆ. ಪಾದದ ತುದಿಯಲ್ಲಿ ಚಂಡೊಂದು ಕುಳಿತ ಹಾಗೆ ಸಿಸಿಲಿ ದ್ವೀಪವಿದೆ. ತೀರ ಉತ್ತರದ ಆಲ್ಪ್ಸ ಸರಹದ್ದನ್ನು ಬಿಟ್ಟರೆ ಉಳಿದೆಡೆಗಳಲ್ಲಿ ಚಳಿಗಾಲದಲ್ಲಿ ಹಿಮ ಬೀಳುವುದಿಲ್ಲ. ಬದಲು ಮಳೆ ಬೀಳುತ್ತದೆ. ರೋಮ್ ನಗರದಲ್ಲಿದ್ದಾಗ ನನಗೆ ಈ ಮಳೆಯ ವಿಚಿತ್ರವಾದೊಂದು ಅನುಭವವಾಯಿತು. ಮೂರು ನಾಲ್ಕು ದಿನಗಳ ತನಕ ಆಫ್ರಿಕದ ಮರುಭೂಮಿಯ ಬಿಸಿ ಗಾಳಿಬೀಸಿ, ದೇಶಕ್ಕೆ ದೇಶವನ್ನೇ ಸುಡುತಿತ್ತು. ಬಿಸಿಲಿಗೆ ಸತ್ತವರೂ ಇದ್ದರು. ಒಂದು ದಿನ ನಾನು ರೋಮ್ ನಗರದ ಥೋಮಸ್ ಕುಕ್ ಕಂಪೆನಿಯವರ ಆಫೀಸಿಗೆ ಹೋಗಿದ್ದೆ. ಬೆಳಗಿನ ಹತ್ತು ಘಂಟೆಯಾಗಿರಬೇಕು—ಒಮ್ಮಿಂದೊಮ್ಮೆ ಬಾನಲ್ಲಿ ಕಾರ್ಮುಗಿಲು ಕವಿಯಿತು. ಬಿರುಗಾಳಿ ಬೀಸಿತು; ಜಡಿಮಳೆ ಹೊಡೆಯಲಾರಂಭಿಸಿತು. ಅರ್ಧ ತಾಸು ಬರಿಯ ಮಳೆಯೇ ಬೀಳುತಿತ್ತು. ಅನಂತರ ಮಳೆಯ ಜತೆಗೆ ಆಲಿಕಲ್ಲುಗಳ ಹೊಡೆತ ತೊಡಗಿತು. ಗೋಲಿಗಿಂತಲೂ ಗಾತ್ರವಾದ ಹಿಮದ ತುಂಡುಗಳು, ಉದ್ರೇಕಗೊಂಡ ಬಾನಿನಿಂದ, ನೆಲದ ಮೇಲೆ ಉದುರತೊಡಗಿದುವು. ಮಳೆಯನ್ನು ಅಲಕ್ಷಿಸಿದ ಜನಗಳು ಕೂಡ ಆಲಿಕಲ್ಲಿನ ಏಟಿಗೆ ಈಡಲ್ಲ. ಜನರೆಲ್ಲ ಮಾಡಿನ ಆಶ್ರಯವನ್ನು ಹೊಂದಲೇ ಬೇಕಾಯಿತು. ನೆಲವೆಲ್ಲ ದೊಡ್ಡ ದೊಡ್ಡ ಹಿಮದ ತುಣುಕುಗಳಿಂದ ಹತ್ತಿಯ ಹಾಸಿಗೆಯಂತಾಯಿತು. ಒಂದು ಘಂಟೆಯೆಲ್ಲ ಹೀಗೆ ಆಲಿಕಲ್ಲು ಬಡಿದು, ಹವೆಯು ಶೀತಗೊಂಡಿತು. ಆ ದಿನ ರೋಮ್, ಮಿಲಾನ್ ಮೊದಲಾದಲ್ಲಿ ಆಲಿಕಲ್ಲಿನ ಪೆಟ್ಟಿಗೆ ಸತ್ತ ಕುರಿಗಳೆಷ್ಟೋ!

ಇಟಲಿಯ ಉತ್ತರ ಭಾಗವು ಆಲ್ಪ್ಸ್ ಬೆಟ್ಟಗಳಿಗೆ ತಾಗಿಕೊಂಡಿರುವ ಸುಂದರವಾದ ಪ್ರಾಂತ್ಯ. ಕೆಳಗಡೆ ಗಂಗಾ, ಸಿಂಧೂ ಬಯಲುಗಳಿರುವಂತೆ-ಕಡಲನ್ನು ಸೇರುವ ಬಯಲು ಭೂಮಿಯಿದೆ. ಇಟಲಿಯ ನಡುವಣದಿಂದ, ಉತ್ತರ ದಕ್ಷಿಣಕ್ಕೆ, ದೀರ್ಘವಾದ ಎಪಿನ್ನೈನ್ ಪರ್ವತಾವಳಿ ಹಾದುಹೋಗುತ್ತದೆ. ಈ ಪರ್ವತಗಳ ದಕ್ಷಿಣ ಸೆರಗು ಸಿಸಿಲಿಗೂ ಚಾಚಿಕೊಂಡಿದೆ. ವಿಸುವಿಯಸ್, ಸ್ಟ್ರಂಬೋಲಿ, ಎಟ್ನಾ ಮೊದಲಾದ ಅಗ್ನಿ ಪರ್ವತಗಳು ಇಲ್ಲಿವೆ. ಅವು ಎಂದಿಗೂ ಜೀವಂತವಾಗಿರುವ ಜ್ವಾಲಾಮುಖಿಗಳು. ದಕ್ಷಿಣ ಭಾಗದ ನೆಲದಲ್ಲಿ, ಲಾವಾ ಹೆಪ್ಪುಗಟ್ಟಿ ಉಂಟಾದ ಬಂಡೆಗಳೇ ಅಧಿಕ. ತುಂಬ ಕಗ್ಗ ನೆಲ; ಒರಟಾದ ಶಿಲೆಗಳು. ಕಾಣುವವರ ಕಣ್ಣಿಗೆ-ಇಲ್ಲೇನು ಬೆಳೆದೀತು, ಮನುಷ್ಯ ಹೇಗೆ ಬದುಕಿಕೊಂಡಾನು — ಎಂಬ ನಿರಾಶೆಯುಂಟಾಗಬೇಕು. ಒಟ್ಟು ದೇಶದಲ್ಲಿ ಬಯಲಿನ ಭಾಗ ಕಡಿಮೆ; ಪರ್ವತಗಳೇ ಅಧಿಕ. ಆದರೆ ಯುರೋಪಿನಂತೆಯೆ ಬೀಳು ನೆಲವಿಲ್ಲ. ಇಟಲಿಯ ವಿಸ್ತಾರ 120,000 ಚದರ ಮೈಲು; ಜನಸಂಖ್ಯೆ ಸುಮಾರು 46 ಮಿಲಿಯ. ಐತಿಹಾಸಿಕ ಕಾಲದಿಂದ, ಅದರ ಪೂರ್ವದಿಂದ, ಮಾನವ ಕುಲವು ಇಲ್ಲಿ ತನ್ನ ಸಂಸ್ಕೃತಿಯ ಲೀಲಾ ಜಾಲವನ್ನೆಲ್ಲ ನಡೆಸಿಕೊಂಡು ಬಂದಿದೆ. ಇಟ್ರೂರಿಯನರು, ರೋಮನರು ಅವರಲ್ಲಿ ಮೊದಲಿಗರು. ರೋಮನರಂತು ಎರಡು ಸಾವಿರ ವರ್ಷಗಳ ಹಿಂದೆಯೇ ಯುರೋಪನ್ನು, ಈಜಿಪ್ಟನ್ನು ಆಳಿ, ಮೆರೆದು, ಸಾಮ್ರಾಜ್ಯ ಕಟ್ಟಿದವರು. ಸೀಝರೋ, ಎಡ್ರಿಯಾನ್, ಜೂಲಿಯಸ್ ಸೀಜರ್, ಆಗಸ್ಟಸ್-ಇವರೆಲ್ಲ ಚರಿತ್ರೆಯಲ್ಲಿ ತಮ್ಮ ಹೆಸರನ್ನು ಒಳಿತಿಗೋ ಕೆಟ್ಟುದಕ್ಕೋ ಗುರುತಿಸಿ ಹೋದ ಮಹಾನುಭಾವರು. ರೋಮನರ ಅವನತಿಯೊಡನೆ ಕ್ರಿಸ್ತಧರ್ಮ, ಅದರಲ್ಲಿಯೂ ಕೆಥೊಲಿಕ್ ಪಂಥವು ಈ ಜನರ ಮನಸ್ಸನ್ನು ಸೆರೆಹಿಡಿಯಿತು. ರೋಮ್ ನಗರ ಕೆಥೋಲಿಕ್ ಗುರುಗಳಾದ ಪೋಪರ ಕೇಂದ್ರವಾಯಿತು. ಇವತ್ತು ರೋಮಿನ ಒಂದು ಪುಟ್ಟ ಅಂಶವಾದ ವೆಟಿಕನ್ ಸ್ವತಂತ್ರ ರಾಷ್ಟ್ರವಾಗಿದೆ. ಹಿಂದೆ ವೆಟಿಕನಿನ ಪೋಪರು ಯುರೋಪಿನ ಅರಸರನ್ನು, ಸಾಮ್ರಾಟರನ್ನು ತಮ್ಮ ಮುಷ್ಟಿಯಲ್ಲಿರಿಸಿಕೊಂಡವರು. ಇಂದಿಗೂ ಪ್ರಪಂಚದ ವಿವಿಧ ಮೂಲೆಗಳಲ್ಲಿ ಪೋಪರಿಗಿರುವ ದೃಶ್ಯಾದೃಶ್ಯ ಸಂಬಂಧ ಸಾಮಾನ್ಯವಲ್ಲ.

ರೋಮನರ ಯುಗ ಕಳೆದು, ಪೋಪರ ಯುಗ ತೊಡಗುತ್ತಿರುವಾಗಲೇ ಇಟಲಿಯ ಈಶಾನ್ಯ ಮೂಲೆಯ ಕಡಲು ತೀರದ ಪಟ್ಟಣವಾದ ವೇನಿಸ್ ತನ್ನ

ವ್ಯಾಪಾರೀ ಸಾಮ್ರಾಜ್ಯವನ್ನು ಹಬ್ಬಿಸಿತು. ವೇನಿಸಿನ ಡ್ಯೂಕರು,ಶ್ರೀಮಂತರು ಕಟ್ಟಿದ ವ್ಯಾಪಾರ ಮಂದಿರಗಳು, ನೌಕೆಗಳು, ಅರಮನೆಗಳು ಯುರೋಪಿನ ಕಣ್ಣನ್ನು ಕುಕ್ಕಿದುವು. ನೆಪೋಲಿಯನನ ಪ್ರಭಾವದಿಂದ ಅದರ ಶಕ್ತಿ ಕುಸಿಯಿತು. ಅಷ್ಟರೊಳಗಾಗಿ ಕ್ರೈಸ್ತ ಧರ್ಮದ ವರ್ಚಸ್ಸು ಇಟಲಿಯ ಮೂಲೆ ಮೂಲೆಗೂ ಹಬ್ಬಿ ಅನೇಕ ವಿಧಗಳಿಂದ ಮತ ಧರ್ಮ ಪ್ರಸಾರಮಾಡಿತು; ಲಲಿತ ಕಲೆಗಳನ್ನು ಬೆಳಗಿಸಿತು. ವೇನಿಸ್,ರೋಮ್,ಮಿಲಾನ್,ಪಾಡುವಾ, ರಿವೆನಾ, ಫ್ಲಾರೆನ್ಸ ಮೊದಲಾದ ನಗರಗಳು ತಮ್ಮ ಕಲಾ ವೈಭವಗಳಿಂದ ಪ್ರಪಂಚದ ಮನ್ನಣೆಯನ್ನು ಸೆಳೆಯುವಂತಾಯಿತು. ಈ ಕ್ಷೇತ್ರದಲ್ಲಿ ಹೆಸರನ್ನು ಗಳಿಸಿದ ಬ್ರಮಾಂಟೆ, ಡೊನಾಟೆಲೋ, ವಿನ್ಸಿ, ರಾಫೇಲ್,ಮೈಕೆಲ್ ಏಂಜಲೋ, ಟಿಂಟರಿಟೋ, ವೆರೋನಿಸ್, ಟೈಟನ್ ಮೊದಲಾದ ಅನೇಕ ಕಲಾವಿದರು ಇಟಲಿಗೆ ಅಮರವಾದ ಕೀರ್ತಿಯನ್ನು ತಂದುಕೊಟ್ಟರು. ಕ್ರಿಸ್ತ ಗುರುಗಳು ಹಳೆಗಾಲದ ಸಾಧು ಸಂತರೊಡನೆ, ಹೊಸಗಾಲದ ಸಂತರನ್ನು ನಿನ್ನೆ ನಿನ್ನೆಯ ತನಕ ಸೇರಿಸಿಕೊಂಡು ಬಂದು, ಕ್ರಿಸ್ತ ಧರ್ಮದ ಸಂತರುಗಳೆಲ್ಲ ಇಟಲಿಗೇ ಮೀಸಲು—ಎಂಬಷ್ಟು ನಂಬಿಕೆಯನ್ನು ಬೆಳೆಸಿವೆ. ಈ ಸಂತರುಗಳ ಹೆಸರಿನಲ್ಲಿ ಹುಟ್ಟಿದ ನೂರಾರು ಚರ್ಚುಗಳು, ತಮ್ಮ ವಾಸ್ತು ವೈಖರಿಯಿಂದ, ಕಲಾಸಂಪತ್ತಿನಿಂದ ಜಗದ ಮನ್ನಣೆ ಪಡೆಯತೊಡಗಿದವು. ಇಂದು ನಮ್ಮ ಪ್ರವಾಸದ ಅರ್ಧಸೊಬಗು ಅವುಗಳನ್ನು ನೋಡುವುದರಲ್ಲಿದೆ.

ರಾಜಕೀಯ ಕ್ಷೇತ್ರದಲ್ಲಿ—ಮೆಚಿವಿಲಿ, ಗೆರಿಬಾಲ್ಡಿ, ಮೈಜಿನಿಯರು ಒಂದೊಂದು ವಿಧದಿಂದ ಹೆಸರು ಗಳಿಸಿದರು. ಹಳೆಯ ಸಾಮ್ರಾಟರ ಹೆಮ್ಮೆಯನ್ನೆಲ್ಲ ಹೊತ್ತು, ನೀರೋವಿನ ನಿಷ್ಕರುಣೆಯನ್ನೆಲ್ಲ ತೋರಿ, ಇಟಲಿಯನ್ನು ಪೂರ್ವ ವೈಭವಕ್ಕೆ ಒಯ್ಯುತ್ತೇನೆ-ಎಂದು ದುಮುಕಿದ ಅಹಂಕಾರಿ ಮುಸೋಲಿನಿ ನಮಗೆ ತೀರ ಹೊಸಬ. ಅವನ ಕಾಲ ಮುಗಿದು ಇಂದು ಪ್ರಜಾಭುತ್ವದ ಕಾಲವು ಇಟಲಿಯಲ್ಲಿ ಉದಯಿಸಿದೆ. ಹೀಗೆ ಎರಡು ಸಾವಿರ ವರ್ಷಗಳ ಕಾಲ—ಇತಿಹಾಸ, ಮತ ಧರ್ಮ, ಕಲೆಗಳು ತಾಂಡವವಾಡಿದ ದೇಶ ಇಟಲಿ. ಮನುಷ್ಯ ತನ್ನ ಸಾತ್ವಿಕ ಗುಣಗಳಿಂದ, ಆತ್ಮಾನಂದದಿಂದ ಎಂಥ ಧವಲ ಕೀರ್ತಿಯನ್ನು ಸಂಪಾದಿಸಬಹುದೋ ಅದನ್ನೂ ಗಳಿಸಿತು. ಧನ ಮದ,ಅಧಿಕಾರ ಮದ, ಸಾಮ್ರಾಜ್ಯ ಮದಗಳಿಂದ ತನಗೆ ತಾನೇ ಆಗಿ ಮೆರೆದು, ಯಾವೆಲ್ಲ ವೈಭವದ ಬಾಳನ್ನು, ವಿಜೃಂಭಣೆಯ ಬಾಳನ್ನು ನಡೆಯಿಸಬಹುದೋ

ಅದನ್ನೂ ನಡೆಸಿತು. ಇಂಥ ಬಾಳಿನೊಡನೆ ಅನಿವಾರ್ಯವಾಗಿ ಬೆರೆತು ಕೊಂಡಿರುವ ದುರಹಂಕಾರ, ಕ್ರೌರ್ಯ, ಅತಿ ಕಾಮುಕತೆ, ಹಿಂಸಾ ಲೋಲುಪತೆಗಳಿಂದ ತುಂಬಿ ತುಳುಕಿ ತನ್ನ ನಾಶವನ್ನೂ ತಂದುಕೊಂಡಿತು. ಮಾನವ ಕೋಟಿಯಿಂದ ತರಿಸಿದ ಒಂದೊಂದು ಆನಂದಬಾಷ್ಪದ ಸಮ್ಮುಖ ದಲ್ಲಿ ದುಃಖಿಗಳ, ಆರ್ತಿಗಳ ಕಂಬನಿಯ ಹೊಳೆಯನ್ನೂ ಹರಿಸಿತು. ಇಟಲಿ ಉನ್ನತಿ ಅವನತಿಗಳೆರಡರಲ್ಲೂ ಅಷ್ಟೇ ಮೇಲಕ್ಕೆದ್ದಿತು, ಕೆಳಕ್ಕೆ ಇಳಿಯಿತು.

ಈ ದೇಶದ ಹಳೆಗಾಲದ ಇತಿಹಾಸದ ಸ್ಮರಣೆಯಿಂದ ನಾವು ನಾಡನ್ನು ಸಂಚರಿಸಿದುದಾದರೆ, ಈಗಿನ ಜನತೆಯನ್ನು ಕಂಡು ಏಕೋ ವಿಸ್ಮಯವಾಗು ತ್ತದೆ. ರೋಮನರೆಂಬವರು ಇದ್ದರೇ? ಇದ್ದಿದ್ದರೆ ಆವರ ಕುಲದವರಿಲ್ಲವೇ- ಎಂಬ ಅನುಮಾನ ಉಂಟಾಗುತ್ತದೆ. ಯುರೋಪಿನಲ್ಲೇ ಅತಿ ಕುಳ್ಳರು ಇಲ್ಲಿನ ಜನ. ರೋಮನರ ಗಾತ್ರಕ್ಕೂ ಇವರ ನಿಲುಮೆಗೂ ಸಂಬಂಧವೇ ಇಲ್ಲ. ಯುರೋಪಿಯನರ ರಕ್ತ ತುಂಬಿದ ತೊಗಲು ಇವರದಲ್ಲ; ಬಿಳಿ ವೈ ಯವರೇ ಹೆಚ್ಚು. ಅದರಲ್ಲಿಯೂ ಗಂಡಸರಂತು ನಮ್ಮಷ್ಟೇ ಕಂದು ಬಣ್ಣ ದವರು; ಕರಿಯರಲ್ಲ. ಉತ್ತರ ಯೂರೋಪಿನವರ ಕೆಂಚು, ನೆಲ್ಲಿನ ಬಣ್ಣದ ತಲೆಗೂದಲಿಲ್ಲ. ಪೌರ್ವಾತ್ಯರಂತೆ ಕಪ್ಪುಗೂದಲಿನ ಜನಗಳೇ ಅಧಿಕ. ಕಣ್ಣುಗಳು ಮಾತ್ರ ನೀಲ, ಕಂದು ಬಣ್ಣದುವು.

ಪ್ರವಾಸಿಗೆ ಕಾಣುವ ಇನ್ನೊಂದು ಸಮಸ್ಯೆಯೆಂದರೆ—ಜನ ಜೀವ ನಕ್ಕೂ ಕೆಥೊಲಿಕ್ ಧರ್ಮದ ವಿರಕ್ತಿಗೂ ಇರುವ ಅಂತರ. ಕೆಥೊಲಿಕ್ ಮತದಲ್ಲಿ ವಿರಕ್ತಿಯ ಪಾಠ ಎಷ್ಟೆಷ್ಟು ಅಧಿಕವಾಗಿದೆಯೋ, ಪಾದ್ರಿ ಮಾದ್ರಿ ಯರ ಸಂಖ್ಯೆ ಈ ದೇಶದಲ್ಲಿ ಎಷ್ಟೆಷ್ಟು ಹೆಚ್ಚಿಗೆ ಕಾಣಿಸುತ್ತಿದೆಯೋ, ಜನ ಜೀವನದಲ್ಲಿ ಅಷ್ಟಷ್ಟು ವಿಷಯ ಲೋಲುಪತೆಯೂ ಕಾಣಿಸುತ್ತಿದೆ. ದ್ರಾಕ್ಷೆಯ ಅಮಲು, ಕಾಮಿನಿಯ ಅಮಲು, ಸ್ಪೈನ್, ಫ್ರಾನ್ಸ್, ಇಟಲಿ ಗಳನ್ನು ತನ್ನ ಮೋಹ ಜಾಲದಲ್ಲಿ ಇರಿಸಿಕೊಂಡಷ್ಟು ಯುರೋಪಿನ ಇತರ ಭಾಗಗಳನ್ನು ಇರಿಸಿಕೊಂಡಿಲ್ಲ—ಎಂದು ಅನಿಸುತ್ತದೆ.

ದೇಶದ ನೆಲವನ್ನು ಕಾಣುವಾಗ ನಿಸ್ಸಾರವಾದುದು ಎನಿಸುವ ಭಾವ ಬರುತ್ತದೆಯಾದರೂ ಜನರು ಶ್ರಮ ಜೀವಿಗಳು. ಉತ್ತರದ ಬಯಲು ಅಖಂಡವಾದ ಒಂದೇ ಹೊಲ ಎನ್ನುವಷ್ಟು ಬೆಳೆಯಿಂದ ತುಂಬಿಕೊಂಡಿದೆ. ಉಳಿದ ನೆಲವಾದರೂ ಹಾಗೆಯೇ. ತಗ್ಗಿನ ಭೂಮಿಗಳಲ್ಲಿ ಮೆಕ್ಕೆ ಜೋಳ,

ಗೋಧಿ, ಅಕ್ಕಿ ಮೊದಲಾದ ಕಾಳುಗಳನ್ನು ಬೆಳೆಯುತ್ತಾರೆ. ಉಳಿದ ಭಾಗಗಳನ್ನು ಬರಡಾಗಿ ಬಿಟ್ಟಿಲ್ಲ. ಎಲ್ಲೆಲ್ಲಿಯೂ ದ್ರಾಕ್ಷೆ ತೋಟಗಳಿವೆ; ಬೇಲಿಗಳ ಮೇಲೆ ದ್ರಾಕ್ಷೆ ಬಳ್ಳಿ, ಮರಗಳ ಮೇಲೆ ದ್ರಾಕ್ಷೆಯ ಬಳ್ಳಿ, ತೋಟವಾಗಿ ನಟ್ಟ ದ್ರಾಕ್ಷೆಬಳ್ಳಿಗಳು-ಇವೆಲ್ಲ ದೇಶದ ಹಿರಿಯ ಸಂಪತ್ತು. ಪರ್ವತದ ಕೆಳಮಗ್ಗುಲಲ್ಲಿ ಹಣ್ಣು, ದ್ರಾಕ್ಷೆಗಳ ತೋಟಗಳು ಕಾಣಿಸಿದರೆ ಮೇಲಿನ ಭಾಗದಲ್ಲೆಲ್ಲ ಸಾವಿರಾರು ಎಕ್ರೆ ವಿಸ್ತೀರ್ಣಕ್ಕೆ ಇಪ್ಪೆಮರದ ತೋಟಗಳಿವೆ. ಅಲ್ಲಿಂದ ಮುಂದಕ್ಕೆ ಕಣ್ಣು ಚಾಚಿದರೆ, ಬೆಟ್ಟದ ಕಗ್ಗುಗಳಲ್ಲೂ ಪೈನ್ ವೃಕ್ಷಗಳನ್ನು ನಡುವ ಸಾಹಸ ಮಾಡಿದ್ದಾರೆ. ಇಟಲಿ ಕೃಷಿಕರ ನಾಡು. ರೋಮ್, ಬೋಲೋನಾ, ಮಿಲಾನ್, ಟೂರಿನ್ ಮೊದಲಾದ ಕಡೆಗಳಲ್ಲಿ ಆಧುನಿಕ ಯಂತ್ರೋದ್ಯಮ ಬಹುವಾಗಿ ಬೆಳೆದು ಬಂದಿದೆಯಾದರೂ ದಕ್ಷಿಣ ಇಟಲಿ, ಸಿಸಿಲಿ ಮೊದಲಾದ ದ್ವೀಪಗಳು ದಾರಿದ್ರ್ಯದ ಕೊಂಪೆಗಳು. ಜನರು ಉಡುಗೆ ತೊಡುಗೆಯಲ್ಲಿಯೂ ಬಡವರೇ; ಶುಚಿ, ಸ್ವಭಾವದಲ್ಲಿಯೂ ಬಡವರೇ. ಉತ್ತರ ಯುರೋಪಿನಲ್ಲಿ ಬಡತನದ ಅಂಥ ದಾರುಣ ಚಿತ್ರ ನಾನು ಕಂಡಿಲ್ಲ. ರೋಮ್ ನಗರ, ಮತ್ತಿತರ ಪಟ್ಟಣಗಳಲ್ಲಿ ಕಿಸೆ ಕತ್ತರಿಸುವ ಕಳ್ಳರ ಸಂಖ್ಯೆಯೂ ಹೆಚ್ಚಾಗಿದೆ. ರೋಮ್ ಬಹು ದೊಡ್ಡ ನಗರ. ತೀರ ಪುರಾತನವಾದುದು; ಅಷ್ಟೇ ಆಧುನಿಕವಾದುದು. ಅದರ ಬೀದಿಗಳಲ್ಲಿಯೇ ಬಿದ್ದ ಸಿಗರೇಟ್ ತುಂಡುಗಳನ್ನು ಹೆಕ್ಕುತ್ತಿದ್ದ ಇಬ್ಬರು ಬಡಪಾಯಿಗಳನ್ನು ನಾನು ನೋಡಿದೆ.

ಒಂದು ದಿನ ನೇಪಲ್ಸ್‌ನೋಡುವುದಕ್ಕೆ ಹೋಗಿದ್ದೆ. 'ನೇಪಲ್ಸ್‌ನೋಡಿ ಸಾಯಬೇಕಂತೆ'. ಸುಂದರವಾದ ಕಡಲ ತೀರದ ಮಗ್ಗುಲಲ್ಲಿ ಬೆಳೆದ ಈ ನಗರದ ಜನಸಂಖ್ಯೆಯು ಒಂದು ಮಿಲಿಯದಷ್ಟಿದೆ. ನಾನು ಕಡಲ ಸೆರಗಿನ ಒಂದು ದಾರಿ ಹಿಡಿದು, ಎರಡು ಮೈಲುಗಳ ತನಕ ಕಾಲು ನಡೆಯಿಂದಲೇ ಸರಿದೆ. ದಾರಿಯ ನೋಟವು ನನ್ನನ್ನು ಬೆರಗು ಮಾಡಿತು. ಇಕ್ಕಡೆಗಳಲ್ಲೂ ಯುದ್ಧಕಾಲದಲ್ಲಿ ಬಾಂಬುಗಳ ಆಘಾತಕ್ಕೆ ಗುರಿಯಾದ ಕಟ್ಟಡಗಳಿದ್ದುವು. ದಾರಿಯ ಮಗ್ಗುಲ ಕೊಳಚೆಯ ರಾಶಿಗಳು ಕಾಣಿಸುತಿದ್ದವು. ಸಾಲದುದಕ್ಕೆ-ತೆರವಾದ ಸ್ಥಳಗಳಲ್ಲಿ ನಮ್ಮದೇಶದ ಅನೇಕ ಕಡೆಗಳಲ್ಲಿ ಕಾಣುವಂತೆ, ಹರುಕು ಮುರುಕು ಜೋಪಡಿಗಳಿದ್ದವು. ಹರಕು ಚಿಂದಿಗಳಿಂದ ಕಟ್ಟಿದ ಬಟ್ಟೆಗಳ ಮರೆಯೇ ಗೋಡೆ; ತಗಡುಗಳಿಂದ ಆಕಾರವಿಲ್ಲದೆ ಹೊದೆಸಿದ ಮಾಡು ಮೇಲಿನ ರಕ್ಷೆ. ಅದರೊಳಗೆ ವಾಸಿಸುವ ಕುಟುಂಬ-ಚಿಂದಿಯನ್ನು

ತೊಟ್ಟವರು. ಓಡಾಡುವ ಮಕ್ಕಳು ಕೊಳೆ ತುಂಬಿದ ಮೈಯವರು; ಧೂಳಿ ನಲ್ಲೇ ಉರುಳಾಡುವವರು; ಪಾದರಕ್ಷೆ ಇಲ್ಲದ ಬಡಜೀವಿಗಳು. ಕಕ್ಕಸ ವಿಲ್ಲದೆ ದಿನ ಕಳೆಯುವ ಜನ ವರ್ಗ ಅಲ್ಲಿಯೂ ಇತ್ತು. ಕಡಲು ದಂಡೆಗೆ ಹೋದರೆ-ಮೈಗೆ ಪೂರ್ಣ ಅರಿವೆ ಇಲ್ಲದ, ಎದೆಗೂಡು ಕಾಣುವ ಮಕ್ಕಳೆಷ್ಟು ಬೇಕು? ಕೇವಲ ಬೀದಿಯ ಮಕ್ಕಳು ಅವರು.

ನೇಪಲ್ಸನಿಂದ ತುಸು ದೂರದ ಪಾಂಪಿಗೆ ಹೋದಾಗ ಜತೆಗೆ ಕುಳಿತ ಪ್ರಯಾಣಿಕರ ಬಟ್ಟೆಯ ಕೊಳೆ, ಹರಕುಗಳನ್ನು ನೋಡುವುದಕ್ಕಿರಲಿಲ್ಲ. ಯುರೋಪಿನ ಜನರು ದಾರಿಯಲ್ಲಿ ಒಂದು ತುಣುಕು ಕಾಗದ ಎಸೆಯುತ್ತಿರ ಲಿಲ್ಲ. ಇವರೋ, ಬಂಡಿಯಲ್ಲಿ ಕುಳಿತು, ಅದರ ಒಳಗೇನೇ ಉಗುಳುತ್ತಿದ್ದು ದನ್ನು ಕಂಡಾಗ, ಉತ್ತರ ಯುರೋಪು ಎಲ್ಲಿ? ದಕ್ಷಿಣ ಇಟೆಲಿ ಎಲ್ಲಿ-ಎನ್ನುವ ವಿಸ್ಮಯ ನನಗೆ ಉಂಟಾಯಿತು. ಇಷ್ಟೊಂದು ಬಡತನ ನೆಲಸಿರುವಾಗ ಮಾನವತೆಯ ನೈತಿಕ ಮಟ್ಟ ಕೆಳಕ್ಕಿಳಿದಿರುವಲ್ಲಿ ಆಶ್ಚರ್ಯವಿಲ್ಲ. ಈ ಬಡ ತನ ನಿವಾರಣೆಗೊಳ್ಳುವುದೂ ಸುಲಭವಲ್ಲ. ಕುಡಿಕತನ, ವಿಷಯಲೋಲು ಪತೆ, ಜುಗಾರು ತುಂಬಿರುವ ನಾಡಿನಲ್ಲಿ ಬಡತನ, ಅನೀತಿ ಹೋಗುವುದು ತುಂಬ ಕಷ್ಟದ ಕೆಲಸ. ಆದರೂ ಈ ದೇಶದ ಉತ್ತರ ಭಾಗ ಉತ್ತಮಗೊಂ ಡಂತೆ ದಕ್ಷಿಣ ಭಾಗ ಹೊಂದಬಾರದೆಂದಿಲ್ಲ. ಕಮ್ಯುನಿಸಮ್ ಇಟೆಲಿಯಲ್ಲಿ ಬೇರುಬಿಡುವುದು ಶಕ್ಯವಾಗಿದ್ದರೆ ಅದು ದಾರಿದ್ರ್ಯದ ಹಸನಾದ ನೆಲದಿಂದ. ಡೆನ್ಮಾರ್ಕಿನಂತೆ, ಹಾಲೆಂಡಿನಂತೆ, ಬಡವರ ಸಲುವಾಗಿ ಹಿಂದಣ ಸರಕಾರ ಗಳು ದುಡಿದಿರಲಿಲ್ಲ. ಇನ್ನು ದುಡಿದು, ಜನಗಳಲ್ಲಿ ತೃಪ್ತಿಯನ್ನುಂಟುಮಾಡಿ ಈ ಪ್ರಶ್ನೆ ನಿವಾರಣೆಗೊಳ್ಳಬೇಕು.

## ೨೦. ಮಿಲಾನ್, ಮತ್ತು ವೇನಿಸ್.

ಇಂಗ್ಲಿಷ್ ಭಾಷೆಯಿಂದಾಗಿ, ನಮಗೆ ಇಟೆಲಿಯ ಹೆಸರುಗಳನ್ನುಚ್ಚ ರಿಸುದರಲ್ಲಿ ತಪ್ಪು ಪರಿಪಾಠ ಬಂದುಬಿಟ್ಟಿದೆ. ಅಲ್ಲಿನ ಯಾವ ಹೆಸರುಗಳೂ ಇಂಗ್ಲಿಷ್‌ನಲ್ಲಿರುವಂತೆ ಅರ್ಧ ವ್ಯಂಜನದಲ್ಲಿ ನಿಲ್ಲುವುದಿಲ್ಲ; ದ್ರಾವಿಡ ಭಾಷೆ ಗಳಂತೆ ಅವು ಸ್ವರದಿಂದ ಅಂತ್ಯವಾಗುತ್ತವೆ. ಇಂಗ್ಲಿಷಿನ ಮಿಲಾನ್ ನಿಜಕ್ಕೂ ಮಿಲಾನೋ, ವೇನಿಸ್—ವೇನೀಸಿಯಾ, ಬೊಲೋನ್-ಬೊಲೋನಿಯಾ, ಫ್ಲಾರೆನ್ಸ್-ಫಿರೆನ್ಸಿ, ರೋಮ್-ರೋಮಾ, ನೇಪಲ್ಸ್-ನಪೋಲಿ. ಹೀಗಾಗಿ ಊರ ಹೆಸರುಗಳನ್ನು ಅವರ ರೀತಿಯಂತೆ ಉಚ್ಚರಿಸಿದರೆ ಮಾತ್ರ ಇಲ್ಲಿವರಿಗೆ ಅರ್ಥವಾದೀತು. ಇಂಗ್ಲಿಷ್ ಬಲ್ಲವರ ಸಂಖ್ಯೆ ಇಲ್ಲಿ ಕಡಿಮೆ. ಆದರೂ ಅಲ್ಲಲ್ಲಿ ಇಂಗ್ಲಿಷ್ ಬಲ್ಲ ದೇಶೀಯರೂ ವಿದೇಶಿಯರೂ ಸಾಕಷ್ಟು ಸಿಗುತ್ತಾರೆ. ಹೀಗಾಗಿ ನಮಗೆ ಅಷ್ಟೊಂದು ಕಷ್ಟವಾಗುವುದಿಲ್ಲ.

ನಾನು ಮೊದಲು ಉದ್ದೇಶಿಸಿ ಹೊರಟದ್ದು ವೇನಿಸಿಗೆ. ಹಾದಿಯ ದಣಿವನ್ನು ಕಳೆದುಕೊಳ್ಳುವುದಕ್ಕೂ ಆಯಿತು; ನೋಡಿದ ನೆಪವಾದ ಹಾಗೂ ಆಯಿತು—ಎಂದು ಮಿಲಾನಿನಲ್ಲಿಯೂ ಇಳಿದೆ. ನನ್ನ ತರುಣ ಮಿತ್ರ ರಾಗಿದ್ದ ಪೇಜಾವರ ಸದಾಶಿವರಾಯರ ನೆನಪು ಈ ನಗರದ ನೆನಪಿನೊಂದಿಗೆ ನನಗಾಗುತ್ತಿತ್ತು. ಅವರು ಇಲ್ಲಿಗೆ ಓದಲು ಹೋಗಿ, ಇಲ್ಲಿಯೇ ಪರಂಧಾಮ ವನ್ನೈದಿದರು.

ರೈಲ್ವೇ ನಿಲ್ದಾಣದಲ್ಲಿ ಇಳಿದವರೇ ನಮ್ಮ ಚೆಕ್ ವಿನಿಮಯಮಾಡಲು ಹೊರಟೆವು. ಕೈತುಂಬ ನೋಟುಗಳು ಬೇಕಾದರೆ ಇಟೆಲಿಗೆ ಬರಬೇಕು. ನಾನು ನನ್ನ ಜತೆಗಾರರಾದ ಫ್ಲೆಮಿಂಗ್ ಪಾಲ್ಸೆನ್ ಎಂಬವರ ಸಾಮಾನನ್ನು ಕಾದು ನಿಂತೆ. ಅವರು ತಮ್ಮ ಹಣ ಬದಲಿಸಿ ಬಂದರು. ನನ್ನ ಸಾಮಾನನ್ನು ಅವರು ಕಾದುನಿಂತರು; ನಾನು ಹಣ ಬದಲಿಸಿ ಬಂದೆ. ಒಂದು ಪೌಂಡಿಗೆ ಇಟೆಲಿಯ 1750 ಲೀರಾ ಸಿಗುತ್ತದೆ. ಐದು ಲೀರಾಕ್ಕೂ ಒಂದು ನೋಟಿದೆ. ನಾಣ್ಯಗಳೇ ಇಲ್ಲಿಲ್ಲ ಎನ್ನಬೇಕು. ಐದು ಲೀರಾ ಎಂದರೆ ಹತ್ತು ಪೈ ಬೆಲೆ. ಫ್ರಾನ್ಸಿನ ನೋಟುಗಳೇ ಹೊಲಸಾಗಿದ್ದುವು. ಇವು ಇನ್ನಷ್ಟು ಹೊಲಸು. ಕಾಗದದ ನಾಣ್ಯ ಎಂದರೆ ಕಾಗದದ್ದೇ. ಅದನ್ನು ಬಳಸದೆ ಬೇರೆ ವಿಧಿಯೇ ಇರಲಿಲ್ಲ. ನಾವಿಬ್ಬರೂ ಕೂಡಿ ಒಂದು ಹೊಟೇಲಿನಲ್ಲಿ ವಸತಿ ನಿಶ್ಚಯಿಸಿ

ನಗರದ ತಿರುಗಾಟಕ್ಕೆ ಹೋದೆವು. ಹೋದುದು ಒಂದೇ ಸ್ಥಳಕ್ಕೆ. ಮಿಲಾನ್ ನಗರ ಮಧ್ಯದಲ್ಲಿ ಹಳೆಗಾಲದ ಒಂದು ಕೆಥಿಡ್ರಲ್ ಇದೆ. ಡುವೋ ಎಂದು ಅದರ ಹೆಸರು. ಅಲ್ಲಿಗೆ ಇದನ್ನು ಹದಿಮೂರನೆಯ ಶತಮಾನದಿಂದ ಕಟ್ಟ ತೊಡಗಿ ಇಂದಿಗೂ ಕಟ್ಟುವ ಕೆಲಸ ಸಾಗಿದೆ. ಕಳೆದ ವರ್ಷವಷ್ಟೆ ಅದಕ್ಕೆ ಲೊಂಬಾರ್ಡಿ ಎಂಬ ಒಬ್ಬ ಕಲಾವಿದ, ಎರಡು ಕಂಚಿನ ಬಾಗಿಲುಗಳನ್ನು ಮಾಡಿಕೊಟ್ಟ. ಪಿಯಾಜಾ ಡುಮೋ-ಎಂಬಲ್ಲಿ ಈ ಕೆಥಿಡ್ರಲ್ ಇದೆ. ವಿಶಾಲ ವಾದ ನಗರದ ಚೌಕಗಳಿಗೆ ಇಟಲಿಯವರು 'ಪಿಯಾಜಾ' ಎನ್ನುತ್ತಾರೆ. ಪ್ರತಿ ಯೊಂದು ಮುಖ್ಯ ಕೇಂದ್ರದಲ್ಲೂ ವಿಶಾಲವಾದ ಒಂದೊಂದು ಪಿಯಾಜಾ ಇದ್ದೇ ಇದೆ. ಪಿಯಾಜಾ ಡುವೋ ಒಂದು ಲಕ್ಷಜನ ಕುಳಿತಿರುವಷ್ಟು ವಿಶಾಲ ವಾದ ಅಂಗಣ. ಅದರ ಎದುರಿಗಿರುವ ಈ ಕೆಥ್ರಿಡಲ್ ಬಹು ದೊಡ್ಡದು. ಅದು ಮುನ್ನೂರ ಐವತ್ತು ಅಡಿಯ ಎತ್ತರವಾಗಿದೆ. ಗೋಡೆಯ ಸುತ್ತಲೆಲ್ಲ ಶಿಖರಗಳದೇ ಸಾಲು. ಒಳಗೂ ಹೊರಗೂ ಕೂಡಿ ಸುಮಾರು 4400ದಷ್ಟು ಶಿಲ್ಪ ಪ್ರತಿಮೆಗಳಿವೆ. ಒಳಗೆ ಉನ್ನತವಾದ ಗಾಥಿಕ್ ಶೈಲಿಯ ಸ್ತಂಭರಾಜಿ ಗಳಿವೆ; ಕಮಾನುಗಳಿವೆ. ಗೋಡೆಗಳಲ್ಲಿ ಅತ್ಯಂತ ಸುಂದರವಾದ ಸ್ಟೈಂಡ್ ಗ್ಲಾಸ್ ಕಿಟಿಕಿಗಳಿವೆ. ಅದರಲ್ಲೊಂದು ಕಿಟಿಕಿ—ಅತ್ಯಂತ ದೊಡ್ಡದು. ಸುಮಾರು ನಾಲ್ವತ್ತು ನಾಲ್ವತ್ತು ಅಡಿ ಚಚ್ಚೌಕವಾಗಬಹುದು. ಒಂದೊಂದು ಸಾಲಿನಲ್ಲಿ ಹತ್ತರಂತೆ ಚಿತ್ರಗಳಿರುವ, ಹದಿನೆರಡು ಸಾಲು ಚಿತ್ರಗಳಿಂದ ಕೂಡಿದೆ; ಕ್ರಿಸ್ತಪುರಾಣವೆಲ್ಲ ಅತಿ ಮೋಹಕವಾಗಿ ಚಿತ್ರಿತವಾಗಿದೆ. ಆದರೆ ಒಂದು ನೋಟದಲ್ಲಿ ನೂರಿಪ್ಪತ್ತು ಚಿತ್ರಗಳು ಕೂಡಿ ನಿಂತಿರುವಾಗ, ಯಾವು ದನ್ನು ನೋಡಲಿ, ಯಾವುದನ್ನು ಬಿಡಲಿ? ಅವನ್ನೆಲ್ಲ ಬಿಡುವಾಗಿ ದೂರ ದೂರ ಇರಿಸಿದ್ದರೆ ಎಷ್ಟೋ ಚೆನ್ನಾಗಿ ಕಾಣಿಸಬಹುದಿತ್ತು. ವಾಸ್ತುವಿನಲ್ಲಿ ಶಿಲ್ಪ, ಚಿತ್ರ ಗಳನ್ನು ಅಲಂಕಾರಕ್ಕೆ ಬಳಸುವಾಗ-ಸ್ಥೂಲ ಸ್ವರೂಪ ಮುಖ್ಯವಾಗಬೇಕೇ ಹೊರತು ಸೂಕ್ಷ್ಮ ಕಸುಬುಗಾರಿಕೆ ಪ್ರಯೋಜನಕಾರಿಯಲ್ಲ.

ಕೆಥಿಡ್ರಲ್ ನೋಡಿ, ದಾರಿ ಕೇಳುತ್ತ, ಹೋಟೆಲಿನ ತನಕ ಮರಳಿ ಬಂದೆವು. ದಾರಿಯುದ್ದಕ್ಕೂ ಹಳೆಗಾಲದ ವಾಸ್ತುಶೈಲಿಯ ನೂರಾರು ಮಂದಿ ರಗಳಿದ್ದವು. ಅಗಲವಾದ ಬೀದಿಗಳು, ನಗರ ಚೌಕಗಳು, ಉದ್ಯಾನಗಳು ಎಲ್ಲೆಲ್ಲೂ ಕಾಣಿಸುತ್ತವೆ. ಇದು ಬಹು ಶ್ರೀಮಂತ ನಗರವಾಗಿ ಕಾಣಿಸುತ್ತದೆ. ನಾವಿಬ್ಬರೂ ಅಲೆದಾಡುತ್ತ ಒಂದೆರಡು ಮೈಲು ಸಂಚರಿಸಿ, ರೈಲ್ವೆ ನಿಲ್ದಾ

ಣದ ಬಳಿಯ ಒಂದು ವೃತ್ತದಲ್ಲಿ ಹೋಗಿ ಕುಳಿತೆವು. ತಡೆಯಲಾರದ ಸೆಕೆ ಆ ದಿನ. ಇನ್ನೂ ಹತ್ತುಹದಿನೈದು ದಿನ, ಇಟೆಲಿಯಲ್ಲಿ ಕಳೆಯುವುದು ಸುಲಭವೇ—ಎಂಬ ಬೆದರಿಕೆಯೂ ಉಂಟಾಯಿತು. ನಮ್ಮ ಮುಂದೆ ಮೋಟರ್ ಸೈಕಲುಗಳ ಅವಿರತ ವಾಹನ ಸಂಚಾರ. ಅದರಲ್ಲಿಯೂ ಮೋಟರ್ ಸ್ಕೂಟರ್‌ಗಳ ಉಪಯೋಗ ಇಲ್ಲಿ ಬಲು ಹೆಚ್ಚು. ನಾವು ಕತ್ತಲು ಕವಿಯುತ್ತಲೆ ಹೊಟೇಲನ್ನು ಸೇರಿಕೊಂಡೆವು. ಸೆಕೆಯಿಂದ ರಾತ್ರಿ ಕಳೆಯುವುದು ಕಷ್ಟವಾಯಿತು. ಅಂತು ಬೆಳಗಾಯಿತು. ನಾನೂ ಪಾಲ್ಸೆನರೂ ಕೂಡಿ ಸಮೀಪದ ರೈಲ್ವೇ ನಿಲ್ದಾಣಕ್ಕೆ ಹೋದೆವು. ಬೆಳಗಿನ ಎಂಟೂವರೆ ಘಂಟೆಗೆ ವೇನಿಸಿಗೆ ಹೋಗುವ ಬಂಡಿಯಲ್ಲಿ ಹೋಗಿ ಕುಳಿತೆವು. ವೇನಿಸಿನ ತನಕವೂ ಸಮತಟ್ಟಾದ ದಾರಿಯಲ್ಲಿ ರೈಲು ಸಾಗುತ್ತದೆ. ಆಚೀಚೆಗೆ ವಿಶಾಲವಾದ ಬಯಲು ಭೂಮಿಯಿದೆ. ಎಲ್ಲೆಲ್ಲೂ ಉತ್ತಹೊಲ, ಉಳುವ ಹೊಲ, ಬೆಳೆದ ಹೊಲಗಳು ಕಾಣಿಸುತಿದ್ದವು. ನಮಗೆ ದಾರಿಯಲ್ಲಿ ಸಿಕ್ಕಿದ ಒಂದು ಪ್ರಮುಖ ನಗರ ವೆರೋನಾ.

ಹವೆ ಉಷ್ಣವಾಗಿಯೇ ಇತ್ತು. ಮಧ್ಯಾಹ್ನ ಹದಿನೆರಡು ಘಂಟೆಗೆ ವೇನಿಸನ್ನು ಸೇರುವುದರೊಳಗಾಗಿ ಸಾಕು ಬೇಕಾಗಿತ್ತು. ಬಂಡಿಯಿಂದಿಳಿದು ಹೊರಗೆ ಬಂದರೆ, ಕಾಶಿಯಲ್ಲಿ ಕಾಣುವ ಪಂಡರ ಪಟಾಲಮಿನಂತೆ ತಂತಮ್ಮ ಹೊಟೇಲಿಗೆ ನಮ್ಮನ್ನು ಕರೆದೊಯ್ಯಲು ಬಂದ ಜನರಿದ್ದರು. ತಮ್ಮ ಅಂಗಿಯ ಮೇಲೆ ಹೊಟೇಲಿನ ಹೆಸರುಗಳನ್ನು ಅಂಟಿಸಿಕೊಂಡಿದ್ದರು. ಪ್ರತಿಯೊಬ್ಬ-ತಮ್ಮ ಹೊಟೇಲು ಅತ್ಯಂತ ಸುಂದರವಾದದು. ಇಂಥ ಕಾಲುವೆ ದಂಡೆಯಲ್ಲಿದೆ-ಎಂದು ಹೊಗಳುವವನೇ. ಪಾಲ್ಸೆನ್ ರಾತ್ರಿಯೇ ಟ್ರೀಸ್ಟ್ ನಗರಕ್ಕೆ ಹೊರಡುವವರಾದ್ದರಿಂದ ಹೊಟೇಲನ್ನು ಗೊತ್ತುಮಾಡಲಿಲ್ಲ. ನಾನು 'ಕೋಂಟಿನೆಂಟಲ್' ಹೊಟೇಲಿನಲ್ಲಿ ಉಳಿಯುವ ನಿರ್ಧಾರಮಾಡಿದೆ. ದಿನಕ್ಕೆ ಬರಿಯ ನಿವಾಸಕ್ಕೆ ಸಾವಿರ ಲೀರಾ. ನಾನು ಒಪ್ಪಿಕೊಂಡೆ—ಆ ಹೊಟೇಲು ಸ್ಟೇಶಸಿಗೆ ಸಮೀಪವಾಗಿತ್ತು ಎಂಬ ಕಾರಣದಿಂದ. ಪಾಲ್ಸೆನರು "ಅದು ಹೆಚ್ಚಲ್ಲವೇ?" ಎಂದು ಕೇಳಿದರು. ಕಡಿಮೆ ದರವನ್ನು ಯಾರೂ ಹೇಳದ ಮೇಲೆ ಏನುಮಾಡಬೇಕು? ಹೋದ ಹೊಟೇಲೇನೋ ಚೆನ್ನಾಗಿತ್ತು. ಅಲ್ಲಿನ ಮಹಾ ಕಾಲುವೆ (ಕೆನಾಲ ಗ್ರಾಂಡಿ)ಯ ತಡಿಯಲ್ಲಿತ್ತು.

ವೇನಿಸಿನಲ್ಲಿ ಸಂಚಾರವೆಲ್ಲ ದೋಣಿಯಲ್ಲೇ. ಕಿರಿದಾದ ಬೀದಿಗಳಿ

ದ್ದಾವೆ. ಅಲ್ಲಿ ಯಾವ ವಾಹನಕ್ಕೂ ಪ್ರವೇಶವಿಲ್ಲ. ಕಾಲ್ನಡೆಯಿಂದ ಸಂಚರಿಸಬೇಕು. ನಗರದ ಪ್ರತಿಯೊಂದು ಸಂದುಗೊಂದಿಗೂ ಹೋಗಲು ಕಾಲುವೆಗಳಿವೆ. ದೋಣಿಗಳನ್ನು ಸಂಚಾರಕ್ಕೆ ಬಳಸುತ್ತಾರೆ. ನಗರವನ್ನು ಇಬ್ಭಾಗಿಸಿ ರೇವನ್ನು ಕೂಡುವ ಮುಖ್ಯ ಕಾಲುವೆಗೆ "ಕೆನೆಲ್ ಗ್ರ್ಯಾಂಡೀ" ಎಂದು ಹೆಸರು. ಅದು ದೊಡ್ಡ ಕಾಲುವೆ. ಅದರಲ್ಲಿ ಮೋಟರ್ ಲಾಂಚುಗಳ ಸಂಚಾರ ಪ್ರತಿ ಹತ್ತು ನಿಮಿಷಕ್ಕೊಮ್ಮೆ ಇದೆ. ಕಾಲು ಮೈಲು, ಅರ್ಧ ಮೈಲು ದೂರದಲ್ಲಿ ಅದು ದಂಡೆಗೆ ತಾಗಿ ಸರಿಯುತ್ತದೆ. ವೇನಿಸು ಸಂಪೂರ್ಣವಾಗಿ ಪ್ರಾಚೀನ ಯುಗದ ವೇನಿಸ್. ಇರುವ, ಬರುವ ಜನಗಳಷ್ಟೇ ಆಧುನಿಕರು. ನಗರ, ಅಂಗಡಿ, ಕಾಲುವೆ, ದೋಣಿ, ಚರ್ಚುಗಳು—ಸಮಗ್ರ ವಾತಾವರಣ ಅತಿ ಸುಂದರವಾದ ಪ್ರಾಚೀನ ಯುಗಕ್ಕೆ ಸಲುತ್ತದೆ. ಇಲ್ಲಿ ಬಂದವ ಆಲಸಿಯಾಗುತ್ತಾನೆ; ಉಂಡಾಡಿಯಾಗುತ್ತಾನೆ; ಕಾಲಾತೀತನಾಗುತ್ತಾನೆ.

ನಾಲ್ಕೈದು ಶತಮಾನಗಳ ಹಿಂದೆ ಕೆನಲಿಟೋ ಎಂಬ ವೇನಿಸಿನ ಚಿತ್ರಕಾರ, ಈ ನಗರದ ಪ್ರತಿಯೊಂದು ಮೂಲೆಯನ್ನೂ ಚಿತ್ರಿಸಿ, ಅಮರಗೊಳಿಸಿದ್ದಾನೆ. ಇಂದಿಗೂ ಈ ನಗರದ ಬಣ್ಣ ಬೆಡಗು, ಉಲ್ಲಾಸಮಯ ಆವರಣ ಹಾಗೇ ಉಳಿದಿದೆ. ಇಲ್ಲಿನ ಕಾಲುವೆಗಳಲ್ಲಿ ತೇಲಾಡುವುದೊಂದು ಅನುಪಮ ಅನುಭವ. ವಿಹಾರಕ್ಕಾಗಿ ಹೊರಡುವವರು ಪೂರ್ವಯುಗದ ಮರದ ದೋಣಿಗಳಲ್ಲಿ ಕುಳಿತುಕೊಂಡು ಹೋಗುತ್ತಾರೆ. ಆ ದೋಣಿಗಳ ಮುಂಗೋಟು ತಲೆಯೆತ್ತಿದ ಹಾವಿನಂತೆ ಕಾಣುತ್ತದೆ. ಎಲ್ಲವೂ ಅದೇ ಮಾದರಿಯ ಹೋಣಿಗಳು. ದೋಣಿಕಾರರು ಬಿಳಿಯ ಅಂಗಿ, ಚಲ್ಲಣ ತೊಟ್ಟು, ತಲೆಗೊಂದು ಹುಲ್ಲಿನ ಟೊಪ್ಪಿ ಧರಿಸುತ್ತಾರೆ. ಟೊಪ್ಪಿಯ ಸುತ್ತ ಹಾರಾಡುವ ಕೆಂಪು ರಿಬ್ಬನ್. ಹಳೆಗಾಲದ ಉಡುಗೆಯದು. ಇಂಥ ದೋಣಿಗಳಲ್ಲಿ ಕುಳಿತು ವಿರಾಮವಾಗಿ ಹಿರಿಯ ಕಾಲುವೆಯಲ್ಲಿ ಅಲೆದಾಡತೊಡಗಿದರೆ, ಎರಡು ಕಡೆಯ ದಂಡೆಗಳಲ್ಲೂ ಸುಂದರವಾದ ಪ್ರಾಚೀನ ಮನೆಗಳು, ವ್ಯಾಪಾರದ ಮಳಿಗೆಗಳು ಕಾಣಿಸುತ್ತವೆ. ಅವು ತಮ್ಮ ಪ್ರತಿಬಿಂಬಗಳನ್ನು ಲಲಿತವಾಗಿ ನೀರಿನಲ್ಲಿ ಕೆಡೆಯುತ್ತಿರುತ್ತವೆ. ಈ ಕಾಲುವೆಯೇ ಚಿತ್ರಕಾರ ಕೆನೆಲಿಟೋವಿಗೆ ಅನಂತ ಸ್ಫೂರ್ತಿಯನ್ನು ಉಂಟುಮಾಡಿದ್ದು. ಈ ದಾರಿಯಲ್ಲಿ ಕಾಣಿಸುವ ಪ್ರಾಚೀನ ಚರ್ಚುಗಳು ಸಂಖ್ಯೆಯಲ್ಲಿ ಒಂದೆರಡಲ್ಲ; ಅನೇಕ. ಪ್ರತಿಯೊಂದರಲ್ಲೂ ಮಧ್ಯಯುಗದ ವೇನಿಸಿನ ಸೌಂದರ್ಯ ತುಳುಕಾಡುತ್ತದೆ. ನಡೆಯುವ

ಮಾರ್ಗಗಳೆಲ್ಲ ಕಿರಿದಾದ ಓಣಿಗಳು. ದಾರಿಯಲ್ಲೆಲ್ಲ ವಿರಾಮಶೀಲರಾಗಿ ನಡೆಯುವ ಜನ; ದಾರಿಯ ಮಗ್ಗುಲುಗಳಲ್ಲಿ ನೂರಾರು ಬಗೆಯ ಹಣ್ಣು ಹಂಪಲುಗಳನ್ನು, ತರಕಾರಿಗಳನ್ನು ಮಾರುವ ದೇಶೀಯರು. ಯಾವನೇ ಇಲ್ಲಿಗೆ ಬರಲಿ–ಈ ಮೆಲುನಡೆಯ ಜನಜೀವನದಲ್ಲಿ ಒಂದಾಗಿಬಿಡುತ್ತಾನೆ.

ಸಾನ್ ಮಾರ್ಕೋ ಎಂಬುದು ಇಲ್ಲಿನ ಒಂದು ಪ್ರಸಿದ್ಧ ಕೇಂದ್ರ. ಇದು ಕಾಲುವೆಗೆ ತಗಲಿಕೊಂಡಿದೆ. ಈ ಸ್ಥಳದಲ್ಲಿ ಬಹು ದೊಡ್ಡದಾದ ಒಂದು ನಗರ ಚೌಕವಿದೆ. ಅದರ ಆಚೀಚೆಗೆಲ್ಲ ಉನ್ನತವಾದ ಸೌಧಗಳಿವೆ. ಹಿಂದಿನ ಕಾಲದ 'ಡೋಗೇ'ಯರು ಅಂದರೆ ಡ್ಯೂಕರುಗಳು ವಾಸಿಸುತ್ತಿದ್ದ ಅರಮನೆಯೂ ಇಲ್ಲಿದೆ. ಅದಕ್ಕೆ ತಗಲಿಕೊಂಡು ಸಾನ್ ಮಾರ್ಕೋ ಇಗರ್ಜಿ ಇದೆ. ಈ ಚೌಕದಲ್ಲಿ ಒಂದೆರಡು ಲಕ್ಷ ಜನಗಳು ಕೂಡಬಹುದು. ವೇನಿಸ್ ತನ್ನ ಸೋಲನ್ನೊಪ್ಪಿಕೊಂಡು, ವಿಜಯಿಯಾಗಿ ಬಂದ ನೆಪೋಲಿಯನನ ಮುಂದೆ ತಲೆವಾಗಿದ ಸ್ಥಾನ ಇದು. ಈ ಚೌಕದಲ್ಲಿರುವ ಮ್ಯೂಸಿಯಮಿನಲ್ಲಿ ವೇನಿಸಿನ ಚಿತ್ರಕಾರನೊಬ್ಬ,ಮೇಲಿನ ಘಟನೆಯನ್ನು ಸುಂದರವಾಗಿ ಚಿತ್ರಿಸಿದ್ದಾನೆ. ಅದೇ ಮ್ಯೂಸಿಯಮಿನಲ್ಲಿ ಹದಿಮೂರು ಹದಿನಾಲ್ಕನೆಯ ಶತಮಾನಗಳ ನೂರಾರು ಸುಂದರ ಚಿತ್ರಗಳಿವೆ. ಅವು ವೇನಿಸಿನ ಪ್ರಾಚೀನ ವೈಭವವನ್ನೆಲ್ಲ ಚಿತ್ರಿಸುತ್ತವೆ. ಇಲ್ಲಿನ ಸಾನ್ ಮಾರ್ಕೋ ಇಗರ್ಜಿಯು ರಮಣೀಯ ಗೋಪುರಗಳುಳ್ಳ ಸುಂದರವಾದ ಕಟ್ಟಡ. ಅದರ ಹೊರಗಿನ ದ್ವಾರಗಳು, ಕಮಾನುಗಳು, ಗೋಪುರಗಳು ಮುಸ್ಲಿಮ್ ವಾಸ್ತುಶೈಲಿಯ ಪ್ರಭಾವವನ್ನು ಸೂಚಿಸುತ್ತವೆ.

ಇಲ್ಲಿನ ಡೋಗೇ ಅರಮನೆಯು ವಿಶೇಷವಾಗಿ ಪ್ರೇಕ್ಷಕರನ್ನು ಮರಳುಗೊಳಿಸುವ ಸ್ಥಳವಾಗಿದೆ. ಅದರ ಹೊರಗಿನ ನೋಟ ಅಷ್ಟೊಂದು ವಿಶೇಷವಾಗಿ ಕಾಣಿಸುವುದಿಲ್ಲ–ಉನ್ನತವಾದ ನಾಲ್ಕು ಸುತ್ತಲಿನ ಗೋಡೆಗಳಿಂದ ಕೂಡಿದ ಒಂದು ಕೋಟೆಯಂತೆ ಕಾಣಿಸುತ್ತದೆ. ಒಳಗಿನ ಆಕೃತಿ ಮಾತ್ರ ಅರಮನೆಯ ಬೆಡಗನ್ನು ತೋರಿಸುವಂಥದು. ತೊಟ್ಟಿಯ ಆಕಾರದ್ದು. ಅದರ ಕೆಳ ಭಾಗದಲ್ಲೂ ಉಪ್ಪರಿಗೆಯಲ್ಲೂ ಇಪ್ಪತ್ತು ಮೂವತ್ತು ದೊಡ್ಡ ದೊಡ್ಡ ಕೊಟಡಿಗಳಿವೆ. ಪ್ರತಿಯೊಂದು ಕೊಟಡಿಯ ಗೋಡೆಗಳ ಮೇಲೂ,ಮುಚ್ಚಿಗೆಯಲ್ಲೂ ಅನೇಕ ತೈಲ ಚಿತ್ರಗಳಿವೆ. ಪಾವಲೋ ವೆರೋನೀಸ್, ಟಿಂಟಿರೆಟೋ, ಟೈಟನುರುಗಳ ಚಿತ್ರಕಲಾ ಸಂಪತ್ತನ್ನು ಕಾಣಲು ಇಲ್ಲಿಗೇನೇ

ಬರಬೇಕು. ವೆರೋನೀಸನ ಒಂದು ಚಿತ್ರವು "ಯುರೋಪಿನ ಮಾನಭಂಗ" ಎಂಬುದು. ಇದರಲ್ಲಿ ಉಡುಗೆ ತೊಡುಗೆಯಲ್ಲಾಗಲೀ ದೃಶ್ಯದಲ್ಲಾಗಲೀ ಆತ ಟ್ಶಿಟನ್ ತೋರಿಸಿದ ಶೈಲಿಯನ್ನು ತೀರ ಸಮೀಪಿಸುತ್ತಾನೆ. "ವೈಭವ" ಎಂಬೊಂದು ಚಿತ್ರದಲ್ಲಿ ವೆರೋನೀಸನ ಸ್ವ-ರೂಪ ವ್ಯಕ್ತವಾಗುತ್ತದೆ. "ವೃದ್ಧಾಪ್ಯ ಮತ್ತು ತಾರುಣ್ಯ"ವೆಂಬ ಅವನೊಂದು ಚಿತ್ರ ತುಂಬ ಭಾವ ಪೂರಿತವಾದುದು. ವಯಸ್ಸಿನ ಅಂತರದಿಂದ, ಅನುಭವಗಳ ವ್ಯತ್ಯಾಸದಿಂದ ಮಾನವನ ಮನಸ್ಸು ಹೇಗೆ ಪಕ್ವಗೊಳ್ಳುತ್ತದೆ ಎಂಬುದು ಅದರಲ್ಲಿ ವ್ಯಕ್ತ ವಾಗುತ್ತದೆ. "ಮಾರ್ಕ್ಸ್ ಮತ್ತು ನೆಪ್ಚೂನ್" "ಉದ್ಯೋಗ ಮತ್ತು ತರ್ಕ". ಇಂಥ ವಿಚಿತ್ರ ವಿಷಯಗಳನ್ನೂ ವೆರೋನೀಸ್ ಆರಿಸಿಕೊಂಡಿದ್ದಾನೆ.

ಟಿಂಟರೆಟೋ ತನ್ನ ಅಗಾಧ ಚಿತ್ರ ಕಲಾ ಸ್ಫೂರ್ತಿಯನ್ನೆಲ್ಲ ವೇನಿಸಿಗಾಗಿ ಧಾರೆಯೆರೆದ ಮಹಾನುಭಾವ. "ಬೇಕಸ್, ಎರಿಡ್ನೆ ಮತ್ತು ವೀನಸ್" ಎಂಬ ಒಂದು ಚಿತ್ರದಲ್ಲಿ ಚಿತ್ರಗತ ಮೂವರು ವ್ಯಕ್ತಿಗಳು ಗಾಳಿಯಲ್ಲಿ ತೇಲುವಂತೆ ಸಮರಸಗೊಳ್ಳುತ್ತಾರೆ. ವೀನಸಳು ಎರಿಡ್ನೆ ಮತ್ತು ಬೇಕಸ್‌ರೊಡನೆ ವಿನೋದಕ್ಕೆಹೊರಟ ಮಾಯಗಾತಿಯಾಗಿ ಕಾಣಿಸುತ್ತಾಳೆ.ಟಿಂಟರೆಟೋವಿಗೆ ಸಣ್ಣ ಪುಟ್ಟ ಚಿತ್ರಗಳನ್ನು ಬರೆದೇ ತೃಪ್ತಿಯಿಲ್ಲ. ಅವನು ಬರೆದ "ಸ್ವರ್ಗ" ಎಂಬೊಂದು ಚಿತ್ರಸುಮಾರು ಮೂವತ್ತುಅಡಿ,ಎಂಬತ್ತು ಅಡಿ ಗಾತ್ರವಾಗಿದೆ. ಅದರಲ್ಲಿ ಎಂಟುನೂರು ಮಾನವ ರೂಪಗಳಿವೆ. ಈ ಚಿತ್ರವನ್ನು ಬರೆಯಲು ಎರಡು ವರ್ಷ ಕಾಲ ದುಡಿದ. ಸ್ವರ್ಗದಲ್ಲಿ ಯೇಸುವು ಮೇರಿಯನ್ನು ಬರ ಮಾಡಿ ಕೊಳ್ಳುವಂತಿದೆ. ಮಾನವ ಕೋಟಿ ಹಂಬಲದಿಂದ ಮುಖ ಮೇಲೆ ಮಾಡಿ, ಸ್ವರ್ಗವನ್ನಾಶಿಸುವಂತೆ ಕಾಣುತ್ತದೆ. ಈ ಚಿತ್ರದಲ್ಲಿ ಇಷ್ಟೊಂದು ವ್ಯಕ್ತಿರೂಪಗಳಿದ್ದರೂ, ಅವುಗಳ ರೇಖೆ ಮತ್ತು ಬಣ್ಣಗಳನ್ನು ಅವನು ಮೇಳವಿಸಿದ ವಿಧಾನ ವಿಚಿತ್ರವಾದುದು. ಇದೇ ಚಿತ್ರಕಾರನ ಇನ್ನು ಕೆಲವು ಚಿತ್ರಗಳನ್ನು ನಾನು ಸಾನ್ ರೋಕೋ ಇಗರ್ಜಿಯಲ್ಲಿ ನೋಡಿದೆ. ಇದು ವಿಸ್ತಾರವಾದ ಇನ್ನೊಂದು ಚರ್ಚ್; ಎರಡೆರಡು ಅಂತಸ್ತುಗಳುಳ್ಳದ್ದು. ಕೆಳಗೂ ಮೇಲೂ ಟಿಂಟರೆಟೋ ಮೊದಲಾದ ಕಲಾವಿದರು ಬರೆದ ಹಲವ ಸುಂದರ ಚಿತ್ರಗಳಿವೆ.

ಇಲ್ಲಿನ ಡೋಗೇ ಅರಮನೆಯು ಕೆಲವು ಶತಮಾನಗಳ ಇತಿಹಾಸವನ್ನು ಹೇಳುತ್ತದೆ. ಅದನ್ನು ಎಷ್ಟೋ ಬಾರಿ ಸುಟ್ಟರು, ಎಷ್ಟೋ ಬಾರಿ ಕಟ್ಟಿದರು.

ಈಗ ಕಾಣುತ್ತಿರುವ ರಚನೆಯು ಸುಮಾರು ಹನ್ನೊಂದನೆಯ ಶತಮಾನದಿಂದ ಹದಿನಾಲ್ಕನೆಯ ಶತಮಾನದ ವರೆಗೆ ಬೆಳೆದು ಬಂದುದು. ಅರಮನೆ ಎಂದೊಡನೆ ರಾಜವೈಭವವೆಲ್ಲಾ ಇದೆ. ಕಲೆ ಕಸುಬುಗಾರಿಕೆಗಳ ಸಂಪತ್ತೆಲ್ಲ ತುಂಬಿಕೊಂಡಿದೆ. ಅದರ ಇನ್ನೊಂದು ಚಿತ್ರವನ್ನೂ ಊಹಿಸಿ ನಾವು ತಿಳಿದುಕೊಳ್ಳಬೇಕಾಗುತ್ತದೆ—ಅಧಿಕಾರ ತೃಷೆ, ಕೊಲೆ, ಕ್ರಾಂತಿಗಳ ಚಿತ್ರವದು. ಹಾಗೆ ಬಂಡೆಬ್ಬಿಸಿ, ಯಶಸ್ವಿಯಾಗದ ವ್ಯಕ್ತಿಯು ಏನು ಸುಖ ಅನುಭವಿಸಬೇಕಾಗುತ್ತದೆ—ಎಂಬುದನ್ನು ಇಲ್ಲಿಯೇ ಕಾಣಬಹುದು. ಈ ಅರಮನೆಗೆ ತಾಗಿಕೊಂಡು ಒಂದು ಕಾಲುವೆ ಇದೆ. ಅದನ್ನು ದಾಟಿ ಸರಿಯುವುದಕ್ಕೆ ಅಗಲ ಕಿರಿದಾದ, ಗೋಡೆಗಳಿಂದ ಆವೃತವಾದ, ಕತ್ತಲೆ ತುಂಬಿದ, ಒಂದು ಸೇತುವೆ ಇದೆ. ಅದರಾಚೆಗೆ ಬೆಳಕಿಗೆ ದೂರವಾದ ಸೆರೆಮನೆಗಳಿವೆ. ಕತ್ತಲು ತುಂಬಿದ ಕೋಣೆಗಳು, ಮಲಗುವುದಕ್ಕೆ ಕಲ್ಲಿನ ಹಾಸಿಗೆ, ಆಹಾರ ಪಡೆಯುವುದಕ್ಕೆ ಕಬ್ಬಿಣದ ಸರಳುಳ್ಳ ಕಿರಿಯ ರಂಧ್ರಗಳಿವೆ! ಎಷ್ಟು ಜನ— ಒಂದು ದಿನ ಈ ಅರಮನೆಯ ವೈಭವದಲ್ಲಿ ನಲಿದಾಡಿ, ಈ ಸೇತುವೆ ದಾಟಿ ಈಚೆ ಬಂದು, ಯಾವಜ್ಜೀವನ ನರಳಿ ಸತ್ತರೊ! ಈ ನೆನಪೇ ಅಲ್ಲಿನ ಜನಗಳ ಬಾಯಿಂದ "ದುಃಖ ಸೇತು" ಎಂಬ ಹೆಸರನ್ನು ಈ ಸೇತುವೆಗೆ ಕೊಡಿಸಿತು. ಇಂಗ್ಲಿಷ್ ಕವಿ ಥಾಮಸ್ ಹುಡ್ 'Bridge of sighs' ಎಂಬೊಂದು ಕವನವನ್ನೂ ಬರೆದಿದ್ದಾನೆ.

ನಗರದಲ್ಲಿ ಆಗಾಗ ನಾಟಕಗಳು, ಸಂಗೀತಗಳು ನಡೆಯುತ್ತವೆ. ಅನುದಿನ ಎಂಬಂತೆ ಚಿತ್ರಕಲೆಯ ಅಭ್ಯಾಸಿಗಳು ಬಂದು ಯಾವುದಾದರೊಂದು ಮೂಲೆಯಲ್ಲಿ ಕುಳಿತುಕೊಂಡು ಚಿತ್ರಗಳನ್ನು ಬರೆಯುತ್ತಿರುತ್ತಾರೆ. ಇಟಲಿಯ ಅನೇಕ ನಗರಗಳು ಹೀಗೆ ಕಲಾವಿದರಿಗೆ ಸ್ಫೂರ್ತಿಯನ್ನುಂಟುಮಾಡುವಂಥವು. ಇಲ್ಲಿಗೆ ಸಮೀಪವಾಗಿ "ಪಾಡುವಾ" ಎಂಬ ಕ್ಷೇತ್ರವಿದೆ. ಅದು ಸೈಂಟ್ ಎಂಥೊನಿಯ ಜನ್ಮ ಭೂಮಿಯಾಗಿದೆ. ಒಂದು ಹೆಸರಾದ ವಿಶ್ವ ವಿದ್ಯಾಲಯವೂ ಅಲ್ಲಿದೆ. "ಪಾಡುವಾ" ಎಂಬುದು ಮಧ್ಯಯುಗದ ಅನೇಕ ಚಿತ್ರಕಾರರಿಗೆ ಹೆಸರಾದ ಊರು. ಅಲ್ಲಿನ ಚಿತ್ರಶೈಲಿಯೇ ಬೇರೆಯಾಗಿದೆ; "ಪಾಡುವಾ ಶೈಲಿ" ಎಂದೇ ಅದಕ್ಕೆ ನಾಮಕರಣ. ಅಲ್ಲಿಗೂ ಇಲ್ಲಿಂದ ತುಸು ದೂರದಲ್ಲಿರುವ 'ರೆವೆನಾ'ಕ್ಕೂ ಹೋಗಬೇಕೆಂದು ನಾನು ಮೊದಲು ಎಣಿಸಿಕೊಂಡಿದ್ದರೂ ಹೋಗುವುದು ಸಾಧ್ಯವಾಗಲಿಲ್ಲ. ರೆವೆನಾ ಸ್ಟೈಂಡ್ ಗ್ಲಾಸ್

ಕೆಲಸಗಳಿಗೆ ಬಹು ಹೆಸರಾದ ಸ್ಥಳ. ಅದನ್ನು ನೋಡುವುದಕ್ಕೇನೇ ಅನೇಕ ಜನರು ಹೋಗುತ್ತಾರೆ.

ಗಾಜಿನಲ್ಲಿ ಸುಂದರ ಆಕಾರಗಳನ್ನು ಮಾಡಿ, ಬಣ್ಣಗಳನ್ನು ತುಂಬಿಸಿ ಅಲಂಕಾರಿಕ ವಸ್ತುಗಳನ್ನು ಮಾಡುವುದರಲ್ಲಿ ವೇನಿಸ್ ಮೊದಲಿಂದ ಹೆಸರಾದದ್ದು. ಇಂದಿಗೂ ಈ ಕಲೆಯು ಗುಡಿ ಕೈಗಾರಿಕೆಯಾಗಿ ಈ ನಗರದಲ್ಲಿ ಉಳಿದುಬಂದಿದೆ. ಡೋಗೇ ಅರಮನೆಗೆ ಸಮೀಪವಾದ ಕೆಲವೊಂದು ಅಂಗಡಿಗಳಲ್ಲಿ ಅವುಗಳನ್ನು ನೋಡಿದಾಗ ನನಗೆ ಆಶ್ಚರ್ಯವಾಯಿತು. ಎಷ್ಟೊಂದು ರೂಪಗಳಲ್ಲಿ, ಬಣ್ಣಗಳಲ್ಲಿ ಅಲಂಕಾರಯುತವಾದ ಗೊಂಬೆಗಳನ್ನು, ಹೂದಾನಿಗಳನ್ನು, ಪಕ್ಷಿಗಳನ್ನು, ಪ್ರಾಣಿಗಳನ್ನು ಮಾಡಿ ಪ್ರದರ್ಶನಕ್ಕಿಟ್ಟಿದ್ದಾರೆ ಎನ್ನುವುದಕ್ಕಿಲ್ಲ. ಪ್ರಾಚೀನ ವೇನಿಸಿನ ಬಾಳಿನೊಡನೆ ಎಷ್ಟೋ ವ್ಯಾಪಾರೀ ಕುತಂತ್ರ, ರಾಜನೀತಿಯ ಕೌಟಿಲ್ಯಗಳು ಬೆರೆತಿದ್ದರೂ, ಅದು ಇಂದಿಗೂ ಜಗತ್ತಿಗೆ ಒಪ್ಪಿಸುತ್ತಿರುವ ಕಲಾ ವೈಭವವಾಗಲಿ, ಸೌಂದರ್ಯ ಉಪಾಸನೆಯಾಗಲಿ, ವಿಶೇಷವಾದದ್ದೇ ಸರಿ.

ವೇನಿಸಿನಲ್ಲಿ ಎರಡು ದಿನ ಆತ್ಮತೃಪ್ತಿಯಿಂದ ಕಳೆದ ನನಗೆ, ಮುಂದಿನ ಪಯಣವೆಲ್ಲವು ಅದೇ ತೆರನ ಸುಖಾನುಭವಗಳಿಂದ ಕೂಡಿದಂಥ ಯಾತ್ರೆಯಾಗಿ ಪರಿಣಮಿಸಿತು. ಫ್ಲಾರೆನ್ಸ್, ರೋಮ್ ಈ ಎರಡೂ ನಗರಗಳು ಯುಗಮಾನದ ಕಲೆಯ ಇತಿಹಾಸವನ್ನು ನಮ್ಮ ಕಣ್ಮುಂದೆ ಬಿತ್ತರಿಸುತ್ತವೆ.

## ೨೧. ಫ್ಲಾರೆನ್ಸ್ ನಗರ.

ಬಹುಕಾಲದಿಂದಲೂ ವಿದ್ಯೆ, ಕಲೆ, ಸಿರಿವಂತಿಕೆಗಳಿಂದ ಇಟಲಿಯಲ್ಲಿ ತನ್ನ ಹೆಸರನ್ನು ಮೆರೆಯಿಸಿಕೊಂಡು ಬಂದ ನಗರ–ಫ್ಲಾರೆನ್ಸ್ ಎಂಬುದು. ಆರ್ನೋ ಎಂಬ ನದಿ ದಂಡೆಯ ಇಕ್ಕಡೆಗಳಲ್ಲೂ ಈ ನಗರ ವಿಸ್ತರಿಸಿಕೊಂಡಿದೆ. ಇದು ಪ್ರಾಚೀನಕಾಲದ ನಗರವಾದರೂ ನಗರ ರಚನೆಯಲ್ಲಿ ರೋಮ್, ಮಿಲಾನ್‌ಗಳಂತೆ ಆಧುನಿಕವಾಗಿಯೇ ಕಾಣಿಸುತ್ತದೆ. ತುಂಬ ಅಗಲವಾದ ಬೀದಿಗಳಿವೆ; ದೊಡ್ಡ ನಗರ ಚೌಕಗಳಿವೆ. ಕೆಲವು ಶತಮಾನಗಳಿಂದಲೇ ಕಟ್ಟಿಕೊಂಡು ಬಂದ ಭವ್ಯ ಅರಮನೆಗಳು, ಸೌಧಗಳು, ಚರ್ಚುಗಳು ಕಾಣಸಿಗುತ್ತವೆ. ನಾಗರಿಕರ ವಿಹಾರಕ್ಕಾಗಿ, ವಿಲಾಸಕ್ಕಾಗಿ ಅನೇಕ ಸುಂದರ ಉದ್ಯಾನಗಳಿವೆ. ಈ ನಗರದಲ್ಲಿ ಲಿಯಡೋರ್ ಡ ವಿನ್ಸಿ ಹುಟ್ಟಿ ಬೆಳೆದವನು. ಆತ ಒಬ್ಬ ಶ್ರೀಮಂತನ ದಾಸೀ ಪುತ್ರನಾಗಿ ಹೇಳ ಹೆಸರಿಲ್ಲದೆಯೆ ಹುಟ್ಟಿದರೂ ಸ್ವಶಕ್ತಿಯಿಂದ, ಮೇಧಾವಿತನದಿಂದ ಜಗತ್ತನ್ನೇ ಬೆರಗುಗೊಳಿಸಿದ. ಚಿತ್ರಕಾರ ರಾಫೇಲ್, ಮೆಕೇಲ್ ಎಂಜಲೋ ಈ ನಗರದಲ್ಲಿ ಬಾಳಿ ತಮ್ಮ ಕಾಣಿಕೆಯನ್ನು ತೆತ್ತವರು. ಮೇಡೀಸಿ ಕುಟುಂಬ ಎಂಬ ಒಂದು ಪಾಳೆಯಗಾರರ ಮನೆತನ ಮೈಕೆಲ್ ಏಂಜಲೋವಿಗೆ ಆಶ್ರಯವನ್ನು ಕೊಟ್ಟಿತು. ಈ ನಗರವನ್ನು ಸ್ಮರಿಸುವಾಗ ಇನ್ನೊಬ್ಬ ಹೆಸರಾದ ಚಿತ್ರಕಾರನನ್ನು ನಾವು ಮರೆಯುವಂತಿಲ್ಲ–ಆತ 'ಬಾಟಿಸಿಲ್ಲಿ'. ಇಂಥ ಮಹಾನುಭಾವರುಗಳು ಸೇರಿ ಫ್ಲಾರೆನ್ಸನ್ನು ಅಮರವಾಗಿ ಮಾಡಿದ್ದಾರೆ.

ಇಲ್ಲಿ ನೋಡತಕ್ಕುದಾದ ಕಲಾಮಂದಿರಗಳೆಷ್ಟೋ ಇವೆ. ಚರ್ಚುಗಳು ಇನ್ನೆಷ್ಟೋ. ಮೆಡೋನಾ ಚರ್ಚ್, ಡುಮೋ ಕೆಥಿಡ್ರಲ್, ಸಾನ್ ಮಾರ್ಕೊ ಇಗರ್ಜಿ, ಸಾನ್ ಸ್ಪಿರಿಟೋ, ಸಾನ್ ಕ್ರೋಸೆ ಇಂಥವೆಲ್ಲ ಕಣ್ಣಿನ ಹಬ್ಬಗಳು. ಡೂಮೋ ಇಗರ್ಜಿಯ ಬಳಿ ಇರುವ ಅತ್ಯುನ್ನತವಾದ ಒಂದು ಕೊತ್ತಳವನ್ನೇರಿದರೆ ಈ ಪ್ರೇಕ್ಷಣೀಯ ಸ್ಥಳಗಳೆಲ್ಲ ಒಂದೆರಡು ಮೈಲು ವಿಸ್ತಾರದೊಳಗೆ ನಿಂತಿರುವುದು ಕಾಣಿಸುತ್ತದೆ. ನಾನು ರೈಲ್ವೇ ನಿಲ್ದಾಣಕ್ಕೆ ತೀರ ಸಮೀಪವಾಗಿದ್ದ ಒಂದು ಹೊಟೇಲಿನಲ್ಲಿ ಉಳಿದುಕೊಂಡಿದ್ದೆ. ಅದರ ಬೆಂಗಡೆಯಲ್ಲಿಯೇ ಮೆಡೋನಾ ಇಗರ್ಜಿ ಇತ್ತು. ಇದನ್ನು ಮೆಡೀಸಿ ಚೇಪಲ್ ಎಂದೂ ಕರೆಯುತ್ತಾರೆ. ಹೊಟೇಲಿನ ಎರಡು ಫರ್ಲಾಂಗಿನೊಳ

ಗಾಗಿ ಡುವೋ ಇಗರ್ಜಿ ಇತ್ತು. ಈ ಎರಡು ಚರ್ಚುಗಳಿಗೂ ವರ್ತುಲಾ ಕೃತಿಯ ಗರ್ಭಗುಡಿಯಿದೆ. ಅದರಿಂದ ನೀಳವಾಗಿ ಮುಂದಕ್ಕೂ ಎಡ ಬಲಕ್ಕೂ ಚಾಚಿರುವ ಪ್ರಾರ್ಥನಾಂಗಣಗಳಿವೆ. ಮಂದಿರದ ಭಾಗ ಬಹು ಉನ್ನತವೂ ಆಗಿದೆ. ಗರ್ಭಗುಡಿಯ ಮೇಲೆ ಅರ್ಧಗೋಲಾಕಾರದ ಬಹು ಎತ್ತರದ ಗೋಪುರವಿದೆ. ಮೆಡೀಸಿ ಚೇಪೆಲಿನ ಒಳಗಡೆ ಆ ಕುಟುಂಬದ ಮುಖಂಡರ ಸಮಾಧಿಗಳಿವೆ. ಮೈಕೆಲ್ ಏಂಜಲೋ, ಲೊರೆಂಜೋ ಡಿ ಮೆಡೀಸಿಯ ಭವ್ಯವಾದೊಂದು ಪ್ರತಿಮೆಯನ್ನು, ಅಲ್ಲಿ ಮಾಡಿರಿಸಿದ್ದಾನೆ. ಯೋದ್ಧ ಉಡುಗೆಯಲ್ಲಿ, ಗಲ್ಲಕ್ಕೆ ಕೈಕೊಟ್ಟು ಯೋಚಿಸುತ್ತಿರುವ, ಈ ಮುಖಂಡನ ಆಕೃತಿ ಬಹು ಭವ್ಯವಾಗಿದೆ. ವಿಗ್ರಹದ ಕೆಳಗೆ ಚಿಂತಾಕುಲ ರಾದ ಗಂಡು, ಹೆಣ್ಣು ವಿಗ್ರಹಗಳಿವೆ. ಇಂಥದೇ ಇನ್ನೊಂದು ಸಮಾಧಿಯ ಪ್ರತಿಮೆಗಳನ್ನು ಲೊರೆಂಜೋ ಮೆಡೀಸಿಯ ಹಿರಿಯನಾದ ಗಿಲಾನೋ ಮೆಡೀಸಿಯ ಸಲುವಾಗಿ ಮಾಡಿದ್ದಾನೆ. ಅದೂ ಮೈಕೇಲ್ ಏಂಜಲೋವಿನ ಕೃತಿ. ಈ ಶಿಲ್ಪಿಯ ಬಾಳು ಈ ಶ್ರೀಮಂತ ಆಶ್ರಯದಾತನಿಂದ ಬಹು ಹೆಚ್ಚಿನ ಪ್ರೋತ್ಸಾಹಪಡೆಯಿತು. ಈ ಸ್ಥಳದಲ್ಲಿಯೇ ಅನೇಕ ತೈಲ ಚಿತ್ರಗಳೂ ಇವೆ.

ಈ ಮಂದಿರದ ವೈಭವವನ್ನು ನೋಡಿಕೊಂಡು ಡೂಮೋ ಕೆಥಿಡ್ರಲಿಗೆ ಹೋದರೆ— ಅದರ ಭವ್ಯತೆಯನ್ನೂ ಉನ್ನತಿಯನ್ನೂ ಕಂಡು ಎದೆ ತಲ್ಲಣ ಗೊಳ್ಳುತ್ತದೆ. ಒಳ ಹೊರಗಿನ ಲಾವಣ್ಯ, ಬೆಡಗುಗಳು ಅಷ್ಟು ಹೆಚ್ಚಿನವು. ಈ ಮಂದಿರದಿಂದ ದೊಡ್ಡ ದೊಡ್ಡ ಕಂಚಿನ ಬಾಗಿಲುಗಳು ಸುಂದರವಾದ ಉತ್ಕೀರ್ಣ ಶಿಲ್ಪಗಳಿಂದ ತುಂಬಿಕೊಂಡಿವೆ. ಅದರ ಎದುರಿಗೇನೇ ಎಂಟು ಮೂಲೆಯ ಇನ್ನೊಂದು ಮಂದಿರವಿದೆ— ಬೆಪ್ಟಿಸ್ಟ್ರಿ. ಇಟೆಲಿಯ ಹೆಸರಾಂತ ಶಿಲ್ಪಿಗಳನೇಕರು ಇದರ ಬಾಗಿಲುಗಳನ್ನು, ಗೋಡೆಗಳನ್ನು ಸುಂದರವಾಗಿ ಅಲಂಕರಿಸುವುದರಲ್ಲಿ ಶ್ರಮಿಸಿದ್ದಾರೆ.

ಈ ಸ್ಥಳಕ್ಕೆ ಸಮೀಪವಾಗಿ ವೀಚಿಯೊ ನಗರಭವನವಿದೆ. ವೀಚಿಯೋ ಎಂಬುದು ಒಂದು ಬಹುದೊಡ್ಡ ಅರಮನೆಯಂಥ ಕಟ್ಟಡವಾಗಿದೆ. ಹೊರಗಿನ ಗೋಡೆಗಳೆಲ್ಲ ಚೌಕವೂ ಉನ್ನತವೂ ಆದುವು. ಮಗ್ಗುಲಿನ ಒಂದು ಕೊತ್ತಳ ಇನ್ನಷ್ಟು ಎತ್ತರವಾಗಿದೆ. ಅದರ ಎದುರಿಗೆ ಬಹು ದೊಡ್ಡ ಪಿಯಾಜಾ ಇದೆ. ಅದರ ಒಂದು ಮಗ್ಗುಲಿಲ್ಲಿ ಒಂದು ದೊಡ್ಡ ಚಾವಡಿ ಇದೆ. ಈ ಚಾವಡಿಯ ಹಲವು ಭವ್ಯವಾದ ಶಿಲ್ಪಗಳಿವೆ. ವೀಚಿಯೋ ಅರಮನೆಯ ಇನ್ನೊಂದು

ಮಗ್ಗುಲಲ್ಲೇ ಒಂದು ಕಾರಂಜಿ ಇದೆ. ಕಾರಂಜಿಯ ನೀರು, ಬರಿದೆ ಚಿಮ್ಮಿ ಚೆಲ್ಲುವ ಬದಲು—ಅದರ ನಡುವೆಯೂ ಸುತ್ತಲೂ ನಿಲ್ಲಿಸಿದ ಅನೇಕ ಪೌರಾಣಿಕ ಶಿಲ್ಪಗಳ ಮೇಲೆ ಹಾರಿ, ಸರಸವಾಡುತ್ತದೆ. ಈ ರೋಮನರು ಕಾರಂಜಿಗಳನ್ನು ನಿರ್ಮಿಸುವುದರಲ್ಲಿ ಅತಿ ಕುಶಲರು. ಅವರು ರಚಿಸಿದ ಒಂದೊಂದು ಕಾರಂಜಿಯೂ ಒಂದೊಂದು ತೆರ. ಸುಂದರವಾದ ಶಿಲ್ಪ ಸಮುದಾಯವಿಲ್ಲದೆಯೆ ಕಾರಂಜಿ ಎಂಬುದಿಲ್ಲ. ಇವುಗಳ ನಿರ್ಮಾಣದಲ್ಲಿ ಯಾವ ದೇಶವೂ ಇಟಲಿಯನ್ನು ಸರಿಗಟ್ಟುವಂತಿಲ್ಲ.

ವೀಚಿಯೋ ಅರಮನೆಯ ಮುಂದೆ ಸುಮಾರು ನಾಲ್ವತ್ತು ಅಡಿ ಉದ್ದವಾದ, ದಪ್ಪನಾದ ಒಂದು ಹಾಲುಗಲ್ಲು ಬಿದ್ದಿತ್ತಂತೆ. ಇಟಲಿಯ ಅತ್ಯಂತ ಪ್ರಸಿದ್ಧ ಶಿಲ್ಪಿಗಳು ಸಹ, ಆ ಕಲ್ಲಿನ ಗಾತ್ರವನ್ನು ಕಂಡು ಬೆರಗಾಗಿ, ಮುಟ್ಟುವುದಕ್ಕೇ ಹೋಗಲಿಲ್ಲ. ಆ ಗಾತ್ರಕ್ಕೆ ಸಮನಾಗಿ ಮನಸ್ಸನ್ನು ನಿಡಿದು ಸುಂದರ ಸೃಷ್ಟಿ ಮಾಡಲಾರದ ಶಿಲ್ಪಿ ಇಲ್ಲದೆಯೆ ಅದು, ಗಾಳಿ ಮಳೆಗಳಲ್ಲಿ ಬಿದ್ದುಕೊಂಡಿತ್ತು. ಅದಕ್ಕೆ ಜೀವಕಳೆಯನ್ನು ಪ್ರೇರಿಸುವುದಕ್ಕೆ ಮೈಕೆಲ್ ಏಂಜಲೋ ಹುಟ್ಟಬೇಕಾಯಿತು. ಈತ ಅದನ್ನು ಕೊರೆದು 'ಡೇವಿಡ್'ನ ಅತಿ ಭವ್ಯವಾದ ವಿಗ್ರಹವನ್ನು ರಚಿಸಿದ. ಮಾನವ ಶರೀರದ ಶೋಭೆ, ಸ್ಥೈರ್ಯ, ಗೌರವಗಳನ್ನೆಲ್ಲ ಡೇವಿಡನಲ್ಲಿ ಮೈಕೇಲ್ ಏಂಜಲೋ ಮೂರ್ತೀಭವಿಸಿ ನಿಲ್ಲಿಸಿದ್ದಾನೆ. ಇಂಥೊಂದು ಪ್ರತಿಮೆ ಇವತ್ತು ವೀಚಿಯೋ ಅರಮನೆಯ ಮುಂದಿದೆ; ಒಂದು ಒಳಗೂ ಇದೆ. ಇಲ್ಲಿನ ಗೆಲರಿಗಳಲ್ಲಿ ಮೈಕೆಲ್ ಏಂಜಲೋವಿನ ಹಲವು ಕೃತಿಗಳಿವೆ. ಏಕೆಡೆಮಿ ಗೆಲರಿಯಲ್ಲಿನ "ಅನಾ ಪ್ರಿಗೋನಿ" ಎಂಬ ಶಿಲ್ಪ ಅವನದೇ. ಹಿಂದೆಲ್ಲ ಕಲ್ಲು ಹಾಗೇ ಉಳಿದಿದೆ. ಎದುರಿನ ಭಾಗದಲ್ಲಿ ಅರ್ಧರೂಪಿಸಿದ ವಯೋವೃದ್ಧನೊಬ್ಬನ ಸುಂದರ ಆಕೃತಿಯಿದೆ.

ಈ ಅರಮನೆಯ ಸಮೀಪವಿರುವ ಚಾವಡಿಯಲ್ಲಿ ಹಲವು ಸುಂದರ ಪ್ರತಿಮೆಗಳಿವೆ. ಇವೆಲ್ಲ ಒಂದು ಕಾಲದ ರೋಮನರ ವೈಭವ, ಜೀವನ, ಸಾಹಸಗಳನ್ನು ಚಿತ್ರಿಸುತ್ತವೆ. ಗ್ರೀಕ್ ಕಥಾನಕದ 'ಪರ್ಸಿಯಸ್ಸ್'ನ ಸೇಡನ್ನು ಚಿತ್ರಿಸುವ ಒಂದು ಕಂಚಿನ ಪ್ರತಿಮೆ ಅತ್ಯದ್ಭುತವಾದದ್ದು. ಒಂದು ಕೈಯಲ್ಲಿ ನೆತ್ತರಿನಲ್ಲಿ ಅದ್ದಿದ ಕತ್ತಿಯನ್ನು ಆತ ಹಿಡಿದಿದ್ದಾನೆ. ಇನ್ನೊಂದು ಹಸ್ತದಲ್ಲಿ ವೈರಿಯ ರುಂಡವನ್ನು ಮೇಲಕ್ಕೆತ್ತಿ ಹಿಡಿದಿದ್ದಾನೆ. ಕಾಲಿನ ಕೆಳಗೆ ಶಿರತರಿದು ಮುದ್ದೆಗೊಂಡ ವೈರಿಯ ಶರೀರ ಬಿದ್ದಿದೆ. ಈ ವಿಗ್ರಹವನ್ನು ನಿರ್ಮಿ

ಸಿದಾತ 'ಬೆನ್‌ವೆನುಟೋ ಸೆಲಿನಿ' ಎಂಬವ. ಗಿಯೂಂಬೋಲೋನಾ ಎಂಬವ ಇನ್ನೊಬ್ಬ ಶಿಲ್ಪಿ. ಆತ ವಿಜಯಗಳಾದ ರೋಮನರು ಸೆಬೈನ್ ನಾರಿಯರ ಮಾನಭಂಗಮಾಡಿದ ಕಥಾನಕವೊಂದನ್ನು ಚಿತ್ರಿಸಿದ್ದಾನೆ. ಸೆಬೈನ್ ವೀರ ನೊಬ್ಬನನ್ನು ಕಾಲಕೆಳಗೆ ಹಾಕಿಕೊಂಡು, ಅವನ ಮಡದಿಯನ್ನು ಎತ್ತಿ ಸಾಗಿಸುವ ರುದ್ರ ನೋಟ ರೋಮನರ ಮದವನ್ನೆಲ್ಲ ತೋರಿಸುತ್ತದೆ. ಆತನದೇ ಆದ ಇನ್ನೊಂದು ಶಿಲಾಶಿಲ್ಪ 'ಎರ್ಕೊಲೇ ಮತ್ತು ಸೆಂಟರೋ' ಎಂಬುದು. ರೋಮನ್ ದೈತ್ಯ ಕಾಯನೊಬ್ಬ ಅರ್ಧ ಅಶ್ವ, ಅರ್ಧಮಾನವ ರೂಪಿಯಾದ ಮೃಗದೊಡನೆ ಕಾದಾಡುವುದನ್ನು ಚೆನ್ನಾಗಿ ಚಿತ್ರಿಸುತ್ತದೆ. ಇಲ್ಲೇ ಇನ್ನೊಂದು ಕಡೆ ಪಿಯೋ ಫೆಡಿ ಎಂಬವನ ಪ್ರತಿಮೆಗಳ ಗುಂಪಿದೆ. ಇದು ಕರಾರಾ ಶಿಲೆಯಲ್ಲಿ ಕೆತ್ತಿದ ಶಿಲ್ಪಪುಂಜ. ದೈತ್ಯಕಾಯನಾದ ರೋಮನನೊಬ್ಬ 'ಪೊಲಿಕ್ಸೀನಾ' ಎಂಬ ಪೌರಾಣಿಕ ಕನ್ಯೆಯನ್ನು ಅಪಹರಿಸುವ ಚಿತ್ರವದು. ಅರ್ಧನಗ್ನಾವಸ್ಥೆಯಲ್ಲಿರುವ ಆಕೆಯನ್ನು ಈ ರೋಮನ್ ಯೋದ್ಧ, ಒಂದು ಕಂಕುಳಲ್ಲಿ ಚಚ್ಚಿಕೊಂಡು, ತನ್ನನ್ನು ತಡೆಯುತ್ತಿರುವ ಇನ್ನಿಬ್ಬರು ಕನ್ಯೆಯರನ್ನು ತುಳಿದು ಸಾಗುವ ನೋಟ ಅತಿ ಅದ್ಭುತವಾದದ್ದು. ಇಲ್ಲಿನ ಒಂದೊಂದು ಪ್ರತಿಮೆಯೂ ಪ್ರಾಚೀನ ಯುಗದ ಮನೋಭಾವದ ಎರಡೆರಡು ಮುಖಗಳನ್ನು ಸಾರುತ್ತದೆ. ಸೌಂದರ್ಯದೊಡನೆ ಬೆರೆತಂಥ ಸ್ವಾರ್ಥ, ಶೌರ್ಯದೊಡನೆ ಬೆರೆತ ಕಾಮ, ಉದಾತ್ತ ಭಾವಗಳೊಡನೆ ಬೆರೆತ ಮಾನವನ ಕೀಳು ಪ್ರವೃತ್ತಿ- ಇವೆಲ್ಲ ಕತ್ತಲು ಕಳೆದುಕಾಣುವ ಬೆಳಕಿನಷ್ಟು ಸ್ಪಷ್ಟವಾಗಿ ಇಲ್ಲಿ ಚಿತ್ರಿತವಾಗಿವೆ. ಒಂದನ್ನು ನೋಡಿ ಕತ್ತೆತ್ತಿದರೆ, ಇನ್ನೊಂದನ್ನು ನೋಡಿ ತಲೆತಗ್ಗಿಸಬೇಕಾಗುತ್ತದೆ. ಮಾನವನಲ್ಲಿರುವ ಸುರ ಮತ್ತು ಅಸುರ ವೃತ್ತಿಗಳು ಎಷ್ಟು ಜತೆಯಲ್ಲಿ ಬದುಕಿ ಬೆಳೆದಿವೆ, ಎಂಬುದಕ್ಕೆ ರೋಮನ್ ಶಿಲ್ಪದಿಂದ ನೂರಾರು ಉದಾಹರಣೆಗಳನ್ನು ಕೊಡಬಹುದು.

ಈ ಚಾವಡಿಗೆ ಸಮೀಪವಾಗಿ 'ಉಫೀಜಿ ಗೆಲರಿ' ಎಂಬ ಬಹು ದೊಡ್ಡ ಕಲಾಮಂದಿರವಿದೆ. ಇಲ್ಲಿಂದ ಒಂದು ಮೈಲು ದೂರದಲ್ಲಿ 'ಹಾತೀ ಗೆಲರಿ' ಎಂಬ ಇನ್ನೊಂದು ಕಲಾಮಂದಿರವಿದೆ. ಉಫೀಜಿ ಗೆಲರಿಯಂತು ಬಹು ದೊಡ್ಡ ಸಂಗ್ರಹಾಲಯ. ಅದು ಕೇವಲ ಇಟೆಲಿಯನ್ ಶಿಲ್ಪ ಮತ್ತು ಚಿತ್ರ ಕಲೆಗಳ ಮಧ್ಯಯುಗದ ಸಂಪತ್ತುಳ್ಳದು. ಕಲೆಯ ಅಭ್ಯಾಸಿ ಇಲ್ಲಿ ತಪಸ್ಸಿಗೇಸ್ಲೇ ಬಂದು ಕುಳಿತಿರಬಹುದು. ಹಾತಿ ಗೆಲರಿಯು ಹಿಂದಿನ ಶತಮಾನ

ಗಳ ಹಲವು ಚಿತ್ರಕಾರರ ಕೃತಿಗಳನ್ನು ತೋರಿಸುತ್ತದೆ. ಇವೆರಡೂ ಒಂದ ಕ್ಕೊಂದು ಪೂರಕವಾಗಿರುವ ಕಲಾ ಮಂದಿರಗಳು. ಹಳೆಯ ಸಂಪ್ರದಾಯದ ಉಸಿರು ನೀರುಗಳನ್ನು ಸೇವಿಸಿಯೇ ಇಟಲಿಯಲ್ಲಿ ಬೆಳೆದ ಹೊಸ ಚಿತ್ರ ಸಂಪ್ರದಾಯವನ್ನು ನಾವಿಲ್ಲಿ ಕಾಣಬಹುದು.

ಸಾಮಾನ್ಯವಾಗಿ ಈ ದೇಶದ ಹಲವು ಚಿತ್ರಕಾರರು ತಮ್ಮ ಚಿತ್ರ ಗಳನ್ನು ಚರ್ಚುಗಳ ಅಲಂಕಾರಕ್ಕಾಗಿ, ಅರಮನೆಗಳ ಅಲಂಕಾರಕ್ಕಾಗಿ ಬರೆದುದರಿಂದ ಅಂಥವುಗಳನ್ನು ಕಾಣುವುದಕ್ಕೆ ನಾವು ಆಯಾಯ ಸ್ಥಳಗಳಿ ಗೇನೆ ಹೋಗಬೇಕಾಗುತ್ತದೆ. ಇನ್ನುಳಿದ ಅನೇಕಾನೇಕ ಚಿಕ್ಕ, ದೊಡ್ಡ ಚಿತ್ರಶಿಲ್ಪಗಳ ಸಂಗ್ರಹವನ್ನು ಉಫೀಜಿ ಗೆಲರಿಯಲ್ಲಿ ಕಾಣಬಹುದು. ನಾಲ್ಕೆಂಟು ವಿಶಾಲವಾದ ಕೊಟಡಿಗಳಲ್ಲಿ ಹದಿಮೂರು ಹದಿನಾಲ್ಕನೆಯ ಶತಮಾನಗಳ ಅನೇಕ ಚಿತ್ರಗಳನ್ನು ಸಂಗ್ರಹಿಸಿರಿಸಿದ್ದಾರೆ. ಅವುಗಳ ಚಿತ್ರ ಶೈಲಿಗೂ, ಅನಂತರ ಬೆಳೆದು ಬಂದ ಚಿತ್ರ ಶೈಲಿಗೂ ತುಂಬ ಅಂತರವಿದೆ. ಹದಿನಾಲ್ಕು ಹದಿನೈದನೇ ಶತಮಾನದ ಚಿತ್ರಕಾರರಲ್ಲಿ ಹೆಸರಾದ ಫಿಲಿಪ್ಪೋ ಲಿಪಿ ಮತ್ತು ಬೊಟಿಸಿಲಿ ಇವರುಗಳ ಬಹು ಸುಂದರವಾದ ಚಿತ್ರ ಸಂಗ್ರಹ ಇಲ್ಲಿದೆ. ಲಿಪಿಯು "ಮೇರಿ ಮತ್ತು ಶಿಶು" ಇವರುಗಳ ಬಹು ಸುಂದರವಾದ ಒಂದು ಚಿತ್ರ ಬರೆದಿದ್ದಾನೆ. ಮೇರಿಯ ನಿಷ್ಕಳಂಕ ಮುಖವು ಬಹು ಚೆನ್ನಾಗಿ ಚಿತ್ರಿತವಾಗಿದೆ. ಅವನ ಚಿತ್ರಗಳಲ್ಲಿ ಚಿತ್ರ ರೇಖೆಗಳ ಸೂಕ್ಷ್ಮತೆ ಮತ್ತು ಚೆಲುವು ವಿಶೇಷ. ಬೊಟಿಸಿಲಿ ಇವನಿಗಿಂತಲೂ ಹೆಸರಾದ ವ್ಯಕ್ತಿ. ಅವನು ಬರೆದ ಚಿತ್ರಗಳು ಇನ್ನೂ ದೊಡ್ಡವು. ಚಿತ್ರ ವಸ್ತುಗಳಲ್ಲೂ ವೈವಿಧ್ಯ ಇದೆ. ಅವನ ವಸಂತ ಕಾಲದ ಒಂದು ಚಿತ್ರದಲ್ಲಿ ಹತ್ತೆಂಟು ನರನಾರಿಯರನ್ನು ಚಿತ್ರಿಸಿ, ವಸಂತ ಋತುವಿನ ಗಿಡಮರಗಳು, ಮಂದ ಮಾರುತಗಳು, ಮುಗ್ಧ ಜನ ಜೀವನದ ಮೇಲೆ ಎಂತಹ ಮೋಹಕಗಾಳಿ ಬೀಸುತ್ತವೆ–ಎಂಬುದನ್ನು ತೋರಿಸಿದ್ದಾನೆ. ಇದೇ ಚಿತ್ರಕಾರನ 'ವೀನಸಳ ಜನ್ಮ' ಎಂಬ ಚಿತ್ರಕೃತಿ ಲಾವಣ್ಯಪೂರಿತವಾದುದು. ಕಡಲಿನ ಚಿಪ್ಪೊಂದರಲ್ಲಿ ವೀನಸನ್ನು ನಿಲ್ಲಿಸಿ ಆಕೆಯ ತಲೆಗೂದಲನ್ನು ಗಾಳಿಯಲ್ಲಿ ತೇಲಿಸಿದ್ದಾನೆ. ಆ ವಿಗ್ರಹದ ಸೂಕ್ಷ್ಮ ರೇಖೆಗಳು, ತಲೆಗೂದಲಿನ ಚೆಲುವು, ಬಿಡುಗೂದಲುಗಳನ್ನು ಚಿತ್ರಿಸಿದ ಬಗೆ, ಅವುಗಳನ್ನು ಹೊಂಬಣ್ಣದಿಂದ ಮಿನುಗಿಸಿನದ ಬಗೆ, ಈತನ ಕಲಾ ನೈಪುಣ್ಯವನ್ನು ತೋರಿಸುತ್ತವೆ. ಈ ವಿಗ್ರಹಕ್ಕೆ ಹಿನ್ನೆಲೆಯಾಗಿ ಬಾನಿಗೆ

ತೊಡಿಸಿದ ನೀಲವರ್ಣವೂ ಅಷ್ಟೇ ಸೊಗಸಿನದು. ಈ ಒಂದು ಚಿತ್ರವೇ ಕೆಲವು ಕೋಟಿ ರೂಪಾಯಿಗಳ ಬೆಲೆಯನ್ನು ತಂದು ಕೊಟ್ಟೀತು. ಆತ ಬರೆದ ಮೆಡೋನಾ, ಕೆಲವ್ನಿ ಮೊದಲಾದ ಇನ್ನಿತರ ಚಿತ್ರಗಳೂ ಇಲ್ಲಿವೆ.

ಅನಂತರ ಲಿಯನಾರ್ಡೋ ಡ ವಿನ್ಸಿ ಬರೆದ "ಎನನ್ಸಿಯೇಯಶನ್" ಎಂಬ ಸುಂದರ ಚಿತ್ರವನ್ನಿಲ್ಲಿ ಕಾಣಬಹುದು. ಇವನ ಸಮಕಾಲೀನನಾದ ರಾಫೇಲ್ ಬರೆದಂಥ ಕೆಲವು ಚಿತ್ರಗಳಿವೆ. ರಾಫೇಲನ "ಮೆಡೋನಾ ಓಫ್ ದಿ ಗೋಲ್ಡ್ ಫಿಂಚ್" ಬಹು ಸುಂದರ ಚಿತ್ರ. ಮೆಡೋನಳ ಬಳಿಯಲ್ಲಿ ನಿಂತ ಬಾಲ ಯೇಸುವಿನ ಕೈಯಲ್ಲಿ, ಚಿಕ್ಕೊಂದು ಗೋಲ್ಡ್ ಫಿಂಚ್ ಹಕ್ಕಿಯನ್ನು ಕೊಟ್ಟು ಚಿತ್ರಕಾರ ಆಡಿಸುತ್ತಿದ್ದಾನ. ಗಿರ್ಲಾಂಡೋ ಎಂಬ ಇನ್ನೊಬ್ಬ ಇಟಲಿಯನ್ ಚಿತ್ರಕಾರ ಬರೆದ ಒಂದು ಮೆಡೋನಾ ಚಿತ್ರ ಇಲ್ಲಿನ ಸಂಗ್ರಹದಲ್ಲಿದೆ. ಮೇರಿಯ ತಾರುಣ್ಯ, ನಿಷ್ಕಲಂವೂ ಪವಿತ್ರವೂ ಆದ ಮುಖ, ಪಾರ್ಥಿವ ಶರೀರದಲ್ಲಿಯೂ ಅತ್ಯಪೂರ್ವ ದೈವತ್ವವನ್ನು ಮೂಡಿಸಿಬಿಟ್ಟಿದೆ. ಈ ಚಿತ್ರ ಕಲಾವಿದರ ಸರಿಸಮನಾದ ಮೈಕೇಲ್ ಎಂಜಲೋವಿನ ಕೆಲವೊಂದು ತೈಲ ಚಿತ್ರಗಳು ಇಲ್ಲಿವೆ. 'ಪವಿತ್ರ ಕುಟುಂಬ' ಎಂಬುದು ಅವನ ಒಂದು ಉತ್ತಮ ತೈಲಚಿತ್ರ. ಶಿಲ್ಪಕ್ಕೂ ಚಿತ್ರಕ್ಕೂ ಇರುವ ಅಂತರಗಳನ್ನು ಅಳಿಸಿ, ಒಂದು ಇನ್ನೊಂದು—ಎಂದು ಭ್ರಮೆ ಹುಟ್ಟಿಸುವಂಥ ಶಕ್ತಿ ಮೈಕೇಲನಿಗೆ ಇದ್ದಂತೆ ಇನ್ನಾರಿಗಿಲ್ಲ. ಆತ ಹುಟ್ಟು ಶಿಲ್ಪಿ; ಆದುದರಿಂದ ಚಿತ್ರ ಶಿಲ್ಪಗಳೆರಡರಲ್ಲೂ ವಿಶೇಷವಾದ ಸಾಮರಸ್ಯವನ್ನು ಕಂಡಿದ್ದಾನೆ.

ಚಿತ್ರಕಾರ ವೇರೊನಿಸಸಿನ ಎರಡೆರಡು ಚಿತ್ರಗಳಿವೆ. ತನ್ನ ಕಾಲದ ನಾರಿಯರ ಬೆಲುವು ಲಾಲಿತ್ಯಗಳನ್ನು ಒಣ್ಣದಿಂದ ಸೆರೆ ಹಿಡಿದ ಮಹಾನುಭಾವ ಆತ. ಹೀಗೆ ನಾವು ಮಧ್ಯಯುಗದ ಚಿತ್ರ ಕಲಾ ಶ್ರೇಷ್ಠರಾದ ರಾಫೇಲ್, ಎಂಡ್ರಿಯಾ ಡೆಲ್ ಸಾರ್ಟೋ, ಟೈಟನ್ ಮೊದಲಾದವರ ಹಲವು ಚಿತ್ರಗಳನ್ನು ಇಲ್ಲಿ ಕಾಣಬಹುದು. ಇಂಥವರ ಸಾಲಿನಲ್ಲೇ ಸ್ಪೇನಿಷ್ ಚಿತ್ರಕಾರ ಮುರಿಲೋ ಸ್ಪರ್ಧೆಗೆ ನಿಂತುದೂ ಕಾಣಬಹುದು. ಆತನೂ 'ಮೊಡೋನಾ ಮತ್ತು ಶಿಶು' ಇವರ ಚಿತ್ರ ಬರೆದಿದ್ದಾನೆ. ಆದರೆ ಮುರಿಲೋ, ರಾಫೇಲ್, ಮೈಕೆಲ್ ಎಂಜಲೋ, ಗಿರ್ಲಾಂಡೋ—ಈ ನಾಲ್ವರೂ ಮಾನವತೆಯಲ್ಲಿ ದೈವತ್ವವನ್ನು ಹುಡುಕಿ ಚಿತ್ರಿಸಿದ ಬಗೆ ಬೇರೆ ಬೇರೆಯಾದುದು; ಸ್ವತಂತ್ರವಾದುದು. ಒಂದೊಂದೂ ಚಿತ್ರಕಾರನ ಪ್ರತ್ಯೇಕವಾದ ದರ್ಶನ

ವನ್ನು ತೋರಿಸುತ್ತದೆ.

ಇಲ್ಲಿನ ಚಿತ್ರಗಳನ್ನೆಲ್ಲ ನೋಡಿದಂತೆ, ಶಿಲ್ಪಗಳ ಮೋಹಕತೆಯನ್ನು ನೋಡುವುದಾದರೂ ಅಷ್ಟೇ ವಿಶೇಷವೆನಿಸುತ್ತದೆ. ಇಲ್ಲಿನ ಸಂಗ್ರಹದಲ್ಲಿ ಹರ್ಕ್ಯುಲಿಸ್ ಮತ್ತು ಅವನ ಮಕ್ಕಳಿಬ್ಬರನ್ನು ದೊಡ್ಡ ಹಾವೊಂದು ಸುತ್ತಿ ಕೊಲ್ಲುವ ಬಹು ದೊಡ್ಡ ಶಿಲ್ಪ ಪುಂಜವಿದೆ. ಇದೇ ಪ್ರತಿಮೆಯ ಇನ್ನೊಂದು ಪ್ರತಿ ರೋಮಿನ ವೆಟಿಕನ್ ಸಂಗ್ರಹದಲ್ಲೂ ಇದೆ. ಮೂಲ ಶಿಲ್ಪವಾವುದೋ ಪ್ರತಿ ಯಾವುದೋ ಎಂದು ತಿಳಿಯದಷ್ಟು ಚೆನ್ನಾಗಿದೆ. ಹರ್ಕ್ಯುಲಿಸ್‌ನ ಅಗಾಧ ಶರೀರವನ್ನು ಹಾವು ಸುತ್ತಿಕೊಂಡ ಬಗೆ, ಅವನಿಗಿಂತ ಆಕಾರದಲ್ಲೂ ವಯಸ್ಸಿನಲ್ಲೂ ತುಂಬ ಕಿರಿಯರಾಗಿದ್ದು, ಈ ಹಾವಿನ ಕಟ್ಟಿನಲ್ಲಿ ಸಿಲುಕಿ ನರಳುತ್ತಿರುವ ಮಕ್ಕಳ ಚಿತ್ರವೂ, ಈ ಒಟ್ಟು ಗುಂಪಿನಲ್ಲಿ ಕಾಣಿಸುವ ವಿವಿಧ ಅಂಗವಿನ್ಯಾಸಗಳ ರೇಖಾ ತರಂಗಿತತೆ, ಹರ್ಕ್ಯುಲಿಸನ ದೈತ್ಯ ಶರೀರದಲ್ಲಿ ತುಂಬಿದ ಶಕ್ತಿ ಸಂಪತ್ತನ್ನು ತೋರಿಸಿದ ಬಗೆಗಳು—ಇವೆಲ್ಲ ಇಟಲಿಯನ್ ಶಿಲ್ಪಿಗಳಿಗೆ ಚಿರ ಮನ್ನಣೆ ತರುವಂಥವಾಗಿವೆ.

ಈ ಗೆಲರಿಯಲ್ಲಿ ಗ್ರೀಸಿನಿಂದಲೇ ತಂದು ನಿಲ್ಲಿಸಿದೊಂದು ವೀನಸ್ ದೇವತೆಯ ಬಹು ಸುಂದರ ವಿಗ್ರಹವಿದೆ. ವೀನಸ್‌ನ್ನು ಚಿತ್ರಿಸಿದ ರೋಮನ್ ಮತ್ತು ಗ್ರೀಕ್ ಶಿಲ್ಪಿಗಳು ಅಸಂಖ್ಯಾತ. ವೀನಸ್‌ನಲ್ಲಿ ಸ್ತ್ರೀತ್ವದ ಚೆಲುವನ್ನೆಲ್ಲ ಸಾಧಿಸಲು ಹಿಂದಿನ ಶಿಲ್ಪಿಗಳು ಪ್ರಯತ್ನಿಸಿದರು. ಇಲ್ಲಿನ 'ವೀನಸ್'ಗೆ 'ಮೆಡೀಸೀ ವೀನಸ್' ಎಂಬ ನಾಮಕರಣವಿದೆ.

ಈ ಚಿತ್ರ ಶಾಲೆಯಿಂದ ಒಂದು ಮೈಲಿನ ದೂರದಲ್ಲಿ ಹಾತೀ ಅರಮನೆ ಎಂಬೊಂದು ದೊಡ್ಡ ಸೌಧವಿದೆಯೆಂದೆ. ಈ ಚಿತ್ರಶಾಲೆಯ ಚಿತ್ರಕಾರರೆಲ್ಲರೂ ಇಟಲಿಯನರೇ. ಅವರಲ್ಲಿ ಹಲವರು ಆಧುನಿಕರ ಸಾಲಿಗೆ ಸೇರುತ್ತಾರೆ.

ಕಳೆದ ಶತಮಾನದಲ್ಲಿ ಬದುಕಿದ್ದ ಎಂಟೋನಿಯೋ ಸೀಜರಿ ಎಂಬಾತ ಬರೆದ ಎರಡು ಸುಂದರವಾದ ದೊಡ್ಡ ತೈಲ ಚಿತ್ರಗಳು ಇಲ್ಲಿವೆ. ಕ್ರಿಸ್ತನ ವಿಚಾರಣೆ ಮತ್ತು ಅವನನ್ನು ಶಿಲುಬೆಯಿಂದಿಳಿಸಿ ಸಾಗಿಸುವ ಎರಡು ಸುಂದರ ಚಿತ್ರಗಳವು. ಎದುರು ಬೀದಿಯಲ್ಲಿ ಕಲೆಶಿರುವ ವಿಶೇಷ ಜನ ಸಮುದಾಯದ ಮುಂದೆ, ನ್ಯಾಯಾಧೀಶ ಕೈತೋರಿಸುತ್ತ, ಜನಗಳ ಮನಸ್ಸನ್ನು ತನ್ನ ಕಡೆಗೆ ಸೆಳೆಯುವ ಪ್ರಯತ್ನ ಮಾಡುತ್ತಿದ್ದಾನೆ. ಅವನ ನೀಡಿದ ಕೈಯು, ಕೈಕಟ್ಟಿ

ನಿಲ್ಲಿಸಿದ ಯೇಸುವಿನ ರೂಪವನ್ನು ತೋರಿಸುತ್ತದೆ. ಮುಂದಿನ ಶೀರ್ಮಾನ ವನ್ನು ಬಲ್ಲ ಯೇಸು, ಮುಳ್ಳಿನ ಕಿರೀಟವನ್ನು ತೊಟ್ಟು, ಸತ್ಯಾಗ್ರಹಿಯಾಗಿ ನಿಂತಿದ್ದಾನೆ. ಅನತಿ ದೂರದಲ್ಲಿ ಅವನ ಭವಿಷ್ಯವನ್ನು ನೆನೆದು ಚಿಂತಿಸುತ್ತಿರುವ ನಾರಿಯರಿಬ್ಬರ ಮುಖವು ಈ ದಾರುಣ ಕಥಾನಕದ ಪರಿಣಾಮವನ್ನು ಸೂಚಿಸುವಂತಿದೆ.

ಶಿಲುಬೆಯಿಂದಿಳಿಸಿದ ಯೇಸುವನ್ನು ಅವನ ಭಕ್ತರು ಸಾಗಿಸುವ ಚಿತ್ರವಂತು ಇನ್ನಷ್ಟು ಮನೋವೇಧಕವಾಗಿದೆ. ಯೇಸು ಕ್ರಿಸ್ತ ಸಾವಿನಲ್ಲೂ ಸುಂದರನಾಗಿದ್ದಾನೆ; ತನ್ನ ಮೃತ ಮುಖದಲ್ಲೂ ಕ್ಷಮಾಗುಣ ಶೀಲನಾಗಿ ಕಾಣಿಸುತ್ತಿದ್ದಾನೆ.

ಹಾತೀ ಚಿತ್ರಶಾಲೆಯ ಆಧುನಿಕ ಚಿತ್ರ ವಿಭಾಗವೂ ಚೆನ್ನಾಗಿದೆ. ಆಧುನಿಕರನೇಕರು ಫ್ರಾನ್ಸಿನ ಕ್ರಾಂತಿ ಕಲಾವಿದರ ಪ್ರಭಾವಕ್ಕೆ ಒಳಗಾದವರಾದರೂ, ಅವರ ಚಿತ್ರ ಶೈಲಿಯಲ್ಲಿ ಇಟಲಿಯ ನಿತ್ಯ ಹವೆ ತೇಲಾಡುತ್ತಿದೆ. ಈ ದೇಶದ ಪೂರ್ವಯುಗದ ಚಿತ್ರಕಾರರು, ಬಿಸಿಲು ದೇಶವಾದ ತಮ್ಮ ನಾಡಿನ ಬಣ್ಣಗಳಿಗೆ ಮನಸೋತು, ಅವುಗಳನ್ನೆಲ್ಲ ತಮ್ಮ ಕುಚ್ಚಿನಿಂದ ಸೆರೆ ಹಿಡಿಯಲು ಪ್ರಯತ್ನಿಸಿದರು. ಈ ಆಧುನಿಕರು ಇನ್ನೊಂದೇ ಮಾರ್ಗ ಹಿಡಿ ಹಿಡಿದರು. ತಮ್ಮ ನಾಡಿನ ಬಿಸಿಲು ಕೆಡೆಯುವ ನೆರಳಿನಲ್ಲಿ ಹುದುಗಿದ ಸೌಮ್ಯ, ಶಾಂತ, ಆದರೂ ಮನೋಹರವಾದ ಬಣ್ಣಗಳಿಂದ ತಮ್ಮ ಜೀವನದ ಸ್ವಪ್ನಗಳನ್ನು ಕಟ್ಟಲು ಹವಣಿಸಿದರು. ನಿತ್ಯ ಜೀವನದ ಅನೇಕಾನೇಕ ವಸ್ತುಗಳನ್ನು ಆಯ್ದು ಕೊಂಡರು. ಹಳೆಯ ಪುರಾಣ ಕಥೆಗಳಿಗೆ ಶರಣುಹೋಗುವ ಬದಲು, ನೈಸರ್ಗಿಕ ದೃಶ್ಯ, ಸಾಮಾಜಿಕ ದೃಶ್ಯ ಮೊದಲಾದುವನ್ನೆಲ್ಲ ಆರಿಸಿಕೊಂಡು ಚಿತ್ರ ಬರೆಯತೊಡಗಿದರು. ಅಂಥವುಗಳಲ್ಲಿ ಒಂದನ್ನು ಕುರಿತು ಮಾತ್ರ ಇಲ್ಲಿ ಹೇಳುತ್ತೇನೆ. ರುಗೇರೋ ಪಿನೇರಿ — ಎಂಬಾತ ಕಾಯಿಲೆಗೊಂಡ ಕುದುರೆಯೊಂದರ ಚಿತ್ರವನ್ನು ಬರೆದಿದ್ದಾನೆ. ಯಾವುದೋ ಬೇನೆಗೆ ತುತ್ತಾಗಿ ಕುದುರೆಯೊಂದು ಹುಲ್ಲುಗಾವಲಿನಲ್ಲಿ ಮಲಗಿದೆ. ಅದರ ಯಜಮಾನ ಮುದುಕ; ಅದರ ಬೆನ್ನನ್ನು ಸವರುತ್ತ ಚಿಂತೆ ಸೂಚಿಸುತ್ತಿದ್ದಾನೆ. ಅವನ ಬಳಿಯಲ್ಲಿ ಸಹಾನುಭೂತಿ ತೋರುತ್ತ ಇನ್ನೊಬ್ಬ ರೈತ ನಿಂತಿದ್ದಾನೆ. ಸಮೀಪದಲ್ಲಿ ಎರಡು ದೊಡ್ಡ ಕುದುರೆಗಳು ನಿಂತಿವೆ. ಅವುಗಳೂ ಮನುಷ್ಯರಂತೆ, ಕಾಯಿಲೆಗೊಂಡ ಆ ಕುದುರೆಗಾಗಿ ಸಂತಾಪಪಡುವಂತೆ ಕಾಣುತ್ತದೆ.

ತುಸುದೂರದಲ್ಲಿ ನಿಂತಿರುವ ಇನ್ನೆರಡು ಕುದುರೆಗಳು, ಸಾಯುತ್ತಿರುವ ತಮ್ಮ ಬಂಧುವಿನ ಸಂತಾಪದಲ್ಲಿ ಬೆರೆತಂತೆ ಕಾಣುತ್ತದೆ. ಚಿತ್ರದ ಹಿನ್ನೆಲೆಯಲ್ಲಿರುವ ಕಾಡು, ಬಾನು, ಬಯಲುಗಾವಲೆಲ್ಲ ಒಂದು ಮೂಕ ಜೀವಿಯ ಮೃತ್ಯುವಿನ ಗಳಿಗೆಗಾಗಿ ಸಂತಪಿಸುವಂತೆ ಚಿತ್ರ ವಸ್ತುವಿನ ಆಶಯವನ್ನು ಪೂರ್ಣಗೊಳಿಸುತ್ತವೆ.

ಸಾಮಾನ್ಯವಾಗಿ ಆಧುನಿಕ ಯುರೋಪಿಯನ್ ಚಿತ್ರಕಾರರ ಹೆಸರುಗಳಲ್ಲಿ ಇಂಥ ಚಿತ್ರಕಾರರ ಹೆಸರನ್ನು ನಾವು ಕೇಳಲಿ, ಕೇಳದೆ ಇರಲಿ– ಅವರ ಶಕ್ತಿ, ತೇಜಸ್ಸುಗಳು ಕಡಿಮೆಯಾದುವುವಲ್ಲ. ಇಟಲಿಯ ಚಿತ್ರ, ಶಿಲ್ಪ ಗಳೆರಡರಲ್ಲೂ ತನ್ನ ಪ್ರಾಚೀನ ಪರಂಪರೆಯನ್ನು ಕಾಯ್ದು ಬೆಳೆಯಿಸಿಕೊಂಡು ಬಂದಿದೆ ಎನ್ನುವ ಅನುಭವ ನಮಗಾಗುತ್ತದೆ.

# ೨೨ ರೋಮ್ ನಗರದಲ್ಲಿ.

ಈ ನಗರವನ್ನು ಸ್ಮರಿಸಿದಾಗ ನಮಗೆ ಎರಡು ಹಳೆಯ ಗಾದೆಗಳ ನೆನಪಾಗುತ್ತದೆ: 'ರೋಮನ್ನು ಒಂದು ದಿನದಲ್ಲಿ ಕಟ್ಟಿದ್ದಲ್ಲ' ಎಂಬ ನಾಣ್ಣುಡಿಯೊಂದು; 'ಎಲ್ಲ ಹಾದಿಗಳು ಸೇರುವುದು ರೋಮನ್ನು' ಎನ್ನುವ ನಾಣ್ನುಡಿ ಇನ್ನೊಂದು. ಯುರೋಪಿನ ಇತಿಹಾಸದಲ್ಲಿ ರೋಮ್ ನಗರವು ದೊರಕಿಸಿಕೊಂಡ ಪ್ರಾಧಾನ್ಯ ಇನ್ನಾವ ಪಾಶ್ಚಾತ್ಯ ನಗರಕ್ಕೂ ಬರಲಾರದು. ಅದರ ಇತಿಹಾಸ ಕ್ರಿಸ್ತ ಶಕಕ್ಕಿಂತ ಪೂರ್ವದ ಕೆಲವು ಶತಮಾನಗಳ ತನಕ ಒಂದು ಕಡೆ ಚಾಚಿಕೊಂಡಿದ್ದರೆ, ಈ ಕಾಲ ಪಟಲದ ಇನ್ನೊಂದು ಸೆರಗು, ಇಂದಿನ ತನಕವೂ ನೀಡಿಕೊಂಡಿದೆ. ಸಾಮ್ರಾಟ ಆಗಸ್ಟಸ್, ಜೂಲಿಯಸ್ ಸೀಜರ್, ಎಡ್ರಿಯಾನ್ ಮೊದಲಾದವರಿಂದ ತೊಡಗಿದ ರಾಜಕೀಯ ಜೀವನ ಮುಸೋಲೋನಿಯ ಆಳ್ವಿಕೆಯ ತನಕ ಹಬ್ಬಿದಂಥ ಒಂದು ವಿಸ್ತಾರವಾದ ಮಾನವ ಕುಲದ ಇತಿಹಾಸ ಇದು-ಎನ್ನುವಷ್ಟು ಪ್ರಬಲವಾದದ್ದು. ಇವತ್ತಿನ ರೋಮ್ ನಗರದಲ್ಲಿ ಅದರ ಪೂರ್ವ ಯುಗದ ಮತ್ತು ಮಧ್ಯಯುಗಗಳ ಇತಿಹಾಸ ಸ್ಮಾರಕಗಳು ತುಂಬಿಕೊಂಡಿವೆಯಲ್ಲದೆ, ಅದು ಬಹುಮಟ್ಟಿಗೆ ಪ್ರಾಚೀನ ನಗರವಾಗಿಯೇ ಕಾಣಿಸುತ್ತದೆ. ಅಗಲವಾದ ಬೀದಿಗಳು, ಸುಂದರವಾದ ಪಿಯಾಜಾಗಳು, ಕಾರಂಜಿಗಳು, ಸ್ಮಾರಕಗಳು, ಅರಮನೆಗಳು ಅನೇಕವಿವೆ. ನಾಣ್ಣುಡಿಯಲ್ಲಿ ಹೇಳುವಂತೆ ಅದು ಒಂದು ದಿನದ ರಚನೆಯಲ್ಲ; ಯುಗ ಮಾನದ ರಚನೆ. ಹಾಗೆಯೇ ಆ ಇನ್ನೊಂದು ನಾಣ್ಣುಡಿಯಲ್ಲಿ ಹೇಳುವಂತೆ-ಯುರೋಪಿಯನ್ ನಾಗರಿಕತೆಯಲ್ಲಿ ರೋಮನರು ವಹಿಸಿದ ಪ್ರಧಾನ ಪಾತ್ರದಿಂದಾಗಿ, ಈಜಿಪ್ಟಿನಿಂದ ಪೂರ್ವಕ್ಕಿರುವ ರಾಷ್ಟ್ರಗಳಿಗೆಲ್ಲ ರೋಮ್ ಸ್ಫೂರ್ತಿಯನ್ನು ಕೊಡುವ ನಗರವಾಗಿತ್ತು. ಅದರ ಸಂಸ್ಕೃತಿಯೂ ಹೆಚ್ಚಿನದು; ಅಧಿಕಾರ, ದರ್ಪಗಳೂ ಹೆಚ್ಚಿನವು. ಪಶ್ಚಿಮ ದೇಶಗಳಿಗೆ ಅದು ರಾಜಧಾನಿಯಾದುದರಿಂದ, ಎಲ್ಲ ಹಾದಿಗಳು ಅಂದಿನ ರೋಮಿನ ಕಡೆ ಮುಖ ಮಾಡಿಕೊಂಡಿದ್ದುದರಲ್ಲಿ ಆಶ್ಚರ್ಯವಿಲ್ಲ. ಇಂದು ಪ್ರಪಂಚದ ಕ್ರೈಸ್ತರಿಗೆ ಅದರಲ್ಲಿಯೂ ರೋಮನ್ ಕೆಥೊಲಿಕ್‌ರಾದವರಿಗೆ, ಜೆರೂಸಲೆಮ್ ದೊಡ್ಡ ಯಾತ್ರಾಸ್ಥಳವಾಗಿದ್ದರೂ ಕೂಡ, ಕ್ರಿಸ್ತನ ಜನ್ಮಭೂಮಿಗಿರುವ ಪ್ರಾಧಾನ್ಯ, ಕ್ರಿಸ್ತ ಜಗದ್ಗುರುವಿನ ಊರಿಗೆ ಸಂದಿದೆ. ಹಳೆಗಾಲದಿಂದ ಇಂದಿನ ತನಕ

ಅನೇಕ ಶಿಲ್ಪಿಗಳು ಚಿತ್ರಕಾರರು, ವಾಸ್ತುಕಲಾಕೋವಿದರು ಈ ನಗರದ ಬೆಳವಣಿಗೆಗೂ, ವಿಸ್ತಾರಕ್ಕೂ ನೆರವಾದರು. ಆಧುನಿಕ ರೋಮಿನ ಯಾವ ಮೂಲೆಗೇ ನಾವು ಹೋಗಲಿ—ಅಲ್ಲಲ್ಲಿ ಪ್ರಾಚೀನ ದೇವಾಲಯಗಳೋ ಮಹಾದ್ವಾರಗಳೋ, ಸಭಾಂಗಣ (Forum)ಗಳೋ ಹರಡಿಬಿದ್ದಿವೆ. ಈ ಒಂದೊಂದೂ ಸಾವಿರ, ಎರಡು ಸಾವಿರ ವರ್ಷಗಳ ಪೂರ್ವಕಥಾನಕ ವನ್ನು ಹೇಳುತ್ತವೆ.

ಪ್ರಾಚೀನ ರೋಮಿನ ಒಂದು ಬಹುದೊಡ್ಡ ಸ್ಮಾರಕ ಕೊಲೀಸಿಯಮ್ ಎಂಬುದು. ಇದನ್ನು ಕ್ರಿಸ್ತಪೂರ್ವದಲ್ಲಿ ಕಟ್ಟುವುದಕ್ಕೆ ತೊಡಗಿ, ಕ್ರಿಸ್ತ ಶಕದ ಒಂಬತ್ತನೇ ಇಸವಿಯಲ್ಲಿ ಮುಗಿಸಿದರು. ಕೊಲೀಸಿಯಮ್ ಒಂದು ವಿಚಿತ್ರ ವಾದ ವಿನೋದ ಶಾಲೆ. ಈ ಕಟ್ಟಡ ವರ್ತುಲಾಕಾರವಾಗಿದ್ದು, ಅದರ ಪರಿ ಧಿಯೇ ಒಂದು ಸಾವಿರದ ಎಂಟ್ನೂರು ಅಡಿ ಉದ್ದವಾಗಿದೆ. ನಾಲ್ಕು ಉಪ್ಪ ರಿಗೆಗಳುಳ್ಳ ಈ ವರ್ತುಲವಾದ ಮಂದಿರ ಸುಮಾರು ಹತ್ತು ಸಾವಿರ ಜನ ಕುಳಿತಿರಬಹುದಾದ ಒಂದು ವಿನೋದ ಶಾಲೆ. ಅದರ ಪ್ರವೇಶಕ್ಕೆ ಹತ್ತೆಂಟು ದ್ವಾರಗಳಿವೆ. ಆಗಿನ ಜನತೆಯ ರಾಜಕೀಯ ಅಂತಸ್ತಿಗೆ ಸಮನಾಗಿ, ನಾಲ್ಕು ಮಹಡಿಗಳಲ್ಲಿ ಪ್ರೇಕ್ಷಕರು ಕುಳಿತುಕೊಂಡು, ನಡುವಣ ಅಂಗಣದಲ್ಲಿ ನಡೆಯುತ್ತಿದ್ದ ವಿನೋದಗಳನ್ನು ನೋಡುತ್ತಿದ್ದರಂತೆ. ಈ ವಿನೋದಗಳು ಐತಿ ಹಾಸಿಕ ದೃಷ್ಟಿಯಿಂದ ವಿನೋದಗಳೇ ಹೊರತು, ಮಾನವತೆಯ ದೃಷ್ಟಿ ಯಿಂದಲ್ಲ. ಕವಚ, ಖಡ್ಗಗಳನ್ನು ಹಿಡಿದು ಯೋಧರು ಯೋಧರೊಡನೆ ಯುದ್ಧಮಾಡುತಿದ್ದರು; ನಿಶ್ಶಸ್ತ್ರರ ಕಣ್ಣುಕಟ್ಟಿ ಸಾಯುಧರು ಕಾದುತ್ತಿದ್ದರು. ಗುಲಾಮರನ್ನು ಸಿಂಹಗಳೆದುರಿಗೆ ಹಾಕುತ್ತಿದ್ದರು—ಇಂಥವೇ ವಿನೋದ ಗಳು! ತಮ್ಮ ಕಾಲದ ರೋಮನರ ಅಮಾನುಷತೆಯೇ ಜನರ ವಿನೋದ ಗಳಾಗಿದ್ದುವು. ಹಳೆಯ ಚರಿತ್ರೆ ಗೊತ್ತಿದ್ದವನು, ಈ ಸ್ಥಳಕ್ಕೆ ಬಂದು ನಿಂತ ನಾದರೆ, ಅವನ ಕಣ್ಣೆದುರಿಗೆ ಕಟ್ಟಬಹುದಾದ ಭೀಷಣ ಚಿತ್ರ, ಇನ್ನೊಂದು ನರಕದ ಕಲ್ಪನೆಯನ್ನು ಮಾಡಿ ಕೊಡಬಲ್ಲುದು. ಆದರೆ ಈ ಕಟ್ಟಡದ ವಾಸ್ತು ರಚನೆ, ಅದಕ್ಕಿರುವ ಭವ್ಯತೆ, ರೋಮನರಿಗಿದ್ದ ಅಗಾಧ ಕಲ್ಪನಾ ಶಕ್ತಿ, ಸಾಹಸಗಳನ್ನು ಇದು ತೋರಿಸಬಲ್ಲುದು.

ಈ ಸ್ಥಳಕ್ಕೆ ಸಮೀಪವಾಗಿ ಕಾನ್‌ಸ್ಟೆಂಟೈನ್ ದೊರೆಯ ಸ್ಮಾರಕ ವಾದ ಒಂದು ಮಹಾದ್ವಾರವಿದೆ. ಆತ ಕ್ರಿಸ್ತ ಧರ್ಮವನ್ನು ವಿರೋಧಿಸಿ

ಹಳೆಗಾಲದ ರೋಮನರನ್ನು ಗೆದ್ದವ; ಮುಂದೆ ಕ್ರಿಸ್ತ ಧರ್ಮಪ್ರಚಾರಕ್ಕೆ ತಳಪಾಯ ಹಾಕಿಕೊಟ್ಟ ಮಹಾ ಸಾಮ್ರಾಟ.

ಈ ಪ್ರದೇಶದ ಸುತ್ತಮುತ್ತಲೆಲ್ಲ ಪ್ರಾಚೀನ ರೋಮಿನ ಹಲವಾರು ಅವಶೇಷಗಳಿವೆ. ಸಾಮ್ರಾಟ ಎಡ್ರಿಯಾನ್ ಕ್ರಿಸ್ತ ಯುಗಕ್ಕೆ ಪೂರ್ವದಲ್ಲಿ ಕಟ್ಟಿದ ವೀನಸ್ ದೇವತೆಯ ಒಂದುದೇವಾಲಯವಿದೆ. ಹಳೆಗಾಲದ ಹಲವು ರೋಮನ್ ಸಭಾಂಗಣಗಳು ಇಲ್ಲಿವೆ. ಇಲ್ಲಿ ನಿಂತಿರುವ ಹಾಲುಗಲ್ಲಿನ ಶಿಲಾ ಸ್ತಂಭಗಳು, ಅನೇಕ ಭಗ್ನ ಶಿಲ್ಪಗಳು, ನಮಗೆ ಪ್ರಾಚೀನ ವೈಭವ ವನ್ನು ನೆನಪುಮಾಡಿ ಕೊಡುತ್ತವೆ. ಅಲ್ಲಲ್ಲಿ ಶನಿ, ಗುರು, ಮೊದಲಾದ ದೇವತೆಗಳಿಗೆ ಸಂದ ದೇವಾಲಯಗಳ ಭಗ್ನಾವಶೇಷಗಳಿವೆ. ಒಂದು ಕಡೆ ಆಗಸ್ಟಸ್ ದೊರೆ (ಕ್ರಿಸ್ತ ಪೂರ್ವ ಎರಡನೆಯ ಶತಮಾನ)ಯ ಸಭಾಂಗಣದ ಭಗ್ನಾವಶೇಷಗಳಿವೆ. ಈಗ ಅಲ್ಲಿ ಅಳಿದುಳಿದು ನಿಂತಿರುವ ಮೂರು ನಾಲ್ಕು ಅತ್ಯುನ್ನತವಾದ ಹಾಲುಗಲ್ಲಿನ ಸ್ತಂಭಗಳು, ಪೂರ್ವದ ಸಭಾಂಗಣದ ಕಲ್ಪನೆಯನ್ನು ನಮಗೆ ಸಂಪೂರ್ಣ ಕೊಡಲಾರವು.

ಇನ್ನೊಂದು ಮೂಲೆಯಲ್ಲಿ ಟ್ರೊಜನ್ ಫೋರಮ್ ಇದೆ. ಅಲ್ಲಿ ನಟ್ಟ ಒಂದು ವಿಜಯ ಸ್ತಂಭವು (ಮಾರ್ಕಸ್ ಒರಿಲಿಯಸ್ ದೊರೆಯ ಸ್ಮಾರಕ) ಬಹು ಉನ್ನತವಾದದ್ದು. ಸುಮಾರು ನೂರು ಅಡಿ ಉನ್ನತವಾಗಿ ನಿಂತ ಈ ಸ್ತಂಭದ ಮೇಲೆ, ಪ್ರಾಚೀನಕಾಲದ ದಂಡಯಾತ್ರೆಯ ಚಿತ್ರಗಳನ್ನೆಲ್ಲ ಕೆತ್ತಿ ಸಿದ್ದಾರೆ. ಇದೇ ಬಗೆಯಲ್ಲಿ ನಗರದ ಮೂಲೆ ಮೂಲೆಯನ್ನು ನಾವು ಸುತ್ತಿ ಸುಳಿದಂತೆ, ನಮಗೆ ಹಳೆಗಾಲದ ಮತ್ತು ಹೊಸಗಾಲದ ನೂರಾರು ವಾಸ್ತು ಗಳ ದರ್ಶನವಾಗುತ್ತದೆ.

ನಗರ ಮಧ್ಯದಲ್ಲಿರುವ ಪ್ರಾಚೀನ ಮಂದಿರಗಳಲ್ಲಿ 'ಪೇಂತಿಯಾನ್' ಸುಸ್ಥಿತಿಯಲ್ಲಿರುವ ಒಂದು ಸುಂದರವಾದ ದೇವಾಲಯ. ಇದಕ್ಕೆ ವರ್ತುಲಾ ಕಾರದ ಗೋಡೆಗಳಿದ್ದು, ಅದರ ಮೇಲೆ ಅರ್ಧ ಗೋಲಾಕೃತಿಯ ಮಾಡಿದೆ. ಮಾಡಿನ ರಂಧ್ರದೊಳಗಿಂದ ಬೆಳಕು ಒಳಕ್ಕೆ ಬೀಳುತ್ತದೆ. ಹೊರಗೆ ಗ್ರೀಕ್ ಮುಖಮಂಟಪವಿದೆ. ಅದರ ಒಳಗಿನ ಆಕೃತಿಯ ಮೊದಲಿನದೇ. ಇದು ಕ್ರಿಸ್ತ ಯುಗಕ್ಕಿಂತಲೂ ಪೂರ್ವದ ಕಟ್ಟಡ. ಒಂದು ಕಾಲದಲ್ಲಿ ಈ ಸ್ಥಳ ಪ್ರಾಚೀನ ರೋಮನ್ ದೇವತೆಗಳ ಮಂದಿರವಾಗಿತ್ತು. ಕಿಸ್ತ ಪೂರ್ವ ಏಳುನೂರ ಇಪ್ಪತ್ತೇಳನೇ ಇಸವಿಯಲ್ಲಿ ಕಟ್ಟಿದ ಆ ಮಂದಿರ, ಎರಡು ಮೂರು ಬಾರಿ

ಪುನರುಜ್ಜೀವನಗೊಂಡಿತಲ್ಲದೆ, ಅನಂತರ ಬಂದ ಕ್ರಿಸ್ತ ಧರ್ಮೀಯರಿಂದ ಅಲ್ಲಿನ ದೇವತೆಗಳೂ ಬದಲಾದರು. ಇವತ್ತು ಅದು 'ಮೇರಿ'ಗೆ ಅರ್ಪಿತ ವಾಗಿದೆ. ಒಳಗಿರುವ ವೃತ್ತಾಕೃತಿಯ ಸುಂದರವಾದ ಸಭಾಂಗಣವನ್ನು ಹಾಲುಗಲ್ಲಿಂದ ಹಾಸಿದ್ದಾರೆ. ಅದರ ಸುತ್ತಲಿರುವ ಸ್ತಂಭಗಳು, ಮಂಟಪ ಗಳು, ಹಲವು ತೆರನ ಎಲಬಾಸ್ಟರ್ ಶಿಲೆಗಳಿಂದ ರಚನೆಗೊಂಡು, ನಯನ ಮನೋಹರವಾಗಿವೆ.

ಪ್ರಾಚೀನ ರೋಮಿನಲ್ಲಿ ನಮಗೆ ಅತಿ ಹೆಚ್ಚಿನ ಸೊಬಗುಳ್ಳ ವಾಸ್ತುಗಳೆಂದರೆ ಅವರ ಕಾರಂಜಿಗಳು. ನಗರದ ಎಲ್ಲೆಲ್ಲೂ ಕಾರಂಜಿಗಳನ್ನು ನಿರ್ಮಿಸಿದ್ದಾರೆ. ಅವುಗಳಿಗೆ ನೀರು ಚಿಮ್ಮುವ ಕೆಲಸ ಮಾತ್ರವಲ್ಲ, ಜತೆ ಯಲ್ಲಿ ಶಿಲ್ಪದ ಸೌಂದರ್ಯವನ್ನೂ ಹೊರಸೂಸುತ್ತವೆ. ಒಂದೊಂದು ಕಾರಂ ಜಿಯೂ ಒಂದೊಂದು ಬಗೆಯ ರಚನೆ; ಒಂದೊಂದು ವಿಧದ ಸೌಂದರ್ಯ ದಿಂದ ಕೂಡಿದ್ದು. ಒಂದಿದ್ದಂತೆ ಇನ್ನೊಂದಿಲ್ಲ. ನಗರದ ಒಂದು ಮೂಲೆ ಯಲ್ಲಿ 'ಟ್ರೇವಿ' ಎಂಬ ಹೆಸರಿನ ಒಂದು ಕಾರಂಜಿಯಿದೆ. ಮೂರು ಶತಮಾನ ಗಳ ಹಿಂದಣ ಒಂದು ಅರಮನೆಯ ಮುಂದೆ ಇದನ್ನು ರಚಿಸಿದ್ದಾರೆ. ಅರ್ಧ ವರ್ತುಲಾಕೃತಿಯ ಕೊಳವೊಂದನ್ನು ನಿರ್ಮಾಣಮಾಡಿ, ನಡುವೆ ಬಂಡೆಗಳ ನ್ನಿರಿಸಿದ್ದಾರೆ. ಅದರಲ್ಲಿ ನೆಪ್ಚ್ಯೂನ್ ದೇವತೆಯು, ಕಡಲ ಚಿಪ್ಪೊಂದರಲ್ಲಿ ನಿಂತಿದ್ದಾಳೆ. ಅವಳು ಸವಾರಿಮಾಡುವ ರಥಕ್ಕೆ ಬಿಗಿದಂತೆ ಕಾಣುವ ಕಡಲು ಕುದುರೆಗಳು ನೀರಲ್ಲಿ ಜಿಗಿಯುವಂತೆ ಚಿತ್ರಿಸಿದ್ದಾರೆ. ಬರ್ನೀನಿ ಎಂಬ ಶಿಲ್ಪಿ ಇದನ್ನು ಮೂಲದಲ್ಲಿ ನಿಯೋಜಿಸಿದನಂತೆ. ನೆಪ್ಚ್ಯೂನ್ ದೇವತೆಯ ವಿಗ್ರಹ ವಾಗಲೀ ಹಾಲುಗಲ್ಲಿನಲ್ಲಿ ಕೊರೆದ ಕಡಲು ಕುದುರೆಗಳಾಗಲೀ ಅವುಗಳನ್ನು ನಾನಾ ಮುಖವಾಗಿ ತೊಳೆಯುವ ಜಲಪ್ರವಾಹಗಳಾಗಲೀ ಒಂದು ಸುಂದರ ಕಾವ್ಯದಂತೆ ನಮಗೆ ಗೋಚರಿಸುತ್ತದೆ. ಪ್ರಪಂಚದ ಅತಿ ಶ್ರೇಷ್ಠ ಕಾರಂಜಿ ಗಳಲ್ಲಿ ಇದು ಒಂದೆನ್ನಬಹುದು.

ಇಟಲಿಯ ವಾಸ್ತುಪರಂಪರೆಯು ಇಂದಿಗೂ ಅಳಿದಿಲ್ಲ ಎಂದು ತೋರಿ ಸುವ ಒಂದು ವಿಶೇಷ ಸ್ಮಾರಕ, ಎರಡನೇ ಇಮೆನ್ಯುಯಲ್ ದೊರೆಯ ಸಮಾಧಿ ಸ್ಥಾನವಾಗಿದೆ. ಇದರ ಕೆಲಸ ತೊಡಗಿದ್ದು 1888ರಲ್ಲಿ. ಇದು ಸುಮಾರು ನಾನ್ನೂರು ಅಡಿ ಉದ್ದ, ಅಷ್ಟೇ ಅಗಲ, ಇನ್ನೂರೈವತ್ತು ಅಡಿ ಉನ್ನತವಾದ ಒಂದು ಸ್ಮಾರಕ. ಏರುತ್ತ ಏರುತ್ತ ಹೋಗುವ ಉನ್ನತ ಅಸ್ತಿವಾರದ ಮೇಲೆ,

ಅರ್ಧವರ್ತುಲಾಕೃತಿಯ ಒಂದು ಮಂದಿರ ನಿರ್ಮಾಣಮಾಡಿದ್ದಾರೆ. ಗ್ರೀಸಿನ ಸ್ತಂಭಗಳನ್ನೂ ವಾಸ್ತು ರೇಖೆಗಳನ್ನೂ ಬಳಸಿ ಮಾಡಿದಂಥ ಈ ಭವ್ಯವಾದ ವಾಸ್ತುವು ನಗರದ ಹಲವು ಮೂಲೆಗಳಿಂದ ನಮಗೆ ಕಾಣಿಸುತ್ತದೆ. ಈ ಮಂದಿರದ ಎರಡು ಕಡೆಗಳಲ್ಲಿ ಮುಚ್ಚಿಗೆಯ ಮೇಲೆ ನಾಲ್ಕು ನಾಲ್ಕು ಕುದುರೆಗಳಿಂದ ಎಳೆಯಲ್ಪಡುವ ರಥಗಳ ಮೇಲೆ ದೇವತೆಗಳ ವಿಗ್ರಹಗಳನ್ನು ನಿಲ್ಲಿಸಿದ್ದಾರೆ. ಇವು ಕಂಚಿನ ವಿಗ್ರಹಗಳು. ಮಂದಿರ ಮಧ್ಯದಲ್ಲಿ ಉನ್ನತ ಪೀಠದ ಮೇಲೆ ವಿಕ್ಟರ್ ಇಮೆನ್ಯುಲನ ಅಶ್ವಾರೋಹಿ ಪ್ರತಿಮೆಯಿದೆ. ಆಚೀಚೆ ಕಾರಂಜಿಗಳಿವೆ. ಎದುರಿಗೆ ಕಂಚಿನ ಮತ್ತು ಹಾಲುಗಲ್ಲಿನ ಅನೇಕ ಪ್ರತಿಮೆಗಳಿವೆ.

ಟೀಬರ್ ನದಿಯ ದಂಡೆಯ ಮೇಲೆ ಕಟ್ಟಿದ ಇನ್ನೊಂದು ಆಧುನಿಕ ವಾಸ್ತು ಶಿಲ್ಪ, ಇಲ್ಲಿನ ವರಿಷ್ಠ ನ್ಯಾಯಾಲಯ. ಅದೂ ಈಚಿನ ಕೆಲಸ. ಸುಮಾರು ಇಪ್ಪತ್ತು ವರ್ಷಗಳ ಶ್ರಮದಿಂದ ಕಟ್ಟಿದ ಈ ಆಧುನಿಕ ಮಂದಿರ ತುಂಬ ಭವ್ಯವಾದೊಂದು ಕಟ್ಟಡ.

ರೋಮ್ ನಗರದ ಎಲ್ಲೆಲ್ಲೂ ಪೂರ್ವಯುಗದ ವಾಸ್ತು ಶಿಲ್ಪವನ್ನು ನಾವು ಅಸಂಖ್ಯಾತವಾಗಿ ಕಾಣುತ್ತೇವೆಯೇ ಹೊರತು ಆಧುನಿಕ ವಾಸ್ತುಶೈಲಿಯನ್ನು ಕಾಣುವುದಕ್ಕಿಲ್ಲ. ಇದಕ್ಕೇ ಒಂದೇ ಒಂದು ಆಕ್ಷೇಪ-ಇಲ್ಲಿನ ರೈಲು ನಿಲ್ದಾಣ. ಪ್ರಪಂಚದಲ್ಲಿ ಇಷ್ಟು ಹಿರಿಯ ಮತ್ತು ಆಧುನಿಕವಾದ ರೈಲ್ವೇ ನಿಲ್ದಾಣವಿಲ್ಲ ಎನ್ನುತ್ತಾರೆ. ಇದ್ದರೂ ಇರಬಹುದು. ಅಲ್ಲಿ ಹೋಗಿ ನಿಲ್ಲುವ ಪ್ರಯಾಣಿಕನಿಗೆ ಈ ಕಟ್ಟಡವು ವಿಚಿತ್ರವಾದ ಒಂದು ಅನುಭವವನ್ನುಂಟು ಮಾಡುತ್ತದೆ. ಕಟ್ಟಡದ ಮುಂಭಾಗವೇ ಅದರ ಚೆಲುವಿನ ಸರ್ವಸ್ವ. ಸುಮಾರು ಮುನ್ನೂರು ಅಡಿ ಅಗಲ, ಸಾವಿರದ ಐನೂರು ಅಡಿ ಅಗಲವಾದ ಒಂದೇ ಒಂದು ಚಾವಡಿ ಎದುರಿಗಿದೆ. ಅದರ ಮುಂದಕ್ಕೆ ಚಾಚಿಕೊಂಡು ಅದರ ಅರ್ಧದಷ್ಟು ಅಗಲಕ್ಕೆ ಇನ್ನೊಂದು ಚಾವಡಿ ಸೇರಿದೆ. ನಡುವೆ ಕಂಭಗಳೇ ಇಲ್ಲದೆ, ದೊಡ್ಡ ಸಮುದ್ರದ ಅಲೆಗಳಂತೆ ಕಾಣಿಸುವ ಮಾಡು, ತರಂಗವಾಗಿ ಚಾಚಿಕೊಂಡಿದೆ. ಮಾಡಿಗೆ ಗಾಜನ್ನು ಹೊದೆಯಿಸಿದ್ದಾರೆ. ಮೇಲಿಂದಲೂ, ಎದುರಿಂದಲೂ, ಸುತ್ತಲಿಂದಲೂ ಬೆಳಕಿಗೆ ಸಂಪೂರ್ಣ ತೆರವಿದೆ. ಯಾವತ್ತು ಚಾವಡಿಯ ನೆಲವನ್ನು ಗಾಜಿನಷ್ಟು ನಯವಾಗಿಮಾಡಿದ ಶಿಲೆಯಿಂದ ಹಾಸಿದ್ದಾರೆ. ಅಲ್ಲಲ್ಲಿ ಶಿಲೆಯದೇ ಮಂಚಗಳಿವೆ. ಈ ಮಂಚಗಳು

ಸರಳವಾದ ಹಾಸುಗಲ್ಲುಗಳು; ನಯವಾಗಿ ಮಾಡಿದ ಒಂದು ಜಾತಿಯ ಕೆಂಪು ಶಿಲೆಯಿಂದ ನಿರ್ಮಾಣವಾದುವು. ಕೇವಲ ಸರಳವಾಗಿ ಕಾಣಿಸುವಂಥ ಇಲ್ಲಿನ ನೆಲ, ಮಾಡು, ಅಲಂಕಾರಗಳು ಅಷ್ಟೊಂದು ಲಲಿತವಾಗಿವೆ; ಸಂತೋಷ ಉಕ್ಕಿಸುತ್ತದೆ. ಯುದ್ಧಾನಂತರ ನಿರ್ಮಾಣವಾದ ಈ ಮಂದಿರಕ್ಕೆ ಕೆಲವು ಕೋಟಿ ರೂಪಾಯಿಗಳಾದರೂ ವೆಚ್ಚವಾಗಿರಬೇಕು. ಇಟೆಲಿಯು ಎಷ್ಟು ಪ್ರಾಚೀನವಾಗಿತ್ತೋ ಅಷ್ಟೇ ಆಧುನಿಕವಾಗಬಲ್ಲುದು ಎಂಬುದಕ್ಕೆ ಈ ನಿಲ್ದಾಣ ಸಾಕ್ಷಿಯಾಗಿದೆ.

ರೋಮಿನಲ್ಲಿ ನಾವು ನೋಡಲೇ ಬೇಕಾದಂಥ ಸ್ಥಳಗಳಲ್ಲಿ ಅಲ್ಲಿನ ಹಲವಾರು ಚರ್ಚುಗಳು ಮುಖ್ಯವೆನ್ನಬಹುದು. ಸೈಂಟ್ ಪೀಟರ್ಸ್ ಬೆಸಿಲಿಕಾ, ಸೈಂಟ್ ಪಾಲ್ಸ್ ಬೆಸಿಲಿಕಾ, ಗಿವೋನಿ ಬೆಸಿಲಿಕಾ, ಸೈಂಟ್ ಮಾಗಿಯೋರಿ ಬೆಸಿಲಿಕಾ-ಮೊದಲಾದುವು. ಇಲ್ಲಿನ ಪ್ರೇಕ್ಷಣೀಯ ಮಂದಿರಗಳಲ್ಲಿ ಸೈಂಟ್ ಪಾಲ್ಸ್ ಮಂದಿರವು ಒಂದಾಗಿದೆ. ಅದು ದೂರದಿಂದ ಸಾಮಾನ್ಯ ಮಂದಿರವಾಗಿ ಕಾಣಿಸುತ್ತದೆ. ನಾಲ್ಕು ಸುತ್ತಲೂ ತೊಟ್ಟಿಯ ಮನೆಗಿರುವ ಚಾವಡಿಗಳಂತೆ, ಸರಳವಾದ ಚಾವಡಿಗಳಿವೆ. ಅದರ ನಡುವಣ ಅಂಗಣದಲ್ಲಿ, ಖಡ್ಗವೊಂದನ್ನು ಹಿಡಿದು ನಿಂತ ಸೈಂಟ್ ಪಾಲನ ಭವ್ಯ ವಿಗ್ರಹವಿದೆ. ಅದರ ಹಿಂದೆ ಚರ್ಚಿನ ವಿಶಾಲವಾದ ಚಾವಡಿ ಬರುತ್ತದೆ. ಚಾವಡಿಯು ಹೊರಗಿಂದಲೇ, ಮೇಲಿನ ಗೋಡೆಗಳಲ್ಲಿ ಚಿತ್ರಿಸಿದ ಕ್ರೈಸ್ತ ಸಾಧು ಸಂತರ ಮೊಸೇಯಿಕ್ ಚಿತ್ರಗಳು ಕಾಣಿಸುತ್ತವೆ. ಒಳಕ್ಕೆ ಕಾಲಿಡುವ ತನಕವೂ ಈ ಮಂದಿರ ಎಷ್ಟು ಭವ್ಯವಾದುದೆಂಬ ಊಹೆ ನಮಗೆ ಉಂಟಾಗುವುದಿಲ್ಲ. ಒಳಗಿನ ಸಭಾಂಗಣ ಶಿಲುಬೆಯಾಕೃತಿಯಲ್ಲಿ ರಚಿತವಾಗಿದ್ದು, ಐದು ಚಾವಡಿಗಳಿಂದ ಕೂಡಿದೆ. ಮೂಲದಲ್ಲಿ ಸಾಮ್ರಾಟ ಕಾನ್‌ಸ್ಟೆಂಟೈನ್ ಇದನ್ನು ಸೈಂಟ್ ಪಾಲನ ಸಮಾಧಿಯ ಮೇಲೆ ಕಟ್ಟಿದನಾದರೂ, ಈ ಮಂದಿರದ ರಚನೆ ಅನಂತರ ಅನೇಕ ಮಾರ್ಪಾಟುಗಳನ್ನು ಹೊಂದಿತಂತೆ. ಇದರ ನೆಲವನ್ನು, ಗೋಡೆಗಳನ್ನು, ಸುಂದರವಾದ ಹಾಲುಗಲ್ಲಿಂದ ಹಾಸಿದ್ದಾರೆ. ನಡುವಣದ ಶಿಲಾ ಸ್ತಂಭಗಳ ಎರಡು ಸಾಲುಗಳು ಬಹು ಗಂಭೀರವಾಗಿ ಕಾಣಿಸುತ್ತವೆ. ಸುಮಾರು ನಾಲ್ಕನೆಯ ಶತಮಾನದಿಂದಲೂ ಚಿತ್ರಕಾರರು, ಶಿಲ್ಪಿಗಳು ಇದರ ಆಂತರಿಕ ಸೌಂದರ್ಯವನ್ನು ಬೆಳೆಯಿಸಿಕೊಂಡು ಬಂದಿದ್ದಾರೆ. ಮುಖ್ಯ ವೇದಿಕೆಯ ಹಿಂದುಗಡೆ ಕ್ರಿಸ್ತನ ಮೊಸೇಯಿಕ್ ಚಿತ್ರವಿದೆ. ಆತನಿಗೆ ಸೈಂಟ್

ಪಾಲ್ ಮತ್ತು ಸೈಂಟ್ ಪೀಟರರು ಕಿರೀಟವನ್ನರ್ಪಿಸುವ ಚಿತ್ರವದು. ಸಭಾಂಗಣದ ನೆಲ, ಗೋಡೆಗಳು ಹೇಗೆ ಅಲಂಕೃತವಾಗಿವೆಯೋ ಅದೇ ಬಗೆಯಲ್ಲಿ ಮೇಲಿನ ಮುಚ್ಚಿಗೆಯನ್ನೂ ಅಲಂಕರಿಸಿದ್ದಾರೆ. ಇಲ್ಲಿನ ಗೋಡೆಗಳ ಮೇಲೆ ರಂಜಿಸುವ ಮೊಸೇಯಿಕ್ ಚಿತ್ರಗಳ ಕೆಲಸ ನಾಲ್ಕನೆಯ ಶತಮಾನದ್ದಂತೆ. ಸಣ್ಣ ಸಣ್ಣ ಪಿಂಗಾಣಿಯ ಚೂರುಗಳನ್ನು ವಿವಿಧ ಬಣ್ಣಗಳೊಡನೆ ಬೇಯಿಸಿ, ಅನಂತರ ಅವನ್ನು ಒಂದು ಚಿತ್ರವಾಗುವಂತೆ ಗೋಡೆಗೆ ಅಂಟಿಸುವ ಕಲೆಗೆ, ಮೊಸೇಯಿಕ್ ಕೆಲಸ ಅನ್ನುತ್ತಾರೆ. ಇಟೆಲಿಯಲ್ಲಿ ಈ ಚಿತ್ರ ಕೆಲಸದ ಪರಂಪರೆಯು ಕ್ರಿಸ್ತ ಪೂರ್ವದಲ್ಲಿಯೇ ತೊಡಗಿದಂತೆ ಕಾಣುತ್ತದೆ. ಅದರ ಕುರುಹುಗಳು ಭೂಗತ ನಗರವಾಗಿದ್ದ ಪೋಂಪೀಯಲ್ಲಿ ನಮಗೆ ಕಾಣಸಿಗುತ್ತವೆ. ಅದರ ಅತ್ಯುತ್ಕೃಷ್ಟ ಮಾದರಿಗಳು ಸೈಂಟ್ ಪೀಟರ್ಸ್ ಚರ್ಚಿನಲ್ಲಿ ಕಾಣಸಿಗುತ್ತವೆ.

ಸೈಂಟ್‌ಪಾಲ್ಸ್ ಚರ್ಚಿನ ಒಂದು ಮಗ್ಗುಲಲ್ಲಿ ಹಳೆಗಾಲದ ಅವಶೇಷವಾದ ಒಂದು ಚೌಕಿಯ ಮನೆ ಇದೆ. ಈ ಚೌಕಿಯ ಚಾವಡಿಯಲ್ಲಿರುವ ಹಲವಾರು ಸ್ತಂಭಗಳು ವಿಚಿತ್ರಾಕೃತಿಯವು. ಒಂದು ಸರಳನ್ನು ಕಾಯಿಸಿ ಬೀಳಲಿನಂತೆ ತಿಪ್ಪಿದ ಹಾಗಿದೆ, ಅವುಗಳ ಆಕಾರ. ಹಾಗೆ ಒಂದು, ಎರಡು ಸರಳುಗಳನ್ನು ಒಂಟಿಯಾಗಿಯೋ ಜತೆಯಾಗಿಯೋ ತಿರುಪಿ, ನಟ್ಟಂತೆ ಅವು ಕಾಣಿಸುತ್ತವೆ. ಅವುಗಳ ಮೇಲೆಲ್ಲ ಗಾಜು, ಪಿಂಗಾಣಿಯ ಚೂರುಗಳನ್ನು ಅಂಟಿಸಿ ಚಿತ್ರಗೆಲಸ ಮಾಡಿದ್ದಾರೆ. ಈ ಬಗೆಯ ಕೆಲಸ ಈ ದೇಶದ್ದಲ್ಲ. ಕಾನ್‌ಸ್ಟೆಂಟಿನೋಪಲ್ ಮೊದಲಾದ ಮುಸ್ಲಿಮ್ ನಾಗರಿಕರ ಜನಗಳದ್ದು –ಎಂಬುದು ಸ್ಪಷ್ಟ. ಅಲಂಬ್ರಾ (ಸ್ಪೈನಿನ)ದಂಥ ಅರಮನೆಗಳಲ್ಲಿ ಈ ಮಾದರಿಯ ಸ್ತಂಭಗಳಿವೆ.

ಸೈಂಟ್ ಪಾಲನಿಗೆ ಅರ್ಪಿತವಾದಂಥ ಈ ಚರ್ಚು, ಅಲಂಕಾರಪೂರ್ಣವಾಗಿದ್ದರೂ, ಅಷ್ಟೊಂದು ಆಡಂಬರಯುತವಾಗಿ ಕಾಣಿಸುವುದಿಲ್ಲ. ಭವ್ಯವಾಗಿ ಕಾಣಿಸಿದರೂ ಮದಪೂರಿತವಾಗಿ ಕಾಣಿಸುವುದಿಲ್ಲ. ಇದರ ವಾಸ್ತುಶೈಲಿಯಲ್ಲಿ ಶ್ರೀಮಂತಿಕೆಯೂ ಇದೆ; ಜತೆಯಲ್ಲಿ ಬೆರೆತುಬಂದ ಸಂಯಮವೂ ಇದೆ. ಇದಕ್ಕೆ ಪ್ರತಿಯಾದ ಮಂದಿರ–ಸೈಂಟ್ ಪೀಟರ್ಸ ಬೆಸಿಲಿಕಾ. ಇದರ ಅಲಂಕಾರ, ಬೆಡಗು, ವೈಭವಗಳು ದೈವತ್ವಕ್ಕೆ ಸಲುವುದಕ್ಕಿಂತಲೂ ಅರಸೊತ್ತಿಗೆಗೆ ಹೆಚ್ಚಾಗಿ ಒಪ್ಪುವುವು.

ರೋಮನ್ ಕಥೋಲಿಕರ ಇನ್ನೊಂದು ಪ್ರಸಿದ್ಧ ಯಾತ್ರಾಸ್ಥಳ ಸ್ಯೆಂಟ್ ಗಿವೊನೀ ಬೆಸಿಲಿಕಾ ಎಂಬುದು. ಹೊರಗಿನಿಂದ ಇದು ಮಧ್ಯಯುಗದ ಒಂದು ಅರಮನೆಯಂತೆ ಕಾಣಿಸುತ್ತದೆ. ಮುಂಭಾಗದ ಗೋಡೆಗಳು, ಸ್ತಂಭ ರಾಜಿಗಳು, ನೂರೈವತ್ತು ಅಡಿಗಳಷ್ಟು ಎತ್ತರವಾಗಿ ನಿಂತಿವೆ. ಆ ಗೋಡೆಯ ಮೇಲೆ ಹಲವು ಸಾಧು ಸಂತರುಗಳ ಪ್ರತಿಮೆಗಳಿವೆ. ಮಂದಿರದ ಮುಂಭಾಗ ವನ್ನು ದಾಟಿ ಹೋದಲ್ಲಿ ವಿಶಾಲವಾದ ಒಂದು ಚಾವಡಿ ಸಿಗುತ್ತದೆ. ಅದ ರಿಂದ ಒಳಗೆ ಹೋಗುವುದಕ್ಕೆ ಮೂರು ಮಹಾ ದ್ವಾರಗಳಿವೆ. ಈ ದ್ವಾರ ಗಳಿಂದ ಮುಂದುವರಿದರೆ–ಐದು ನೀಳವಾದ ಸಭಾಂಗಣಗಳು ಎದುರಾಗು ತ್ತವೆ. ಒಂದೊಂದೂ ಅಲಂಕೃತವಾದ ನೆಲ, ಗೋಡೆ, ಮುಚ್ಚಿಗೆಯುಳ್ಳದ್ದು. ನಡುವಣ ಸಭಾಂಗಣದಲ್ಲಿ ಕ್ರಿಸ್ತ ಸಂತರುಗಳ ಎಂಟು ಹಿರಿದೂ ಭವ್ಯವೂ ಆದ ಶಿಲಾ ಪ್ರತಿಮೆಗಳಿವೆ. ಆಚೀಚೆ, ಐದು ಸುಂದರವಾದ ಬೇರೆ ಬೇರೆ ಚೇಪೆಲುಗಳಿವೆ. ಕೇಂದ್ರದ ವೇದಿಕೆಯ ಹಿಂಗಡೆಯಲ್ಲಿ ಸ್ಯೆಂಟ್ ಎಂಥೊನಿ ಮೊದಲಾದ ಕ್ರಿಸ್ತ ಸಾಧುಗಳ ಚಿನ್ನದ ಮುಲಮಿನ, ಮೊಸೇಯಿಕ್ ಚಿತ್ರ ಕೆಲಸವಿದೆ. ಈ ಯಾವತ್ತು ಸಭಾಂಗಣಗಳ, ಚೇಪೆಲುಗಳ ಅಲಂಕಾರ ಗಳು, ತುಸು ಡಾಂಭಿಕವಾಗಿ ಕಂಡರೂ ಅವುಗಳ ಚೆಲುವನ್ನಾಗಲೀ ಭವ್ಯತೆ ಯನ್ನಾಗಲೀ ಅಲ್ಲಗಳೆಯುವಂತಿಲ್ಲ. ಧನದ ಅತುಲ ವೈಭವಯುಕ್ತವಾಗಿ ಕಾಣಿಸುವ ಈ ಮಂದಿರಗಳಲ್ಲಿ ಅಂಥ ಶ್ರದ್ಧೆಯೊಡನೆ, ಯುಗಮಾನದ ಪವಿತ್ರ ಭಕ್ತಿಯೂ ಸೇರಿಕೊಂಡಿದೆ. ರೋಮ್ ನಗರದ ದೇವಾಲಯಗಳ ಸಂಪತ್ತಿನ ಬೆಡಗನ್ನು ಕಾಣುವ ವಿಚಾರಿಗೆ, "ಸಿರಿವಂತನು ಸ್ವರ್ಗ ಸೇರುವು ದೆಂಬುದು ಸೂಜಿಯ ಕಣ್ಣಲ್ಲಿ ಒಂಟೆ ನುಗ್ಗಲು ಬಯಸಿದಂತೆ" ಎಂಬ ಕ್ರಿಸ್ತನ ಮಾತಿನ ನೆನಪಾಗದಿರದು. ಇಲ್ಲಿನ ಹೊರಗಣ ಅಂಗಣವೊಂದರಲ್ಲಿ, ಈಜಿಪ್ಟಿನಿಂದ ತಂದು ನಟ್ಟ ಅತ್ಯುನ್ನತವಾದ ಒಂದು ವಿಜಯ ಸ್ತಂಭವಿದೆ.

ರೋಮ್ ನಗರದ ಇನ್ನೊಂದು ವಿಭಾಗದಲ್ಲಿ ಸ್ಯೆಂಟ್ ಪೀಟರ್‌ನ ಸ್ಮಾರಕವಾದ ಸಾಮಾನ್ಯ ಇಗರ್ಜಿಯೊಂದಿದೆ. ಸ್ಯೆಂಟ್ ಪೀಟರ್‌ನನ್ನು ಬಂಧಿ ಸಿದ ಸಂಕೋಲೆಯನ್ನು ಇಲ್ಲಿ ಸ್ಮಾರಕವಾಗಿ ಕಾದಿರಿಸಿದ್ದಾರೆ. ಈ ಸರಳ ವಾದ ಮಂದಿರದಲ್ಲಿ ವಿಶೇಷವೆಂದರೆ ಮೈಕೆಲ್ ಎಂಜಲೋ ನಿರ್ಮಿಸಿದ ಬಹು ಸುಂದರವಾದ, ಉದಾತ್ತವಾದ ಮೋಸೆಸ್ಸನ ವಿಗ್ರಹ. ಮೋಸೆಸ್ ನ್ಯಾಯ ದೇವತೆ; ಶಾಸನ ಕರ್ತ; ನಮ್ಮ ದೇಶದ ಮನುವಿಗಿದ್ದ ಹಿರಿಮೆ ಮತ್ತು

ಪಾತ್ರಗಳು ಅವನವು. ಈ ಪ್ರತಿಮೆಯಲ್ಲಿ ಒಂದು ಕೈಯಲ್ಲಿ ಶಾಸನ ಗ್ರಂಥವನ್ನು ಅಳವಡಿಸಿಕೊಂಡು, ಇನ್ನೊಂದು ಕೈಯನ್ನು ತೊಡೆಯ ಮೇಲೆ ವಿರಮಿಸಿ, ದಾಕ್ಷಿಣ್ಯಶೂನ್ಯವಾದ ನಿಡುನೋಟದಿಂದ ನೋಡುತ್ತಿರುವ ಅವನ ಮುಖದ ವರ್ಚಸ್ಸು ಬಣ್ಣನೆಗೆ ಮೀರಿದ್ದು. ನೀಳವಾದ ಮೂಗು, ತೀಕ್ಷ್ಣವಾದ ಕಣ್ಣುಗಳು, ಸೊಂಪಾಗಿ ಪ್ರವಹಿಸುವ ದಾಡಿ ಮೀಸೆಗಳು; ಮೈಕೈಗಳಲ್ಲಿ ತುಂಬಿ ಹರಿಯುವ ಶಕ್ತಿ ಮತ್ತು ಚೈತನ್ಯಗಳು ಮೋಸೆಸನ ಅಧಿಕಾರ ಬಲವನ್ನು, ಜ್ಞಾನ ಸಂಪತ್ತನ್ನು ಬಹು ಸುಂದರವಾಗಿ ಚಿತ್ರಿಸುತ್ತವೆ. ಪ್ರಪಂಚದ ಅತ್ಯುತ್ತಮ ಶಿಲ್ಪಗಳಲ್ಲಿ ಇದು ಒಂದೆನಿಸಿದೆ. ಈ ವಿಗ್ರಹವನ್ನು ಕಾಣುವುದಕ್ಕಾಗಿಯೇ ನಾವು ರೋಮ್ ನಗರಕ್ಕೆ ಪಯಣ ಹೋದಲ್ಲಿ ನಮ್ಮ ಶ್ರಮಕ್ಕೆ ತಕ್ಕ ಪಾರಿತೋಷಕ ದೊರೆತಂತೆಯೇ ಸರಿ.

ರೋಮ್ ನಗರಕ್ಕೆ ಹೋದವರು ಅದರ ಒಂದು ಅಂಶವಾದ, ಆದರೂ ಸ್ವತಂತ್ರ ರಾಜ್ಯವಾದ, ವೆಟಿಕನ್ ನೋಡದೆ ಬರುವಂತಿಲ್ಲ. ವೆಟಿಕನ್ ಮ್ಯೂಸಿಯಮ್, ಸೈಂಟ್ ಪೀಟರನ ಬೆಸಿಲಿಕಾ, ಸಿಸ್ಟೀನ್ ಚೇಪೆಲ್ ಇವೆಲ್ಲ ಹದಿಮೂರು ಎಕ್ರೆ ಸುಮಾರು ವಿಸ್ತಾರವಾದ ವೆಟಿಕನ್ ರಾಜ್ಯದಲ್ಲಿ ದಟ್ಟಣಿಸಿ ನಿಂತ ವಾಸ್ತು ಮತ್ತು ಕಲಾ ಸ್ಮಾರಕಗಳು.

ಸೈಂಟ್ ಪೀಟರ್ಸ್ ಬೆಸಿಲಿಕಾ-ಪ್ರಪಂಚದಲ್ಲಿಯೇ ಹಿರಿದಾದ ಚರ್ಚ್ ಎಂಬ ಖ್ಯಾತಿಯನ್ನು ಪಡೆದಿದೆ. ಅದರ ಎದುರಿಗೆ ಸುಮಾರು ಸಾವಿರದ ಇನ್ನೂರು ಅಡಿ ನೀಳವೂ, ಎಂಟ್ನೂರು ಅಡಿ ಅಗಲವೂ ಆದ ವರ್ತುಲವಿದೆ. ಅದರ ನಾಲ್ಕು ಸುತ್ತಲೂ ಸುಂದರ ಸ್ತಂಭರಾಜಿಗಳುಳ್ಳ ಚಾವಡಿಗಳಿವೆ. ಅವನ್ನಲಂಕರಿಸುವ ಅನೇಕ ಸುಂದರ ಪ್ರತಿಮೆಗಳಿವೆ. ಈ ಅಂಗಣದ ನಡುವೆ ಹೇಲಿಯೋಪೊಲಿಸ್ ನಗರದಿಂದ ತಂದ, ತೊಂಬತ್ತು ಅಡಿ ಉನ್ನತವಾದ ಒಂದು ಒಬ್ಲೀಸ್ಕ್ ನಟ್ಟಿದ್ದಾರೆ. ಈಜಿಪ್ಟಿನ ಈ ವಿಜಯ ಸ್ತಂಭದ ಮೇಲೆ ಇಂದು ಕ್ರಿಸ್ತನ ವಿಜಯದ ಕುರುಹಾದ ಶಿಲುಬೆಯನ್ನಿರಿಸಿದ್ದಾರೆ.

ಇಲ್ಲಿನ ಪ್ರಸಿದ್ಧ ವಾಸ್ತು ವಿಶೇಷವೆಂದರೆ ಸೈಂಟ್ ಪೀಟರ್ಸ್ ಬೆಸಿಲಿಕಾ. ಆರಂಭದಲ್ಲಿ-ಇದನ್ನು ಸಾಮ್ರಾಟ ಕಾನ್‌ಸ್ಟೆಂಟೈನ್ ಕಟ್ಟಿಸಿದನಂತೆ. ಅನಂತರ ಹದಿನೈದನೆಯ ಶತಮಾನದಲ್ಲಿ ಇದು ಪುನರುಜ್ಜೀವನಗೊಂಡು ಇವತ್ತಿನ ಸ್ವರೂಪವನ್ನು ಪಡೆಯಿತು. ಗ್ರೀಕ್ ದೇವಾಲಯಕ್ಕಿರುವಂತೆ ಎದುರಿಗೆ ಏರಿಹೋಗುವ ಸೋಪಾನಗಳಿವೆ. ಉನ್ನತ ಸ್ತಂಭಗಳನ್ನು ಅಳವಡಿಸಿ

ನಿಂತ ಭವ್ಯ ಮುಖಮಂಟಪವೂ, ಚಾವಡಿಯೂ ಇದೆ. ಅದರ ಹಿಂದಿಂದ ಅತ್ಯುನ್ನತವಾಗಿ ಮೇಲಕ್ಕೇರುವ ಗೋಲಾಕೃತಿಯ ಗೋಪುರವಿದೆ. ಅದರ ಮೇಲೆ ಸುಂದರವಾದ ಶಿಖರವಿದೆ. ಎದುರಿನ ಚಾವಡಿಯನ್ನು ಕಳೆದು, ಒಳಗೆ ಹೋದೆವಾದರೆ ಮೂರು ನೀಳವಾದ ಹಿರಿಯ ಸಭಾಂಗಣಗಳೂ, ಅವನ್ನು ವಿಂಗಡಿಸುವ ಸ್ತಂಭರಾಜಿಗಳೂ ಕಾಣಸಿಗುತ್ತವೆ. ಕಟ್ಟಡದ ಒಳಗಿನ ರಚನೆ ಕ್ರಿಸ್ತನ ಶಿಲುಬೆಯಾಕೃತಿಯಲ್ಲಿದೆ. ಶಿಲುಬೆಯ ಮಧ್ಯಭಾಗದಿಂದ ನಡುವಣ ಗೋಪುರ ಮೇಲಕ್ಕೇಳುತ್ತದೆ. ಇಲ್ಲಿನ ಕಂಭಗಳು, ಗೋಡೆಗಳು, ಕಮಾನುಗಳು, ಮುಚ್ಚಿಗೆಗಳು--ಅಂಗುಲ ಅಂಗುಲಕ್ಕೂ ಸಂಪತ್ತು, ಶೋಭೆಗಳನ್ನು ಮೆರೆಯಿಸುವಂಥವು. ಎಷ್ಟೊಂದು ಜಾತಿಯ ಎಲಬಾಸ್ಟರ್ ಕಲ್ಲುಗಳನ್ನು ಇಲ್ಲಿ ಬಳಸಿದ್ದಾರೆ, ಎಂಥೆಲ್ಲ ಚಿತ್ರ ಕೆಲಸಮಾಡಿದ್ದಾರೆ ಎಂದು ಬಣ್ಣಿಸುವುದು ಕಷ್ಟ. ಈ ಮಂದಿರವನ್ನು ಚೆಲುವುಗೊಳಿಸುವ ಸಲುವಾಗಿ ದುಡಿಯದಂಥ ಇಟೇಲಿಯನ್ ಕಲಾವಿದನೇ ಇಲ್ಲ ಎಂಬಂತೆ ಕಾಣುತ್ತದೆ. ಈ ಮಂದಿರದೊಳಗೆ ನಾಲ್ಕಾರು ಚೇಪೆಲುಗಳಿವೆ. ಹತ್ತೆಂಟು ಅತಿ ಭವ್ಯವೂ ವಿಸ್ತಾರವೂ ಆದ ಮೊಸೇಯಿಕ್ ಚಿತ್ರಗಳಿವೆ. ಒಂದೊಂದು ಮೊಸೇಯಿಕ್ ಚಿತ್ರ ಹತ್ತು ಮೂವತ್ತು ಅಡಿ ಗಾತ್ರವಾಗಿದ್ದು, ಪ್ರಸಿದ್ಧ ಚಿತ್ರಗಾರರ ತೈಲ ಚಿತ್ರಗಳ ಅನುಕರಣೆಗಳಾಗಿವೆ. ತೀರ ಹತ್ತಿರಕ್ಕೆ ಹೋಗಿ ನಿಂತರೂ ಇವು ಬಣ್ಣದ ಪಿಂಗಾಣಿಯ ಚೂರುಗಳನ್ನು ಜೋಡಿಸಿ ಮಾಡಿದುವೆಂಬ ಕಲ್ಪನೆಯೇ ಆಗುವುದಿಲ್ಲ. ಆ ಚೂರುಗಳ ಜೋಡಣೆಯೂ ಅಷ್ಟು ಸೂಕ್ಷ್ಮ; ಬಳಸಿದ ಬಣ್ಣಗಳೂ ಅಷ್ಟು ಉಜ್ವಲ. ಚಿತ್ರಗಳ ಗಾತ್ರ, ಸೌಂದರ್ಯಗಳೆರಡೂ ನಮ್ಮ ಮನಸ್ಸನ್ನು ಬೆರಗುಗೊಳಿಸುತ್ತವೆ.

ಇಲ್ಲಿನ ಚೇಪೆಲ್ ಒಂದರಲ್ಲಿ ಮೈಕೇಲ್ ಎಂಜಲೋ ನಿರ್ಮಿಸಿದ ಯೇಸು ಕ್ರಿಸ್ತನ ಅತಿ ಸುಂದರ ಶಿಲ್ಪವಿದೆ. ತಾಯಿ ಮೇರಿ ತನ್ನ ತೊಡೆಯ ಮೇಲಕ್ಕೆ ಶಿಲುಬೆಯಿಂದಿಳಿಸಿದ ಯೇಸುವನ್ನು ಹೂವಿನಂತೆ ಮಲಗಿಸಿಕೊಂಡಿದ್ದಾಳೆ. ಆಕೆಯ ಮೈತುಂಬ ಅರಿವೆ. ದೃಷ್ಟಿ ತೊಡೆಯಲ್ಲಿ ಮಲಗಿದ ಮಗನನ್ನು ನಿಟ್ಟಿಸುತ್ತಿದೆ. ಮನಸ್ಸು ಪ್ರಪಂಚಕ್ಕೊದಗಿದ ವಿಪತ್ತನ್ನು ಚಿಂತಿಸುತ್ತಿದೆ. ಅರೆ ಬತ್ತಲೆಯಾಗಿ ಮಲಗಿಕೊಂಡು, ಉಸಿರು ನಿಲ್ಲಿಸಿದ ಯೇಸು ಕ್ರಿಸ್ತನ ಮುಖದ ವರ್ಚಸ್ಸನ್ನು ಬಣ್ಣಿಸುವಂತಿಲ್ಲ. ಮೂವತ್ತು ನಾಲ್ವತ್ತು ವಯಸ್ಸಿನ ಯೌವನ; ಕಪಟವರಿಯದ ಮುಖ; ಪ್ರಪಂಚವನ್ನು ಮೆಚ್ಚಿದ

ಪ್ರೇಮ—ಇವುಗಳೆಲ್ಲವೂ ಸೇರಿದ್ದು ಮೃತ್ಯುವನ್ನು ತಬ್ಬಿಕೊಂಡ ಅವನ ಸ್ನೇಹಮಯ, ಶಾಂತ, ನಿಷ್ಕಲಂಕ ಮನೋಭಾವವನ್ನು ತೋರಿಸುತ್ತವೆ. ಎಷ್ಟೆಷ್ಟು ಸಮೀಪವಾಗಿ, ಏಕಾಗ್ರವಾಗಿ ಈ ಪ್ರತಿಮೆಯನ್ನು ನೋಡುತ್ತೇವೆಯೋ ಅಷ್ಟಷ್ಟು ಹೆಚ್ಚಿಗೆ ಕ್ರಿಸ್ತನ ಉಜ್ವಲ ಭಾವಮಯ ಜೀವನ ನಮಗೆ ಹೊಳೆದು ಕಾಣುತ್ತದೆ. ಮೈಕೆಲ್ ಎಂಜಲೋವಿನ ದೈವತ್ವ ದರ್ಶನದ ಈ ಪ್ರತೀಕ ಪ್ರಪಂಚದಲ್ಲೇ ಸಾಟಿಯಿಲ್ಲದ್ದು. ಆತ ಮೋಸೆಸ್ ವಿಗ್ರಹವನ್ನು ಕೆತ್ತಿದ್ದು ತನ್ನ ಅಪರ ವಯಸ್ಸಿನಲ್ಲಿ; ಇದನ್ನು ಕೆತ್ತಿದ್ದು ಬರಿಯ ಇಪ್ಪತ್ತನಾಲ್ಕು ವರ್ಷದ ತರುಣನಿದ್ದಾಗ. ಆ ಸಣ್ಣವಯಸ್ಸಿನಲ್ಲಿ ಇಷ್ಟು ಸುಂದರವಾದ ಪ್ರತಿಮೆಯನ್ನು ಕೆತ್ತಲು ಮೈಕೆಲ್ ಎಂಜಲೋ ದೈವದತ್ತ ಶಕ್ತಿಯನ್ನೇ ಪಡೆದವನಾಗಿ ನಮಗೆ ಕಾಣಿಸುತ್ತಾನೆ. ತನ್ನ ಆಯುಷ್ಯದಲ್ಲಿ ಆತ ಇದೊಂದೇ ಪ್ರತಿಮೆಯನ್ನು ಮಾಡಿದ್ದರೂ ಅವನ ಬಾಳು ಸಾರ್ಥಕವೆಂದೇ ಹೇಳಬೇಕು.

ಈ ಮಹಾ ಶಿಲ್ಪಿಯ ಹಿರಿಮೆಯನ್ನು ಕಂಡು, ನಾಲ್ಕನೆಯ ಸಿಕ್ಸ್ಟಸ್ ಅವನಿಗೆ ಸಿಸ್ಟೀನ್ ಚೇಪೆಲಿನ ಅಲಂಕಾರಮಾಡುವುದಕ್ಕೆ ಆಜ್ಞಾಪಿಸಿದ. ಈ ಚೇಪೆಲಿನ ಎದುರು ಗೋಡೆಯಲ್ಲೂ, ಮುಚ್ಚಿಗೆಯಲ್ಲೂ ಮೈಕೆಲ್ ಎಂಜಲೋವಿನ ಚಿತ್ರ ಸಮುದಾಯವಿದೆ. ವರ್ಷವರ್ಷಗಳ ಕಾಲ ಇಲ್ಲಿನ ಮುಚ್ಚಿಗೆಯನ್ನಲಂಕರಿಸುವುದಕ್ಕಾಗಿ ಆತ, ಬೆನ್ನಿನ ಮೇಲೆ ಮಲಗಿಕೊಂಡು, ಈ ಉನ್ನತ ಮುಚ್ಚಿಗೆಯ ಗಾರೆಯ ಮೇಲೆ ಚಿತ್ರ ಕೆಲಸಮಾಡಿದ್ದಾನೆ. ಸೃಷ್ಟಿಕರ್ತ ಪ್ರಪಂಚವನ್ನು ನಿರ್ಮಿಸಿ, ಮಾನವನ ಬದುಕಿಗೆ ಮೂಲ ಪುರುಷನಾದ ಕಲ್ಪನೆಯನ್ನು, ಆತ ಚಿತ್ರಮುಖದಲ್ಲಿ ವಿಸ್ತರಿಸಿದ್ದಾನೆ. ಬಳಸಿದ ಗಾರೆಗಚ್ಚುಗಳು ಇಂದು ಒಡೆದಿವೆಯಾದರೂ, ಕಾಲಗತಿಯಿಂದ ಬಣ್ಣ ಮಾಸಿದೆಯಾದರೂ, ಈ ಚಿತ್ರಗಳ ಹಿರಿಮೆ ಇನ್ನೂ ಅಚ್ಚಳಿಯದೇ ಕಾಣುತ್ತಿವೆ. ಎಡಮ್, ಈವ್, ಸೃಷ್ಟಿಕರ್ತ ಇವರೆಲ್ಲರೂ ಚಿತ್ರಿತರಾಗಿದ್ದಾರೆ. ಸೃಷ್ಟಿಕರ್ತನ ಮೂಲ ಚೇತನ ಮಾನವನಲ್ಲಿ ಪ್ರವಹಿಸುವುದು, ಎಡಮ್ ಮತ್ತು ಈವ್ ಕಾಮವಾಸನೆಯಿಂದ ಪ್ರೇರಿತರಾಗುವುದು, ಮುಂದೆ ಪರಿತಾಪಗೊಳ್ಳುವುದು-ಒಂದೊಂದೂ ಅಷ್ಟು ಮನೋವೇಧಕವಾಗಿ ಚಿತ್ರಿತವಾಗಿದೆ. ಈ ಚಿತ್ರದ ಅಲಂಕಾರಕ್ಕಾಗಿ ಬಳಸಿದ ನಾಲ್ಕಾರು ಮಾನವ ರೂಪಗಳಿವೆ. ಅವೊಂದೊಂದೂ ಮನುಷ್ಯನಲ್ಲಿರುವ ಅದ್ಭುತ ಶಕ್ತಿಯನ್ನು ಚಿತ್ರಿಸುವ ಸುಂದರ ರೂಪಗಳಾಗಿವೆ.

ಒಬ್ಬ ಪೋಪನು ತೀರಿಕೊಂಡ ತರುವಾಯ, ಕ್ರಿಸ್ತ ಪಂಥದ ಕಾರ್ಡಿನಲರುಗಳು ಸೇರಿ, ಸರ್ವ ಸಮ್ಮತಿಯಿಂದ ಇನ್ನೊಬ್ಬ ಪೋಪನನ್ನು ಆರಿಸುವ ಗುಪ್ತಸಂಧಾನವು ಈ ಚೇಪೆಲಿನಲ್ಲಿಯೇ ನಡೆಯುವುದು ವಾಡಿಕೆಯಂತೆ.

ಸಿಸ್ಟೀನ್ ಚೇಪೆಲಿಗೆ ತಗಲಿಕೊಂಡೇ ವೆಟಿಕನ್ ಮ್ಯೂಸಿಯಮ್ ಇದೆ. ಇಲ್ಲಿನ ಶಿಲ್ಪ ಮತ್ತು ಚಿತ್ರ ಸಂಗ್ರಹಗಳು ಬಹು ವಿಶೇಷವಾದುವು. ಚಿತ್ರ ವಿಭಾಗದಲ್ಲಿ – ರಾಫೆಲ್‌ನಂಥ ಮಹಾ ಚಿತ್ರಕಾರರು ಬರೆದ ಅನೇಕ ಗೋಡೆಯ ಚಿತ್ರಗಳಿವೆ ( Mural Paintings ). ಇಲ್ಲಿನ ಶಿಲ್ಪ ಸಂಗ್ರಹದಲ್ಲಿ ಗ್ರೀಕ್, ರೋಮನ್, ಇಜಿಪ್ಷಿಯನ್ ಶಿಲ್ಪ ಸಂಪತ್ತು ತುಂಬಿಕೊಂಡಿದೆ. ಉಳಿದ ಮ್ಯೂಸಿಯಮುಗಳಿಗೂ ಇದಕ್ಕೂ ಇರುವ ಮುಖ್ಯ ತಾರತಮ್ಯವೆಂದರೆ ಇಲ್ಲಿನ ಹಿನ್ನೆಲೆ. ಪ್ರತಿಯೊಂದು ಪ್ರತಿಮೆಗೂ, ವಿಗ್ರಹಕ್ಕೂ ಅಲಂಕಾರಿಕ ಪಾತ್ರೆ ಮೊದಲಾದವಕ್ಕೂ-ತಕ್ಕುದಾದ ಪೀಠ, ಆವರಣಗಳನ್ನು ರಚಿಸಿದ್ದಾರೆ. ಇಲ್ಲಿನ ಶಿಲ್ಪಗಳೆಲ್ಲ ಶಿಲೆಯಲ್ಲೂ, ಹಾಲುಗಲ್ಲಿನಲ್ಲೂ, ಕರಾರಾ ಶಿಲೆಯಲ್ಲೂ ಕಡಿದು ಮಾಡಿದುವು. ಅವುಗಳ ಸಂಖ್ಯೆ ಒಂದೆರಡಲ್ಲ. ರೋಮನ್ ಶಿಲ್ಪಿಗಳು ಮನುಷ್ಯ ವಿಗ್ರಹವನ್ನು ಕೆತ್ತಿದಷ್ಟೇ ಭಾವಪೂರ್ಣತೆಯಿಂದ ಕುದುರೆ ಮೊದಲಾದ ಪ್ರಾಣಿಗಳನ್ನು ಕೆತ್ತಿ ತೋರಿಸಿದ್ದಾರೆ. ಇಲ್ಲಿನ ಹಳೆಗಾಲದ ರತ್ನಗಂಬಳಿಗಳ ವಿಭಾಗವೂ ಬಹು ದೊಡ್ಡದೆನ್ನಬೇಕು.

ರೋಮಿನಲ್ಲಿ ನಾಗರಿಕರ ಸಲುವಾಗಿ ವಿಹಾರಕ್ಕಾಗಿ ಬಹು ದೊಡ್ಡದಾದ ಒಂದು ಉದ್ಯಾನವನವಿದೆ. ಈ ಉದ್ಯಾನ ವನ ನಾಲ್ಕಾರು ಪುಟ್ಟ ಗುಡ್ಡಗಳನ್ನು ಆವರಿಸಿದ್ದು, ವಿಶಾಲವಾದ ಹಾದಿಗಳಿಂದಲೂ, ಸಾಲುಮರಗಳಿಂದಲೂ ಕೂಡಿಕೊಂಡಿದೆ. ಅಲ್ಲಿಂದ ರೋಮ್ ನಗರದ ಬಹು ಸುಂದರವಾದ ನೋಟ ಕಾಣಸಿಗುತ್ತದೆ. ಈ ಉದ್ಯಾನದಲ್ಲಿ 'ಮ್ಯೂಸಿಯೋ ಬೊರ್ಗೀಸೀ' ಎಂಬ ಪ್ರಧಾನ ಚಿತ್ರಶಾಲೆ ಇದೆ. ಅನೇಕ ಇಟೇಲಿಯನ್ ಕಲಾವಿದರ ಮಧ್ಯಯುಗದ ಚಿತ್ರ ಸಂಗ್ರಹವೂ, ಕೆಲವೊಂದು ಶಿಲ್ಪಗಳ ಸಂಗ್ರಹವೂ ಇಲ್ಲಿವೆ. ಅವುಗಳಲ್ಲಿ ಹೇಳಬಹುದಾದುವು ಬರ್ನಿನೀ ಎಂಬವನ ಶಿಲ್ಪಗಳು. ಲಾ ವೆರೀಟಾ— ಎಂಬೊಂದು ಶಿಲ್ಪದಲ್ಲಿ, ಹರಿಯುವ ಬಟ್ಟೆಯ ತೆರೆಯೊಂದರ ಮೇಲೆ, ಕಡಲಿನ ಚಿಪ್ಪೊಂದನ್ನು ಕೈಯಲ್ಲಿ ಹಿಡಿದು ಕುಳಿತ ಅತ್ಯಂತ ಮೋಹಕ ಸ್ತ್ರೀರೂಪವಿದೆ. ಈಕೆ ನೋಡುವವರ ಕಣ್ಣಿಗೆ ನದಿ ದೇವತೆಯ ಕಲ್ಪನೆಯನ್ನು ತಂದುಕೊಡುತ್ತಾಳೆ.

ರೋಮನರ ಇತಿಹಾಸದಲ್ಲಿ ಸೆಬ್ಯಾನ್ ಸ್ತ್ರೀಯರ ಮಾನಭಂಗದ ಕಥಾನಕ ದಾರುಣವಾದ ಒಂದು ಐತಿಹಾಸಿಕ ಸತ್ಯ. ನಾವು ನಗರ ವಿಹಾರಕ್ಕೆ ಹೋದಾಗ, ಒಬ್ಬ ಗೈಡ್ ಒಂದು ವಿಶಾಲ ಮೈದಾನನ್ನು ತೋರಿಸಿ, ಇಲ್ಲೇ ಸೆಬ್ಯಾನ್ ಸ್ತ್ರೀಯರ ಮಾನಭಂಗವಾದುದು—ಎಂದು ತಿಳಿಸಿದ. ಸೆಬ್ಯಾನ್ ಜನಾಂಗ ರೋಮಿನ ನೆರೆಕರೆಯುವರು. ರೋಮಾಯರನ್ನು ವಿರೋಧಿಸಿದ ಗುಂಪಿನವರು. ಅವರ ಸೋಲಿನೊಂದಿಗೆ ಅವರ ಸುಂದರ ಸ್ತ್ರೀಯರ ಮಾನ ಭಂಗವೂ ರೋಮನ್ ಯೋದ್ಧರ ಪಾಲಿನ ಹೆಮ್ಮೆಯ ಕೃತಿಯಾಯಿತು. ವಿಜಯಿಗಳಾದವರ ಪಾಲಿನ ಈ ದುರಹಂಕಾರ, ಕಾಮುಕತೆ, ಮಾನವತೆಯ ಅತಿ ದಾರುಣ ದುರಂತ—ಎಂಬುದನ್ನು ತಿಳಿಯುವ ಸಂಸ್ಕಾರ, ಶತಮಾನಗಳ ತನಕ ರಾಜ್ಯವಾಳಿದ ಯಾವ ಜನಾಂಗಕ್ಕೂ ಬರುವಂತಿಲ್ಲ. ಶಿಲ್ಪಿ ಬರ್ನೀನಿ ಸೆಬ್ಯಾನ್ ಕನ್ಯೆ ಪ್ರೊಸರ್ಪೀನಾ ಎಂಬವಳನ್ನು, ವಿಜಯಿಯಾದ ರೋಮನ್ ವೀರ ಬಲವಂತದಿಂದ ಎತ್ತಿ ಸಾಗಿಸುವ ಒಂದು ಸುಂದರ ಶಿಲ್ಪ ನಿರ್ಮಿಸಿ ದ್ದಾನೆ. ಫ್ಲಾರೆನ್ಸ ನಗರದಲ್ಲೂ ಇಂಥ ಕೆಲವು ಶಿಲ್ಪಗಳಿವೆ. ಬರ್ನೀನಿ ರೋಮನರ ಪಶು ಬಲವನ್ನೂ, ಸೆಬೈನ್ ಕನ್ಯೆಯರ ಸೌಂದರ್ಯವನ್ನೂ, ಕೋಮಲ, ನಿಸ್ಸಹಾಯಭಾವಗಳನ್ನೂ ಒಂದೇ ಶಿಲ್ಪದಲ್ಲಿ ಪರಿಣಾಮಕಾರಕ ವಾಗಿ ಚಿತ್ರಿಸಿ ತೋರಿಸಿದ್ದಾನೆ. ಫ್ಲಾರೆನ್ಸಿನ ಒಂದೆರಡು ಶಿಲ್ಪಗಳಲ್ಲಿ ಇಂಥ ಅಪಹಾರ,ಮಾನಭಂಗಕ್ಕೊಳಗಾದ ಕನ್ಯೆಯರು, ಬಲಶಾಲಿಯೊಂದಿಗೆ ಮನೆ ಬಿಟ್ಟೋಡುವುದಕ್ಕೆ ಅರ್ಧ ಸಮ್ಮತಗೊಂಡವರಾಗಿ ಕಾಣಿಸುತ್ತಾರೆ. ಇಲ್ಲಿ ಹಾಗಿಲ್ಲ. ತಮ್ಮ ದೈವದತ್ತ ಹೆಣ್ಣುತನಕ್ಕಾಗಿ, ಚೆಲುವಿಗಾಗಿ ಈ ಗಳಿಗೆಯಲ್ಲಿ ಅವರು ಸಂತಾಪ, ವ್ಯಥೆಗಳಿಂದ ತಳಮಳಗೊಳ್ಳುತ್ತಿದ್ದಂತೆ ಕಾಣುತ್ತದೆ.

ರೋಮ್ ನಗರದ ಆಧುನಿಕ (modern) ಚಿತ್ರಗಳ ಮತ್ತು ಶಿಲ್ಪ ಶಾಲೆಯು ತುಸು ದೂರದಲ್ಲಿದೆ. ಅದೂ ಬಹು ವಿಶಾಲವಾದ ಮತ್ತು ವಿಶೇಷ ವಾದ ಸಂಗ್ರಹ. ಆದರೆ ಅಲ್ಲಿ ನೋಡಲು ಬರುವವರ ಸಂಖ್ಯೆ ಅಷ್ಟೊಂದು ಹೆಚ್ಚಾಗಿ ಕಾಣಿಸಿಲಿಲ್ಲ. ನಿಜಕ್ಕೂ ಇಲ್ಲಿನ ಸಂಗ್ರಹ ಬಹು ಹಿರಿದು; ಬಹು ಉತ್ತಮವಾದುದು.

ಈ ಸಂಗ್ರಹಾಲಯದಲ್ಲಿ ಈಚಿನ ಎರಡು ಶತಮಾನಗಳ ಚಿತ್ರ ಸಂಗ್ರಹವಿದೆ. ಶೈಲಿಯಲ್ಲಿ ಪ್ರಾಚೀನ ಸಂಪ್ರದಾಯವನ್ನು ತೋರಿಸಿದವ ರುಂಟು; ಸ್ವತಂತ್ರವಾದ ಆಧುನಿಕ ದಾರಿಯನ್ನು ತುಳಿದವರೂ ಇದ್ದಾರೆ. ತೀರ

ಆಧುನಿಕರಂತೆ 'ಎಬ್‌ಸ್ಟ್ರೇಕ್ಟ್' ಚಿತ್ರಗಳನ್ನು ಬರೆದವರೂ ಇದ್ದಾರೆ. ಕೆಲವನ್ನಷ್ಟೇ ಇಲ್ಲಿ ಉದಹರಿಸಬಹುದು. ಬೊಲ್ಡೀನಿ ಎಂಬಾತ ಯುರೋಪಿನ ಬೆಡಗುಗಾರ್ತಿಯೊಬ್ಬಳ ಚಿತ್ರವನ್ನು ತೈಲವರ್ಣದಲ್ಲಿ ಬರೆದಿದ್ದಾನೆ. ಆಕೆಯ ಉಡುಗೆ, ಮೈಮೇಲೆಳೆದುಕೊಂಡ ಶಾಲು ಮೊದಲಾದವು ಗಾಳಿಯ ಬಿರುಸಿಗಿಂತ ಹೆಚ್ಚಿನ ಬಿರುಸಿನಿಂದ ಬೀಸುತ್ತಿದ್ದು, ಆಕೆಯ ಆತ್ಮ ಪ್ರತಿಷ್ಠೆಯನ್ನು ಅವಳ ಕಣ್ಣುಗಳು ಹೇಗೆ ತೋರಿಸುತ್ತಿವೆಯೋ, ಅಷ್ಟೇ ಬಿರುಗಿನಿಂದ ಅವಳ ಉಡುಗೆಗಳೂ ತೋರಿಸುತ್ತಿವೆ. ಚಿತ್ರಕಾರ ತನ್ನ ಕುಚ್ಚನ್ನು ಒರಟಾಗಿಯೇ, ದುಂಡುಗಾರನಂತೆ ಎಳೆದು ತೋರಿಸಿಪಂಥ ವೈಖರಿಯು ಚಿತ್ರವಸ್ತುವಿಗೆ ತುಂಬ ಸಹಾಯವಾಗಿದೆ.

ಫರೂಫೆನೋ ಎಂಬ ಇನ್ನೊಬ್ಬ ಚಿತ್ರಗಾರನು "ನೈಲ್ ಕನ್ಯೆ" ಎಂಬ ಚಿತ್ರವನ್ನು ಬರೆದಿದ್ದಾನೆ. ರೋಮನರು ಈಜಿಪ್ಟನ್ನು ಗೆದ್ದ ದಿನಗಳ ಕತೆಯಿರಬೇಕು. ನೈಲ್ ನದಿ ದಂಡೆಯ ಮೇಲಿನ ಒಂದು ಸುಂದರ ಚಾವಡಿಯಲ್ಲಿ ಆಗಿನ ರಾಜ ವೈಭವವನ್ನು ತೋರಿಸುವ ರೋಮನ್ ಹೆಂಗಸರು, ಗಂಡಸರು ಕೂತಿದ್ದಾರೆ. ಅವರ ಮುಖದ ಮೇಲೆ ಉಷ್ಣವಲಯದ ಬಿಸಿಲು ಕುಣಿದಾಡುತ್ತಿದೆ. ಎದುರಿಗೆ ಆಳವೂ ನೀಲವೂ ಆದ ನೈಲ್ ನದಿಯು ಹರಿಯುತ್ತಿದೆ. ಅದರಲ್ಲಿ ಮೃತ ತರುಣಿಯೊಬ್ಬಳ ಸುಂದರ ಶರೀರವೊಂದು ತೇಲುತ್ತಿದೆ. ಸುತ್ತಲೂ ಅವಳಿಗಾಗಿ ಅರ್ಪಿಸಿದ ಹೂವುಗಳು ತೇಲಾಡುತ್ತಿವೆ. ಹೆಮ್ಲೆಟ್ ಕಥಾನಕದಲ್ಲಿ ನೀರಿಗೆ ದುಮುಕಿ ಆತ್ಮಹತ್ಯೆಮಾಡಿಕೊಂಡ ಒಫೀಲಿಯಾ ಕನ್ಯೆಯಲ್ಲಿನ ಸೌಂದರ್ಯ, ದುರಂತ ಜೀವನ ಈ ಚಿತ್ರದಲ್ಲಿ ಇನ್ನಷ್ಟು ಉಜ್ವಲವಾಗಿ ಪ್ರತಿಬಿಂಬಿತವಾಗಿವೆ. ನದಿಯ ದಂಡೆಯಲ್ಲಿರುವ ಸಂಪತ್ತು, ವಿಲಾಸಕ್ಕೂ ಅದರ ಎದುರಿಗೇನೇ ಕಾಣಿಸುತ್ತಿರುವ ಈ ಕನ್ಯೆಯ ಜಲ ಸಮಾಧಿಗೂ ಅತ್ಯಂತ ಸ್ಪಷ್ಟವಾದ ಭಾವನಾ ವೈಪರೀತ್ಯ ಕಾಣುತ್ತದೆ. ಹುಣ್ಣಿಮೆ, ಅಮವಾಸ್ಯೆಗಳು ಕೂಡಿದಂತೆ, ಸುಖ ದುಃಖಗಳ ಸಂಗಮವಾದಂತೆ, ಜೀವನದ ಏರಿಳಿತವನ್ನು ಈ ಚಿತ್ರ ಯಶಸ್ವಿಯಾಗಿ ತೋರಿಸುತ್ತದೆ.

"ಕಾಮದೇವತೆಯ ಪ್ರತೀಕಾರ" ಎಂಬ ಇನ್ನೊಂದು ಚಿತ್ರವಿದೆ, ಸೆರಟೋರಿಯೋ ಎಂಬ ಇಟಲಿಯನ್ ಕಲಾವಿದ ಬರೆದದ್ದು. ಇದೊಂದು ಪ್ರಾಚೀನ ಪುರಾಣದಿಂದೆತ್ತಿಕೊಂಡ ಔಪಮಾನಿಕ ಚಿತ್ರ. ಹಿಂಭಾಗದಲ್ಲಿ ಕಡಲಿದೆ. ಮುಂದಿನ ದಂಡೆಯಲ್ಲಿ ಒಬ್ಬ ನಿಗ್ರೋ ಯುವಕ, ಇನ್ನೊಬ್ಬ

ಶ್ವೇತ ತರುಣರು ಬಿದ್ದಿದ್ದಾರೆ. ಅವರಿಬ್ಬರ ಮೇಲೆ-ತಲೆ ಕೆದರಿಕೊಂಡು ನರ್ತಿಸುವ ಕಾಮದೇವಿ (Eros) ಚಿತ್ರಿತಳಾಗಿದ್ದಾಳೆ. ಶೃಂಗಾರದ ಸೊಬಗಿಗೆ ಅನ್ವರ್ಥವಾದ ರೂಪ, ವಯಸ್ಸುಗಳು ಈ ನರ್ತಕಿಯಲ್ಲಿ ಕಾಣುತ್ತವೆ. ಈ ನರ್ತಕಿಯಿಂದ ದಮನಗೊಂಡ ತರುಣರಲ್ಲಿಯೂ ಕಾಣಿಸುತ್ತವೆ. ಆದರೆ ಕಾಮ ದೇವತೆಯ ಪ್ರತೀಕಾರ ಮಾತ್ರ ತನ್ನ ಸೌಂದರ್ಯದಷ್ಟೇ ಕಠಿಣವಾಗಬಲ್ಲದು, ಕ್ರೂರವಾಗಬಲ್ಲುದು, ತನ್ನ ಬಲಿಯನ್ನು ತೆಗೆದುಕೊಳ್ಳಬಲ್ಲದು -ಎಂಬ ಭಾವನೆ ಬರುತ್ತದೆ. ಈ ಎಲ್ಲ ಚಿತ್ರಗಳನ್ನು ನೋಡುವಾಗ ಇಟೆಲಿಯ ಆಧುನಿಕ ಕಲಾವಿದರು ಚೈತನ್ಯಭರಿತರು, ಭಾವನಾಪೂರಿತರು ಎಂಬುದು ಸ್ಪಷ್ಟವಾಗಿ ಕಾಣಿಸುತ್ತದೆ. ಇಲ್ಲಿನ ಶಿಲ್ಪಕಲೆಯೂ ಅಷ್ಟೇ ಸುಂದರವಾಗಿದೆ. ಕೆಲವರು ಆಧುನಿಕ ಪರಂಪರೆ ಹಿಡಿದಿದ್ದಾರೆ; ಇನ್ನು ಕೆಲವರು ಪೂರ್ವ ಪರಂಪರೆಯನ್ನೇ ಬೆಳೆಸಿದ್ದಾರೆ. ಆಲ್ಫನ್ಸೋ ಎಂಬಾತ ಕೆತ್ತಿದ ಮಾನವ ಗಾತ್ರದ 'ಕ್ಲಿಯೋಪಾತ್ರಾ' ಎಂಬೊಂದು ಪ್ರತಿಮೆ ಇದೆ. ಈಜಿಪ್ಟಿನ ಸೌಂದರ್ಯ ರಾಣಿ ಈಕೆ. ರೋಮನ್ ಸಾಮ್ರಾಟರನ್ನು ತನ್ನ ಸೌಂದರ್ಯ ಜಾಲದಲ್ಲಿ ಸೆರೆ ಹಿಡಿದವಳು. ಅಂಥವಳ ತುಂಬು ಯೌವನದ ಕಾಂತಿ, ಶರೀರ ಸೌಂದರ್ಯಗಳೆಲ್ಲ ಇಲ್ಲಿ ಕಾಣುತ್ತಿವೆ. ತನ್ನ ಹಾಸಿಗೆಯಲ್ಲೊರಗಿಕೊಂಡು ಆತ್ಮಹತ್ಯೆಯ ಚಿಂತನೆಗೆ ತೊಡಗಿದ ಇವಳ ಕೈಯಲ್ಲಿ ಒಂದು ಹಣ್ಣಿನ ಬುಟ್ಟಿ ಇದೆ. ಅದರಲ್ಲೊಂದು ವಿಷದ ಹಾವಿದೆ. ಆ ಹಾವಿನಿಂದ ಕಡಿಸಿಕೊಂಡು ಆಕೆ ಸಾಯುತ್ತಾಳೆಂಬುದು ಕಥೆ. ಹಳೆಯ ಸಂಪ್ರದಾಯವನ್ನು ಇಂದಿಗೂ ಉಳಿಸಿಕೊಂಡಿರುವ ಒಬ್ಬ ಚತುರ ಶಿಲ್ಪಿಯ ಕೈವಾಡವಿದು.

ಎಡೋಲ್ಫ ವೈಲ್ಡ ಎಂಬಾತನು ಆಧುನಿಕ ಶಿಲ್ಪಿ; ಇಟೆಲಿಯ ಪ್ರಸಿದ್ಧ ಸಂಗೀತ ನಿರ್ದೇಶಕನಾದ ಟಾಸ್ಕೋನೀನಿಯ ಮುಖವನ್ನು ಕೇವಲ ಆಧುನಿಕ ಶೈಲಿಯಲ್ಲಿ ಕೆತ್ತಿತೋರಿಸಿದ್ದಾನೆ. ತನ್ನ ಆರ್ಕೆಸ್ಟ್ರಾ ಪ್ರಾರಂಭದಲ್ಲಿ ಹೊರಗಿನ ಪ್ರಪಂಚ ಮರೆತು, ಭ್ರೂಮಧ್ಯ ದೃಷ್ಟಿಯನ್ನಿಟ್ಟು ತನ್ನ ಅನುಯಾಯಿಗಳಿಗೆ "ತೊಡಗಿ" ಎಂದು ಆಜ್ಞಾಪಿಸುವ ಸಂಗೀತ ಸೇನಾನಿಯಂತೆ, ಟಾಸ್ಕೋನೀನಿಯನ್ನು ಚಿತ್ರಿಸಿದ ಈ ಕೃತಿ ಬಹು ಹಿರಿದು. ತಲೆಗೂದಲು, ಒತ್ತಿಕೊಂಡ ಕಪೋಲ, ನಿಡಿದ ದೃಷ್ಟಿ, ಬಿಗಿದ ಗಲ್ಲ ಇವನ್ನೆಲ್ಲ-ಯಾವ ಮಗ್ಗುಲಿಂದಲೇ ನೋಡಲಿ, ಟಾಸ್ಕೋನೀನಿಯ ಅಗಾಧ ವ್ಯಕ್ತಿತ್ವವನ್ನು ಪ್ರಕಟಿಸುವುದು ಕಾಣುತ್ತದೆ.

ಈ ಚಿತ್ರಶಾಲೆಯ ಎದುರಿನ ಉದ್ಯಾನವು ವಿಶಾಲವಾಗಿದ್ದು ಬೋರ್ಗೀಸೀ ಮ್ಯೂಸಿಯಮಿನ ತನಕವೂ ಅದಕ್ಕಿಂತ ಮುಂದೆಯೂ ಚಾಚಿ ಕೊಂಡಿದೆ. ಅಲ್ಲಿನ ಮರಗಳ ತಂಪಿನಲ್ಲಿ, ಜನ ವಿರಳವಾದ ಬೀದಿಗಳಲ್ಲಿ, ನಾವು ಹಿಂದೆ ಕಂಡ ಚಿತ್ರ, ಶಿಲ್ಪಗಳ ಸೊಬಗನ್ನು ಮನನಮಾಡುತ್ತ ಅಲೆ ದಾಡಿದೆವೆಂದರೆ, ನಮಗೆ ಪ್ರಾಚೀನ ರೋಮಿನ ಹಿರಿಮೆ ಎಷ್ಟೆಂದು ಹೊಳೆ ಯುತ್ತದೋ, ಕಲೆಯ ಕ್ಷೇತ್ರದಲ್ಲಿ ಆಧುನಿಕ ರೋಮಿನ ಹಿರಿಮೆಯೂ ಅಷ್ಟೇ ಹೆಚ್ಚೆಂದು ಅನಿಸುತ್ತದೆ.

ನಾನು ರೋಮ್ ನಗರದಲ್ಲಿ ಒಂದು ವಾರಕ್ಕಿಂತ ಹೆಚ್ಚಾಗಿ ಸಮಯ ವನ್ನು ಕಳೆದೆ. ಇತರ ಪ್ರವಾಸಿಗಳೊಡನೆಯೂ ಅಲೆದಾಡಿದೆ. ಮನಸ್ಸಿನ ತೃಪ್ತಿಗಾಗಿ, ಒಂದೊಂದು ದಿನ ಒಂದೊಂದೇ ಮೂಲೆಯನ್ನು ಆರಿಸಿಕೊಂಡು ಹೋಗಿ ಅಲ್ಲಿರುವುದನ್ನು ನೋಡಿದೆ. ಇದರ ನಡುವೆ ಒಂದು ದಿನ, ಪ್ರಾಚೀನ ಪೋಂಪೀ ನೋಡುವುದಕ್ಕೆ ಹೋಗಿದ್ದೆನಾದರೂ, ನನ್ನ ಮಾನಸಿಕ ಆವರಣ ವೆಲ್ಲ ರೋಮ್‌ಮಯವಾಗಿತ್ತು. ಇದು ಆಧುನಿಕ ಇಟಲಿಯಲ್ಲ; ಇಂದಿಗೂ ಪ್ರಾಚೀನ ರೋಮ್—ಎನಿಸುತ್ತಿತ್ತು ಮನಸ್ಸಿಗೆ.

ಒಂದು ದಿನ ನಗರ ಸಂಚಾರಮಾಡುತ್ತ ವಿಹಾರಿಗಳ ಪಡೆಯೊಂದಿಗೆ ನಗರದ ಹೊರಗಡೆಗೂ ಹೋಗಿದ್ದೆ. ನಮ್ಮ ದಾರಿಯಲ್ಲಿ ಹೊಸ ವಿಸ್ತರಣ ಗಳನ್ನು ಕಟ್ಟುತಿದ್ದರು. ಅಮೇರಿಕದ ದ್ರವ್ಯಸಹಾಯದಿಂದ ನಿರಾಶ್ರಿತರಿಗಾಗಿ ಸುಂದರವಾದ ಬೀದಿ ಬೀದಿಗಳನ್ನೇ ಕಟ್ಟುತಿದ್ದಾರೆ. ಅಲ್ಲಿನ ಕೃಷಿಕ ಕೇಂದ್ರ ವೊಂದಕ್ಕೆ, ಸಾವಿರ ಕೋಣೆಗಳಿರುವ ಬಹು ದೊಡ್ಡ ಇಮಾರತನ್ನು ಯುನೈ ಟೆಡ್ ಸ್ಟೇಟ್ಸ್ ಉಂಬಳಿಯಾಗಿ ಕೊಟ್ಟಿದೆ. ಈ ದೇಶದ ಪುನರುಜ್ಜೀವನ ಕ್ಕಾಗಿ ಅಮೇರಿಕಾ ದೇಶವು ಜರ್ಮನಿಗೆ ತೆತ್ತಂತೆಯೆ, ಕೋಟಿಗಟ್ಟಲೆ ಡಾಲರುಗಳನ್ನು ಇಲ್ಲಿಯೂ ತೆತ್ತಿರುವುದು ಕಾಣಿಸುತ್ತದೆ. ಅಂಥ ಪ್ರದೇಶ ಗಳನ್ನೆಲ್ಲ ಕಾಣುತ್ತ ರೋಮ್ ನಗರದ ಪ್ರಾಚೀನ ಸಮಾಧಿಸ್ಥಾನವಾಗಿದ್ದ ಒಂದು ಸ್ಮಶಾನಕ್ಕೆ ಹೋದೆವು. ಕ್ರಿಸ್ತಧರ್ಮ ಈ ದೇಶಕ್ಕೆ ಬರುವ ಮೊದಲು, ಜನಗಳನ್ನು ಭೂಗತವಾಗಿ ಮಾಡುವ ಇಲ್ಲಿನ ಸಂಪ್ರದಾಯ ವಿಚಿತ್ರ ವಾಗಿತ್ತು. ಭೂಮಿಯ ಕೆಳಗೆ ಲಾವಾರಸ ಕರಗಿ ಗಟ್ಟಿಗೊಂಡ ಶಿಲೆಗಳಿವೆ. ಆ ಶಿಲೆಯಲ್ಲಿ ಆಳದಲ್ಲಿ ದೀರ್ಘ ಸುರಂಗಗಳನ್ನು ಕೊರೆದು, ಅದರ ಆಚೀ ಚೆನ ಮಗ್ಗುಲು ಗೋಡೆಗಳಲ್ಲಿ ಶಿಲೆಯನ್ನು ಕಣ ಕಣವಾಗಿ ಕೊರೆದಿಟ್ಟಿ

ದ್ದಾರೆ. ಅವುಗಳಲ್ಲಿ ಮೃತರ ಶರೀರಗಳನ್ನು ತಂದಿರಿಸಿ, ಮುಚ್ಚುವುದು ಹಿಂದಿನ ವಾಡಿಕೆಯಾಗಿತ್ತು. ಅಲ್ಲಿನ ಹವೆಗೆ ಕಳೇಬರಗಳು ಚಿರಟಿ, ಒಣಗಿ ಹೋಗುತ್ತವೆ. ಇಂಥ ಸ್ಥಳಗಳಿಗೆ 'ಕೆಟಕೂಂಬ್ಸ್' ಎಂದು ಹೆಸರು. ಇಲ್ಲಿನ ಕೆಟಕೂಂಬ್ಸ್ ಮೂರು ಅಂತಸ್ತುಗಳಿದ್ದು, ಒಳಗಡೆ ಎಲ್ಲೆಲ್ಲಿಗೂ ದಾರಿಗಳು ಸುತ್ತಿ ಸರಿಯುತ್ತವೆ. ಅವುಗಳ ಒಟ್ಟು ಉದ್ದ ಹದಿನೆರಡು ಮೈಲುಗಳಿಗಿಂತ ಹೆಚ್ಚಿದೆಯಂತೆ. ಅವುಗಳ ಒಳಗೆ ಹೋದರೆ ಉಲ್ಲಾಸಕರವಾದ ಹವೆಯೇ ನಿಲ್ಲ. ಆದರೆ ಹವೆ ತುಂಬ ಶೀತವಾಗಿದೆ. ಎಷ್ಟು ಸಂಚರಿಸಿದರೂ ಆಚೀಚೆ ಬಿಡುವಿಲ್ಲದಷ್ಟು ಸಮಾಧಿಗಳೇ! ಕೆಲವಕ್ಕೆ ಗಾಜಿನ ಮುಚ್ಚಳವಿದೆ. ಒಳಗಿರ ತಕ್ಕ ಕಳೇಬರಗಳು ಇಂದಿಗೂ ಕಾಣಿಸುತ್ತವೆ. ಈ ವಿಚಿತ್ರ ಸಂಪ್ರದಾಯ ಕ್ರೈಸ್ತ ಯುಗದಲ್ಲಿಯೂ ಮುಂದುವರಿಯಿತು. ಪ್ರಾಚೀನ ಈಜಿಪ್ಟಿನಲ್ಲೂ ಇದೇ ಬಗೆಯ ಸಮಾಧಿ ಪದ್ಧತಿ ಬಳಕೆಯಲ್ಲಿತ್ತು. ಕಾಲಕ್ರಮೇಣ ಈ ಸ್ಥಳಗಳು ಹೊರದೇಶದ ಕಳ್ಳಕಾಕರ ಸುಲಿಗೆಗೆ ಒಳಗಾದುವು. ಮೃತರಿಗಾಗಿ ಒಪ್ಪಿಸಿದ ಚಿನ್ನಾಭರಣಗಳ ಆಸೆಗೆ, ಅವರು ಮೇಲಿಂದ ಮೇಲೆ ಧಾಳಿಮಾಡ ತೊಡಗಿದರು. ಮೂರನೆಯ ಶತಮಾನದ ಕೊನೆಗೆ, ಈ ಸ್ಮಶಾನದ ಮುಖ್ಯ ಬಾಗಿಲುಗಳನ್ನೇ ಮುಚ್ಚುವಂತಾಯಿತು. ಅನಂತರ ಆ ಪದ್ಧತಿಯು ಜನಗಳಿಗೆ ಮರವೆಯಾಯಿತು. ಅದರ ತಿಳುವಳಿಕೆಯೂ ಜನಗಳ ಸ್ಮರಣೆಯಿಂದ ಮಾಸಿಹೋಯಿತು. ಈಚೆಗೆ ಅವನ್ನಗೆದು ತೆಗೆದು ಸಂಶೋಧನೆ ಮಾಡಿದ್ದಾರೆ. ಅದರಿಂದಾಗಿ ನಾನು ರೋಮನ್ ವೈಭವವನ್ನು ಕಂಡಂತಾಯಿತು; ಅದರ ಸಮಾಧಿಯನ್ನೂ ಕಂಡಂತಾಯಿತು.

## ೨೩. ಮರಳಿ ಊರಿಗೆ

ಇಟೆಲಿಯಲ್ಲಿ ನೋಡಬೇಕೆಂದು ಬಯಸಿದುದನ್ನೆಲ್ಲ ನೋಡಿ ಮುಗಿಸಿಯೂ ಆಯಿತು. ಇನ್ನು ನೇಪಲ್ಸ ನಗರವನ್ನು, ಪ್ರಾಚೀನ ಪೋಂಪೀಯನ್ನು ನೋಡುವ ಕಾರ್ಯಕ್ರಮವಷ್ಟೇ ಉಳಿಯಿತು. ಒಂದು ದಿನ ಬೆಳಗಿನ ಏಳು ಘಂಟೆ ರೈಲಿಗೆ ಹೊರಟು ನೇಪಲ್ಸ್ ನಗರದ ಮಾರ್ಗವಾಗಿ ಪೋಂಪೀ ದರ್ಶನಕ್ಕೆ ಹೊರಟೆ. ದಾರಿಯ ನೋಟ ಅಷ್ಟೊಂದು ವಿಶೇಷವಾಗಿರಲಿಲ್ಲ. ನೇಪಲ್ಸ ಸೇರುವ ತನಕ ದಾರಿಯುದ್ದಕ್ಕೂ ಚಿಕ್ಕದೊಡ್ಡ ಗುಡ್ಡಗಳು ನಮ್ಮ ಕಣ್ಣಿಗೆ ಇದಿರಾಗುತ್ತಿದ್ದವು. ನೆಲ ಅಷ್ಟೊಂದು ಸಾರಭರಿತವಾಗಿ ಕಾಣಿಸದಿದ್ದರೂ, ದಾರಿಯಲ್ಲಿನ ಜನವಸತಿ ವಿಶೇಷವೆನಿಸದಿದ್ದರೂ, ಉದ್ದಕ್ಕೂ ಹೊಲಗಳು, ದ್ರಾಕ್ಷಿಯ ತೋಟಗಳು, ಇಪ್ಪೆಮರದ ತೋಟಗಳು-ಒಂದೇ ಸವನೆ ಕಣ್ಣಿಗೆ ಕಾಣಿಸುತ್ತಿದ್ದುವು. ಸೆಕೆ ಬಿಸಿಲುಗಳೆರಡೂ ಹೆಚ್ಚಾಗಿದ್ದು, ಹೊರಗಿನ ನೋಟವನ್ನು ಕಾಣುತ್ತ ಕಣ್ಣು ದಣಿಯುತ್ತಿತ್ತು. ಸುಮಾರು ಹನ್ನೆರಡು ಘಂಟೆಯ ವೇಳೆಗೆ ನೇಪಲ್ಸ ನಿಲ್ದಾಣವನ್ನು ಸೇರಿದೆ. ಉಪಾಹಾರ ಮುಗಿಸಿ ಇನ್ನೊಂದು ಬಂಡಿಯನ್ನೇರಿ ಆ ನಗರದ ನೆರೆಕರೆಯಲ್ಲಿರುವ ಪೋಂಪೀಗೆ ಹೊರಟೆ. ನಮ್ಮ ಬಲದ ಮಗ್ಗುಲಲ್ಲಿ ನೀಲವಾದ ನೇಪಲ್ಸ ಆಖಾತ ಕಾಣಿಸುತ್ತಿತ್ತು. ಅದರ ಬಿಲ್ಲಾಕಾರದ ಕರಾವಳಿಯ ತುಂಬ ನಾಗರಿಕ ಜನವಸತಿಗಳಿದ್ದವು. ಅತಿದೂರದಲ್ಲಿ ಉನ್ನತವಾದ ಪರ್ವತಾವಳಿಯೊಂದು, ಇಲ್ಲಿನ ಕಡಲನ್ನು ಕಾಯಲು ನಿಂತ ದೈತ್ಯರಕ್ಷಕನಂತೆ ಕಾಣಿಸುತ್ತಿತ್ತು. ಪೋಂಪೀಯ ತನಕ ದಾರಿಯ ಇಕ್ಕಡೆಗಳಲ್ಲಿ ಮೆಕ್ಕೆಜೋಳ, ಕಬ್ಬು, ತರಕಾರಿ ಮೊದಲಾದ ಬೆಳೆಗಳು ಸೊಂಪಾಗಿದ್ದು, ಕಣ್ಣಿಗೆ ತಂಪು ಕೊಡುತ್ತಿದ್ದುವು. ನಾನು ರೈಲನ್ನಿಳಿದವನೇ ಒಂದು ಟಾಂಗಾ ಮಾಡಿಕೊಂಡು ಆಧುನಿಕ ಪೋಂಪೀ ನಗರಕ್ಕೆ ತಾಗಿಕೊಂಡಿರುವ ಪ್ರಾಚೀನ ಪೋಂಪೀಯನ್ನು ನೋಡ ಹೋದೆ. ಸಾಮಾನ್ಯ ಲಾವಾಶಿಲೆಗಳಿಂದೊಡಗೂಡಿದ ಸಾರ ಶೂನ್ಯವಾದ ಗುಡ್ಡಗಾಡಿನಂತೆ ಅದು ಕಾಣಿಸುತ್ತಿತ್ತು. ಅದರ ಮೂಡಣಕ್ಕೆ ನಾಲ್ಕೆಂಟು ಮೈಲುಗಳ ದೂರದಲ್ಲಿ ಉನ್ನತವಾಗಿ ನಿಂತ ವಿಸುವಿಯಸ್ ಅಗ್ನಿ ಪರ್ವತ ಕಾಣಿಸುತ್ತಿತ್ತು. ನಾನು ಹೋದ ವೇಳೆಯಲ್ಲಿ ಇದು ಶಾಂತವಾಗಿಯೇ ಇತ್ತು. ಆದರೆ ನಾಲ್ಕೆಂಟು ವರ್ಷಗಳಿಗೊಮ್ಮೆ ಇದು ಅಗ್ನಿ, ಲಾವಾಗಳನ್ನು ಕಾರುವುದುಂಟು. 1944ರಲ್ಲಿ ಈ ಜ್ವಾಲಾ

ಮುಖಿಯು, ಚೇತನಗೊಂಡು ಲಾವಾದ ಹೊಳೆಯನ್ನು ಹರಿಯಿಸಿ, ಬಹು ದೂರದ ತನಕ ಕೆಂಡ ಬೂದಿಗಳನ್ನು ಚೆಲ್ಲಿ, ಸುತ್ತಲಿನ ಜನಕ್ಕೆ ಭಯಭೀತಿ ಗಳನ್ನುಂಟುಮಾಡಿತ್ತು. ಅದರ ಚೇತನಮಯವಾದ ಪ್ರಳಯ ಸ್ವರೂಪ ವನ್ನು ಕಾಣುವುದಕ್ಕೆ ನನಗೆ ಅವಕಾಶವಿರಲಿಲ್ಲ.ಪ್ರಾಚೀನ ಪೋಂಪಿಯನ್ನು ನೋಡಿದವರಿಗೆ ಅದರ ಕಲ್ಪನೆ ಸುಲಭದಲ್ಲಿ ಹುಟ್ಟಬಹುದು.

ಕ್ರಿ.ಶ.ಮೊದಲನೆಯ ಶತಮಾನದ ಮಧ್ಯದಲ್ಲಿ ಈ ಅಗ್ನಿಪರ್ವತ ಚೇತನ ಗೊಂಡು,ಲಾವಾದ ಹೊಳೆಯನ್ನೇ ಹರಿಯಿಸಿ,ಎರಡುಮೂರು ಚದರ ಮೈಲು ವಿಸ್ತೀರ್ಣವಾದ ಜನನಿಬಿಡ ಪೋಂಪೀ ನಗರವನ್ನು ಮುಚ್ಚಿಬಿಟ್ಟಿತ್ತು. ಅದರ ಸೆರೆಯಲ್ಲಿ ಸಿಕ್ಕಿದ ಯಾವನೊಬ್ಬನೂ ಉಳಿದಿರಲಾರ. ಆ ಘೋರವೇನೆಂದು ಹೇಳಬಲ್ಲ ಕೆಲವು ಶವಗಳು ಮಾತ್ರ ಇಂದಿಗೂ ಉಳಿದಿವೆ. ನಗರಕ್ಕೆ ನಗರವೇ ಈ ಜ್ವಾಲಾಮುಖಿಯ ತಾಪದಿಂದ ಬೆಂದುಹೋಯಿತು. ಇಡಿಯ ನಗರ ವನ್ನೇ ಬೂದಿ, ಕೆಂಡ,ಮಣ್ಣು,ಲಾವಾಗಳು ಮುಚ್ಚಿಕೊಂಡುವು.ನೀರೋವಿನ ಕಾಲದ ಪ್ರಾಚೀನ ರೋಮನ್ ಸಂಸ್ಕೃತಿ, ಮುಂದಿನ ಎಷ್ಟೋ ಶತಮಾನ ಗಳ ತನಕ ಕಣ್ಮರೆಯಾಯಿತು. ಈಚೆಗೆ ಒಂದೆರಡು ಶತಮಾನಗಳಿಂದ ಇಲ್ಲಿ ಪ್ರಾಕ್ತನ ಸಂಶೋಧನೆ ನಡೆದಿದೆ. ಹಾಳುಬಿದ್ದ ನಗರದ ಸಂದುಗೊಂದು ಗಳನ್ನು, ಬೀದಿಗಳನ್ನು ಸಭಾಂಗಣಗಳನ್ನು, ಮನೆಮಠಗಳನ್ನು ಚೊಕ್ಕವಾಗಿ ಮಾಡಿದ್ದಾರೆ. ಹಳೆಗಾಲದ ಜೀವನದ ಸ್ಥೂಲ ಚಿತ್ರವಾದರೂ ಇಂದು ನಮಗೆ ದೊರಕುವಂತೆ ಮಾಡಿದ್ದಾರೆ. ನಗರದ ಮನೆಮಠಗಳೆಲ್ಲವೂ ಕಲ್ಲಿನವು. ಬೀದಿಗಳು, ಕೇರಿಗಳು, ಸಮಾನಾಂತರ ರೇಖೆಯಲ್ಲಿ ಪ್ರವಹಿಸುವ ಕಲ್ಲು ಹಾಸಿದ ದಾರಿಗಳು. ಮನೆಗಳು ಚಿಕ್ಕಪುಟ್ಟ ತೊಟ್ಟಿಯ ಮನೆಗಳಂತೆ ಆಕಾರ ವುಳ್ಳವು. ಇಂದು ಇಂಥ ಸಾವಿರಾರು ಹಾಳುಬಿದ್ದ ಮನೆಗಳನ್ನು ಇಲ್ಲಿ ಕಾಣ ಬಹುದು. ಕೆಲವೊಂದು ಶ್ರೀಮಂತರ ಮನೆಗಳಲ್ಲಿ ಬಳಸಿದ ಗಾರೆಗಳು, ಗಾರೆಗಳ ಮೇಲೆ ಬರೆದ ಬಣ್ಣದ ಚಿತ್ರಗಳು ಇನ್ನೂ ಹಾಗೆಯೇ ಅಂಟಿ ನಿಂತಿವೆ. ಊರ ಜನಗಳು ಬಳಸುತ್ತಿದ್ದ ಪಾತ್ರೆ ಪರಡಿಗಳನ್ನು ರಾಶಿಗಟ್ಟಲೆ ಯಿಂದ ಕಾಣಬಹುದು. ಅವರ ಹಿಟ್ಟಿನ ಗಿರಣಿಗಳನ್ನು ಕಾಣಬಹುದು. ಸುಂದರವಾದ ಸ್ನಾನದ ಮನೆಗಳನ್ನು ಕಾಣಬಹುದು. ಕೆಲವು ಸಭಾಂಗಣ ಗಳಿವೆ; ಶ್ರೀಮಂತರ ಮನೆಗಳು ಅತ್ಯಾಧುನಿಕ ರೀತಿಯಲ್ಲಿ ರಚಿತವಾದು ದನ್ನು ಕಾಣುತ್ತೇವೆ. ಟ್ರಾಂಗ್ಯುಲರ್ ಫೋರಮ್–ಎಂಬ ಒಂದು ಸಭಾಂ

ಗಣ ನಾಲ್ಕೈದು ಸಾವಿರ ಮಂದಿ ಕುಳಿತಿರಬಹುದಾದ ಬಹು ಸುಂದರ ಸ್ಥಳ ವಾಗಿದೆ. ಅಲ್ಲಿ ನಿಂತಿರುವ ಉನ್ನತವಾದ ಸ್ತಂಭಗಳು ಪ್ರಾಚೀನ ವಾಸ್ತು ಶೈಲಿಯ ಭವ್ಯತೆಯನ್ನು ನೆನಪಿಗೆ ತಂದುಕೊಡುತ್ತವೆ. ಅವೆಲ್ಲವೂ ಇಪ್ಪತ್ತು ಮೂವತ್ತು ಅಡಿ ಎತ್ತರವಾದ ಶಿಲೆ ಅಥವಾ ಹಾಲುಗಲ್ಲಿನಿಂದ ರಚಿತವಾದ ಆಯೋನಿಯನ್ ಮತ್ತುಕೊರಿಂತಿಯನ್ ಸ್ತಂಭದ ಮಾದರಿಗಳಾಗಿವೆ. ಅವು ಗಳ ಮೇಲೆ ಹಾಸುಗಲ್ಲಿನ ಜಂತಿಗಳಿವೆ. ಮೇಲಿನ ಮಾಡುಗಳು ಧ್ವಂಸವಾಗಿ ದ್ದರೂ, ಈ ಸ್ತಂಭರಾಜಿಗಳನ್ನು ಕಾಣುವಾಗ, ರಾಜಾಂಗಣದ ಗಾಂಭೀರ್ಯ ನಮ್ಮ ಕಲ್ಪನೆಗೆ ಬರುತ್ತದೆ.

ಇಲ್ಲಿನ ಶ್ರೀಮಂತರ ಮನೆಗಳಲ್ಲಿ ಅಷ್ಟೊಂದು ಹಿಂದೆಯೂ, ಯಾ ವೊಂದು ವೈಭವ ವಿಲಾಸಗಳಿಗೂ ಕಡಿಮೆಯಿರಲಿಲ್ಲ–ಎಂದು ಅಲ್ಲಿನ ನೆಲ, ಗೋಡೆಗಳು ಹೇಳುತ್ತವೆ. ಅಲ್ಲಿನ ಎರಡು ದೊಡ್ಡ ಗೋಡೆಯ ಚಿತ್ರಗಳನ್ನು ಕಂಡಾಗ ನನಗೆ ತುಂಬ ವಿಸ್ಮಯವಾಯಿತು. ಅವುಗಳ ಬಣ್ಣ ಮಣ್ಣುಗಳ ಬಣ್ಣ (Earth colours). ನೀಲ, ಪಾಟಲ, ಗೋಪಿ, ಕಾವಿ ಬಣ್ಣಗಳಿಂದ ಚಿತ್ರಗಳನ್ನು ಬರೆದಿದ್ದಾರೆ. ಒಂದು ಚಿತ್ರದಲ್ಲಿ ನಾಲ್ವರು ಮಹಿಳೆಯರಿದ್ದಾರೆ. ಒಬ್ಬಳು ರಾಣಿಯಂತೆ ಕುಳಿತಿದ್ದಾಳೆ. ಆಧುನಿಕ ಗೌನನ್ನು ಹೋಲುವ ನಿಲುವಂಗಿ ಮೈಗಿದೆ. ಅವಳ ಸಖಿಯು ಕೈಯಲ್ಲೊಂದು ಚಾಟಿ ಹಿಡಿದು, ನಿಲುವಂಗಿ ತೊಟ್ಟು ನಿಂತಿದ್ದಾಳೆ. ಇನ್ನೊಬ್ಬಾಕೆ ನಗ್ನ ಶರೀರೆ. ಮೈಮೇಲೆ ಒಂದು ಶಾಲು ಮಾತ್ರ ಕುಣಿದಾಡುತ್ತಿದೆ. ಆಕೆ ಗೋಡೆಗೆ ಮುಖಮಾಡಿ ಕೈಯಲ್ಲೆರಡು ತಾಳಗಳನ್ನು ಎತ್ತಿ ಹಿಡಿದು ಕುಣಿಯತೊಡಗಿದಂತೆ ಕಾಣು ತ್ತದೆ. ಸಂತೋಷದಿಂದಿರಬೇಕಾದ ಇವಳು, ತನ್ನ ಮುಖ ತಿರುಗಿಸಿದ್ದಾಳೆ; ಏಕೆಂದು ನೋಡಹೋದರೆ—ಕಾರಣ ಅಲ್ಲಿಯೇ ಇದೆ. ಕುಳಿತ ರಾಣಿಯ ತೊಡೆಯ ಮೇಲೆ ಮೈ ಬಗ್ಗಿಸಿ ದುಃಖಿಸುತ್ತಿರುವ ಸ್ತ್ರೀಯೊಬ್ಬಳಿದ್ದಾಳೆ. ಅವಳ ಬರಿಯ ಬೆನ್ನಿಗೆ ಕೊರಡೆಯೇಟನ್ನು ಹೊಡೆಯುವ ಆಜ್ಞೆಯಾಗಿದೆ. ಅದನ್ನು ನೋಡಲಾರದೆಯೆ ನರ್ತಕಿ ತನ್ನ ಮುಖ ತಿರುಗಿಸಿದ್ದಾಳೆ; ವ್ಯಥೆ ಅಡಗಿಸಿಕೊಂಡಿದ್ದಾಳೆ. ಇಲ್ಲೂ ವಿಲಾಸ ಕ್ರೌರ್ಯಗಳ ಮಿಲನವನ್ನು ಏಕ ಕಾಲದಲ್ಲಿ ಕಾಣುತ್ತೇವೆ.

ಇನ್ನೊಂದು ಮನೆಯ ಗೋಡೆಯ ಚಿತ್ರದಲ್ಲಿ, ಉನ್ನತ ಆಸನದಲ್ಲಿ ಗ್ರೀಕ್ ಉಡುಗೆಯನ್ನುಟ್ಟ ಯೌವನಸ್ಥ ರಾಣಿಯೊಬ್ಬಳು ಕುಳಿತಿದ್ದಾಳೆ.

ಎದುರಿಗೊಬ್ಬ ಬಡಗಿಯ ಹುಡುಗನು ಕೆಲಸಮಾಡುತ್ತಿದ್ದಾನೆ. ಟೋಗಾ ಧರಿಸಿದ ಕಂದು ಬಣ್ಣದ ಒಬ್ಬ ಯೋದ್ಧ, ಒಂದು ಎತ್ತನ್ನು ಮಾರುವುದಕ್ಕೆ ತಂದಿದ್ದಾನೆ. ಅದು ನಿಜವಾದ ಎತ್ತಿರಲಾರದು; ಎತ್ತಿನ ಗೊಂಬೆಯಿರಬೇಕು. ಅದನ್ನೊಂದು ಗಾಡಿಯ ಮೇಲೆ ನಿಲ್ಲಿಸಿಕೊಂಡು, ಆತ ಏನನ್ನೋ ಹೇಳು ವಂತಿದೆ. ಇಟೆಲಿಯ ಮಧ್ಯಯುಗದ ತಾದ್ರೂಪಿಕವಾದ ಚಿತ್ರ ಶೈಲಿಗೂ, ಮೊದಲನೆಯ ಶತಮಾನದ ಚಿತ್ರಶೈಲಿಗೂ ವಿಶೇಷ ಅಂತರವನ್ನು ನಾವು ಕಾಣಲಾರೆವು. ಗ್ರೀಕರಂತೆಯೇ ಪೂರ್ವದ ರೋಮನರು ಸಹ ಶರೀರ ಸೌಂದರ್ಯದ ಆರಾಧಕರಾಗಿದ್ದರೆಂದು ಕಾಣುತ್ತದೆ. ಅವರು ಚಿತ್ರಗಳಿಗೆ ಬಳಸಿದ ಬಣ್ಣಗಳಷ್ಟೇ ಮಸುಕು; ಉಜ್ವಲವಲ್ಲ.

ಈ ನಗರದ ಎರಡು ಕಡೆಗಳಲ್ಲಿ ಎರಡು ಪುಟ್ಟ ದೇವಾಲಯಗಳಿವೆ. ಅದರ ಗರ್ಭಗೃಹ ಮಂಟಪದಾಕೃತಿಯಲ್ಲಿ ರಚಿತವಾಗಿದೆ. ಗೋಡೆಯಲ್ಲೆಲ್ಲ ಬಹು ಸುಂದರವಾದ ಪಿಂಗಾಣಿಯ ಮೊಸೇಯಿಕ್ ಚಿತ್ರ ಕೆಲಸಗಳಿವೆ. ಎದು ರಿಗೆ ಒಂದೊಂದು ಜಲಕುಂಡ. ಅದರಲ್ಲಿ ಮೀನನ್ನು ಹಿಡಿದು ನಿಂತ ಒಂದು ಮಗುವಿನ ಸುಂದರ ಶಿಲ್ಪ. ಈ ದೇವಾಲಯದಲ್ಲೂ ಇಲ್ಲಿನ ಮ್ಯೂಸಿಯಮಿ ನಲ್ಲೂ ಸಂಗ್ರಹಿಸಿರುವ ಶಿಲ್ಪಗಳನ್ನು ನೋಡುವಾಗ, ಹಾಲುಗಲ್ಲನ್ನು ಕೆತ್ತಿ ಮನೋಹರಮಾಡ ಪ್ರತಿಮೆಗಳನ್ನು ನಿರ್ಮಿಸುವ ಕಲೆಯಲ್ಲಿ ಪ್ರಾಚೀನ ಪೋಂಪೀ ಜನರು, ತುಂಬ ಪಳಗಿದವರಾಗಿ ಕಾಣುತ್ತಾರೆ. ಅವರ ಮೊಸೇ ಯಿಕ್ ಕೆಲಸದಲ್ಲಿಯೂ ಕೂಡ ಬಣ್ಣಗಾರಿಕೆ, ಪ್ರತಿರೂಪ ನಿರ್ಮಾಣ ಶಕ್ತಿ, ಸಾಕಷ್ಟು ವಿಶೇಷವಾಗಿ ಕಾಣಿಸುತ್ತಿದೆ. ಉತ್ತರ ಯುರೋಪಿನ ಪಾಡು ಹೇಗೇ ಇರಲಿ ಪ್ರಾಚೀನ ಕಾಲದ ರೋಮನ್ ಸಂಸ್ಕೃತಿ ಬಹು ಹಿರಿದಾದುದೆಂದೇ ನಮಗೆ ಅನಿಸುತ್ತದೆ.

ಇಲ್ಲಿಯೇ ಸಮೀಪಕ್ಕೆ ಚಿಕ್ಕದೊಂದು ಮ್ಯೂಸಿಯಮ್ ಮಾಡಿದ್ದಾರೆ. ಅದರಲ್ಲಿ ಹಳೆಗಾಲದ ಎಷ್ಟೋ ವಸ್ತುಗಳ ಅವಶೇಷಗಳನ್ನು ತಂದು ಕೂಡಿಸಿ ದ್ದಾರೆ. ಅದೇ ಸಂಗ್ರಹದಲ್ಲಿ ಎರಡು ಮೃತ ಶರೀರಗಳಿವೆ. ಹರಿದು ಬಂದ ಲಾವಾ ಒಬ್ಬ ಮನುಷ್ಯನನ್ನೂ ಒಂದು ನಾಯಿಯನ್ನೂ ಆವರಿಸಿಕೊಂಡ ಕಲ್ಲಾಯಿತು. ಅನಂತರ ಈಚಿನವರು ಆ ಕಲ್ಲನ್ನು ಒಡೆದು ತೆಗೆದು, ಬರಿಯ ಶರೀರಗಳನ್ನಷ್ಟೇ ಉಳಿಸಿದ್ದಾರೆ. ನಾಯಿ ಬೆಂಕಿಯ ಕಾವಿಗೆ ಮೈಮುದುರಿ, ಬಾಯ್ತೆರೆದು ಸ್ನಾಯುಗಳನ್ನು ಬಿಗಿದ ನೋಟ, ಅದರ ಮೃತ್ಯುಯಾತನೆ,

ಭೀತಿಗಳನ್ನೆಲ್ಲ ಸೂಚಿಸುತ್ತಿವೆ. ಅಷ್ಟೇ ತಾಪದಾಯಕವಾದ ಬೇಗೆ ನೋವು ಗಳನ್ನು ಸಹಿಸಿ ಆ ಮನುಷ್ಯನೂ ಸತ್ತಿರಬೇಕು. ಅವನ ಅಂಗ ಭಂಗಿಗಳು ಅವನು ಪಟ್ಟಿರಬಹುದಾದ ಯಮಯಾತನೆಯನ್ನು ಸೂಚಿಸುತ್ತವೆ.

ಪ್ರಾಚೀನ ಪೋಂಪೀ ನಗರದಲ್ಲಿ ನಾಗರಿಕರ ವಿಲಾಸಕ್ಕೂ ಬೇಕಷ್ಟು ಸೌಕರ್ಯಗಳಿದ್ದಿರಬೇಕು. ಅಂಥ ಒಂದು ಪ್ರದೇಶವು ಆಟ ವಿನೋದ ಗಳನ್ನು ನೋಡುವುದಕ್ಕಾಗಿ ರಚಿಸಿದಂಥ ಎಂಪಿ-ಥಿಯೇಟರ್. ನಾಲ್ಕೆಂಟು ಎಕ್ರೆ ವಿಸ್ತಾರವಾದ ಈ ರಂಗಸ್ಥಳವು ದೀರ್ಘ ವರ್ತುಲಾಕೃತಿಯಲ್ಲಿದೆ. ಇದರ ಸುತ್ತಲೂ ಕಲ್ಲು ಹಾಸಿ ಮಾಡಿದ, ಏರುತ್ತ ಹೋಗುವ, ಐವತ್ತು ಸೋಪಾನಗಳ ಸಾಲುಗಳಿವೆ. ಮೊದಲಿನ ಆರೆಂಟು ಸಾಲುಗಳನ್ನು ಪುರ ಪ್ರಮುಖರಿಗಾಗಿ ಮೀಸಲಾಗಿಟ್ಟಿದ್ದಾರೆ. ಹಿಂದಿನವೆಲ್ಲ ಜನ ಸಾಮಾನ್ಯರಿಗಾಗಿದ್ದಿರ ಬೇಕು. ಇಲ್ಲಿನ ವಿನೋದಗಳನ್ನೋ, ಜಟ್ಟಿ ಕಾಳಗಗಳನ್ನೋ, ನಗರಕ್ಕೆ ನಗರವೇ ಅಥವಾ ಪ್ರಾಂತಕ್ಕೆ ಪ್ರಾಂತವೇ, ಬಂದು ನೋಡುತ್ತಿದ್ದಿರಬೇಕು. ಈ ಪ್ರದರ್ಶನ ಶಾಲೆಯಲ್ಲಿ ಒಂದು ಲಕ್ಷ ಮಂದಿಯಾದರೂ ಕುಳಿತು ನೋಡು ವುದು ಸಾಧ್ಯವಿದೆ ಎಂದು ಕಾಣುತ್ತದೆ. ಗ್ರೀಕರ ಅನೇಕ ಆದರ್ಶಗಳನ್ನು ರೋಮನರು ಕಲಿತುಕೊಂಡರು. ಅದನ್ನು ತಮ್ಮ ದೇಶಗಳಲ್ಲೆಲ್ಲ ಪ್ರಸಾರ ಗೊಳಿಸಿದರು. ಈ ಮಾದರಿಯ ಎಂಪಿ-ಥಿಯೇಟರುಗಳು ಇಟೆಲಿಯ ರೋಮ್, ವೆರೋನಾ ಮೊದಲಾದ ಅನೇಕ ಹಳೆಗಾಲದ ನಗರಗಳಲ್ಲಿವೆ.

ಎರಡು ಮೂರು ತಾಸು ಕಾಲ ಬಿಸಿಲಿನಲ್ಲಿ ಅಲೆದಾಡಿ, ಈ ಹಾಳುಬಿದ್ದ ನಗರವನ್ನೆಲ್ಲ ಕಂಡುದಾಯಿತು. ಇದು ಪೋಂಪೀಯಷ್ಟೆ. ಆ ಹೆಸರೇ ಕನ್ನಡಿಗ ನಾದ ನನಗೆ, ಇನ್ನೊಂದು ಹಾಳುಬಿದ್ದ ನಗರದ ನೆನಪನ್ನು ಹುಟ್ಟಿಸುತ್ತದೆ— ಅದು ಹಂಪಿ. ಕಾಲಮಾನದಿಂದ, ದೇಶಮಾನದಿಂದ ಎರಡಕ್ಕೂ ತುಂಬ ಅಂತರವಿದೆ. ಎರಡೂ ಸಮಾನವಾದ ವೈಭವದಿಂದ ಮೆರೆದುವು. ಪೋಂಪೀ ನಿಸರ್ಗದ ರೋಷಕ್ಕೆ ಬಲಿಯಾಯಿತು. ಅನಂತರ ಹೇಳ ಹೆಸರಿಲ್ಲದಾಯಿತು. ಹಂಪಿಯು ಮಾನವನ ದೌಷ್ಟ್ಯ ಕ್ರೌರ್ಯಗಳಿಗೆ ಬಲಿಯಾಗಿ ಒಂದು ದಿನ ಹೇಳ ಹೆಸರಿಲ್ಲದಾಯಿತು.

ನೋಡುತ್ತ ಮರಳುವಾಗ ಹಾದಿಯಲ್ಲಿ ಸುಂದರ ಸಾಲುಮರಗಳಿದ್ದವು. ಅಲ್ಲಲ್ಲಿ-ಕಣಗಿಲೆ ಗಿಡಗಳಲ್ಲಿ, ಕೆಂಪು, ಗುಲಾಬಿ, ಬಿಳಿಯ ಬಣ್ಣದ ಹೂಗಳು ಜೊಂಕೆಗಳಾಗಿ ತೂಗುತ್ತಿದ್ದವು. ದಾರಿಯ ಸಣ್ಣಪುಟ್ಟ ಹೋಟೆಲಿನವರು

"ಬಂದು ಊಟಮಾಡಿ ಹೋಗುವುದಿಲ್ಲವೇ" ಎಂದು ಕರೆದು ಕೇಳುತ್ತಿದ್ದರು; ಆ ರೀತಿಯನ್ನು ನೋಡಿ ನನಗೆ ವಿಸ್ಮಯವೂ ಆಯಿತು. ಪೋಂಪೀ ಯಾತ್ರಿಕರ ಒಂದು ಕ್ಷೇತ್ರ. ನಮ್ಮ ದೇಶದ ಕ್ಷೇತ್ರಗಳ ಪಂಡರುಗಳಂತೆ ಇಲ್ಲಿನ ಜನರು ದಾರಿಹೋಕರನ್ನು ಸೆಳೆಯಲು ಪ್ರಯತ್ನಿಸುತ್ತಾರೆ–ಎಂದು ತೋರಿತು. ಈ ನಗರ ಕ್ರೈಸ್ತರಿಗೆ ಯಾತ್ರಾ ಸ್ಥಳವೂ ಅಹುದು. ದಾರಿಯಲ್ಲಿ ಬರುತ್ತ, ನಗರ ಮಧ್ಯದಲ್ಲೇ ಒಂದು ಸಾಮಾನ್ಯ ಬಿಸಿನೀರಿನ ಬುಗ್ಗೆಯನ್ನೂ ನೋಡಿದೆ.

ಆ ಸಂಜೆ ನೇಪಲ್ಸ ನಗರಕ್ಕೆ ಮರಳಿ ಬಂದು ಅಲ್ಲಿನ ಕಡಲ ದಂಡೆ ಯಲ್ಲಿ ಹೊತ್ತು ಕಳೆದೆ. ಪಾಶ್ಚಾತ್ಯರ ಕಡಲು ದಂಡೆಯ ಪ್ರೇಮ ಅಲ್ಲಿನ ಜನಗಳಲ್ಲೂ ಕಾಣಿಸುತ್ತಿತ್ತು. ನೀರಲ್ಲಿ ಮುಳುಗುವವರು, ದೋಣಿಯಲ್ಲಿ ವಿಹರಿಸುವವರು ಬೇಕಷ್ಟು ಮಂದಿ ಇದ್ದರು. ಊರವರಾದ ದೋಣಿಕಾರರ ಉಡುಗೆ ತೊಡುಗೆಗಳೂ, ಹಾದಿಯಲ್ಲಿ ಸರಿಯುವ ಹೆಂಗುಸರು, ಮಕ್ಕಳ ಉಡುಗೆ ತೊಡುಗೆಗಳೂ ವಿಶೇಷ ಬಡತನವನ್ನು ತೋರಿಸುತ್ತಿದ್ದುವು. ಕೆಲ ವೊಂದು ಮಕ್ಕಳ ಅರ್ಧ ಬರಿದಾದ ಮೈ, ಅದಕ್ಕಂಟಿದ ಕೊಳೆ, ಅವರ ನಡವಳಿಕೆ-ಇವೆಲ್ಲ ನಮ್ಮ ದೇಶದ ಬಡತನವನ್ನು ನೆನಪಿಗೆ ತಂದುಕೊಟ್ಟವು.

*   *   *   *   *

ಯುರೋಪಿನ ನೆಲವನ್ನು ತುಳಿಯತೊಡಗಿ ಸುಮಾರು ಎಪ್ಪತ್ತು ದಿನಗಳಾದುವು. ನಾನಾ ಬಗೆಯ ಜನಗಳನ್ನು ಕಂಡುದಾಯಿತು; ನೋಟ ಗಳನ್ನು ನೋಡಿದ್ದಾಯಿತು. ಪಡುವಣ ದೇಶಗಳಿಗೂ ಮೂಡಣ ಭಾರತಕ್ಕೂ ಇರುವ ದೂರವು ಭೌಗೋಲಿಕ ದೂರ ಮಾತ್ರವಲ್ಲ, ಮಾನಸಿಕ ಅಂತರವೂ ಅಹುದು ಎಂಬ ಅರಿವಾಯಿತು. ಇಟಲಿಗೆ ಬಂದ ಮೇಲೆ ನನ್ನ ಮನಸ್ಸು ಸ್ವದೇಶವನ್ನು ಚಿಂತಿಸತೊಡಗಿತ್ತು. ಹಡಗಿನ ದಾರಿ ಬೇಡವೆಂದು ಮೊದಲೇ ನಿಶ್ಚಯಿಸಿದ್ದೆ. ನನ್ನ ಓಡಾಟದ ವೇಗದಿಂದಾಗಿ ಇನ್ನೂ ಹತ್ತು ದಿನಗಳಿಗೆ ಮುಂಚಿತವಾಗಿ ಪಯಣ ಕೊನೆಗೊಂಡಿತ್ತು. ನನ್ನ ಮರಳುವ ಆತುರಕ್ಕೆ ವಾಯು ಮಾರ್ಗದ ವೇಗವನ್ನು ಬೆರೆಸುವ ಯೋಚನೆಮಾಡಿದೆ. ಜೂನ್ ಹದಿ ನೆರಡರ ದಿನ ಸಂಜೆ, ನಾಲ್ಕು ಘಂಟೆಗೆ ರೋಮಿನ ವಿಮಾನ ನಿಲ್ದಾಣವನ್ನು ನಾನು ಸೇರಿದೆ. ದಯಾನಂದ ಭಟ್ಟರೆಂಬ ಮಿತ್ರರು ಭೇಟಿಯಾದರು. ವಿದ್ಯಾರ್ಥಿಯಾಗಿದ್ದಾಗ ನಮ್ಮೂರಲ್ಲಿಯೇ ಓದಿದ ಅವರು 'ಎಯರ್ ಎಂಡಿಯಾ ಇಂಟರ್‌ನೇಶನಲ್'ನಲ್ಲಿ ವಯರ್‌ಲೆಸ್ ಕೆಲಸಗಾರರಾಗಿ

ದ್ದಾರೆ. ಅವರು ಬಂದಿರುವ ವಿಮಾನದಲ್ಲೇ ನಾನು ಮುಂಬಯಿಗೆ ಹೊರಡ ಬೇಕಾಗಿತ್ತು. ನನಗೆ ಅವರ ಶುಭ ಸ್ನೇಹ ದೊರೆಯಿತು.

ಸಂಜೆಯ ಐದು ಘಂಟೆಗೆ ನಮ್ಮ ವಿಮಾನವು ನೆಲವನ್ನು ಬಿಟ್ಟೆದ್ದು ಗಗನವನ್ನೇರಿತು. ನನ್ನ ಜೊತೆಗೆ ಹಲವು ಹಿಂದೀಯರೂ ಪಾಶ್ಚಾತ್ಯರೂ ಇದ್ದರು. ವಿಮಾನ ಇಪ್ಪತ್ತು ಸಾವಿರ ಅಡಿ ಎತ್ತರದಿಂದ ಹಾರ ತೊಡಗಿತು. ಬಾನಿನಲ್ಲಿ ತುಂಬ ಮುಗಿಲು ಕವಿದಿತ್ತಾದುದರಿಂದ ಕಾಣುವುದಕ್ಕೇನಿರಲಿಲ್ಲ. ರಾತ್ರಿಯ ಹತ್ತು ಘಂಟೆಗೆ ಕೈರೋ ನಗರದ ದೀಪಗಳು ಕಾಣಿಸತೊಡಗಿದುವು. ಆ ಕತ್ತಲಲ್ಲೇ ವಿಮಾನ ತಂಗಿತು. ನಮಗೆ ಒಂದು ತಾಸಿನ ವಿರಾಮವಿತ್ತು. ಅಲ್ಲಿನ ಉಪಾಹಾರ ಮಂದಿರದಲ್ಲಿ ಚೆನ್ನಾದ ಕಾಫಿಯನ್ನು ಸೇವಿಸಿ ಹದಿನ್ನೊಂದು ಘಂಟೆಗೆ ಹೊರಟದ್ದಾಯಿತು. ಕುಳಿತ ಆಸನವನ್ನೇ ತುಸು ಜಗ್ಗಿಸಿಕೊಂಡು ತೂಕಡಿಸಿತೊಡಗಿದೆ. ಕಣ್ದೆರೆಯುವಾಗ ವಿಮಾನದ ಕಿಟಿಕಿಗಳಿಂದ ಮೂಡಣದ ಬಿಸಿಲು ಬೀಳುತ್ತಿತ್ತು. ಇಟಲಿಯ ಘಂಟೆಯನ್ನಿರಿಸಿಕೊಂಡಿದ್ದ ನನ್ನ ಗಡಿಯಾರದಲ್ಲಿ, ಬೆಳಗಿನ ಮೂರೂವರೆ ಘಂಟೆಯಾಗಿತ್ತು. ಕೈರೋದಿಂದ ಮುಂಬಯಿಗೆ ಮೂರೂವರೆ ಸಾವಿರ ಮೈಲು ದೂರವಿದೆ. ಅದನ್ನು ಒಂಬತ್ತು ತಾಸಿನ ಒಂದೇ ಹಾರಾಟದಲ್ಲಿ ವಿಮಾನ ಸಾಗುತ್ತದೆ.

ವಿಮಾನದ ಕಿಟಿಕಿಯಿಂದ ಕೆಳಗಡೆ ನೋಡುತ್ತಲೇ ಇದ್ದೆ. ಕೈರೋವಿನಿಂದ ಅರೇಬಿಯದ ಕುಡಿಯಲ್ಲಿರುವ ಮಸ್ಕತ್ ನಗರದ ಕಡೆಗೆ ನಾವು ಹಾರುತ್ತಿದ್ದೆವು. ಸುಮಾರು ಮೂರು ತಾಸುಗಳ ತನಕವೂ ಕೆಳಗಿನ ನೆಲ ಸಮತಟ್ಟಾಗಿದ್ದು ಮರಳಿಂದ ಹಾಸಿದ ಅಂಗಳದಂತಿತ್ತು. ಯಾವೊಂದು ಹಸುರೂ ಕಾಣಿಸಲಿಲ್ಲ. ಏರು ತಗ್ಗೂ ಕಾಣಿಸಲಿಲ್ಲ. ಮುಂದೊಂದು ಅರ್ಧ ಘಂಟೆಯ ಕಾಲ ಮಾತ್ರ, ಸುಮಾರು ನೂರೈವತ್ತು ಮೈಲುಗಳ ದೂರ, ಆರೆಂಟು ಸಾವಿರ ಅಡಿಗಳಷ್ಟು ಉನ್ನತವಾಗಿ ಕಾಣಿಸುವ ಪರ್ವತ ಶ್ರೇಣಿಗಳು ಬಂದುವು; ಅವುಗಳೂ ಸಸ್ಯ ಶೂನ್ಯ! ಎಲ್ಲೆಲ್ಲೂ ಉಸುಕು, ಶಿಲೆಯ ಕರಾಳ ರೂಪವೇ ಹೊರತು ಹಸುರಿನ ತುಣುಕಿರಲಿಲ್ಲ. ತೀರ ಕೊನೆಗೆ ಕಾಣಿಸಿದ ಒಂದು ಕಣಿವೆಯಲ್ಲಿ ಮಾತ್ರ, ಒಂದಿಷ್ಟು ಒದ್ದೆಯಾದಂಥ, ಪಾಮಾಜಿ ಹಿಡಿದಂಥ ಒಂದು ತುಣುಕು ಜಾಗ ಕಾಣಿಸಿತು. ಇಂತಹ ಜಲ ಶೂನ್ಯ, ಸಸ್ಯ ಶೂನ್ಯ ಆವರಣದಲ್ಲೂ ಮಾನವ ಕುಲ ಬದುಕಲು ಪ್ರಯತ್ನಿಸುತ್ತಿದೆಯಲ್ಲ ಎಂದೆನಿಸಿತು.

ಅಲ್ಲಿಂದ ಅರೇಬಿಯ ಕೊನೆಗೊಂಡು, ಕಡಲಿನ ನೀಲ ಬಣ್ಣ ಕಾಣಿಸ

ತೊಡಗಿತು. ಇನ್ನು ಮೂರು ತಾಸುಗಳ ತನಕ ಕಡಲಿನ ಮೇಲೆ ವಿಮಾನ ಹಾರುತ್ತ ಹೊರಟಿತು. ಮೊದಲನೆಯ ಅರ್ಧ ತಾಸು ಕಾಲ ಮಾತ್ರ ಕಡಲ ನೀರು ಕಾಣುವುದಕ್ಕಿತ್ತು. ಆನಂತರ ಮುಂಬಯಿಯ ತನಕವೂ ಮುಗಿಲಿನ ಮೇಲಕ್ಕೆ ನಾವು ಹಾರಾಡುತ್ತಿದ್ದೆವು. ಪಯಣ ಕೊನೆಗಾಣುತ್ತ ಬಂದಿತು. ವಿಮಾನ ಇಳಿಯತೊಡಗಿತು. ಮುಗಿಲುಗಳನ್ನು ಭೇದಿಸಿಕೊಂಡು ಅದು ಕೆಳಕ್ಕೆ ಬಂದಂತೆ–ಕಡಲ ಸೆರಗು, ಗುಡ್ಡಗಾಡಿನ ಹಸುರು ಬಣ್ಣ, ಮುಗಿಲಿನೊಂದಿಗೆ ಕಣ್ಣುಮುಚ್ಚಾಲೆಯಾಡುವುದು ಕಾಣಿಸಿತು. ಹತ್ತಿಪ್ಪತ್ತು ನಿಮಿಷಗಳೊಳಗಾಗಿ ನೂಲು ಹಿಡಿದಷ್ಟು ನೇರವಾಗಿ ಬಂದ ನಮ್ಮ ವಿಮಾನ, ನೆಲದಲ್ಲಿ ಬಂದೆರಗಿಯೂ ಆಯಿತು. 'ನನ್ನ ನಾಡನ್ನು ಸೇರಿದೆನು' ಎನ್ನುವಾಗ, ಆ ನೆಲವನ್ನು ಕಾಣುವಾಗ, ಮನಸ್ಸಿಗಾಗುವ ಆನಂದಾನುಭವ ವಿಶೇಷವಾದದ್ದು. ವಿಮಾನವನ್ನಿಳಿಯುವ ಮುಂಚೆ ನಮಗೆಲ್ಲರಿಗೂ ಡಿ. ಡಿ. ಟಿ ತುಷಾರ ಸ್ನಾನವಾಯಿತು. ಒಬ್ಬೊಬ್ಬರಾಗಿ ಕೆಳಗಿಳಿಯುತ್ತ ಹೊರಕ್ಕೆ ಬಂದೆವು. ಕಣ್ಣು ನಮ್ಮವರನ್ನು ಅರಸುತ್ತಲಿತ್ತು. ನನ್ನ ತಮ್ಮ, ಮಡದಿ, ಮಗು ನನಗಾಗಿ ಕಾದು ನಿಂತಿದ್ದರು. ಸ್ವದೇಶಕ್ಕೆ ಬಂದ ಹಿಗ್ಗು ಅವರಿಗೆಷ್ಟೋ, ನನಗೂ ಅಷ್ಟೇ. ಆದರೆ–ಅಪೂರ್ವ ಪಶ್ಚಿಮವನ್ನು ಕಂಡು ಸ್ವ-ಪೂರ್ವ ಭಾರತಕ್ಕೆ ಬಂದ ನನ್ನ ಮನಸ್ಸು, ಮರಳಿ ಬಂದ ನನ್ನನ್ನು ಕೆಣಕಿ ಕೇಳುತಿತ್ತು: "ಅಲ್ಲಿ ಕಂಡ ನೋಟ, ಜನಗಳ ಸಾಹಸ, ಸಂಸ್ಕೃತಿ ಪ್ರೇಮ, ಬಾಳಬೇಕೆಂಬ ಹಟ ನಿನ್ನ ಜನ ತಾಳಿಯಾರೇ? ಅಥವಾ ತಾವೇನೇ ಆತ್ಮ ಜ್ಞಾನಿಗಳಾದ ಮಹಾಜನಗಳು, ಲೌಕಿಕದಲ್ಲಿ ಮುಳುಗಿದ ಪಾಶ್ಚಾತ್ಯ ಪ್ರಪಂಚವನ್ನು ಎತ್ತಿ ಉಳಿಸುವ ಹೊಣೆಯನ್ನು ಹೊತ್ತವರು–ಎಂದು ಕೂಗಿಯಾರೇ?" ಎಂದು. ಅಂಥ ಪ್ರಶ್ನೆಯನ್ನು ಉತ್ತರಿಸುವ ಧೈರ್ಯ ನನಗೆ ಬಾರದಾಗಿತ್ತು.

Printed at the Harsha Printery & Publications
Puttur, S. K. 51 -2-1953. Copies 1000.